... ಸಮೀಪದ ಹಳ್ಳಿಯಲ್ಲಿ ಒಬ್ಬ ವೈಶ್ಯ ಯುವತಿಯು ... ಮನೆಯ ಟ್ಟಿನಿಂದ ದೀಪದ ಬುಡ್ಡಿಗೆ ಎಣ್ಣೆ ... ಹುಯುತ್ತಿರುವಾಗ್ಗೆ ಬುಡ್ಡಿಯಿಂದ ದೀಪದ ಕಿಡಿ ... ಬಿದ್ದು ಎಣ್ಣೆಯು ಬೆಂಕಿ ಹೊತ್ತಿಕೊಂಡು ... ಕ್ಷಣವೇ ಆ ಹೆಂಗುಸು ಅಲ್ಲಿದ್ದ ... ಮಕ್ಕಳಲ್ಲಿ ಒಂದನ್ನು ಹೊರಕ್ಕೆ ತಂದುಬಿಟ್ಟು ... ಮಗುವನ್ನೆತ್ತಿಕೊಂಡು ಬರಲು ಮನೆಯೊಳಕ್ಕೆ ನುಗ್ಗಿದಳು. ಕೂಡಲೆ ಅವಳ ಬಟ್ಟೆಯು ಹೊತ್ತಿಕೊಂಡು ... ಸುಟ್ಟುಹೋದಳಲ್ಲದೆ ಒಳಗಿದ್ದ ಮಗುವೂ ಹೊತ್ತಿಕೊಂಡು ಮೃತವಾಯಿತು. ಮನೆಯೊಳಗಿದ್ದ ಸರ್ವಸ್ವವೂ ಸುಟ್ಟು ಭಸ್ಮವಾಯಿತು. ಆ ಯುವತಿಯು ಹೊರಕ್ಕೆ ... ಲ್ಪಟ್ಟ ಕೊಂಚ ಹೊತ್ತಿನಮೇಲೆ ಪ್ರಾಣಬಿಟ್ಟಳು.

ಮೋಸದಿಂದ ವರದಕ್ಷಿಣೆ ಪಡೆದುದಕ್ಕಾಗಿ ಶಿಕ್ಷೆ

ಸುಶೀಲ ಕುಮಾರ ಬಾನರ್ಜಿ ಎಂಬವನು ಕಲಕತ್ತಾ ವಿಶ್ವವಿದ್ಯಾಲಯದಿಂದ ಎಂ. ಎ. ಪ್ರಶಸ್ತಿಯನ್ನು ಪಡೆದಿರುತ್ತೇನೆಂದೂ, ಅನೇಕಾನೇಕ ಪ್ರಶಸ್ತಿ ಪತ್ರಗಳೂ ಬಹುಮಾನಗಳೂ ಬಂದಿರುತ್ತವೆಂದೂ ಮೂರು ವೇಳೆ ಸುಳ್ಳು ಹೇಳಿ ಮೂರು ಕನ್ಯೆಗಳನ್ನು ವಿವಾಹ ಮಾಡಿಕೊಂಡು ಅವರ ಮೂಲಕ ಅಪಾರ ವರದಕ್ಷಿಣೆಯನ್ನೂ ಆಭರಣಾದುಕೂಲಗಳನ್ನು ಪಡೆದು ಕಡೆಯಲ್ಲಿ ಆ ಹೆಂಡಿರುಗಳನ್ನು ತ್ಯಜಿಸಿಬಿಟ್ಟುದಕ್ಕಾಗಿ ಇವನಿಗೆ ಕಲಕತ್ತಾ ಪ್ರೆಸಿಡೆನ್ಸಿ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ 3 ವರ್ಷ ಕಠಿಣ ಸಜಾ, ಇವನಿಗೆ ಸಹಾಯಕರಾಗಿದ್ದ ಇವನ ತಾಯಿ ಸುಶೀಲ ಬಾಲಾದೇವಿಗೆ 2 ವರ್ಷ, ಚಿಕ್ಕಪ್ಪ ನಳಿನಾಥ ಭಾಟರ್ಜಿ ಗೋಪಾಲ ಘಟಕಿಗೆ 6 ತಿಂಗಳ ಸಜಾ ವಿಧಿಸಲ್ಪಟ್ಟಿತಲ್ಲದೆ ಇವನ ... ಮಗನಾದ ಹರಿಹರಣ ಭಾಟರ್ಜಿಯು ಇವನಂತೆಯೇ ... ಪ್ರತಿಷ್ಠಿತನಾದ ಯುವಕನೆಂದು ಹೇಳಿ ಯುವತಿಯನ್ನು ... ವೆಯಾಗಿ ವರದಕ್ಷಿಣೆ ಮೊದಲಾ...
ಕ್ಕಾಗಿ 1 ವರ್ಷ ಕಠಿಣ ಸಜಾ ...

ದೇಶಭಕ್ತರಿಗೂ ಕಾಂಗ್ರೆಸಿಗರಿಗೂ ರವೀಂದ್ರರ ಸಂದೇಶ

[illegible] ಮಹಾತ್ಮರಿಗೆ [illegible] ಒಂದು ಸಂದೇಶವನ್ನು [illegible] ಮಾಡಿದ ಶ್ರೀ ರವೀಂದ್ರನಾಥ ಠಾಕೂರರು ಒಂದು ಪತ್ರವನ್ನು ಕಳುಹಿಸಿಕೊಟ್ಟಿದ್ದಾರೆ [illegible] ಮಹಾತ್ಮರಿಗೆ ಬರೆದ [illegible] ರವೀಂದ್ರನಾಥ ಠಾಕೂರರು ಬಹಳ ಆಲಸ್ಯವಾಗಿ ಮಹಾತ್ಮರಿಗೆ ಕಳುಹಿಸಿಕೊಟ್ಟರು ಅದಕ್ಕೆ ಮಹಾತ್ಮರು ಬರೆದ ಉತ್ತರವನ್ನು ಬಾರತ ಮಂತ್ರಿಗಳು ಬಹಳ ಸಾವಕಾಶವಾಗಿ ಮಿತ್ರರ ಸಂಘಕ್ಕೆ ಕಳುಹಿಸಿಕೊಟ್ಟರು "ಡಾಕ್ಟರ್ ರವೀಂದ್ರರ ಸಂದೇಶದ ಬಾವವನ್ನು ಒಟ್ಟಿನಲ್ಲಿ ಅನುಮೋದಿಸುತ್ತೇನಾದರೂ ಇತರ ಕಾಂಗ್ರೆಸು ಸಹಾಯಕರೊಡನೆ ಆಲೋಚಿಸದೆಯೇ ನಿರ್ಧಾರವಾಗಿ ಏನನ್ನೂ ತಿಳಿಸಲಾರೆನು" ಎಂದು ಮಹಾತ್ಮರು ಬರೆದಿರುವುದಾಗಿ ತಿಳಿದುಬಂದಿದೆ ರವೀಂದ್ರರ ಪ್ರಕಟನೆಯನ್ನು ಬ್ರಿಟಿಷ್ ಪತ್ರಿಕೆಗಳು ಒತ್ತಿಮುಚ್ಚಿವೆ ಅಲ್ಲದೆ, ಮಹಾತ್ಮರ ಪ್ರತ್ಯುತ್ತರವನ್ನು ಆಧಾರವಾಗಿಟ್ಟುಕೊಂಡು ಮತ್ತಷ್ಟು ಜಬ್ಬಾಗಿ ಪ್ರಚಾರ ಮಾಡುತ್ತಿರುವುದರವಿನಾ ಈಗ ಪಾರ್ಲಿಮೆಂಟು ಸಭೆಯಲ್ಲಿ ಅಧಿಕ ಸಂಖ್ಯಾಕರು ಪ್ರತಿಕೂಲರಾಗಿರುವುದರಿಂದ ಯಾವ ಪ್ರಯೋಜನವೂ ಆಗುವುದಾಗಿ ಕಂಡುಬರುವುದಿಲ್ಲ

ಸಾವಿತ್ರಿದೇವಿಯ ವಿಚಾರಣೆ

ಲೈಸೆನ್ಸು ಇಲ್ಲದೆ ತುಪಾಕಿಗಳನ್ನೂ ಮದ್ದುಗುಂಡುಗಳನ್ನೂ ಇಟ್ಟುಕೊಂಡಿದ್ದುದಕ್ಕಾಗಿ ಸಾವಿತ್ರಿದೇವಿ ನಾಮ ಧೇಯಳಾದ ಒಬ್ಬ ಸ್ತ್ರೀಯು ಮೆಜಿಸ್ಟ್ರೇಟರ ವಿಚಾರಣೆಗೆ ಗುರಿ ಮಾಡಲ್ಪಟ್ಟಿದ್ದಳೆಂದು ತಿಳಿಸಿದ್ದೆವಷ್ಟೆ ಈಕೆಯು ತನ್ನ ವಿಚಾರಣೆಯಲ್ಲಿ "ನಾನು ಯಾವಾಗಲೂ ತುಪಾಕಿಗಳನ್ನೂ, ಮದ್ದುಗುಂಡುಗಳನ್ನೂ ಇಟ್ಟಿರಲಿಲ್ಲ ಮತ್ತು ಅವನ್ನು ಕೊಠಡಿಯಲ್ಲಾಗಲಿ ಸಾಮಾನುಗಳ ಸಂಗಡವಾಗಲಿ ಇದ್ದುದನ್ನು ಅರಿತವಳಲ್ಲ, ಅಲ್ಲದೆ ಅವುಗಳನ್ನೆಂದೂ ಮುಟ್ಟಿದವಳಲ್ಲ. ಈ ಕಾರಣದಿಂದ ನನ್ನಲ್ಲಿ ಲೈಸೆನ್ಸು ಇರಬೇಕಾದ ನಿಮಿತ್ತವಿಲ್ಲ ನನ್ನ ಬಳಿಯಲ್ಲಿದ್ದಿತೆಂದು ತೋರಿಸುವ ಹಿತ್ತಾಳೆ ಕಡ್ಡಿಯು ನನ್ನದಲ್ಲ ಮತ್ತು ನನ್ನ ಕೊಠಡಿಯಲ್ಲಿ ಪೋಲೀಸಿನವರು ನನ್ನ ಸಮಕ್ಷಮ ಯಾವ ಪದಾರ್ಥವನ್ನೂ ತೆಗೆದುಕೊಂಡುದನ್ನು ನಾನು ನೋಡಲಿಲ್ಲ ಮುಖ್ಯವಾಗಿ ನಾನು ಕುಳಿತಿದ್ದ ಸ್ಥಳ ಬಿಟ್ಟೇಳಗೊಡಲಿಲ್ಲ ಕೃತ್ಯ ನಡೆದ ದಿವಸ ಆದ ತುಪಾಕಿಗಳ ಏಟಿನಿಂದ ಕಂಪಿತಳಾಗಿ ಭಯಭ್ರಾಂತೆಯಾದೆ ಆ ವೇಳೆಯಲ್ಲಿ ನನ್ನ ವಿನಾ ಮತ್ತಾರೂ ನನ್ನ ಕೊಠಡಿಯಲ್ಲಿಲ್ಲದಿದ್ದುದನ್ನರಿತು ಪೋಲೀಸಿನವರು ಬಹಳ ಜುಲುಮಿನಿಂದ ಶೋಧನೆ ಮಾಡಿದರು ಯಾವ ಪದಾರ್ಥಗಳನ್ನು ಶೋಧಿಸಿ ತೆಗೆದುಕೊಂಡರೆಂದು ನೋಡಿಕೊಳ್ಳಲು ನನ್ನ ಕಡೆಯವರಾರೂ ಇರಲಿಲ್ಲ ಈ ಶೋಧನೆಯೆಲ್ಲವೂ ಬಹಳ ಅಕ್ರಮದಿಂದಲೂ ಜುಲುಮಿನಿಂದಲೂ ನಡೆದಿತು ಅವರು ಇದರ ಕಾರಣವನ್ನೂ ಹೇಳಲಿಲ್ಲ ವಾರಂಟನ್ನೂ ತಂದಿರಲಿಲ್ಲ, ಆದರೂ ನಾನು ಮಾತ್ರ ಅವರನ್ನು ಅಡ್ಡಿ ಪಡಿಸಲಿಲ್ಲ ನನ್ನ ಕೊಠಡಿಯಲ್ಲಿ ಸಿಕ್ಕಿದುವೆಂದು ಪೋಲೀಸಿನವರು ಹೇಳುವ ಪದಾರ್ಥಗಳು ಖಂಡಿತವಾಗಿಯೂ ನನ್ನವಲ್ಲ ಮತ್ತು ನನ್ನಲ್ಲಿರಲಿಲ್ಲ ಇವುಗಳ ಗೋಜಿಗೆ ನಾನೆಂದೂ ಹೋದವಳಲ್ಲ ನಾನು ಐರೋಪ್ಯ ಸ್ತ್ರೀ ಎಂಬುದು ನಿಜ ಅಲ್ಲದೆ ಈ ದೇಶದ (ಈಗ ನನ್ನ ದೇಶದ) ಪ್ರಜೆಗಳ ರಾಜಕೀಯ ಆಶೋತ್ತರಗಳಲ್ಲಿ ನನಗೆ ಪೂರ್ಣ ಸಹಾನುಭೂತಿಯಿರುತ್ತದೆ ನಾನು ಖದ್ದರನ್ನು ಧರಿಸುತ್ತೇನಲ್ಲದೆ ವಿಶೇಷಕಾಲದಲ್ಲಿ ಬೀದಿಗಳಲ್ಲಿ ಹೊತ್ತುಕೊಂಡು ಮಾರುತ್ತೇನೆ ನಾನು ಮಹಾತ್ಮರ ಶಿಷ್ಯೆಯಾಗಿರುವೆನು ನನ್ನಲ್ಲಿ ಮದ್ದುಗುಂಡು ಇದ್ದುವೆಂದು ಸುಳ್ಳು ಹೇಳುವುದು ನನ್ನ ರಾಜಕೀಯ ಉದ್ದೇಶಕ್ಕೆ ಅಪಾರ್ಥವನ್ನು ಕಲ್ಪಿಸುವುದಕ್ಕಾಗಿ ಅಂತಹ ಪದಾರ್ಥಗಳಿಗೂ, ಅವುಗಳನ್ನುಳ್ಳ ಜನರಿಗೂ ನನಗೂ ಯಾವ ಸಂಬಂಧವೂ ಇರುವುದಿಲ್ಲ ಈ ಸಂದರ್ಭದಲ್ಲಿ ನಾನು ತಪ್ಪಿಸಿಕೊಳ್ಳಲು ಬೇರೊಬ್ಬರ ಮೇಲೆ ಸುಳ್ಳು ಅಪಾದನೆ ಮಾಡತಕ್ಕವಳಲ್ಲ, ಆದರೆ ಯಾವುದೊಂದು ಕಾರಣವಿಲ್ಲದೆ ಅಪಾದಿತಳನ್ನಾಗಿ ಮಾಡಿರುವರೆಂದು ಬಹಳ ಧೈರ್ಯದಿಂದ ಹೇಳುವೆನು ನಾನು ನಿರಪರಾಧಳೆಂದು ಮನಸ್ಸಾಕ್ಷಿಯಾಗಿ ಅರಿತಿರುವೆನು ಮತ್ತು ಕೋರ್ಟಿನವರು ಸಹ ಹಾಗೆಯೇ ತಿಳಿದು ದೋಷಮುಕ್ತಳನ್ನಾಗಿ ಮಾಡುವರೆಂದು ನಿರೀಕ್ಷಿಸುತ್ತೇನೆ" ಎಂದು ಹೇಳಿದಳು.

ಒಳದೇಶದ ವೃತ್ತಾಂತಗಳು

ಮೈಸೂರು ಮತ್ತು ಬೆಂಗಳೂರುಗಳಲ್ಲಿರುವ ಕುರುಬರ ಹಾಸ್ಟೆಲ್‌ಗಳು ಜುಲೈ ತಿಂಗಳಲ್ಲಿ ಪ್ರಾರಂಭಿಸಲ್ಪಡುತ್ತವೆ ಇಷ್ಟವುಳ್ಳ ವಿದ್ಯಾರ್ಥಿಗಳು ಆಯಾ ಹಾಸ್ಟೆಲ್‌ಗಳ ಸೆಕ್ರೆಟರಿಯವರಿಗೆ ಬರೆದುಕೊಳ್ಳತಕ್ಕದು

ನಮ್ಮ ಸಹೋದ್ಯೋಗಿಯಾದ ರಾಜಧಾನಿಯ ವಿಶ್ವಬಂಧು ಪತ್ರಿಕೆಯ 0 ನೆಯ ವರ್ಷದ ವರ್ಧಂತ್ಯುತ್ಸವವು ಕಳೆದ ತಾ|| 11 ನೆಯ ಶನಿವಾರ ಅಸಿಸ್ಟೆಂಟ್ ಕಮಿಷನರ್ ಮ|| ಶ್ರೀ. [illegible] ಅರಸಿನವರ ಅಧ್ಯಕ್ಷತೆಯಲ್ಲಿ ನೆರವೇರಿತೆಂದು ತಿಳಿದು ಸಂತೋಷಿಸುತ್ತೇವಲ್ಲದೆ ಈ ಪತ್ರಿಕೆಯು ದೀರ್ಘಾಯುವಾಗಿದ್ದು ಪ್ರಜಾಸೇವೆಯನ್ನು [illegible] ವಾಗಲೆಂದು ಹರಸುತ್ತೇವೆ.

ಕಳೆದ [illegible] ರಾಜಧಾನಿಯ [illegible] [illegible] ಮಾಡಿದರೆಂದು [illegible] ಪ್ರಕಟಿಸುವರು [illegible] ಪ್ರೀತಿ [illegible] ಪ್ರತಿಷ್ಠಿಸಲಿಕ್ಕರು

ಹೈದರಾಬಾದಿನ ಅಮೀರ್-ಉಲ್-ಮುಲ್ಕ್ ಸರ್ ನಿಜಾಮ್ [illegible] ಯವರು ಲಂಡನ್ ನಗರದಲ್ಲಿ ನಡೆಯುವ ರೌಂಡ್‌ಟೇಬಲ್ ಕಾನ್ಫರೆನ್ಸಿನಲ್ಲಿ ಭಾಗಿಗಳಾಗಲು ನಿಯಮಿಸಲ್ಪಟ್ಟಿರುವರೆಂದು 1931 ರಲ್ಲಿ ಪ್ರಕಟವಾಗಿದ್ದ ವಿಷಯವನ್ನು ಅಜಾಗರೂಕತೆಯಿಂದ ಕಳೆದ ವಾರದ ಸ್ಟಾರ್ ಪತ್ರಿಕೆಯು ಒಳದೇಶದ ವರ್ತಮಾನಗಳಲ್ಲಿ ಪ್ರಕಟಿಸಿರುವುದಕ್ಕಾಗಿ ವಿಷಾದಿಸುತ್ತೇವೆ

ರಾಜಧಾನಿಯಲ್ಲಿ ಈ ಸಲ ನಡೆದ ಕುದುರೆ ಜೂಜಿನೊಳಗೆ ಮಹಾರಾಜರವರ ಕಪ್ ಸ್ವೀಪ್ ಲಾಟರಿಯಲ್ಲಿ ಮೊದಲನೆಯ ಬಹುಮಾನವಾದ 7020 ರೂ ಕೆಂಗಲ್ ಮುತ್ತಣ್ಣನ ಜಾಜಾಂಬಾ ಎಂಬಾಕೆಗೂ ಎರಡನೆಯ ಬಹುಮಾನವಾದ 3817 ರೂ ನೀಲಗಿರಿಯ ಲೊವೆಡೇಲಿನ ಎಂ ಅಟ್ಕಿನ್‌ಸನ್‌ರವರ ಕುಮಾರರಿಗೂ, ಮೂರನೆಯ ಬಹುಮಾನವಾದ 1906 ರೂ ಮದ್ರಾಸಿನ ನಾಡೆಯುವರಿಗೂ, ಒಬ್ಬೊಬ್ಬರಿಗೆ 201 ರೂ ನಂತೆ 11 ಮಂದಿಗೂ ಬಂದಿರುತ್ತವೆ

ರಾಜಧಾನಿಯಲ್ಲಿ 1-2 ವಾರಗಳಿಂದ ಮಳೆಯಿಲ್ಲದೆ ಶಖೆಯು ಹೆಚ್ಚಾಗಿದೆ ಮತ್ತು ಬಹಳ ಹುಲುಸಾಗಿ ಬೆಳೆದಿರುವ ಜೋಳದ ಪೈರುಗಳು ಬಾಡುತ್ತಿರುವುದರಿಂದ ಜನರು ಆಕಾಶವನ್ನೇ ನೋಡುತ್ತಿರುವರು ವರ್ಧಂತ್ಯುತ್ಸವಕ್ಕೆ ಬಂದಿದ್ದ ಮದ್ರಾಸ್ ಗೌರ್ನರು ಹೈದರಾಬಾದಿನ ಯುವರಾಜ ಸಹೋದರ ದಂಪತಿಗಳು, ಜಯಪುರ ಮಹಾರಾಜರು ಮೊದಲಾದ ಅತಿಥಿಗಳೆಲ್ಲರೂ ಹಿಂದಿರುಗಿ ಪ್ರಯಾಣಮಾಡಿದರು ಹೊರಗಿನಿಂದ ಬಂದಿರುವ ಸಂಗೀತಗಾರರ ಹಾಡುಗಾರಿಕೆಯು ಶ್ರೀಮನ್ಮಹಾರಾಜರವರ ಸಮುಖದಲ್ಲಿ ನಡೆಯುತ್ತಿರುವುದು

ಈ ವೇಳೆ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವದಲ್ಲಿ ಶ್ರೀಮದ್ಯುವರಾಜರವರ ಸವಾರಿಯೂ ಇದ್ದುದರಿಂದ ಅತ್ಯಂತ ಶೋಭಾಯಮಾನವಾಗಿಯೂ ಆಹ್ಲಾದಕರವಾಗಿಯೂ ಇದ್ದಿತು ರಾತ್ರಿ ಅರಮನೆಗೆ ಹಿಂದಿರುಗಿ ಬರುವಾಗ್ಗೆ ಪ್ರಭು ಸಹೋದರರುಗಳು ಅತ್ಯಂತ ಮನೋರಂಜಕವಾಗಿ ಅಲಂಕರಿಸಲ್ಪಟ್ಟಿದ್ದ ಮೋಟಾರು ಬಂಡಿಯಲ್ಲಿ ಕುಳಿತುಕೊಂಡಿದ್ದುದೂ ಮುಂಗಡೆ ಕುಲದೀಪಕರಾದ ಶ್ರೀ ಜಯಚಾಮರಾಜ ಒಡೆಯರವರು ಕುದುರೆ ಸವಾರಿಮಾಡಿಕೊಂಡು ಬರುತ್ತಿದ್ದುದೂ ಪ್ರೇಕ್ಷಕರ ಕಣ್ಣುಗಳನ್ನು ಜತೆಮಾಡಿದ್ದುವು ಇಂತಹ ಉತ್ಸವಗಳನ್ನು ಪ್ರಜೆಗಳು ಅನಂತವಾಗಿ ನೋಡಿ ಧನ್ಯರಾಗುವಂತೆ ಅನುಗ್ರಹಿಸಲೆಂದು ಪರಮೇಶ್ವರನನ್ನು ನಾವು ಸರ್ವರೊಡನೆ ಪ್ರಾರ್ಥಿಸುತ್ತೇವೆ.

ಮೈಸೂರು ಪ್ರಜಾಪ್ರತಿನಿಧಿ ಸಭೆ.

ಬಜೆಟ್ ಅಧಿವೇಶ—ಜೂನ್ 1932

ದಿವಾನರವರು ಅಧಿವೇಶನವನ್ನು ಪರಿಸಮಾಪ್ತಿಗೊಳಿಸುವುದರಲ್ಲಿ ಅಪ್ಪಣೆಕೊಡಿಸಿದ ಮುಕ್ತಾಯಭಾಷಣ.

13 ನೆಯ ಜೂನ್ 1932

ಮಹನೀಯರೇ —

ಪ್ರಜಾಪ್ರತಿನಿಧಿ ಸಭೆಯ ಈ ಅಧಿವೇಶನವನ್ನು ಮುಕ್ತಾಯಗೊಳಿಸುವುದರಲ್ಲಿ ನಾನು ಕೆಲವು ಅಂಶಗಳನ್ನು ಮಾತ್ರವೇ ಸೂಚಿಸುತ್ತೇನೆ

ಈ ಅಧಿವೇಶನದಲ್ಲಿ ಸದಸ್ಯರುಗಳ ಪರ್ಯಾಲೋಚನೆಗಾಗಿ ಸರ್ಕಾರದವರು ಕೆಲವು ಮಸೂದಾ ಕಾನೂನುಗಳ ಸಾಮಾನ್ಯ ನಿಯಮಗಳ ವಿವರಣೆಗಳನ್ನು ಒಪ್ಪಿಸಿದ್ದರಷ್ಟೆ ಈ ಸಂಬಂಧದಲ್ಲಿ ಒಂದೇ ಒಂದು ಮಸೂದಾ ಕಾನೂನಿನ ಹೊರತು ಉಳಿದ ಮಸೂದಾ ಕಾನೂನುಗಳೆಲ್ಲವನ್ನೂ ಈ ಸಭೆಯವರು ಅನುಮೋದಿಸಿದರು ಭೂ ಸಂಪಾದನೆಯ ರೆಗ್ಯುಲೇಷನನ್ನು ತಿದ್ದುಪಾಟು ಮಾಡತಕ್ಕ ಮಸೂದಾ ಕಾನೂನಿನ ಸಂಬಂಧದಲ್ಲಿ ಮಾತ್ರ ಈ ಸಭೆಯವರ ಒಪ್ಪಿಗೆಯು ದೊರೆಯಲಿಲ್ಲ ಈ ರೆಗ್ಯುಲೇಷನಿನ ಉದ್ದೇಶಗಳಿಗಾಗಿ ಪರಸ್ಪರ ಸಹಾಯ ಸಂಘಗಳನ್ನೂ ರಿಜಿಸ್ಟರಾಗಿ ಲ್ಪಟ್ಟ ಇತರ ಸಂಘಗಳನ್ನೂ ಕಂಪನಿಗಳಂತೆಯೇ ಭಾವಿಸುವಂತೆ ಭೂ ಸಂಪಾದನೆಯ ರೆಗ್ಯುಲೇಷನನ್ನು ತಿದ್ದುಪಾಟು ಮಾಡಬೇಕೆಂಬ ಈ ಮಸೂದಾ ಕಾನೂನನ್ನು ಸದಸ್ಯರುಗಳಿಗೆ ಒಪ್ಪಿಸಲಾಗಿದ್ದಿತು ಈ ಸಲಹೆಯಲ್ಲಿ ಹೊಸ ವಿಚಾರವೇನೂ ಇಲ್ಲ ಬ್ರಿಟಿಷ್ ಇಂಡಿಯಾದಲ್ಲಿ 12 ವರುಷಗಳಿಂದಲೂ ಇದೇ ಬಗೆಯ ಕಾನೂನು ಆಚರಣೆಯಲ್ಲಿದ್ದು ಉಪಯುಕ್ತವಾಗಿ ಕಂಡುಬಂದಿದೆ ಆ ಕಾನೂನಿನ ನಿಯಮಗಳನ್ನೇ ಮೈಸೂರು ಪ್ರಾಂತ್ಯದಲ್ಲಿಯೂ ಆಚರಣೆಗೆ ತರಬೇಕೆಂಬ ಉದ್ದೇಶದಿಂದ ಮಾತ್ರವೇ ಈ ಮಸೂದಾ ಕಾನೂನನ್ನು ರಚಿಸಿ ಅದರ ಸಾಮಾನ್ಯ ನಿಯಮಗಳ ವಿವರಣೆಯನ್ನು ಈ ಸಭೆಯವರಿಗೆ ಒಪ್ಪಿಸಿದ್ದೆವು ಅದನ್ನು ಸದಸ್ಯರುಗಳು ಸಂತೋಷದಿಂದ ಅಂಗೀಕರಿಸುವರೆಂದು ನಂಬಿದ್ದೆವು ಅದರ ಆಶಯದ ವಿಷಯದಲ್ಲಿಯೂ, ಅದರಿಂದ ಉಂಟಾಗಬಹುದಾದ ಫಲಿತಾಂಶಗಳ ವಿಷಯದಲ್ಲಿಯೂ ಸದಸ್ಯರುಗಳಿಗೆ ಸ್ವಲ್ಪಮಟ್ಟಿಗೆ ಯಾವುದೋ ಒಂದು ಬಗೆಯ ಶಂಕೆಯುಂಟಾಯಿತೆಂದು ತೋರುತ್ತದೆ, ಈ ಮಸೂದಾ ಕಾನೂನಿನ ವಿಚಾರದಲ್ಲಿ ಸಭೆಯವರ ಅನುಮತಿಯು ದೊರೆಯದ [illegible] ಕಾರಣವಾಗಿರಬೇಕು,

ನಾಟಕ, ಸಿನಿಮಾ ಪ್ರದರ್ಶನಗಳ ಮೇಲಿನ ತೆರಿಗೆ

[illegible] ನಾಟಕ ಸಿನಿಮಾ ಪ್ರದರ್ಶನಗಳ ಮೇಲಿನ [illegible] [illegible] ಈ ತೆರಿಗೆಯಿಂದ ಬರುವ [illegible] [illegible] [illegible] ಈ ತೆರಿಗೆಯನ್ನು [illegible] ಮಾತ್ರವೇ ಸರ್ಕಾರದವರು ಈ ಹಣದಲ್ಲಿ ತೆಗೆದುಕೊಳ್ಳಬೇಕೆಂದರೆ, ಸದಸ್ಯರುಗಳು ಸಲಹೆ ಮಾಡಿದರು ಈ ಸಲಹೆಯನ್ನು ಸರ್ಕಾರದವರು ಅಂಗೀಕರಿಸಿರುತ್ತಾರೆ.

ಜಮೀನು ಹಕ್ಕುಗಳ ದಾಖಲಾತಿ ರೆಗ್ಯುಲೇಷನಿನ ಮೇರೆಗೆ ವಸೂಲಾಗುವ ಫೀಜುಗಳ ವಿಚಾರ.

ಜಮೀನು ಹಕ್ಕುಗಳ ದಾಖಲಾತಿಯ ರೆಗ್ಯುಲೇಷನಿನ ಮೇರೆಗೆ ವಸೂಲ್ಮಾಡುತ್ತಿರುವ ಫೀಜುಗಳನ್ನು ತಗ್ಗಿಸಬೇಕೆಂದು ಅರಿಕೆಯಾದುವು. ಒಂದೆರಡು ವರುಷಗಳ ಕೆಳಗೆ ಈ ಸಭೆಯಲ್ಲಿ ಇದೇ ಬಗೆಯ ಅರಿಕೆಗಳು ಬಂದಿದ್ದಾಗ, ನಾನು ಹೇಳಿದ್ದುದನ್ನೇ ಪುನಃ ಈಗಲೂ ಹೇಳಬೇಕಾಗಿದೆ, ಆಗ ನಾನು ಹೇಳಿದ್ದುದೇನೆಂದರೆ —

"ಈ ರೆಗ್ಯುಲೇಷನಿನ ಮೇರೆಗೆ ವಿಧಿಸಲ್ಪಡುವ ಫೀಜುಗಳಿಂದ ಲಾಭ ಸಂಪಾದನೆಮಾಡಬೇಕೆಂಬ ಉದ್ದೇಶವು ನಮಗೆ ಖಂಡಿತವಾಗಿಯೂ ಇಲ್ಲ ಜಮೀನು ಹಕ್ಕುಗಳ ದಾಖಲೆಯ ಪದ್ಧತಿಯನ್ನು ಆಚರಣೆಗೆ ತರಲು ತಗಲುವ ವೆಚ್ಚವು ಆ ವ್ಯವಹಾರಕ್ಕೆ ಸಂಬಂಧಪಟ್ಟ ಕಾರ್ಯಕಲಾಪಗಳಿಂದ ಹುಟ್ಟುವಂತಾಗಬೇಕೆಂಬ ಉದ್ದೇಶದಿಂದ ಮಾತ್ರವೇ, ಸರ್ಕಾರದವರು ಈಗ ಜಾರಿಯಲ್ಲಿರುವ ಫೀಜುಗಳ ದರವನ್ನು ಗೊತ್ತುಮಾಡಿದ್ದಾರೆ."

ಈ ವಿಷಯವಾಗಿ ಚರ್ಚೆಯು ನಡೆಯುತ್ತಿದ್ದಾಗ ನನಗೆ ಒಪ್ಪಿಸಿದ ಲೆಕ್ಕಗಳಿಂದ ಈ ಬಾಬಿನಲ್ಲಿ ವೆಚ್ಚಕ್ಕಿಂತಲೂ ಹುಟ್ಟುವಳಿಯು ಏನೋ ಅಲ್ಪಸ್ವಲ್ಪ ಮಾತ್ರವೇ ಹೆಚ್ಚಾಗಿದೆಯೆಂಬುದು, ತಮಗೆ ಮನವರಿಕೆಯಾಗಿರಬೇಕು. ಈಗಿರುವಲ್ಲಿ ಫೀಜುಗಳ ದರವನ್ನು ಪ್ರತ್ಯೇಕವಾಗಿ ತಗ್ಗಿಸುವುದು ಸಾಧ್ಯವಲ್ಲವೆಂಬ ವಿಷಯವು ತಮ್ಮಗಳಿಗೆ ಮನವರಿಕೆಯಾಗಿರಬಹುದೆಂದು ಖಂಡಿತವಾಗಿ ನಂಬುತ್ತೇನೆ ಆದರೂ ಈ ಜಮೀನು ಹಕ್ಕುಗಳ ದಾಖಲಾತಿಯ ಶಿಸ್ತಿಗೆ ತಗಲತಕ್ಕ ವೆಚ್ಚವನ್ನು ತಗ್ಗಿಸುವುದಕ್ಕೇನಾದರೂ ಅವಕಾಶವುಂಟೆ ಎಂಬ ಸಂಗತಿಯನ್ನು ಮತ್ತೊಮ್ಮೆ ಪರಿಶೀಲಿಸಿ ನೋಡಿ ಫೀಜಿನ ದರವನ್ನೇನಾದರೂ ತಗ್ಗಿಸುವುದು ಸಾಧ್ಯವೆಂದಲ್ಲಿ, ಹಾಗೆ ಸಾಧ್ಯವೆಂದಷ್ಟು ಸಹಾಯವನ್ನೂ ಮಾಡಲಾಗುವುದು

ಬಾಲ್ಯವಿವಾಹ ನಿರೋಧಕ ಮಸೂದಾ ಕಾನೂನಿನ ವಿಚಾರ.

ಬಾಲ್ಯವಿವಾಹವನ್ನು ನಿರೋಧಿಸುವ ಮಸೂದಾ ಕಾನೂನಿನ ವಿಚಾರದಲ್ಲಿ ತೀವ್ರಾಸಕ್ತಿಯಿಂದಲೂ ಸ್ವಾರಸ್ಯವಾಗಿಯೂ ಚರ್ಚೆಯು ನಡೆಯಿತು

ಸದಸ್ಯರಲ್ಲಿ ಬಹುಭಾಗದವರೇನೋ ಈ ಮಸೂದಾ ಕಾನೂನನ್ನು ಆಚರಣೆಗೆ ತರಬಹುದೆಂದು ಅಭಿಪ್ರಾಯಪಟ್ಟರು ಆದರೆ ಬಾಲ್ಯವಿವಾಹವು ನಡೆಯುವುದಾದರೆ ಅಂತಹ ಸಂದರ್ಭಗಳಲ್ಲಿ ಶಿಕ್ಷೆಯನ್ನು ವಿಧಾಯಕವಮಾಡತಕ್ಕೊಳಕ ಅದನ್ನು ತಪ್ಪಿಸುವುದಾದ ಈ ಮಸೂದಾ ಕಾನೂನನ್ನು ಆಚರಣೆಗೆ ತಂದಲ್ಲಿ ಒಳ್ಳೆಯದಾಗುವುದಕ್ಕಿಂತಲೂ ಹೆಚ್ಚಾಗಿ ಕೆಡುಕೇ ಆಗುವುದೆಂದು ಹಲವು ಮಂದಿ ಸದಸ್ಯರು ಅಭಿಪ್ರಾಯಪಟ್ಟರು ಅಂತಹ ಹಾಗೂ ಹೀಗೂ ಇರುವವರ ಮನೋಭಾವಗಳನ್ನೆಲ್ಲಾ ತೂಗಿ ನೋಡಿದರೆ, ಸದ್ಯದಲ್ಲೇನೋ ಈ ವಿಚಾರದಲ್ಲಿ ವಿದ್ಯಮಾನಗಳನ್ನು ಈಗಿರುವಂತೆಯೇ ಬಿಟ್ಟುಬಿಡುವುದು ಮೇಲೆಂದು ಅನುಮೇಯಿಸಬೇಕಾಗಿದೆ ಮತಕ್ಕೂ, ಸಾಮಾಜಿಕ ವಿಚಾರಗಳಿಗೂ ಉಭಯತಃ ಸಂಬಂಧಪಟ್ಟಿರುವ ವಿಷಯಗಳಲ್ಲಿ ಶಾಸನವನ್ನು ವಿಧಾಯಕ ಮಾಡಲು ನಮ್ಮ ದೇಶದಲ್ಲಿ ಕಾರ್ಯತಃ ಅನೇಕ ಕಷ್ಟಗಳಿವೆ ಹೆಚ್ಚುಕಾಲ ಸ್ಥಿರವಾಗಿ ನಿಲ್ಲುವಂತಹ ವಾಸ್ತವವಾದ ಸುಧಾರಣೆಗಳಾಗಬೇಕಾದರೆ ಜನರು ತಮ್ಮ ತಿಳಿವಳಿಕೆಯಿಂದ ತಾವೇ ಮನಃಪೂರ್ವಕವಾಗಿ ಸುಧಾರಣೆಗಳನ್ನು ನೆರವೇರಿಸುವುದರಿಂದ ಅದು ಸರಾಗವಾಗಿ ಸಾಗುವುದೆಂಬುದೂ ಒಂದು ತತ್ತ್ವವಾಗಿದೆ ಹೊರಗಿನ ನಿಬಂಧಗಳನ್ನು ಹೇರುವುದರಿಂದ ಅದು ನೆರವೇರುವಂತೆ ಮಾಡುವುದು ಸಾಧ್ಯವಿಲ್ಲ

ನಾನು ಹೀಗೆ ಹೇಳುತ್ತಿರುವೆನಾದರೂ ಅನೇಕ ವೇಳೆ ಸುಧಾರಣೆಗಳನ್ನು ಆಚರಣೆಗೆ ತಂದಿರುವ ಟರ್ಕಿಸ್ಥಾನದವರ ಉದಾಹರಣೆಯನ್ನು ನಾನು ಮರೆತಿಲ್ಲ ಆದಾಗ್ಯೂ, ನಮ್ಮ ದೇಶದ ಸ್ಥಿತಿಗತಿಗಳು, ಅದರಲ್ಲಿಯೂ ಮುಖ್ಯವಾಗಿ ಮತವಿಷಯಕವಾದ ಮತ್ತು ಸಾಮಾಜಿಕ ವಿಷಯವಾದ ಸ್ಥಿತಿಗತಿಗಳು, ಟರ್ಕಿಸ್ಥಾನದ ಸ್ಥಿತಿಗತಿಗಳಂತಲ್ಲವೆಂಬುದನ್ನೂ ನಾವು ಮರೆಯಕೂಡದು ಒಂದು ದೇಶದಲ್ಲಿ ಅವಶ್ಯವೂ ಮತ್ತು ಉಪಾದೇಯವೂ ಆದುದು, ಮತ್ತೊಂದು ದೇಶದಲ್ಲಿ ಅನಾವಶ್ಯಕವಾಗಿರಬಹುದಲ್ಲದೆ, ಅಲ್ಲಿ ಅದನ್ನು ಆಚರಣೆಗೆ ತರುವುದು ಉಚಿತವೆನಿಸದೆ ಇರಬಹುದು.

ಆದಕಾರಣ, ಬಾಲ್ಯವಿವಾಹವನ್ನು ನಿರೋಧಿಸುವ ಶಾಸನಕ್ಕೆ ಒತ್ತಾಸೆ ಕೊಡುವ ವಿಷಯದಲ್ಲಿ ಪ್ರಜಾಭಿಪ್ರಾಯವು ಇನ್ನೂ ಹೆಚ್ಚು ಪ್ರಸನ್ನವಾಗಿ ಅದು ಅಗಬೇಕೇ ತೀರಬೇಕೆಂದು ಪ್ರಕಟಪಡುವವರೆಗೂ, ಸರ್ಕಾರದವರು ಈ ವಿಷಯದಲ್ಲಿ ಪ್ರವರ್ತಿಸಲು ಮನಸ್ಸಿಲ್ಲದವರಾಗಿದ್ದಾರೆ. ಪ್ರಗತಿಸಾಧಕರ ಮನೋಭಾವವು ನಮ್ಮ ದೇಶದಲ್ಲಿ ಅನೇಕ ವಿಷಯಗಳಲ್ಲಿ ಈಗ ವ್ಯಕ್ತಗೊಂಡಿದೆ ಈ ವಿಚಾರದಲ್ಲಿಯೂ ಕೂಡ ಅದು ತಕ್ಕಷ್ಟುಮಟ್ಟಿಗೆ ಪರಿಸ್ಫುಟವಾಗಿ ವೃದ್ಧಿಹೊಂದಿ ಅವಶ್ಯಕವಾದಲ್ಲಿ [illegible] ನಡೆಸುವುದಕ್ಕೆ ನಮಗೆ ಸೌಕರ್ಯವನ್ನುಂಟುಮಾಡಲೆಂದು ಹಾರೈಸೋಣ

ಮೈಸೂರು ಸಂಸ್ಥಾನದ ಪ್ರಾಂತ ಮತ್ತು ಅಖಿಲ ಭಾರತೀಯ ಸಂಯುಕ್ತ ರಾಜ್ಯಾಂಗ ವ್ಯವಸ್ಥೆ

ಫೆಡರೇಷನಿನ ವಿಷಯವಾಗಿ ಕೆಲವುಗಳಲ್ಲದೂ ಈ ಬಗೆಯಲ್ಲಿ ವಿಶದವಾಗಿ ಚರ್ಚೆ ಮಾಡಿದುದನ್ನು ಕುರಿತು ಆ ಸಂಬಂಧವಾಗಿ ನಾನು ಕೆಲವು ಸಂಗತಿಗಳನ್ನು ಸೂಚಿಸುವೆನು ನಾನು ಹಾಗೆ ಮಾಡುವೆನೆಂದು ಕಾಲ್ಪನಿಕ ನಿರೀಕ್ಷಿಸಬಹುದಿರಬಹುದಲ್ಲಿ ಸಂಶಯವಿಲ್ಲ

ಈ ಫೆಡರೇಷನ್ ವಿಚಾರವು ಆರ ಕೋಟಿಯಲ್ಲಿ ಪ್ರಸ್ತಾಪಿಸಲಾಗಿವೆ, ಹೊಂದಿಕೆ ನಿರ್ವಾಹವೇ ಇಲ್ಲವೆನ್ನುವಷ್ಟರ ಮಟ್ಟಿಗೆ ಅದು ಸಂಸ್ಥಾನದ ಪ್ರಜೆಗಳಿಗೆ ಅನಿಷ್ಟ ಅಷ್ಟು ನ್ಯಾಯಯುಕ್ತವಾಗಿದೆ ಆದಕಾರಣ ಇತರ ವಿಷಯಗಳಲ್ಲಿ ಸಹಜವಾಗಿಯೇ ಕಾಣ್ಬರುವಂತೆ ತರತಮ್ಯ ಮತಸ್ವಾತಂತ್ರ್ಯ ಅಭಿಪ್ರಾಯಗಳಿಲ್ಲ ಆದ ಕಾರಣವಾಗಿ ವ್ಯವಹರಿಸಿರಿ ಈ ವಿಷಯದಲ್ಲಿ ಸದಸ್ಯರುಗಳ ಅಭಿಪ್ರಾಯಗಳೂ ಅದಾಗಲೇ ಹೋಗಿವೆ ಎಂಬುದು ಸರ್ಕಾರದವರಿಗೆ ಸಂಪೂರ್ಣವಾಗಿ ಗೋಚರವಾಗುತ್ತವೆ, ಇದರಿಂದ ಅವರು ತಿಳಿದಿದ್ದ ಮತ್ತು ತಾವುಗಳು ವ್ಯಕ್ತಪಡಿಸಿದ ಈ ಅಂಶಗಳಲ್ಲಿ ಕೆಲವು [illegible] ಅಭಿಪ್ರಾಯವು ಆಧಾರವಾಗಿ ಅವರ ಅವರು [illegible] ಎಂಬುವನ್ನು ನಮ್ಮ ಸರ್ಕಾರದವರು [illegible] ಇದ್ದಾರೆ ಈ ವಿಷಯದಲ್ಲಿ ಬ್ರಿಟಿಷ್ ಇಂಡಿಯಾದಲ್ಲಿರುವ ನಮ್ಮ [illegible] [illegible] [illegible] ನಡೆದ ಅಧಿವೇಶನದಲ್ಲಿ [illegible] ಒಪ್ಪಿ ಸೂಚಿಸಲಾಗಿದೆ

[illegible]

ಚಿತ್ರದುರ್ಗ ಡಿಸ್ಟ್ರಿಕ್ಟ್ ಬೋರ್ಡ್

ನೋಟೀಸು.

ಚಿತ್ರದುರ್ಗದ ತಾಲ್ಲೂಕಿನಲ್ಲಿ ಈ ಕೆಳಗೆ ನಮೂದು ಮಾಡಿರುವ ಕೊಂಗಾರಿಗಳನ್ನು ನಡೆಸತಕ್ಕ ಬಗ್ಗೆ ಬೇರೆ ಬೇರೆ ಸೀಲ್ಡು ಟೆಂಡರುಗಳು ತಾ|| 3-7-1932 ನೇ ಮಧ್ಯಾಹ್ನ 3 ಘಂಟೆ ವರುವಿಗೆ ತೆಗೆದುಕೊಳ್ಳಲಾಗುತ್ತೆ. ಪ್ಲಾನ್ ವಗೈರೆ ತಪಸೀಲುಗಳನ್ನು ಕೆಲಸ ನಡೆಯುತ್ತಿರುವ ಕಾಲಗಳಲ್ಲಿ ಆಫೀಸಿನಲ್ಲಿ ತಿಳಿದುಕೊಳ್ಳಬಹುದು

			ರೂ
1	ನಾಗರಮಟ್ಟಿ, ಭಾವಿಮಾಡಿಸುವುದು, ಡಿಪಾಜಿಟ್		100
2	ಚಿಕ್ಕನಕಟ್ಟೆ	,,	100
3.	ಚಿಕ್ಕ ಗುಂಟನೂರು	,,	100
4.	ಗೂಡಬನಹಾಳು	,,	100

ಕೊಂಗಾರಿಗಳನ್ನು 1932 ನೇ ಡಿಸೆಂಬರ್ ಆಖ್ಯರೊಳಗೆ ಪೂರೈಸಬೇಕು.

ಜಿ. ಚೆನ್ನಪ್ಪ,
ಪ್ರೆಸಿಡೆಂಟ್.

NOTICE

Tenders are invited for preparing a scheme and an estimate for installation of electric lights in Gadag Betgeri Municipal limits to provide 1000 electric lights of 25 candle power excluding decorative lights and box lights on public squares.

Sealed tenders should be submitted within one month from the date of this notice only by the qualified electrical engineers or by companies who have employed such engineers.

In the tenders information should be given regarding the charges for preparing the scheme and estimate after visiting this place.

Detailed information if any required may be obtained from this office.

Municipal Office, Gadag Betgeri 16-6-32

T. V. Kori,
President
Gadag Betgeri
Municipal Borough

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ

ಗುಂಡ್ಲುಪೇಟೆ ತಾ|| ಮಡಹಳ್ಳಿ

[illegible]

ಓರ್ವ ಪ್ರತ್ಯಕ್ಷದರ್ಶಿ.

ಶಿರಸಿ ತಾ|| ಗದಿಹಳ್ಳಿ

[illegible]

ಓರ್ವ ಪ್ರತ್ಯಕ್ಷದರ್ಶಿ.

ಕ್ಲೋಸ್ ಪೇಟೆ.

[illegible]

[redacted]

ದೇಶೀಯ ಕತ್ತರಿಗೆಗಳು.

ಒಪ್ಪತ್ತಿ 2 ಅಡಿಯಿಂದ 4 ಅಡಿ ಪರ್ಯಂತ ಎತ್ತರವಿರುವ ... [illegible] ... 1ಕ್ಕೆ ಗಜಕ್ಕೆ 10 ಪೈ. ... [illegible]

[illegible]

1 ... [illegible]

ಸ್ವೀಕಾರ

[illegible]

ಪತ್ರವ್ಯವಹಾರ

ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಶುಭೋದಯ ಸೂಚನೆ

[illegible]

ಶ್ರೀ ಜಗದ್ಗುರುಗಳ ಅಡ್ಡಪಲ್ಲಕ್ಕಿಯುತ್ಸವ.

[illegible]

ಲಿಂಗನಗೌಡ ಪ್ಯಾಟೀಲ್ಸ್, ಸಾ|| ಮ್ಯಾಗೇರಿ.

ಮೂರು ಮದುವೆ ಆರ್ಟಿಕಲ್ಲಿಗೆ ಜವಾಬು.

[illegible]

[redacted]

ಜುರ್ಮನವಡಲ್ಲಿ ನೆಂಟರು, ನೆರೆಹೊರೆಯವರು ತಮ್ಮ ಬಂಡಿ ಸಗ್ಗೆರೆಗಳನ್ನು [illegible]

ಪ್ರಕಸಟ್ಟಿ ಸಂಬಳ

ನಂಜನಗೂಡು ಮಹಾಕ್ಷೇತ್ರಕ್ಕೆ ಶ್ರೀ ಸಂಜುಂಡೇಶ್ವರಸ್ವಾಮಿಯ ಸೇವೆಗೆ ಜಾತ್ರೆಕಾಲದಲ್ಲೂ ಸಾಧಾರಣ ದಿನಗಳಲ್ಲೂ ಅನೇಕ ಜನರು ಬರುತ್ತಿರುವರಷ್ಟೆ. ಹೀಗೆ ಬರತಕ್ಕವರಲ್ಲಿ ಅನಾಥರಾದ ಬ್ರಾಹ್ಮಣರು ಸತ್ತು ಹೋದರೆ ಅವರ ಶವ ಸಂಸ್ಕಾರವನ್ನು [illegible] ಕಂಗಳೊಂದಕ್ಕೆ ೬ ರೂಪಾಯಿ ಸಂಬಳವನ್ನು ಹುಜೂರಿನಿಂದ ಕೊಡಲ್ಪಡುತ್ತಿದೆ. [illegible] ಆ ಸಂಬಳಗಾರರಿಂದ ಸಂಸ್ಕರಿಸಲ್ಪಡತಕ್ಕ [illegible] ತಗೆದುಕೊಳ್ಳುತ್ತಿರುವ ಆತನ ಸಂಬಳವನ್ನು [illegible] ಯೋಗ್ಯವಾಗ ತಪ್ಪದೆ [illegible] ಹೀಗೆ ಕೆಲಸಮಾಡದೆ ಪ್ರಕಸಟ್ಟಿ ಸಂಬಳವನ್ನು ತೆಗೆದುಕೊಳ್ಳುತ್ತಿರುವವರನ್ನು ಅಧಿಕಾರಿಗಳು ವಿಚಾರಿಸಿ ಅವರನ್ನು ತೆಗೆದು ಆ ಕೆಲಸವನ್ನು ಶ್ರದ್ಧೆಯಿಂದ ಮಾಡತಕ್ಕವರನ್ನು ನಿಯಮಿಸುವರೆಂದು ನಿರೀಕ್ಷಿಸುವ,

ಸ್ಥಳವಾಸಿ

ಮದ್ದೂರು ತಾಲ್ಲೂಕು ಬೆಸಗರಹಳ್ಳಿ.

ಈ ಗ್ರಾಮಕ್ಕೆ 1930-31 ನೇ ಸಾಲಿನಲ್ಲಿ [illegible] ಮಿಡಲ್ ಸ್ಕೂಲು [illegible] 14 ಮಂದಿ [illegible] 13 ಮಂದಿ ಉತ್ತೀರ್ಣರಾಗಿ [illegible]

ಬಿ. ಬಸವರಾಜಯ್ಯ

ಶಿವದೀಕ್ಷಾ ಸಂಸ್ಕಾರ.

ನಂಜನಗೂಡು ತಾ|| [illegible] ಪಟೇಲ್ [illegible] ತಾ|| 13-6-33 ನೇ ಸೋಮವಾರ [illegible] 10-12 ವಂಶ [illegible] ವಟುಗಳಿಗೂ 10-12 ವರುಷದ ಕನ್ಯೆಯರ ಗಳಿಗೂ [illegible] ಶಿವದೀಕ್ಷಾ ಸಂಸ್ಕಾರವನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು. ಈ ದೀಕ್ಷಾ ಸಂಸ್ಕಾರಕ್ಕೆ ವಿರಕ್ತಮೂರ್ತಿಗಳೂ ಪಟ್ಟಾಧಿಕಾರಿಗಳೂ ಭಕ್ತಮಾಹೇಶ್ವರರೂ ದಯಮಾಡಿಸಿದ್ದರು. ನಂಜನಗೂಡು ಹೊಂಗಳಗೆರೆ ಮಠದ ಶ್ರೀ [illegible] ಶಿವರುದ್ರಸ್ವಾಮಿಗಳವರು ದೀಕ್ಷಾ ಕಿತ್ತೋತ್ಸವವನ್ನು ನೆರವೇರಿಸಿದರು. ಸ್ವಾಮಿಗಳು ವಟುಗಳ ನವೀನ [illegible] ಮಹಾಸ್ವಾಮಿಯವರನ್ನು ಸ್ತೋತ್ರಮಾಡಿ ವಟುಗಳಿಗೆ ದೀಕ್ಷಾಸಂಸ್ಕಾರವನ್ನು [illegible]

[illegible] ಹೇಳಿಕೊಂಡೆ

ಓರ್ವ ಮಾಹೇಶ್ವರ

[ನೋಟ್ಸ್ [illegible] ಗೌರವ ತಂದಿರುವುದೂರ್ವಕ [illegible]]

ಸ್ಕೂಲ್ ಕಟ್ಟಡದ ಪ್ರವೇಶೋತ್ಸವ

[illegible] ಗ್ರಾಮದಲ್ಲಿ ವಾಲ್ಮೀಕಿ ವಿದ್ಯಾಭಿವೃದ್ಧಿ [illegible] ಹಳ್ಳಿಯ [illegible] ಸ್ವಂತ [illegible] ಸ್ಕೂಲ್ ಕಟ್ಟಡ [illegible] ಪ್ರವೇಶಮಹೋತ್ಸವವು ತಾ|| 30-5-33 ರಲ್ಲಿ [illegible] ಇನ್‌ಸ್ಪೆಕ್ಟರ್ ಮ. ಎಸ್. ವೀರಭದ್ರಪ್ಪನವರ ಅಧ್ಯಕ್ಷತೆಯಲ್ಲಿ [illegible]

ದಾವಣಗೆರೆಯ ಕಳಸವು ಕಳಚಿಬಿದ್ದಿತು

ದಾವಣಗೆರೆಯ ಪ್ರಮುಖ [illegible] ಅಧ್ಯಕ್ಷರೂ ಆದ ಮ|| ತವನಪ್ಪನವರ ದೇವೇಂದ್ರಪ್ಪನವರು ತಾ|| 11-6-33 ನೇ ಶನಿವಾರ ರಾತ್ರಿ 2 ಘಂಟೆಗೆ [illegible] ಮತದಲ್ಲಿ ಶೈವರಾಗಿದ್ದೂ ಎಲ್ಲಾ ಮತದವರ ವಿಷಯದಲ್ಲಿಯೂ ತುಂಬ ಅಭಿಮಾನವನ್ನೂ ಗೌರವವನ್ನೂ ಇಟ್ಟಿದ್ದರು. ದಾವಣಗೆರೆಯಲ್ಲಿ ನಡೆಯುವ ಯಾವ ಸಣ್ಣ ಕಾರ್ಯವೇ ಆಗಲಿ, ದೊಡ್ಡ ಕಾರ್ಯವೇ ಆಗಲಿ ಇವರ ಸಲಹೆ, [illegible] ದಾವಣಗೆರೆಗೆ ಕಳಸಪ್ರಾಯರಾಗಿದ್ದರು. ಅಂತಹ ಕಳಸವು ಇಂದು [illegible] ದುರ್ದೈವದಿಂದ ಕಳಚಿಬಿದ್ದಂತಾಯಿತು. [illegible] ರನ್ನು ದೇಹವನ್ನು ಸವೆಸುತ್ತಿದ್ದರು. [illegible]

ನವಕ್ಕಾಗಿ [illegible] ಯುವಕರ [illegible] ಮೈಸೂರು ದೇಶದವರೇ ಸೂಚಿಸುವ ಪ್ರಸಂಗ ಬಂದಿತ್ತೆಂದು [illegible] ಶ್ರೀ ಭಗವಂತನು ಶಾಂತಿಯನ್ನು ಕೊಡಲೆಂದೂ, ಅವರ ಬಂಧುಬಳಗದವರಿಗೆ ಮನಸ್ಸಮಾಧಾನವನ್ನು ಉಂಟುಮಾಡಲೆಂದು ಪ್ರಾರ್ಥಿಸುವೆನು

ಆನೆಕೊಂಡದ [illegible],
ದಾವಣಗೆರೆ.

ದಾವಣಗೆರೆ ಪುರವಾಸಿಗಳ ಅನುತಾಪಸೂಚಕಸಭೆ.

ದಾವಣಗೆರೆಯ ಪುರಪ್ರಮುಖರೂ, ಪ್ರಸಿದ್ಧ ವರ್ತಕರೂ, ಸಂಸ್ಕೃತಿಕರೂ ಆದ ತವನಪ್ಪನವರ ದೇವೇಂದ್ರಪ್ಪನವರು ತಾ|| 11-6-1933 ನೇ ಶನಿವಾರ ರಾತ್ರಿ 2 ಘಂಟೆಗೆ ದಿವಂಗತರಾದ ಪ್ರಯುಕ್ತ ದಾವಣಗೆರೆಯ ಮಹಾಜನಗಳು 12 ನೇ ಭಾನುವಾರ ಅಂಗಡಿಗಳನ್ನು ಮುಚ್ಚಿ ವ್ಯಾಪಾರವನ್ನು ನಿಲ್ಲಿಸಿ ತಮಗುಂಟಾದ ಅನುತಾಪವನ್ನು ಸೂಚಿಸಲು ಧನಲಕ್ಷ್ಮೀ ಥಿಯೇಟರ್‌ನಲ್ಲಿ ಸಭೆ ಸೇರಿದ್ದರು. ಸಭೆಗೆ ಸರ್ಕಾರಿ ಅಧಿಕಾರಿಗಳೂ ಪುರಪ್ರಮುಖರೂ [illegible] 2-3 ಸಾವಿರ ಜನರು ಸೇರಿದ್ದರು. ನಗರದ [illegible] ನ್ಯಾಯಾಧಿಪತಿ ಸಭೆಯ ಸದಸ್ಯರೂ, ಪ್ರಸಿದ್ಧ ಅಡ್ವೋಕೇಟರೂ ಆದ ಮ|| ಬಿ. ಎಚ್. ಚಂದ್ರಶೇಖರಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು. [illegible] ಡೊಡ್ಡಪ್ಪನವರೂ, ಹೈ ಸ್ಕೂಲ್ ಹೆಡ್‌ಮಾಸ್ಟರ್ ವೆಂಕಟರಾಯರೂ, ಮುನಿಸಿಪಲ್ ವೈಸ್‌ಪ್ರೆಸಿಡೆಂಟ್ ಅಡ್ವೊಕೇಟ್ ಶಿವರಾಮಯ್ಯನವರೂ, ಆನೆಕೊಂಡದ [illegible] ಸಾಹುಕಾರ್ ಚೆನ್ನಗಿರಿ ರಂಗಪ್ಪನವರೂ ಮತ್ತು [illegible] ಸ್ವರ್ಗವಾಸಿಗಳಾದ ದೇವೇಂದ್ರಪ್ಪನವರ ಗುಣಗಳನ್ನು ವರ್ಣಿಸುವ ವ್ಯಾಖ್ಯಾನಗಳನ್ನು ಮಾಡಿದರು. ಅನಂತರ ಸಭಾಧ್ಯಕ್ಷರಾದ ಮ|| ಚಂದ್ರಶೇಖರಯ್ಯನವರು ಅಮೋಘವಾದ ಭಾಷಣವನ್ನು ಮಾಡಿದಮೇಲೆ, ದಯಾಮಯನಾದ ಭಗವಂತನು ದಿವಂಗತರಾದ ದೇವೇಂದ್ರಪ್ಪನವರ ಆತ್ಮಕ್ಕೆ ಶಾಂತಿಯನ್ನು ಕೊಡಲೆಂದು ಪ್ರಾರ್ಥಿಸುವ ಮತ್ತು ಅವರ ಕುಟುಂಬದವರ [illegible] ಅನುತಾಪವನ್ನು ಸೂಚಿಸುವ ಠರಾವುಗಳು ತೀರ್ಮಾನವಾಗಿ ಸಭೆಯು ಬರ್ಖಾಸ್ತಾಯಿತು.

ಪ್ರತ್ಯಕ್ಷದರ್ಶಿ.

ಮೈಸೂರು ಸೀಮೆಯ ಶ್ರೀಮುತು ಮಕ್ಕಳ ವೀರಶೈವರ ಪ್ರಥಮ ಸಮ್ಮೇಳನ.

ಈ ಸಮ್ಮೇಳನದ ಪ್ರಥಮ ಅಧಿವೇಶನವು [illegible] ತಾ|| 11 ರ ವರೆಗೆ [illegible] ಗ್ರಾಮದಲ್ಲಿ [illegible] ಬಿ. ಎ., ವಕೀಲರು, ಇವರ ಅಧ್ಯಕ್ಷತೆಯಲ್ಲಿ [illegible]

ವ್ಯಕ್ತಳಿದ್ದರೆಮನೆ ಚಂದ.

ಬಂಜೆತನದಿಂದ ಮುಕ್ತರಾಗುವಿರಿ

ಮಕ್ಕಳಿ ಕ್ಲಿಂದು

ಗರ್ಭಧಾರಣಾ ಸಂಜೀವಿನೀ

ಚಿಂತಿಸ ಬೇಡಿರಿ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರಿ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಸಂತಾನ ಆವಿಗುದಿ. ೯ ಗುಳಿಗೆಗಳ ಕಿ. ೩ ರೂಪಾಯಿ.

[redacted] ೨೫ ಆಣೆ

ಪ[redacted]. ಕಾಪಸೆ. ಮಿರಜ. M. C. [redacted]

[illegible] ಸಂಸ್ಥೆಯ, ಈ ಮುಖ್ಯ [illegible] ಜೀರ್ಣೋದ್ಧಾರಕ್ಕೆ [illegible] ನಾಶ್ಯವಾಗಿದೆ. [illegible] ಸಮಾಜದಲ್ಲಿ [illegible] ಮುಖ್ಯವಾದ ವಿಷಯಗಳನ್ನು [illegible] ಈ ಸಭೆಯಲ್ಲಿ ಸಮಾಜೋದ್ಧಾರಣೆಗೆ ಅನುಕೂಲವಾದ ಅನೇಕ ನಿರ್ಣಯಗಳು ಆಗಬೇಕಾಗಿದ್ದರೂ ಅವು ಗಳಲ್ಲಿ ಸರ್ವಾನುಮತದಿಂದ ಒಪ್ಪಲ್ಪಟ್ಟ ಮುಖ್ಯವಾದ ಕೆಲವನ್ನು ಮಾತ್ರ ಇಲ್ಲಿ ಕಾಣಿಸಿದೆ –

(1) ಈ ಸಮಾಜದಲ್ಲಿ ವಿದ್ಯಾಪ್ರಸಾರಣೆ ಬಗ್ಗೆ ಒಂದು ಫಂಡನ್ನು ಏರ್ಪಡಿಸತಕ್ಕದ್ದು. [illegible]

(2) ಈ ಸಂಘದ ಕಾರ್ಯಕಲಾಪಗಳನ್ನು ನಡೆಸತಕ್ಕ ಬಗ್ಗೆ [illegible]

(3) ಈ ಸಮಾಜದಲ್ಲಿ ನಡೆಸಲ್ಪಡತಕ್ಕ ಸ್ಪರ್ಧೆಯಿಂದ [illegible]

(4) ಈ ಸಮಾಜದವರು ಲಗ್ನಕಾಲಗಳಲ್ಲಿ ವಿಪರ್ಯಯವನ್ನು ಆಚರಿಸಿಗೆ [illegible] ಲಗ್ನಗಳನ್ನು ನಡೆಸತಕ್ಕದ್ದು.

(5) ಈ ಸಮಾಜದ ಜನಗಳಲ್ಲಿ [illegible]

(6) ಈ ಸಮಾಜದಲ್ಲಿರುವ ಕೆಲವು ಮೂಢಸಂಪ್ರದಾಯಗಳು [illegible] ಸಂಪೂರ್ಣವಾಗಿ ತ್ಯಜಿಸತಕ್ಕದ್ದು.

ಇವೇ ಮೊದಲಾದ ಠರಾವುಗಳು [illegible] ನಡೆಸಲು ಕೂಡಲೆ ಆರಂಭವಾಗಬೇಕಾಗಿ ವಿಜ್ಞಾಪನೆ.

ಮಹಾಧಿಪರಾಗಿ

[illegible] ಶ್ರೀಮಾನ್ ವೇದಮೂರ್ತಿ ಪಿ. ಎಂ. ತ್ರ್ಯಂಬಕ ಸಿದ್ಧಲಿಂಗಶಾಸ್ತ್ರಿಗಳವರೂ ಅವರ ದಿಗ್ದರ್ಶನ ಶಾಸ್ತ್ರ ವಿಮರ್ಶೆಯೂ

(ಶ್ರೀ [illegible] ಎಚ್. [illegible] ಪಂಡಿತರು, ಟ್ರೇನಿಂಗ್ ಕಾಲೇಜ, ಮೈಸೂರು)

ದಿಗ್ದರ್ಶನಂ

(ಜೂನ್ ತಾ|| 13ರ ಸಂಚಿಕೆಯ ಆದ ಮುಂದುವರಿದುದು)

[illegible] ಶಕ್ತಿಯ [illegible] ಇರುವ ಸಂಬಂಧವು ಅವಿನಾಭಾವಪ್ರಕ್ಕದಾಗಿರುವುದರಿಂದ ಅದು [illegible] [redacted] [illegible]

[illegible] ವ್ಯಾಪಕಶಕ್ತಿಯೆಂದು ಹೇಳಲ್ಪಡುವುದರಿಂದ ಅದು [illegible] | ಇತ್ಯಾದಿ

[illegible]

"ವ್ಯಕ್ತಂ [illegible] ಮಹೇಶ್ವರಂ" ಇತ್ಯಾದಿ

ಶಕ್ತಿಯ ಮೂಲವನ್ನು ತಿಳಿದವರು ಜನನಮರಣಗಳಿಂದ ಪಾರಾಗುವರು

"ಶಕ್ತಿಕುಂಡಲಿನೀ [illegible]" ಇತ್ಯಾದಿ

[illegible] ಇತ್ಯಾದಿ

[illegible]

ಯಸ್ಯನಾಸ್ತಿ ಸ್ವಯಂಪ್ರಜ್ಞಾ ಶಾಸ್ತ್ರಂ ತಸ್ಯಕರೋತಿಕಿಂ ಲೋಚನಾಭ್ಯಾಂವಿಹೀನಸ್ಯ ದರ್ಪಣಃ ಕಿಂಕರಿಷ್ಯತೀತ್ಯಾದಿ || [illegible] | [illegible] || ಇತ್ಯಾದಿ

ಸಶೇಷ

ಅಖಿಲ ಶ್ರೀಮದ್ವೀರಶೈವ ಮಹಾಸಭೆಯ ಸ್ವಾಗತ ಕಮಿಟಿ ಧಾರವಾಡ ಇವರಿಂದ ಪ್ರಸಿದ್ಧ ಮಾಡಲ್ಪಟ್ಟ

ಪ್ರಕಟನೆ ನಂ ೬.

ಅಖಿಲ ಶ್ರೀವೀರಶೈವ ಮಹಾಸಭೆಯ ಸ್ವಾಗತ ಕಮಿಟಿಯ [illegible] ಮಹಾಸಭೆಯ [illegible] ಇದರ ಮೂಲಕ ತಿಳಿಯಪಡಿಸುವದೇನೆಂದರೆ ——

(1) ಅಧ್ಯಕ್ಷರನ್ನು ಆರಿಸುವದು, ಮತ್ತು ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು

ನಮ್ಮ ಪ್ರಕಟನೆ ನಂ 4 ಮತ್ತು 5 [illegible] ಈ ಸಾರೆ ಅಂದರೆ 11 ನೇ [illegible] ಮಹಾಸಭೆಯ ಅಧ್ಯಕ್ಷಸ್ಥಾನಕ್ಕೆ ಯಾರನ್ನು [illegible] ಮತ್ತು ಮಹಾಸಭೆಯಲ್ಲಿ ಯಾವ ಯಾವ ವಿಷಯಗಳನ್ನು ಚರ್ಚೆ ಮಾಡಬೇಕು ಎಂಬುವದರ ಬಗ್ಗೆ ಸ್ವಾಗತ ಕಮಿಟಿಯನ್ನು [illegible] [redacted] [illegible] ಮತ್ತು [illegible]

[illegible]

(2) ಮಹಾಸಭೆಯ ಮುಂದೆ ಹಾಕಲ್ಪಟ್ಟದ್ದು

ಈ ಪ್ರಕಾರ ಮಹಾಸಭೆಯ ಅಧ್ಯಕ್ಷರನ್ನು ಆರಿಸಿದ ಬಳಿಕ [illegible] 13 6 1932 ನೇ ದಿವಸ [illegible] ಧಾರವಾಡದ ಸ್ವಾಗತ ಕಮಿಟಿಯವರಿಗೆ [illegible] ಗಲೆ —

ಠರಾವು ನಂ 1 [illegible] ಧಾರವಾಡ'ಲ್ಲಿ 11 ನೇ ಅಖಿಲ ವೀರಶೈವ ಮಹಾಸಭೆಯನ್ನು [illegible] ಸ್ವಾಗತ ಸಂಘಾತ ಅಭಿಪ್ರಾಯವಿರುತ್ತದೆ

ಠರಾವು ನಂ 2 (ಸಮ್ಮತಿಗೆ ಬರೆದು ಬಂದಿಲ್ಲ)

ಠರಾವು ನಂ 3 [illegible] 3(ಮೂರು) [illegible] ಸ್ವಾಗತ ಕಮಿಟಿಯ ಚೇರಮನ್ನರ ಕಡೆಗೆ [illegible] 7 6 32 ನೇ ದಿವಸ ಬಂದದ್ದರಿಂದ ಆ ದಿವಸ ಮತ್ತು ಮರುದಿವಸ ಬ್ಯಾಂಕ [illegible] ಈ ದಿವಸದ ವರೆಗೆ ಬ್ಯಾಂಕಿನಲ್ಲಿ [illegible] ಬ್ಯಾಂಕಿಗೆ ಕಳಿಸಿಕೊಡಬೇಕೆಂದು [illegible]

ಈ [illegible] ವೀರಶೈವ [illegible] ಸ್ವಾಗತ ಕಮಿಟಿಯವರು [illegible] ವೀರಶೈವ [illegible] 1932 ನೇ ಡಿಸೆಂಬರ [illegible] ಬೇಕೆಂದು ನಿರ್ಣಯಮಾಡಿದ್ದಾರೆ

G. H. Honnapurmath — K. [illegible] Kulkarni
ಜನರಲ್ ಸೆಕ್ರೆಟರಿ — ಚೇರಮನ್ನ

ಸ್ವಾಗತ ಕಮಿಟಿ [illegible] ಧಾರವಾಡ ತಾ| 22 5 32

ನಾರಿಸಮ್ಮೋಹ ರತಿಮಂಜರಿ

ಮೈಸೂರ [illegible] ನೆಟ್ಟಗಾಗಿ ಮುಂದೆ [illegible] ಜರೂರ ತರಿಸಿ ಕೊಳ್ಳಿರಿ. [illegible] ಆಣೆ

ಪತ್ರಿ [illegible] ಎಸ್ [illegible], ಮಿರಜ

M C

೧೯೩೨ ನೆಯ ಇಸವಿ ಜೂನ್ ತಾ|| ೨೦ ರಿಂದ ಜೂನ್ ತಾ|| ೨೬ ರ ವರೆಗೆ [illegible] ಜ್ಯೇಷ್ಠ ಬಹುಳ ಬಿದಿಗೆಯಿಂದ ಜ್ಯೇಷ್ಠ ಬಹುಳ ಅಷ್ಟಮಿ ವರೆಗಿನ ಪಂಚಾಂಗ

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಿಥುನ ಮಾಸ
20	ಸೋಮ	ಬಿದಿ	22 37	ಪೂಷಾ	8 31	7
21	[1]ಮಂಗಳ	ತದಿ	19 54	ಉಷಾ	7 31	8
22	ಬುಧ	ಚೌತಿ	18 23	ಶ್ರವ	7 12	9
23	ಗುರು	ಪಂಚ	18 12	ಧನಿ	9.6	10
24	[2]ಶುಕ್ರ	ಷಷ್ಠಿ	10 12	ಶತ	11 40	11
25	ಶನಿ	ಸಪ್ತ	21.30	ಪೂಭಾ	15 30	12
26	ಭಾನು	ಅಷ್ಟ	24.50	ಉಭಾ	20 24	13

(1) ಮಳೆನಕ್ಷತ್ರ ಆದ್ರಾ ೧ ನೆಯ ಪಾದ (2) ಮಳೆನಕ್ಷತ್ರ ಆದ್ರಾ ೨ ನೆಯ ಪಾದ.

ಮೈಸೂರ [redacted] ರವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ [redacted]

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು

[illegible]

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಬಿಡಿಪ್ರತಿಗೆ ೦-೦-೧]

ಸಂಪುಟ ೪೫] ಮೈಸೂರು ಸ್ಟಾರ್ ಸೆ: ೧೯೩೨ ನೆಯ ಇಸವಿ ಜೂನ್ ತಾರೀಖು ೨೭ ನೆಯ ಸೋಮವಾರ [ಸಂಚಿಕೆ ೨೬

MYSORE SANDALWOOD OIL
Distilled in
GOVERNMENT FACTORIES

GUARANTEED B P P I, & AM 4 P STANDARDS

PROVIDES

Excellent Base for the manufacture of Soaps Perfumes, and other Toilet preparations of the Highest quality

USED ALL THE WORLD OVER

BUY A BOTTLE TO-DAY

Available in Sealed Aluminium Bottles

MOYSRE GOVERNMENT SANDALWOOD OIL FACTORY,

BANGALORE.

6 [50—6]

THE MYSORE AGRICULTURAL SCHOOL, HEBBAL, BANGALORE

Notification No A S M GI 225 of 31-32, dated 21st June 1932

In supersession of the previous notification No A S M GI. 225 of 31—32, dated 22nd April 1932 published in the Mysore Gazette, Part III, Pages 798-799 dated 19th May 1932, the time for sending up the applications for admissions to the Mysore Agricultural School at Hebbal, Bangalore, has been extended to 10th July 1932 and that of the entrance examination has been postponed to 17th July 1932 at 12 noon, as the results of the S S L C Examination have not yet been declared

V K BADMI,

Principal

[3—1]

ಲಗ್ನಪತ್ರಿಕೆಗಳ

ಮುದ್ರಣಕ್ರಮ

ನಮ್ಮ ಕ್ರಿಕ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ ಹೆಚ್ಚು ವಿವರವನ್ನು ಬರೆದು ತಿಳಿದುಕೊಳ್ಳಬಹುದು

ಮ್ಯಾನೇಜರ್, ಸ್ಟಾರ್ ಆಫೀಸು, ಮೈಸೂರು

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	ವಿ. ಪಿ. ಸಹ
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ವಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾವಸ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಸ್ಸಿನಲ್ಲಿಗೆ ಕ್ಷೀಣರಾಗಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕದ [ಸ್ಪರ

ದಿಕ್ಕರಿಲ್ಲದೆ ಕ್ಷೀಣರಾಗಿ ಕಾಯ್ದು ಕೊಳ್ಳುವಿರಿ

[illegible]

ಸ್ತ್ರೀ ರೋಗ ನಿವಾರಣ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

[50—27]

[redacted] ಕ:—ವೈದ್ಯ ವ್ಹಿ. ಎಸ್. ಕಾ[redacted] ವಿರಜಿ ಎಂ. ಎಸ್. ಎಂ

ಡಾಕ್ಟರ್ ಜೀ ಬೀ. ಯವರ

ಸುಗಂಧ ನಶ್ಯದ ಪುಡಿ.

[illegible]

[illegible]

[redacted] ಕಂಪೆನಿ ಲಿಮಿಟೆಡ್

[redacted] ಪೋ ಬಾ. ೫೧೦, ಮುಂಬಯಿ

WANTED

Applications with particulars of qualifications, caste, age and Kannada examinations passed are invited so as to reach by 15th June 1932 from persons who have passed the Kannada examination for appointment as clerks on Rs. 15—1—20 with the benefits of Provident Fund and annual bonus.

M. THAMMIAH
Honorary Secretary
The Palace Stables Co-operative Society Ltd
Mysore

ಮೈಸೂರು ಸ್ಟಾರ್

ಗ್ ೯ ೩೨ ಇಸ ಜೂ ತಾ|| ೨೭ ನೆಯ ಸೋಮವಾರ

THE LEGISLATIVE COUNCIL

BUDGET SESSION

The Government had placed heavy business before the Council at this budget session of the Council with the result that the non official members found that they had not enough time for either general discussion of the budget or for particular discussions on the voting of the demands. The three bills relating to Cities, Towns and Minor Municipalities occupied nearly three days of the time of the House. The House welcomed on the whole the Town and the Minor Municipalities Bills particularly the latter as the privilege of adult franchise was granted therein. The one general demand was that the Presidentships and the Vice Presidentships should be thrown open for election to non officials. The Government promised to work the measure in as liberal a manner as possible. As regards the City Municipalities Bill there was greater opposition as even according to Government it did not seek to introduce any essential changes in the existing regulation. The general opinion was that as this Bil was only applicable to the two cities of Bangalore and Mysore the Government should not keep the old provision which would enable them to make a difference between the one and the other—one to have an elected President the other an official President which was a negation of local self Government. The utter illogicality of it was pointed out by almost every member who spoke about the Bill. The desire of the non official members was to see it modelled on the basis of City Corporation Acts of British India. But yet the Government were extremely nervous to give the same privilege to Mysore as they had done to Bangalore on the one plea and what seems to us to be a specious plea that the special circumstances of Mysore would not permit of it. The House was not told exactly what the special circumstances were. But one could fairly understand what Government meant. It would be absurd to suggest that a non official President would not be found as efficient and as loyal as an official. We would like to know how the presence of official Presidents in the Mysore City has been of special help in the special circumstances? How often have the Council and the President come into conflict over any of the special requirements of Mysore? What reasons have the Government to think that the Council would behave in a different way with one of its own non official President. The galling nature of the invidious distinction was pointed out by the honourable members. We do hope that these reactionary parts of the Bill would be set right at the Select Committee stage. One of the most important subjects that was brought up before the House was the relief that should be granted to the ryots at this hour of extreme depression. The Government was reminded of its undertaking last year to review the situation in case it continued to be bad during the next year, and of its not having done anything to relieve the situation. Th[redacted]ent in the House was almost unanimous that some relief should be given either by way of reverting to the rates of assessment prevailing prior to the resettlement or of a percentage reduction on Revenue. Were given in favour of such a relief and arguments advanced. But of what avail was all that before a Government which was in the [illegible] and [illegible] against all such arguments. We fear that Government is far too much out of touch with the realities of the situation. The ryot has been really hit very hard. The Government is in such a high altitude that it is almost impossible for it to understand the hard realities of the situation. How we wish that those at the helm of affairs would live for a short while in the villages and experience the life of the villager, bereft of all the comforts they could command in the cities. We do hope that our Government will adopt a more sympathetic attitude. At present we do not see much signs of their meeting popular wishes. They are having all their own way and as some of the members said it needs to be a lot of patience on the part of non officials in giving up their jobs taking all the trouble to study questions and crying at these Houses only for Government to turn a deaf ear to their proposals. We do hope that Government will see the reasonableness of the views put forward by non official members in many respects and will at least accept partially their proposals. Otherwise all these discussions will look a big tamasha and something worse a waste of a lot of people's money.

ಮೈಸೂರು ನ್ಯಾಯವಿಧಾಯಕ ಸಭೆ

ಕಳೆದ ಸೋಮವಾರ ಮಧ್ಯಾಹ್ನ ಪಬ್ಲಿಕ್ ಆಫೀಸು ಕಟ್ಟಡದ ಸಭಾಂಗಣದೊಳಗೆ ದಿವಾನ್ ಸರ್ ಮಿರ್ಜಾ ಎಂ ಇಸ್ಮಾಯಿಲರವರ ಅಧ್ಯಕ್ಷತೆಯಲ್ಲಿ ಆರಂಭಗೊಂಡು ನಡೆಯುತ್ತಿರುವ ಮೈಸೂರು ನ್ಯಾಯವಿಧಾಯಕ ಸಭೆಯ ಬಜೆಟ್ ಅಧಿವೇಶನದ ನಾಲ್ಕನೆಯ ದಿವಸ ಮುಕ್ತಾಯವಾಗುವುದಾಗಿದೆ. ಪ್ರಭುತ್ವಕ್ಕೆ ಸಂಬಂಧಪಟ್ಟ ವಿಷಯಗಳು ಹೆಚ್ಚಾಗಿದ್ದುದರಿಂದ ಬಜೆಟ್ಟಿನ ಸಾಮಾನ್ಯ ವಿಷಯ ಚರ್ಚೆಗೆ ಹೆಚ್ಚು ಕಾಲವನ್ನು ಕೊಡಬೇಕಾಗಿರುವ ವಿಷಯಗಳನ್ನಾಗಲಿ ಕಟ್ ಮೋಷನ್ ಗಳನ್ನಾಗಲಿ ಚರ್ಚಿಸಲು ಸದಸ್ಯರಿಗೆ ಸಾಕಾದಷ್ಟು ವ್ಯವಧಾನವಿರಲಿಲ್ಲ. ಇತರ ವಿಷಯಗಳನ್ನು ಕುರಿತು ಮುಂದೆ ಪ್ರಸ್ತಾಪಿಸುವೆವು

ಅಧಿಕ ಮೆಂಬರುಗಳ ಸಂಖ್ಯಾಧಿಕ್ಯ

ಮೈಸೂರು ಪ್ರಜಾಪ್ರತಿನಿಧಿಸಭೆಯ ಮೆಂಬರುಗಳ ಒಟ್ಟು ಸಂಖ್ಯೆಯು ಸಾಮಾನ್ಯವಾಗಿ ೨೬೦, ಅದಂ ಇದನ್ನು 275 ಕ್ಕೆ ಹೆಚ್ಚಿಸಲು ಪ್ರಭುತ್ವದವರಿಗೆ ಅಧಿಕಾರವಿರುತ್ತದೆ. ಈಗ 273 ಮೆಂಬರುಗಳಿರುತ್ತಾರೆ. ಹೊಸದಾಗೇರ್ಪಟ್ಟಿರುವ ತಾಲ್ಲೂಕುಗಳಿಂದಲೂ 5000 ಜನಸಂಖ್ಯೆಗೆ ಕಡಿಮೆ ಇಲ್ಲದಿರುವ ಟವನ್ ಮುನಿಸಿಪಾಲಿಟಿಗಳಿಂದಲೂ ಮೆಂಬರುಗಳನ್ನು ಆರಿಸಬೇಕಾಗಿರುವುದರಿಂದ ಪ್ರಜಾಪ್ರತಿನಿಧಿಸಭೆಯ ಮೆಂಬರುಗಳ ಸಂಖ್ಯೆಯನ್ನು ಹೆಚ್ಚಿಸಲು ಮತ್ತು ಈಗಿರತಕ್ಕ ಪ್ರಾತಿನಿಧ್ಯ ಇತ್ಯಾದಿ ವಿಷಯಗಳಲ್ಲಿ ಹೆಚ್ಚುಕಡಿಮೆ ಮಾಡಲು ಒಂದು ಕಮಿಟಿಯು ಏರ್ಪಡಿಸಲ್ಪಟ್ಟಿದೆ. ಇದಕ್ಕೆ ೭ ನೆಯ ಕೌನ್ಸಿಲರು ರಾಜಮಂತ್ರಪ್ರವೀಣ ಮ|| ಕೆ ಮಥಾರವರು ಅಧ್ಯಕ್ಷರಾಗಿಯೂ, ಮ|| ಗಳಾದ (1) ಎಸ್ ಪಿ ರಾಜಗೋಪಾಲಾಚಾರಿಯವರು (2) ಎಚ್ ಮಾಧವರಾಯರು (3) ಕೆ ಎಚ್ ರಾಮಯ್ಯನವರು (4) ಎ ರಾಮರಾಯರು ಔದ್ಯೋಗಿಕ ಮೆಂಬರುಗಳಾಗಿಯೂ (5) ಶ್ರೀಮತಿ ಕಮಲಮ್ಮ ದಾಸಪ್ಪನವರು (6) ಬಿ ಎಸ್ ಪುಟ್ಟಸ್ವಾಮಿಯವರು (7) ಜಿ ಮಹಮದ್ ಇಮಾಂರವರು (8) ಬಿ ಗೋಪಾಲಾಚಾರ್ಯರವರು (9) ಎಚ್ ನಾಗಪ್ಪಶೆಟ್ಟಿಯವರು ಅನೌದ್ಯೋಗಿಕ ಮೆಂಬರುಗಳಾಗಿಯೂ ಪ್ರಜಾಪ್ರತಿನಿಧಿಸಭೆಯ ಸೆಕ್ರೆಟರಿಯವರೇ ಈ ಕಮಿಟಿಯ ಸೆಕ್ರೆಟರಿಯವರಾಗಿಯೂ ನಿಯಮಿಸಲ್ಪಟ್ಟಿರುವರು. ಈ ಕಮಿಟಿಯವರು ಸಾಧ್ಯವಾದಮಟ್ಟಿಗೆ ಜಾಗ್ರತೆ ಸಮಾವೇಶರಾಗಿ ತಮ್ಮ ವರದಿಯನ್ನು ಬರುವ ಸೆಪ್ಟೆಂಬರ್ ತಾ|| 10 ರೊಳಗೆ ಕಳುಹಿಸಿಕೊಡಬೇಕೆಂದು ಪ್ರಭುತ್ವದವರು ಕೋರಿರುತ್ತಾರೆ

ಆರ್ಡಿನೆನ್ಸುಗಳ ಪುನರುದ್ಧರಣ

ಬರುವ ಜುಲೈ ತಾ|| 1 ರಲ್ಲಿ ಕೊನೆಗಾಣುವ ಆರ್ಡಿನಾನ್ಸುಗಳನ್ನೆಲ್ಲ ಒಟ್ಟುಗೂಡಿಸಿ ಕೆಲ ಬದಲಾವಣೆಯಿಂದ ವೈಸರಾಯರು ಒಂದು ಹೊಸ ಆರ್ಡಿನನ್ಸನ್ನು ಪ್ರಯೋಗಿಸುವರೆಂದು ವರ್ತಮಾನವಿದೆ

ಡಗ್ಲಾಸರನ್ನು ಕೊಂದವನಿಗೆ ಮರಣ ಶಿಕ್ಷೆ

ಕಳೆದ ಏಪ್ರಿಲ್ ತಾ|| 30ರಲ್ಲಿ ಮಿಡ್ನಾಪುರದ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಡಗ್ಲಾಸರವರನ್ನು ಕೊಂದು ಪ್ರತ್ಯೇಕ ಜಡ್ಜಿಗಳ ವಿಚಾರಣೆಗೆ ಗುರಿಮಾಡಲ್ಪಟ್ಟ ಪ್ರದ್ಯೋತ ಕುಮಾರ ಭಟ್ಟಾಚಾರ್ಜಿ ಎಂಬವನಿಗೆ [redacted]ಕು

ದಿಲ್ಲಿಯಲ್ಲಿ ಕಾಡಿಸುವ ನೀರಿನ ತೊಂದರೆ

[illegible] ದಿಲ್ಲಿಯ ಸ್ಥಿರವಾಗಿ [illegible] [illegible] [illegible] [illegible] [illegible] [illegible] ಸ್ವಲ್ಪ [illegible] [illegible] ಬಿಕ್ಕಟ್ಟು

ವೈಸರಾಯರ ವರ್ಷಕಾಲದ ಸಂಚಾರ ಕಾರ್ಯಕ್ರಮ

ಬರುವ ಜುಲೈ ತಿಂಗಳ ಮಧ್ಯಭಾಗದಲ್ಲಿ ವೈಸ್ರಾಯರು ದೇಶ ಸಂಚಾರ ಹೊರಟು ಮೈಸೂರು ಮಾರ್ಗವಾಗಿ ಉದಕಮಂಡಲಕ್ಕೆ ಹೋಗುವರೆಂದು ಪ್ರಕಟವಾಗಿದ್ದರೂ ರೌಂಡು ಟೇಬಲು ಸಲಹ ಸಂಘಕ್ಕೆ ಸಂಬಂಧಪಟ್ಟ ಕಾರ್ಯಗಳು ಪ್ರತಿಬಂಧಕವಾಗಿರುವುದರಿಂದ ವೈಸ್ರಾಯರ ದೇಶಸಂಚಾರವು ನಿಲ್ಲಿಸಲ್ಪಟ್ಟು ಈ ಉದಕಮಂಡಲಕ್ಕೆ ಅವರು ಬರುವದಿಲ್ಲವೆಂದು ಪ್ರಕಟವಾಗಿದೆ

ಓರ್ವ ಸ್ತ್ರೀ ಗಂಡನನ್ನು ಕೊಂದಳು

ಬೆಂಗಳೂರು ಪಂಡಿತರಲ್ಲಿ ಕೈಸ್ತರ ಬೀದಿಯನ್ನು ಗುಡಿಸುತ್ತಿದ್ದ ಒಬ್ಬ ಸ್ತ್ರೀಯ ನಡತೆಯ ವಿಚಾರದಲ್ಲಿ ಆಕೆಯ ಗಂಡನು ಅನುಮಾನಪಟ್ಟುಕೊಂಡಿದ್ದನು. ಆದರವೇಳೆ ಆಕೆಗೆ ಕೋಪ ಹಟ್ಟಿ ಗಂಡನನ್ನು ಕೊಂದ ಹಾಕುತ್ತೇನೆಂದು ಅನೇಕ ವೇಳೆ ಹೇಳುತ್ತಿದ್ದು ರಾತ್ರಿಯಲ್ಲಿ ಅವನು ಮಲಗಿ ನಿದ್ರಿಸುತ್ತಿದ್ದಾಗ ಕುತ್ತಿಗೆಯನ್ನು ಮಿಸುಕಿ ಕೊಂದುಬಿಟ್ಟು ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಯಾಗಿರುವಳು

ಧಾರವಾಡದಲ್ಲಿ ೯ ಮಂದಿಗಳ ಸೆರೆ

ಕಳೆದ ವಾರ ಧಾರವಾಡದಲ್ಲಿ ಮ|| ಗಳಾದ ರಘುನಾಥರಾವ ಜಹಾರ, ವಕೀಲ ಅನಂತರಾವ್ ಕರ್ಮಕರ ವಕೀಲ, ಗೋಪಾಲಾಚಾರ್ಯ, ವಕೀಲ, ಡಾ|| ಕಮಲಾಪುರ, ಶ್ರೀನಿವಾಸರಾವ್ ಜೋಗ ದತ್ತೋಪಂತ, ಜೊದ್ರೆ ಮಾಸ್ತರ ದೆ ವರ ಮನೆ ಆನಂದರಾವ ಉಪ್ಪಿ, ಬೇಲೂರ ಮತ್ತು ಕಬ್ಬೂರ ವಕೀಲ ಇವರುಗಳು ಪೋಲೀಸು ಅಧಿಕಾರಿಗಳಿಂದ ೩ ನೆಯ ಆರ್ಡಿನಾನ್ಸು 1 ನೇ ಸೆಕ್ಷನ್ನಿನ ಪ್ರಕಾರ ಸೆರೆ ಹಿಡಿಯಲ್ಪಟ್ಟು ಬೆಳಗಾಂವಿಗೆ ಸಾಗಿಸಲ್ಪಟ್ಟರು

ದೇವದಾಸ ಗಾಂಧಿಯವರಿಗೆ ಜ್ವರ

ಗೋರಖಪುರ (ಗೋರಕ್ಷಾಪುರ) ದ ಕಾರಾಗೃಹದಲ್ಲಿರುವ ಮಹಾತ್ಮರ ಕುಮಾರರಾದ ದೇವದಾಸ ಗಾಂಧಿಯವರಿಗೆ ಕಳೆದ 13 ದಿನಗಳಿಂದಲೂ ಜ್ವರಬರುತ್ತಿರುವುದಾದರೂ ಅದರ ವಿವರ ತಿಳಿಯಲಿಲ್ಲವೆಂದೂ ಕಾರಾಗೃಹಕ್ಕೆ ಹೋಗಿ ದೇವದಾಸರಿಗೆ ಉಪಚಾರ ಮಾಡಬೇಕೆಂದು ಗೋರಖಪುರವಾಸಿಯಾದ ಹನುಮಾನಪ್ರಸಾದ ಪೊದ್ದಾರರವರಿಗೆ ಮಹಾತ್ಮರಿಂದ ತಂತಿ ಬಂದಿರುವುದಾದರೂ ಜೈಲಿನ ಅಧಿಕಾರಿಗಳು ಪೊದ್ದಾರರವರನ್ನು ಜೈಲಿನೊಳಕ್ಕೆ ಬಿಡಲಿಲ್ಲವೆಂದೂ ಲೀಡರ್ ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ

ಮುಸಲ್ಮಾನನ ಕೃಷ್ಣ ಪಾತ್ರ ಧಾರಣಕ್ಕಾಗಿ ಆಕ್ರೋಶ

ಲಾಹೋರು ಮೆಜೆಸ್ಟಿಕ್ ಚಲನಚಿತ್ರ ಪ್ರದರ್ಶನಶಾಲೆಯಲ್ಲಿ ಭಕ್ತ ರಂಗ ಅಥವಾ ಚಿಂತಾಮಣಿ ಎಂಬ ನಾಟಕವು ಪ್ರದರ್ಶಿಸಲ್ಪಡುತ್ತಿರುವಾಗ ಶ್ರೀಕೃಷ್ಣನ ಪಾತ್ರವನ್ನು ಮಹಮ್ಮದೀಯನು ವಹಿಸಿ ಅಭಿನಯಿಸಿದನೆಂದು ಪ್ರೇಕ್ಷಕರಲ್ಲೊಬ್ಬ ಹಿಂದು ವಿದ್ಯಾರ್ಥಿಯು ತಿಳಿದು ಕೋಪಾವಿಷ್ಟನಾಗಿ ಸಿನೆಮಾ ಛಾಯಚಿತ್ರ ಬೀಳುತ್ತಿದ್ದ ತೆರೆಯನ್ನು ಹರಿದುಹಾಕಿಬಿಟ್ಟನು. ಇದಕ್ಕಾಗಿ ಅವನಮೇಲೆ ಕಂಪೆನಿಯವರು ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮೊಕದ್ದಮೆಯನ್ನು ಹೂಡಿರಲು ಅವನಿಗೆ 200 ರೂ ದಂಡವೂ 6 ತಿಂಗಳ ಕಠಿಣ ಕಾರಾಗೃಹವಾಸ ಶಿಕ್ಷೆಯೂ ವಿಧಿಸಲ್ಪಟ್ಟವು

ಐರ್ಲೆಂಡು ರೈತರಿಗುಪಶಾಂತಿ

ಐರ್ಲೆಂಡಿನ ರೈತರಿಗುಪಶಾಂತಿಯನ್ನುಂಟುಮಾಡಲು ಡಿವೆಲರಾ ಪ್ರಭುತ್ವದವರು ನಿರ್ಧರಿಸಿರುತ್ತಾರೆ. 1931 ರ ಆಖೆಯ ವರೆಗೆ ರೈತರುಗಳಮೇಲೆ ಬಾಕಿ ನಿಂತಿರ ವುದನ್ನು ವಸೂಲು ಮಾಡಲು ತೈಕೊಂಡಿರುವ ಕಾರ್ಯವನ್ನು ನಿಲ್ಲಿಸಿಬಿಟ್ಟು ಬಾಕಿಯನ್ನು ವಸೂಲು ಮಾಡಲು ಇನ್ನೊಂದು ವರ್ಷದವಧಿಯನ್ನು ಕೊಡಲು ಪ್ರಭುತ್ವದವರೊಪ್ಪಿಕೊಂಡಿರುವರು. ಭೂಮಿಯ ಕಪ್ಪದ ವಿಷಯದಲ್ಲಿ ಬ್ರಿಟಿಷರು ಉಪಶಾಂತಿಯನ್ನುಂಟುಮಾಡಬೇಕೆಂದು ಕೋರುತ್ತಿರುವ ಡಿವಲೆರಾಯವರು ತಮ್ಮ ರೈತರುಗಳಿಗೆ ಉಪಶಾಂತಿ ಮಾಡಲು ಉದಾರಭಾವವನ್ನೂ ದೂರದೃಷ್ಟಿಯನ್ನೂ ತೋರಿಸುವವರಾಗಿರುತ್ತಾರೆ. ಆದುದರಿಂದ ಡಿವೆಲೆರಾಯವರ ಪ್ರಸಕ್ತ ಕಾರ್ಯದಿಂದ ಐರಿಷ್ ಪ್ರಜೆಗಳು ಸಂತೋಷಪಟ್ಟುಕೊಂಡು ಕೃತಜ್ಞರಾಗಿರುವರು

ಜರ್ಮನಿಯ ನಷ್ಟಪರಿಹಾರ

ಜರ್ಮನಿಯು ತೆರಬೇಕಾಗಿರುವ ನಷ್ಟಪರಿಹಾರದ ವಿಚಾರವಾಗಿ ಬ್ರಿಟಿಷರ ಅಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕಾಗಿ ಒಂದು ಪ್ರಕಟನೆಯ[redacted] ಮುಖ್ಯ ಮಂತ್ರಿ ಮೆಕ್ಡೊನಾಲ್ಡರವ[redacted]ದರು. ಜರ್ಮ

[illegible] ಸರ್ಕಾರದವರ [illegible] ದಿಂದ ಈ ಪ್ರಕಟನೆಯನ್ನು [illegible] [illegible] ದಿವಾನರವರು [illegible] [illegible] [illegible] ಕಾರ್ಯವನ್ನು [illegible] [illegible] ಮಾಡಲ್ಪಟ್ಟ [illegible] ಅನುಕೂಲವಾಗಿರ [illegible]

ಮಹಾತ್ಮರು ಜೈಲಿನಿಂದ ಬರೆದ ಪತ್ರ

"ಇಂಡಿಯನ್ ರಿಕನ್ಸಿಲಿಯೇಷನ್ ಗ್ರೂಪ್" (ಇಂಡ್ಯಾ ಸಮಾಧಾನ ಸಂಘ) ಎಂಬ ಹೆಸರಿನ ಒಂದು ಸಂಘದ ಪ್ರತಿನಿಧಿಗಳಾಗಿ ಕ್ವಾಕರು ಪಕ್ಷಕ್ಕೆ ಸೇರಿದ ಮೂವರು ಇಂಡ್ಯಾದೇಶಕ್ಕೆ ಬಂದಿದ್ದು ಇಲ್ಲಿಯ ರಾಜಕೀಯ ಪರಿಸ್ಥಿತಿಯನ್ನೂ ಸಮಾಧಾನವಾಗುವುದರ ಸಾಧ್ಯಾಸಾಧ್ಯತೆಯನ್ನೂ ವಿಚಾರಿಸಿಕೊಂಡು ಸೀಮೆಗೆ ಹಿಂದಿರುಗಿ ಪ್ರಯಾಣಮಾಡಿದರು ಆ ಮೂವರಲ್ಲೊಬ್ಬರಾದ ಕರ್ಲ್ ಬಾರ್ಟ್ ಎಂಬವರಿಗೆ ಮಹಾತ್ಮರು ಎರವಾಡಾ ಕಾರಾಗೃಹದಿಂದ ಬರೆದಿರುವ ಲೇಖವು ಎಂಡ್ ಟೈಂಸ್ ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ ಅದೇನೆಂದರೆ — "ಭಾರತ ಜಾತಿಯ ಗೌರವಕ್ಕೆ ಭಂಗಬಾರದ ರೀತಿಯಲ್ಲಿ ಪುನಃ ಸಮಾಧಾನವನ್ನೂ ಶಾಂತಿಯನ್ನೂ ಉಂಟುಮಾಡಲು ನಾನು ಸರ್ವಶಕ್ತಿಯನ್ನು ಪ್ರಯೋಗಿಸುವೆನು ಶಾಂತಿಸಮಾಧಾನಗಳನ್ನುಂಟುಮಾಡುವಲ್ಲಿ ನಾನು ಯಾರಿಗೂ ಕಡಿಮೆಯಾಗಿರ ಲಾರೆನು. ಆದುದರಿಂದ ಶಾಂತಿಸಮಾಧಾನವನ್ನು ನಿರೋಧಿಸುವ ಯಾವ ಕಾರ್ಯವನ್ನೂ ನಾನು ಮಾಡುವುದಿಲ್ಲವೆಂದು ನೀವು ನಂಬಿರ ತಕ್ಕದ್ದು ಜೈಲಿನಲ್ಲಿರುವವರೆಗೆ ಇದಕ್ಕಿಂತಲೂ ಹೆಚ್ಚಾಗಿ ನಾನೇನನ್ನೂ ಬರೆಯಕೂಡದು"

ಅಲಕ್ಷ್ಯ ವೈದ್ಯ ಚಿಕಿತ್ಸೆಗಾಗಿ 7969 ರೂ. ಪರಿಹಾರ

ಎಮ್ಲಾಡ ಸಿವಿಲ್ ಸರ್ಜನ್ ಲೆಫ್ಟನೆಂಟ್ ಕರ್ನಲ್ ಏಟ್ಕಿನ್ಸ್ ರು ಎಂಬವರು ಅಲಕ್ಷ್ಯದಿಂದ ವೈದ್ಯ ಚಿಕಿತ್ಸೆ ಮಾಡಿದ ಪ್ರಯುಕ್ತ ತನಗೆ ಮರಣಾವಧಿ ನಷ್ಟ ಸಂಭವಿಸಿತು ಇದಕ್ಕಾಗಿ ಸಿವಿಲ್ ಸರ್ಜನ್ನಿನಿಂದ 30 000 ರೂ ನಷ್ಟ ಪರಿಹಾರವನ್ನು ಕೊಡಿಸಬೇಕೆಂದು ಲಾಯಿಲ್ಪುರದಲ್ಲಿ ಪ್ಲೀಡರಾಗಿರುವ ಆರ್ ಎಸ್ ರಾಘವ ಎಂಬಾತನು ಅದೇ ಊರಿನ ಸಬ್ ಕೋರ್ಟಿನಲ್ಲಿ ದಾವಾ ಮಾಡಿದ್ದನು ವೈದ್ಯನು ತಪ್ಪಿತಸ್ಥನೆಂದು ನಿರ್ಧರವಾಗಿ ಈ ಪ್ರಕಾರವಾಗಿ ನಷ್ಟಪರಿಹಾರ ಗೊತ್ತುಮಾಡಲ್ಪಟ್ಟಿತು (1) ವೈದ್ಯಕ್ಕಾಗಿ ಖರ್ಚಾಗಿರುವುದು 1769 ರೂ (2) ಬೇಕಾಬಿಟ್ಟಿ ಚಿಕಿತ್ಸೆಮಾಡಿದುದರಿಂದ ಪ್ಲೀಡರಿಗೆ ದೇಹದೌರ್ಬಲ್ಯವುಂಟಾಗಿ ಜೀವಿತ ಸೌಖ್ಯವಿಲ್ಲದಂತಾದುದಕ್ಕಾಗಿಯೂ, ಕೈ ಬೆರಳುಗಳೂ ಎಡಗೈಯೂ ನಿರುಪಯೋಗವಾದುದರಿಂದಲೂ, ದೃಷ್ಟಿಯು ಕೆಟ್ಟುಹೋಗಿ ಬುದ್ಧಿಮಾಂದ್ಯವುಂಟಾದುದರಿಂದಲೂ ಆತನ ದ್ರವ್ಯಸಂಪಾದನೆಗೆ ಅವಕಾಶವಿಲ್ಲದಂತಾದುದಕ್ಕಾಗಿಯೂ 6000 ರೂಪಾಯಿಗಳು ಒಟ್ಟು 7,969 ರೂ ಪರಿಹಾರದ್ರವ್ಯವು ಕೊಡಬೇಕೆಂದು ತೀರ್ಮಾನಿಸಲ್ಪಟ್ಟಿತು ಇದೇ ವೈದ್ಯನು ಸುಳ್ಳು ಸಾಕ್ಷ್ಯವನ್ನು ನುಡಿದುದಕ್ಕಾಗಿ ಈತನಮೇಲೆ ಮತ್ತೊಂದು ವಿವಾದವನ್ನು ಅದೇ ಪ್ಲೀಡರು ಹೂಡಿರುತ್ತಾನೆ

ಹೆಂಡತಿಯ ವಿಕ್ರಯ

ಬಂಗಾಳಾಕ್ಕೆ ಸೇರಿದ ಕೋಮಿಲ ಸಬ್ ಡಿವಿಜನಲ್ ಮೆಜಿಸ್ಟ್ರೇಟರಲ್ಲಿ ಗಂಡನು ಹೆಂಡತಿಯನ್ನು ವಿಕ್ರಯಿಸಿದ ವಿವಾದವು ನಡೆಯುತ್ತಿದೆ ಉರಿಯೂರ ಎಂಬ ಗ್ರಾಮದಲ್ಲಿ ರೇವತಿ ಮೋಹನ ಚಕ್ರವರ್ತಿ ಎಂಬ ಒಬ್ಬ ಬ್ರಾಹ್ಮಣ ಯುವಕನು ತನ್ನ ಮಾವನ ಆಸ್ತಿಗೆ ತಾನೇ ಹಕ್ಕುದಾರನಾಗಿ ತನ್ನ ಹೆಂಡತಿ ಮತ್ತು ಅತ್ತೆಯರೊಡನೆ ಮಾವನ ಮನೆಯಲ್ಲೇ ವಾಸವಾಗಿದ್ದನು ಕೆಲ ಕಾಲಾನಂತರ ನಾಗರಭಾಷಿಣಿದೇವಿ ಎಂಬ 14 ವರ್ಷದ ಬಾಲೆಯನ್ನು ಮದುವೆಮಾಡಿಕೊಂಡು ತನ್ನ ಮನೆಗೆ ಕರೆದುಕೊಂಡು ಬಂದನು ಆದರೆ ತನ್ನ ಮೊದಲನೆಯ ಹೆಂಡತಿಯೂ ಅವಳ ತಾಯಿಯೂ ಎರಡನೆಯ ಹೆಂಡತಿಯನ್ನು ಬಹಳವಾಗಿ ಹಿಂಸಿಸುತ್ತ ಬಂದುದರಮೇಲೆ ಆ ಹುಡುಗಿಯನ್ನು ನವಕಾಳಿಯ ವಿಪಿನವಿಹಾರಿದಾಸ ಎಂಬವನಿಗೆ 150 ರೂಪಾಯಿಗಳಿಗೆ ವಿಕ್ರಯಿಸಿ ಒಂದು ಪತ್ರವನ್ನು ಸಹ ಬರೆದುಕೊಟ್ಟನು ಈ ಸಂಗತಿಯನ್ನು ಆ ಹುಡುಗಿಯ ಅಣ್ಣನು ತಿಳಿದು ಪೋಲೀಸಿಗೆ ವರದಿಮಾಡಿದನು ಪೋಲೀಸಿನವರು ಅವಳ ಗಂಡನಾದ ಚಕ್ರವರ್ತಿಯನ್ನೂ, ಇವನಿಗೆ ಸಹಾಯಕರಾಗಿದ್ದ ಮೂವರನ್ನೂ ಸೆರೆಹಿಡಿದು ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿರುವರು ಇವರ ವಿಚಾರಣೆಯು ಈ ತಾ|| 30 ರಲ್ಲಿ ನಡೆಯುವುದು

ಸರ್ಪದಷ್ಟನು ಬದುಕಿದುದು

ಹೈದರಾಬಾದಿನೊಳಗೆ ದೊಡ್ಡ ವ್ಯಾಪಾರಸ್ಥನಾದ ಅಬ್ದುಲ್ ಗಫಾರ್ ಎಂಬ ಪೇಟೆಯಲ್ಲಿ ಒಬ್ಬ ಹಾವಾಡಿಗನವನು ತನ್ನ ಹಾವಿನ ಬುಟ್ಟಿ ಮೊದಲಾದ ಸಾಮಗ್ರಿಗಳನ್ನು ಮಡಗಿಕೊಂಡು ಜನರ ಗುಂಪುಸೇರುವುದಕ್ಕಾಗಿ ಡೋಲನ್ನು ಬಡಿಯುತ್ತಿದ್ದನು ಜನರು ಬಂದು ಸೇರುತ್ತಿದ್ದರು. ಈ ಮಧ್ಯೆ ಬುಟ್ಟಿಯೊಳಗಿದ್ದ ದೊಡ್ಡ ನಾಗರಹಾವು ಹೇಗೋ ಹೊರಗಡೆಗೆ ಬಂದು 18 ವರ್ಷದ ಒಬ್ಬ ಯುವಕನ ಸಮೀಪಕ್ಕೆ ಹೋಗಿ ಅವನನ್ನು ಕಡಿ[redacted]ಳಿಗೆ ಬಿದ್ದು ಕೂಡಲೆ ಮೂರ್ಛೆಹೋ[redacted] ಹಾವಾಡಿಗನವನು

ನೋಡಿ ದಿಗಿಲುಬೀಳದೆ ತನ್ನ ಜೇಬಿನಿಂದ ಒಂದು [illegible] [illegible] [illegible] [illegible] ಯುವಕನ [illegible] [illegible] ಅವನು ಎಚ್ಚರಗೊಂಡನು [illegible] [illegible] [illegible] ಹಾವಾಡಿಗರು [illegible] ಮೂಲಿಕಾಪ್ರಯೋಗಗಳನ್ನು ತಾವು ಸಾಕಿರುವ ಮುಂಗಸಿ ಮೊದಲಾದ ಪ್ರಾಣಿಗಳಿಂದ ಅರಿತುಕೊಂಡಿರಬಹುದು

ಕೆಳಗೆ ಬಿದ್ದಿದ್ದ ಮರ ಮೇಲಕ್ಕೆದ್ದಿರುವುದು

ಮದರಾಸಿರಾಜ್ಯಕ್ಕೆ ಸೇರಿದ ಪರಿಸಮುದ್ರ ಎಂಬ ಗ್ರಾಮದ ಬಳಿ ಬಹಳ ಪುರಾತನವಾದ ಒಂದು ಮರವು ಈ ತಿಂಗಳ ಆದಿಭಾಗದಲ್ಲಿ ಮುರಿದುಬಿದ್ದು ಹೋಗಿದ್ದಿತು ಇದನ್ನು ಕಡಿದು ತೆಗೆದುಕೊಂಡು ಹೋಗಲು ರೆವಿನ್ಯೂ ಶಾಖೆಯವರು ಹರಾಜು ಮಾಡಿದರು ಅದನ್ನು ಕೊಂಡವನು ಅದರ ಕೊಂಬೆಗಳನ್ನೆಲ್ಲ ಕತ್ತರಿಸಿ ಮುಂಡವನ್ನು ಬಿಟ್ಟುಹೋಗಿದ್ದನು ಕೆಲಕಾಲಾನಂತರ ಒಂದು ದಿವಸ ದನಕಾಯುವ ಹುಡುಗರು ತಮ್ಮ ದನಕರುಗಳನ್ನು ಆ ಮುಂಡ ಬಿದ್ದಿದ್ದ ಮುಂಡದ ಸಮೀಪದಲ್ಲಿ ಮೇಯಿಸುತ್ತಿರುವಾಗ್ಗೆ ಆಕಸ್ಮಾತ್ತಾಗಿ ಆ ಮುಂಡವು ಘಟ್ಟಿಯಾಗಿ ಧ್ವನಿಮಾಡುತ್ತ ಮೇಲಕ್ಕೆದ್ದು ನೆಟ್ಟಗೆ ನಿಂತುಕೊಂಡಿತು ಆ ಹುಡುಗರು ಇದನ್ನು ನೋಡಿ ಭಯಭ್ರಾಂತರಾಗಿ ಪಿಶಾಚವು ಮರದಲ್ಲಿ ಸೇರಿರಬೇಕೆಂದು ಭಾವಿಸಿ ಊರಿಗೆ ಓಡಿಹೋಗಿ ನಡೆದ ಸಂಗತಿಯನ್ನು ಜನರಿಗೆ ತಿಳಿಸಿದರು ಜನರು ಗುಂಪುಕಟ್ಟಿಕೊಂಡು ಬಂದು ಈ ಅದ್ಭುತಕಾರ್ಯವನ್ನು ನೋಡಿ ಇದು ದೈವಿಕ ಚಮತ್ಕಾರವೆಂದು ತಿಳಿದು ಮರಕ್ಕೆ ಹಣ್ಣು ಕಾಯಿಗಳನ್ನು ಅರ್ಪಿಸಿ ಮಂಗಳಾರತಿ ಮಾಡಿಸಿದರು ಈ ಮರದಲ್ಲಿ ವಾಸಿಸುತ್ತಿದ್ದ ಘಟಸರ್ಪದ ಮಹಿಮೆಯೆಂದು ಹೇಳಲ್ಪಡುತ್ತಿದೆ ನೆರೆಗ್ರಾಮಗಳಿಂದ ನೂರಾರು ಜನರು ಬಂದು ನೋಡಿ ಆಶ್ಚರ್ಯಪಟ್ಟುಕೊಂಡು ಹೋಗುತ್ತಿರುವರಂತೆ!

ಅಸ್ಪೃಶ್ಯತಾನಿವಾರಣೆ

ಯಾವದ್ಭಾರತ ಸ್ವಾಮಿ ಶ್ರದ್ಧಾನಂದ ಮೆಮೋರಿಯಲ್ ಟ್ರಸ್ಟಿನವರು ವೃತ್ತಪತ್ರಿಕೆಗಳಲ್ಲಿ ಈ ಪ್ರಕಾರವಾಗಿ ಪ್ರಕಟಿಸಿರುತ್ತಾರೆ —ಅಸ್ಪೃಶ್ಯತಾನಿವಾರಣ ಸಮಸ್ಯೆಯನ್ನು ಇನ್ನೂ ಬಗೆಹರಿಸದೆ ಇಟ್ಟುಕೊಂಡಿರಕೂಡದು ಈ ಸಮಸ್ಯೆಯು ಪರಿಹಾರವಾಗದಿದ್ದರೆ ಹಿಂದು ಸಮಾಜವು ಉಳಿಯುವುದೇ ಕಷ್ಟವಾಗುವುದು ಒಂದುಕಡೆ ಡಾಕ್ಟರು ಅಂಬೇಡಕರವರು ಹಿಂದು ಸಮಾಜನಾಶಕ್ಕೆ ಬೇಕಾದ ಪ್ರತ್ಯೇಕ ನಿಯೋಜಕ ವರ್ಗಕ್ಕಾಗಿ ಪ್ರಯತ್ನಿಸುತ್ತಿರುವರು ಈ ಪ್ರಯತ್ನದಿಂದ ಭಾರತ ದೇಶದಲ್ಲಿ ಪ್ರಜಾಹಿತಕಾರ್ಯಗಳಿಗೂ, ರಾಜಕೀಯ ಕಾರ್ಯಗಳಿಗೂ ಅನರ್ಥಕಾರಿಯಾಗಿ ಪರಿಣಮಿಸುವುದು ಈ ಪ್ರಯತ್ನವನ್ನು ಪ್ರತಿಭಟಿಸಿ ಹಿಂದು ಸಮಾಜವು ವಿಚ್ಛಿನ್ನವಾಗದಂತೆ ಮಾಡುವುದು ಹಿಂದುಗಳ ಕರ್ತವ್ಯವಾಗಿರುತ್ತದೆ ತಾವು ಕೀಳೆಂಬ ಭಾವನೆಯು ಅಸ್ಪೃಶ್ಯರನ್ನು ಜವಿರಿಸಿಕೊಂಡಿದೆ ಈ ಭಾವನೆಯನ್ನು ಅಸ್ಪೃಶ್ಯರು ಬಿಡಲಾರದವರಾಗಿರುತ್ತಾರೆ ಆದುದರಿಂದ ಅವರಲ್ಲಿ ಭಾವಪರಿವರ್ತನವಾಗತಕ್ಕದ್ದು ಅತ್ಯಾವಶ್ಯಕವು ಅಸ್ಪೃಶ್ಯರೆಂದು ಎಣಿಸಿಗಂತೆ ಪರಿಗಣಿಸಿ ಹಿಂದು ಚತುರ್ವರ್ಣದವರು ಭಗವಂತನಿಗೂ, ಮಾನವರಿಗೂ ದ್ರೋಹಮಾಡುತ್ತಿರುವರು ಇನ್ನು ಮೇಲೆ ಈ ರೀತಿ ಇರುವುದು ಎಷ್ಟು ಮಾತ್ರಕ್ಕೂ ಯುಕ್ತವಲ್ಲ ಈ ವೇಳೆಯಲ್ಲಿ ದೇಶದಲ್ಲೆಲ್ಲ ಪ್ರಾಪ್ತವಾಗಿರುವ ವಿಶೇಷ ಸಂದಿಗ್ಧಸ್ಥಿತಿಯನ್ನು ಅರಿತುಕೊಂಡು ಜುಲೈ ತಾ|| 17 ರನ್ನು ಅಸ್ಪೃಶ್ಯತಾನಿವಾರಣೆಗಾಗಿ ಪ್ರಯತ್ನಿಸಲು ಪ್ರಜೆಗಳನ್ನು ಪ್ರಾರ್ಥಿಸಿಕೊಳ್ಳುವುದಕ್ಕಾಗಿ ಯಾವದ್ಭಾರತ ಸ್ವಾಮಿ ಶ್ರದ್ಧಾನಂದ ಮೆಮೋರಿಯಲ್ ಟ್ರಸ್ಟಿನವರು ನಿಶ್ಚಯಿಸಿರುತ್ತಾರೆ ಮಠಗುರುಗಳೂ, ಸಭೆಗಳ ಸಮಾಜಗಳ ಕಾರ್ಯನಿರ್ವಾಹಕರುಗಳೂ ಈ ವಿಜ್ಞಾಪನೆಯನ್ನು ಅರಿತು ಆ ಕಾರ್ಯದಿನದಲ್ಲಿ ಗೊತ್ತಾಗುವ ಕಾರ್ಯಕ್ರಮಗಳನ್ನು ಜರುಗಿಸುವಂತೆ ಕೋರುತ್ತೇನೆ ಆ ದಿವಸದಿಂದ ಅಸ್ಪೃಶ್ಯತೆಯನ್ನು ಪರಿಗಣಿಸಬಾರದು, ಅಸ್ಪೃಶ್ಯರೆಂದೂ, ನಿಮ್ಮ ಜನಕೆಂದೂ ಕರೆಯಲ್ಪಡುವವರನ್ನು ಪುನಃ ಸಮಾಜಕ್ಕೆ ಸೇರಿಸಿಕೊಳ್ಳಬೇಕು ಪ್ರಜೆಗಳು ಸೇರುವ ಸಭೆಗೆ ಅವರನ್ನು ಬರಗೊಡಬೇಕು ದೇವಾಲಯಗಳಿಗೂ ಅವರನ್ನು ಪ್ರವೇಶಗೊಳಿಸಬೇಕು ಜುಲೈ ತಾ|| 17 ರಲ್ಲಿ ನಡೆಯುವ ಸಭೆಯಲ್ಲಿ ಮುಂದಿನ ಕಾರ್ಯಕ್ರಮಗಳು ಅನುಸರಿಸಲ್ಪಡುವುವು -(1) ಅಸ್ಪೃಶ್ಯತಾ ಭಾವನೆಯ ಮೇಲೆ ಉಪನ್ಯಾಸಗಳಾಗುವುವು (2) ರಾಜಾ-ಮೂಂಜೆ ಪ್ಯಾಕ್ಟನ್ನು ಅನುಮೋದಿಸುವುದು ಅಂಬೇಡಕರ ಅನರ್ಥಕಾರಿಯಾದ ಪ್ರಚಾರವನ್ನು ಖಂಡಿಸಿ ತೀರ್ಮಾನಮಾಡುವುದು (3) ದೇವಾಲಯದಲ್ಲಿ ಸವರ್ಣರೂ ಸೇರಿ ಪೂಜೆಮಾಡುವುದು, ಬಾವಿಗಳಲ್ಲಿ ಎಲ್ಲರೂ ನೀರನ್ನು ಉಪಯೋಗಿಸುವುದು ಎಂದು ಪ್ರಸಿದ್ಧಪಡಿಸುವುದು (4) ಸಾಧ್ಯವಿದ್ದೆಡೆಯಲ್ಲಿ ಅಂತರ್ವರ್ಣ ಭೋಜನಕ್ಕೇರ್ಪಡಿಸುವುದು

ಬಳುವಳಿಯ ವೃತ್ತಾಂತಗಳು

ಮೈಸೂರು ಯೂನಿವರ್ಸಿಟಿ ಮತ್ತು ಯುನಿವರ್ಸಿಟಿ ಜರ್ನಲ್ ಎಂಬ ಮಾಸ[redacted] ಈ ಜೂನ್ ತಿಂಗಳಿನಲ್ಲಿ ನಿಲ್ಲಿಸಲ್ಪಟ್ಟಿ[redacted]

ನಾಳೆ ನಗರದಲ್ಲಿ ಶ್ರೀ ರಾಮೇಶ್ವರಸ್ವಾಮಿಯವರ ಕಲ್ಯಾಣೋತ್ಸವ ಜರುಗುವ ಜುಲೈ ತಾ|| 7 ನೆಯ ಗುರುವಾರ [illegible] [illegible] [illegible] ನಡೆಯುವದು ಗಂಗಾವಾರ [illegible] ಮೊದಲಾದ ಕಾರ್ಯಗಳು ತಾ|| 8 ರಲ್ಲಿ ಆರಂಭವಾಗಿ ತಾ|| 11 ರಲ್ಲಿ ತೆಪ್ಪೋತ್ಸವ ನಡೆಯುವದರೊಂದಿಗೆ ಮುಕ್ತಾಯವಾಗುವುದು

ಸರ್ಕಾರಿ ಉದ್ಯಾನವನಗಳ ಸೂಪರಿಂಟೆಂಡೆಂಟರಾಗಿದ್ದ ಮಿ|| ಹೆಚ್. ಕೃಂಬೀಗಲ್‌ರವರು ಬರುವ ಜುಲೈ ತಾ|| 1 ರಲ್ಲಿ ಉದ್ಯೋಗದಿಂದ ನಿವೃತ್ತರಾಗುವ ಪ್ರಯುಕ್ತ ಉದ್ಯಾನಗಳ ಸೂಪರಿಂಟೆಂಡೆಂಟರಾದ ಮಿ|| ಎಚ್ ಸಿ ಜವರಯ್ಯನವರು ಉದ್ಯಾನ ಶಾಖೆಯ ಮತ್ತು ಬೆಂಗಳೂರಿನ ಸರ್ಕಾರಿ ವಸ್ತು ಪ್ರದರ್ಶನಾಲಯದ ಡೈರೆಕ್ಟರರಾಗಿ ನಿಯಮಿಸಲ್ಪಟ್ಟಿರುತ್ತಾರೆ

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರ ಚುನಾವಣೆಯು ಈ ತಾ|| 30 ರಲ್ಲಿ ನಡೆಯುವುದು ಈ ಚುನಾವಣೆಗೆ ಮ್ಯುನಿಸಿಪಲ್ ಕೌನ್ಸಿಲರುಗಳಾದ ಮಿ|| ಬಿ ಕೆ ಗರುಡಾಚಾರ್ಯರೂ, ಅಡ್ವೊಕೇಟ್ ಮಿ|| ಕೆ ಬಾಲಕೃಷ್ಣಯ್ಯನವರೂ ಅಭ್ಯರ್ಥಿಗಳಾಗಿರುವರು ಈ ಚುನಾವಣೆಯ ಫಲಿತಾಂಶವು ಬಹಳ ಕುತೂಹಲದಿಂದ ನಿರೀಕ್ಷಿಸಲ್ಪಟ್ಟಿದೆ

ಹಾಸನದ ಡಿ|| ಆರ್. ಗುರುಮಾಲೆ ರಾ|| ಮಾಲೆಕಲ್ಲು ತಿರುಪತಿಯಲ್ಲಿ ನಡೆಯುವ ರಥೋತ್ಸವಕಾಲದಲ್ಲಿ ಅಂದರೆ ಬರುವ ಜುಲೈ ತಾ|| 16, 17 ಮತ್ತು 18 ರಲ್ಲಿ ಆರ್ಯವೈಶ್ಯ ಕೋ-ಆಪರೇಟಿವ್ ಕಾನ್ಫರೆನ್ಸು ಮತ್ತು ಇನ್‌ಫಾರ್ಮಲ್ ಕಾನ್ಫರೆನ್ಸು ನಡೆಸಲ್ಪಡುವುದಾಗಿಯೂ, ಈ ಸಭೆಗೆ ಬರತಕ್ಕ ವೈಶ್ಯರುಗಳ ಭೋಜನಕ್ಕೆ ಏರ್ಪಾಡಿಸಿರುವುದಾಗಿಯೂ ಹಾಸನದ ಮಿ|| ಆರ್ ವಿ. ಸೂರ್ಯನಾರಾಯಣಶೆಟ್ಟಿ ಪ್ರದರ್ಶಕರವರು ತಿಳಿಸಿರುತ್ತಾರೆ

ಕಳೆದ ಬುಧವಾರ ಬೆಂಗಳೂರಿಂದ ಹೊಸೂರು ಮಾರ್ಗವಾಗಿ ಹೊರಟ ಪ್ರಯಾಣಿಕರ ಬಸ್ಸು ಮಡಿವಾಳದ ಬಳಿ ಇದಿರಾಗಿ ಬರುತ್ತಿದ್ದ ಎತ್ತಿನಗಾಡಿಗೆ ದಾರಿಯನ್ನು ಕೊಡುವ ಪ್ರಯತ್ನದಲ್ಲಿ ಪಕ್ಕದಲ್ಲಿದ್ದ ಹಳ್ಳಕ್ಕೆ ಮಗುಚಿಕೊಂಡಿತು ಇದರಿಂದ ಡ್ರೈವರಿಗೂ ಕಂಡಕ್ಟರಿಗೂ ಮತ್ತಿಬ್ಬರು ಪ್ರಯಾಣಿಕರಿಗೂ ವಿಶೇಷ ಅಪಾಯವು ಸಂಭವಿಸಿರುವುದು ಪೋಲೀಸಿನವರು ಕೂಡಲೆ ಬಂದು ಅಪಾಯವನ್ನು ಹೊಂದಿದವರನ್ನು ಬೆಂಗಳೂರಿನ ಆಸ್ಪತ್ರೆಗೆ ಸಾಗಿಸಿದರು

ರಾಜಧಾನಿಯ ಇಟಗಿಗೂಡಿನಲ್ಲಿರುವ ಮಿ|| ಸಾಹುಕಾರ್ ಎ. ಸಿದ್ದಣ್ಣನವರ ಪುತ್ರ ಮಿ|| ಎ ಎಸ್ ಚೆನ್ನಯ್ಯನವರ 18-19 ವರ್ಷ ವಯಸ್ಸಿನ ಪತ್ನಿಯು ಕೆಲ ದಿನಗಳಿಂದ ಕ್ಷಯರೋಗ ಜನ್ಯವಾದ ಆಸ್ಪತ್ರೆಯ ಚಿಕಿತ್ಸೆಯಲ್ಲಿದ್ದು ಈ ದಿವಸ ಕಾಲವಾದರೆಂದು ತಿಳಿಸಲು ಖೇದವಾಗುತ್ತದೆ ಇವರಿಗೆ ಒಂದು ಗಂಡುಮಗುವಿರುವುದು ಮಿ|| ಚನ್ನಯ್ಯನವರಿಗೆ ಪತ್ನಿವಿಯೋಗದುಃಖವು ಪ್ರಾಪ್ತವಾದುದಕ್ಕಾಗಿ ನಮ್ಮ ಅನುತಾಪವನ್ನು ಸೂಚಿಸಿ ಇವರಿಗೆ ಮನಸ್ಸಮಾಧಾನವೂ ಮೃತರ ಆತ್ಮಕ್ಕೆ ಶಾಂತಿಯೂ ಉಂಟಾಗಲೆಂದು ಕೋರುತ್ತೇನೆ

ರಾಜಧಾನಿಯಲ್ಲಿ ನಡೆದ ಮಹಮ್ಮದೀಯರ ಸಭೆಗೆ ಬಂದಿದ್ದ ಮದ್ರಾಸಿನ ಮಿ|| ಸಿ. ಅಬ್ದುಲ್ ಹಕೀಂಸಾಹೇಬರು ಇಲ್ಲಿಯ ಮಹಮ್ಮದೀಯ ಅನಾಥಾಲಯಕ್ಕೆ ಹೋಗಿದ್ದು ಅದರ ಕಾರ್ಯಕ್ರಮವನ್ನೂ ಹುಡುಗರ ವಿದ್ಯಾಭಿವೃದ್ಧಿಯನ್ನೂ ಕೇಳಿ ತಿಳಿದುಕೊಂಡು ಬಹಳವಾಗಿ ಸಂತೋಷಪಟ್ಟು ಆಲಯದ ಸಹಾಯಾರ್ಥವಾಗಿ 10,000 ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟಿರೆಂದು ಕೇಳಿ ಸಂತೋಷಿಸುತ್ತೇವಲ್ಲದೆ ಅವರನ್ನು ಅಭಿನಂದಿಸುತ್ತೇವೆ ಮತ್ತು ಇತರ ಮಹಮ್ಮದೀಯ ದೊಡ್ಡ ಮನುಷ್ಯರುಗಳು ಅವರ ಮೇಲ್ಪಂಕ್ತಿಯನ್ನು ಅನುಸರಿಸಬೇಕಾಗಿ ಕೋರುತ್ತೇವೆ

ಕಳೆದ ಬುಧವಾರ ಸಾಯಂಕಾಲ 4 ಘಂಟೆಯ ಸಮಯದಲ್ಲಿ ರಾಜಧಾನಿಯಿಂದ ನಾಗಮಂಗಲಕ್ಕೆ ಹೊರಟ ಸರ್ವಸಿದ್ಧಿಪ್ರದಾಯಕ ಮೋಟಾರು ಬಸ್ಸು ವೀರನಗೆರೆ ಬಳಿಯದ ಸಮೀಪದಲ್ಲಿ ಮುಂದುಗಡೆ ಹೋಗುತ್ತಿದ್ದ ಮತ್ತೊಂದು ಬಸ್ಸನ್ನು ಹಿಂದಾಕುವ ಪ್ರಯತ್ನದಲ್ಲಿ ಗೇಟಿನಕಲ್ಲು ಕಂಭಕ್ಕೆ ಬಹಳ ರಭಸದಿಂದ ಬಡಿಯಲು ಕಂಭವು ಮುರಿದು ತುಂಡುತುಂಡಾಗಿ ಬಿದ್ದಿತು ಮತ್ತು ಬಸ್ಸಿಯ ಒಂದು ಪಾರ್ಶ್ವವು ಮುರಿದುಹೋಯಿತು, ಬಸ್ಸಿನೊಳಗಿದ್ದ ಪ್ರಯಾಣಿಕರಲ್ಲಿ ಒಬ್ಬನಿಗೆ ಸೀಟಿನ ಕಬ್ಬಿಣಗಳು ಬಡಿದು ಭಯಂಕರವಾದ ಅಪಾಯವು ಸಂಭವಿಸಿ ಅವನು ಕುಳಿತಲ್ಲೇ ಮೃತನಾದನು ಇನ್ನೊಬ್ಬ ಸಾಮಾಕಾರನು ನೀಲಿಗೂ ಡ್ರೈವರನಿಗೂ ಪೂರಾ ಪೆಟ್ಟುಬಿದ್ದಿದ್ದುದರ ಮೇಲೆ ಕೃಷ್ಣರಾಜ ಆಸ್ಪತ್ರೆಗೆ ಸಾಗಿಸಲ್ಪಟ್ಟರು ಅವರಲ್ಲಿ ಆ ಹುಡುಗನು ಸತ್ತುಹೋಗಿ ಡ್ರೈವರು ಚಿಕಿತ್ಸೆಹೊಂದುತ್ತಿರುವನು ಒಬ್ಬ ಗರ್ಭಿಣಿಗೂ ಮತ್ತೆ ಮೂವರಿಗೂ ಸುಮಾರಾಗಿ ಪೆಟ್ಟು ಬಿದ್ದಿರುತ್ತದೆ ಇಂಥಹ ಅನಾಹುತಗಳು ಪದೇ ಪದೇ ನಡೆಯುತ್ತಿವೆ, ಆದರೆ ಡ್ರೈವರುಗಳಿಗೆ ಎಂಥ ಶಿಕ್ಷೆಯು ವಿಧಿಸಲ್ಪಡದಿರುವುದರಿಂದ ಅವರು ನಿರ್ಲಕ್ಷ್ಯದಿಂದಲೂ, ನಿರ್ಭೀತಿಯಿಂದಲೂ ಮನಸ್ಸಿಗೆ ಬಂದಂತೆ ಅಸಡ್ಡೆಯಿಂದ ವ್ಯಾಪಾರವನ್ನು ನಡೆಸುತ್ತಿರುವರು. ಇದು ನಿಲ್ಲಬೇಕಾದಲ್ಲಿ ಅಂಥ ಡ್ರೈವರುಗಳಿಗೆ ಪ್ರಬ[redacted]ವಾಸ ಶಿಕ್ಷೆಯೂ ಬಂದಿಯಬೇಕು[redacted] ವಿಧಿಸಲ್ಪಡಬೇಕು ಅದು ವಿನಾ ಗ[redacted]

ಮೈನರ್ವಾ ಮಿಲ್ಸ್ ಲಿಮಿಟೆಡ್

{5—1}

ಪ್ರತಿ **500** ರೂ ಗೆ ನಾಲಿಯವಾಗಿ ಶೇಕಡ 7½ ರೂ ಬಡ್ಡಿಯಂತೆ **18,00,000** ರೂಪಾಯಿಗಳನ್ನು [illegible] ಡಿಬೆಂಚರುಗಳ [illegible] ಸಾಲವಾಗಿ ತೆಗೆಯಲು ಗೊತ್ತುಮಾಡಿದೆ

ಬೆಂಗಳೂರಲ್ಲಿರುವ ಮೇಲ್ಕಂಡ ಕಂಪೆನಿಯ **35,00,000** ರೂಪಾಯಿ ಬೆಲೆ ಬಾಳುವ ಆಸ್ತಿಯು ಈ ಸಾಲಕ್ಕೆ ಈಡಾಗಿರುತ್ತದೆ

ಈ ಮಿಲ್ಲಿನಲ್ಲಿ **32,416** ಕದುರುಗಳು ಮತ್ತು **440** ಮಗ್ಗಗಳು ನವೀನ ಉಪಕರಣಗಳ ಸಮೇತವಾಗಿರುತ್ತವೆ

ಈ ಸಾಲದ ಮೊಬಲಗು **1940** ನೇ ಇಸವಿ ಜನವರಿ ತಾರೀಕು **2** ರಲ್ಲಿ ತೀರಿಸಲ್ಪಡುವುದು ಈ ಸಾಲದ ಮೊಬಲಗನ್ನು ಪೂರ್ತಿಯಾಗಿ ಆಗಲಿ ಭಾಗಶಃವಾಗಿ ಆಗಲಿ **1935** ನೆಯ ಜನವರಿ ತಾ॥ **2** ರಲ್ಲಿ ಅಥವಾ ಅನಂತರದಲ್ಲಿ ಬಡ್ಡಿ ಸಮೇತ ಕಂಪೆನಿಯವರಿಗೆ ಸೂಕ್ತ ತೋರಿದಂತೆ ವಾಪಸು ಕೊಡುವ ಅಧಿಕಾರವನ್ನು ಕಂಪೆನಿಯವರಿಟ್ಟುಕೊಂಡಿರುತ್ತಾರೆ

ಇಟಲಿಯ ಫಾಸಿಸ್ಟ್ ವಿಧಾನ

[illegible] ನೆಯ ಶತಮಾನದಲ್ಲಿ ಯೂರೋಪುಖಂಡದೊಳಗೆ ಎರಡು ದೇಶಗಳು ಅತ್ಯುನ್ನತಪದವಿಗೆ ಬಂದುವು. ಅವುಗಳಲ್ಲೊಂದಾದ ಜರ್ಮನಿಯು ಮಹಾಯುದ್ಧದಲ್ಲಿ ಪರಾಜಯವನ್ನು ಹೊಂದಿದುದರಿಂದ ಈಗ ತನ್ನ ಗೌರವವನ್ನು ಳಿಸಿಕೊಳ್ಳುವುದು ಕಷ್ಟವಾಗಿದ್ದಿತು. ಆದರೆ ಮೇಲೆ ಹೇಳಿದ ದೇಶಗಳಲ್ಲಿ 2 ನೆಯದಾದ ಇಟಲಿ ದೇಶವು ಮಾತ್ರ ಈಗಲೂ ತನ್ನ ಗೌರವಪ್ರತಿಷ್ಠೆಗೆ ಭಂಗ ಬಾರದಂತೆ ಪ್ರಯತ್ನಿಸುತ್ತಿರುವುದು. ಯುದ್ಧದಲ್ಲಿ ಜರ್ಮನಿಯು ಸೋತು ಕ್ಷೀಣವಾಗುತ್ತಿದ್ದರೆ ಇಟಲಿ ದೇಶವು ಅದೇ ಯುದ್ಧದಲ್ಲಿ ಜಯವನ್ನು ಹೊಂದಿದುದರಿಂದಲೂ ಅದರ ಪರ್ಯವಸಾನದಿಂದಲೂ 19 ನೆಯ ಶತಮಾನದಲ್ಲಿ ಮಾಜಿನೀ, "ಗ್ಯಾರಿಬಾಲ್ಡಿ" "ಕಾವೂರು" ಮೊದಲಾದವರು ನಾಯಕರು ಮಾಡಿದ ಪ್ರಯತ್ನಗಳ ಫಲವನ್ನು ಹೊಂದುವಂತಾಯಿತು. ಈಗಲೂ ಯೂರೋಪುಖಂಡದಲ್ಲಿ ಫ್ರಾನ್ಸ್ ದೇಶವನ್ನು ಬಿಟ್ಟರೆ ಇಟಲಿಯು ಅತ್ಯಂತ ಬಲವಾದ ದೇಶವೆಂದು ಹೇಳಬಹುದಾಗಿದೆ. ಫ್ರಾನ್ಸ್ ದೇಶದ ಪ್ರಾಮುಖ್ಯತೆಯು ಅನಾದಿ ಕಾಲದಿಂದಲೂ ಒಪ್ಪಿಕೊಳ್ಳಲ್ಪಟ್ಟುದಾಗಿದೆ. ಆದರೂ ಇಟಲಿಯು ಎಂದೋ ಇಂತಹ ಪ್ರತಿಷ್ಠಾನವನ್ನು ಅಲಂಕರಿಸಿರುತ್ತದೆ. ಇದರಿಂದ ಇಟಲಿ ದೇಶವು ನೂತನ ಶಕ್ತಿಯನ್ನು ಹೊಂದಿ ತನ್ನ ಸ್ವಂತ ಪ್ರಯತ್ನದಿಂದ ಇತರರಿಗೆ ಆದಾಯಕರವಾಗಿರುವಂತೆ ಪ್ರವರ್ತಿಸುತ್ತಿದ್ದಿತು. ಈಗಿನ ಕಾಲದಲ್ಲಿ ಯೂರೋಪುಖಂಡವು ಇಟಲಿಯ ಕಾರ್ಯವನ್ನು ಬಹಳ ಎಚ್ಚರಿಕೆಯಿಂದ [illegible] ಪರಿಶೀಲಿಸುತ್ತಿರುವುದು. [illegible] ಪಟ್ಟಣದಲ್ಲಿ ನಯ ಮಿಸಲ್ಪಟ್ಟ [illegible] ಸಂಸ್ಥೆಗಳ ಯೂರೋಪುಖಂಡ [illegible] ಯಾಗಿ [illegible] ವುದು. ಹೀಗೆ ಔನ್ನತ್ಯಭರಿತವಾದ ಇಟಲಿ ದೇಶದ ಪ್ರಾಮುಖ್ಯತೆಗೆ ಕಾರಣವಾದ [illegible] ಕೆಳಗೆ ವಿವರಿಸಲ್ಪಟ್ಟಿದೆ.

ಇಟಲಿಯ ಪೂರ್ವಚರಿತ್ರೆ

1914-1918 ರ ಮಹಾಯುದ್ಧ ಕಾಲದವರೆಗೂ ಇಟಲಿ ದೇಶವು ಬಹಳ ಹೀನಸ್ಥಿತಿಯಲ್ಲಿದ್ದಿತು. ಇದಕ್ಕೆ ಕಾರಣಗಳು ಅನೇಕವಾಗಿವೆ. 19 ನೆಯ ಶತಾಬ್ದದ ಮಧ್ಯಕಾಲದವರೆಗೂ ಇಟಲಿ ದೇಶದಲ್ಲಿ ಒಂದು ಪ್ರಜಾಸಾಮ್ರಾಜ್ಯ [illegible] ಮೊದಲಿನಿಂದಲೂ ಆಸ್ಟ್ರಿಯಾ ದೇಶದ ಚಕ್ರವರ್ತಿಯ ರಾಜ್ಯವು "ಹೋಲಿ ರೋಮನ್ ಎಂಪೈರ್" ಎಂದು ಕರೆಯಲ್ಪಡುತ್ತ ಇಟಲಿ ದೇಶವು ಕೂಡ ತನ್ನ ರಾಜ್ಯದಲ್ಲಿ ಒಂದು ಭಾಗವೆಂದು ಭಾವಿಸಿದ್ದಿತು. [illegible] ಪಟ್ಟಣವಿರುವ ರಾಜ್ಯವನ್ನು ಪರಿಪಾಲಿಸುತ್ತಿದ್ದ ಈ ಚಕ್ರವರ್ತಿಗಳು ಹೋಲಿರೋಮನ್ ಚಕ್ರವರ್ತಿಗಳೆಂದು ಪರಿಗಣಿಸಲ್ಪಡುತ್ತಿದ್ದುದಕ್ಕೆ ಒಂದು ಕಾರಣವುಂಟು. ಕ್ರೈಸ್ತಮತದಲ್ಲಿ ಅನಾದಿ ರೋಮನ್ ಕ್ಯಾಥೋಲಿಕ್ ಎಂಬ ಮತಾಚಾರ್ಯನು ರೋಮ್ ಪಟ್ಟಣದಲ್ಲಿ ವಾಸಿಸುತ್ತಿರುವನು. ಈತನನ್ನು ಪೋಪೆಂದು ಕರೆಯುವರು. ಈ ರೋಮನ್ ಕ್ಯಾಥೋಲಿಕ್ ಪಂಗಡದವರು ಪ್ರಪಂಚದೆಲ್ಲಾ ಭಾಗದಲ್ಲೂ ಕಂಡುಬರುತ್ತಾರೆ. ಈ ಮಹಾ [illegible] ತನ್ನ ರಾಜ್ಯದಲ್ಲಿರುವ ರೋಮ್ ಪಟ್ಟಣದಲ್ಲಿರುವುದರಿಂದಲೂ ಕೆಲಕಾಲದವರೆಗೆ ತನ್ನ ನಂಬ ಪುರೋಹಿತರಾಗಿ [illegible] ಪೋಪರಿಗೂ ಚಕ್ರವರ್ತಿಗೂ ವಿರೋಧವುಂಟಾಗಲು ಪೋಪನು ಚಕ್ರವರ್ತಿಯನ್ನು ಬಂಧಿಸಿದುದರಿಂದಲೂ ಈ ಆಸ್ಟ್ರಿಯಾ ದೇಶದ ಚಕ್ರವರ್ತಿಗಳು ಹೋಲಿ ರೋಮನ್ನಿನ (ಅಂದರೆ ಪವಿತ್ರ ರೋಮನ್ ದೇಶದ) ಚಕ್ರವರ್ತಿಗಳಾಗಿ [illegible] ಸಲ್ಪಡುತ್ತಿದ್ದರು.

ಹೀಗೆ ಪವಿತ್ರವಾದ ರೋಮನ್ ಸಾಮ್ರಾಜ್ಯದಲ್ಲಿ ಒಂದು ಭಾಗವಾಗಿ ಇಟಲಿ ದೇಶವು 30 ವರ್ಷಕಾಲ ಪರಿಗಣಿಸಲ್ಪಟ್ಟಿದ್ದಿತು. ಇಂತಹ ಸಂದಿಗ್ಧ ಸಮಯದಲ್ಲಿ ಫ್ರಾನ್ಸ್ ದೇಶದಲ್ಲಿ ನೆಪೋಲಿಯನ್ ಎಂಬ ಮಹಾ ಸೇನಾನಿಯು ಹುಟ್ಟಿ ಕಡೆಯಲ್ಲಿ ಚಕ್ರವರ್ತಿ ಪದವಿಯನ್ನು ಹೊಂದಿದನು. ನೆಪೋಲಿಯನ್ನನ ಚಕ್ರಾಧಿಪತ್ಯವು ಯೂರೋಪುಖಂಡದಲ್ಲೆಲ್ಲಾ ವ್ಯಾಪಿಸಿತು. ಇಷ್ಟೇ ಅಲ್ಲದೆ ಆಫ್ರಿಕಾಖಂಡದಲ್ಲಿರುವ ಈಜಿಪ್ಟ್ ದೇಶದ ಮೇಲೂ ಸಹ ದಂಡೆತ್ತಿ ಹೋಗುವ ಶಕ್ತಿಸಾಮರ್ಥ್ಯವು ನೆಪೋಲಿಯನ್ ಚಕ್ರವರ್ತಿಗಿದ್ದಿತು. ಪವಿತ್ರವಾದ ರೋಮನ್ ಸಾಮ್ರಾಜ್ಯದಲ್ಲಿರುವ ಚಿಕ್ಕ ರಾಷ್ಟ್ರಗಳನ್ನು ಆಕ್ರಮಿಸಿ ಅವನ್ನು ಸ್ವಾಧೀನಗಳನ್ನಾಗಿ ಮಾಡಿಕೊಂಡು ಕಡೆಯಲ್ಲಿ ಆಸ್ಟ್ರಿಯಾ ದಾಳಿಗಳನ್ನು ಹಿಡಿಸಲಾರದವನಾಗಿ ಚಕ್ರವರ್ತಿಯು ಗಲಾಟೆ ಹೋದನು. [illegible] ಸುಮಾರು 110 ವರ್ಷಗಳಾದುವು

ಇಟಲಿ ದೇಶಕ್ಕೆ [illegible] ನೆಪೋಲಿಯನ್ನನ ಸಾಮ್ರಾಜ್ಯದಲ್ಲಿ ಒಂದು ಭಾಗವಾಗಿ ಬಿಡಬೇಕಾಯಿತು. [illegible] ಹೆಚ್ಚು [illegible] ಪ್ರಜಾರಾಜ್ಯವಾಗಿ [illegible]

ನೆಪೋಲಿಯನ್ನನ ರಾಜ್ಯಭಾರ ಪ್ರಭಾವ

ಕೆಲ ಸಂವತ್ಸರಗಳವರೆಗೆ ನೆಪೋಲಿಯನ್ನನ ಆಳ್ವಿಕೆಯಲ್ಲಿ ಇಟಲಿ ದೇಶವು [illegible] ಪ್ರಾಂತ್ಯಗಳಾಗಿ ವಿಭಾಗಿಸಲ್ಪಟ್ಟಿದ್ದಿತು. [illegible] ಇದರಿಂದ [illegible] ಆ ರಾಷ್ಟ್ರಗಳಿಗೆ ಹೊಂದಿಕೆಯಿಲ್ಲದ ಸಂಪರ್ಕವುಳ್ಳ ದೇಶವಲ್ಲ. [illegible] ನೆಪೋಲಿಯನ್ನನ ಪರಿಪಾಲನದಲ್ಲಿ ಕೆಲ ಕಾಲ [illegible] ಎಂಬುವ [illegible] ವಂತಹ ಹೊಸ ಸಂಸ್ಥೆಗಳನ್ನು ಆಸಕ್ತಿಯಾಗಿ ಏರ್ಪಡಿಸಿದನು. ಫ್ರಾನ್ಸಿನಲ್ಲಿ ಪ್ರಸಿದ್ಧಿಯಾಗಿರುವ "ಕೋಡ್ ನೆಪೋಲಿಯನ್" ಎಂಬ ನ್ಯಾಯವಿಧಾನವು ಪರಿಶೀಲಿಸಲ್ಪಟ್ಟು ಚಿಕ್ಕ ರಾಷ್ಟ್ರಗಳಲ್ಲಿ ಮನಸ್ಸು ಬಂದ ಹಾಗೆ ತಿರುಗುವ ಸಂಬಂಧಿಗಳನ್ನೆಲ್ಲ ಕಿತ್ತೊಗೆದುಬಿಟ್ಟನು. ರಾಜ್ಯವೆಲ್ಲವೂ ಒಂದೇ ಆಗಿ ಪರಿಗಣಿಸಲ್ಪಟ್ಟು ಆಳಲ್ಪಡುತ್ತಿದ್ದುದರಿಂದ ದೇಶದ ಜನರಿಗೆ ಸಂಘೀಭಾವವು ಸೂಚಿತವಾಯಿತು. ನೆಪೋಲಿಯನ್ನನ ರಾಜ್ಯವು 1815 ರಲ್ಲಿ ಒಡೆದು ಛಿದ್ರವಾಯಿತು. ಆದರೆ ಅವನ ರಾಜ್ಯಾಂಗ ವಿಧಾನ ಮಾತ್ರ ಎಲ್ಲ ಕಾಲದಲ್ಲೂ ಜೀವಂತವಾಗಿರುವುದು. ಇದರಿಂದ ಇಟಲಿಗೆ ಮಾಡಿದ ಸಹಾಯವು [illegible] ಮಹಾಜನಗಳಲ್ಲಿ ಒಂದಾಗಿ ಪರಿಗಣಿಸಲ್ಪಡಲು ಕಾರಣಭೂತವಾಯಿತು.

ನೂತನ ಶಕಾರಂಭ

ಮೇಲೆ ಹೇಳಿರುವ ಗ್ಯಾರಿಬಾಲ್ಡೀ, ಮಾಜಿನೀ ಮುಂತಾದವರು ನೆಪೋಲಿಯನ್ನನ ರಾಜ್ಯಭಾರವು ಎಷ್ಟನ್ನವಾದ ಕಾಲದಿಂದಲೂ [illegible] ಇಟಲಿದೇಶಾಭಿವೃದ್ಧಿಗೆ ಬಹಳ ಸಾಹಸಪಟ್ಟರು. ಮಾಜಿನಿಯು "ಯಂಗ್ ಇಟಲೀ" ದೇಶವನ್ನು [illegible] ಪ್ರಪಂಚಕ್ಕೆಲ್ಲ ಆದರ್ಶಪ್ರಾಯವಾಗಿದ್ದನು. ಇವರು ಮೂವರು ಮಾಡುವ ಕಾರ್ಯಗಳಿಗೆ ಅನುಗುಣವಾಗಿ ಆ ದೇಶದ ರಾಜನಾದ ವಿಕ್ಟರ್ ಎಮಾನ್ಯುಯಲನು ರಾಜ್ಯಭಾರಮಾಡುತ್ತಿದ್ದನು.

ಈ ಕಾಲದ ಯಜಮಾನ್ಯದಲ್ಲಿ ಇಟಲೀ ದೇಶವು ಜಾಗ್ರತೆಯಲ್ಲಿ ತನ್ನ ನಿಜಶಕ್ತಿಯನ್ನು ಅರಿತುಕೊಂಡು ದಿನ ದಿನಕ್ಕೆ ಅಭಿವೃದ್ಧಿ ಹೊಂದುತ್ತಿದ್ದಿತು. ಇಪ್ಪತ್ತನೆಯ ಶತಮಾನದಲ್ಲಿ ಮೊದಲು 10 ವರ್ಷಗಳು ಇಟಲೀ ದೇಶಕ್ಕೆ ಕಷ್ಟಕಾಲವಾಗಿ ಪರಿಣಮಿಸಿದುವು. ಎಂದೂ ಕಾಣದ ವಸ್ತು ಅರಿಯದ ಹೊಸರಾಷ್ಟ್ರೀಯ ಸಂಘೀಭಾವವು ಪ್ರಜೆಗಳಲ್ಲಿ ಉಂಟಾಯಿತು. ಅದರಿಂದ ಹೊಸ ಹೊಸದಾದ [illegible] ಉತ್ತರಬಾಧ್ಯತೆಯ ದೇಶವನ್ನಾವರಿಸಿಕೊಂಡಿದ್ದಿತು. ಆಸ್ಟ್ರಿಯಾ ಚಕ್ರವರ್ತಿಯವರ ಆಡಳಿತ ಕಾಲದಲ್ಲಾಗಲಿ, ನೆಪೋಲಿಯನ್ನನ ಕಾಲದಲ್ಲಾಗಲಿ ಇಟಲಿಯು ಪರದೇಶಗಳೊಡನೆ ಸಂಬಂಧ ಬಾಂಧವ್ಯಗಳನ್ನು ಬೆಳಸಲಿಲ್ಲ. ಹೊಸ ರಾಷ್ಟ್ರವಾಗಿ ನಿಯಮಿಸಲ್ಪಟ್ಟುದರಿಂದಲೇ ಸ್ವಶಕ್ತಿಯಿಂದ ಇಟಲೀ ದೇಶವು ಇತರ ದೇಶೀಯರೊಡನೆ ಪ್ರತಿಭಟಿಸಬೇಕಾಗಿ ಬಂದಿತು. ಇದರಿಂದ ದೊಡ್ಡ ಸೈನ್ಯಗಳೂ ನೌಕಾದಳವೂ ಬೇಕಾಗಿ ಬಂದುವು. ಇದೇ ಪ್ರಕಾರವಾಗಿ ಹೊಸದಾದ ರಾಜ್ಯಾಂಗ ವಿಧಾನಕ್ಕೆ ಬೇಕಾದ ಏರ್ಪಾಟುಗಳನ್ನೆಲ್ಲ ಏರ್ಪಡಿಸಿಕೊಳ್ಳಬೇಕಾಗಿ ಬಂದಿತು. ಹೊಸದಾದ ಶಾಸನಸಭೆಗಳು ಅನುಷ್ಠಾನಕ್ಕೆ ತರಲ್ಪಟ್ಟುವು. ಒಟ್ಟಿನಮೇಲೆ ಹೊರದೇಶಗಳು ಒಂದುಸಾರಿ ಒಟ್ಟುಗೂಡಿ ಇಟಲೀ ದೇಶದಮೇಲೆ ದಂಡೆತ್ತಿ ಬಂದುವು.

ಈ ಸಂಧಿ ಸಮಯದಲ್ಲಿ ಇಟಲೀ ದೇಶಕ್ಕೆ ಬಹಳ ನಷ್ಟವುಂಟಾಯಿತು. ಪ್ರಜೆಗಳು ಹೊಸಮಾರ್ಗಗಳನ್ನು ಅರಿಗಿಸಿ ಸಾಧಿಸಿಕೊಳ್ಳುವ ಶಕ್ತಿಯುಳ್ಳವರಾಗಿರಲಿಲ್ಲ. ದೇಶದಲ್ಲಿ ಹೊಸ ತೆರಿಗೆಗಳನ್ನು ವಿಶೇಷವಾಗಿ ವಿಧಿಸಿ ಪ್ರಜೆಗಳನ್ನು ಬಾಧಿಸುತ್ತಿದ್ದುದರಿಂದ ಆಡಳಿತಕ್ಕೆ ಬರಬೇಕಾಯಿತು. ಎಲ್ಲಿ ನೋಡಿದರೂ ಕೆಲಸದ ಕ್ಷಾಮವೇ ಮತ್ತು ಸರ್ಕಾರಿಯಧಿಕಾರಿಗಳ ದುಂದಾವರ್ತಿಯ ಕೆಲಸಗಳೇ. ಒಟ್ಟಿನಲ್ಲಿ ಆ ವೇಳೆಯಲ್ಲಿ ಇಟಲೀ ದೇಶದವರು ಬಹಳವಾಗಿ ಪೀಡಿಸಲ್ಪಡುತ್ತಿದ್ದರು.

ಯೂರೋಪು ಮಹಾಯುದ್ಧ

ದುರ್ಭಿಕ್ಷದಲ್ಲಿ ಅಧಿಕಮಾಸವೆಂಬ ಗಾದೆಯಂತೆ ಬಹಳ ಭಯಂಕರ ಪೀಡನಕ್ಕೆ ಗುರಿಯಾಗಿದ್ದ ಇಟಲೀ ದೇಶವು 1914 ರಿಂದ 1918 ರ ವರೆಗೆ ನಡೆದ ಮಹಾಯುದ್ಧದಲ್ಲಿ ಇಂಗ್ಲೆಂಡು ಫ್ರಾನ್ಸಿನ ಪರವಾಗಿ ಜರ್ಮನಿ ಆಸ್ಟ್ರಿಯಾ ದೇಶಗಳ ವಿರುದ್ಧವಾಗಿ ಕಾದಾಡಿತು. ಮೊದಲು 2 ವರ್ಷಗಳಲ್ಲಿ ಇಟಲೀ ದೇಶವು ಎಲ್ಲ ಕಡೆಯಲ್ಲೂ ಪರಾಜಯವನ್ನು ಹೊಂದಿತು. ಆದರೆ ಮುಸಲೋನಿ ಎಂಬ ವಜ್ರಾನಾಯಕನು ಮುಂದೆ ಬಂದು ಸೋತುಹೋಗಿದ್ದ ಇಟಲೀ ಸೈನ್ಯಗಳು ಜಯಶಾಲಿಗಳಾಗುವಂತೆ ಮಾಡಿದನು.

ಫಾಸಿಸ್ಟ್ ಉದ್ಯಮವ್ಯಾಪ್ತಿ

ಮೇಲಿನ ಪ್ರಕಾರದ ಪಟ್ಟಿನಸಾಸವು "ಫಾಸಿಸ್ಟ್" ಎಂಬ ಇಟಲೀ ದೇಶದ ಸಂಘಗಳುಪ್ಪನ್ನವೇ. ಫಾಸಿಸ್ಟಿಯಲ್ಲಿ ಪುರುಷರು ಸ್ತ್ರೀಯರು ಬಾಲಕ ಬಾಲಿಕೆಯರು ಎಲ್ಲರೂ ಸೇರಬಹುದು. ಇದರಲ್ಲಿ ಗಂಡಸರಿಗೂ ಹೆಂಗಸರಿಗೂ ಬೇರೆ ಉಡುಪುಗಳು ಫಾಸಿಸ್ಟೀಯವರ ಯೂನಿಫಾರಮಾಗಿ ಉಪಯೋಗಿಸಲ್ಪಟ್ಟಿವೆ. ಇವರು ಮಾಡುವ ನಮಸ್ಕಾರವು ಪರ್ವಾವನ್ನವು ಮಾಡುವ ರೀತಿಯಲ್ಲಿ. ಈ ವಿಧವಾಗಿ ಫಾಸಿಸ್ಟಿಯ ಉಪಸಂಘಗಳು ದೇಶದಲ್ಲೆಲ್ಲ ಸ್ಥಾಪಿತವಾದುವು. ಯುದ್ಧವು ಮುಗಿದ 23 ವರ್ಷಗಳಲ್ಲಿ ಮುಸಲೋನಿಯ ಪಾರ್ಟಿಗೆ ವಿಶೇಷ ಬಲಬಂದಿತು. ಹೀಗೆ ಬಲ ಬಂದ ಕೂಡಲೇ ಮುಸಲೋನಿಯು ದೇಶದಲ್ಲಿ ಶಿಥಿಲವಾಗಿ ಹೋಗುತ್ತಿದ್ದ ಶಾಸನ ಸಭೆಯಲ್ಲಿ ಪ್ರವೇಶಿಸಿ ಅದನ್ನು ವಶಪಡಿಸಿಕೊಂಡು ಅದನ್ನು ಭಗ್ನಗೊಳಿಸಿ ತನ್ನ ನಿರಂಕುಶ ಫಾಸಿಸ್ಟ್ ಪ್ರಭುತ್ವವನ್ನು ಸ್ಥಾಪಿಸಿದನು. 10 ವರ್ಷಗಳಲ್ಲಿ ಈ ಫಾಸಿಸ್ಟ್ ಪ್ರಭುತ್ವವು ಉನ್ನತ ದಶೆಗೆ ಬಂದಿತು.

ಇಟಲೀ ದೇಶದ ರಾಜನಾದ ವಿಕ್ಟರ್ ಇಮಾನ್ಯುಯಲ್ಲನು ದೇಶವನ್ನು ನಾಮ ಮಾತ್ರಕ್ಕೆ ಪರಿಪಾಲಿಸುತ್ತಿರುವನು. ಇಂಗ್ಲಿಷ್ ರಾಜರುಗಳಂತೆ ಈತನು ಪ್ರಜಾ ರಾಜ್ಯಾಂಗ ವಿಧಾನ ನಿಯಮಕ್ಕೆ ಬದ್ಧನಲ್ಲವು. ಏಕೆಂದರೆ ಇಟಲಿಯಲ್ಲಿ ರಾಜ್ಯಾಂಗ ವಿಧಾನ ಪ್ರಮಾಣವೇನೂ ಇಲ್ಲ. ಈ ಕಾರಣದಿಂದ ಮುಸಲೋನಿಯೇ ರಾಜ್ಯಾಂಗ ಪ್ರವರ್ತಕನು, ಅಂದರೆ ಇಟಲೀ ರಾಜನು ಮುಸಲೋನಿಯು ಹೇಳಿದಂತೆ ನಡೆದುಕೊಳ್ಳಬೇಕು.

ದೇಶದಲ್ಲಿ ಹೆಸರಿಗೆ ಮಾತ್ರ ಎರಡು ಶಾಸನಸಭೆಗಳಿರುತ್ತವೆ. ಆದರೆ ಅವೆರಡೂ ಫಾಸಿಸ್ಟರ ಕೈಯಲ್ಲಿ ಸಿಕ್ಕಿಬಿದ್ದಿರುತ್ತವೆ. ಏಕೆಂದರೆ, ಇಟಲೀ ದೇಶದಲ್ಲಿ ಫಾಸಿಸ್ಟರ ವಿನಾ ಬೇರೆ ಪಾರ್ಟಿಯವರು ಇರುವುದಕ್ಕೆ ಅವಕಾಶವಿಲ್ಲ. ದೇಶದ ಪ್ರಜೆಗಳೆಲ್ಲರೂ ಫಾಸಿಸ್ಟರಾಗಿ ಇದ್ದೇ ತೀರಬೇಕು. ಹಾಗಿರಲಾರದವರೆಲ್ಲ ಕಾರಾಗೃಹದಲ್ಲಿ ಬಂಧಿಸಲ್ಪಡುವರು ಅಥವಾ ಗಡೀಪಾರಾಗಲ್ಪಡುವರು. ಈ ನಿರ್ಬಂಧದಿಂದ ಅನೇಕ ಇಟಲಿಯವರು ಇಂಗ್ಲೆಂಡಿಗೂ ಫ್ರಾನ್ಸಿಗೂ [illegible] ವಲಸೆಹೋದವರಲ್ಲಿ ಹಿಂತಿರುಗಿ ಬಂದವರು ಮರಣದಂಡನೆಗೆ ಗುರಿಮಾಡಲ್ಪಡುತ್ತಿದ್ದರು. ಈ ಪ್ರಕಾರವಾಗಿ ಇಟಲಿಯಲ್ಲಿ ವಿದ್ಯಾವಂತರೂ ಮಿತವಾದಿಗಳೂ ಬಹಳ ಕಷ್ಟ

ದೊರೆತು. ಈ ವಿಷಯಗಳ ಪರಿಶೀಲನೆಯು ಬೇರೆ ದೇಶದಲ್ಲಿ [illegible] ತಂದುಕೊಂಡಿದ್ದ [illegible] ಅನೇಕರು ಹೀಗಿದ್ದ [illegible] ನಿರಂಕುಶಪ್ರಭುತ್ವದಿಂದ ಫಾಸಿಸ್ಟ್ ಸಭೆಗಳು [illegible] ಸ್ವಾತಂತ್ರ್ಯ [illegible] ನಡೆಯಲಾರದು.

ಫಾಸಿಸ್ಟ್ ಮತ್ತು ಸೋಷಿಯಲಿಸ್ಟ್ [illegible]

[illegible] ದೇಶಾಭ್ಯುದಯಕ್ಕಾಗಿ ತನ್ನ [illegible] ಅಭಿವೃದ್ಧಿಯಾದರೆ ಪ್ರಜೆಗಳಿಗೆ [illegible] ಅವರಿಂದ ಪ್ರಜೆಗಳ ಸ್ವಾತಂತ್ರ್ಯ [illegible] ರೀತಿಯಲ್ಲಿ [illegible] ಮಾಡುವವರೆಂಬ ನೀತಿಯು [illegible] ಅಸ್ತಿತ್ವದಲ್ಲಿಲ್ಲ. ದೇಶಕ್ಕೋಸ್ಕರ ಅನುಸರಿಸುವ ರಾಜ್ಯಾಂಗ ಕಾರ್ಯಗಳನ್ನು ಪ್ರಜೆಗಳು ಅನುಮೋದಿಸಲೇಬೇಕು. ಈ ಪ್ರಕಾರವಾದ ತತ್ವವಿಧಾನವನ್ನು ಇಟಲೀ ದೇಶದವರೆಲ್ಲರೂ ಅನುಮೋದಿಸಿಯೇ ಇರುತ್ತಾರೆ. ಕಾರ್ಮಿಕರಿಗೆ ಪೂರ್ವಕಾಲದಿಂದಲೂ ಅನುಸರಿಸಿ ಬಂದಿದ್ದ ಹೀನಸ್ಥಿತಿಯು ಈಗ ಕಳೆದುಹೋಗಿರುವುದು. ಇದಕ್ಕೆ ಬದಲಾಗಿ ಫಾಸಿಸ್ಟ್ ಪಾರ್ಟಿಯೊಳಗೆ ಶಾಸಕನಿಲ್ಲದೆ ಸಮಾನ ದೃಷ್ಟಿಯಿಂದ ಎಲ್ಲರನ್ನು ಪರಿಗಣಿಸುತ್ತಿರುವ ಪದ್ಧತಿಯು ಜಾರಿಯಲ್ಲಿದೆ.

ವಾಣಿಜ್ಯಾಭಿವೃದ್ಧಿ

ಯುದ್ಧವಾದಂದಿನಿಂದಲೂ ಇಟಲೀ ದೇಶವು ವಾಣಿಜ್ಯವಿಷಯಗಳಲ್ಲೂ ವ್ಯಾಪಾರದಲ್ಲೂ ತಕ್ಕರೀತಿಯಲ್ಲಿ ಉನ್ನತಸ್ಥಾನವನ್ನು ಪಡೆದಿತು, ಇದಕ್ಕಾಗಿ [illegible] ದೇಶಕ್ಕೆ ಹೊರಗಿನಿಂದ ಬರುವ ಪದಾರ್ಥಗಳಿಗೆ ಹೆಚ್ಚು ಸುಂಕವನ್ನು ವಿಧಿಸಿ ದೇಶೀಯ ವಿಕ್ರಯವನ್ನು ವೃದ್ಧಿಗೊಳಿಸಿದನು. ಇಷ್ಟು ಮಾತ್ರವಲ್ಲದೆ ಸೈನ್ಯವನ್ನೂ ನೌಕಾದಳವನ್ನೂ ವಿಮಾನದಳವನ್ನೂ ಪ್ರಬಲವಾಗಿ ಏರ್ಪಡಿಸಿ ಅವುಗಳಿಗೆ ಬೇಕಾದ ಯುದ್ಧಸಾಮಗ್ರಿಗಳನ್ನು ಒದಗಿಸುತ್ತ ಬಂದುದರಿಂದ ವರ್ತಕರುಗಳಿಗೆಲ್ಲ ಹೆಚ್ಚು ಲಾಭವು ಕಂಡುಬಂದಿತು. ಈ ಪ್ರಕಾರವಾಗಿ ಫಾಸಿಸ್ಟ್ ಪಾರ್ಟಿಯವರು ದೇಶೀಯ ಜನರಲ್ಲಿ ವಿದ್ಯಾರ್ಥಿಕರು, ಮಿತವಾದಿಗಳೂ ಹೊರತಾಗಿ ಉಳಿದವರಿಗೆಲ್ಲ ಯಾವುದೋ ಒಂದು ವಿಧವಾಗಿ ಲಾಭವನ್ನು ತೋರಿಸಿ ಅವರ ಸಂಪೂರ್ಣ ಸಹಾಯವನ್ನು ಪಡೆಯುತ್ತಿದ್ದರು. ಈ ಫಾಸಿಸ್ಟ್ ಪಾರ್ಟಿ ಮಾಡಿದ ಕಾರ್ಯಗಳು ಅನೇಕವಾಗಿರುತ್ತವೆ. ದೇಶೀಯರ ಅಭ್ಯುದಯವೇ ಅದರ ಮುಖ್ಯ ಉದ್ದೇಶವು. ಬಾಲಕನಾಗಲಿ ಬಾಲಿಕೆಯಾಗಲಿ ಈ ಫಾಸಿಸ್ಟ್ ಪಾರ್ಟಿಗೆ ಸೇರಲೇಬೇಕು. ಸ್ತ್ರೀಯರಾಗಲಿ ಪುರುಷರಾಗಲಿ ಈ ಫಾಸಿಸ್ಟ್ ಪಾರ್ಟಿಗೆ ವಿರುದ್ಧವಾಗಿ ನಡೆಯಲಾಗುವುದಿಲ್ಲ. ಇದಕ್ಕೆ ಮುಂಬರಾಗಿ ಸೇರದವರು ಕಾರಾಗೃಹದಲ್ಲಿ ಬಂಧಿಸಲ್ಪಡುವರು ಅಥವಾ ಗಡೀಪಾರಾಗಲ್ಪಡುವರು. ಮುಸಲೋನಿಯು ಈ ಪಾರ್ಟಿಯ ಮುಖ್ಯನಾಯಕನು. ಆತನ ಮಾತಿಗೆ ದೇಶದಲ್ಲಿ ಬದಲು ಹೇಳುವವರೇ ಇಲ್ಲ.

ಇಂಥಾ ಫಾಸಿಸ್ಟ್ ಪಾರ್ಟಿಯ ಕಾರ್ಯಕ್ರಮವು ಇಟಲೀ ದೇಶವನ್ನು ಕಳೆದ 10 ವರ್ಷಗಳಲ್ಲಿ ಅತ್ಯುನ್ನತಸ್ಥಿತಿಗೆ ತಂದಿರುತ್ತದೆನ್ನುವುದರಲ್ಲಿ ಸಂದೇಹವಿಲ್ಲ. ಈಗಲೂ ಇಟಲಿಯ ಹೆಸರೆತ್ತಿದರೆ ಫ್ರಾನ್ಸಿಗೂ ಸಹ ಭಯವುಂಟಾಗುತ್ತದೆ.

ಜರ್ಮನಿಗೆ ದುರವಸ್ಥೆ ಯೇಕೆ?

ಭಾರತೀಯರ ದುರವಸ್ಥೆಗೂ ಅದೇ ಕಾರಣ

ಜರ್ಮನ್ ರಾಷ್ಟ್ರವೆ ಪ್ರಪಂಚದ ಎಲ್ಲ ರಾಷ್ಟ್ರಗಳಿಗಿಂತಲೂ ಸುಧಾರಿಸಿದ್ದಾಗಿದೆ. ಜರ್ಮನಿಯ ಶೌರ್ಯವು ಪ್ರಪಂಚವನ್ನೇ ಅಂಜಿಸಿತು. ಜರ್ಮನಿಯ ಯಂತ್ರ ಕಲೆಯು ಜಗತ್ತನ್ನೇ ಆಶ್ಚರ್ಯಗೊಳಿಸಿತು. ಜರ್ಮನಿಯ ಉದ್ಯೋಗಾಭಿವೃದ್ಧಿಯು ಅನೇಕ ರಾಷ್ಟ್ರಗಳ ಉದ್ಯೋಗವನ್ನು ಮೂಲೆಗೊತ್ತಿತು. ಈ ಪ್ರಕಾರ ಜರ್ಮನಿಯು ಕೇವಲ 20 ವರ್ಷಗಳ ಹಿಂದೆ ಪ್ರಪಂಚದ ಶ್ರೇಷ್ಠ ರಾಷ್ಟ್ರಗಳಲ್ಲಿ ಶ್ರೇಷ್ಠವಾಗಿ ಮೆರೆಯುತ್ತಿದ್ದಿತಷ್ಟೆ. ಇಂತಹ ಜರ್ಮನಿಗೆ ದುರವಸ್ಥೆಯೇಕೆ ಬಂದಿತೆಂಬುದನ್ನು ತಿಳಿದುಕೊಳ್ಳುವುದು ಅವಶ್ಯವಾಗಿಲ್ಲವೆ?

ಈಗ ಜರ್ಮನಿಯು ಭಯಂಕರವಾದ ವಿಪತ್ತಿಗೊಳಗಾಗಿದೆ. ಆ ರಾಷ್ಟ್ರದ ಅಂತಃಕಲಹ ಅಶಾಂತಿಗಳು ಅನಿವಾರ್ಯವಾಗಿವೆ. ಮಂತ್ರಿಮಂಡಲದಲ್ಲಾಗುತ್ತಿರುವ ವ್ಯತ್ಯಾಸಗಳು ಅಲ್ಲಿನ ದುರವಸ್ಥೆಯ ದುಷ್ಟ ಚಿಹ್ನೆಗಳಾಗಿವೆ. ಡಾ॥ ಬ್ರೂನಿಂಗ್‌ರವರು ಜರ್ಮನಿಯು ಸಾಲಗಾರರ ಸಾಲವನ್ನು ಕೊಡುವಂತಹ ಸ್ಥಿತಿಯಲ್ಲಿಲ್ಲವೆಂದು 23 ತಿಂಗಳಗಳ ಹಿಂದೆಯೇ ಪ್ರಕಟಿಸಿದ್ದಾರೆ. ಜಗತ್ತಿನಲ್ಲಿ ಅತ್ಯಂತ ಧನಿಕವಾದ ಈ ಜರ್ಮನಿಯು ದಿವಾಳಿಯಾದುದೇಕೆ?

ಈಗ ಜಗತ್ತಿನ ಎಲ್ಲಾ ರಾಷ್ಟ್ರಗಳೂ ಸಾಂಪತ್ತಿಕ ವಿಪತ್ತಿನಿಂದ ಬೆಂದು ಬೆಂಡಾಗುತ್ತಲಿವೆ. ಹಿಂದುಸ್ಥಾನವೂ ಈ ಹಣವಿಲ್ಲದ ಗೋಳಿಗೆ ಒಳಗಾಗಿಯೇ ಬಳಲುತ್ತಿದೆಯಷ್ಟೆ. ಹತ್ತಿಯ ಬೆಲೆಯು ಮಣಕ್ಕೆ 1 ರೂ ಆಯಿತಲ್ಲಾ! ಇನ್ನೇನ ಗತಿ? ಎಂದು ಒಕ್ಕಲಿಗರೂ ವ್ಯಾಪಾರಿಗಳೂ ಬಾಯಿ ಬಿಡುತ್ತಿದ್ದಾರಲ್ಲವೇ? ಹತ್ತಿಯನ್ನು ಕೊಂಡು ಜನರ ಹಣವನ್ನು ಸುಲಿಯುತ್ತಿದ್ದ ಪಾಶ್ಚಾತ್ಯ ರಾಷ್ಟ್ರಗಳ ಗತಿಯೇನಾಗಿದೆಯೆಂಬುದು ಈ ನಮ್ಮ ದಡ್ಡ ದೇಶಬಾಂಧವರಿಗೇನು ಗೊತ್ತು? ಗಾಂಧಿಯು ನಮಗೆ ಈ ಗತಿಯನ್ನು ತಂದಿಟ್ಟನಪ್ಪಾ ಎಂದು ಗಾಂಧಿಯ ಹೆಸರಿನಿಂದ ಬಡಿ ಬಡಿದು ಕೊಳ್ಳುತ್ತಿದ್ದಾರೆ.

ಈ ನಮ್ಮ ದಡ್ಡರು ಜರ್ಮನಿಗೆ ದುರವಸ್ಥೆಯೇಕೆಂಬುದನ್ನು ಯೋಚಿಸಿರುವರೇನು? ಪಾಪ! ನೆರೆ ಊರಿನ ಸ್ಥಿತಿಯನ್ನು ಕೂಡಾ ತಿಳಿಯಲಾರದ ಈ ನಮ್ಮ ದಡ್ಡರು ಜರ್ಮನಿಯ ಸ್ಥಿತಿಯನ್ನು ತಿಳಿದುಕೊಳ್ಳುವುದು ಶಕ್ಯವೇ?

ಜರ್ಮನಿಯು 16 ವರ್ಷಗಳ ಹಿಂದೆ ಘನಘೋರ ಯುದ್ಧವನ್ನು ಪ್ರಾರಂಭಿಸಿ ಯೂರೋಪುಖಂಡದಲ್ಲಿ 4 ವರ್ಷ ರಕ್ತದ ಕಾಲುವೆಯನ್ನು ಹರಿಸಿತಷ್ಟೆ. ಆ ಮಹಾಪಾಪವಾದ ಫಲವನ್ನೇ ಆ ರಾಷ್ಟ್ರವೂ ಅದರಲ್ಲಿ ಸೇರಿದ ಪ್ರಪಂಚದ ಬಹುರಾಷ್ಟ್ರಗಳೂ ಈಗ ಅನುಭವಿಸುತ್ತಲಿವೆ.

ಆ ಮಹಾಯುದ್ಧದಲ್ಲಿ ಜರ್ಮನಿಯು ಗೆದ್ದಿದ್ದರೆ ಅದು ಈಗ ಪ್ರಪಂಚವನ್ನೇ ತನ್ನ ಕೈಯಲ್ಲಿಟ್ಟುಕೊಳ್ಳುತ್ತಿದ್ದಿತು. ಅದು ಆಗ ಸೋತುದರಿಂದ ಈಗ ಪ್ರಪಂಚದಿಂದಲೇ ತಳ್ಳಿಸಿಕೊಳ್ಳುವ ಹೊತ್ತು ಬಂದಿತು. ಈ ಮೋಕ್ಷ ತಕ್ಕ ಫಲವನ್ನು ಅನುಭವಿಸಲೇ ಬೇಕಲ್ಲವೆ?

ಪ್ರಪಂಚದ ಧನ ಪ್ರಾಣಗಳನ್ನು ಭಯಂಕರವಾಗಿ ಆಹುತಿ ಕೊಟ್ಟು [illegible] ಆಹುತಿ ಕೊಟ್ಟನಂತರ ಈಗ ಪ್ರಪಂಚವು ಬಳಲಬೇಕಾಯಿತು. ಜರ್ಮನಿಯು ಸೋತು ಇಂಗ್ಲೀಷ್, ಫ್ರಾನ್ಸ್ ಮೊದಲಾದ ಮಿತ್ರರಾಷ್ಟ್ರಗಳ ಹೇಳಿಕೆಯಂತೆ ಕೇಳಬೇಕಾಯಿತು. ವರ್ಸೇಲಿಸ್ ಎಂಬಲ್ಲಿಯ ಒಪ್ಪಂದವು ಜರ್ಮನಿಯನ್ನು ಇಷ್ಟು ಹಣ್ಣು ಮಾಡಿತು.

ಮಹಾಯುದ್ಧದಿಂದಾದ ನಷ್ಟವನ್ನೂ ಸಾಲವನ್ನೂ ಜರ್ಮನಿಯು ಮಿತ್ರ ರಾಷ್ಟ್ರಗಳಿಗೆ ಕೊಡಬೇಕಾಯಿತು. ಕಳೆದ 15 ವರ್ಷಗಳಲ್ಲಿ ಜರ್ಮನಿಯನ್ನು ಹಿಂಡಿ ಹಿಪ್ಪೆಮಾಡಿದರೂ ಆ [illegible] ಭಾರವೆಂತಾಯಿತು. ಜರ್ಮನಿಯ ಕೆಟ್ಟ [illegible]

ಹಾನಿಯನ್ನು, ಸ್ವಾತಂತ್ರ್ಯವನ್ನು ಬಯಸುವ ಶಕ್ತಿಯೂ ಇಲ್ಲ ಎಂದು ಮೃತ್ಯುವಿನಂತೆ ನಾಶವಾಗುತ್ತದೆ

ಬ್ರಿಟೀಷರು ಜರ್ಮನಿಗೆ ಸಹಾಯ ಮಾಡಿ ಅದನ್ನು ನಿಲ್ಲಿಸಿದರು. ಅದರ ನೆರವಿಗೆ ಮತ್ತೆ ಯಾರೂ ಎತ್ತಿ ಬರಲಿಲ್ಲ. ಅವರ ಸೇನೆಗಳೂ ಈ ಹಣಕ್ಕಾಗಿ ಬಿಡುವಿಲ್ಲ. ಈ ಸಂಗತಿ ಸ್ಪಷ್ಟವಾಗಿ ಗೊತ್ತಾಗಿದೆ

ಬ್ರಿಟೀಷರು ಬರಬಹುದು ನೋಡಿ ನಮ್ಮ ಬಡತನಕ್ಕೆ ಕಾರಣ ನಾವಲ್ಲವೆ ೧೯ ನೆ ಜರ್ಮನಿಯ ಸ್ವಾತಂತ್ರ್ಯದಿಂದ ಸ್ಪಷ್ಟವಾಗುವದಿಲ್ಲವೇ ? ನಮ್ಮ ಎಂಥ ಸಂಸ್ಥೆಗಳಿದ್ದರೂ ಸರಕಾರಗಳಿಗೆ ಪ್ರತಿ ವರುಷ ಕೋಟ್ಯಂತರ ರೂ ಗಳನ್ನು ಸಾಲ ಕೊಡಲು ಬರುತ್ತಿರುವುದರಿಂದ ನಾನಾ ಹಿಂಸೆಗಳಿಗೊಳಗಾಗಬೇಕಾಗುತ್ತದೆ

ಫ್ರಾನ್ಸ್ ದೇಶದ ಮುತ್ಸದ್ದಿಗಳಾದ ಎಂ ಫ್ಲೆಂಡಿನ್ ಎಂಬುವವರು ಹೇಳಿರುವಂತೆ ಮುಂದೆ ಕೊಡುವ ಲಾಸಾನ ಪರಿಷತ್ತಿನಲ್ಲಿ ಜರ್ಮನಿಯನ್ನು ಋಣಮುಕ್ತ ರಾಷ್ಟ್ರವನ್ನಾಗಿ ಎಲ್ಲ ರಾಷ್ಟ್ರಗಳೂ ಮಾಡದಿದ್ದರೆ ಅದು ಮುಂದೆ ರಾಷ್ಟ್ರವಾಗಿ ಜೀವಿಸುವುದೇ ಕಷ್ಟವಿಲ್ಲ

ಇದೇ ಪ್ರಕಾರ ಹಿಂದುಸ್ಥಾನವೂ ಮುಂದೆ ರಾಷ್ಟ್ರವಾಗಿ ಜೀವಿಸಬೇಕಾಗಿದ್ದರೆ ಇದರ ಈಗಿನ ಘೋರ ಬಡತನವು ನಿವಾರಣೆಯಾಗುವಂತೆ ಮಹಾತ್ಮ ಗಾಂಧಿಯವರ ಹೇಳಿಕೆಯ ಪ್ರಕಾರ ಸ್ವರಾಜ್ಯ ದೊರೆಯಬೇಕು.

ಜನರಿಗೆ ಈಗಿನ ದುರವಸ್ಥೆಯು ಬಡತನದಿಂದಲೇ ಬಂದಿರುವುದೂ, ಆ ಬಡತನವು ಮಹಾಯುದ್ಧದಿಂದುಂಟಾಗಿ ಈಗ ಪ್ರಪಂಚವನ್ನೇ ವ್ಯಾಪಿಸಿದೆ ಎಂಬುದೂ ವಿಚಾರಪರರು ತಿಳಿದುಕೊಳ್ಳಬೇಕು ರ ಸಂ

ಬ್ರಾಹ್ಮಣರು ಆಪದ್ಧರ್ಮವಾಗಿ ಉಳಬಹುದು.

ಇಂದಿನ ಪರಿಸ್ಥಿತಿಯಲ್ಲಿ ಬ್ರಾಹ್ಮಣರ ಜೀವನದ ವಿಚಾರದಲ್ಲಿ ಆಪತ್ಕಾಲವು ಬಂದಿರುವಾಗ ಏನು ಮಾಡಬೇಕೆಂಬ ಪ್ರಶ್ನೆ ಬೇರೆಯಲ್ಲಿ ಬರೆಯುವುದಕ್ಕೆ ಕಾರಣವಿಲ್ಲ. ಇಂಥ ಆಪತ್ಕಾಲದಲ್ಲಿ ನೇಗಿಲಿನಿಂದ ಉಳುವುದರ ಕುರಿತು ಶಾಸ್ತ್ರವಚನವನ್ನು ಕೆಳಗೆ ವಿವೇಚಿಸುತ್ತೇನೆ

"ಕಲೌ ಪಾರಾಶರಾಃ ಸ್ಮೃತಾಃ" (ಕಲಿಯುಗದಲ್ಲಿ ಪರಾಶರ ಸ್ಮೃತಿಯಲ್ಲಿ ಹೇಳಿದ ಧರ್ಮಗಳು) ಎಂಬದಾಗಿ ಹೇಳಿರುವ ಪರಾಶರ ಸ್ಮೃತಿಯಲ್ಲಿ—

ಷಟ್ಕರ್ಮಸಹಿತೋ ವಿಪ್ರಃ ಕೃಷಿಕರ್ಮ ಚ ಕಾರಯೇತ್ ॥

(ಆಚಾರಕಾಂಡ ಅಧ್ಯಾಯ ೨ ಶ್ಲೋಕ ೨)

(ಬ್ರಾಹ್ಮಣನು ಷಟ್ಕರ್ಮನಿರತನಾಗಿ ಕೃಷಿಯನ್ನು ಮಾಡಿಸಬೇಕು) ಈ ವಚನದ ವ್ಯಾಖ್ಯಾನದಲ್ಲಿ ಮಾಧವಾಚಾರ್ಯರು "ಕೃಷಿಕರ್ಮವನ್ನು ಮಾಡಿಸುವುದು ಬ್ರಾಹ್ಮಣರ ಮುಖ್ಯ ಧರ್ಮ" ಎಂಬುದಾಗಿಯೂ ಅಂತೆಯೇ—

"ಕುಸೀದಕೃಷಿವಾಣಿಜ್ಯಂ ಪ್ರಕುರ್ವೀತಾಸ್ವಯಂಕೃತಂ ।

ಆಪತ್ಕಾಲೇ ಸ್ವಯಂಕುರ್ವಾಣೋ ನೈನಸಾ ಯುಜ್ಯತೇ ದ್ವಿಜಃ"

ಎಂಬ ಬೃಹಸ್ಪತಿ ವಚನದ ಮೇಲಿಂದ "ಬ್ರಾಹ್ಮಣರು ನೇಗಿಲಿನಿಂದ ಉಳುವುದು ಆಪದ್ಧರ್ಮವೆಂದೂ ವ್ಯವಸ್ಥೆ ಮಾಡಿರುತ್ತಾರೆ. ಇದಕ್ಕನುಕೂಲವಾಗಿ ಮುಂದೆ ಮೂಲ ಪರಾಶರ ಸ್ಮೃತಿಯಲ್ಲಿಯೂ "ಕ್ಷುಧಿತಂ ತೃಷಿತಂ ಶ್ರಾಂತಂ ಬಲೀವರ್ದಂ ನ ಯೋಜಯೇತ್ । ಹೀನಾಂಗಂ ವ್ಯಾಧಿತಂ ಕ್ಲೀಬಂ ವೃಷಂ ವಿಪ್ರೋ ನ ವಾಹಯೇತ್ ॥ ಸ್ಥಿರಾಂಗಂ ನೀರುಜಂ ತೃಪ್ತಂ ಸುನರ್ದಂ ಷಂಢವರ್ಜಿತಂ । ವಾಹಯೇದ್ದಿವಸಸ್ಯಾರ್ಧಂ ಪಶ್ಚಾತ್ಸ್ನಾನಂ ಸಮಾಚರೇತ್ ॥" (ಆಚಾರಕಾಂಡ ೧) ವಿಪ್ರನು ಹಸಿದ, ಬಾಯಾರಿದ ಮುಂತಾದ ದೋಷಯುಕ್ತ ಎತ್ತನ್ನು ನೇಗಿಲಿಗೆ ಕಟ್ಟದೆ ಸ್ಥಿರಾಂಗವಾದ ನೀರೋಗವಾದ ಗುಣಯುಕ್ತ ವಿಶೇಷವಾದ ಎತ್ತಿನಿಂದಲೇ ದಿವಸದಲ್ಲಿ ಅರ್ಧಪ್ರಹರ ಹೂಡಿ ಬಳಿಕ ಸ್ನಾನಮಾಡಬೇಕು ಎಂಬದಾಗಿ ಬ್ರಾಹ್ಮಣರು ಸ್ವತಃ ಉಳುವ ವಿಧಾನವನ್ನು ಹೇಳಿರುವುದಲ್ಲದೆ ಮುಂದೆ ಅದೇ ಪರಾಶರ ಸ್ಮೃತಿಯಲ್ಲಿ—

"ಸ್ವಯಂ ಕೃಷ್ಟೇ ತಥಾಕ್ಷೇತ್ರೇ ಧಾನ್ಯೈಶ್ಚ ಸ್ವಯಮಾರ್ಜಿತೈಃ ॥ ನಿರ್ವಪೇತ್ ಪಂಚಯಜ್ಞಾಂಶ್ಚ ಕ್ರತುದೀಕ್ಷಾಂ ಚ ಕಾರಯೇತ್" (ತಾನು ಸ್ವತಃ ಉತ್ತ ಗದ್ದೆಯಲ್ಲಿ ಹುಟ್ಟಿದ ತನ್ನ ಸ್ವಂತ ದುಡಿಮೆಯಿಂದ ಸಂಗ್ರಹಿಸಿದ ಕಾಳುಗಳಿಂದ ಪಂಚಯಜ್ಞಾದಿಗಳನ್ನು ಮಾಡಬೇಕು) ಎಂದು ಮೊದಲಾಗಿ ಹೇಳಿರುವುದರ ಮೇಲಿಂದ "ಆಪತ್ಕಾಲದಲ್ಲಿ ಬ್ರಾಹ್ಮಣರು ನೇಗಿಲಿನಿಂದ ಉಳಬಹುದು" ಎಂಬದಾಗಿ ಪರಾಶರ ಮುನಿಗಳ ಅಭಿಪ್ರಾಯವೆಂದು ಸ್ಪಷ್ಟ ತೋರದಿರದು

ಇನ್ನು ಶುಷ್ಕವಾದವನ್ನೆಬ್ಬಿಸುವವರಿಗೆ ಅನುಕೂಲವಾಗಿ ಬೀಜ ಸ್ಮೃತಿ ವಚನಗಳು "ಕೃಷಿಯನ್ನು ಮಾಡಬಾರದೆಂದು" ಹೇಳಿ ಅಧಃಪಾತ ವೆಂದು ಹೇಳಬಹುದಾದರೂ ಕೃಷಿಯಿಂದೆಯನ್ನು ಮಾಡಿದ್ದು ದೋಷವಲ್ಲ

ಆದರೆ "ಋತಾಮೃತಾಭ್ಯಾಂ ಜೀವೇತು ಮೃತೇನ ಪ್ರಮೃತೇನ ವಾ ಸತ್ಯಾನೃತಾಭ್ಯಾಮಪಿ ವಾ ನ ಶ್ವವೃತ್ತ್ಯಾ ಕದಾಚನ" (ಮನು ೪ ೪) (ಕೃಷಿಯಿಂದಾದರೂ ಜೀವಿಸಬಹುದು ಶ್ವವೃತ್ತಿಯಿಂದ ಎಂದೂ ಜೀವಿಸಬಾರದು) ಎಂದು ನಿಷೇಧಿಸುವ ಸ್ಮೃತಿಯಂತೆಯೂ, ಹಿಂದುಗಳಲ್ಲದವರಿಗೆ ಮನೆಯಲ್ಲಿ ಸೇವಕನಾಗುವುದಕ್ಕಿಂತ ನೌಕರಿಗೆ ಬಾಯಿಬಿಡುವುದಕ್ಕಿಂತ ಸ್ವತಂತ್ರವಾದ ಕೃಷಿಯನ್ನು ಕೈಕೊಳ್ಳುವುದೇ ಲೇಸು.

ಇಂಥ ವಿಷಯಗಳಲ್ಲಿ ಮಠಾಧೀಶರು ರಾಜರ ಅಪ್ಪಣೆಯನ್ನು ಕೊಡುವುದು ಕಷ್ಟಸಾಧ್ಯ. ಉದಾಹರಣೆಗಾಗಿ ಶಾರದಾ ಕಾನೂನಿನಂತೆ 14 ವರ್ಷ ಆಗದ ಹುಡುಗಿಗೆ ಮದುವೆಮಾಡಬಾರದಿದ್ದರೂ ಈ ಕುರಿತು ಯಾವ ದೊಡ್ಡ ಮಠಾಧೀಶರಾದರೂ ಪ್ರಾಯಶ್ಚಿತ್ತವನ್ನು ಮಾಡಬಹುದೆಂದು ಸರಕಾರದವರನ್ನು ಹೊರಡಿಸಿರುವರೇ ?

ಇಷ್ಟೊಂದು ವಿಧದಲ್ಲಿ ನ್ಯಾಯವೆಂದು ಹೇಳಬಹುದು ಹಿಂದೆ ಆಪತ್ಕಾಲದಲ್ಲಿ ವಿಶ್ವಾಮಿತ್ರನು ನಾಯಿಮಾಂಸವನ್ನು ತಿಂದು ಮೊದಲಾದವರು ನಿಷಿದ್ಧ ಭಕ್ಷಣ ಮಾಡಿರುವುದರಿಂದ ಧರ್ಮಕ್ಕೆ ಹಾನಿ ಬರಲಿಲ್ಲವೆಂದು ಹೇಳಿ ಈ ಕಾಲದ ನಿಯಮ ಶಾಸ್ತ್ರಗಳನ್ನು ಮನುಷ್ಯರ ಹಿತಕ್ಕಾಗಿ ಮಾಡಿದವೆಂದು ಸಾರ್ವಜನಿಕರಿಗೆ ತಿಳಿಸಿ ಅವರಿಗಾಗಿ ಈ ಲೇಖನವನ್ನು ಬರೆದಿರುವೆ. ಅಂತೆಯೇ ಆಪತ್ಕಾಲವಾಗಿ ಕೃಷಿಧರ್ಮವನ್ನು ಮಾಡುವುದಕ್ಕೆ ಬ್ರಾಹ್ಮಣರು ಹಿಂಜರಿಯಬಾರದೆಂದು ನನ್ನ ಪ್ರಾರ್ಥನೆ. ಆದರೆ ಇದರ ವಿಷಯದಲ್ಲಿ ಮಠಾಧೀಶರು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿ ಸಮಾಜವನ್ನು ಸುಧಾರಿಸಬೇಕೆಂದು ಅವರಲ್ಲಿ ನನ್ನ ವಿನಂತಿ. ಹೀಗೆ ಸಾಧ್ಯವಾದಷ್ಟು ಶೀಘ್ರದಲ್ಲಿ ಅವರು ಉತ್ತರ ಕೊಡುವರೆಂದು ನಂಬಿದ್ದೇನೆ.

ದಾ ಖ

ಸ್ವೀಕಾರ

ಶ್ರೀ|| ವೀರಸಂಗಪ್ಪನವರ ಆಸ್ಪತ್ರೆ ಸಂಬಂಧವಾಗಿಯೂ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ಇತರ ಸಂದರ್ಭಗಳಲ್ಲಿ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ಸಂದಾಯಾದ್ವರಾಗಿ ಸ್ವೀಕರಿಸಿದ್ದೇನೆ —ಸಂ

ಮ ಗಳಾದ

(1) ಬೆಂಗಳೂರು ತಾ|| ಗೊಟ್ಟಿಗೆರೆಯಲ್ಲಿರುವ ವೇ ವೀರಭದ್ರಾರಾಧ್ಯರ ದ್ವಿತೀಯಪುತ್ರ ಚಿ|| ರುದ್ರಮುನಿಯಾರಾಧ್ಯರಿಗೂ ಗೊಟ್ಟಿಗೆರೆ ರುದ್ರಾರಾಧ್ಯರ ಪುತ್ರಿ ಚಿ|| ಸೌ|| ಸಿದ್ಧಲಿಂಗಾಂಬೆಗೂ ನಡೆದ ವಿವಾಹಮಹೋತ್ಸವದಲ್ಲಿ ಮೈಸೂರು ಆಸ್ಪತ್ರೆ ಕಟ್ಟಡಕ್ಕೆ ಪೂರ್ವವಾಗಿ ವೀರಭದ್ರಾರಾಧ್ಯರ ಮುಖಾಂತರ ರೂ 1 (2) ಶಿವಮೊಗ್ಗ ತಾ|| ಕೆಸ್ತೂರು ಟಿ ಜಿ ಗಂಗಪ್ಪನವರ ಕುಮಾರ ಚಿ|| ಸೌ|| ಮಹಾದೇವಮ್ಮನಿಗೂ ತುಮಕೂರಿನಲ್ಲಿರುವ ಸೋಮಶೇಖರಪ್ಪನವರ ಕುಮಾರ ಚಿ|| ವೀರಭದ್ರಪ್ಪನವರಿಗೂ ನಡೆದ ವಿವಾಹಮಹೋತ್ಸವದಲ್ಲಿ ಕೆಸ್ತೂರು ಶ್ರೀ ಧನಲಕ್ಷ್ಮೀ ಕೋ ಆಪರೇಟಿವ್ ಸೊಸೈಟಿ ಪ್ರೆಸಿಡೆಂಟ್ ಜಿ ರಾಜಶೇಖರಯ್ಯನವರ ಮೂಲಕ ರೂ 1 (3) ಬೆಂಗಳೂರು ಸಿಟಿ ಬಳ್ಳಾಪುರಪೇಟೆಯಲ್ಲಿರುವ ಎಂ ನಾಗಪ್ಪನವರ ಜ್ಯೇಷ್ಠ ಪುತ್ರ ಮಲ್ಲಪ್ಪನವರ ತೃತೀಯ ಪುತ್ರಿ ಚಿ|| ಸೌ|| ಸುಶೀಲಮ್ಮನಿಗೂ ಮೈಸೂರು ಹಳೇ ಅಗ್ರಹಾರದಲ್ಲಿರುವ ಕೆಟಿ ಸಿ ದಾಸಪ್ಪನವರ ಪುತ್ರ ಚಿ|| ರಾಚಪ್ಪನವರಿಗೂ ನಡೆದ ವಿವಾಹಮಹೋತ್ಸವದಲ್ಲಿ ರೂ 4 (4) ಗೊಲ್ಲಹಳ್ಳಿ ರುದ್ರಪ್ಪನವರ ಅಣ್ಣಂದಿರು ಜಿ ಮರಿಯಪ್ಪನವರ ಮಗ್ಗಳು ಚಿ|| ನಂಜಪ್ಪನವರಿಗೂ ಬೆಂಗಳೂರು ಸಿಟಿ ಚಾಮರಾಜಪೇಟೆಯಲ್ಲಿರುವ ಬಸಪ್ಪನವರ ಮೊಮ್ಮಗಳು ಚಿ|| ಸೌ|| ಗೌರಮ್ಮನಿಗೂ ನಡೆದ ವಿವಾಹಮಹೋತ್ಸವದಲ್ಲಿ 2 ರೂ ಒಟ್ಟು 4 ರೂ ಡ್ರಾಫ್ಟ್ ಮೈ ವಿ ಅಯ್ಯನವರ ಮೂಲಕ

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ತಿಳಿಯಬೇಕು —ಸಂಪಾದಕ

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ

ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವ ಲೇಖನ ವಿಷಯಗಳು ನಿಷ್ಪಕ್ಷಪಾತವಾಗಿಯೂ, ಸಾರ್ವಜನಿಕವಾಗಿಯೂ, ಸಂಕ್ಷಿಪ್ತವಾಗಿಯೂ ಸ್ಪಷ್ಟಾಕ್ಷರಗಳಿಂದ ಬರೆಯಲ್ಪಟ್ಟವಾಗಿಯೂ ಇರಬೇಕಲ್ಲದೆ ಬರೆದವರ ಹೆಸರು ವಿಳಾಸಗಳೊಡನೆ ನಮ್ಮ ಕೈಸೇರುವಂತೆ ಕಳುಹಿಸಬೇಕು. ಈ ನಿಬಂಧನೆಗೆ ವಿರುದ್ಧವಾದ ಲೇಖನಗಳು ಬಂದಿತಾದರೆ ಪ್ರಕಟಿಸಲ್ಪಡುವುದಿಲ್ಲವೆಂದೂ ಅನೇಕರು ಏಕಪಕ್ಷವಾದ ಲೇಖನಗಳನ್ನು ಬರೆದು ಕಳುಹಿಸುತ್ತಿರುವುದರಿಂದ ಅವುಗಳನ್ನು ಪ್ರಕಟಿಸಲು ಸಾಧ್ಯವಾಗಿರುವುದಿಲ್ಲವೆಂದೂ ನಮಗೆ ಪತ್ರ ಬರೆಯುತ್ತಿರುವವರು ಇತರರ ನಡತೆಯ ಬಗ್ಗೆ ಯಾವ ಪತ್ರವ್ಯವಹಾರವೂ ಈ ಸ್ಥಳದ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂಬ ಅಂಶವನ್ನು ಸಹೃದಯರು ಗಮನಿಸಬೇಕು—ಸಂ

ಪೀರನಪುರಕ್ಕೆ ಗೌರವಪ್ರಾಪ್ತಿ

ಗುಂಡ್ಲುಪೇಟೆ ತಾ|| ಎಲ್ಲಹಳ್ಳಿ ಪಟೇಲ್ ಮ|| ಚಿಕ್ಕಮಲ್ಲಪ್ಪನವರ ಅಳಿಯಂದಿರು ಪೀರನಪುರದ ಪಟೇಲ್ ಮ|| ಪುಟ್ಟಪ್ಪನವರ ಮಗ ಮ|| ಎ ಪಿ ನಾಗಮಲ್ಲಪ್ಪನವರು ಮೈಸೂರು ಮಹಾರಾಜಾ ಕಾಲೇಜಿನಲ್ಲಿ ವ್ಯಾಸಂಗಮಾಡುತ್ತಿದ್ದು ಈಚೆ ನಡೆದ ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಶೇಕಡ 66 ರಷ್ಟು ಪಾಸಾಗಿರುವರೆಂದು ತಿಳಿಸಲು ಬಹಳ ಸಂತೋಷವಾಗುತ್ತದೆ. ಈ ತಾಲ್ಲೂಕಿನ ವೀರಶೈವರಲ್ಲಿ ಇಷ್ಟರ ಮಟ್ಟಿಗೆ ವಿದ್ಯೆ ಪಡೆದು ಓದಿ ಈ ಪರೀಕ್ಷೆಯನ್ನು ಈವರೆಗೆ ಯಾರೂ ಮಾಡಿರಲಿಲ್ಲ. ಈ ಮ|| ಎ ಪಿ ನಾಗಮಲ್ಲಪ್ಪನವರು ಇನ್ನೂ ಬಹಳ ಚಿಕ್ಕವಯಸ್ಸಿನವರಾದುದರಿಂದ ಬಿ ಎ, ಮೊದಲಾದ ದೊಡ್ಡ ಪರೀಕ್ಷೆಗಳಿಗೆ ಓದಿ ಪ್ಯಾಸುಮಾಡಿ ತಾವು ಅಭಿವೃದ್ಧಿ ಹೊಂದುವುದಲ್ಲದೆ ತಮ್ಮ ಮನೆತನಕ್ಕೂ ನಮ್ಮ ತಾಲ್ಲೂಕಿಗೂ ಗೌರವವನ್ನು ತರುವರೆಂದು ಆಶಿಸುವ ವಿದ್ಯಾಭಿಮಾನಿ

ನಾಯಕರ ಸಂಘ, ಚಿತ್ರದುರ್ಗ.

ಗುಬ್ಬಿ ಶ್ರೀ ಚನ್ನಬಸವೇಶ್ವರ ಥಿಯೇಟ್ರಿಕಲ್ ನಾಟಕ ಕಂಪನಿಯ ಪ್ರೊಪ್ರೈಟರ್ ವಿನೋದರತ್ನಾಕರ ಮ|| ಜಿ. ಹೆಚ್. ವೀರಣ್ಣನವರು ತಾ|| 8-6-32 ನೇ ದಿವಸ ಚಿತ್ರದುರ್ಗದಲ್ಲಿ "ವೀರಸಿಂಹ" ಎಂಬ ನಾಟಕವನ್ನಾಡಿಸಿ ಬಂದ ಉತ್ಪತ್ತಿಯಲ್ಲಿ 211 ರೂ ಗಳನ್ನು ಚಿತ್ರದುರ್ಗದ ನಾಯಕರ ಸಂಘದ ವಿದ್ಯಾರ್ಥಿನಿಲಯದ ಕಟ್ಟಡಕ್ಕೆ ಕೊಟ್ಟು ಉಪಕರಿಸಿದರು. ರಂಗಭೂಮಿಯ ಧನಾರ್ಜನೆಗೆ ಮಾತ್ರವಲ್ಲದೆ ಜನತೆಯ ಏಳ್ಗೆಗೂ, ಸಾಧನ ಸಾಮಗ್ರಿಗಳ ಸಹಾಯವಾಗಿ ಉಪಯೋಗವಾಗಬೇಕೆಂಬ ಅವರ ಸದುದ್ದೇಶವು ಶ್ಲಾಘನೀಯವಾದುದು. ಈ ಸಂಘದವರೂ ಉಪಕಾರಸ್ಮರಣೆಯಿಂದ ಇವರಿಗೆ ವಂದನೆಗಳನ್ನರ್ಪಿಸುತ್ತಾರೆ. ಇವರ ನಾಟಕ ಕಂಪನಿಯವರು ಇದೇ ರೀತಿ ಇತರ ಸಂಘ ಸಂಸ್ಥೆಗಳಿಗೂ ಸಹಾಯ ಮಾಡುತ್ತ ಬರಬೇಕೆಂದು ಪ್ರಾರ್ಥಿಸುತ್ತೇವೆ

ಪಿ ಚನ್ನಬಸಪ್ಪ ಕಾರ್ಯದರ್ಶಿ

ಸಂಸ್ಕೃತ ವಿದ್ಯಾಪ್ರೋತ್ಸಾಹ

ವೀರಶೈವ ಕನ್ನಡದ ಏಳ್ಗೆಗೆ ಗುರುವರ್ಗದವರು ವಿದ್ಯಾಭಿವೃದ್ಧಿಯ ಬಗ್ಗೆ ಎಷ್ಟು ಆವಶ್ಯಕವೋ ಧಾರ್ಮಿಕ ವಿದ್ಯಾಭಿವೃದ್ಧಿಯೂ ಅಷ್ಟೇ ಆವಶ್ಯಕವೆನ್ನಿಸಿಕೊಂಡಿದೆ. ಅವಶ್ಯಕತೆಯನ್ನರಿತು ಬೇರೆ ಬೇರೆ ಮಠಗಳವರು ಸಂಸ್ಕೃತ ವಿದ್ಯೆಯನ್ನು ಪ್ರಚಾರಪಡಿಸಲು ಸಂಸ್ಥೆಗಳನ್ನು ಏರ್ಪಡಿಸಿರುವುದು ಸಂತೋಷಕರವಾಗಿದೆ. ಈ ಉದ್ದೇಶದಿಂದಲೇ ಈಚೆಗೆ ಅನೇಕ ಸಂಸ್ಕೃತ ಪಾಠಶಾಲೆಗಳೂ, ಕಾಲೇಜುಗಳೂ ಸ್ಥಾಪಿಸಲ್ಪಟ್ಟಿವೆ. ಈ ಪೈಕಿ ಹುಬ್ಬಳ್ಳಿ ಶ್ರೀ ಸಿದ್ಧಾರೂಢ ಮಹಾಸ್ವಾಮಿಗಳ ಶಾಲೆಯು ಒಂದಾಗಿದೆ. ಇದರ ಪುರೋಭಿವೃದ್ಧಿಗಾಗಿ ಅನೇಕ ಮಹನೀಯರು ಧನಸಹಾಯ ಮಾಡಿರುವರು. ಇತ್ತೀಚೆಗೆ ನಡೆದ ಸಭೆಯಲ್ಲಿ ಅನೇಕರು ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಡುವುದಾಗಿ ವಾಗ್ದಾನ ಮಾಡಿರುವರು. 500 ರೂ ಗಳನ್ನು ದಾನ ಮಾಡಿದ ಮಹನೀಯರು ಧಾರ್ಮಿಕ ವಿದ್ಯೆಯಲ್ಲಿ ತಮಗಿರುವ ಅಭಿಮಾನವನ್ನು ವ್ಯಕ್ತಗೊಳಿಸಿರುವರು. ಮುಂದೆ ನಮಗೆ ಶ್ರೀಸಿದ್ಧಲಿಂಗೇಶ್ವರಸ್ವಾಮಿಯು ಸದಾ ಸ್ಥಿರತರವಾದ ಆರೋಗ್ಯೈಶ್ವರ್ಯಗಳನ್ನು ಅನುಗ್ರಹಿಸಲೆಂದು ಹಾರೈಸುವ ಸಂಸ್ಕೃತ ವಿದ್ಯಾರ್ಥಿ

ಶ್ರೀ ಬಸವರಾಜ ವಾಚನಾಲಯಕ್ಕೆ ಧನಸಹಾಯ

ಹುಲಗೇರಿ ಶ್ರೀ ಹಾಲಸಿದ್ಧೇಶ್ವರ ಕಂಪೆನಿಯವರು ಪರತಂತ್ರದಲ್ಲಿ ಇರುವ ಮಾತೆಯನ್ನು ಸ್ವತಂತ್ರಳನ್ನಾಗಿ ಮಾಡುವ ರಾಷ್ಟ್ರವೀರರುಗಳ ಪ್ರಯತ್ನಗಳಂತೆ ಇವರಾದರೂ ಮಾತೃಭಾಷೆಯಾದ ಕನ್ನಡ ಭಾಷೆಯಲ್ಲಿ ನಾಟಕರಂಗದಿಂದ ಮಾಡುವ ಸೇವೆಯನ್ನು ಶ್ರೀ ಮತ್ತು ಬಿ ಎ ಎಂಬ ಪ್ರಯೋಗಗಳನ್ನು ನೋಡಿದರೆ ಪುರುಷರನ್ನು (ಪತಿಗಳನ್ನು) ಸನ್ಮಾರ್ಗಗಾಮಿಗಳನ್ನಾಗಿ ಮಾಡುವ ಜವಾಬ್ದಾರಿಯು ಸ್ತ್ರೀಯರ (ಸತಿಯರ) ಮೇಲೆ ಎಷ್ಟು ಇರುವದೆಂಬುದು ತಿಳಿಯುವದು. ಈ ಕಂಪೆನಿಯವರು ತಮ್ಮ ಮುಕ್ಕಾಮಿನಲ್ಲಿ 66 ನಾಟಕಗಳನ್ನು ಆಡಿದ ಖರ್ಚು ತೆಗೆದು ಉಳಿದ ಹಣದಿಂದ ನಡೆಯುವ ಧರ್ಮಾರ್ಥ ವಾಚನಾಲಯ ಸ್ಥಾಪಿಸಿ ಸಹಾಯ ಮಾಡಿದುದಕ್ಕಾಗಿ ಕೊಟ್ಟಿರುವರು. ಇವರ ಉದಾರತೆಯನ್ನು ನೋಡಿ ಸಂತೋಷವಾಗಿದೆ. ಇವರು ಹೊರಡುವಾಗ ನಮ್ಮ ಈ ಊರ ಮುಕ್ಕಾಮಿನಲ್ಲಿ ಸದರಿ ವಾಚನಾಲಯಕ್ಕೆ ಶ್ರೀ ಎಂಬ ನಾಟಕದ ಉತ್ಪನ್ನದ ಅರ್ಧಭಾಗವನ್ನು ಕೊಟ್ಟು ಪ್ರೋತ್ಸಾಹಿಸಿದ ಬಗ್ಗೆ ಇವರಿಗೆ ನಾವು ಬಹು ಋಣಿಗಳಾಗಿರುತ್ತೇವೆ. ಇಂಥಾ ನಿಸ್ವಾರ್ಥ ಬುದ್ಧಿಯ ದೇಶಾಭಿಮಾನವುಳ್ಳ ಕಂಪೆನಿಯವರಿಗೆ ರಾಷ್ಟ್ರದ ಮಹಾಜನರೂ ನಮ್ಮ ನಾಡಿನ ಮಹಾರಾಜರೂ ಒಡೆಯರೂ ಪದಕಗಳನ್ನು ಕೊಟ್ಟು ಪ್ರೋತ್ಸಾಹಿಸುವರೆಂದು ಶ್ರೀ ಬಸವಣ್ಣನವರನ್ನು ಅನನ್ಯ ಭಾವದಿಂದ ಪ್ರಾರ್ಥಿಸುತ್ತೇನೆ. ಕಾರ್ಯದರ್ಶಿ ಕರಬಸಪ್ಪ, ಮುಧೋಳ, ಗದಗ ದ ಮು

ಗುರುಮಠಕಲ್ಲು ಶ್ರೀಗಳ ಆಗಮನ ನಿರೀಕ್ಷಣೆ

ನೈಜಾಂ ಏಲಾಖಾ ಗುರುಮಠಕಲ್ಲು ಶ್ರೀಮನ್ನಿರಂಜನ ಖಾಸಾಮಠದ ಸ್ವಾಮಿಗಳವರು ಕಳೆದ ಮಾರ್ಚ ತಿಂಗಳಲ್ಲಿ ಧಾರವಾಡದಲ್ಲಿ ನಡೆದ 63 ನೇ ಪಟ್ಟದ ಪೂಜೆಗೆ ಆಹ್ವಾನಿತರಾಗಿ ನಮ್ಮ ಪ್ರಾಂತಕ್ಕೆ ದಯಮಾಡಿಸಿ ಕಳೆದ 4 ತಿಂಗಳಿಂದಲೂ ಈ ಪ್ರಾಂತದ ಸಾನಾ ಕಡೆಗಳಲ್ಲಿ ಸಂಚರಿಸಿ ಸನಾತನ ಧರ್ಮದ ಸದುದ್ದೇಶದ ಕಾರ್ಯಗಳನ್ನು ಜರುಗಿಸುತ್ತಿರುವರು. ಮೊದಲು ಈ ಸ್ವಾಮಿಗಳು ಧಾರವಾಡ ಲಿಂಗಾಯತ ವಿದ್ಯಾವರ್ಧಕ ಸಂಘದ ಪ್ರಮುಖ ಜನರ ಸಭೆಯಲ್ಲಿ ಸ್ವಲ್ಪಕಾಲ ಭಾಷಣಮಾಡಿ ಸಭಿಕರನ್ನು ಆಕರ್ಷಿಸಿದರು. ಅಲ್ಲಿಂದ ಶ್ರೀಗಳು ಹೋದ ಕಡೆಗಳಲ್ಲಿ ಅವರ ವ್ಯಾಖ್ಯಾನ ಕೇಳಲು ಜನರು ಉತ್ಸಾಹದಿಂದ ಕೂಡಿ ಬರುತ್ತಿದ್ದರು. ಶ್ರೀಗಳ ಸರಳಸ್ವಭಾವ, ಸ್ವಾಮಿನಿಷ್ಠೆ, ಸಮಾಜೋದ್ಧಾರದ ಕಳಕಳಿ ಈ ಸದ್ಗುಣಗಳು ಇವರಲ್ಲಿ ಎಲ್ಲರಿಗೂ ಎದ್ದು ಕಾಣುತ್ತವೆ. ಇವರು ಉಳಿದ ಕ್ಷೇತ್ರಕ್ಕೆ ಪ್ರಯಾಣ ಮಾಡಿ, ಬೇರೆ ಬೇರೆ ಧಾರ್ಮಿಕ ಕಾರ್ಯಗಳನ್ನು ನಡೆಸಿ ಈ ಪ್ರಾಂತದ ಜನರಿಗೆ ಅನುಕೂಲ ಮಾಡಿಕೊಟ್ಟಿರುವರು. ಯಾತ್ರೆಗಾಗಿ 7 8 ತಿಂಗಳುಗಳನ್ನು ಯಾತ್ರಿಕರ ಸಹಾಯದಿಂದ ವಿಶ್ರಮಿಸಿಯೂ ಯಾತ್ರಿಕರ ಅನೇಕ ತೊಂದರೆಗಳನ್ನು ನಿವಾರಿಸಿ ಆಗ ಅವರನ್ನು ಶ್ರದ್ಧೆಯಿಂದ ಶ್ರೀ ಗೋಕರ್ಣ ಕ್ಷೇತ್ರಕ್ಕೆ ಪ್ರಯಾಣಮಾಡಿ, ವೀರಶೈವ ಯಾತ್ರಿಕರ ತೊಂದರೆಗಳನ್ನು ಕಣ್ಣಾರೆ ಕಂಡು ಅದರ ನಿವಾರಣೆಗಾಗಿ ಅಲ್ಲಿ ಸೇರಿದ ಯಾತ್ರಿಕರಲ್ಲಿ ವೀರಶೈವ ಸಭೆಯನ್ನು ಸೇರಿಸಿ, ಅಲ್ಲಿಂದ "ವೀರಶೈವಾಶ್ರಮ" ವನ್ನು ಸ್ಥಾಪಿಸಲು ನಿರ್ಧರಿಸಿದರು. ಸಭೆಯಲ್ಲಿ ಸುಮಾರು 500 ರೂ ಗಳು ವಾಗ್ದಾನವಾದವು. ಸುಮಾರು ರೂ ಗಳು ಕೂಡಿದವು. ಈ ಮಹತ್ವದ ಕಾರ್ಯವನ್ನು ಚಿತ್ರದುರ್ಗದ ಜಗದ್ಗುರುಗಳ ಸಹಾಯದಿಂದ ಶೀಘ್ರದಲ್ಲಿಯೇ ಪೂರೈಸಲಾಗುವುದು. ಇವರು ತೆಲಂಗಾಣ ಜಿಲ್ಲೆಯಲ್ಲಿ ಸಂಚಾರಮಾಡಿ ಬಾಗೇವಾಡಿ ಮೊದಲಾದ ಕಡೆಗಳಲ್ಲಿ ಶಾಖಾಸಂಘ, ವಾಚನಾಲಯ ಮೊದಲಾದ ಸ್ಥಾಪನೆಗಳನ್ನು ವಿರ್ಪಾಟುಮಾಡಿದರು. ನಿಮ್ಮ ಈ ಶಾಂತಿವೀರಸ್ವಾಮಿಗಳವರು ಹುಬ್ಬಳ್ಳಿಯ ಜಗದ್ಗುರುಗಳೊಡನೆ ಸನಾತನ ಶ್ರೇಯಸ್ಸಾಧಕವಾದ ಕೆಲಸ ಮಹತ್ವದ ಕಾರ್ಯಗಳ ನಿರೂಪಣೆ ಮಾಡಿ ಹುಬ್ಬಳ್ಳಿಗೆ ದಯಮಾಡಿಸಿ 10|6 ದಿವಸದಲ್ಲಿದ್ದರು. ಇವರ ಸನಾತನ ಶ್ರೇಯಸ್ಸಿಗಾಗಿ ಹೋರಾಡುವುದಲ್ಲದೆ ಪರಂಪರಾಗತ ಸ್ತ್ರೀ ಸಂರಕ್ಷಣೆಯವರು ಇವರ ಹಿರಿಮೆಯ ಪಾತ್ರರಾಗಿದ್ದಾರೆ. ವೀರಶೈವ ವಿವೇಕಾನಂದರೆನಿಸಿರುವರು. ಈ ಶ್ರೀಗಳ ಕೀರ್ತಿ, ವಿದ್ಯಾ, ಗಾಂಭೀರ್ಯದಿಂದ ಕೂಡಿದ ಆಳ್ವಿಕೆಯಾದ ಶಿಕ್ಷಣ ಧಾರ್ಮಿಕ ವಿಚಾರ ಮೇಲೆ ಬಹು ಪರಿಣಾಮವಾಗಿ ಜಗದಲ್ಲಿ ಪ್ರಖ್ಯಾತಿ ಗಳಿಸಿರುವರು. ಇವರು ತಮ್ಮ ಪೂರ್ವಾಶ್ರಮವನ್ನು ಬಿಟ್ಟು ಧರ್ಮಬೋಧನೆಯಲ್ಲಿಯೇ ನಿರತರಾಗಿರುವರು. ಆದುದರಿಂದ ನಮ್ಮ ನೈಜಾಂ ಪ್ರಾಂತಕ್ಕೆ ದಯಮಾಡಿಸಲು ಅನೇಕರಿಂದ ಅರ್ಜಿಗಳು ಬಂದಿವೆ. ಅದರ ಸಂಬಂಧವಾಗಿ ಸಭೆ ನಡೆಸಿ ಅಭಿಪ್ರಾಯ ಸಂಗ್ರಹಿಸಿ ಆ ಸದ್ಗುಣ ಸಂಪನ್ನರಾದ ಕೈಗಳಿಂದ ಆಶೀರ್ವಾದ ಪಡೆಯಬೇಕಾಗಿದೆ. ಈ ವರೆಗೆ ಈ ಶ್ರೀಗಳು ಹುಬ್ಬಳ್ಳಿಯಿಂದ ಬೆಳೆಸಿದ ನಿಂತ ಪರಿ, ಶ್ರೀ ಭಗವಂತನ ಕೃಪೆಯಿಂದ ಇವರ [redacted] ರಾಂತವರ ಶ್ರೀಗಳು ನಮ್ಮ [redacted] ರಾಗಿರುವರೆಂದು ಪ್ರಾರ್ಥಿಸುತ್ತೇನೆ

ಮಕ್ಕಳಿದ್ದರೆ ಮನೆ ಚಂದ.

ಬಂಜೆತನದಿಂದ ಮುಕ್ತರಾಗುವಿರಿ

ಮಕ್ಕಳ ಸ್ಲೋಗ | **ಗರ್ಭಧಾರಣ ಸಂಜೀವನಿ** | ಹಿಂತಿಸ ಬೇಡಿರಿ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಮುಟ್ಟಸ್ನಾನ ಆಗುವವರೆಗೆ ಪ್ರತಿ ಸಾಲೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆಗಿರುವಿ. ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ

ಪ್ಪಿ. ಎಸ್. ಕಾಬನೆ. ಮಿರ[redacted]

ಶ್ರೀ ಜಗದ್ಗುರು ಕಾಶೀ ಪೀಠದ ದ್ವಿತೀಯ ವಾರ್ಷಿಕೋತ್ಸವ

ಕೆನ್ನಳ್ಳಿಯ ಮಹತ್ತು ಶಿವಾಚಾರರ

[illegible]

ಉತ್ಸವಭಾಗಿ

ಆಸ್ಥಾನವಿದ್ವಾನ್ ಶ್ರೀಮಾನ್ ವೇದಮೂರ್ತಿ ಬಿ ಎಂ ತ್ರ್ಯಂಬಕ ಸಿದ್ಧಲಿಂಗಶಾಸ್ತ್ರಿಗಳವರೂ ಅವರ ದಿಗ್ದರ್ಶನ ಕಾವ್ಯವಿಮರ್ಶೆಯೂ

(ಲೇಖಕ—ಶ್ರೀ ಎಚ್ ಗೋಪಾಲಕೃಷ್ಣವಾಚಾರ್ಯ ಕರ್ಣಾಟಕ ಪಂಡಿತರು ಟ್ರೈನಿಂಗ್ ಕಾಲೇಜು, ಮೈಸೂರು)

ದಿಗ್ದರ್ಶನಂ

(ಜೂನ್ ತಾ|| ೨೦ರ ಸಂಚಿಕೆಯಿಂದ ಮುಂದುವರಿದುದು)

[illegible]

ಕಂದ|| ನರಪತಿಲಕ್ಷಣ ...
ಸರಸಾಲಂಕಾರದೊಳ್ ...
ಕರಮೊಪ್ಪಿರಲುಪಮಾಲಂಕಾರದೊಳಿರ್ಪಂತಿರ್ ...

[illegible]

ಉತ್ತಮ ಶಿಷ್ಯರು ...

ಶ್ರೀ ಜಗದ್ಗುರು ಗಂಗಾಧರ ಸಂಸ್ಕೃತಕಾಲೇಜು, ಹುಬ್ಬಳ್ಳಿ

ಈ ಕಾಲೇಜಿನಿಂದ ಈಸಾರಿ ಕಲಕತ್ತಾ ಪರೀಕ್ಷೆಗೆ ಸಾಹಿತ್ಯ ಮಧ್ಯಮದವರು ೭ ಅಧ್ಯಯನವರು ... ೪ ರಲ್ಲಿ ೩ ವಿದ್ಯಾರ್ಥಿಗಳು ಪಾಸಾಗಿರುತ್ತಾರೆ ... [illegible]

ಪ್ರಿನ್ಸಿಪಾಲ ಚಂದ್ರಶೇಖರಶಾಸ್ತ್ರಿಗಳು ವ್ಯಾಕರಣತೀರ್ಥ

ಜೋರೆಲು ಹುಬ್ಬಳ್ಳಿ

ಕಾಶೀ ಶ್ರೀ ಜಗದ್ಗುರು ಮುರುಘಾಮಠದ ಜಯದೇವ ಬೋರ್ಡಿಂಗಿನ

ವಿದ್ಯಾರ್ಥಿಗಳ ೧೯೩೨ ನೇ ಇಸವಿಯ ಪರೀಕ್ಷೆಯ ಫಲಿತಾಂಶ

೧ ಗುರುಸಿದ್ಧಶಾಸ್ತ್ರಿ ಹಿರೇಮಠ (ಮಧುರ ಯೂನಿವರ್ಸಿಟಿ) ಸಾಹಿತ್ಯ ಆಚಾರ್ಯ ೨ ... ಶಂಭುಲಿಂಗಶಾಸ್ತ್ರಿ ... ಸಾಹಿತ್ಯತೀರ್ಥ ... ಕಾಶೀ (ಕಲಕತ್ತ ಯೂನಿವರ್ಸಿಟಿ) ಸಾಹಿತ್ಯತೀರ್ಥ ೫ ಜಯದೇವಶರ್ಮ ಚಿತ್ರದುರ್ಗ (ಬನಾರಸ್ ಕ್ವೀನ್ಸ್ ಕಾಲೇಜು) ವ್ಯಾಕರಣ ಮಧ್ಯಮ ... [illegible]

ಅಂತು ೧೪ ಜನ ವಿದ್ಯಾರ್ಥಿಗಳು ಈ ಬೋರ್ಡಿಂಗಿನಿಂದ ಪರೀಕ್ಷೆಗೆ ಕುಳಿತಿದ್ದು ೧೪ ಜನರೂ ಉತ್ತೀರ್ಣರಾಗಿದ್ದಾರೆ ... [illegible]

ಗುರುಸಿದ್ಧ ಟಿ ಬೆಳ್ಳಿಗಿ, ಸೆಕ್ರೆಟರಿ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ, ಬೆಂಗಳೂರು.

ಲಗ್ನ ಮೊದಲಾದ ಶುಭಕಾರ್ಯಗಳಲ್ಲಿ ಶೇಖರಿಸಿ ಕಳುಹಿಸಿದ ಫಂಡಿನ ಹಣದ ತಪಸೀಲು—

ಮೈ|| ಗಳದ

(೧) ಚಾಮರಾಜನಗರದ ... ನಂಜುಂಡಪ್ಪನವರ ಮಗ ಚಿ|| ... [illegible]

(೨) ... ಸೆಕ್ರೆಟರಿ ... [illegible]

ಮೈ ವೀ ವಿದ್ಯಾಭಿವೃದ್ಧಿ ಫಂಡು ಸಂಘ

ಹಸುಗೆ ಕಿತ್ತಳೆಗಿಡಗಳು.

ನಮ್ಮಲ್ಲಿ ೭ ಅಡಿಯಿಂದ ೪ ಅಡಿ ವರೆಗೆ ಎತ್ತರವಿರುವ ಬೀಜದ ಹಸುಗೆ ಕಿತ್ತಳೆ ಗಿಡಗಳು ೧೦೦ ಗಿಡಗಳಿಗೆ ೧೦ ರೂ ಗಳಂತೆ ಕ್ರಯಕ್ಕೆ ದೊರೆಯುತ್ತವೆ ಅಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆದು ಪರಿಶೀಲಿಸಿಕೊಳ್ಳಿರಿ

ವಿಳಾಸ ಜಂಗಮರ ಸಣ್ಣಯ್ಯ ಯಾನೆ ಕರಿಬಸವಯ್ಯ,

... ಗುಡಗಳಲೆ ಗ್ರಾಮ ಶನಿವಾರ ಸಂತೆ ಪೋಸ್ಟು ಕೊಡಗು

ನಾರಿನವೇಲ್ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಬರುವುದಿಲ್ಲ ನಾರಿನವರು ಜರೂರ ತರಿಸಿ ಕೊಳ್ಳಿರಿ. ಕಿ ೧॥ ರೂ ಟ ಖ ೫ ಆಣೆ

ಪತ್ತಾ—ವೈದ್ಯ ಪ್ಪಿ ಎಸ್ ಕಾಪಸೆ, ಮಿರಜ

10 M C

೧೯೩೨ ನೆಯ ಇಸವಿ ಜೂನ್ ತಾ|| ೨೭ ರಿಂದ ಜುಲೈ ತಾ|| ೩ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ನೆಯ, ಅಂಗಿರಸನಾಮಸಂವತ್ಸರದ ಜ್ಯೇಷ್ಠ ಬಹುಳ ನವಮಿಯಿಂದ ಜ್ಯೇಷ್ಠ ಬಹುಳ ಅಮಾವಾಸ್ಯೆ ವರೆಗಿನ ಪಂಚಾಂಗ

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಿಥುನ ಮಾಸ
27	ಸೋಮ	ನವ	30 6	ರೇವ	26 10	14
28	ಮಂಗಳ	ದಶ	33 59	ಅಶ್ವಿ	32-33	15
29	ಬುಧ	ಏಕಾ	39 6	ಭರ	39-10	16
30	ಗುರು	ದ್ವಾದ	43 55	ಕೃತ್ತಿ	40 33	17
1	ಶುಕ್ರ	ತ್ರಯೋ	48 7	ರೋಹಿ	51 10	18
2	ಶನಿ	ಚತು	51 36	ಮೃಗ	56-13	19
3	ಭಾನು	ಅಮಾ	53 41	ಆರ್ದ್ರಾ	60	20

(೧) ಮಳೆನಕ್ಷತ್ರ ಆರ್ದ್ರಾ ೩ ನೆಯ ಪಾದ (೨) ಮಳೆನಕ್ಷತ್ರ ಆರ್ದ್ರಾ ೪ ನೆಯ ಪಾದ

... ವೈ ವಿರೂಪಾಕ್ಷಯ್ಯನವರಿಂದ ಪ್ರೆಸ್ ಎಲ್ಲಿ ... ಸ್ಪ್ರಕಟಿಸಲ್ಪಟ್ಟಿತು

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು

[illegible]

[ಸ್ಥಳದವರಿಗೆ ವಾರ್ಷಿಕ ಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸೆ ೧೯೩೨ ನೆಯ ಇಸವಿ ಜುಲೈ ತಾರೀಖು ೪ ನೆಯ ಸೋಮವಾರ [ಸಂ. ೩೨

MYSORE SANDALWOOD OIL
Distilled in
GOVERNMENT FACTORIES
GUARANTEED B P P J & AM 4 P STANDARDS
PROVIDES
Excellent Base for the manufacture of Soaps, Perfumes and other Toilet preparations of the Highest quality
USED ALL THE WORLD OVER
BUY A BOTTLE TO-DAY
Available in Sealed Aluminium Bottles
MYSORE GOVERNMENT SANDALWOOD OIL FACTORY,
BANGALORE
6 [00—1]

THE MYSORE AGRICULTURAL SCHOOL, HEBBAL, BANGALORE
Notification No A S M GI 225 of 31-32 dated 21st June 1932

In supersession of the previous notification No A S M GI 225 of 31—32, dated 22nd April 1932 published in the Mysore Gazette Part III, Pages 798-799 dated 19th May 1932, the time for sending up the applications for admissions to the Mysore Agricultural School at Hebbal, Bangalore, has been extended to 10th July 1932 and that of the entrance examination has been postponed to 17th July 1932 at 12 noon, as the results of the S S L C Examination have not yet been declared

V K BADMI
Principal

[3—]

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ
ವಿರಾಜಪೇಟೆಯಲ್ಲಿಯ ಪ್ರಸಿದ್ಧ ವೈದ್ಯ ಕಿಳಾವನೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕದ [ಸ್ವರ

ಧಿಕ್ಕರಿಸಿದರ ಕ್ಷೀಣತೆ ಕಾಯ್ದು ಕೊಳ್ಳುವಿರಿ

[illegible]

ಸ್ತ್ರೀರೋಗ ನಿವಾರಣೀ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

ಪತ್ರವ್ಯವಹಾರಕ್ಕೆ ವಿಳಾಸ ಮಾಲಕ ವೈದ್ಯ ... ಮು. ಪೋ. ಮಿರಜ. ಎಂ. ... —41]

ಲಗ್ನಪತ್ರಿಕೆಗಳು

ಮುದ್ರಣಕ್ರಮ

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಸ್ವಲ್ಪಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ ಪಿ ಸೇರಿ
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

[illegible]

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್. ಪೋ. ಬಾ. ...

ಮೈಸೂರು ಸ್ಟಾರ್

೧೯೩೩ ನೆಯ ಇಸವಿ ಜುಲೈ ತಾ|| ೪ ನೆಯ ಸೋಮವಾರ

R. T. C. DISSOLVED

Whatever doubts there might have been entertained about the fortunes of the Round Table Conference few were prepared for its dissolution in such an unceremonious manner as Sir Samuel Hoare, the Secretary of State for India did at the House of Commons. When H. E. the then Viceroy Lord Irwin referred to the formation of the Round Table Conference he made it quite certain that it should enjoy the fullest freedom as regards its functions, and that its conclusions would form the basis of the proposals which would be later submitted to the Parliament. The Prime Minister in his speech on 1st December 1931 when he proposed setting up expert committees to work in India on questions of Finance, Franchise and Indian States, with a Consultative Committee expressly stated that in the end they would have to meet again "for final review of the whole scheme". Further, when the approval of the Indian policy was sought at the hands of the Parliament, the Premier assured that the R. T. C. would be continued for final review. The reports of the three committees are ready and R. T. C. should have met without delay if the assurances of the British Government had any value. But what has happened now? Sir Samual Hoare has sung the funeral song of the R. T. C. abandoned the co-operation of Indians and proposes a new scheme which provides for (1) a single Bill for autonomous constitution of provinces and for Federation of Provinces and States, (2) a Joint Select Committee of the two Houses to draft the Bill (3) the Consultative Committee to formulate its decisions on various matters yet undecided by the R. T. C. committees and (4) the summoning of a body of Indians for further discussion in London with the Joint Select Committee if the Consultative Committee cannot formulate definite proposals by that time. This means definitely that the policy of arriving at the largest possible agreement between Britain, British India and the Indian States by joint discussion which the R. T. C. stood for is given up. Whatever justification the British Government can now advance in favour of their new policy there can be no doubt that they have committed a most serious breach of its promise and prejudiced seriously its reputation in the eyes of the moderate opinion of India which had still some faith in its sense of fairness and honour. It evidently means that the characterisation of the R. T. C. as a bid debating society by Mahatma Gandhi has only proved too true. The British were not prepared to attach any more value to its conclusions and today the whole of the R. T. C. deliberations only looks like a big tamasha and something worse a costly and wasteful tamasha. All that we can say is that we were not prepared for such a performance on the part of the British Cabinet, inspite of the fact that the Conservatives who are virtually in power in the National Government were exercising their own influence to wreck the R. T. C. method. We are not inclined to examine the definite proposals of the Secretary of State in detail. The proposal to hold up the All-India Federation till the units are prepared actually to federate has given rise to a great deal of apprehension as that would mean liberty to provincial units as well to join or not which was the last thing India bargained for. The voluntary basis for joining the Federation can only be made applicable to the Indian States but never to British India. There is also the fear that though the Bill is a single one, the time between the introduction of provincial autonomy and of the Federal Government would be too long and in fact the All-India Federation would not come about for long as innumerable difficulties would crop up meantime. It looks as though the National Government is not going to advance in practice much beyond the proposals of the Simon Commission. We do hope that the British statesmanship is not dead, for any such reactionary tendency will only weaken the link between India and Britain and surely the latter stands to suffer more by such weakening.

ಚಕ್ರಗೋಷ್ಠಿಯ ಅವಸಾನ.

ಚಕ್ರಗೋಷ್ಠಿ ಅಥವಾ ರೌಂಡುಟೇಬಲು ಕಾನ್ಫರೆನ್ಸಿನ ಪರಿಣಾಮವು ಹೇಗಾಗುತ್ತದೋ ಎಂದು ಕೆಲರು ಅನುಮಾನ ಗ್ರಸ್ತರಾಗಿರುವಲ್ಲಿ ಮತ್ತೆ ಕೆಲರು ಅದನ್ನು ನಾಶಗೊಳಿಸಲು ಸನ್ನದ್ಧರಾಗಿದ್ದರು. ಅದರಂತೆಯೇ ಕಳೆದ ಹೌಸು ಆಫ್ ಕಾಮನ್ಸ್ ಸಭೆಯಲ್ಲಿ ಅದಕ್ಕೆ ಭಾರತ ಮಂತ್ರಿಯವರಿಂದ ಅವಸಾನಪ್ರಾಪ್ತವಾಯಿತು. ಈ ರೌಂಡುಟೇಬಲು ಕಾನ್ಫರೆನ್ಸಿನ ರಚನೆಯ ಕಾಲದಲ್ಲಿ ವೈಸ್ರಾಯರಾಗಿದ್ದ ಲಾರ್ಡ್ ಇರ್ವಿನ್ ರವರು ಈ ಸಭೆಗೆ ಕಾರ್ಯನಿರ್ವಹಣದಲ್ಲಿ ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂದೂ ಅದರ ತೀರ್ಮಾನವು ಕಡೆಯಲ್ಲಿ ಪಾರ್ಲಿಮೆಂಟಿಗೆ ಕಳುಹಿಸುವ ಉಪಕ್ರಮಗಳಿಗೆ ಆಧಾರವಾಗಿರಬೇಕೆಂದೂ ಖಚಿತವಾಗಿ ಹೇಳಿದ್ದರು. ಆರ್ಥಿಕ ಚುನಾವಣೆ ಮತ್ತು ದೇಶೀಯ ಸಂಸ್ಥಾನಗಳ ಸಂಬಂಧವಾದ ಸಮಸ್ಯೆಗಳನ್ನು ಇಂಡಿಯಾದಲ್ಲಿ ಕೆಲಸಮಾಡುವ ನಿಪುಣರ ಕಮಿಟಿಗಳನ್ನು ಮತ್ತು ಒಂದು ಆಲೋಚನ ಕಮಿಟಿಯನ್ನು ರಚಿಸುವುದರ ವಿಚಾರವಾಗಿ ಪ್ರಧಾನ ಮಂತ್ರಿಗಳು 1931 ನೆಯ ಡಿಸಂಬರ್ ತಾ|| 1 ರಲ್ಲಿ ಭಾಷಣಮಾಡುವಾಗ್ಗೆ, "ರಾಜ್ಯಾಂಗ ರಚನೆಯ ಸಂಪೂರ್ಣ ವಿಧಾನವನ್ನು ಕಡೆಯಲ್ಲಿ ಪುನಃ ಪರಿಶೀಲಿಸಲು ಆರ್. ಟಿ. ಸಿ. ಪುನಃ ಸಮಾವೇಶವಾಗಬೇಕು" ಎಂದು ಹೇಳಿದ್ದರು. ಅಷ್ಟೇ ಅಲ್ಲದೆ ಭಾರತ ನೀತಿಯ ವಿಚಾರದಲ್ಲಿ ಪಾರ್ಲಿಮೆಂಟಿನವರ ಅನುಮತಿಯನ್ನು ತೆಗೆದುಕೊಳ್ಳುವ ವೇಳೆಯಲ್ಲಿ ರೌಂಡುಟೇಬಲು ಸಭೆಯು ಕಡೆಯ ನಿರ್ಧಾರವಾಗುವವರೆಗೂ ನಡೆದುಕೊಂಡು ಬರುವುದೆಂದು ಪ್ರಧಾನಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದರು. ಬ್ರಿಟಿಷ್ ಪ್ರಭುತ್ವದವರ ಭರವಸೆಗೆ ಬೆಲೆಯಿರುವ ಪಕ್ಷದಲ್ಲಿ ಮೂರು ಕಮಿಟಿಯವರ ವರದಿಗಳು ಸಿದ್ಧವಾಗಿರುವುದರಿಂದ ಅವನ್ನು ಪುನರ್ವಿಮರ್ಶಿಸಲು ರೌಂಡುಟೇಬಲು ಕಾನ್ಫರೆನ್ಸು ತಾಮಸವಿಲ್ಲದೆ ಸಮಾವೇಶವಾಗಬೇಕು. ಆದರೆ ಈಗ ಭಾರತ ಮಂತ್ರಿಗಳಾದ ಸರ್ ಸ್ಯಾಮ್ಯುಯಲ್ ಹೋರ್ ರವರು ಸಾವೇಲಿರಾಗವನ್ನು ಹಾಡಿರುವರು. ಮತ್ತು ಪ್ರಾಂತಿಕ ಸ್ವರಾಜ್ಯ ಮತ್ತು ಪ್ರಾಂತಗಳ ಹಾಗೂ ಸಂಸ್ಥಾನಗಳ ಪೆಡರೇಷನ್ನಿನ ರಚನೆಗಾಗಿ ಒಂದು ಮಸೂದೆ ತಯಾರಾಗುವುದು (2) ಈ ಮಸೂದೆಯನ್ನು ತಯಾರಿಸಲು ಕಾಮನ್ಸ್ ಮತ್ತು ಲಾರ್ಡ್ಸ್ ಸಭೆಗಳಿಂದ ಚುನಾಯಿಸಲ್ಪಟ್ಟ ಮೆಂಬರುಗಳಿಂದ ಕೂಡಿದ ಒಂದು ಕಮಿಟಿಯೇರ್ಪಾಟಾಗುವುದು (3) ಆರ್. ಟಿ. ಸಿ. ಕಮಿಟಿಗಳವರಿಂದ ಇನ್ನೂ ನಿರ್ಧಾರವಾಗದಿರುವ ವಿಚಾರಗಳನ್ನು ಆಲೋಚನ ಸಂಘದವರು ನಿರ್ಧರಿಸುವುದು (4) ಅವಧಿಯೊಳಗಾಗಿ ಆಲೋಚನ ಸಂಘದವರು ನಿರ್ದಿಷ್ಟವಾದ ಸೂಚನೆಗಳನ್ನು ಕೊಡಲು ಸಾಧ್ಯವಾಗದಿದ್ದಲ್ಲಿ ಲಂಡನ್ನಿನಲ್ಲಿ ಸಂಯುಕ್ತ ಸಂಘದವರೊಡನೆ ಕೆಲವು ವಿಷಯಗಳನ್ನು ಚರ್ಚಿಸಲು ಕೆಲ ಭಾರತೀಯರನ್ನು ಕರೆಸಿಕೊಳ್ಳುವುದು ಈ ವಿಷಯಗಳನ್ನೊಳಕೊಂಡಿರುವ ಒಂದು ಹೊಸ ಪಂಚಿಕೆಯನ್ನು ಸೂಚಿಸಿರುವರು. ಆರ್. ಟಿ. ಸಿ. ಮೂಲಕ ಬ್ರಿಟಿಷ್, ಬ್ರಿಟಿಷ್ ಇಂಡ್ಯಾ ಮತ್ತು ದೇಶೀಯ ಸಂಸ್ಥಾನಗಳು ಇವುಗಳ ಮಧ್ಯೆ ಒಡಂಬಡಿಕೆಯನ್ನು ಮಾಡಿಕೊಳ್ಳಬೇಕೆಂಬ ಆಲೋಚನೆಯು ಖಂಡಿತವಾಗಿ ತಪ್ಪಿಹೋದಂತೆ ಇದರಿಂದ ವ್ಯಕ್ತವಾಗುತ್ತದೆ. ಬ್ರಿಟಿಷ್ ಪ್ರಭುತ್ವದವರು ತಾವು ಈಗ ಹೊಸದಾಗಿ ಅನುಸರಿಸುವ ನೀತಿಯನ್ನು ಸಮರ್ಥಿಸ ಬಹುದಾದರೂ ತಮ್ಮ ವಾಗ್ದಾನವನ್ನುಲ್ಲಂಘಿಸಿ ನ್ಯಾಯಪರತೆಯಮೇಲೂ ಗೌರವದ ಮೇಲೂ ದೃಷ್ಟಿಯುಳ್ಳ ಭಾರತರು ನರಮ್ಯವಕ್ಷದವರಲ್ಲಿ ತನ್ನ ಮರ್ಯಾದೆಗೆ ಕುಂದನ್ನುಂಟುಮಾಡಿಕೊಂಡಿತೆಂಬುದರಲ್ಲಿ ಸಂದೇಹವಿಲ್ಲ. ಈ ರೌಂಡುಟೇಬಲು ಕಾನ್ಫರೆನ್ಸು ಚರ್ಚಾಸಂಘವಲ್ಲದೆ ಮತ್ತೇನೇನಲ್ಲವೆಂದು ಮಹಾತ್ಮ ಗಾಂಧಿಯವರು ಹೇಳಿದುದು ಅಕ್ಷರಶಃ ಸಿದ್ಧವಾಯಿತು. ಈ ಆರ್. ಟಿ. ಸಿ. ತೀರ್ಮಾನವನ್ನು ಬ್ರಿಟಿಷರವರು ಗೌರವಿಸತಕ್ಕವರಾಗಿರಲಿಲ್ಲವಾದುದರಿಂದ ಅದರ ನಡವಳಿಕೆಯೆಲ್ಲವೂ ಒಂದು ತಮಾಷೆ ಅದಲ್ಲೂ ವಿಶೇಷ ದ್ರವ್ಯ ನಷ್ಟಕರವಾದ ತಮಾಷೆಯಾಗಿ ಪರಿಣಮಿಸಿರುತ್ತದೆ. ಈಗಿನ ಸಾರ್ವಜನಿಕ ಪ್ರಭುತ್ವಾಧಿಕಾರದಲ್ಲಿರುವ ಕನ್ಸರ್ವೇಟಿವರುಗಳು ಆರ್. ಟಿ. ಸಿ. ಯವರ ಕಾರ್ಯಕ್ರಮವನ್ನು ಮಣ್ಣುಗೂಡಿಸಲು ಸಾಹಸಪಡುತ್ತಿದ್ದುದು ನಿಜವೆಂದು ತಿಳಿದಿದ್ದವರಲ್ಲಿಯೇ ಬ್ರಿಟಿಷ್ ಕ್ಯಾಬಿನೆಟ್ಟಿನವರು ಅಂದರೆ ಮಂತ್ರಿ ವರ್ಗದವರು ಈ ರೀತಿ ವರ್ತಿಸುತ್ತಾರೆಂದೂಹಿಸಿರಲಿಲ್ಲ. ಈಗೇರ್ಪಡಲಿಕ್ಕಿರುವ ಪ್ರಾಂತಿಕ ಸ್ವರಾಜ್ಯಪ್ರಭುತ್ವಗಳು ಫೆಡರೇಟಿಸಲು ತಕ್ಕ ಅರ್ಹತೆಯನ್ನು ಸಂಪಾದಿಸಿಕೊಂಡಮೇಲೆ ಕೇಂದ್ರ ಪ್ರಭುತ್ವ ಸ್ವರಾಜ್ಯಸ್ಥಾಪನೆಯಾಗುವುದೆಂದು ಹೇಳಿರುವುದು ಅನುಮಾನಕರವಾಗಿರುತ್ತದೆ. ಫೆಡರೇಷನ್ನಿಗೆ ತಾನಾಗಿ ಸೇರುವಂತಾಗಬೇಕೆಂಬುದು ದೇಶೀಯ ಸಂಸ್ಥಾನಗಳಿಗೆ ಅನ್ವಯಿಸುವುದಲ್ಲದೆ ಬ್ರಿಟಿಷ್ ಇಂಡ್ಯಾಕ್ಕೆ ಅನ್ವಯಿಸುವುದೇ ಇಲ್ಲ. ಈಗಿನ ಮಸೂದೆಯು ಒಂದೇ ಆಗಿರುವುದಾದರೂ ಪ್ರಾಂತಿಕ ಸ್ವರಾಜ್ಯಗಳು ಕೇಂದ್ರ ಸ್ವರಾಜ್ಯವನ್ನು ಸಂಪಾದಿಸಲು ಹಿಡಿಯುವ ಕಾಲಾವಧಿಯು ಬಹಳ ದೀರ್ಘವಾಗುವುದರಿಂದ ಮತ್ತು ಈ ಮಧ್ಯೆ ನಾನಾತರಹದ ವಿಘ್ನಗಳು ಉಂಟಾಗುವುದರಿಂದ ಅಖಿಲಭಾರತ ಫೆಡರೇಷನ್ನು ಬಹಳ ಕಾಲದವರೆಗೂ ಏರ್ಪಡಲಾರದೆಂಬ ಭಯವೂ ಇರುವುದು. ಸೈಮನ್ ಕಮಿಷನ್ನಿನ ಸೂಚನೆಗಳನ್ನು ಮೀರಿ ನ್ಯಾಷನಲ್ ಪ್ರಭುತ್ವದವರು ಮುಂದುವರಿಯುವಂತೆ ಕಾಣುವುದಿಲ್ಲ. ಪ್ರತಿಗಾಮಿ ಧೋರಣೆಯಿಂದ ಭಾರತದೇಶಕ್ಕೂ ಬ್ರಿಟನ್ನಿಗೂ ಇರತಕ್ಕ ಸಂಬಂಧವು ದುರ್ಬಲವಾಗಿ ಕಡೆಗೆ ಬ್ರಿಟನ್ನಿಗೇ ಹೆಚ್ಚು ನಷ್ಟ ಸಂಭವಿಸ ಬಹುದಾದ್ದರಿಂದ ಬ್ರಿಟಿಷ್ ರಾಜಕಾರಣತ್ವವು ಜಾಗೃತವಾಗಿರುವುದೆಂದು ನಿರೀಕ್ಷಿಸುತ್ತೇವೆ.

ಒಳದೇಶದ ವೃತ್ತಾಂತಗಳು

ಇರ್ವಿನ್ ನಾಲಾ ಕೆಳಗಿನ ರೈತರುಗಳ ಕಷ್ಟನಷ್ಟಗಳನ್ನು ಕಣ್ಣಾರ ನೋಡಿ ತಿಳಿಯಲು ದಿವಾನರು ತಮ್ಮ ಪ್ರೈವೇಟ್ ಸೆಕ್ರೆಟರಿಯವರೊಡನೆ ಈ ತಾ|| 7 ರಲ್ಲಿ ಮಂಡ್ಯದ ತಾಲ್ಲೂಕು ಸಂಚಾರ ಹೊರಡುವರು.

ಕಳೆದ ಗುರುವಾರ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರ ಚುನಾವಣೆಗಾಗಿ ನಡೆದ ಸ್ಪೆಷಲ್ ಮೀಟಿಂಗಿನಲ್ಲಿ ಅಭ್ಯರ್ಥಿಗಳಾಗಿದ್ದ ಇಬ್ಬರಲ್ಲಿ ಮ|| ಎಂ. ಬಾಲಕೃಷ್ಣಯ್ಯನವರು ತಮ್ಮ ಅಭ್ಯರ್ಥಿತ್ವವನ್ನು ಹಿಂದಕ್ಕೆ ತೆಗೆದುಕೊಂಡುದರಿಂದ ಮ|| ಬಿ. ಕೆ. ಗರುಡಾಚಾರರು ಪ್ರತಿಸ್ಪರ್ಧಿಯಿಲ್ಲದೆ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು.

ಫೈನಾನ್ಷಿಯಲ್ ಸಕ್ರೆಟರಿಯವರಾಗಿದ್ದ ಮ|| ಬಿ. ಶ್ರೀನಿವಾಸಯ್ಯಂಗಾರರು ಈ ತಾ|| 1 ರಲ್ಲಿ ಉದ್ಯೋಗದಿಂದ ನಿವೃತ್ತರಾದರು. ಇವರ ಬದಲು ಕಂಟ್ರೋಲರಾದ ಮ|| ಎಸ್. ರಾಮಣ್ಣನವರು ಫೈನಾನ್ಷಿಯಲ್ ಸೆಕ್ರೆಟರಿಯವರಾಗಿಯೂ, ಸರ್ವಿಸ್ ಸೂಪರಿಂಟೆಂಡೆಂಟರವರಾದ ಮ|| ಎಚ್. ವೆಂಕಟೇಶಯ್ಯಂಗಾರರು ಕಂಟ್ರೋಲರಾಗಿಯೂ ನಿಯಮಿಸಲ್ಪಟ್ಟಿರುತ್ತಾರಲ್ಲದೆ ಮ|| ಬಿ. ಶ್ರೀನಿವಾಸಯ್ಯಂಗಾರರು ವ್ಯಯಕರ್ತನ ಕಮಿಟಿಯವರ ಸೂಚನೆಯ ಪ್ರಕಾರ ಯಾವ್ಯಾವ ಶಾಖೆಯಲ್ಲಿ ಎಷ್ಟೆಷ್ಟು ವೆಚ್ಚವನ್ನು ಕಡಿಮೆ ಮಾಡಲು ಸಾಧ್ಯವೆಂಬುದನ್ನು ಗೊತ್ತುಮಾಡಲು 3 ತಿಂಗಳಿನ ವರೆಗೆ ಸ್ಪೆಷಲ್ ಆಫೀಸರಾಗಿ ನಿಯಮಿಸಲ್ಪಟ್ಟಿರುವರು. ಈ ಹೊಸ ಉದ್ಯೋಗವು 3 ತಿಂಗಳಲ್ಲಿಯೇ ಮುಗಿಯುವಂತೆ ತೋರುವುದಿಲ್ಲವಾದುದರಿಂದ ಕಾಲಾವಧಿ ವಿಸ್ತರಿಸಲ್ಪಡಬಹುದು.

ಈಗ 3 ವರ್ಷಗಳ ಹಿಂದೆ ಸೀಮೆಗೆ ಹೋಗಿ ಮುದ್ರಣ ಕಲೆಯಲ್ಲಿ ಹೆಚ್ಚು ಪಾಂಡಿತ್ಯವನ್ನು ಹೊಂದಿ ದೊಡ್ಡ ಪ್ರಶಸ್ತಿಯನ್ನು ಪದಕಗಳನ್ನೂ ಪಡೆದುಕೊಂಡು ಹಿಂದಿರುಗಿ ಬಂದಿರುವ ಗವರ್ನಮೆಂಟ್ ಪ್ರೆಸ್ಸು ಸಬ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮ|| ಎ. ಕೃಷ್ಣಸ್ವಾಮಿಶೆಟ್ಟಿ, ಬಿ. ಎ., ಯವರಿಗೆ ಈ ಜುಲೈ ತಾ|| 1 ರಿಂದ 3 ತಿಂಗಳು ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವುದು. ಇವರಿಗೆ ರಾಜಧಾನಿಯ ವೈಶ್ಯ ಸಮಾಜದವರು ಮಾಡಿದ ಸುಸ್ವಾಗತ ಸತ್ಕಾರ ಸಂಬಂಧವಾದ ಪತ್ರವು ಹಾರವನ್ನು ಏರಿ ಕವ ಮುದ್ರಿಸಲ್ಪಟ್ಟಿದೆ. ಇವರು ಈಗ ಪ್ರೆಸ್ಸಿನ ಸೂಪರಿಂಟೆಂಡೆಂಟರಾಗಿರುವ ಮ|| ಬಿ. ಪುಟ್ಟಯ್ಯನವರಂತೆ ತಮ್ಮ ವಿದ್ಯಾನೈಪುಣ್ಯವನ್ನು ಪ್ರದರ್ಶಿಸಿ ಮತ್ತು ಕೈಕೆಳಗಿನ ಕೆಲಸಗಾರರನ್ನು ಪ್ರೀತಿಯಿಂದಲೂ ಕರುಣೆಯಿಂದಲೂ ಕಂಡು ಅಭಿವೃದ್ಧಿಯನ್ನು ಹೊಂದುವವರಾಗಲೆಂದು ಆಶಿಸುತ್ತೇವೆ.

ಮೈಸೂರು ರೈಲ್ವೆಯಲ್ಲಿ ಬೆಂಗಳೂರಿನಿಂದ ಎನ್ನಪಟ್ಟಣಕ್ಕೂ ಎನ್ನಪಟ್ಟಣದಿಂದ ಬೆಂಗಳೂರಿಗೂ ಹೋಗಿಬರುವ 72, 73, 74 ಮತ್ತು 75 ನೇ ನಂಬರ್ ಷಟಲ್ ಗಾಡಿಗಳಲ್ಲಿಯೂ, ಬೆಂಗಳೂರಿನಿಂದ ಚಿಕ್ಕಬಳ್ಳಾಪುರಕ್ಕೂ, ಚಿಕ್ಕಬಳ್ಳಾಪುರದಿಂದ ಬೆಂಗಳೂರಿಗೂ, ಹೋಗಿ ಬರುವ 34, 36, 77 ಮತ್ತು 79 ಷಟಲ್ ರೈಲು ಗಾಡಿಗಳಲ್ಲಿ ಪ್ರಯಾಣ ಮಾಡತಕ್ಕವರುಗಳ ಅನುಕೂಲಕ್ಕಾಗಿ ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ ನಿಂದ ಊರೊಳಕ್ಕೂ ಊರೊಳಗಿನಿಂದ ಬೆಂಗಳೂರು ಸಿಟಿ ಸ್ಟೇಷನ್ನಿಗೂ ಮೇಲೆ ನಮೂದಿಸಿರುವ ಎಲ್ಲಾ ಗಾಡಿಗಳಿಗೂ ಸಿಟಿ ಸ್ಟೇಷನ್ ಗೆ ಸಕಾಲಕ್ಕೆ ಬೆಂಗಳೂರು ಸಿಟಿ ಬಸ್ಸು ಸ್ಟೇಷನ್ನಿನಿಂದ ಬಸ್ಸುಗಳು ಓಡುವಂತೆ ಏರ್ಪಾಟು ಮಾಡಿರುತ್ತಾರೆ. ಈ ಬಸ್ಸುಗಳಲ್ಲಿ ಪ್ರಯಾಣ ಮಾಡುವವರು ಹಾಲಿ ಜಾರಿಯಲ್ಲಿರತಕ್ಕ ಬಸ್ಸು ಚಾರ್ಜುಗಳನ್ನು ಕೊಡಬೇಕು ಎಂದು ಟ್ರಾಫಿಕ್ ಮ್ಯಾನೇಜರು ಪ್ರಕಟಿಸಿರುತ್ತಾರೆ.

ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ಡಿನ ವಾರ್ಷಿಕೋತ್ಸವವು ಕಳೆದ ತಾ|| 26 ನೆಯ ಭಾನುವಾರ ಲಕ್ಷ್ಮೀಪುರಂ ಮೇಟಿನಲ್ಲಿ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರಾದ ಮ|| ಟಿ. ಜಿ. ರಾಮಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತಲ್ಲದೆ, ಈ ಸೊಸೈಟಿಯ ಮೊದಲನೇ ಪ್ರೆಸಿಡೆಂಟರಾಗಿದ್ದ ಮ|| ನಾಯಕರ್ ಶೆಟ್ಟಪ್ಪ ನವರ ಛಾಯಾಚಿತ್ರದ ಅನಾವರಣೋತ್ಸವವು ಸೊಸೈಟಿ ಮುಂದಿನಲ್ಲಿ ಮ|| ಟಿ. ಜಿ. ರಾಮಯ್ಯನವರಿಂದಲೇ ನಡೆಸಲ್ಪಟ್ಟಿತು. ಈ ಉತ್ಸವಗಳಿಗೆ ಅಧಿಕಾರಿಗಳೂ ಸೊಸೈಟಿಯ ಮೆಂಬರುಗಳೂ ಆಹ್ವಾನಿಸಲ್ಪಟ್ಟಿದ್ದು ಸಂಗೀತಕ್ರಮದಿಂದಲೂ ತಾಂಬೂಲ ವಿನಿಯೋಗದಿಂದಲೂ ಸತ್ಕರಿಸಲ್ಪಟ್ಟರು. ಮ|| ಶೆಟ್ಟಪ್ಪ ನವರು ಸೊಸೈಟಿಯ ಪ್ರೆಸಿಡೆಂಟರಾಗಿದ್ದು ದಕ್ಷತೆಯಿಂದ ಕಾರ್ಯವನ್ನು ನಿರ್ವಹಿಸಿ ಸೊಸೈಟಿಯನ್ನು ಅಭಿವೃದ್ಧಿಗೆ ತಂದು ಮೆಂಬರುಗಳ ಗೌರವಕ್ಕೆ ಪಾತ್ರರಾದುದು ತಿಳಿ[illegible]

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರಾದ ... ಈ ತಾ|| ೧೬ ನೆಯ ... ರಿಟೈರ್ಡ್ ... ಸ್ಥಾನಕ್ಕೆ ... ಮ|| ... ಕೇಶವಯ್ಯಂಗಾರ್ಯರು ಪ್ರೆಸಿಡೆಂಟ್ ... ಟಿ ಕೇಶವಯ್ಯಂಗಾರ್ಯರು ಪ್ರೆಸಿಡೆಂಟ್ ಉದ್ಯೋಗದಲ್ಲಿ ರಗೊಳಿಸಲ್ಪಡುವರೆಂದೂ ಪ್ರಬಲವಾದ ವದಂತಿಯಿದೆ. ಮ|| ಕೇಶವಯ್ಯಂಗಾರ್ಯರು ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯಾಗಿದ್ದು ಗತಿಸಿದ ಬಿ. ತಿರುಮಲಾಚಾರ್ಯರ ಕುಮಾರರು ಮತ್ತು ...ಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿನ ಕಮಿಷನರಾಗಿಯೂ, ...ನಮೊಗ್ಗ ಡಿ|| ಡೆಪ್ಯುಟಿ ಕಮಿಷನರಾಗಿಯೂ ಕೆಲಸ ಮಾಡಿ ...ನ್ಯುನಿಸಿಪಾಲ್ ಆಡಳಿತವನ್ನು ಚೆನ್ನಾಗಿ ಅರಿತವರಾಗಿರುತ್ತಾರೆ ...ವರು ಬಹಳ ಸರಸಿಗಳಾಗಿಯೂ ನಿಗರ್ವಿಗಳಾಗಿಯೂ ಸ್ನೇಹಪರರಾಗಿಯೂ ಇರುವುದರಿಂದ ಇವರ ಆಡಳಿತದಲ್ಲಿ ... ಮ್ಯುನಿಸಿಪಲ್ ಕೆಲಸಗಳು ಸುಲಲಿತವಾಗಿಯೂ ... ...ಯರುಗಳಿಗೆ ಹಿತಕರವಾಗಿಯೂ ನಡೆಯುವುವೆಂದು ನಿರೀಕ್ಷಿಸುತ್ತೇವೆ

ಕಳೆದ ಮಂಗಳವಾರ ರಾಜಧಾನಿಯ ಪುರಾಭಿವೃದ್ಧಿ ...ಘ ಅಂದರೆ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ...ಗಳ ... ನಡೆದಿತು. ಆಗ ಆಯುರ್ವೇದೀಯ ...ಸ್ಪತ್ರೆಯ ಕಟ್ಟಡವನ್ನು ಸಯ್ಯಾಜಿರಾವ್ ರೋಡಿನಲ್ಲಿರುವ ...ಳೇಅರಸಿನವರ ಲಾಯದಲ್ಲಿ ೨೫,೦೦೦ ರೂ ಗಳ ವೆಚ್ಚದಿಂದ ...ಲು ನಿರ್ಧರಿಸಲ್ಪಟ್ಟಿತು ಇರ್ವಿನ್ ರೋಡಿನಲ್ಲಿ ಅಂದರೆ ಕಾಳ...ಮ್ಮನ ಗುಡಿಯ ದಕ್ಷಿಣಭಾಗದಲ್ಲಿ ... ...ಟ್ಟಿರುವ ಬೈಲುಪ್ರದೇಶವನ್ನು ಉಚಿತವಾಗಿ ಅಥವಾ ಅಲ್ಪ ಬೆಲೆಗೆ ಕೊಟ್ಟಲ್ಲಿ ೩೦,೦೦೦ ರೂ ವೆಚ್ಚಮಾಡಿ ಸುಂದರವಾದ ...ಸ್ಸಿನ ಸತ್ರವನ್ನು ಕಟ್ಟಿಸಿಕೊಡುತ್ತೇನೆಂದು ಅರಮನೆಯ ಕಂಟ್ರಾಕ್ಟರ್ ಮ|| ತಿಮ್ಮಯ್ಯಾಚಾರರು ಕೇಳಿದ್ದುದರಮೇಲೆ ...ಹಾರಾರ್ಥವಾಗಿ ಮತ್ತೊಂದು ಪ್ರದೇಶವನ್ನು ಕಲ್ಪಿಸುವುದರ ವೆಚ್ಚಕ್ಕಾಗಿ ೩,೦೦೦ ರೂ ಗಳನ್ನು ಕೊಟ್ಟು ಸತ್ರವನ್ನು ಮ್ಯುನಿಸಿಪಾಲಿಟಿಯವರ ಆಡಳಿತಕ್ಕೆ ಬಿಟ್ಟುಕೊಡಲೊಪ್ಪಿದಲ್ಲಿ ಆ ಪ್ರದೇಶವು ಉಚಿತವಾಗಿ ಕೊಡಲ್ಪಡುವುದೆಂದು ನಿರ್ಧರಿಸಲ್ಪಟ್ಟಿತು ಮೀಟಿಂಗಿನಲ್ಲೇ ಇದ್ದ ಮ|| ತಿಮ್ಮಯ್ಯಾಚಾರರು ಅದಕ್ಕೊಪ್ಪಿಕೊಂಡರು. ಮೈಸೂರು ಆನಂದರಾವ್ ...ರೋಡಿನಲ್ಲಿರುವ ಕ್ರೈಸ್ತರ ಗುಡಿ ಪಕ್ಕದ ಖಾಲಿ ನಿವೇಶನವು ಕಾನ್ವೆಂಟ್ ಗರ್ಲ್ಸ್ ಸ್ಕೂಲನ್ನು ಕಟ್ಟುವುದಕ್ಕಾಗಿ ಫಾದರ್ ...ರವರಿಗೆ ಚದರ ಗಜ ೧ ಕ್ಕೆ ೩ ಆಣೆಯಂತೆ ವಿಕ್ರಯಿಸಬೇಕಾಗಿ ನಿರ್ಧರವಾಯಿತು.

ಕೆಲಗ್ರಾಮಗಳಿಗೆ ೫೦೦೦ ರೂ ದಂಡ

ಚಿಟಿಗಾಂಗ್ ಡಿಸ್ಟ್ರಿಕ್ಟಿನಲ್ಲಿ ಕೆಲ ಗ್ರಾಮಸ್ಥರು ಶಾಸನೋಲ್ಲಂಘನದಿಂದ ನೆಮ್ಮದಿ ಭಂಗವನ್ನುಂಟುಮಾಡುತ್ತಲೂ ... ರೀತಿ ಆಚರಿಸಲು ಜನರಿಗೆ ಬೋಧಿಸುತ್ತಲೂ ಇರುವುದರಿಂದ ...ವರುಗಳಿಗೆ ಬಂಗಾಳ ಗೌರ್ನರು ೫೦೦೦ ರೂಪಾಯಿಗಳ ದಂಡವನ್ನು ವಿಧಿಸಿರುವರು.

ಕಾಂಗ್ರೆಸ್ ಮಹಾ ಸಭಾಧ್ಯಕ್ಷರು

ಅಖಿಲಭಾರತ ಕಾಂಗ್ರೆಸ್ ಮಹಾ ಸಭಾಧ್ಯಕ್ಷರಾಗಿದ್ದ ಮ|| ಗಂಗಾಧರರಾವ್ ದೇಶಪಾಂಡೆಯವರು ಶಿಕ್ಷಿಸಲ್ಪಟ್ಟುದರಿಂದ ಅವರ ಬದಲು ದಿಲ್ಲಿ ದೊಂಬಿ ... ಮುಖ್ಯ...ಶೀಲರಾದ ಡಾಕ್ಟರ್ ಕಿಚಲುಯವರು ಮಹಾ ಸಭಾಧ್ಯಕ್ಷರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ನಡ್ಯಾನಲ್ಲಿ ೧೦೦೦ ಸೆರೆ

ಕೈರಾ ಡಿಸ್ಟ್ರಿಕ್ಟ್ ಕಾನ್ಫರೆನ್ಸನ್ನು ನಡ್ಯಾದಲ್ಲಿ ನಡೆಸಲು ಪ್ರಯತ್ನಿಸಲ್ಪಟ್ಟಿದ್ದಿತು ಈ ಸಭೆಗೆ ಪರಸ್ಥಳಗಳಿಂದ ...ರುತ್ತಿದ್ದ ಜನರನ್ನು ಪೋಲೀಸಿನವರು ರೈಲ್ವೆಸ್ಟೇಷನ್ನುಗಳಲ್ಲಿ ಕಾವಲಿದ್ದು ತಡೆದು ನಿಲ್ಲಿಸಿಬಿಟ್ಟರಲ್ಲದೆ ೧೦೦೦ ಜನರವರೆಗೆ ಸೆರೆ ಹಿಡಿದಿರುತ್ತಾರೆ ಪ್ರಭಾತಫೇರಿಯಲ್ಲಿ ಭಾಗಿಗಳಾಗಿದ್ದ ಸ್ತ್ರೀಯರು ಸಹ ಸೆರೆಹಿಡಿಯಲ್ಪಟ್ಟಿರುವರು.

ಡಾಕ್ಟರ್ ಅನ್ಸಾರಿಯವರ ದೇಹಸ್ಥಿತಿ

ಈಗ ಕಾರಾಗೃಹ ಬಂಧನದಲ್ಲಿರುವ ಡಾಕ್ಟರ್ ಅನ್ಸಾರಿಯವರು ಈ ತಾ|| ೭ರಲ್ಲಿ ಬಿಡಲ್ಪಡುವರು ಇವರಿಗೆ ಕಾರಾಗೃಹ ಬಂಧನವಾದ ಮೇಲೆ ರುಂಡಿಯ ನೋವು ಪ್ರಬಲವಾಗಿ ದೇಹಸ್ಥಿತಿಯು ಬಹಳಮಟ್ಟಿಗೆ ಕೆಟ್ಟುಹೋಗಿರುವ ಪ್ರಯುಕ್ತ ಸಮರ್ಥರಾದ ವೈದ್ಯರಿಂದ ಚಿಕಿತ್ಸೆಯನ್ನು ಪಡೆಯಲು ಇವರು ಕೂಡಲೆ ಯೂರೋಪಿಗೆ ಪ್ರಯಾಣಮಾಡುವರಾಗಿ ತಿಳಿದು ಬರುತ್ತದೆ.

ಚುನಾವಣೆಯಲ್ಲಿ ಬಡಿದಾಟ

ಮಸೂಲಿಪಟ್ಟಣ ಡಿ|| ಗೆ ಸೇರಿದ ಘಂಟಶಾಲಪಾಳಂ ಎಂಬೂರಿನಲ್ಲಿ ಯೂನಿಯನ್ ಬೋರ್ಡ್ ಮೆಂಬರುಗಳ ಚುನಾವಣೆಯು ನಡೆಯುವಾಗ್ಗೆ ಅಭ್ಯರ್ಥಿಗಳ ಕಡೆಯವರಿಗೆ ಹೋರಾಟ ಬಡಿದಾಟ ನಡೆದು ೨೫ ಮಂದಿಗೆ ಗಾಯಗಳಾಗಿ ಕೆಲರು ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆ ಹೊಂದುತ್ತಿರುವರು. ಇದೇ ರೀತಿ ಚೆನ್ನ... [redacted] ...ಬಡಿದಾಟವಾಗಿ ೧೫ ಮಂದಿಗೆ ಗಾಯ [redacted]

... ನಿಷೇಧ

ಒಂದು ... ಮೇಲೆ ... ಈ ಸೇನಾ ... ಕೆಲವು ... ... ಧರ್ಮಬೋಧನೆಗಳನ್ನು ... ನಡೆಯುವ ಮತಕಾರ್ಯಗಳ ಸಂದರ್ಭದಲ್ಲಿ ಛಾಯಾ ಪಟ (ಫೋಟೊ) ಗಳನ್ನು ತೆಗೆಯಬಾರದು ಎಂದು ಗೊತ್ತುಮಾಡಲ್ಪಟ್ಟಿದೆ

ರೈಲುಬಂಡಿಯಿಂದ ಸ್ತ್ರೀ ಹೊರಗೆಸೆಯಲ್ಪಟ್ಟಳು

ಬಿಕನೀರು ಸಂಸ್ಥಾನದ ಒಬ್ಬ ಇಂಜನಿಯರ ಹೆಂಡತಿಯು ರೈಲ್ವೆ ಬಂಡಿಯ ಎರಡನೇ ತರಗತಿಯಲ್ಲಿ ಪ್ರಯಾಣಮಾಡುತ್ತಿರುವಾಗ್ಗೆ ರಾಜಪುರ ಹತ್ತಿರ ಯಾರಿಂದಲೋ ಬಂಡಿಯಿಂದ ಹೊರಗೆ ಬಿಸಾಡಲ್ಪಟ್ಟಿದ್ದು ಕಂಬಗಳ ಬಳಿ ಜ್ಞಾನತಪ್ಪಿ ಬಿದ್ದಿದ್ದಳು ಎಷ್ಟೋ ಹೊತ್ತಿನಮೇಲೆ ಯಾರೋ ಕಂಡು ಆಕೆಯನ್ನು ಆಸ್ಪತ್ರೆಗೆ ಸಾಗಿಸಿದರು ಅಲ್ಲಿ ಆಕೆಯು ಮೃತಳಾದಳು. ಆಕೆಯು ಪ್ರಯಾಣಮಾಡಿದ ಬಂಡಿಯಿಂದ ಸಾಮಾನನ್ನು ಹೊರಕ್ಕೆ ಸಾಗಿಸಿದ ... ... ರುತ್ತಾನೆ

ಮುದ್ರೆ ಯೊತ್ತುವಾಗ ಕಾಗದ ಹೊತ್ತುಕೊಂಡುದು

ದಿಲ್ಲಿಯ ಪೋಸ್ಟಾಫೀಸಿನಲ್ಲಿ ಕಾಗದಗಳಿಗೆ ಒಬ್ಬನು ಮುದ್ರೆಯೊತ್ತುತ್ತಿರುವಾಗ್ಗೆ ಒಂದು ಕಾಗದವು ಭಗ್ಗೆಂದು ಹೊತ್ತುಕೊಂಡಿತು. ಇದರಿಂದ ಮುದ್ರೆಯನ್ನೊತ್ತುವವನ ಕೈ ಸುಟ್ಟುಹೋಯಿತಾದರೂ ಅವನು ಕಾಗದವನ್ನು ಕೂಡಲೆ ಕೆಳಕ್ಕೆ ಬಿಸಾಡಿದುದರಿಂದ ಇತರ ಕಾಗದಗಳು ಹೊತ್ತಿಕೊಳ್ಳಲವಕಾಶವಾಗಲಿಲ್ಲ. ಹಿಂದೆಯೊಂದಾವರ್ತಿ ಇದೇ ರೀತಿಯಾಗಿದ್ದಿತು. ಈ ಕೃತ್ಯಮಾಡುವವರನ್ನು ಹಿಡಿದುಕೊಟ್ಟಲ್ಲಿ ೧೦೦ ರೂ ಬಹುಮಾನಕೊಡುವುದಾಗಿ ಪೋಲೀಸು ... ಪ್ರಕಟಿಸಿರುತ್ತಾರೆ

ದೇಶಪಾಂಡೆಯವರ ಶಿಕ್ಷೆ

ಎಮರ್ಜೆನ್ಸಿ ಪವರ್ಸ್ ಆರ್ಡಿನೆನ್ಸ್ ಪ್ರಕಾರ ಕಳೆದ ತಾ|| ೩೧ರಲ್ಲಿ ಸೆರೆ ಹಿಡಿಯಲ್ಪಟ್ಟ ಅಖಿಲ ಭಾರತ ಕಾಂಗ್ರೆಸ್ ಸಂಸ್ಥಾಧ್ಯಕ್ಷರಾದ ಮ|| ಗಂಗಾಧರರಾವ್ ದೇಶಪಾಂಡೆಯವರು ತಾ|| ೨೮ರಲ್ಲಿ ಸೆರೆಯಿಂದ ಬಿಡಲ್ಪಟ್ಟು ಕೂಡಲೆ ಊರಿಗೆ ಹೋಗಕೂಡದೆಂದೂ, ಪೋಲೀಸಿನವರಲ್ಲಿಗೆ ಪ್ರತಿದಿನವೂ ಕಾಣಿಸಿಕೊಳ್ಳಬೇಕೆಂದೂ, ಇನ್ನುಮೇಲೆ ಶಾಸನೋಲ್ಲಂಘನ ಕಾರ್ಯಗಳಲ್ಲಿ ಸೇರಕೂಡದೆಂದೂ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರವರು ಆಜ್ಞೆ ಮಾಡಿದ್ದರು ಆದರೆ ದೇಶಪಾಂಡೆಯವರು ಆ ರೀತಿ ನಡೆಯಲಿಲ್ಲವಾಗಿ ೧ ವರ್ಷ ಕಠಿಣ ಸಜ ಮತ್ತು ೩೦೦ ರೂ ಜುಲ್ಮಾನೆ ವಿಧಿಸಲ್ಪಟ್ಟರು.

ಸ್ಪೆಷಲ್ ಮೆಜಿಸ್ಟ್ರೇಟರ ಕೊಲೆ

ವಿಕ್ರಮಪುರದ ಸ್ಪೆಷಲ್ ಮೆಜಿಸ್ಟ್ರೇಟರಾದ ಕಾಮಾಖ್ಯಪ್ರಸಾದಸೇನರು ಡಾಕ ಸಬ್‌ಡಿವಿಜನ್ ಆಫೀಸರಾದ ಮ|| ಶಚೀಂದ್ರ ಚಟರ್ಜೆಯವರ ಮನೆಗೆ ಬಂದಿಳಿದುಕೊಂಡಿದ್ದರು ಕಳೆದ ತಾ|| ೨೭ ನೆಯ ರಾತ್ರಿ ಕಾಮಾಖ್ಯಪ್ರಸಾದರು ಮಲಗಿಕೊಂಡಿರುವಾಗ್ಗೆ ಯಾರೋ ಹಂತಕರು ಕಿಟಕಿಯ ಮೂಲಕ ೩ ಗುಂಡುಗಳನ್ನು ಹೊಡೆದು ಕೊಂದು ಪಲಾಯನಮಾಡಿದರು. ಗುಂಡಿನ ಶಬ್ದವನ್ನು ಕೇಳಿ ಮಹಡಿಯ ಮೇಲೆ ಮಲಗಿದ್ದ ಶಚೀಂದ್ರರು ಓಡಿಬಂದು ನೋಡುವಲ್ಲಿ ಕಾಮಾಖ್ಯರ ಎದೆ ಹೊಟ್ಟೆಗಳಲ್ಲಿ ಗುಂಡುಗಳು ನಾಟಿದ್ದುದು ಕಂಡುಬಂದಿತು. ಪೋಲೀಸರು ಆ ಹಂತಕರನ್ನು ಹುಡುಕುತ್ತಿರುವರು

ಜವಹಾರಲಾಲರ ದರ್ಶನ ನಿರಾಕರಣೆ

ಪಂಡಿತ ಜವಹಾರಲಾಲನೆಹರುರವರಿಗೆ ಜೈಲಿನಲ್ಲಿ ಬಂಧುಗಳನ್ನು ನೋಡಲಿಕ್ಕೆ ಕಲ್ಪಿಸಿದ್ದ ಅವಕಾಶವನ್ನು ಪ್ರಭುತ್ವದವರು ನಿರಾಕರಿಸಿದರು ಅವರ ತಾಯಿಯೂ ಪತ್ನಿಯೂ, ಕುಮಾರಿ ಶ್ಯಾಮಕುಮಾರಿಯೂ ಭಾನುವಾರ ಅವರನ್ನು ನೋಡಲಿಕ್ಕೆ ಜೈಲಿಗೆ ಹೋಗಿದ್ದು ನೋಡದೆಯೇ ಹಿಂದಿರುಗಿ ಬಂದು ಬಿಟ್ಟರು. ರಾಜಕೀಯ ಪರಿಸ್ಥಿತಿಯನ್ನು ಕುರಿತು ಪ್ರಭುತ್ವದವರು ಅವರೊಡನೆ ಉತ್ತರ ಪ್ರತ್ಯುತ್ತರವನ್ನು ನಡೆಸುತ್ತಿರುವುದಾಗಿಯೂ, ಆ ರಹಸ್ಯವು ಹೊರಪಡಕೂಡದೆಂಬ ಉದ್ದೇಶದಿಂದ ಸಂದರ್ಶನವು ನಿರಾಕರಿಸಲ್ಪಟ್ಟುದಾಗಿಯೂ ತಿಳಿದು ಬರುತ್ತದೆ.

ಮೈಮೇಲೆ ಉಗುಳಿ ಕಳವು ಮಾಡಿದುದು

ಮದ್ರಾಸಿನ ಒಂದು ಬೀದಿಯ ಕಾಲುದಾರಿಯಲ್ಲಿ ಒಬ್ಬ ಮನುಷ್ಯನು ನಡೆದುಕೊಂಡು ಹೋಗುತ್ತಿರುವಾಗ್ಗೆ ಪಕ್ಕದಲ್ಲಿ ಬರುತ್ತಿದ್ದ ನಾಲ್ವರಲ್ಲಿ ಒಬ್ಬನು ಅವನಮೇಲೆ ಉಗುಳಿದನು ಆಗ ಉಳಿದ ಮೂವರು ಕಾಣದೆ ಉಗುಳಿದುದಕ್ಕಾಗಿ ಕ್ಷಮಿಸಬೇಕೆಂದು ಹೇಳಿ ಉಗುಳಿಸಿಕೊಂಡವನನ್ನು ಸಮಾಧಾನ ಪಡಿಸುವವರಂತೆ ನಟಿಸಿ ನಲ್ಲಿಯ ಬಳಿಗೆ ಕರೆದುಕೊಂಡು ಹೋಗಿ ಉಡುಪನ್ನು ತೊಳೆಯುವಾಗ್ಗೆ ಅವರಲ್ಲೊಬ್ಬನು ಅವನ ... ನಲ್ಲಿದ್ದ ೫೦ ರೂ. ನ ಚೀಲವನ್ನೆತ್ತಿಕೊಂಡೋಡಿದನು. ಉಳಿದವರೂ ಪಲಾಯನಮಾಡಿದರು ಆಗ ಆ ಮನುಷ್ಯನು ಕೂಗಿ [redacted] ...ನ್ನು ಹಿಂಬಾಲಿಸಿ ನಾಲ್ವರನ್ನೂ ಹಿಡಿದು [redacted] ...ನ್ನು ವಶಪಡಿಸಿಕೊಂಡರು

ಸ್ನಾನ ಮಾಡುವಾಗ್ಗೆ ಸರ್ಪದಷ್ಟರಾಗಿ ... ...

ಕಳೆದ ವಾ|| ... ... ಮೃತರಾದರು. ಈ ಹಾವುಗಳು ಒಂದು ... ... ಮೇಲೆ ೪ ಅಡಿ ಎತ್ತರಕ್ಕೆ ... ... ಜನರನ್ನು ಕಚ್ಚುತ್ತವೆಯಂತೆ. ಇವುಗಳ ಕಾಟಕ್ಕಾಗಿ ಆ ಸ್ಥಳದಲ್ಲಿ ಯಾರೂ ಸ್ನಾನ ಮಾಡದಂತೆ ಎಚ್ಚರಿಸಲು ಪೋಲೀಸು ಕಾವಲಿಡಲ್ಪಟ್ಟಿರುವುದು.

ಲೋಥಿಯನ್‌ರವರ ಅಂತರ್ಯೋಚನ್ಯಾಸ

“ ನೀವು ಇಂಡ್ಯಾದ ಸಹಾಯ ಮಂತ್ರಿಯಾಗಿ ಇಂಡ್ಯಾಕ್ಕೆ ಹೋಗಿದ್ದಾಗ್ಗೆ ನೀವು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಕುರಿತು ಮುಂಚೆ ಇಂಡ್ಯಾ ಮಂತ್ರಿಗಳ ಮತ್ತು ವೈಸ್‌ರಾಯರ ಅನುಮತಿಯನ್ನು ಪಡೆದಿದ್ದಿರಾ ? ” ಎಂದು ಹೌಸ್ ಆಫ್ ಲಾರ್ಡ್ಸ್ ಸಭೆಯಲ್ಲಿ ಲಾರ್ಡ್ ... ರವರು ಪ್ರಶ್ನಿಸಿದರು. ಅದಕ್ಕೆ “ ನಾನು ಇಂಡ್ಯಾಕ್ಕೆ ಹೋಗುವುದಕ್ಕೆ ಮೊದಲೇ ಇಂಡ್ಯಾ ಸಹಾಯ ಮಂತ್ರಿ ಪದವಿಯನ್ನು ತಾತ್ಕಾಲಿಕವಾಗಿ ಬಿಟ್ಟುಕೊಟ್ಟೆನು ಆದುದರಿಂದ ನಾನು ಇಂಡ್ಯಾದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯವೆಲ್ಲವೂ ನನ್ನ ಸ್ವಂತವಲ್ಲದೆ ಸ್ಟೇಟ್ ಸೆಕ್ರೆಟರಿಯವರ ಅಥವಾ ವೈಸ್ರಾಯರ ಪ್ರತಿನಿಧಿಯಾಗಿ ತಿಳಿಸಿದ ಅಭಿಪ್ರಾಯವಲ್ಲ ” ಎಂದು ಲಾರ್ಡ್ ಲೋಥಿಯನ್‌ರವರು ಉತ್ತರವನ್ನು ಕೊಟ್ಟರು

ಬರ್ಲಿನ್ನಿನಲ್ಲಿ ಲಂಚ ಕಲ್ಪನೆಗಳಿಗಾಗಿ ಕಠಿಣಶಿಕ್ಷೆ

ಜರ್ಮನಿಯ ರಾಜಧಾನಿಯಾದ ಬರ್ಲಿನ್‌ಪಟ್ಟಣದ ಮ್ಯುನಿಸಿಪಾಲಿಟಿಯ ಕೆಲಸಗಾರರಿಗೆ ಉಡುಪುಗಳನ್ನೊದಗಿಸಲು ಕಂಟ್ರಾಕ್ಟನ್ನು ತೆಗೆದುಕೊಂಡಿದ್ದ ಮೂವರು ಸಹೋದರರು ಆಫೀಸಿನ ಕೆಲಸಗಾರರನ್ನು ವಶಪಡಿಸಿಕೊಂಡು ಕಳ್ಳಸಹಿ, ಮೋಸ ಮೊದಲಾದ ಕೃತ್ಯಗಳನ್ನು ನಡೆಯಿಸಿ ಮ್ಯುನಿಸಿಪಲ್ ಬ್ಯಾಂಕಿನಿಂದ ಲಕ್ಷಾಂತರ ರೂಪಾಯಿಗಳ ಸಂಪಾದನೆಮಾಡಿ ... ಬೇಕಾದಷ್ಟು ದ್ರವ್ಯವನ್ನು ವೆಚ್ಚಮಾಡಿ ಜರ್ಮನಿಯಲ್ಲೆಲ್ಲ ಬಹಳ ಪ್ರಖ್ಯಾತರಾಗಿದ್ದರು. ಕಡೆಯಲ್ಲಿ ಇವರ ಮೋಸವು ಹೊರಪಟ್ಟು ಮೆಜಿಸ್ಟ್ರೇಟರಲ್ಲಿ ಕಳೆದ ೩೩ ತಿಂಗಳಿಂದಲೂ ವಿಚಾರಣೆ ನಡೆದು ಇಬ್ಬರು ಸಹೋದರರಿಗೆ ೪ ವರ್ಷ ಅತ್ಯಂತ ಕಠಿಣ ಸಜೆಯೂ ಇವರಿಗೆ ಸಹಾಯಕರಾಗಿದ್ದ ಉದ್ಯೋಗಸ್ಥರಿಗೆ ೩ ರಿಂದ ೧೮ ತಿಂಗಳವರೆಗೆ ಸಜೆಯೂ ವಿಧಿಸಲ್ಪಟ್ಟಿತು. ಮೂರನೆಯ ಸಹೋದರನು ಅಸ್ವಸ್ಥನಾಗಿರುವುದರಿಂದ ಅವನ ವಿಚಾರಣೆಯು ಮುಂದೆ ನಡೆಯುವುದು ಈ ವಿವಾದದಲ್ಲಿ ೬೦೦ ಮಂದಿ ಸಾಕ್ಷಿ ನುಡಿದರಂತೆ.

ಬೊಂಬಾಯಿ ದಂಗೆ

ನೂರಾರು ಜನರು ಮಡಿದು ಸಾವಿರಾರು ಜನರು ಸೆರೆ ಹಿಡಿಯಲ್ಪಟ್ಟಿದ್ದಾಗ್ಯೂ ಹಿಂದು-ಮಹಮ್ಮದೀಯರ ಕಲಹವು ಶಾಂತವಾಗದೆ ಪುನಃ ಪುನಃ ನಡೆಯುತ್ತಲೇ ಇದೆ. ಹಿಂದು-ಮಹಮ್ಮದೀಯರು ಪರಸ್ಪರ ಕಲ್ಲುಗಳಿಂದ ಹೊಡೆದಾಡುವುದೂ ಚೂರಿಗಳಿಂದ ತಿವಿದು ಕೊಲ್ಲುವುದೂ ಹೆಚ್ಚುತ್ತಿರುವುದು. ಇದರಲ್ಲಿ ಸಿಂಧಿಗಳಿಗೇ ವಿಶೇಷ ನಷ್ಟವಾಗುತ್ತಿದೆ. ಪೋಲೀಸಿನವರು ಯಥಾಪ್ರಕಾರ ಗುಂಡುಗಳನ್ನು ಹಾರಿಸುತ್ತಿರುವರಾದರೂ ಉಭಯ ಪಕ್ಷದಲ್ಲೂ ಪ್ರಾಣನಷ್ಟವಾಗುವುದರ ವಿನಾ ಮತ್ತಾವ ಪ್ರಯೋಜನವೂ ಇಲ್ಲ ಕಲಹ ನಡೆಯುತ್ತಿರುವ ಬೀದಿಗಳಲ್ಲಿ ಅಂಗಡಿಗಳು ಮುಚ್ಚಲ್ಪಟ್ಟು ವ್ಯಾಪಾರವೂ ಜನಸಂಚಾರವೂ ನಿಂತುಹೋಗಿವೆ. ಪೋಲೀಸಿನವರೂ ಸೈನಿಕರೂ ಗುಂಡುಗಳನ್ನು ಹಾರಿಸಿ ಪ್ರಾಣನಷ್ಟವನ್ನುಂಟುಮಾಡುತ್ತಿದ್ದರೂ ಈ ಕಲಹವನ್ನು ಸಮಾಧಾನ ಪಡಿಸಲು ಒಂದು ಸಂಧಾನ ... ... ಕಲಹವು ಇನ್ನೂ ಶಾಂತವಾಗದಿರುವುದು ಅತ್ಯಂತ ಶೋಚನೀಯವಾಗಿರುವುದಲ್ಲದೆ ವ್ಯಾಪಾರದಲ್ಲೂ ಐಶ್ವರ್ಯದಲ್ಲೂ ಇಂಡ್ಯಾಕ್ಕೆ ಮುಂದಿನಂತಿರುವುದೆಂದು ಖ್ಯಾತಿಪಡೆದಿದ್ದ ಬೊಂಬಾಯಿ ಪಟ್ಟಣದ ವಿನಾಶಕ್ಕೂ ಕಾರಣವಾಗಿರುತ್ತದೆ.

ಆಪತ್ತಿನಲ್ಲಿದ್ದ ಯೋಗಿ

ತಿರುವಾಂಕೂರು ಸಂಸ್ಥಾನದಲ್ಲಿ ... ಎಂಬ ಗ್ರಾಮವಿರುತ್ತದೆ ಇಲ್ಲಿ ಸಮುದ್ರದ ನೀರು ಗ್ರಾಮಕ್ಕೊತ್ತಿಕೊಂಡಿರುವುದು. ಈ ... ... ದಿಗಂಬರನಾಗಿ ಒಬ್ಬ ೨೦ ವರ್ಷ ವಯಸ್ಸಿನ ಯೋಗಿ ಮಲಗಿಕೊಂಡಿರುತ್ತಿದ್ದನು. ಅವನನ್ನು ನೀರಿನಿಂದ ಹೊರಕ್ಕೆ ಸಾಗಿಸಕೊಂಡು ... ಎಷ್ಟೋ ಜನರು ಸಾಹಸಪಟ್ಟರೂ ಸಾಧ್ಯವಾಗಲಿಲ್ಲ. ... ಕಳೆದ ತಾ|| ೨೩ ರ ... ... ತಮ್ಮ ... ... ಪ್ರದೇಶಕ್ಕೆ ಸಾಗಿಸಿಕೊಂಡು ಬಂದರು ... ... ಮಾಡಿದನು [redacted] ... ಹೋಗುತ್ತಿದ್ದ [redacted] ...

ಕೊಂಡು ಪಾರ್ಲಿಮೆಂಟಿನಲ್ಲಿ ಎಂಬುದನ್ನು ತಿಳಿದುಕೊಂಡು [illegible] ತಡ. ತಾನೇ ಒಬ್ಬ ಸ್ವತಂತ್ರ [illegible] ಕಾರ್ಯನಿರ್ವಹಣೆಯಲ್ಲಿ ಒಬ್ಬೊಬ್ಬ ಸದಸ್ಯರೂ ಇದೇ ಪ್ರಕಾರ [illegible] ಮೇಲೆ ಮುಳುಗಿರುತ್ತಿದ್ದನಂತೆ

ಇಂಡಿಯಾಕ್ಕೆ ಬ್ರಿಟಿಷ್ ಪ್ರತಿನಿಧಿಗಳು ಬರುವುದು

[illegible] ಬ್ರಿಟಿಷ್ ಪಾರ್ಲಿಮೆಂಟಿನ ಸಭಾಮಂದಿರದಲ್ಲಿ [illegible] ಅಧ್ಯಕ್ಷತೆಯಲ್ಲಿ [illegible] ನಡೆದಿತು. ಪ್ರೊಫೆಸರ್ ಬೆನೆಡಿಕ್ಟ್ ಉಸ್ಕಿ, ಜೆನ್ಕಿ, [illegible] ಟ್, ಹರಾಬಿನ್, ಮಾಳೀ, ಮುನ್ನಿ ಈಶ್ವರಶರಣ, ಮಾರ್ಗನ್ ಜೋನ್ಸ್, ಲಿಕ್ವೀರ್ ವಿಲ್ಕಿನ್‌ಸನ್, ರಾಯಿಸ್ ರವರು ಮೊದಲಾದವರನೇಕರು ಬಂದಿದ್ದರು "ಲೇಬರ್ ಪಕ್ಷದವರು ಪುನಃ ಅಧಿಕಾರಕ್ಕೆ ಬಂದಲ್ಲಿ ಇಂಡಿಯಾಕ್ಕೆ ರಾಷ್ಟ್ರೀಯ ಸ್ವಪರಿಪಾಲನಕ್ಕೆ ಅರ್ಥವಾದ ಸ್ವಪರಿಪಾಲನವು ಲಭಿಸುವುದೆಂದು ನನಗೆ ತೋರುತ್ತದೆ ದೇಶೀಯ ಸಂಸ್ಥಾನಾಧಿಪತಿಗಳು ಸದ್ಭಾವವನ್ನು ತೋರಿಸದಿದ್ದರೆ [illegible] ಬಾಧ್ಯತೆಯನ್ನು [illegible] ವುದು ಎಂದಿಗೂ ಕೊನೆಗಾಣುವುದಿಲ್ಲವೆಂದು ತೋರುತ್ತದೆ" ಎಂದು ಬರೆಯುವವರು ಭಾಷಣಮಾಡಿ ಇಂಡಿಯಾಮಂತ್ರಿಯವರನ್ನು ತೀವ್ರವಾಗಿ ಖಂಡಿಸಿದರು ಭಾರತದೇಶದ ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ನೋಡಿ ತಿಳಿದುಕೊಳ್ಳುವುದಕ್ಕಾಗಿ ಕೆಲವು ಮಂದಿ ಬ್ರಿಟಿಷ್ ಪ್ರತಿನಿಧಿಗಳನ್ನು ಇಂಡಿಯಾಕ್ಕೆ ಕಳುಹಿಸಬೇಕೆಂದು ನಿರ್ಧರಿಸಲ್ಪಟ್ಟಿತು

WANTED

Applications with particulars of father's name, caste age, and examinations passed are invited so as to reach by 20th July 1932, from persons who have passed Book keeping examination for appointment as clerk on Rs 15—1—20 with the benefits of Provident Fund and annual bonus

M THAMMIAH
Honorary Secretary
The Palace Stables Co operative Society Ltd
2 *Mysore*

ಮೈನರ್ವಾ ಮಿಲ್ಸ್ ಲಿಮಿಟೆಡ್

[3—2]

ಪ್ರತಿ 500 ರೂ ಗೆ ಸಾಲಿಯಾನ ಶೇಕಡ 7½ ರೂ ಬಡ್ಡಿಯಂತೆ 18,00,000 ರೂಪಾಯಿಗಳನ್ನು ಆಸ್ತಿಯ ಮೊದಲನೆಯ ಅಡಮಾನದಿಂದ ಸಾಲವಾಗಿ ತೆಗೆಯಲು ಗೊತ್ತುಪಾಡಿದೆ

ಬೆಂಗಳೂರಲ್ಲಿರುವ ಮೇಲ್ಕಂಡ ಕಂಪೆನಿಯ 35,00,000 ರೂಪಾಯಿ ಬೆಲೆ ಬಾಳುವ ಆಸ್ತಿಯು ಈ ಸಾಲಕ್ಕೆ ಈಡಾಗಿರುತ್ತದೆ

ಈ ಮಿಲ್ಲಿನಲ್ಲಿ 32,416 ಕದುರುಗಳು ಮತ್ತು 440 ಮಗ್ಗಗಳು ನವೀನ ಉಪಕರಣಗಳ ಸಮೇತವಾಗಿರುತ್ತವೆ

ಈ ಸಾಲದ ಮೊಬಲಗು 1940 ನೇ ಇಸವಿ ಜನವರಿ ತಾರೀಕು 2 ರಲ್ಲಿ ತೀರಲ್ಪಡುವುದು ಈ ಸಾಲದ ಮೊಬಲಗನ್ನು ಪೂರ್ತಿಯಾಗಿ ಆಗಲಿ ಬಾಗವಾಗಿ ಆಗಲಿ 1935 ನೆಯ ಜನವರಿ ತಾ॥ 2 ರಲ್ಲಿ ಅಥವಾ ಅನಂತರದಲ್ಲಿ ಬಡ್ಡಿ ಸಮೇತ ಕಂಪೆನಿಯವರಿಗೆ ಸೂಕ್ತ ತೋರಿದಂತೆ ವಾಪಸ್ಸು ಕೊಡುವ ಅಧಿಕಾರವನ್ನು ಕಂಪೆನಿಯವರಿಟ್ಟುಕೊಂಡಿರುತ್ತಾರೆ

ರಾಜಕೀಯ ಪರಿಸ್ಥಿತಿಯ ಮೇಲೆ ವೈಸ್ರಾಯರ ಪ್ರಕಟನೆ.

ಕಳೆದ ಮಂಗಳವಾರ ಭಾರತ ರಾಜಕೀಯ ಪರಿಸ್ಥಿತಿಯನ್ನು ಕುರಿತು ವೈಸ್ರಾಯರು ಈ ಕೆಳಗಿನ ಪ್ರಕಟನೆಯನ್ನು ಹೊರಡಿಸಿರು ಇದೇ ದಿವಸ ಭಾರತ ಮಂತ್ರಿಯವರು ಕೂಡ ಪಾರ್ಲಿಮೆಂಟಿನಲ್ಲಿ ಇಂಥ ಪ್ರಕಟನೆಯನ್ನೇ ಓದಿದರು

ಬ್ರಿಟಿಷ್ ದೊರೆತನದವರ ರಾಜನೀತಿಯ ವಿಧಾನವನ್ನು ಮುಖ್ಯಮಂತ್ರಿ [illegible] ರೌಂಡ್ ಟೇಬಲ್ ಸಭೆಯಲ್ಲಿ [illegible] ಕೊಡದ ಆಗನ್ನ ಸ್ಪಷ್ಟಪಡಿಸಿದರು ಅದು [illegible] ಪ್ರಕಾರವಾಗಿ ಎನ್ ಮಾನ್ಯತೆಯಲ್ಲಿ [illegible] ವರ್ಗಳನ್ನು [illegible] ಗಳನ್ನು [illegible] ಬ್ರಿಟಿಷ್ ದೊರೆತನದ [illegible]

ಮೂರು [illegible] ಸಂಘಗಳು

[illegible] ಈ ಸಂಘಗಳವರು ಭಾರತದೇಶಕ್ಕೆ ಬಂದು [illegible] ಬ್ರಿಟಿಷ್ ದೊರೆತನದವರಿಗೆ [illegible] ಅದರಿಂದ ಮುಂದೆ ನಡೆಯಬೇಕಾದ ಕಾರ್ಯಗಳನ್ನು ಕುರಿತು ಅವರು [illegible] ಗಿರುವ ವಿಧಾನವನ್ನು ಸೂಚಿಸಲಿಕ್ಕೆ ಅವರಿಗೀಗ ಅವಕಾಶವುಂಟಾಗಿರುವುದು

ಒಂದು ಮಸೂದೆಯನ್ನು ಉಪಪಾದಿಸುವರು

ಬ್ರಿಟಿಷ್ ದೊರೆತನದವರು ಪಾರ್ಲಿಮೆಂಟಿನಲ್ಲಿ ಒಂದು ಮಸೂದೆಯನ್ನು ಉಪಪಾದಿಸಿರುವರು ಅದರಲ್ಲಿಯೇ ರಾಷ್ಟ್ರೀಯ ಸ್ವಪರಿಪಾಲನಕ್ಕೂ ಫೆಡರೇಷನ್ನಿಗೂ ಏರ್ಪಾಟು ಮಾಡಲ್ಪಡುವುದು

ಮೊದಲು ರಾಷ್ಟ್ರೀಯ ಪರಿಪಾಲನವೇರ್ಪಡುವುದು

ಆದರೆ ಫೆಡರೇಷನ್ನನ್ನು ಪ್ರಾರಂಭಿಸಲಿಕ್ಕೆ ಆವಶ್ಯವಾದ ಏರ್ಪಾಟುಗಳೆಲ್ಲ ಪೂರ್ತಿಯಾಗುವವರೆಗೂ ರಾಷ್ಟ್ರೀಯ ಪರಿಪಾಲನವು [illegible] ಸಬೇಕಾದ ಆವಶ್ಯಕತೆಯುಳ್ಳ [illegible] ಪ್ರಾರಂಭಿಸಲು [illegible]

ಫೆಡರೇಷನ್ನಿನ ವಿವರ

ಯಾವದಾದರ ಫೆಡರೇಷನನ್ನೇರ್ಪಡಿಸುವುದೇ ಬ್ರಿಟಿಷ್ ದೊರೆತನದವರ ಮುಖ್ಯೋದ್ದೇಶವಾದುದರಿಂದ ಫೆಡರೇಷನ್ನಿನಲ್ಲಿ ಸೇರುವ ಪ್ರಾಂತಗಳ ಫೆಡರೇಷನಿನಲ್ಲಿ ಸೇರಲು ಸಿದ್ಧವಾಗಿರಬೇಕು ಆದರೆ ಈ ವಿಷಯವಾಗಿ ಪಾರ್ಲಿಮೆಂಟಿನಲ್ಲಿ ಮಾಡಬೇಕಾಗಿರುವ ಸೂಚನೆಗಳು ಸಮಗ್ರವಾಗಿರಬೇಕು

ರಾಷ್ಟ್ರಗಳೂ ಸಂಸ್ಥಾನಗಳೂ ಫೆಡರಲ್ ಗವರ್ನ್‌ಮೆಂಟಿಗೂ ಪಾರ್ಲಿಮೆಂಟಿಗೂ ಸಮ್ಮತಿಯಿಂದಲೂ ಸಾಮರಸ್ಯದಿಂದಲೂ ತಂತಮ್ಮ [illegible] ಗಳನ್ನು ನೆರವೇರಿಸಲು ಆರ್ಥಿಕಾದಿ ಸೌಕರ್ಯಗಳನ್ನು ಪೂರ್ತಿಯಾಗಿ ಹೊಂದಿರುತ್ತವೆಂದು ನಂಬಲು ತಕ್ಕ ಪ್ರಮಾಣಗಳನ್ನು ವಿಧಿಯಲ್ಲಿ ಉಪಪಾದಿಸುವ ವೇಳೆಯಲ್ಲಿ ಮುಖ್ಯವಾಗಿ ಮಾಡಬೇಕು

ರಕ್ಷಣೆ

ರಕ್ಷಣೆಯನ್ನು ಪಡೆಯಲು ಅರ್ಹತೆಯುಳ್ಳ ಸಂಘಗಳಿಗೆ ನಿರವಧಿ ಸಲು ಸಾಧ್ಯವಿದ್ದ ಮಟ್ಟಿಗೂ ರಕ್ಷಣೆಯೇರ್ಪಡಿಸಲ್ಪಡುವುದು ಎಂಬ ನಂಬಿಕೆಯನ್ನುಂಟುಮಾಡಬೇಕು ಈ ಷರತ್ತುಗಳನ್ನು ನೆರವೇರಿಸಲು [illegible] ಯಲ್ಲದೆ ಕೆಲಸಮಾಡಬೇಕೆಂದು ಬ್ರಿಟಿಷ್ ದೊರೆತನದವರು ಮುಖ್ಯವಾಗಿ ಕೋರುತ್ತಾರೆ ಆದರೆ ಇವುಗಳ ವಿವರವನ್ನು ಪರೀಕ್ಷಿಸಿದಲ್ಲಿ ಬಹಳ ಸಂದೇಹಗಳು ಕಂಡುಬರುತ್ತವೆ ಹಿಂದಿನ ಆ ಏರ್ಪಾಡುಗಳನ್ನು ಸಾಧ್ಯವಾದ ಮಟ್ಟಿಗೆ ಜಾಗ್ರತೆಯಲ್ಲಿ ತೀರ್ಮಾನಿಸಲು ತಕ್ಕ ಸಂಘಗಳನ್ನು [illegible] ಯನ್ನು ದೊರೆತನದವರು ಶ್ರದ್ಧೆವಹಿಸುವವರಾಗಿರುವರು

ಭಾರತೀಯರ ಸಹಕಾರ

ಆದಷ್ಟು ಜಾಗ್ರತೆಯಲ್ಲಿ ಬಹು ಶ್ರೀಘ್ರವಾಗಿಯೂ ಈ ನಿರೋಧಗಳನ್ನು ತೊಲಗಿಸಲ್ಪಟ್ಟಿಗೂ ರೌಂಡುಟೇಬಲು ಸಭೆಯವರು ನಿರ್ಣಯಿಸಿರುವ ರೀತಿಯಲ್ಲಿ ಭಾರತೀಯರ ಸಹಯೋಗ ಸಹಕಾರವನ್ನು ಪಡೆಯಲು ಅವಲಂಬಿಸಬೇಕಾದ ವಿಧಾನವನ್ನು ಕುರಿತು ಬ್ರಿಟಿಷ್ ದೊರೆತನದವರು ಬಹಳ ಶ್ರದ್ಧೆಯಿಂದ ಆಲೋಚಿಸಿರುವರು

೩ ನೆಯ ರೌಂಡುಟೇಬಲ್ ಸಭೆಯೂ ಫೆಡರಲ್ ಸ್ಟ್ರಕ್ಚರ್ ಸಭೆಯೂ ಜರುಗುವುದಿಲ್ಲ

ಈಗಿನ ಪರಿಸ್ಥಿತಿಯನ್ನು ಕುರಿತು ಬ್ರಿಟಿಷ್ ದೊರೆತನದವರು ಬಹಳ ಶ್ರದ್ಧೆಯಿಂದ ಆಲೋಚಿಸಿರುವರು ಈಗೇರ್ಪಟ್ಟಿರುವ [illegible] ರೌಂಡುಟೇಬಲು ಸಭೆಯಾಗಿ ನಡೆಯಲು [illegible] ಬಹಳ ಅನವಶ್ಯವಾಗುವುದು [illegible] ಸಮಸ್ಯೆಗಳ [illegible] ಜಾಗ್ರತೆಯಲ್ಲಿ ಏರ್ಪಡಿಸಬೇಕಾಗಿರುವುದರಿಂದ ಈ ಸಭೆಗಳಿಂದ ಬಹಳ [illegible] ಕಾರ್ಯವಾಗ [illegible] ದೊರೆತನದವರು ನಿರ್ಧರಿಸಿರುವರು ಇದಕ್ಕೆ ದೊರೆತನದವರು ಅವಲಂಬಿಸಲಿಕ್ಕಿರುವ ಪದ್ಧತಿಯು ಒಂದೇ ಪದ್ಧತಿಗೆ ಕೆಲವು [illegible] ಸ್ವಾತಂತ್ರವಾಗಿರುವುದು ಇದರಿಂದ ಇಂಥ ಸಮಸ್ಯೆಗಳನ್ನು ಶೀಘ್ರದಲ್ಲಿ ಬಗೆಹರಿಸಲು ಅವಕಾಶವಿಲ್ಲದಿರುತ್ತದೆ ಈ ಸಭೆ ರುವ ಕೆಲಸಕ್ಕೆ ಮೂಲಾಧಾರವಾಗಿ ಭಾರತೀಯ [illegible] ನಡೆ ಸಂಪೂರ್ಣವಾಗಿ ಲಭಿಸುವುದೆಂದು ಬ್ರಿಟಿಷ್ ದೊರೆತನದವರು ನಿರ್ಧರಿಸುವರು

ಅಲ್ಪ ಸಂಖ್ಯಾತರ ಸಮಸ್ಯೆ

ಮೊದಲು ಅ [illegible] ನಿರೋಧಗಳನ್ನು ತೊಲಗಿಸುವರು [illegible] ವೃದ್ಧಿಗೆ ನಿರೋಧಕವಾಗಿರುವ ಅಲ್ಪ ಸಂಖ್ಯಾತರ ಸಮಸ್ಯೆಗೆ ಸಂಬಂಧಪಟ್ಟ ಕೆಲ ವಿಷಯಗಳನ್ನು ಕುರಿತು ತಮ್ಮ ಪರಿಹಾರವನ್ನು ತಿಳಿಸಲಿಕ್ಕೆ ದೊರೆತನದವರು ಪ್ರಯತ್ನಿಸಿ ಅದನ್ನು ಪ್ರಕಟಿಸುವರು ಈ ವಿಷಯದಲ್ಲಿ [illegible] ಮುಖ್ಯ ಪರಸ್ಪರಗಳನ್ನು ಕುರಿತು ಅವರು ಈಗ ಪರ್ಯಾಲೋಚಿಸುತ್ತಿರುವರು ಆದಕ್ಕೆ ಪುನಃ ಹೊಸ ಹೊಡತವಾಗಲಿ [illegible] ಈ ಬೇಸಿಗೆಯು ಕಾಲವು ಮುಗಿಯುವುದರೊಳಗಾಗಿಯೇ ಅವರು ತಮ್ಮ ಪರಿಹಾರವನ್ನು ಪ್ರಕಟಿಸುವರು

ರೌಂಡುಟೇಬಲು ಆಲೋಚನ ಸಂಘ

ಈ ಪ್ರಕಟನೆಯಿಂದ ಅಲ್ಪ ಸಂಖ್ಯಾತರ ಸಮಸ್ಯೆಗೆ ಸಂಬಂಧಿಸಿದ ಸಿರೋಧಗಳನ್ನು ತಪ್ಪಿಸಿ ಕೂಡಲೆ ರೌಂಡುಟೇಬಲು ಆಲೋಚನ ಸಂಘ ಸಭೆಯು ಪುನಃ ಪ್ರಾರಂಭವಾಗುವುದು ಅವರು ಅನೇಕ ಮುಖ್ಯ ಸಮಸ್ಯೆಗಳನ್ನು ಪರಿಷ್ಕರಿಸಬೇಕಾಗಿರುವುದಲ್ಲದೆ ವಿಧಾನವಲ್ಲದೆ ಅವರು ಕೆಲಸ ಮಾಡುವರು ಆ ಸಮಸ್ಯೆಗಳಲ್ಲಿ ಬಹಳ ಸಮಸ್ಯೆಗಳನ್ನು ಕುರಿತು ಈವರೆಗೆ ಲಂಡನ್ನಿನಲ್ಲಿ ರೌಂಡ್ ಟೇಬಲ್ ಸಭೆಯವರೂ, ಫೆಡರಲ್ ಕಮಿಟಿಯವರೂ ಯೋಚಿಸಿರಲಿಲ್ಲ

ಸಂಸ್ಥಾನಗಳ ಸಮಸ್ಯೆ

ಬ್ರಿಟಿಷ್ ಇಂಡಿಯಾಕ್ಕೂ ಸಂಸ್ಥಾನಗಳಿಗೂ ಸಂಬಂಧಪಟ್ಟ ಸಮಸ್ಯೆಗಳನ್ನು ಕುರಿತು [redacted] ನ್ನು ಬಹಳ ಜಾಗ್ರತೆ ಸಂಸ್ಥಾನಗಳ [illegible]

[illegible] ಬ್ರಿಟಿಷ್ ದೊರೆತನದವರು ಬಯಸುವರು [illegible] ಗಿರುವ [illegible] ದೊರೆತನದವರು ಒಪ್ಪಲಾರರೆಂಬುದಾಗಿ [illegible]

[illegible]

[illegible] ಸಂಘ [illegible] ಸಮಸ್ಯೆಗಳು ಪೂರ್ತಿ [illegible] ಯಾವ [illegible] ವ್ಯಕ್ತಿ [illegible] ಸಲು [illegible] ಬೇಕೆಂದು ದೊರೆತನದವರು ಆಲೋಚಿಸುವರು

ವಿಧಿಯು ಪಾಸಾದನೆ

ಈ ರೀತಿಯಾಗಿ ಹೇಳಿಕೊಳ್ಳುವ ಮೇರೆಗೆ ಎಲ್ಲ ಕೆಲಸಗಳನ್ನು ಸರಿಯಾಗಿ ನೆರವೇರಿಸಿ ಅನಂತರ ಅವರು ಪಾರ್ಲಿಮೆಂಟಿನಲ್ಲಿ ವಿಧಿಯನ್ನು ಉಪಪಾದಿಸಬೇಕೆಂದಿರುವರು

ಈ ಮುಖ್ಯ ಸಮಸ್ಯೆಗಳನ್ನು ಕುರಿತು ಮಾತ ಕತೆಯಲ್ಲಿ ಭಾರತೀಯರೊಡನೆ ಆಲೋಚಿಸಬೇಕೆಂದು ಅವರು ನಿಶ್ಚಯಿಸಿರುವರು

ಜಾಯಿಂಟು ಪಾರ್ಲಿಮೆಂಟು ಸಲಹಾ ಕಮಿಟಿ

ಭಾರತ ರಾಜ್ಯಾಂಗ ವಿಧಾನವನ್ನು ಸರಿಪಡಿಸುವಲ್ಲಿ ದೊರೆತನದವರು ಮಾಡಿರುವ ಸೂಚನೆಗಳನ್ನು ಕುರಿತು ಆಲೋಚಿಸಲಿಕ್ಕೆ ಎರಡು ಪಾರ್ಲಿಮೆಂಟು ಸಭೆಯವರೂ ಒಟ್ಟಾಗಿ ಒಂದು ಜಾಯಿಂಟ್ ಸಲಹಾ ಕಮಿಟಿಯನ್ನು ನೇಮಿಸಬೇಕು ಭಾರತೀಯ ಪ್ರತಿನಿಧಿಗಳೊಡನೆ ಆಲೋಚಿಸಲು ಆ ಕಮಿಟಿಗೆ ಅವಕಾಶ ಕೊಡಬೇಕು ಎಂದು ದೊರೆತನದವರು ಪಾರ್ಲಿಮೆಂಟಿನವರನ್ನು ಕೇಳುವರು ಪಾರ್ಲಿಮೆಂಟಿನಲ್ಲಿ ವಿಧಿಯನ್ನು ಉಪಪಾದಿಸುವುದಕ್ಕೆ ಮೊದಲು ಜಾಯಿಂಟ್ ಕಮಿಟಿಯವರು ವಿಧಿಯಲ್ಲಿರುವ ಸೂಚನೆಗಳನ್ನು ತಿಳಿದು ಆಲೋಚಿಸುವರಲ್ಲದೆ ಇದಕ್ಕೆ ಭಾರತೀಯರೂ ಸಮ್ಮತಿಸುವರೆಂದು ದೊರೆತನದವರ ತಿಳಿಯುತ್ತಾರೆ ಆಗ ಆಲೋಚನೆಯ ತೀರ್ಮಾನವಾಗುವುದು ಆ ವೇಳೆಯಲ್ಲಿ ಭಾರತೀಯರು ಪಾರ್ಲಿಮೆಂಟು ಕಮಿಟಿಯವರಿಗೆ ಸಹಕಾರಿಗಳಾಗಿ ತಮ್ಮಭಿಪ್ರಾಯವನ್ನು ಅವರಿಗೆ ತಿಳಿಸುವುದರಿಂದ ಬಹಳ ಅನುಕೂಲವಾಗುವುದೆಂದು ದೊರೆತನದವರು ನಂಬುತ್ತಾರೆ

ಕಾಲವಿಳಂಬ

ರೌಂಡುಟೇಬಲು ಸಭೆಯವರ ವಿಚಾರಣೆಯು ಪೂರ್ಣವಾಗದೆ ಪಾರ್ಲಿಮೆಂಟು ಜಾಯಿಂಟು ಕಮಿಟಿಯವರ ವಿಚಾರಣೆಯು ಪ್ರಾರಂಭವಾಗಲು ತಕ್ಕ ಅವಕಾಶವುಂಟಾದರೆ ನಾನು ಮೇಲೆ ಹೇಳಿದ ಪ್ರಕಾರ ಎಲ್ಲವೂ ಜರುಗುವುದು ಇಲ್ಲವಾದಲ್ಲಿ ಪುನಃ ಒಂದು ಸಂಘದವರು ಈ ವಿಷಯವನ್ನು ಚೆನ್ನಾಗಿ ಆಲೋಚಿಸಿದ ಹೊರತು ಪಾರ್ಲಿಮೆಂಟು ಕಮಿಟಿಯವರ ವಿಚಾರಣೆಯು ಪ್ರಾರಂಭವಾಗಲು ಅವಕಾಶವಿಲ್ಲವೆಂದು ದೊರೆತನದವರಿಗೆ ತೋರಿದಲ್ಲಿ ಆಗ ವಿಧಿಯನ್ನು ಉಪಪಾದಿಸಲು ಇನ್ನು ಕೊಂಚ ಆಲಸ್ಯವಾಗುವುದಾದರೆ ದೊರೆತನದವರು ಅಗಣ ಪರಿಸ್ಥಿತಿಗಳಿಗೆ ಅನುಕೂಲವಾದ ರೀತಿಯಲ್ಲಿ ಏರ್ಪಾಟು ಮಾಡುವರು

ಲಂಡನ್ನಿನಲ್ಲಿ ಆಲೋಚಿಸಬೇಕಾಗಿರುವ ಸಂಘ

ದೊರೆತನದವರ ಅಭಿಪ್ರಾಯವು ಕೊನೆಸಾಗುವುದಿಲ್ಲವೆಂದು ಅವರಿಗೆ ತೋರಿದ ವಿನಾ ಅವರು ಲಂಡನ್ನಿಗೆ ಆಹ್ವಾನಿಕ ಸಂಘವು ಮುಂಬರಿರುವ ಸಂಘವನ್ನು ಆಹ್ವಾನಿಸಬೇಕೆಂದಿರ ಇಲ್ಲ ಪುನಃ ಆಲೋಚಿಸುವುದು ಅವಶ್ಯವೆಂದು ನಿರ್ಣಯಿಸಿದಲ್ಲಿ ವಿಷಯಗಳ ಸಂಖ್ಯೆಯನ್ನನುಸರಿಸಿ ಅವರು ವ್ಯಕ್ತಿಗಳನ್ನು ಆಹ್ವಾನಿಸಲು ಯೋಚಿಸಿರುವರು

ಈ ಪ್ರಕಾರ ಮಾಡಿದರೆ ಶೀಘ್ರವಾಗಿ ಕಾರ್ಯವು ನೆರವೇರುವುದು ಬ್ರಿಟನ್ನಿನ ಲಿಬರಲು ಲಿಬರಲು ಕನ್ಸರ್ವೇಟಿವ ಕಾರ್ಮಿಕ ಪಕ್ಷದವರುಗಳು ಒಟ್ಟುಗೂಡಿ ಆಲೋಚಿಸಲಿಕ್ಕೂ ಬ್ರಿಟಿಷ ಪ್ರತಿನಿಧಿಗಳು ಭಾರತ ಪ್ರತಿನಿಧಿಗಳೊಡನೆ ಆಲೋಚಿಸಲಿಕ್ಕೂ ಅವಕಾಶವಾಗುವುದು ರಾಜ್ಯಾಂಗ ವಿಧಾನವು ಶಕ್ತವಾಗಲಿಕ್ಕೆ ಇದು ಮೂಲಾಧಾರವಾಗುವುದು ಬ್ರಿಟಿಷ ದೊರೆತನದವರು ನಿರ್ಣಯಿಸಿರುವರು ಎಂದ ವೈಸ್ರಾಯರು ಪ್ರಕಟಿಸುತ್ತಾರೆ

ರಾಷ್ಟ್ರೀಯರ ಸತ್ಯಸ್ಥಿತಿ ಏನಿದೆ ?

ಪೂರ್ವ ಪೀಠಿಕೆ

ಕಳೆದ ೬ ತಿಂಗಳ ಗಳಿಂದ ರಾಷ್ಟ್ರೀಯರ ಪ್ರಕರಣವು ಧುಮುಧುಮಿಸುತ್ತಿರುವದು ಈ ಅಂದೋಲನದ ಬೆಳವಣಿಗೆಯಲ್ಲಿ ಯಾವ ಮುಸಲ್ಮಾನರುಗಳು ಯಾವ [illegible] ಈ ಚಳವಳಿಯ ಸತ್ಯಸ್ಥಿತಿ ಯಿದು

[illegible] ಸೌಂದರ್ಯದಲ್ಲಿ ಸ್ವಿಟ್ಜರ್ಲಂಡಿಗೂ ಹೋಲುವ ಹಾಗೆ ಕಾಶ್ಮೀರ ದೇಶವು ಸ್ವಾಭಾವಿಕ ಸೌಂದರ್ಯದಲ್ಲಿಯೂ ಖನಿಜ ಸಂಪತ್ತಿನಿಂದಲೂ ಕೈಗಾರಿಕೆಗಳಿಂದಲೂ ಭೂಲೋಕದ ನಂದನವನವಾಗಿರುವದು ಅಲ್ಲಿ ಬಹು ಸಂಖ್ಯಾತರು ಮುಸಲ್ಮಾನರಿರುವರು ಈ ಮುಸಲ್ಮಾನರನ್ನು ಗದ್ದುಗೆ ಮಹಾರಾಜರ [illegible] ಕಾಲದಿಂದ ಅನಂತರದ ಮುಸಲ್ಮಾನರ ಆಳಿಕೆಯ ಕಾಲದಲ್ಲಿ ಅವರನ್ನು ಬಲಾತ್ಕಾರದಿಂದ ಮುಸಲ್ಮಾನರನ್ನಾಗಿ ಮಾಡುವದರಲ್ಲಿ ಬಂದಿದೆ.

ಈ ಮುಸಲ್ಮಾನರು ಮೂಲ ಆರ್ಯಕುಲದವರಿರುವರು ಇವರಲ್ಲಿ ಸಂಸ್ಕೃತ ಭಾಷೆಯ ತವರೂರ ನಿಯಂದು ಪ್ರಸಿದ್ಧಿಗೊಂಡ ಕಾಶ್ಮೀರದ ದೊಡ್ಡ ದೊಡ್ಡ ಪಂಡಿತರಿಗೆ ಜನ್ಮವಿತ್ತ ಪುಣ್ಯಭೂಮಿ [illegible] ಸ್ವೀಕರಿಸಬೇಕಾಯಿತು ಇನ್ನು ಕೆಲವರಿಗೆ ಸ್ವಾತಂತ್ರ್ಯ [illegible] ಮಾಲವೀಯ ಸಪ್ರು ಮೊದಲಾದ ಕಾಶ್ಮೀರ ಪಂಡಿತರ ಮನೆತನಗಳು ಇದೇ ಜಾಲದಿಂದ ಪಾರಾಗಿ ಬಂದವು [illegible]

ಬ್ರಿಟಿಷ್ ಹಿಂದುಸ್ತಾನದಲ್ಲಿ ದಂಗೆಗಳಾದಂತೆ ಸಂಸ್ಥಾನಗಳಲ್ಲಿ ಈ ಹಿಂದೂ-ಮುಸಲ್ಮಾನರಲ್ಲಿ ನಡೆಯಿತು ಎಂದೂ ನಿರೀಕ್ಷಿಸಲಾಗದೆ ಹೀಗಿರುವಾಗ ಬ್ರಿಟಿಷ್ ಹಿಂದುಸ್ತಾನದ ವಿಪ್ಲವಕಾರೋದ್ರೇಕದ ಕೆಲ ಮುಸಲ್ಮಾನರು ತಮ್ಮ ಶಿಷ್ಟನದಿಂದ, ತಮ್ಮ ಬಹಳ ವರ್ಷಗಳಿಂದ ನೆಲೆಸಿಟ್ಟ ಗಾಳಿಯ ಪ್ರಶ್ನೆಯ ಬಗ್ಗೆ ಕೆಲ ಸಂಸ್ಥಾನಗಳಲ್ಲಿ ದಂಗೆಗಳನ್ನು ಇತ್ತೀಚಿಗಾಗಿ ಮಾಡಿಸಿದ ಉದಾಹರಣೆಗಳುಂಟು ಅದರಂತೆಯೇ ಹೊರಗಿನ ಮುಸಲ್ಮಾನರ ಕರ್ತೃತ್ವದ ನೆರವು ಈಗಿನ ಕಾಶ್ಮೀರದ ದಂಗೆಯಲ್ಲಿ ಇರುವದು, ಇದರಿಂದ ಹಿಂದುಗಳು ಯೋಗ್ಯಬೋಧ ಪಡೆದು ಎಚ್ಚರಾಗಲೆಂದೇ, ಕಾಶ್ಮೀರದ ಪ್ರಶ್ನೆ ಮುಂದಿಟ್ಟುಕೊಂಡು ಹಿಂದೂಗಳ ಸ್ಥಿತಿಯ ವಿವೇಚನ ಮಾಡುತ್ತೇನೆ

ಮುಸಲ್ಮಾನ ರಾಷ್ಟ್ರಗಳಲ್ಲಿ ಕಳೆದ ೨೦ ೨೫ ವರ್ಷಗಳಿಂದ ಪ್ಯಾನ್ ಇಸ್ಲಾಮಿಝಮದ ಮಹತ್ವಾಕಾಂಕ್ಷೆಯು ತುಂಬಿರುತ್ತದೆ ಕಳೆದ ಮಹಾಯುದ್ಧದಲ್ಲಿ ಖಾಲಿಫತ್ವ ಟರ್ಕಿಯ ಪರಾಭವದ ಮೇಲೆ ಗದೆಯೂ ಬಂದ್ದಾಗಿಂದ, ಅವರ (ಮು[redacted] ಗ್ರತೆಯನ್ನು ಮುಲ್ಲಾ ಮೌಲ್ವಿಗಳು ಅಥ[redacted] ಅವರ ಉಪಯೋಗಿಸ

[illegible] ಬಾಗಿಲನ್ನು ಹೊರಹಾಕುತ್ತಿದ್ದ [illegible] ಕಲ್ಲಿನಿಂದ ಉಂಟಾದುದಲ್ಲ [illegible] ಕಾಂಗ್ರೆಸಿನ [illegible] ಮುಸಲ್ಮಾನರ [illegible] ಕಾಂಗ್ರೆಸಿಗೆ ಈ ಕಷ್ಟಪಡುವುದು [illegible] ಕಾಂಗ್ರೆಸಿನ ವಿಚಾರದಲ್ಲಿ ಹಿಂದೆ ಆ ವೇಳೆಯಲ್ಲಿ ಮುಸಲ್ಮಾನರ ಪ್ರಚಾರಗಳು ಒಂದು ಮುಸಲ್ಮಾನರ ರಾಜಯ ಬಗ್ಗೆ ಸುಂದರವಾದ ಉಪನ್ಯಾಸಗಳನ್ನು ಕೊಡುತ್ತಿದ್ದರು. ಆ ಕಾಲದಲ್ಲಿ ಹಿಂದೂ ಮುಸಲ್ಮಾನರ ರಾಜಯ ನಾಟಕವೂ ಆಯಿತು. ಇದರ ಮರ್ಮವು ಸಾಧುಸ್ವಭಾವದ ಹಿಂದುಗಳಿಗೆ ತಿಳಿಯಲಿಲ್ಲ. ಅಲ್ಲಿ ಬಂಧುಗಳ ಅವಸ್ಥೆಯ ಹೇಳಲಶಕ್ಯ! ಇವರು ಮಹಾತ್ಮಾಜಿಯವರ ವಿಷಯದಲ್ಲಂತೂ ಗುರು-ಶಿಷ್ಯರ ವಿನಾ ಇಲ್ಲವಿಲ್ಲ. ಆ ಪ್ರೇಮಾಲಿಂಗನ ಮತ್ತು ಚುಂಬನದ ಉಡುಪುಗಳನ್ನು ಈಗ ಲಕ್ಷಿಸಿ ನೋಡಿದರೆ ಅಲ್ಲಿ ಬಂಧುಗಳವರೇ? ಎಂದು ಕಣ್ಣುದುರಿಗೆ ಪ್ರಶ್ನೆ ನಿಲ್ಲುತ್ತದೆ. ತಾತ್ಪರ್ಯವೇನೆಂದರೆ ಈ ನೋಟ ಇಷ್ಟು ಎನಿಸಿತೋ, ಸಾಧಾರಣ ಮಾನವರಿಗೆ ಸಂಶಯ ಬರಬೇಕು! ಅದೇ ಅಂತ್ಯಕ್ಕೆ ನಿಜವಾಯಿತು.

ಅಲ್ಲಿ ಬಂಧುಗಳೂ ಇಕ್ ದೋಲರೂ

ಅಲ್ಲಿ ಬಂಧು ಮತ್ತು ಆ ಪಕ್ಷದ ಇತರ ಮುಸಲ್ಮಾನರ ಇಚ್ಛೆಯ ಪ್ರಯೋಗ ಮಾಪಿಳ್ಳೆಯವರ ದಂಗೆ ಕಲಬುರಗಿ, ಕೋಹಟ್, ಸಹರಣಪೂರ, ಮುಲತಾನ ಮತ್ತು ಸಹ್ರಾನಪೂರ ಮುಂತಾದ ಕಡೆಯ ದಂಗೆಗಳಿಂದ ವ್ಯಕ್ತವಾಯಿತು. ಕಡೆಗೆ ಭೋಪಾಲ್ (ವ ಹಮ್ಮದಲ್ಲಿ) ಯವರ ಕೋಹಟ್ ನಾಡಿನ ರಾಷ್ಟ್ರೀಯ ಸಭೆಯು ಅಸ್ಪೃಶ್ಯರನ್ನು [illegible] ಅರ್ಧ ಹಿಂದುಗಳು, ಅರ್ಧ ಮುಸಲ್ಮಾನರು ಹಂಚಿಕೊಳ್ಳಬೇಕು ಎಂಬ [illegible] ಮುಂದೆ ಒಂದು ಸುಳ್ಳವಾದ ನಿರ್ಣಯವನ್ನು [illegible] ಬಿದ್ದಿದ್ದರು. ಇತ್ತೀಚೆಗೆ ಕಾಶ್ಮೀರ ಕಾಂಗ್ರೆಸ ಮತ್ತು ಹಿಂದುಗಳನ್ನು ಯಾವ ದೃಷ್ಟಿಯಿಂದ ನೋಡುತ್ತಿರುವರೆಂದು ಪ್ರತಿ ದಿವಸ ಕಾಣುತ್ತದೆ. ಇದರ ಮೇಲಿಂದ ನನ್ನ ಪ್ರಯತ್ನವು ಯಾವಕಡೆಗೆ ನಡೆದ ಕಾಶ್ಮೀರ ಪ್ರಕರಣದಲ್ಲಿ ಏನು ಮಾಡುತ್ತಿರುವರೆಂದು ಸಂಶಯ ಬಾರದೇ ಇರದು.

ಹೋದವರ್ಷ ಅಖಿಲಭಾರತೀಯ ಮುಸ್ಲಿಂ ಅಧಿವೇಶನದ ಅಧ್ಯಕ್ಷಸ್ಥಾನದಿಂದ ಸರ್ ಮಹಮ್ಮದ ಇಕಬಾಲರು (ಈ ಗ್ರಹಸ್ಥರು 1931 ರಲ್ಲಿ ಲ್ಯಾಂಡನ್ನಿನ ದುಂಡುಮೇಜಿನ ಪರಿಷತ್ತಿಗೆ ಹೋಗಿದ್ದರು. ಇವರು ಪರ್ಷಿಯನ್ ಉರ್ದು ಭಾಷೆಗಳಲ್ಲಿ ಉತ್ತಮ ಕವಿಗಳು. ಈಗ ರಚಿಸಿದ ಹಿಂದುಸ್ಥಾನದ ಸ್ವಾತಂತ್ರ್ಯಗೀತೆಗಳು ಬಹು ಪ್ರಸಿದ್ಧವಿವೆ. ಈಗ ಇವರು ಸರ್ ಆಗಿದ್ದಾರೆ.) ಮಾಡಿದ ಭಾಷಣದಲ್ಲಿ ಬಹಳ ವರ್ಷಗಳಿಂದ ಪಡೆಯಬಯಸಿದ ಸಂಯುಕ್ತ ಮುಸಲ್ಮಾನ ರಾಷ್ಟ್ರದ ಸ್ವಪ್ನವನ್ನು ವ್ಯಕ್ತ ಮಾಡಿದರು. ಇದರ ಬಗ್ಗೆ ಕೆಲ ಮುಸಲ್ಮಾನರು ಕಾಬೂಲ ನಡೆದಮಾಡಿದರೂ ಇದರಲ್ಲಿ ಏನು ಬೇಯುತ್ತಿರುವದೆಂದು ಸ್ಪಷ್ಟ ಕಾಣುತ್ತದೆ.

ಕೆಲ ತಿಂಗಳ ಹಿಂದೆ ಕಾಶ್ಮೀರದಲ್ಲಿ ಡಾಕ್ಟರ ನವಾಬರ ಅಧ್ಯಕ್ಷತೆಯಲ್ಲಿ ಮುಸಲ್ಮಾನರ ಸಮ್ಮೇಳನವಾಗಿತ್ತು. ಆ ಕಾಲದಲ್ಲಿ ಈ ಮಹಾರಾಯರು - ಮುಸಲ್ಮಾನರು ಬಹು ಸಂಖ್ಯಾತರಿರುವಾಗ ಹಿಂದು ರಾಜನು ಇಲ್ಲಿ ಆಳುವದು ಇಸ್ಲಾಮಿಗೆ ಕಲಂಕ ವೆಂದು ಹೇಳಿದರು. ಈ ಭಾಷಣದ ಬಗ್ಗೆ ಹಿಂದೂ ಹಿತದ ಬಗ್ಗೆ ಹೆಣಗಾಡುವ ಕೆಲ ಪತ್ರಿಕೆಗಳು ಹಿಂದುಗಳಿಗೆ ಎಚ್ಚರಿಕೆ ಕೊಟ್ಟವು. ಆದರೆ ಹಿಂದುಗಳು ಕಾಂಗ್ರೆಸ್ಸಿನ ಭೋಳೆತನದ್ದಿಂದ ಮಗ್ನರಾಗಿರುವಾಗ ಹೇಗೆ ಕೇಳಿಸಬೇಕು! ಕಾಶ್ಮೀರದಲ್ಲಿ ಮುಸಲ್ಮಾನರಿಗೆ ಇದ್ದ ಸವಲತ್ತು ನೋಡಿದರೆ ರಾಜನು ಮುಸಲ್ಮಾನನಿದ್ದರೂ ಇದಕ್ಕಿಂತ ಹೆಚ್ಚಿಗೆ ಮಾಡಲಾರದೆಂದು ಅಂದೀತು.

ಒಂದು ಹೋಲಿಕೆ

ಮುಸಲ್ಮಾನರ ಈ ಚಳವಳಿಯು ಕಾರಣವು ರಾಜಕೀಯ ಹಕ್ಕುಗಳನ್ನು ಪಡೆಯುವದಿದ್ದರೆ, ಅದಕ್ಕೆ ಯಾರೂ ಅಡ್ಡಿ ಮಾಡಲು ಕಾರಣವು ಇಲ್ಲ. ಆದರೆ ಬೇರೆಗೆ ಮಾತ್ರ ಧಾರ್ಮಿಕ ಹಕ್ಕನ್ನು ಪಡೆಯುವ ಚಳವಳಿಯೆಂದು ಕಟ್ಟಿತು. ಕಾಶ್ಮೀರದ ಮಹಾರಾಜರಾದ ಸರ್ ಹರಿಸಿಂಗರನ್ನು [illegible] ಆ ಸ್ಥಾನದಲ್ಲಿ ಆಡಳಿತ [illegible] ಇಸ್ಲಾಮಿನ [illegible] ವಿರುದ್ಧ, ನವಾಬ [illegible] ಜನರು ಹಿಂದುಗಳಿದ್ದ ಹೈದರಾಬಾದ (ದಕ್ಷಿಣ), ಜುನಾಗಡ, ಭೋಪಾಲ ರಾಂಪೂರ ಮುಂತಾದ ಸಂಸ್ಥಾನಗಳಲ್ಲಿ ನೋಡಿದರೆ ಬಹು ಸಂಖ್ಯಾತರು ಹಿಂದುಗಳಿದ್ದರೂ ತಮ್ಮ ಜನನ ವಿಷಯದ ಮತ್ತು ಧರ್ಮದ ಹಕ್ಕುಗಳಿಲ್ಲ. [illegible] ಹೈದರಾಬಾದದಲ್ಲಿಯ ಪ್ರಜೆಗಳಲ್ಲಿ 1 ಲಕ್ಷ ತೆಲುಗು, 34 ಲಕ್ಷ ಮರಾಠಿ ಮತ್ತು 16 17 ಲಕ್ಷ ಕನ್ನಡ ಮಾತಾಡುವ ಹಿಂದುಗಳಿದ್ದು ಅವರಿಗೆ ಮಾತೃಭಾಷೆ ಶಿಕ್ಷಣವಿಲ್ಲ. [illegible] ಮಾಸಗಿಯಿಂದ ಶಾಲೆಗಳನ್ನು ತೆರೆದರೆ ನಿಜಾಮನು [illegible] ಬಂದಿ ಮಾಡುವನು. [illegible] ಹಿಂದುಗಳು [illegible] ಧರ್ಮದ ವಿಷಯದಲ್ಲಂತೂ ದೇವಸ್ಥಾನಗಳ ಜೀರ್ಣೋದ್ಧಾರ ಸಹ ಮಾಡ [illegible] ಇನ್ನೂ ಬಹಳವಿದೆ. ಕೆಲ ವರ್ಷಗಳ ಹಿಂದೆ ಪ್ರಸಿದ್ಧ ಲೇಖಕರಾದ ಸೇಟ ನಾರಾಯಣಸಿಂಗರು ಬರೆದ ಹೈದರಾಬಾದ ಸಂಸ್ಥಾನದಲ್ಲಿಯ ಹಿಂದುಗಳ ಮೇಲಾಗುವ ಅತ್ಯಾಚಾರಗಳ ವಿಷಯವನ್ನು ಎತ್ತಿ ಹೇಳಿದವರು ಓದಿದಲ್ಲಿ ಸಾಕು. 2-3 ತಿಂಗಳ ಹಿಂದೆ ಪುಣೆಯ ಪ್ರಸಿದ್ಧ "ಕೇಸರಿ" ಪತ್ರದಲ್ಲಿ ಹೈದರಾಬಾದದ ಹಿಂದುಗಳ ಸ್ಥಿತಿಯ ವಿಷಯದಲ್ಲಿ ಬರೆದ ವಿಸ್ತೃತ ಲೇಖಗಳನ್ನು ಓದಿದರೆ ಅಲ್ಲಿಯ ನಿಜಸ್ಥಿತಿ ತಿಳಿದೀತು. [illegible]

The report of the Indian States Committee presided over by the Right Honourable J. C. C. Davidson has been issued simultaneously in England and India. The main question before the Committee was to examine the financial relations of the Indian States with the Government of India with a view to remove the obstacles that would lie in the way of an ideal system of Federal finance. The distinguishing features of the situation were two, firstly, the direct contribution made by the States to which there was no parallel in the case of British Indian Provinces, and secondly, many of the States enjoying a measure of immunity from the incidence of those very taxes which would be the main sources of Federal revenue. In this article we would like to refer to the findings of the Davidson Committee with regard to the former especially from the point of view of Mysore. It may be noted that this Committee made an extensive tour among the Indian States and have to incur an expenditure of over a lakh and a half of rupees. The report gives no doubt an indication of a detailed study of the problem concerned but we certainly cannot give them credit for much sympathy with some of the States. Every one will remember the recommendation of the Federal Structure Committee of the R. T. C. that in so far as the cash contributions made by the States were of a feudal nature they should be wiped out *Pari Passu* with the direct contributions required from the British Indian Provinces and further, that there should be immediate remission in respect of any part of such contribution which may be in excess of 5 percent of the total revenue of the State concerned. The present report however, says that these contributions are not of a feudal nature. We would like to know from the eminent authors of the report what is the nature of the contributions if they are not of a feudal character. They should surely have taken the trouble of enlightening the readers of the report on the exact nature of the contributions. Evidently they were afraid that if they termed those contributions as of a feudal character they would not be able to justify their continuance for any longer. After a mountain of labour this Committee has produced the mouse of a remission of what is in excess of 5 percent of the total revenues. They have not gone a bit further than the Federal Structure Committee. As regards the remaining payments by the States the Committee recommends that the moiety should be extinguished at the latest in 10 years from Federation and the whole within 20 years. We are sorry to observe that this Committee has missed the fundamental point in the case. It is not that the States are unwilling to contribute their quota to the Federal revenues even as the provinces would do but they feel it inconsistent with their position as units of the same Federation, to pay a tribute to that Federal Government. If the Committee had brought their unprejudiced mind to bear upon this important question there would have been no difficulty in appreciating this standpoint. If they had honestly tackled the question from this point of view they would have been compelled by both the force of logic and the need for equity, to come to the irresistable conclusion of doing away with these tributes. We wonder how it did not appeal to the Committee that it would be almost galling to the self respect of a State to enter into a Federation with the badge of inferiority which the payment of a tribute would certainly mean. In fact, the States have been insisting on the wiping out of these tributes as a condition precedent to their joining the Federation. As regards those States which are not joining the Federation the Committee's recommendation for the abolition of the contributions in the course of 20 years does not apply at all. This is hardly an honest way of welcoming States to join the Federation. The Committee not satisfied with such a conservative and ill-liberal and we may add unfair and unjust proposal, have gone about to define who the recipients of these contributions are. They say that they are payable to the Paramount power and not to the Federal Government. There cannot be a more puerile suggestion than this because they at the same time say that the Paramount power would place the contributions, so long as they continue to be paid, at the disposal of the Federal Government. Every pie of these contributions ever since they have been levied has gone to the Government of India. Whether or when the Federal Government is to be constituted we are astonished that this Committee should attempt to bring in the claim of the Paramount power in connection with these contributions as opposed to the claims of the Federal Government. So much about the contributions. They do not say anything about the restoration of the Assigned Tracts, namely the Civil and Military Station. We would like to await the full report in connection with this question. So far as the present summary of the recommendation goes there is no indication as to their restoration. We would not be surprised if the Committee have been equally unsympathetic with regard to this question also. After all, the net advantage to Mysore would be a saving about Rs. 7 lakhs. In these hard days we suppose that we should say something is better than nothing. We hope that our energetic and patriotic Dewan whose efforts in this direction have deservedly won him praise from all quarters, will not rest until he gets these contributions wiped out completely.

ಡೇವಿಡ್‌ಸನ್ ಕಮಿಟಿಯೂ, ಮೈಸೂರೂ

ಆರ್ಥಿಕ ವಿಚಾರದಲ್ಲಿ ಭಾರತ ಪ್ರಭುತ್ವಕ್ಕೂ ದೇಶೀಯ ಸಂಸ್ಥಾನಗಳಿಗೂ ಇರತಕ್ಕ ಪರಸ್ಪರ ಸಂಬಂಧವು ಮುಂದಾಗಲಿಕ್ಕಿರುವ ಫೆಡರೇಷನ್ನಿನ ನಿರ್ಮಾಣಕ್ಕೆಷ್ಟರಮಟ್ಟಿಗೆ ಪ್ರತಿಬಂಧಕವಾಗಿರುತ್ತದೆಂಬುದನ್ನು ವಿಚಾರಿಸಿ ತನ್ನ ಪಾರ್ಶವಾದರ್ಪವಾಗಿ ತಕ್ಕ ಸೂಚನೆಗಳನ್ನು ಕೊಡಲು ಏರ್ಪಟ್ಟಿದ್ದ ಡೇವಿಡ್ಸನ್ ಕಮಿಟಿಯವರು 10 ಮಾಸದ ಮೈಲು ಸಂಚರಿಸಿ ಆಯಾ ಸಂಸ್ಥಾನಾಧೀಶರುಗಳೊಡನೆ ಅಥವಾ ಅವರ ಮಂತ್ರಿಗಳೊಡನೆ ಸಂಭಾಷಿಸಿ ಇಂಗ್ಲೆಂಡಿಗೆ ಹಿಂದಿರುಗಿ ಕಳೆದ ಮೇ ತಿಂಗಳಲ್ಲಿ ಬರೆದ ವರದಿಯು ಇಂಗ್ಲೆಂಡಿನಲ್ಲೂ ಇಂಡ್ಯಾದಲ್ಲೂ ಕಳೆದ ಗುರುವಾರ ಏಕಕಾಲದಲ್ಲಿ ಪ್ರಕಟಿಸಲ್ಪಟ್ಟಿತು. ಇವರ ಸಂಚಾರಕ್ಕಾಗಿ 1½ ಲಕ್ಷ ರೂ ವೆಚ್ಚವಾಗಿರುವುದು. ಈ ವರದಿಯ ಕನ್ನಡ ಭಾಷಾಂತರವು ಸಶೇಷವಾಗಿ ಈ ಪತ್ರಿಕೆಯ ಬೇರೆಕಡೆ ಮುದ್ರಿಸಲ್ಪಟ್ಟಿದೆ. ಈ ಕಮಿಟಿಯವರು ಕೆಲಸಂಸ್ಥಾನಗಳ ವಿಚಾರದಲ್ಲಿ ಮಾತ್ರ ತಮ್ಮ ಸಹಾನುಭೂತಿಯನ್ನು ತೋರಿಸಿರುವುದಕ್ಕಾಗಿ ನಾವು ಅವರನ್ನು ಖಂಡಿತವಾಗಿ ಪುರಸ್ಕರಿಸುವುದಿಲ್ಲ. ಸಂಸ್ಥಾನಗಳು ಸಲ್ಲಿಸುತ್ತಿರುವ ಪೊಗದಿಯು ಅವುಗಳ ಗೌರವಕ್ಕೆ ಕುಂದಕವಾಗಿರುವುದರಿಂದ ಅದು ಕೂಡಲೆ ತಪ್ಪಿಸಲ್ಪಡಬೇಕೆಂದೂ ಈ ಪೊಗದಿಯು ಸಂಸ್ಥಾನದ ಒಟ್ಟು ಆದಾಯದಲ್ಲಿ ಶೇಕಡ ೫ ಕ್ಕಿಂತ ಹೆಚ್ಚಾಗಿದ್ದರೆ ಹೆಚ್ಚು ಮೊಬಲಗು ಅವುಗಳಿಗೆ ಬಿಟ್ಟುಕೊಡಲ್ಪಡಬೇಕೆಂದೂ ಫೆಡರಲ್ ಸ್ಟ್ರಕ್ಚರ್ ಕಮಿಟಿಯವರು ಅಭಿಪ್ರಾಯಪಟ್ಟಿರುವುದು ಎಲ್ಲರಿಗೂ ತಿಳಿದೇ ಇರುವುದು. ಆದರೆ ಈ ಪೊಗದಿಯನ್ನು ಕೇಳುವುದು ಸಂಸ್ಥಾನಗಳಿಗೆ ಅವಮಾನಕರವಲ್ಲವೆಂದು ಪ್ರಸಕ್ತ ವರದಿಯಲ್ಲಿ ಹೇಳಲ್ಪಟ್ಟಿದೆ. ಹಾಗೆ ಅದು ಅವಮಾನಕರವಲ್ಲದಿದ್ದರೆ ಮತ್ತೇತಕ್ಕೆಂಬುದನ್ನು ಈ ಕಮಿಟಿಯವರು ಎವರಿಕ್ಕಿದ್ದರೆ ಅನುಕೂಲವಾಗಿರುತ್ತಿದ್ದಿತು. ಈ ಪೊಗದಿಯು ಫ್ಯೂಡಲ್ ಅಂದರೆ ಗುತ್ತಿಗೆಯ ಸ್ವಭಾವವೆಂದು ಹೇಳಿದ್ದರೆ ಅದು ನಿಲ್ಲಿಸಲ್ಪಡದೆ ಸಲ್ಲಿಸಲ್ಪಡಬೇಕೆಂದು ಹೇಳಲಾಗುತ್ತಿರಲಿಲ್ಲವೆಂದರಿತೇ ಹಾಗೆ ಹೇಳದೆ ಬಿಟ್ಟಿರುವರು. ಈ ಕಮಿಟಿಯವರ ಸಾಹಸವು ಬೆಟ್ಟವನ್ನಗೆದು ಇಲಿಯನ್ನು ಹಿಡಿದಂತೆ ಪರಿಣಮಿಸಿರುತ್ತದೆ. ಶೇಕಡ ೫ ಕ್ಕಿಂತ ಹೆಚ್ಚಾಗಿರುವ ಮೊಬಲಗು ತಪ್ಪಿಸಲ್ಪಟ್ಟ ಮೇಲೆ ಉಳಿಯುವ ಮೊಬಲಗಿನಲ್ಲಿ ಅರ್ಧವು 10 ವರ್ಷದೊಳಗೆ ತಪ್ಪಿಸಲ್ಪಡಬೇಕೆಂದೂ ಉಳಿದ ಅರ್ಧವು 20 ವರ್ಷದೊಳಗೆ ನಿಶ್ಶೇಷವಾಗಿ ತಪ್ಪಿಹೋಗಬೇಕೆಂದೂ ಅಭಿಪ್ರಾಯಪಟ್ಟಿರುವರು. ಸಂಸ್ಥಾನಗಳವರು ತಮ್ಮಾದಾಯದಲ್ಲಿ ಕೆಲಂಶ ಭಾಗವನ್ನು ಫೆಡರಲ್ ಪ್ರಭುತ್ವಾದಾಯಕ್ಕೆ ಕೊಡಲು ಅಸಮ್ಮತಿಸುವುದಿಲ್ಲವಾದರೂ ಹಾಗೆ ಕೊಡುವುದು ಫೆಡರೇಷನ್ನಿಗೆ ಸೇರಬೊಕ್ಕಿರುವ ತಮ್ಮ ಯೋಗ್ಯತೆಗೆ ಕುಂದಕವೆಂದು ಭಾವಿಸುತ್ತಾರೆ. ಈ ಕಮಿಟಿಯವರು ನಿರ್ಮತ್ಸರ ಬುದ್ಧಿಯಿಂದ ಈ ವಿಷಯವನ್ನು ಪರ್ಯಾಲೋಚಿಸಿದ್ದರೆ ಪೊಗದಿಯನ್ನು ಕೂಡಲೆ ತಪ್ಪಿಸಬೇಕಾದದ್ದು ನ್ಯಾಯಯುತವೂ ಆವಶ್ಯಕವೂ ಎಂದು ಅವರು ನಿರ್ಧಾರವಾಗಿ ಹೇಳದೆ ಇರುತ್ತಿರಲಿಲ್ಲ. ದೇಶೀಯ ಸಂಸ್ಥಾನಗಳು ಆತ್ಮಗೌರವಕ್ಕೆ ಕುಂದಕವಾದ ಪೊಗದಿಯನ್ನು ತೆರುತ್ತ ಫೆಡರೇಷನ್ನಿಗೆ ಸೇರುವುದು ಮನೋವೇದಕವೆಂಬುದು ಈ ಕಮಿಟಿಯವರಿಗೆ ತೋರದಿದ್ದುದು ಆಶ್ಚರ್ಯ. ಫೆಡರೇಷನ್ನಿಗೆ ಸೇರುವುದರ ಮೊದಲೇ ಪೊಗದಿಯನ್ನು ತಪ್ಪಿಸಬೇಕೆಂದು ಸಂಸ್ಥಾನಗಳು ಒತ್ತಾಯಪಡಿಸುತ್ತಿರುವುದು ಯುಕ್ತವಾಗಿದೆ. ಇದಕ್ಕೆ ಫೆಡರೇಷನ್ನಿಗೆ ಸೇರದಿರುವಂತಹವುಗಳ ಪೊಗದಿಯು 20 ವರ್ಷಗಳೊಳಗ ತಪ್ಪಿಸಲ್ಪಡಬೇಕೆಂದು ಕಮಿಟಿಯವರು ಮಾಡಿರುವ ಶಿಫಾರಸು ಅನ್ವಯಿಸುವುದಿಲ್ಲ. ಈ ಕಮಿಟಿಯವರು ಅನ್ಯಾಯವನ್ನೂ, ಅನುಚಿತವನ್ನೂ, ಅನುದಾರವನ್ನೂ, ಅಸಭ್ಯವನ್ನೂ ಆದ ಸೂಚನೆಯನ್ನು ನಮೂದಿಸುವುದು ಸಾಲದೆ, ಪೊಗದಿಯು ಯಾರಿಗೆ ಸಲ್ಲತಕ್ಕದೆಂಬುದನ್ನು ಸಹ ವಿವರಿಸಿರುತ್ತಾರೆ. ಈ ಪೊಗದಿಯು ಸಾರ್ವಭೌಮಪ್ರಭುತ್ವಕ್ಕೇ ಹೊರತು ಫೆಡರಲ್ ಪ್ರಭುತ್ವಕ್ಕೆ ಸಲ್ಲತಕ್ಕದಲ್ಲವೆಂದು ಸೂಚಿಸಿರುತ್ತಾರೆ. ಈ ಕಮಿಟಿಯವರು, ಪೊಗದಿಯು ಕೊಡಲ್ಪಡುವವರೆಗೂ ಅದನ್ನು ಸಾರ್ವಭೌಮಪ್ರಭುತ್ವದವರು ಫೆಡರಲ್ ಪ್ರಭುತ್ವಕ್ಕೆ ಕೊಡುವರೆಂದು ಹೇಳಿರುವುದು ಹಾಸ್ಯಾಸ್ಪದವಾಗಿದೆ. ಪೊಗದಿಯು ಪ್ರಾರಂಭವಾದಂದಿನಿಂದ ಅದರ ಪ್ರತಿಯೊಂದು ಕಾಸೂ ಇಂಡ್ಯಾ ಪ್ರಭುತ್ವದ ಬೊಕ್ಕಸಕ್ಕೇ ಹೋಗಿರುವುದು. ಫೆಡರಲ್ ಪ್ರಭುತ್ವ ನಿರ್ಮಾಣವಾದಾಗ್ಗೆ ಇದಕ್ಕೆ ಸಲ್ಲಬೇಕಾದ ಪೊಗದಿಯ ಹಣವು ಸಾಮ್ರಾಜ್ಯ ಪ್ರಭುತ್ವಕ್ಕೆ ಸಲ್ಲುವಂತೆ ಮಾಡಲು ಈ ಕಮಿಟಿಯವರು ಪ್ರಯತ್ನಿಸಿರುವುದು ಆಶ್ಚರ್ಯಜನಕವೆನಿಸುತ್ತದೆ. ಪೊಗದಿಯ ವಿಚಾರವಾಗಿ ಹೇಳ್ಬೇಕಾದಂತೆ ಹೇಳಿರುತ್ತಾರಲ್ಲದೆ ಸಂಸ್ಥಾನಗಳು ಭಾರತಪ್ರಭುತ್ವದವರಿಗೆ ವಹಿಸಿಕೊಟ್ಟಿರುವ ಭೂಪ್ರದೇಶವನ್ನು ಅಂದರೆ ದಂಡುಪ್ರದೇಶವನ್ನು ಅವರುಗಳಿಗೆ ಹಿಂದಿರುಗಿ ವಹಿಸಿಕೊಡುವ ವಿಚಾರದಲ್ಲಿ ಏನನ್ನೂ ಹೇಳಿರುವುದಿಲ್ಲ. ಆದರೂ ಈ ಸಂಕ್ಷೇಪವಾಗಿ ಸಂಪೂರ್ಣ ವರದಿಯಲ್ಲಿ ಏನು ಹೇಳಲ್ಪಟ್ಟಿರುವುದೋ ನೋಡಬೇಕು. ಈಗಿನ ವರದಿಯಲ್ಲಿ ಮಾತ್ರ ದಂಡು ಪ್ರದೇಶವನ್ನು ಸಂಸ್ಥಾನಗಳಿಗೆ ಹಿಂದಿರುಗಿ ವಹಿಸಿಕೊಡುವ ವಿಚಾರದಲ್ಲಿ ಅವರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದರೂ ನಾವು ಆಶ್ಚರ್ಯಪಡಬೇಕಾಗಿಲ್ಲ. ತಾನು ಪ್ರತಿವರ್ಷದಲ್ಲೂ ತೆರುತ್ತಿರುವ ಪೊಗದಿಯಲ್ಲಿ 7 7 ಲಕ್ಷ ರೂ ಉಳಿತಾಯವಾಗುವುದೇ ನಮ್ಮ ಸಂಸ್ಥಾನಕ್ಕೆ ಸಾಮ್ರಾಜ್ಯ ಪ್ರಭುತ್ವ ನಿರ್ಮಾಣದಿಂದ ಆಗುವ ಪ್ರಯೋಜನವು. ಈ ಆರ್ಥಿಕ ವಿಷಮಸ್ಥಿತಿಯಲ್ಲಿ ದೊರೆತಷ್ಟೆ ಲಾಭವೆಂದು ಭಾವಿಸಬೇಕಾಗಿದೆ. ಸಂಸ್ಥಾನದ ಪೊಗದಿಯನ್ನು ಬಿಡಿಸಿಕೊಳ್ಳಲು ಅವಿಶ್ರಾಂತ ಸಾಹಸಮಾಡಿ ಸಮಸ್ತರ ಪ್ರಶಂಸೆಗೆ ಪಾತ್ರರಾಗಿರುವ ನಮ್ಮ ದಿವಾನ್ ಸರ್ ಮಿರ್ಜಾಯವರು ದುಸ್ಸಹವಾದ ಪೊಗದಿಯು ನಿರ್ಮೂಲವಾಗುವವರೆಗೂ ಪ್ರಯತ್ನಿಸದೆ ಬಿಡುವುದಿಲ್ಲವೆಂದು ನಿರೀಕ್ಷಿಸುತ್ತೇವೆ.

ಡಿ. ಎಲ್. ಬಿ. ಅಸೋಸಿಯೇಷನ್ನಿನ ವರದಿ

ಧಾರವಾಡ ಲಿಂಗಾಯತ ಎಜ್ಯುಕೇಷನ್ ಅಸೋಸಿಯೇಷನ್ನಿನ 1931-32ನೆಯ ವರ್ಷದ ವರದಿಯ ಪ್ರತಿಯನ್ನು ಸಂತೋಷದಿಂದ ಸ್ವೀಕರಿಸುತ್ತೇವೆ. ಈ ಫಂಡಿನ ಮೂಲಧನವಾದ 2,00,000 ರೂಪಾಯಿಗಳು ಗವರ್ನಮೆಂಟು ಸೆಕ್ಯೂರಿಟಿಗಳ ಮೇಲೆ ಬೊಂಬಾಯಿ ಖಜಾನೆಯಲ್ಲಿಡಲ್ಪಟ್ಟಿವೆ. ಈ ಮೊಬಲಗಿಗೆ ಪ್ರತಿ ವರ್ಷದಲ್ಲೂ ಬರುವ ೧,೦೦೦ ರೂ ಬಡ್ಡಿಯನ್ನು ಬ್ಯಾಂಕಿನಲ್ಲಿಡುವುದರಿಂದ ಇದಕ್ಕೆ 100 ರೂ ಬಡ್ಡಿ ಬರುತ್ತದೆ. ಇದಲ್ಲದೆ ಹುಬ್ಬಳ್ಳಿಯ ಶ್ರೀ ಗಂಗಾಧರಸ್ವಾಮಿ ಮೂರು ಸಾವಿರ ಮನೆ ಪ್ರೆಸ್ಸಿಂಗ್ ಮತ್ತು ಜಿನ್ನಿಂಗ ಕಂಪೆನಿಯವರಿಂದ ಪ್ರತಿ ವರ್ಷದುತ್ಪನ್ನದಲ್ಲಿ ಕೆಲಭಾಗ ಅಂದರೆ ಸುಮಾರು 1,000 ಚಿಲ್ಲರೆ ರೂಪಾಯಿಗಳು ಕೊಡಲ್ಪಡುತ್ತಿವೆ. ಪ್ರಸಕ್ತ ವರ್ಷದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ೧೦, ದೇವೀಹೊಸೂರು ಟ್ರೈನಿಂಗ್ ಕಾಲೇಜಿನವರು ೧೩, ಕಾಲೇಜಿನವರು 13, ಧಾರವಾಡ ಕಾರೇ ಅಗ್ರಿಕಲ್ಚರ್ ಸ್ಕೂಲಿನ ವಿದ್ಯಾರ್ಥಿ 1, ಬೆಳಗಾವಿ ಕಲಾಭವನದವನು 1, ಕೊಲ್ಹಾಪುರದ ವಿದ್ಯಾರ್ಥಿ 1 ಬಿ ಟ್ರೈನಿಂಗ್ ಕಾಲೇಜಿನವನು 1, ಲಂಡನ್ನಿನಲ್ಲಿ ಎಂಜಿನಿಯರಿಂಗ್ ಕಲಿಯುವವನು 1, ಕಾಶಿಯಲ್ಲಿ ಸಂಸ್ಕೃತ ವ್ಯಾಸಂಗ ಮಾಡುವವರು 12 ಈ ಪ್ರಕಾರವಾಗಿ 128 ವಿದ್ಯಾರ್ಥಿಗಳಿಗೆ ಒಟ್ಟು 8,026 ರೂ ಗಳ ವೇತನವು ಕೊಡಲ್ಪಟ್ಟಿರುವುದು. ವಿದ್ಯಾರ್ಥಿ ವೇತನವನ್ನು ಕೋರಿದ್ದ 230 ಮಂದಿಗಳಲ್ಲಿ ಧನಾಭಾವದಿಂದ 128 ಮಂದಿಗಳಿಗೆ ಮಾತ್ರ ಕೊಡಬೇಕಾಗಿ ಬಂದಿತೆಂದೂ, ವಿದ್ಯಾರ್ಥಿಗಳು ಒಳ್ಳೆ ಆಟ್ಸ್ ಗ್ರಾಜ್ಯುಯೇಟುಗಳಾಗಲು ಪ್ರಯತ್ನಿಸುವುದಕ್ಕಿಂತ ಕಾಲಾನುಗುಣವಾಗಿ ಉದ್ಯೋಗಿಕ ಶಿಕ್ಷಣದ ಕಡೆಗೆ ಗಮನ ಕೊಡುವುದುತ್ತಮವೆಂದೂ ವರದಿಯಲ್ಲಿ ಹೇಳಲ್ಪಟ್ಟಿದೆ. ಈಗಿನ ಕಾಲದಲ್ಲಿ ಸರ್ಕಾರಿಯುದ್ಯೋಗವು ದೊರೆಯುವುದು ಕಷ್ಟವಾದುದರಿಂದ ಆದಾಯಕರವಾದ ಉದ್ಯೋಗಿಕ ಶಿಕ್ಷಣವನ್ನು ಹೊಂದುವುದು ಶ್ರೇಯಸ್ಕರವು. ಈ ಫಂಡಿನಿಂದ ವೇತನವನ್ನು ಪಡೆದವರು ಸಂಪಾದನೆಗಾರಾದ ಮೇಲೆ ಆ ಹಣವನ್ನು ಹಿಂದಿರುಗಿ ಕೊಡಬೇಕೆಂಬ ನಿಯಮಾನುಸಾರವಾಗಿ 1380-13-7 ರೂ. ಬರಮಾಡಲ್ಪಟ್ಟು ಮೂಲಧನಕ್ಕೆ ಸೇರಿಸಲ್ಪಟ್ಟಿರುತ್ತವೆ. ಆದರೆ ಇಬ್ಬರು ವೇತನದ ಹಣವನ್ನು ಕೊಡದೆ ದಾವಾ ಮಾಡಿಸಿಕೊಂಡಿರುವುದು ಬಹಳ ವಿಷಾದಕರವು. ಪ್ರಭುತ್ವೋದ್ಯೋಗಿಗಳ್ಳಿ ಸೇರಲು ಅರ್ಹರಾದ ವೀರಶೈವ ಅಭ್ಯರ್ಥಿಗಳ ಹೆಸರನ್ನು ಬೊಂಬಾಯಿ ಪ್ರಭುತ್ವದವರಿಗೆ ತಿಳುಹಿಸಿ ಶಿಫಾರಸುಮಾಡುವ ಸೌಲಭ್ಯವು ಲಾರ್ಡ್ ವಿಲ್ಲಿಂಗ್‌ಡನ್ ರವರು ಬೊಂಬಾಯಿ ಗೌರ್ನರರಾಗಿದ್ದಾಗ್ಗೆ ಈ ಸಂಘದವರಿಗೆ ಕೊಡಲ್ಪಟ್ಟಿತು. ಅದರ ಪ್ರಕಾರ ಈ ವರ್ಷದಲ್ಲಿ 37 ಮಂದಿಗಳು ಶಿಫಾರಸುಮಾಡಲ್ಪಟ್ಟಿದ್ದರು. ಆದರೆ ಆರ್ಥಾಭಾವದಿಂದ ಯಾರಿಗೂ ಉದ್ಯೋಗ ದೊರೆಯಲಿಲ್ಲ. ವೆಚ್ಚವನ್ನು ಕಡಿಮೆ ಮಾಡುವುದಕ್ಕಾಗಿ ಉದ್ಯೋಗಸ್ಥರನ್ನು ತೆಗೆಯುವುದರಲ್ಲಿ ವೀರಶೈವರನ್ನು ಕಡಿಮೆಮಾಡಬಾರದೆಂದು ಸಂಘದವರು ಪ್ರಾರ್ಥಿಸಿಕೊಂಡಿದ್ದರು. ಅದರಿಂದ ಸ್ವಲ್ಪವಾದರೂ ಪ್ರಯೋಜನವಾಗಿರಬೇಕೆಂದು ನೆನೆಸಲ್ಪಟ್ಟಿದೆ. ಇಂತಹ

ಪ್ರಾಬಲ್ಯವನ್ನು ನಮ್ಮ ಮೈಸೂರು ಸೀಮೆಯ ವೀರಶೈವ ... ... ಪಂಥ ಸಂಪನ್ನರೂ ನಮ್ಮ ಪ್ರಭುತ್ವದವರಿಂದ ... ... ವೀರಶೈವ ... ... ಗಳಿಗೆ ... ... ಆಗಿರುತ್ತದೆ ಆದ್ದರಿಂದ ಈ ಸಂಘದವರು ಈ ತಿಂಗಳಲ್ಲಿ ನಡೆವ ... ... ಈ ವಿಚಾರದಲ್ಲಿ ಪ್ರಾ... ... ಪ್ರಯತ್ನ ನನ್ನ ... ... ಸರ್ಕಾರದವರ ... ... ವಿದ್ಯಾಭಿವೃದ್ಧಿಗಾಗಿ ... ... ತಾ|| ೮ ... ... ದೇಸಾಯಿ ಶಿಲಾ ಪ್ರತಿಮೆಯನ್ನು ... ... ರವರು ರೂಪಾಯಿಗಳ ವೆಚ್ಚದಿಂದ ಮಾಡಿಸಿ ಬರುವ ಡಿಸೆಂಬರಿನಲ್ಲಿ ಧಾರವಾಡದೊಳಗೆ ವೀರಶೈವ ಮಹಾಸಭೆಯು ನೆರೆಯುವ ಸಮಯದಲ್ಲಿ ಪ್ರತಿಷ್ಠೆಯನ್ನು ಮಾಡಿಸುವ ಪ್ರಯತ್ನವನ್ನು ಈ ಪಂಡಿತರು ಕೈಕೊಂಡಿರುವುದೂ, ತಮ್ಮೊಕ್ಕೂಟದಲ್ಲಿ ವಾಙ್ಮಯ ಕಾರ್ಯವನ್ನು ಏರ್ಪಡಿಸಿ ತನ್ಮೂಲಕ ವೀರಶೈವ ಪುರಾತನ ಮತಗ್ರಂಥಗಳನ್ನು ಶೇಖರಿಸಿ ಶೋಧಿಸಲು ಪ್ರಯತ್ನಿಸಿ ... ... ಪುರಾತನ ಗ್ರಂಥವನ್ನು ಮುದ್ರಣ ಮಾಡಿಸುತ್ತಿರುವುದೂ ಸ್ತುತ್ಯವು ಇತರ ವೀರಶೈವ ವಿದ್ಯಾವರ್ಧಕ ಸಂಘಗಳಿಗೆ ಮಾರ್ಗದರ್ಶಕವೂ ಆಗಿರುತ್ತವೆ ನಮ್ಮ ಮೈಸೂರಿನ ವೀರಶೈವ ವಿದ್ಯಾವರ್ಧಕ ಸಂಘದವರು ಕೆಲ ವರ್ಷಗಳ ಹಿಂದೆ ಕೈಕೊಂಡಿದ್ದ ಶ್ರೀಕರ ಭಾಷ್ಯದ ಮುದ್ರಣವು ಇನ್ನೂ ಪೂರೈಸದೆ ಇದ್ದರ ಜಾಗ್ರತೆ ಪೂರೈಸುವಂತೆ ಪ್ರಯತ್ನಿಸುವರೆಂದೂ, ತತ್ಸಂಬಂಧವಾದ ವಿಷಯವನ್ನು ಈ ತಿಂಗಳಿನಲ್ಲಿ ನಡೆಯುವ ಸಂಘದ ಜನರಲ್ ಮೀಟಿಂಗಿನಲ್ಲಿ ತಿಳಿಸುವರೆಂದೂ ನಿರೀಕ್ಷಿಸುತ್ತೇವೆ ಧಾರವಾಡದ ವಿದ್ಯಾವರ್ಧಕ ಸಂಘದವರ ಆಡಳಿತವು ಪ್ರಸಕ್ತ ವರ್ಷದಲ್ಲಿ ಬಹಳ ಸಮರ್ಪಕವಾಗಿ ನಡೆಯುತ್ತಿರುವುದು ಅಭಿನಂದನೀಯವು ಮತ್ತು ಅವರು ಇನ್ನೂ ಹೆಚ್ಚಾಗಿ ವಿದ್ಯಾರ್ಥಿವೇತನಗಳನ್ನು ಕೊಡಲು ಅನುಕೂಲವಾಗುವಂತೆ ಮಠಾಧಿಪತಿಗಳು ಸಂಘಕ್ಕೆ ದ್ರವ್ಯಸಹಾಯ ಮಾಡುವುದು ಆವಶ್ಯಕವು

ಒಬ್ಬ ಖೈದಿಯನ್ನು ಹಾವು ಕಡಿಯಿತು

ದಿಲ್ಲಿಯ ಸೆಂಟ್ರಲ್ ಜೈಲು ಹೊರಗಡೆ ನಾಲೆಯ ಹತ್ತಿರ ೫೦ ಮಂದಿ ಸಿ ಕ್ಲಾಸ್ ಖೈದಿಗಳು ಕೆಲಸಮಾಡುತ್ತಿರುವಾಗ್ಗೆ ಅವರಲ್ಲೊಬ್ಬನನ್ನು ಹಾವು ಕಡಿಯಿತು. ಅವನು ಕೂಡಲೆ ಆಸ್ಪತ್ರೆಗೆ ಸಾಗಿಸಲ್ಪಟ್ಟನು.

ಹಳೇ ಅಡ್ವೊಕೇಟ್ ಜನರಲ್‌ರವರ ಸೆರೆ

ಹಿಂದೆ ಅಡ್ವೊಕೇಟ್ ಜನರಲ್ಲಾಗಿದ್ದ ಬಲ್ಲುಭಾಯಿ ಜೆ ದೇಸಾಯಿಯವರು ತಮ್ಮ ಮನೆಯಲ್ಲಿರುವಾಗ್ಗೆ ಪೋಲೀಸು ಡೆಪ್ಯುಟಿ ಕಮಿಷನರ್ ಖಾನ್ ಬಹದ್ದೂರ್ ಪೋಟ್‌ರವರಿಂದ ಸೆರೆ ಹಿಡಿಯಲ್ಪಟ್ಟರು ಇನ್ನೊಬ್ಬ ಅಡ್ವೊಕೇಟರೂ ಸೆರೆ ಹಿಡಿಯಲ್ಪಟ್ಟರು.

ಹಡಗಿನ ದೊಡ್ಡ ಅಧಿಕಾರಿಗೆ ಅರ್ಥ ದಂಡ

ಎಸ್ ಎಸ್ ಹವಾಲ್ದಾರ್ ಎಂಬ ಹಡಗಿನಲ್ಲಿ ದೊಡ್ಡ ಅಧಿಕಾರಿಯಾಗಿರುವ ಇ ಎಚ್. ಮೇಕ್‌ಫೀಲ್ಡ್‌ರವರು ಇಬ್ಬರು ಯೂರೋಪಿಯನ್ ಅಪ್ರೆಂಟೆಸ್‌ರವರಿಂದ ಬಿಸಿಲಿನಲ್ಲಿ ಕೆಲಸ ಮಾಡಿಸಿದರೆಂಬ ಅಪರಾಧಕ್ಕಾಗಿ ಪೋರ್ಟು ರೂಲ್ಸಿನ ಪ್ರಕಾರ ೦ ರೂ ಜುಲ್ಮಾನೆ ವಿಧಿಸಲ್ಪಟ್ಟರು

ಮೆಜಿಸ್ಟ್ರೇಟರಮೇಲೆ ಪಾದರಕ್ಷಾ ಪ್ರಯೋಗ

ಎರಡು ಕಳ್ಳತನ ಮಾಡಿದ ಅಪರಾಧಿಗೆ ೨½ ವರ್ಷ ಕಠಿಣ ಸಜಾ ವಿಧಿಸಿರುವುದಾಗಿ ಅಹಮದಾಬಾದಿನ ಮೆಜಿಸ್ಟ್ರೇಟರು ತೀರ್ಪನ್ನು ಹೇಳಿದರು ಖೈದಿಯು ಅದನ್ನು ಕೇಳಿ ಜೋಡನ್ನು ಮೆಜಿಸ್ಟ್ರೇಟರ ಮೇಲೆಸೆದನು ಅದು ದೈವಾಧೀನದಿಂದ ಅವರಿಗೆ ತಗಲಲಿಲ್ಲವಾಗಿ ಖೈದಿಯು ಮತ್ತೊಂದು ಜೋಡನ್ನೆಸೆಯಲು ಪ್ರಯತ್ನಿಸುತ್ತಿರುವಷ್ಟರಲ್ಲಿ ಪೋಲೀಸಿನವರು ಅವನನ್ನು ಹಿಡಿದುಕೊಂಡರು

ಗಾಂಧಿಯವರೊಡನೆ ರಾಯಭಾರ ನಡೆಯಲಿಲ್ಲ

ಬ್ರಿಟಿಷ್ ದೊರೆತನದವರಿಗೂ ಮಹಾತ್ಮ ಗಾಂಧಿಯವರಿಗೂ ರಾಯಭಾರ ನಡೆಯುತ್ತಿರುವುದೆಂಬ ವರ್ತಮಾನವು ನಿರಾಧಾರವಾದುದು ಸತ್ಯಾಗ್ರಹವು ಎರಮಿಸಲ್ಪಡುವವರೆಗೆ ಯಾವ ರಾಯಭಾರವೂ ನಡೆಯುವುದಿಲ್ಲ ರಾಯಭಾರವನ್ನು ನಡೆಸಲು ಒಂದು ಪಕ್ಷ ಇಂಡಿಯಾ ಮಂತ್ರಿ ಹೋರ್‌ರವರು ಒಪ್ಪಿದರೂ ಈಗಿನ ಪಾರ್ಲಿಮೆಂಟಿನ ಮೆಂಬರುಗಳೊಪ್ಪುವುದಿಲ್ಲವೆಂದು ಲಂಡನ್ ಪತ್ರಿಕೆಯು ತಿಳಿಸಿರುತ್ತದೆ

ಬಲಿಕೊಡಲ್ಪಡಲಿಕ್ಕಿದ್ದ ಗೋವನ್ನು ಪರಿಹರಿಸಿದುದು

ಮಹಮ್ಮದೀಯರು ಒಂದು ಮಸೀತಿಯಲ್ಲಿ ಬಲಿಕೊಡಲಿಕ್ಕೆಂದಿದ್ದ ಗೋವನ್ನು ಪರಿಸದ್‌ದಾಸ್ ಎಂಬ ಸನ್ಯಾಸಿಯು ಪೋಲೀಸ್ ಕಾನ್‌ಸ್ಟೆಬಲ್ ಸುರಾಜ್‌ರಾಯ ಎಂಬವನ ಸಹಾಯದಿಂದ ಅಪಹರಿಸಿಕೊಂಡು ಹೋದುದರ ಮೇಲೆ ಹಿಂದು ಮಹಮ್ಮದೀಯರಿಗೆ ಬಡಿದಾಟವು ನಡೆಯಿತು. ಇದಕ್ಕಾಗಿ ಆ ಸನ್ಯಾಸಿಯೂ ಕಾನ್‌ಸ್ಟೇಬಲೂ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಯಾಗಿರುತ್ತಾರೆ.

ಸರ್ಪವು ಹಗ್ಗವನ್ನು ತೀರಿಸಿಕೊಂಡಿತು

ಕಲ್ಲಿಕೋಟೆಯಲ್ಲಿ ಒಬ್ಬ ತೀಯಾ ಜಾತಿಯ ಯುವಕನು ಕಳೆದ ತಾ|| ೨೧ ರ ರಾತ್ರಿ ಕತ್ತಲೆಯಲ್ಲಿ ಮನೆಗೆ ... ವಾಗ್ಗೆ ... ದಾರಿಯಲ್ಲಿ ಒಂದು ಸರ್ಪವನ್ನು ಕಾಣದೆ ತುಳಿದನು ಆದು ಅವನನ್ನು ಕಚ್ಚುತ್ತಿತ್ತು ... ಆದರೆ ಅವನು ತಪ್ಪಿಸಿಕೊಂಡು ಮನೆಗೆ ಬಂದು ... ಸುಖವಾಗಿ ಮಲಗಿದ್ದನು ... ಆ ಹಾವು ಮತ್ತೆ ರಾತ್ರಿ ಮನೆಗೆ ಬಂದು ತನ್ನ ಶತ್ರುವು ... ಅವನನ್ನು ಕಚ್ಚಿತು ಅದರಿಂದ ಅವನು ಮೃತಪಟ್ಟನು.

ಬ್ಯಾಂಕ್ ಕೊಳ್ಳೆ ಹೊಡೆದವನಿಗೆ ಮರಣ ದಂಡನೆ

ಒಂದು ಬ್ಯಾಂಕ್ ಕೊಳ್ಳೆಮಾಡಿ ಪ್ರಸಿದ್ಧನಾಗಿದ್ದ ಕಳ್ಳನು ಕಡೆಯಲ್ಲಿ ಪೋಲೀಸಿನವರಿಗೆ ಸಿಕ್ಕುಬಿದ್ದು ನನ್ನು ಜಡ್ಜರಿಂದ ಅವನಿಗೆ ವಿಧಿಸಲ್ಪಟ್ಟಿದ್ದ ಮರಣ ದಂಡನೆಯು ಹೈ ಕೋರ್ಟಿನಲ್ಲಿ ಸ್ಥಿರಗೊಳಿಸಲ್ಪಟ್ಟಿತು ಈ ಹಂತಕನು ಟೋಬಾನಾ ಅಮಲ್ದಾರನನ್ನು ಕೊಂದಿದ್ದನು ಮತ್ತು ಒಂದು ಗ್ರಾಮದಲ್ಲಿ ಗೋಹತ್ಯಮಾಡುತ್ತಿದ್ದ ಅನೇಕ ಮಂದಿ ಕಸಾಯಿಗಳನ್ನು ಒಂದು ದಿವಸ ಕೊಂದುಬಿಟ್ಟನು ಇಷ್ಟೇ ಅಲ್ಲದೆ ಆ ಪ್ರಾಂತದಲ್ಲಿ ಅವನು ಅನೇಕ ದರೋಡೆಗಳನ್ನು ನಡೆಸಿದ್ದನು

೬೦೦ ಟಿನ್ನು ಪೆಟ್ರೋಲಿಯಂ ಅಗ್ನಿಪಾಲಾಯಿತು

೬೦೦ ಪೆಟ್ರೋಲಿಯಂ ಟಿನ್ನುಗಳನ್ನು ತುಂಬಿಕೊಂಡು ಬೆಜವಾಡಕ್ಕೆ ಸೇರಿದ ಎಲೂರು ಕಾಲುವೆಯಲ್ಲಿ ಹೋಗುತ್ತಿದ್ದ ದೋಣಿಯೊಳಗೆ ನಾವಿಕರು ಎಂದಿನಂತೆ ಅಡಿಗೆ ಮಾಡುತ್ತಿರುವಾಗ್ಗೆ ಪೆಟ್ರೋಲಿಯಮಿಗೆ ಬೆಂಕಿ ಬಿದ್ದು ಟಿನ್ನುಗಳು ಹೊತ್ತಿಕೊಂಡು ಉರಿದುಹೋದುವು ೨೦,೦೦೦ ಮಂದಿ ದಡದಮೇಲೆ ನಿಂತು ನೋಡುತ್ತಿದ್ದರು. ಆವೇಳೆಯಲ್ಲಿ ಮಳೆಯು ಬಂದಾಗ್ಯೂ ಜ್ವಾಲೆಯನ್ನಾರಿಸಲು ೩ ಗಂಟೆಕಾಲ ಹಿಡಿಯಿತು ಇದರಿಂದ ಕಂಪೆನಿಗೆ ಬಹಳ ನಷ್ಟಸಂಭವಿಸಿರುವುದು

ಭಾರತ ಸಾಂಘಿಕ ಸಮಸ್ಯಾ ಪರಿಷ್ಕಾರ

ಪ್ರಧಾನ ಮಂತ್ರಿ ಮೆಕ್ಡೊನಾಲ್ಡ್‌ರವರು ಈಗ ಆಶ್ರಿತರನ್ನು ... ಭಾರತ ಸಾಂಘಿಕ (ಮತ) ಸಮಸ್ಯೆಯನ್ನು ಬಗೆಹರಿಸುವ ವಿಚಾರವಾಗಿ ಬಹಳ ಶ್ರದ್ಧೆಯಿಂದ ಆಲೋಚಿಸುತ್ತಿರುವರು ಈ ತಾ|| ೪ ರಲ್ಲಿ ಮಂತ್ರಿ ವರ್ಗಕ್ಕೆ ಸೇರಿದ ಸಂಘಸಭೆಯು ಜರುಗುವುದು ಆ ಸಭೆಯಲ್ಲಿ ಮೆಕ್ಡೊನಾಲ್ಡ್‌ರವರು ಮುಖ್ಯವಾದ ಸೂಚನೆಯನ್ನು ಕೊಡಬೇಕಾಗಿದೆ ಮೆಕ್ಡೊನಾಲ್ಡರವರಿಗೆ ಬಹಳವಾಗಿ ಆರೋಗ್ಯವಾಗಿರುವುದು. ತಾ|| ೩ ರಲ್ಲಿ ಲಂಡನ್ ಪಟ್ಟಣಕ್ಕೆ ಬರುವರು ಆಗ ಎರಡು ಸಮಸ್ಯೆಯನ್ನೂ ಭಾರತ ಸಮಸ್ಯೆಯನ್ನೂ, ಆಟ್ಟವಾ ಸಭೆಯನ್ನೂ ಕುರಿತು ಮಂತ್ರಿವರ್ಗದವರೊಡನೆ ಪರ್ಯಾಲೋಚಿಸುವರು.

ಮೊಸಳೆಯು ಮಗುವನ್ನು ನುಂಗಿತು

ಹಿಂದು ದಂಪತಿಗಳು ತಮ್ಮ ಮಗುವಿನ ಸಮೇತ ಒಂದು ದೋಣಿಯಲ್ಲಿ ಕುಳಿತು ರವಿ ನದಿಯಮೇಲೆ ವಿಹರಿಸುತ್ತಿರುವಾಗ್ಗೆ ಸ್ತ್ರೀಯು ತನ್ನ ಮಗುವನ್ನು ಸ್ನಾನಮಾಡಿಸಲು ಅದನ್ನು ನೀರಿನಲ್ಲಿ ಅದ್ದಿ ಕೊಂಡಿರುತ್ತಿರುವ ಮೇಲೆ ಮಗುವನ್ನು ಮೇಲೆ ಕ್ಕೆತ್ತಿದಳು ಆ ಮಗುವು ಮೇಲಕ್ಕೆ ಸರಾಗವಾಗಿ ಬರಲಿಲ್ಲ ಮತ್ತು ಯಾವುದೋ ಅದನ್ನು ಹಿಡಿದುಕೊಂಡು ಕೆಳಕ್ಕೆಳೆಯುವಂತೆ ಆಕೆಗೆ ತೋರಿತು ಮೇಲೆಕ್ಕೆತ್ತಲು ಆಕೆಯು ಎಷ್ಟು ಪ್ರಯತ್ನಿಸಿದಾಗ್ಯೂ ಪ್ರಯೋಜನವಾಗಲಿಲ್ಲವಾಗಿ ದೋಣಿಯೊಳಗೆ ಕುಳಿತಿದ್ದವರೆಲ್ಲರೂ ಒಬ್ಬನ ತರುವಾಯ ಒಬ್ಬನು ಮಗುವನ್ನು ಹಿಡಿದುಕೊಂಡು ಮೇಲಕ್ಕೆತ್ತಲು ಸಾಹಸಪಟ್ಟರಾದರೂ ಸಾಧ್ಯವಾಗಲಿಲ್ಲ ಮತ್ತು ಈ ಪ್ರಯತ್ನದಲ್ಲಿ ದೋಣಿಯೊಳಕ್ಕೆ ನೀರು ನುಗ್ಗಿ ತುಂಬಿ ಇದರಿಂದ ದೋಣಿಯು ಮುಳುಗಿಹೋಗುವ ಭಯವುಂಟಾಗಲು ಮಗುವನ್ನು ನೀರಿನೊಳಕ್ಕೆ ಬಿಟ್ಟುಬಿಟ್ಟರು

ರವೀಂದ್ರನಾಥ ಟಾಗೂರರ ವಿಷಾದವು

ಪ್ರಕೃತ ಭಾರತ ಸ್ಥಿತಿಯ ವಿಚಾರವಾಗಿ ಕವೀಂದ್ರರಾದ ರವೀಂದ್ರನಾಥ ಟಾಗೂರರವರು ತಮ್ಮ ವಿಷಾದವನ್ನು ಈ ಪ್ರಕಾರವಾಗಿ ಪ್ರಕಟಿಸುತ್ತಾರೆ —ನ್ಯಾಯದ ಮೇಲೂ, ಸಾಮರಸ್ಯದ ಮೇಲೂ ಆಧಾರಪಟ್ಟುಕೊಂಡು ಸಾಮರಸ್ಯದಿಂದ ಕೂಡಿದ ಸಮಾಧಾನವನ್ನುಂಟುಮಾಡಲಿಕ್ಕೆ ತಕ್ಕ ಅವಕಾಶವು ಈ ಗುಂಪಿಗಿದೆ ಈ ಸಮಾಧಾನವನ್ನುಂಟುಮಾಡಲು ಭಾರತೀಯ ನಾಯಕರೂ, ಭಗವದ್ಭಕ್ತಿಯಿಂದ ಭಾರತ ದೇಶದೊಡನೆ ಸಂಬಂಧವನ್ನುಂಟುಮಾಡಿಕೊಂಡಿರುವ ಬ್ರಿಟೀಷರೂ ದೂರದೃಷ್ಟಿಯಿಂದಲೂ ಧೈರ್ಯ ಸ್ಥೈರ್ಯದಿಂದಲೂ ಕೃಷಿಮಾಡಬೇಕು ಭಾರತ ದೇಶದ ಸಂಪೂರ್ಣ ಕಲ್ಯಾಣದಿಂದಲೇ ಸಮಸ್ತರಿಗೂ ಪ್ರಯೋಜನವಾಗಬೇಕಾಗಿರುವುದರಿಂದ ಅದನ್ನು ಪಡೆಯಲು ಎಲ್ಲರೂ ಭಿನ್ನ ಭಾವವನ್ನು ಬಿಟ್ಟು ತಕ್ಕ ರಾಜ್ಯಾಂಗ ವಿಧಾನವನ್ನೇರ್ಪಡಿಸಲು ಪ್ರಯತ್ನಿಸಬೇಕು ಶಾಂತಿಯುತವಾದ ಸಾಂಘಿಕ ಮತ್ತು ಆರ್ಥಿಕ ಅಭಿವೃದ್ಧಿ ಸಾಧಕವಾದ ರಾಜ್ಯಾಂಗ ವಿಧಾನವನ್ನು ಏರ್ಪಡಿಸಬೇಕು. ಈಗ ಭಾರತ ದೇಶದಲ್ಲಿ ರಾಜಕೀಯದಲ್ಲಿ ಆಂದೋಲನವುಂಟಾಗಿದೆ ಇದು ಮುಂದೆಯೂ ಹೀಗೆಯೇ ಇರುವುದಾದಲ್ಲಿ ಭೇದವು ಬಹಳವಾಗಿ ಹೆಚ್ಚುವುದರಿಂದ ಅನುಕೂಲ ಪರಿಸ್ಥಿತಿಯನ್ನುಂಟು ಮಾಡಲು ಧೀಮಂತರು ಬಹಳವಾಗಿರುತ್ತಾರೆಂಬ ನಂಬಿಕೆಯು ನನಗಿರುತ್ತದೆ ದೇಶದಲ್ಲಿ ಪರಿಸ್ಥಿತಿಯು ಬರುಬರುತ್ತ ಕಠಿಣತರ ಸ್ವರೂಪವನ್ನು ಹೊಂದುತ್ತಿದೆ. ಅವಿಶ್ವಾಸ, ಸಂಶಯ, ದ್ವೇಷ ಮೊದಲಾದುವುಗಳು ಹೆಚ್ಚುತ್ತಿರುವುದು ದೊರೆತನದವರ ... ಭಿನ್ನ ಮತಾಂತರದವರ ಪ್ರತೀಕಾರವೂ ... ಹೆಚ್ಚುತ್ತಿದೆ ... ... ಸ್ಥಿತಿಯ ... ... ದೇಶದ ... ... ಇದ್ದರೂ ... ... ಕ್ರೂರತ್ವ ... ... ಪ್ರಸಂಗದಲ್ಲೆಲ್ಲ ಅಧಿಕಾರಸ್ಥಿತಿಯುಂಟಾದಾಗ್ಗೆ ಅದನ್ನು ಸಹಿಸಬಹುದು, ಆದರೆ ಅನ್ಯಾಯಕರವಾದ ಅತ್ಯಾಚಾರಗಳಿಂದ ಮನುಷ್ಯನ ಸ್ವಾಭಿಮಾನಭಾವವು ಸಂಪೂರ್ಣವಾಗಿ ಹೋಗುವುದು ಆದುದರಿಂದ ಮನುಷ್ಯ ಚರಿತ್ರೆಯನ್ನು ಕಾಪಾಡಬೇಕೆಂಬವರು ಇವುಗಳಿಗೆ ಯಾವಾಗಲೂ ಅವಕಾಶ ಕೊಡಕೂಡದು ಇಂಡಿಯಾದಲ್ಲಿ ಪಾಲಕಪಾಲ್ಯರಲ್ಲಿ ನೈತಿಕ ಸಂಬಂಧವು ಕೆಟ್ಟುಹೋಗಿರುವುದರಿಂದ ಉಂಟಾಗಿರುವ ದುಸ್ಥಿತಿಯು ದಿನದಿನಕ್ಕೆ ದುರ್ಭರವಾಗುತ್ತಿರುವುದಲ್ಲದೆ ಬಹಳ ಅಸಹ್ಯಕರವಾಗಿ ಸಹ ಕಂಡುಬರುತ್ತಿದೆ ಇದರಿಂದ ದೇಶವು ಕೇವಲ ಕಠಿಣತೆಗೆ ಒಳಗಾಗುವ ಸೂಚನೆಯು ಕಂಡುಬರುತ್ತಿರುವುದೆಂದು ಪ್ರಕಟಿಸಿದ್ದಾರೆ.

ಒಳದೇಶದ ವೃತ್ತಾಂತಗಳು

ಶ್ರೀಮನ್ಮಹಾರಾಜರವರ ಸ್ವಾರಿಯು ಕಳೆದ ಸೋಮವಾರ ಬೆಂಗಳೂರಿಗೆ ಚಿತ್ತೈಸಿದ್ದು ಕಳೆದ ಶುಕ್ರವಾರ ಸಾಯಂಕಾಲ ರಾಜಧಾನಿಗೆ ದಯಮಾಡಿ ನೆನ್ನೆಯ ದಿವಸ ಬೆಂಗಳೂರಿಗೆ ತೆರಳಿತು.

ರಾಜಧಾನಿಯಲ್ಲಿ ಇಲಿಗಳು ಸಾಯುವುದು ಹೆಚ್ಚಾಗಿ ಇಟಗೆಗೂಡಿನಲ್ಲಿ ಪ್ಲೇಗು ಮರಣಗಳಾದವಲ್ಲದೆ ಒಬ್ಬರ್ ಮೊಹಲ್ಲಾ ಸೀಬಯ್ಯನ ಗಲ್ಲಿಯ ಶ್ರೀಲಂಕಾ ಕೆಂಪೇಗೌಡರಿಂದಲೂ ಪ್ಲೇಗು ಸಾವುಗಳಾದವು. ಇದರಿಂದ ಈ ರೋಗವು ಹ್ರಬಲಿಸಬಹುದೆಂದು ತೋರುತ್ತದೆ

ರಾಜಧಾನಿಯ ಜೈಲು ಸೂಪರಿಂಟೆಂಡೆಂಟರಾದ ಮ|| ಆರ್ ಮಲ್ಲಿಕಾರ್ಜುನಪ್ಪನವರು ಈ ತಾ ೪ ರಲ್ಲಿ ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಡುವುದರಿಂದ, ಕೃಷ್ಣರಾಜೇಂದ್ರ ಆಸ್ಪತ್ರೆಯ ಅ| ಸರ್ಜನ್ ಮ|| ಎಸ್ ಎನ್ ಪ್ರಸಾದರವರು ತಮ್ಮ ಕೆಲಸದೊಡನೆ ಜೈಲು ಸೂಪರಿಂಟೆಂಡೆಂಟ್ ಕೆಲಸವನ್ನು ನೋಡಿಕೊಳ್ಳಬೇಕಾಗಿ ಅಪ್ಪಣೆಯಾಗಿರುತ್ತದೆ

೫೬ ದಿವಸಗಳ ಹಿಂದೆ ಶ್ರೀರಂಗಪಟ್ಟಣದಿಂದಾಚೆಗಿರುವ ಕಿರಂಗೂರು ಸೇತುವೆಯ ಬಳಿ ಕಾವೇರಿ ನದಿಯ ದಡದಲ್ಲಿ ಹಾಡುತ್ತಿದ್ದ ಒಬ್ಬ ತರುಣನೂ ಅವನ ಸಹಾಯಕ್ಕಾಗಿ ಹೋಗಿದ್ದ ಆತನ ಮಾವನೂ ಇವರುಗಳ ಸಹವರ್ತಿಗಳು ಮುಳುಗುತ್ತಿದ್ದ ಮತ್ತೊಬ್ಬನೂ ನದಿಯಲ್ಲಿ ಅಕಸ್ಮಾತ್ತಾಗಿ ಪ್ರವಾಹವು ಹೆಚ್ಚಿ ಬಂದುದರಿಂದ ಮೂವರೂ ನೀರಿನಲ್ಲಿ ಕೊಚ್ಚಿ ಹೋದರೆಂದು ಕೇಳುತ್ತೇವೆ

ಬೆಂಗಳೂರಿನಲ್ಲಿರುವ ಹೈದರಾಬಾದು ಸಂಸ್ಥಾನದ ಯುವರಾಜ ಸಹೋದರ ಸಂಬಂಧಿಗಳಲ್ಲಿ ಯುವರಾಜರ ಪತ್ನಿಯವರು ದಿವಾನ್ ಸರ್ ಮಿರ್ಜಾರವರೊಡನೆ ಕಳೆದ ಮಂಗಳವಾರ ಸಾಯಂಕಾಲ ಪಬ್ಲಿಕ್ ಆಫೀಸು ಕಟ್ಟಡಕ್ಕೆ ಬಂದಿದ್ದು ಚೀಫ್ ಸೆಕ್ರೆಟರಿ ಮ|| ಎಚ್. ಸಾಧವರಾಯರಿಂದಲೂ ರಿಜಿಸ್ಟ್ರಾರ್ ಜನರಲ್‌ರವರಿಂದಲೂ ಗೌರವಪೂರ್ವಕವಾಗಿ ಇದಿರುಗೊಳ್ಳಲ್ಪಟ್ಟು ದಿವಾನರ ಕೊಠಡಿಯನ್ನೂ, ಸಚಿವರ ಮತ್ತು ನ್ಯಾಯವಿಧಾಯಕ ಸಭೆಯ ಮಂದಿರಗಳನ್ನೂ ಪರಾಮರ್ಶಿಸಿದರು

ಮಂಡ್ಯದ ಸಬ್ ಡಿವಿಷನ್ ಆಫೀಸರಾದ ಮ|| ಆರ್ ಎ. ನರಸಿಂಹಯ್ಯಂಗಾರ್ಯರು ಲ್ಯಾಂಡ್ ಆಕ್ವಿಜಿಷನ್ ಆಫೀಸರಾಗಿಯೂ ಇರುವುದರಿಂದ ತತ್ಸಂಬಂಧವಾಗಿ ಕಳೆದ ಶನಿವಾರ ಹಿರೋಡೆಗೆ ಬಂದಿದ್ದು ಹಿರೋಡೆ ಬೆಟ್ಟಕ್ಕೆ ಹೋಗಿ ಅಲ್ಲಿದ್ದ ಸತ್ಯಾಗ್ರಹಿಗಳ ದರ್ಶನವನ್ನು ಮಾಡಿಕೊಂಡು ಹೊರಟವರು ಬಿಡಾರಕ್ಕೆ ಬರಲಿಲ್ಲವೆಂದೂ, ಎಲ್ಲಿಗೆ ಹೋದರೆಂಬುದು ಗೊತ್ತಾಗಲಿಲ್ಲವೆಂದೂ, ಈ ವಿಚಾರವನ್ನು ತಿಳಿದು ಮೈಸೂರು ಡೆಪ್ಯುಟಿ ಕಮಿಷನರು ಅಲ್ಲಿಗೆ ಹೋಗಿದ್ದರೆಂದೂ ತಿಳಿಯಬರುತ್ತದೆ ಮ|| ನರಸಿಂಹಯ್ಯಂಗಾರ್ಯರಿಗೆ ಒಂದೊಂದು ವೇಳೆ ಬುದ್ಧಿ ವಿಕಲ್ಪವಾಗಿ ೧ ೨ ದಿವಸಗಳ ಮೇಲೆ ನೆಟ್ಟಗಾಗುವುದುಂಟೆಂದು ಅವರ ಮನೆಯವರು ಹೇಳುವರಂತೆ

ಕಳೆದ 1929 ನೆಯ ಮಾರ್ಚಿ ತಾ|| 27 ರಲ್ಲಿ ಚೆನ್ನಪಟ್ಟಣದ ಮುಸಲ್ಮಾನರು ನಡೆಸುತ್ತಿದ್ದ ಸಂತೆಗೆ ಹೋಗುತ್ತಿರುವಾಗ್ಗೆ, ಬೈರಾಪಟ್ಟಣದ ವತ್ತು ಕೆಲ ನೆರೆ ಗ್ರಾಮಗಳ ರೈತರುಗಳು ಆ ಮುಸಲ್ಮಾನರ ಮೇಲೆ ಬಿದ್ದು ಹೊಡೆದರೆಂಬ ಅಪರಾಧಕ್ಕಾಗಿ ಸುಬ್ಬೇಗೌಡ ಕೆಂಪಯ್ಯ ಮತ್ತೆ ಐವರು ಬೆಂಗಳೂರು ಅಸಿಸ್ಟೆಂಟ್ ಸೆಷನ್ಸ್ ಜಡ್ಜಿಯವರಿಂದ 6 ತಿಂಗಳ ಕಠಿಣ ಸಜ ವಿಧಿಸಲ್ಪಟ್ಟಿದ್ದರು ಅಪರಾಧಿಗಳ್ಳುರ ವಿಚಾರಣೆಯು ಒಟ್ಟಿಗೆ ಮಾಡಲ್ಪಟ್ಟು ಅನ್ಯಾಯ ಎರುದ್ಧವೆಂದು ಹೇಳಿ ಚೀಫ್ ಕೋರ್ಟಿಗೆ ಅಪೀಲುಮಾಡಲು ಪ್ರತ್ಯೇಕದ ಮೇಲೆ ಎಲ್ಲರ ವಿಚಾರಣೆಯನ್ನು ಒಟ್ಟಿಗೆ ಮಾಡಿದುದು ನ್ಯಾಯವಿರುದ್ಧವಲ್ಲವೆಂದೂ ಟ್ರೈಯಿಂಗ್ ಮೆಜಿಸ್ಟ್ರೇಟರು ಬಹಳ ಎಚ್ಚರಿಕೆಯಿಂದ ವಿಚಾರಣೆ ನಡೆಸಿರುತ್ತಾರೆಂದೂ, ಜಸ್ಟಿಸ್ ಪಿ. ವಿ ಶ್ರೀನಿವಾಸಯ್ಯನವರು ಅಭಿಪ್ರಾಯಪಟ್ಟು ಕಠಿಣ ಸಜನನ್ನು ತಪ್ಪಿಸಿ ಸಾದಾ ಸಜವನ್ನು ವಿಧಿಸಿದರು

ರಾಜಧಾನಿಯ ಒಕ್ಕಲಿಗರಹಳ್ಳಿ ಬೆಂಗಾಲಿಗೋಡೌನಿನಲ್ಲಿರುವ ಕಂಪೌಂಡರ್ ಮ|| ಮೈ ತಿಮ್ಮಪ್ಪನವರ ಮನೆಗೆ ನೆನ್ನೆಯ ದಿವಸ ಬೆಳಿಗ್ಗೆ 8.0 ಘಂಟೆಯಲ್ಲಿ ಒಬ್ಬ ಹೆಂಗಸು ನುಗ್ಗಿ ಮಹಡಿಯ ಮೇಲಕ್ಕೆ ಹೋಗಿ ಬೀಗ ಹಾಕಿದ್ದ ಕೊಠಡಿಯೊಳಕ್ಕೆ ಪ್ರವೇಶಿಸಿ ಎರಡು ದೊಡ್ಡ ಟ್ರಂಕುಗಳಲ್ಲಿದ್ದ ಒಡವೆಗಳನ್ನು ಅಪಹರಿಸಿಕೊಂಡು ಇಳಿಯುತ್ತಿರುವಾಗ್ಗೆ ಮನೆಯ ಹೆಂಗಸರು ಕಂಡು ಏನೆಂದು ಪ್ರಶ್ನಿಸಲು ಅವಳು ಉತ್ತರಕೊಡದೆ ಕಾಲಿಗೆ ಎದ್ದು ಹೊರಟಳು ಅವರು ಅವಳನ್ನು ಹಿಂಬಾಲಿಸಲು ಅವಳು ಸಮೀಪದಲ್ಲಿದ್ದ ನದಿಯ ಹತ್ತಿರಕ್ಕೆ ಹೋಗಿ ತನ್ನ ಒಡವೆಗಳನ್ನು ಮುಚ್ಚಿಟ್ಟು ಬರುತ್ತಿದ್ದಳು. ಇದನ್ನು ನೋಡುತ್ತಿದ್ದ ಒಬ್ಬ ಹುಡುಗನು ಅವಳನ್ನು ಹಿಂಬಾಲಿಸುತ್ತಿದ್ದ ಹೆಂಗಸರಿಗೆ ತಿಳಿಸಲು ಅವರು ಇವಳನ್ನು ಹಿಡಿದು ... ... ಕಳ್ಳತನ ... ... ಮಾಡಿಯವರು ಅವನ್ನು ತೆಗೆದುಕೊಂಡು ಪೋಲೀಸಿನವರಿಗೆ ಒಪ್ಪಿಸಿದರು ... ... ಹೇಳಲ್ಪಟ್ಟಿದೆ.

1931 ರಲ್ಲಿ ನಡೆದ ಮೈಸೂರು ಸೀಮೆಯ ಜನಪರಿಗಣತಿ.

ವಿಸ್ತೀರ್ಣ, ಮನೆಗಳು ಮತ್ತು ಜನಸಂಖ್ಯೆ.

ಡಿಸ್ಟ್ರಿಕ್ಟು ಅಥವಾ ಸಂಸ್ಥಾನ	ವಿಸ್ತೀರ್ಣ (ಚದರ ಮೈಲು)	ಪಟ್ಟಣಗಳು	ಗ್ರಾಮಗಳು	ಒಕ್ಕಲಿರುವ ಮನೆಗಳು: ಒಟ್ಟು	ಒಕ್ಕಲಿರುವ ಮನೆಗಳು: ಪಟ್ಟಣದಲ್ಲಿ	ಒಕ್ಕಲಿರುವ ಮನೆಗಳು: ಗ್ರಾಮದಲ್ಲಿ	ಜನಸಂಖ್ಯೆ: ಒಟ್ಟು: ಒಟ್ಟು	ಜನಸಂಖ್ಯೆ: ಒಟ್ಟು: ಪಟ್ಟಣ	ಜನಸಂಖ್ಯೆ: ಒಟ್ಟು: ಗ್ರಾಮ	ಪುರುಷರು: ಒಟ್ಟು	ಪುರುಷರು: ಪಟ್ಟಣ	ಪುರುಷರು: ಗ್ರಾಮ	ಸ್ತ್ರೀಯರು: ಒಟ್ಟು	ಸ್ತ್ರೀಯರು: ಪಟ್ಟಣ	ಸ್ತ್ರೀಯರು: ಗ್ರಾಮ
ಬೆಂಗಳೂರು ದಂಡು ಸೇರಿ ಸಂಸ್ಥಾನ	29,326	108	16 483	1,311,145	205 367	1,105,878	6 557,302	1,045,042	5 512,260	3,353,963	546,822	2,807,141	3,203,339	498,220	2,705,119
,, ಬಿಟ್ಟು	29,311	107	16,483	1 239,833	183 975	1,105,878	6,423,189	910,929	5,512,260	3,284,554	477,413	2,807,141	3,138 635	433,516	2,705,119
ಬೆಂಗಳೂರು ಸಿಟಿ	13	1	...	34,057	34 057	.	172,357	172,357	....	91,680	91,680	...	80 677	80,677	....
,, ಡಿಸ್ಟ್ರಿಕ್ಟು	2,922	13	2,478	176,965	15,651	161 314	908,056	77,990	830,066	461,905	39 827	422 078	446,151	38 163	407,988
ಕೋಲಾರ ಗೋಲ್ಡ್ ಫೀಲ್ಡ್ಸ್ (ಪಟ್ಟಣ)	30	1	...	19,148	19 448	...	85 103	85,103		45,051	45 051	.	40,052	40 052	.
,, ಡಿಸ್ಟ್ರಿಕ್ಟು	3 161	11	2,761	150,993	13,710	137,283	704,934	70,040	633,894	389,262	35,766	353 496	371 672	34 274	340,398
ತುಮಕೂರು ,,	4,062	10	2 881	171,184	12,083	159,101	861,405	61,586	799,819	439 144	32 182	406 962	422 261	29,404	392,857
ಮೈಸೂರು ಸಿಟಿ	10	1		21 716	21 716	.	107 142	107,142	.	56 772	56 772		50 370	50 370	. ..
,, ಡಿಸ್ಟ್ರಿಕ್ಟು	5 40[illegible]	20	2 709	291,050	23,626	267 624	1 403 984	116,056	1,288,928	703 938	58 862	644 0[illegible]6	700 146	56,194	643 952
ಚಿತ್ರದುರ್ಗ	4 149	11	1 290	124 798	13,369	111,429	656,701	66,151	590 118	336 786	34 586	302,200	319,783	31,865	287,918
ಹಾಸನ ,,	2,636	13	2,262	12[illegible] 135	10 660	111,875	596 037	52 567	544 370	300 746	27 525	273 221	296 191	25,042	271,149
ಕಡೂರು ,,	2 771	9	859	73,619	7,985	65,634	347,715	[illegible]	[illegible]	[illegible]	[illegible]	[illegible]	163 326	18 563	144,743
ಶಿವಮೊಗ್ಗ ,,	4 018	13	1 714	102,949	11,271	91,678	519 987	63,7[illegible]	[illegible]	274 081	[illegible]	241 117	245,906	29 602	216,114
ಬೆಂಗಳೂರು ದಂಡು	15	1	.	31,612	31,612	....	134,113	134 113		[illegible]	69 409	.	64 704	64 704	..

ಮಹಮ್ಮದೀಯರ ಪ್ರಾಬಲ್ಯಕ್ಕೆ ಸಿಕ್ಕರ ಅಸಮ್ಮತಿ

ಕಳೆದ ಜುಲೈ ತಾ|| ೨೨ ನೆಯ ಶುಕ್ರವಾರ ಸಿಮ್ಲಾದಲ್ಲಿರುವ ಸಿಂಗು ಸಭಾ ಮಂದಿರದಲ್ಲಿ ಸರ್ ಸುಂದರಸಿಂಗು ಸರದಾರ್ ಉಜ್ವಲಸಿಂಗು, ಆನರಬಲ್ ಸರ್ದಾರ್ ಬಟಲುಸಿಂಗು, ಭಾಯಿ ಅರ್ಜುನಸಿಂಗು ಇವರೇ ಮೊದಲಾಗಿ ಸಿಕ್ಕನಾಯಕರುಗಳೂ ಇತರರೂ ಸರದಾರ್ ಬಹದೂರು ಮಾನಸಿಂಗರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ಗಯಾನೀಶೇರುಸಿಂಗರವರು ಪ್ರಧಾನೋಪನ್ಯಾಸಮಾಡುವಾಗ್ಗೆ "ಮಹಮ್ಮದೀಯರಿಗೆ ಮೆಕ್ಕಮದೀನಾ ಹೇಗೆ ಪವಿತ್ರಸ್ಥಾನಗಳೋ ಹಾಗೆ ಸಿಕ್ಕರಿಗೆ ಪಂಜಾಬು ಪವಿತ್ರಸ್ಥಾನವಾಗಿರುತ್ತದೆ. ಮಹಮ್ಮದೀಯರಿಗೆ ಯಾವರೀತಿಯಾಗಿ ಆಧಿಕ್ಯವನ್ನು ಕೊಟ್ಟರೂ ನಾವು ಮಹಮ್ಮದೀಯರ ಪರಿಪಾಲನಕ್ಕೊಳಪಡುವುದಿಲ್ಲ. ಅವಶ್ಯವಾದಲ್ಲಿ ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಕಾದಾಡಲು ಲಕ್ಷಮಂದಿ ಸಿಕ್ಕರು ಸಿದ್ಧರಾಗಿರುವರು. ಶಾಸನಸಭೆಯ ಸ್ಥಾನಗಳ ಪರಿಷ್ಕಾರದಲ್ಲಿ ಯಾವ ಲೋಪವುಂಟಾದರೂ ಅದಕ್ಕೆ ವೈಸರಾಯರೂ ಪಂಜಾಬು ಗೌರ್ನರೂ ಜವಾಬುದಾರರಾಗುವರು. ಆರ್ಥಿಕಸ್ಥಿತಿಯ ವಿಚಾರದಲ್ಲಿ ಹಿಂದುಗಳಿಗೂ ಸಿಕ್ಕರಿಗೂ ಸಾಮ್ಯವಿರುವುದಕ್ಕಿಂತ ಮಹಮ್ಮದೀಯರಿಗೂ ಸಿಕ್ಕರಿಗೂ ಸಾಮ್ಯವು ಹೆಚ್ಚಾಗಿರುತ್ತದೆ. ಯಾವುದೊ ಕೆಲ ಸ್ಥಾನಗಳಿಗ ಮಹಮ್ಮದೀಯರು ಆಶಪಟ್ಟರೆ ಅವರಿಗೆ ಸಿಕ್ಕರೊಡನೆ ಸ್ನೇಹವು ಶಾಶ್ವತವಾಗಿ ಕಳೆದುಹೋಗುವುದು" ಎಂದು ಹೇಳಿದರು. "ಸಮಷ್ಟಿ ನಿಯೋಜಕವರ್ಗದಿಂದಲೂ, ಪಂಜಾಬನ್ನು ಸಾಂಘಿಕವಾಗಿ ವಿಭಜನಮಾಡುವುದರಿಂದಲೂ ಈ ಸಮಸ್ಯೆಯನ್ನು ಪರಿಷ್ಕರಿಸಲು ಮಾಡಿದ ಪ್ರಯತ್ನಗಳೆಲ್ಲ ವಿಫಲವಾದುವು. ಸಿಕ್ಕರು ಕತ್ತಿಯ ಸಹಾಯದಿಂದ ಪಂಜಾಬನ್ನು ಸಂಪಾದಿಸಿದರು, ಇದನ್ನು ಬ್ರಿಟಿಷು ದೊರತನದವರು ಲೇಖನಿಯ ಸಹಾಯದಿಂದ ಸಾಂಘಿಕ ಮಹಮ್ಮದೀಯರ ಪರಿಪಾಲನದಡಿ ಬಿಡಬಾರದು. ಅಧಿಕಸಂಖ್ಯಾಕರಾದ ಮಹಮ್ಮದೀಯರಿಗೆ ಅಧೀನರಾಗಿರಲು ನಾವೆಷ್ಟುಮಾತ್ರಕ್ಕೂ ಒಪ್ಪುವುದಿಲ್ಲ" ಎಂದು ಸರ್ದಾರ್ ಉಜ್ವಲಸಿಂಗರೂ ಹೇಳಿದರು. "ಪಂಜಾಬು ಶಾಸನ ಸಭೆಯ ಸಭ್ಯತ್ವದಲ್ಲಿ ಸಿಕ್ಕರಿಗಿರುವ ನ್ಯಾಯವಾದ ಹಕ್ಕುಗಳನ್ನೂ ಸಿಕ್ಕರು ಈವರೆಗೆ ಮಾಡಿದ ಉಪಕಾರವನ್ನೂ ದೊರತನದವರು ಈಗ ಮರೆತು ಹೆಚ್ಚು ಸ್ಥಾನಗಳನ್ನು ಮಹಮ್ಮದೀಯರಿಗೆ ಕೊಡಲು ನಿಶ್ಚಯಿಸಿರುವರೆಂಬ ವರ್ತಮಾನವು ಪ್ರಬಲವಾಗಿರುವುದರಿಂದ ಸಿಮ್ಲಾದಲ್ಲಿರುವ ಸಿಕ್ಕರಿಗೆ ಬಹಳ ವ್ಯಾಕುಲವಾಗಿರುತ್ತದೆ. ಸಿಕ್ಕಮತಕ್ಕೆ ಪಂಜಾಬು ಜನ್ಮಸ್ಥಾನವು. ಅಲ್ಪಸಂಖ್ಯಾಕರಾಗಿರುವ ಮಹಮ್ಮದೀಯರು, ಆಂಗ್ಲೊ ಇಂಡಿಯನ್ನರು, ಯೂರೋಪಿಯನ್ನರು ಮೊದಲಾದವರುಗಳಿಗೆ ತೋರಿಸಲ್ಪಡುತ್ತಿರುವಂತಹ ಸೌಕರ್ಯಗಳೇ ಸಿಕ್ಕರಿಗೂ ಸಹ ಒದಗಿಸಿಕೊಡಬೇಕು. ಹಾಗಿಲ್ಲದಿದ್ದಲ್ಲಿ ಬಹಳ ಆಶಾಭಂಗವಾಗುವುದು" ಎಂದು ಈ ಸಭೆಯವರು ನಿಷ್ಕರ್ಷೆಯಿಂದಲೂ ಧೈರ್ಯದಿಂದಲೂ, ಸವಿನಯದಿಂದಲೂ ದೊರೆತನದವರಿಗೆ ತಿಳಿಸಲಿಚ್ಛಿಸುತ್ತಾರೆ. ಪಂಜಾಬಿನಲ್ಲಿ ಸಿಕ್ಕರ ಸಂಖ್ಯೆಯು ಬಹಳ ಹೆಚ್ಚಾಗಿರುತ್ತದೆ. ಅವರಿಗೆ ಸಂಪೂರ್ಣ ರಕ್ಷಣೆಯು ಲಭಿಸದಿದ್ದರೆ ಅವರು ಶಾಂತಿಯುತವಾದ ಸಾಧನಗಳಿಂದೆಲ್ಲ ಪ್ರತಿಭಟಿಸದೆ ಬಿಡರು. ರಾಷ್ಟ್ರೀಯ ಸ್ವಪರಿಪಾಲನವನ್ನು ಕಳೆದುಕೊಳ್ಳಲು ಸಿಕ್ಕರೊಪ್ಪುವುದಿಲ್ಲ. ಆದರೆ ಬ್ರಿಟಿಷ್ ದೊರತನದವರ ಪರಿಷ್ಕಾರದಿಂದ ಮಹಮ್ಮದೀಯರ ಸಂಚಾಲನವೇರ್ಪಟ್ಟಲ್ಲಿ ಅದಕ್ಕೆ ಅಧೀನರಾಗಲು ಸಿಕ್ಕರೆಷ್ಟುಮಾತ್ರಕ್ಕೂ ಸಮ್ಮತಿಸುವುದಿಲ್ಲ. ಭಾರತ ಶಾಸನಸಭೆಯಲ್ಲಿ 100 ಕ್ಕೆ 6 ಸ್ಥಾನಗಳೂ, ಸರಹದ್ದು ರಾಷ್ಟ್ರ ಸಭೆಯಲ್ಲಿ 6 ಸ್ಥಾನಗಳೂ ಭಾರತ ಪ್ರಭುತ್ವವರ್ಗದಲ್ಲಿ ಒಂದು ಸ್ಥಾನವೂ ಸಿಕ್ಕರಿಗೆ ದೊರಕಬೇಕು. ಸಿಕ್ಕರು ಕೋರಿರುವ 17 ವಿಷಯಗಳು ನೆರವೇರಬೇಕು" ಎಂದು ತೀರ್ಮಾನಿಸಲ್ಪಟ್ಟಿತು.

ಮನುಷ್ಯರ ಮುತ್ತಜ್ಜಿ

ಡಚ್ ಪ್ರೊಫೆಸರರಾದ ಬರ್ನಲೋಟ್ ಮೋಯಿನ್ಸ್ ಎಂಬವರು ಡಾರ್ವಿನರಂತೆಯೇ ಪ್ರಸಿದ್ಧಪ್ರಾಣಿಶಾಸ್ತ್ರಜ್ಞರು. ಮಂಗನೆ ಮನುಷ್ಯನ ಅಜ್ಜ ಎಂಬುದು ಅವರ ಸಿದ್ಧಾಂತ. ಅವರಿಗ ಈಗ ಒಬ್ಬಳು ಹುಡುಗಿಯು ದೊರೆತಿರುವಳಂತೆ. ಅವಳು ಮನುಷ್ಯರ—ಮಂಗಗಳ ಮಧ್ಯವರ್ತಿನಿಯಾಗಿದ್ದಾಳೆ ಎಂದವರು ಹೇಳುತ್ತಾರೆ. ಹುಡುಗಿಯ ಹೆಸರೇನೆಂಬುದನ್ನು ಅವರಿನ್ನೂ ತಿಳಿಸಲಿಲ್ಲ. ಅವಳು ಮನುಷ್ಯರ ಮುತ್ತಜ್ಜಿಯಾಗಿರಲು ಅರ್ಹಳಂತೆ. ಇಂದಿನ ಮುತ್ತಜ್ಜಿಯಲ್ಲ, ಕೋಟ್ಯಂತರ ವರ್ಷಗಳ ಹಿಂದಿನ ಮುತ್ತಜ್ಜಿ. ಇಂಥವಳ ಪರಿಚಯವನ್ನು ಅವರು ಹೀಗೆ ಕೊಡುತ್ತಾರೆ — ನೈಸ್ ನಗರದಲ್ಲಿಯ ಸುಪ್ರಸಿದ್ಧ ಕುಟುಂಬಕ್ಕೆ ಸೇರಿದವಳೀಕೆ. ವಿಜ್ಞಾನಶಾಸ್ತ್ರಗಳಿಗೆ ತನ್ನಿಂದಾಗುವ ಲಾಭವೇನೆಂದು ಅವಳಿಗೆ ಗೊತ್ತಿದೆ, ಅವಳ ಬಂಧುಬಳಗಕ್ಕೆ ಗೊತ್ತಿದೆ. ಆದ್ದರಿಂದ ಅವಳ ಭಾವಚಿತ್ರವೊಂದನ್ನು ತೆಗೆಯಲು ಅವರೆಲ್ಲರೂ ಒಪ್ಪಿದ್ದಾರೆ. ಹೊರಗಿನಿಂದ ನೋಡುವಾಗ ಅವಳ ಆಕಾರದಲ್ಲಿ ವಿಶೇಷವೇನೂ ತೋರುವುದಿಲ್ಲ. ಆದರೆ ವಸ್ತ್ರಗಳನ್ನು ತೆಗೆದರೆ ಎದೆಯಿಂದ ಮೊಣಕಾಲವರೆಗೆ ಮಂಗನ ಮೈಯಲ್ಲಿರುವಂತಹ ಉಣ್ಣೆಯನ್ನು ನೋಡಬಹುದು. ಇದರರ್ಥವೇನೆಂದರೆ ಈ ಹುಡುಗಿಗೆ, ಆಕೆಯ ಅತಿ ಪುರಾತನ ಪೂರ್ವಿಕರಾದ ಮಂಗಗಳ ಸ್ವಭಾವ ಬಂದಿದೆ. ಇದರಿಂದ ಡಾರ್ವಿನರ ವಿಕಾಸವಾದವು ಸರಿ. ಪ್ರಾಣಿಗಳು ಬುದ್ಧಿಶಕ್ತಿಯಲ್ಲ ಅಭಿವೃದ್ಧಿ ಹೊಂದಿ ಆಕಾರದಲ್ಲಿ ಸ್ವಲ್ಪ ವ್ಯತ್ಯಾಸಗೊಂಡು ಮನುಷ್ಯರೆನಿಸಿಕೊಂಡರು, ಎಂದು ಈ ಪಂಡಿತರು ಹೇಳುತ್ತಾರೆ. ಪ್ರಸಂಗದ ಪ್ರಾಣಿಶಾಸ್ತ್ರಜ್ಞರಲ್ಲಿ ನಿಪುಣರಾದವರು ಇವಳನ್ನು ಪರೀಕ್ಷೆಮಾಡಿ ಮಂಗನಿಗೂ ಮನುಷ್ಯರಿಗೂ ಇರುವ ಸಂಬಂಧವನ್ನು ಮತ್ತೆ ನಿಷ್ಕರ್ಷೆಮಾಡಬಹುದಂತೆ।

ರಾ. ಬ

ತುಮಕೂರು ಡಿಸ್ಟ್ರಿಕ್ಟ್ ಬೋರ್ಡ್

ಪ್ರಕಟನೆ.

ತಾ|| 30-7-1932

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ —

ತುಮಕೂರು ಡಿಸ್ಟ್ರಿಕ್ಟಿನ ಈ ಕೆಳಗೆ ನಮೂದುಮಾಡಿರುವ ಸಂತೆಗಳಲ್ಲಿ ಹಿಂದೆ 20-8-1926 ನೆಯ ಮಸ್ಕಂ ಎಂ 1296 ಎಲ್ ಬಿ 21-26-2 ನೆಯ ನಂಬರು ಗೌರ್ನಮೆಂಟು ಆರ್ಡರಿನಲ್ಲಿ ಮಂಜೂರುಮಾಡಿರುವ ದರಗಳಂತೆ ಸುಂಕವನ್ನು ವಸೂಲ್ಮಾಡುವಹಾಗೆ ಬೋರ್ಡಿನಲ್ಲಿ ತೀರ್ಮಾನಿಸಿರುತ್ತಾರೆ.

ಸದರಿ ಸಂತೆಗಳಲ್ಲಿ ಸುಂಕವನ್ನು ವಸೂಲ್ಮಾಡುವ ವಿಚಾರದಲ್ಲಿ ತಕರಾರುಗಳು ಏನಾದರೂ ಇದ್ದಪಕ್ಷದಲ್ಲಿ ಈ ಇಸ್ತಿಹಾರ್ನಾಮೆ ತಾರೀಖು ರಾಗಾಯಿತು ಒಂದು ತಿಂಗಳೊಳಗಾಗಿ ಅಂತಹ ತಕರಾರುಗಳನ್ನು ಲಿಖಿತಮೂಲಕ ತುಮಕೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರಿಗೆ ಬರೆದುಕೊಳ್ಳತಕ್ಕದ್ದಿರುತ್ತದೆ.

ಕಾಲಾತೀತವಾಗಿ ಬರುವ ತಕರಾರುಗಳಿಗೆ ಗಮನ ಕೊಡುವುದಿಲ್ಲ.

ತಾಲ್ಲೂಕು ಹೆಸರು	ಸಂತೆ ನಡೆಯುವ ಸ್ಥಳ.
1 ಮಧುಗಿರಿ	(I) ಬಡವನಹಳ್ಳಿ
	(II) ಕೊಡಿಗೇನಹಳ್ಳಿ
2 ಶಿರಾ	(I) ಪಟ್ಟನಾಯ್ಕನಹಳ್ಳಿ
	(II) ಚಿಕ್ಕನಹಳ್ಳಿ
3 ಗುಬ್ಬಿ	(I) ಕಡಬ
	(II) ದಂಡಿನಶಿವರ
4 ಕುಣಿಗಲು	(I) ಯಲಿಯೂರು
	(II) ಹುಲಿಯೂರುದುರ್ಗ

ಡಿ. ಎಸ್. ಮಲ್ಲಪ್ಪ,
ಪ್ರೆಸಿಡೆಂಟ್ ಡಿಸ್ಟ್ರಿಕ್ಟ್ ಬೋರ್ಡ್,
ತುಮಕೂರು ಡಿಸ್ಟ್ರಿಕ್ಟ್.

ಡೇವಿಡ್ಸನ್ ಕಮಿಟಿಯ ವರದಿ.

ಆರ್ಥಿಕ ವಿಷಯದಲ್ಲಿ ಭಾರತದೇಶೀಯ ಸಂಸ್ಥಾನಗಳಿಗೂ ಫೆಡರಲ್ ಪ್ರಭುತ್ವದವರಿಗೂ ಇರಬೇಕಾದ ಪರಸ್ಪರ ಸಂಬಂಧ ವಿಷಯವನ್ನು ವಿಚಾರಿಸಿ ತಕ್ಕ ಸೂಚನೆಗಳನ್ನು ಕೊಡಲು ನಿಯಮಿಸಲ್ಪಟ್ಟಿದ್ದ ರೌಂಡುಟೇಬಲ್ ಸಭೆಯ ಉಪಸಂಘದವರ ವರದಿಯು ಕಳೆದ ಗುರುವಾರ ಇಂಗ್ಲೆಂಡಿನಲ್ಲೂ ಇಂಡಿಯಾದಲ್ಲೂ ಏಕಕಾಲದಲ್ಲಿ ಪ್ರಕಟಿಸಲ್ಪಟ್ಟಿತು. ಈ ಸಂಘದ ಅಧ್ಯಕ್ಷರಾದ ರೈಟ್ ಆನರಬಲ್ ಡೇವಿಡ್ಸನ್‌ರವರು. ಮೆಂಬರುಗಳಾದ ಸರ್ ರೆಜಿನಾಲ್ಡ್ ಗ್ಲಾನ್ಸಿ, ಲಾರ್ಡ್ ಹೇಸ್ಟಿಂಗ್ಸ್ ಡಚೆಸ್, ಸರ್ ಮಾಲಿಸುಗ್ವೈರ್, ಸರ್ ಚಾರ್ಲಸ್ ಸ್ಟ್ಯುಯರ್ಟ್ ವಿಲಿಯಂಸ್ ಟಿ ರಮಾಚಾರ್ಲರವರು ವರದಿಗೆ ರುಜುವನ್ನು ಮಾಡಿರುತ್ತಾರೆ.

ಉಪಕಾರಕಾಂಶಗಳು

ಆರ್ಥಿಕ ವಿಷಯದಲ್ಲಿ ಇಂಡಿಯಾ ಪ್ರಭುತ್ವದವರಿಗೂ ದೇಶೀಯ ಸಂಸ್ಥಾನಗಳಿಗೂ ಇರುವ ಪರಸ್ಪರ ಸಂಬಂಧವು ಫೆಡರಲ್ ನಿರ್ಮಾಣಕ್ಕೆ ಎಷ್ಟರಮಟ್ಟಿಗೆ ಅಡ್ಡಿಯಾಗಿರುವುದೆಂಬ ವಿಷಯವನ್ನು ಪರಿಶೀಲಿಸುವುದಕ್ಕಾಗಿ ಈ ವಿಚಾರಣಾ ಸಂಘವು ನಿಯಮಿಸಲ್ಪಟ್ಟಿರುವುದು. ಎಲ್ಲಾ ರಾಷ್ಟ್ರಗಳವರೂ ಒಂದೇ ಪದ್ಧತಿಯನ್ನು ಅನುಸರಿಸಿ ಫೆಡರಲ್ ಪ್ರಭುತ್ವದ ಆದಾಯಕ್ಕೆ ತಮ್ಮಾದಾಯದಲ್ಲಿ ಒಂದು ಭಾಗವನ್ನು ಬಿಟ್ಟುಕೊಡಬೇಕೆಂದು ಪ್ರಧಾನಮಂತ್ರಿಗಳು ಸೂಚನೆಯನ್ನು ಕೊಟ್ಟಿದ್ದರು. ಆದರೆ ಭಾರತದೇಶದಲ್ಲಿ ಈ ಸಮಸ್ಯೆಯು ದೊಡ್ಡ ತೊಡಕಿನಿಂದ ಕೂಡಿರುತ್ತದೆ. ಕೆಲ ಸಂಸ್ಥಾನಗಳವರು ಇಂಡಿಯಾಪ್ರಭುತ್ವದವರಿಗೆ ಗೊತ್ತಾದ ಪೊಬಲಗನ್ನು ಪ್ರತಿ ವರ್ಷದಲ್ಲೂ ಕಪ್ಪವಾಗಿ ಕೊಡುತ್ತಿರುವರು. ಫೆಡರಲ್ ಪ್ರಭುತ್ವಕ್ಕೆ ನ್ಯಾಯವಾಗಿ ಸೇರಬೇಕಾದ ಹಣವನ್ನು ಮಾತ್ರ ಕೆಲ ಸಂಸ್ಥಾನಗಳಿಗೆ ವಿಧಿಸಲ್ಪಟ್ಟಿಲ್ಲ. ಫೆಡರಲ್ ಪ್ರಭುತ್ವಪರಿಪಾಲನೆಗೊಳಪಟ್ಟಿರಬೇಕಾದ ಪೋಸ್ಟು, ಟೆಲಿಗ್ರಾಫ್, ಕರೆನ್ಸಿ ಮೊದಲಾದ ವಿಷಯಗಳಲ್ಲಿ ಕೆಲ ಸಂಸ್ಥಾನಗಳಿಗೆ ಸ್ವತಂತ್ರವಾದ ಹಕ್ಕಿರುವುದು. ಕಪ್ಪವೂ ವಿನಾಯಿತಿಯೂ, ಸ್ವತಂತ್ರ ಹಕ್ಕುಗಳೂ ಏರ್ಪಟ್ಟಿರುವ ವಿಧಾನವನ್ನು ಪರಿಶೀಲಿಸಿ ಇವನ್ನು ಸರಿಪಡಿಸಲು ಸಂಸ್ಥಾನಾಧಿಪತಿಗಳೊಡನೆ ರಾಯಬಾರವನ್ನು ನಡೆಸಬೇಕಾಗಿ ಬಂದಿತು. ಈ ಕಾರಣದಿಂದ ಈ ಕಮಿಟಿಯವರು ಭಾರತದೇಶದಲ್ಲಿ ಸಂಚರಿಸಿ ಹಳೇ ರಿಕಾರ್ಡುಗಳನ್ನು ಸಹ ಪರಿಶೀಲಿಸಬೇಕಾಯಿತು. ಕಮಿಟಿಯವರು 10 ಸಾವಿರ ಮೈಲು ತಿರುಗಿ 88 ಸಂಸ್ಥಾನಾಧೀಶರುಗಳೊಡನೆಯೂ ಅವರ ಮಂತ್ರಿಗಳೊಡನೆಯೂ ಸಂಭಾಷಣೆ ಮಾಡಿದರು. ಇಂಗ್ಲೆಂಡಿನೊಳಗೆ ಮೇ ತಿಂಗಳಲ್ಲಿ ಈ ವರದಿಯು ಬರೆಯಲ್ಪಟ್ಟಿತು.

ಸಂಸ್ಥಾನಾಧಿಪತಿಗಳಿಗೂ ಬ್ರಿಟಿಷ್ ಪ್ರಭುತ್ವದವರಿಗೂ ನಡೆದಿರುವ ಒಡಂಬಡಿಕೆಗಳು

ಸಂಸ್ಥಾನಾಧಿಪತಿಗಳಿಗೂ ಬ್ರಿಟಿಷ್ ಪ್ರಭುತ್ವದವರಿಗೂ ನಡೆದಿರುವ ಒಡಂಬಡಿಕೆಗಳ ವಿಷಯಕ್ಕೆ ಸಂಬಂಧಪಟ್ಟ ಚರಿತ್ರೆಯು ಈ ವರದಿಯ 2 ನೇ ಅಧ್ಯಾಯದಲ್ಲಿ ಬರೆಯಲ್ಪಟ್ಟಿದೆ. ಸಂಸ್ಥಾನಗಳಲ್ಲಿ ಅರಾಜಕತ್ವವೂ ವಿರೋಧತ್ವವೂ ಪ್ರಬಲವಾಗಿದ್ದ ಸಮಯದಲ್ಲಿ ಬ್ರಿಟಿಷ್ ಪ್ರಭುತ್ವದವರು ಎಚ್ಚರಿಕೆಯಿಂದಿದ್ದು ಶಾಂತಿಯನ್ನುಂಟುಮಾಡಿ ಪುನಃ ಕಲಹವುಂಟಾಗದಿರಲು ಕೆಲ ಕಟ್ಟುಪಾಡುಗಳನ್ನು ಮಾಡಿದರು. ಆದರೆ ಭಾರತ ದೇಶದಲ್ಲಿ ಫೆಡರೇಷನ್ನೇರ್ಪಡಬೇಕೆಂಬ ಅಭಿಪ್ರಾಯವು ಹುಟ್ಟುವುದಕ್ಕೆ ಮೊದಲೇ ಅನೇಕ ಸಂಸ್ಥಾನಗಳು ರೈಲ್ವೆ, ಕರೆನ್ಸಿ, ಪೋಸ್ಟು, ಟೆಲಿಗ್ರಾಫ್ ಮೊದಲಾದ ಶಾಖೆಗಳ ಅಧಿಕಾರವನ್ನು ಸಂಪೂರ್ಣವಾಗಿ ಇಂಡಿಯಾ ಪ್ರಭುತ್ವದವರಿಗೆ ವಹಿಸಿಕೊಟ್ಟಿದ್ದರು. ಇಂಡಿಯಾ ಪ್ರಭುತ್ವದವರ ಪರಿಪಾಲನೆಗೊಳಪಟ್ಟ ಶಾಖೆಗಳು ಸಂಸ್ಥಾನಗಳಲ್ಲೂ ಇಂಡಿಯಾಪ್ರಭುತ್ವದವರಿಂದಲೇ ನಿರ್ವಹಿಸಲ್ಪಡುತ್ತಿವೆ. ಸುಂಕದ ಶಾಖೆಗಳು ಇಂಡಿಯಾ ಪ್ರಭುತ್ವದವರ ಅಧಿಕಾರಕ್ಕೊಳಪಟ್ಟು ಯಾವ ವಿನಾಯಿತಿಯೂ ಇಲ್ಲದಿರುವುದರಿಂದ ಈ ವಿಷಯದಲ್ಲಿ ಪ್ರಭುತ್ವದವರ ವಿಧಾನವನ್ನು ವಿಮರ್ಶಿಸಲಾಗಲಿ ಬದಲಾವಣೆ ಮಾಡಲಾಗಲಿ ಸಂಸ್ಥಾನದವರಿಗೆ ಅವಕಾಶವಿಲ್ಲದ [illegible] ಆದುದರಿಂದ ಈ ಲೋಪವನ್ನು

ಹೊಂದಿರಬೇಕೆಂದೂ ಕೇಂದ್ರ ಶಾಸನಸಭೆಗಳ ಚರ್ಚೆಗಳ ವಿಧಾನವನ್ನು ಇವರು ಸೂಚಿಸಿದ್ದಾರೆ. ವಿಷಯದಲ್ಲಿ ಸಂಸ್ಥಾನಾಧಿಪತಿಗಳ ಪ್ರತಿನಿಧಿಗಳಿಗೆ ಅಧಿಕಾರವಿರಬೇಕೆಂದು ವಕ್ಕಾಣಿಸಿದ್ದಾರೆ.

ಜನರಲ್ ಕಂಟ್ರೋಲ್

ಎಲ್ಲ ಸಂಸ್ಥಾನಗಳಿಗೂ ಫೆಡರಲ್ ಶಾಸನಸಭೆಯಿಂದ ... ಸೂಚಿಸುತ್ತಾರೆ. ಈ ವಿಷಯವನ್ನು ಫೆಡರೇಷನ್ ಆರಂಭದಲ್ಲೇ ತೀರ್ಮಾನಿಸಿಕೊಳ್ಳಬೇಕು. ಎಂದರೆ ಶಾಸನಸಭೆಗಳ ಕಾಯಿದೆ ಸಂಸ್ಥಾನಗಳಿಗೆ ಅನ್ವಯಿಸುವ ಸಂದರ್ಭಗಳನ್ನು ವಿವರಿಸಿ ಪ್ರತ್ಯೇಕ ಒಡಂಬಡಿಕೆಯಲ್ಲಿ ಹೇಳಬೇಕು. ಈಗ ಸಂಸ್ಥಾನಗಳು ಹೊಂದಿರುವ ಅನುಭೋಗದಲ್ಲಿರುವ ಹಕ್ಕುಗಳನ್ನು ಆಗಲಿ ಹೆಸರಿನಲ್ಲಿ ಬರೆದು ಇಟ್ಟುಕೊಂಡು ಈಗ ಅನುಭವಿಸುವ ಪ್ರತ್ಯೇಕ ಸೌಕರ್ಯಗಳಿಗೂ ಹಕ್ಕುಗಳಿಗೂ ಕೊಡುವ ಹಣವನ್ನು ಮುಖ್ಯವಾಗಿ ಬರೆದು ಬಾಕಿ ಹಣವನ್ನು ಕೊಡುವುದು ಅವಶ್ಯವು.

ಕಪ್ಪಗಳು

ಅನೇಕ ಸಂಸ್ಥಾನಗಳು ಕೇಂದ್ರ ಪ್ರಭುತ್ವಕ್ಕೆ ಕಪ್ಪಗಳನ್ನು ಕೊಡುತ್ತವೆ. ಸಾಮ್ರಾಜ್ಯ ಪ್ರಭುತ್ವಕ್ಕೆ ಅಧೀನರಾಜ್ಯಗಳು ಸಲ್ಲಿಸುವ ಹಣವು ಕಪ್ಪವೆಂದು ಕರೆಯಲ್ಪಡುತ್ತದೆ. ಆದುದರಿಂದ ಫೆಡರೇಷನು ಏರ್ಪಟ್ಟರೆ ಇವು ಕೊಡುವ ಕಪ್ಪವು ತಪ್ಪಬೇಕೆಂದು ಫೆಡರಲ್ ಸ್ಟ್ರಕ್ಚರ್ ಕಮಿಟಿಯ ಅಧಿಕಾರಿಗಳ ಸಂಘದವರು ಅಭಿಪ್ರಾಯಪಟ್ಟಿರುತ್ತಾರೆ. ಬ್ರಿಟಿಷ್ ಇಂಡ್ಯಾ ರಾಷ್ಟ್ರಗಳು ಫೆಡರಲ್ ಪ್ರಭುತ್ವಕ್ಕೆ ಕೊಡಬೇಕಾದ ಕಪ್ಪವನ್ನು ತಪ್ಪಿಸುವ ಹಾಗೆ ಸಂಸ್ಥಾನಗಳು ಕೊಡಬೇಕಾಗಿರುವ ಕಪ್ಪವು ಕೂಡ ತಪ್ಪಿಸಲ್ಪಡಬೇಕೆಂದೂ, ಈಗ ರಾಷ್ಟ್ರಗಳು ಕೊಡುತ್ತಿರುವ ಕಪ್ಪವು ರಾಷ್ಟ್ರದ ಆದಾಯದಲ್ಲಿ 20 ಭಾಗದಷ್ಟಕ್ಕಿಂತ ಹೆಚ್ಚಾಗಿದ್ದರೆ ಕಡಿಮೆ ಮಾಡಲ್ಪಡಬೇಕೆಂದೂ ಈ ಉಪಸಂಘದವರು ಸೂಚಿಸಿದ್ದಾರೆ. ಆದರೆ ಈ ವಾದವನ್ನು ಈ ವಿಚಾರಣ ಸಂಘದವರು ಅಂಗೀಕರಿಸಲಿಲ್ಲ. ಆದಾಗ್ಯೂ ಬ್ರಿಟಿಷ್ ಇಂಡ್ಯಾ ರಾಷ್ಟ್ರಗಳ ಸಲ್ಲಿಸುವ ಕಪ್ಪವು ತಪ್ಪಿಸಲ್ಪಟ್ಟಲ್ಲಿ ಸಂಸ್ಥಾನಗಳು ಸಲ್ಲಿಸಬೇಕಾಗಿರುವ ಕಪ್ಪವೂ ಕೂಡ ತಪ್ಪಿಸಲ್ಪಡಬೇಕಾದದ್ದು ನ್ಯಾಯವೆಂದು ಇವರು ಅಂಗೀಕರಿಸುತ್ತಾರೆ. ಸಂಸ್ಥಾನಗಳ ಆದಾಯವು ಎಲ್ಲ ರಾಷ್ಟ್ರಗಳಿಗೂ ಸಮಾನವಾಗಿ ಹಂಚಲ್ಪಡಬೇಕೆಂಬ ಸೂತ್ರವನ್ನು ಅನುಸರಿಸಿ ಇವರು ಈ ಸೂಚನೆಯನ್ನು ಕೊಟ್ಟಿರುವರು. ಒಂದು ಸಂಸ್ಥಾನದ ಕಪ್ಪವು ಸಂಸ್ಥಾನದ ಒಟ್ಟು ಆದಾಯದಲ್ಲಿ ಶೇ ೫ ಕ್ಕಿಂತ ಅಧಿಕವಾಗಿದ್ದರೆ ಆ ಹೆಚ್ಚು ಮೊಬಲಗು ಕೂಡಲೆ ತಪ್ಪಿಸಲ್ಪಡಬೇಕೆಂಬ ಸೂಚನೆಯನ್ನು ಇವರು ಅನುಮೋದಿಸುತ್ತಾರೆ. ಇಂತಹ ಕಪ್ಪಗಳಲ್ಲಿ (1) ಪ್ರತ್ಯೇಕ ಕಾರಣದಿಂದ ವಿಧಿಸಲ್ಪಟ್ಟ ಕಪ್ಪ (೨) ಒಂದು ಸಂಸ್ಥಾನವು ಇನ್ನೊಂದು ಸಂಸ್ಥಾನಕ್ಕೆ ಕೊಡಬೇಕಾದ ಕಪ್ಪವನ್ನು ಪ್ರಭುತ್ವವು ಅವಾಲ್ತಿ ನಾಡಿ ಸಲ್ಲಿಸುತ್ತಿರುವ ಕಪ್ಪ ಇವುಗಳಾಗಿ ಉಳಿದ ಕಪ್ಪವನ್ನು ಕ್ರಮೇಣ ತಪ್ಪಿಸಲ್ಪಡಬೇಕೆಂದು ಇವರು ಸೂಚಿಸಿರುತ್ತಾರೆ. ಎರಡನೇ ತರಗತಿಗೆ ಸೇರಿದ ಕಪ್ಪದಲ್ಲಿ ಕೇಂದ್ರ ಪ್ರಭುತ್ವದವರು ಈ ಕಪ್ಪವನ್ನು ಬಿಟ್ಟುಕೊಡಬೇಕೆಂದೂ, ಮೊದಲು ಯಾವ ಸಂಸ್ಥಾನಕ್ಕೆ ಈ ಕಪ್ಪವು ಸಲ್ಲಿಸಲ್ಪಡುತ್ತಿದ್ದಿತೋ ಈಗಲೂ ಕೂಡ ಆ ಸಂಸ್ಥಾನಕ್ಕೇ ಈ ಕಪ್ಪವು ಕೊಡಲ್ಪಡಬೇಕೆಂದೂ ಸೂಚಿಸಲ್ಪಟ್ಟಿದೆ. ಆದರೂ ಕಪ್ಪವನ್ನು ಸಲ್ಲಿಸುವ ಪದ್ಧತಿಯು ಸಮಾನವಾದ ಹಕ್ಕುಗಳನ್ನುಳ್ಳ ಫೆಡರೇಷನ್ನಿನ ತತ್ವಕ್ಕೆ ಸರಿಯಿಲ್ಲ. ಆದುದರಿಂದ ಕ್ರಮೇಣ 20 ವರ್ಷಗಳೊಳಗೆ ಎಲ್ಲ ಕಪ್ಪಗಳೂ ತಪ್ಪಿಸಲ್ಪಡುವ ಏರ್ಪಾಟು ಮಾಡುವುದುಚಿತವು. ಸಂಸ್ಥಾನದ ಆದಾಯದಲ್ಲಿ 20 ರಷ್ಟಕ್ಕಿಂತ ಹೆಚ್ಚು ಭಾಗವು ಸಲ್ಲುತ್ತಿದ್ದಲ್ಲಿ ಕಪ್ಪವು ತಪ್ಪಿಸಲ್ಪಟ್ಟು ಸಂವತ್ಸರಕ್ಕೆ 11 ಲಕ್ಷ ರೂಪಾಯಿಗಳು ಕೊಡಲ್ಪಡಬಹುದು. ಕಪ್ಪವು ಸಂಪೂರ್ಣವಾಗಿ ತಪ್ಪಿಸಲ್ಪಟ್ಟಲ್ಲಿ 69 ಲಕ್ಷ ರೂಪಾಯಿಗಳನ್ನು ಬಿಟ್ಟುಕೊಡಬೇಕಾಗುತ್ತದೆ. ಈ ಕಪ್ಪಗಳು ಸಾಮ್ರಾಜ್ಯಾಧಿಕಾರಕ್ಕೆ ಕೊಡಲ್ಪಡುತ್ತವೆ. ಅಷ್ಟು ಮಾತ್ರಕ್ಕೇ ಈ ಮೊಬಲಗು ಫೆಡರಲ್ ಪ್ರಭುತ್ವದವರಿಗೆ ಸೇರಬೇಕೆಂದು ಹೇಳಲು ಕಾರಣವಿಲ್ಲ. ಆದಾಗ್ಯೂ ಸಾಮ್ರಾಜ್ಯಾಧಿಕಾರಿಗಳು ಈ ಮೊಬಲಗುಗಳನ್ನು ಫೆಡರಲ್ ಪ್ರಭುತ್ವದವರ ವಶಕ್ಕೆ ವಹಿಸಿಕೊಡುವರೆಂದೂ ಈ ಏರ್ಪಾಟಿಗೆ ಸಂಸ್ಥಾನಾಧಿಪತಿಗಳು ಆಕ್ಷೇಪಿಸುವುದು ಉಚಿತವಲ್ಲವೆಂದೂ ವಿಚಾರಣ ಸಂಘದವರು ತಮ್ಮ ಅಭಿಪ್ರಾಯವನ್ನು ತಿಳಿಸಿರುತ್ತಾರೆ.

ದತ್ತಮಂಡಲ

ಸಂಸ್ಥಾನಗಳ ಸಂರಕ್ಷಣೆಗಾಗಿ ಸೇನೆಯನ್ನೇರ್ಪಡಿಸಿ, ಸಂಸ್ಥಾನದಲ್ಲಿ ಆ ಸೇನೆಯನ್ನಿರಿಸುವುದಕ್ಕಾಗಿ ಕೆಲ ಸಂಸ್ಥಾನಾಧಿಪತಿಗಳು ತಮ್ಮ ರಾಜ್ಯದಲ್ಲಿ ಕೆಲಭಾಗವನ್ನು ಪ್ರಭುತ್ವದವರಿಗೆ ಕೊಟ್ಟು ಒಡಂಬಡಿಕೆಯನ್ನು ಮಾಡಿಕೊಂಡಿರುವರು. ಹೈದರಾಬಾದು, ಬರೋಡ, ಗ್ವಾಲಿಯರು, ಇಂದೋರು, ಸಾಂಗ್ಲಿ ಸಂಸ್ಥಾನಗಳಿಗೂ, ಈಸ್ಟ್ ಇಂಡ್ಯಾ ಕಂಪನಿಗಳಿಗೂ ಇಂತಹ ಒಡಂಬಡಿಕೆಗಳಾಗಿರುತ್ತವೆ. ಫೆಡರೇಷನ್ನೇರ್ಪಟ್ಟಾಗ ಈ ಒಡಂಬಡಿಕೆಯನ್ನು ರದ್ದುಮಾಡಿ ಪ್ರದೇಶವನ್ನು ಬಿಟ್ಟುಕೊಟ್ಟಿರುವುದಕ್ಕಾಗಿ ಆಯಾ ರಾಷ್ಟ್ರಗಳಿಗೆ ಕೊಂಚ ಮೊಬಲಗನ್ನು ಕೊಡಬೇಕೆಂದು ಈ ಸಂಘದವರು ಸೂಚಿಸುತ್ತಾರೆ. ಏಕೆಂದರೆ, ಕೆಲ ಸಂಸ್ಥಾನಗಳು ಕಪ್ಪಕ್ಕೆ ಬದಲಾಗಿ ಕೊಂಚ ಪ್ರದೇಶವನ್ನು ಬಿಟ್ಟುಕೊಟ್ಟಿರುತ್ತವೆ. ಕಪ್ಪವು ರದ್ದಾಗುವ ಹಾಗೆ ಈ ತರಗತಿಗೆ ಸೇರಿದ ಸಂಸ್ಥಾನಗಳಿಗೆ ಕೊಂಚ ಪರಿಹಾರವನ್ನು ಕೊಡಬೇಕು. ಆದ್ದರಿಂದ ಒಡಂಬಡಿಕೆಯಾದ ವೇಳೆಯಲ್ಲಿ ಪ್ರಭುತ್ವದವರಿಗೆ ವಹಿಸಿಕೊಡಲ್ಪಟ್ಟ ಪ್ರದೇಶದಿಂದ ಬರುತ್ತಿದ್ದ ವರ್ಷದ ಆದಾಯವನ್ನು ಆಧಾರವಾಗಿಟ್ಟುಕೊಂಡು ಕೆಳಗೆ ಸೂಚಿಸಿರುವ ಮೊಬಲಗು ಪರಿಹಾರವಾಗಿರಬೇಕೆಂದು ವಿಚಾರಣ ಸಂಘದವರು ನಿರ್ಣಯಿಸಿರುವರು.

ಬರೋಡಾ—	22 ಲಕ್ಷದ	98	ಸಾವಿರ	ರೂಪಾಯಿ
ಗ್ವಾಲಿಯರು —	11	,, 78	,,	,,
ಇಂದೋರು—	1	,, 11	,,	,,
ಸಾಂಗ್ಲಿ—	1	,, 16	,,	,,

ಇನ್ನು ಮೇಲೆ ಸಹ ಸೈನ್ಯ ಸಂರಕ್ಷಣೆಯ ಬಾಧ್ಯತೆಯನ್ನು ಕೇಂದ್ರ ಪ್ರಭುತ್ವದವರೇ ವಹಿಸಬೇಕೆಂದು ಹೈದರಾಬಾದು ಸಂಸ್ಥಾನದವರು ಕೋರಿರುವುದರಿಂದ ಈ ಸಂಸ್ಥಾನಕ್ಕೆ ಪರಿಹಾರದ ಮೊಬಲಗೆಷ್ಟೆಂಬುದನ್ನು ಸೂಚಿಸಿಲ್ಲ.

ಇತರ ವಿಧಗಳು ... ಪಾಠ

... ಸಂಸ್ಥಾನಗಳು ... ಬರುವ ಆದಾಯದ ವಿಷಯದಲ್ಲಿ ಕೆಲ ಸಂಸ್ಥಾನಗಳು ... ಹೊಂದಿರುವ ಹಕ್ಕುಗಳನ್ನು ... ಪ್ರಭುತ್ವದವರಿಗೆ ... ಈ ವಿಷಯದಲ್ಲಿ ... ಅನುಭವಿಸುವ ಪ್ರತ್ಯೇಕ ಹಕ್ಕುಗಳನ್ನು ... ಕೊಡಬಹುದು.

ಸೈನ್ಯ ಮತ್ತು ಸೈನ್ಯ ಸಾಮಗ್ರಿಗಳ ಉಪಯೋಗಾರ್ಥವಾಗಿ ಕೊಡಲ್ಪಟ್ಟ ಹಣ ಕೂಡ ಸೂಚಿಸಲ್ಪಟ್ಟಿದೆ. ಈ ವಿಷಯದಲ್ಲಿ ಸಂಸ್ಥಾನಗಳವರ ಕೋರಿಕೆಯನ್ನು ಅಂಗೀಕರಿಸುವುದು ಅಗತ್ಯವಾಗಿದೆ. ಈ ಪ್ರದೇಶಗಳ ಮೇಲೆ ಸಂಸ್ಥಾನಗಳವರು ಮುನಿಸಿಪಲ್ ತೆರಿಗೆಯನ್ನು ವಿಧಿಸಬಹುದೆಂದೂ, ಸಂಸ್ಥಾನಗಳಲ್ಲಿ ರೈಲ್ವೆ ಕೆಲಸ ಮಾಡುತ್ತಿರುವವರಿಂದ ಆದಾಯ ತೆರಿಗೆಯನ್ನು ವಸೂಲ್ಮಾಡಬಹುದೆಂದೂ ಕೆಲವರು ಸೂಚಿಸಿರುತ್ತಾರೆ. ಸಂಸ್ಥಾನಗಳಲ್ಲಿ ಹಿಂದೆ ಅಧೀನ ಮೊದಲಾದ ... ಗಳ ಮೇಲೆ ವಿಧಿಸಲ್ಪಡುವ ... ಸಂಸ್ಥಾನಗಳ ಉಪಯೋಗಾರ್ಥವಾಗಿಯೇ ವ್ಯಯವಾಗಬಹುದೆಂಬ ಸೂತ್ರವನ್ನು ಅಂಗೀಕರಿಸುವುದು ಅವಶ್ಯವು.

ಉಪ್ಪಿನ ತೆರಿಗೆ

ಭಾರತ ದೇಶದಲ್ಲಿ ಉಪ್ಪು ಬಹಳವಾಗಿ ಉತ್ಪತ್ತಿಯಾಗುತ್ತದೆ. ಈ ಉಪ್ಪಿನಿಂದ ಪ್ರಭುತ್ವದವರಿಗೆ ವಿಶೇಷ ಆದಾಯ ಬರುತ್ತಿರುವುದು. ಫೆಡರಲ್ ಪ್ರಭುತ್ವವೇರ್ಪಟ್ಟಲ್ಲಿ ವರ್ಷಕ್ಕೆ ಒಂದು ಉಪ್ಪಿನ ಮೂಲಕವೇ ೬ ೦ ,೦೦,೦೦೦ ರೂಪಾಯಿಗಳ ಆದಾಯ ಬರುವುದು. ಆದರೆ ಒಟ್ಟು ಆದಾಯದಲ್ಲಿ ನೂರಕ್ಕೆ ೮ ಪ್ರಕಾರ ಉಪ್ಪಿನಿಂದುತ್ಪನ್ನವಾಗುವುದು. ಕಾಥೇವಾಡ ಮತ್ತು ಕಚ್ಛ ಪ್ರದೇಶಗಳ ಹೊರತು ಉಳಿದ ಭಾರತ ದೇಶದಲ್ಲೆಲ್ಲ ಉಪ್ಪನ್ನು ತಯಾರಿಸುವ ಅಧಿಕಾರವು ಪ್ರಭುತ್ವದವರಿಗೇ ಇರುವುದು. ೮೦ ವರ್ಷಗಳ ಹಿಂದೆ ಬೇರೆ ಬೇರೆ ಸಂಸ್ಥಾನಗಳೊಡನೆ ಒಡಂಬಡಿಕೆ ಮಾಡಿಕೊಂಡು ಇಂಡ್ಯಾ ಪ್ರಭುತ್ವದವರು ಈ ಹಕ್ಕನ್ನು ಪಡೆದುಕೊಂಡಿರುವರು. ಈ ಒಡಂಬಡಿಕೆಯಲ್ಲಿ ಈಗ ಯಾವ ವ್ಯತ್ಯಾಸವೂ ಆಗಕೂಡದೆಂದು ಸೂಚಿಸುವವರು ವಿದೇಶಗಳಿಂದ ಈಗಲೂ ವರ್ಷಕ್ಕೆ ೪,೦೦,೦೦೦ ಟನ್ನು ಉಪ್ಪು ಬರುತ್ತದೆ. ಇದನ್ನು ಕಡಿಮೆ ಮಾಡಲೂ, ಪ್ರಭುತ್ವದವರು ಅನುಭವಿಸುತ್ತಿರುವ ಹಕ್ಕಿಗಾಗಿ ಸಂಸ್ಥಾನಗಳಿಗೆ ಕೊಡುತ್ತಿರುವ ಪರಿಹಾರವನ್ನು ತಗ್ಗಿಸಲೂ ಫೆಡರಲ್ ಪ್ರಭುತ್ವದವರು ಕ್ರಮೇಣ ಪ್ರಯತ್ನಿಸಬಹುದು. ಆದರೆ ಕಥೇವಾಡ ಕಚ್ಛ ಪ್ರದೇಶಗಳಲ್ಲಿ ಮಾತ್ರ ಉಪ್ಪು ಉತ್ಪತ್ತಿಯನ್ನು ಹೆಚ್ಚಿಸಿ ಫೆಡರಲ್ ಪ್ರಭುತ್ವದವರೇ ಉಪ್ಪು ತೆರಿಗೆಯನ್ನು ವಸೂಲ್ಮಾಡಲು ತಕ್ಕ ಒಡಂಬಡಿಕೆಯನ್ನು ಮಾಡಿಕೊಳ್ಳುವುದು ಅವಶ್ಯವು.

ಉಪ್ಪು ತೆರಿಗೆಯಿಂದ ನ್ಯಾಯವಾಗಿ ಒದಗಬೇಕಾದ ಮೊಬಲಗಿನಲ್ಲಿ ಸಂಸ್ಥಾನಾಧಿಪತಿಗಳೊಡನೆ ಮಾಡಿಕೊಂಡಿರುವ ಒಡಂಬಡಿಕೆಯ ಪ್ರಕಾರ 13,06,857 ರೂಪಾಯಿಗಳನ್ನು ಪ್ರಭುತ್ವದವರಿಗೆ ಕೊಡುತ್ತಿಲ್ಲ. ಕಥೇವಾಡ ಕಚ್ಛ ಪ್ರದೇಶಗಳಲ್ಲಿ ಫೆಡರಲ್ ಪ್ರಭುತ್ವದವರು ಉಪ್ಪು ಸುಂಕವನ್ನು ವಸೂಲ್ಮಾಡಿದರೆ ಮೇಲ್ಕಂಡ ಮೊಬಲಗಿನಲ್ಲಿ 10,40,000 ರೂ ಕಡಿಮೆಯಾಗುವುದು.

ರೇವೆಗಳು—ಸುಂಕಗಳು

ಸಂಸ್ಥಾನಗಳಿಗೆ ಬೇರೆ ಬೇರೆ ರೇವೆಗಳಲ್ಲಿರುವ ಹಕ್ಕಿನಿಂದ ಸಂಸ್ಥಾನ ನಿರ್ಣಯವನ್ನು ಸಮನ್ವಯ ಮಾಡುವುದು ಬಹಳ ಕಷ್ಟ ವಿಷಯವಾಗಿದೆ. 1930-31 ರಲ್ಲಿ 36,182 ಲಕ್ಷ ರೂಪಾಯಿಗಳ ಬೆಲೆಯ ಸರಕುಗಳ ಭಾರತ ದೇಶಕ್ಕೆ ಬಂದಿರುತ್ತವೆ. ಈ ಹಣದಲ್ಲಿ ಸಂಸ್ಥಾನಗಳಿಗೆ ಸೇರಿದ ರೇವೆಗಳಲ್ಲಿ ಬಂದಿಳಿದ ಸರಕುಗಳ ಬೆಲೆಯು 1550 ಲಕ್ಷ ರೂ ಆಗುವುದು. ಈ ವರ್ಷದಲ್ಲಿ ಸಂಸ್ಥಾನಗಳು ೫೦ ಲಕ್ಷದ 78 ಸಾವಿರ ರೂಪಾಯಿಗಳ ಸುಂಕವನ್ನು ವಸೂಲ್ಮಾಡಿರುತ್ತವೆ. ಆದರೆ ಇಡೀ ದೇಶದ ಸರಾಸರಿಯಲ್ಲಿ ಬ್ರಿಟಿಷ್ ಪ್ರಭುತ್ವದವರು ಪಡೆಯುತ್ತಿರುವುದರಿಂದ ಮೇಲ್ಕಂಡ ಮೊಬಲಗಿನಲ್ಲಿ 122 ಲಕ್ಷದ 65 ಸಾವಿರ ರೂ. ಬ್ರಿಟಿಷ್ ಪ್ರಭುತ್ವದವರಿಗೆ ಲಭ್ಯವಾಗಿರುತ್ತದೆ. ಆದುದರಿಂದ ಒಟ್ಟಿನಲ್ಲಿ ಸುಂಕದಿಂದ ಬಂದ ಆದಾಯದಲ್ಲಿ 100 ಕ್ಕೆ 1 ರಂತೆ ಮಾತ್ರ ಸಂಸ್ಥಾನಗಳಿಗೆ ಸೇರಿರುವುದು. ಆದರೆ ಆ ಮೊಬಲಗಿನಲ್ಲಿ ಕಾಶ್ಮೀರ ಮೊದಲಾದ ರಾಷ್ಟ್ರಗಳಿಗೆ ಕಲ್ಪಿಸಲ್ಪಟ್ಟಿರುವ ಪ್ರತ್ಯೇಕ ಸೌಕರ್ಯಗಳ ಲೆಕ್ಕವು ಸೇರಿಸಲ್ಪಟ್ಟಿಲ್ಲ. ಒಟ್ಟಿನಮೇಲೆ ಸುಂಕದಿಂದ ನ್ಯಾಯವಾಗಿ ಪ್ರಭುತ್ವದವರಿಗೆ ಬರಬೇಕಾದ ಆದಾಯದಲ್ಲಿ ಸಂಸ್ಥಾನಗಳು 181 ಲಕ್ಷದ 42 ಸಾವಿರ ರೂ. ಗಳನ್ನು ಸಲ್ಲಿಸಲಿಲ್ಲ. ಸುಂಕವನ್ನು ವಸೂಲ್ಮಾಡುವ ಹಕ್ಕುಗಳನ್ನು ಬಿಟ್ಟುಕೊಡುವುದಕ್ಕಾಗಿ ಸಂಸ್ಥಾನಗಳಿಗೆ ಫೆಡರಲ್ ಪ್ರಭುತ್ವದವರು ಎಷ್ಟು ಹಣವನ್ನು ಪರಿಹಾರವಾಗಿ ಕೊಡಬೇಕೆಂಬುದನ್ನು ನಿರ್ಣಯಿಸುವುದು ಬಹಳ ಕಷ್ಟಕಾರ್ಯವು. ಆದಾಗ್ಯೂ ಕೊಚ್ಚಿನ್ ರೇವೆಯ ವಿಷಯದಲ್ಲಿ ಪ್ರಭುತ್ವದವರು ತಿರುವಾಂಕೂರು ಕೊಚಿನ್ ಸಂಸ್ಥಾನಗಳೊಡನೆ ಕೂಡಲೆ ರಾಜಿಮಾಡುವುದು ಆಗತಕ್ಕದ್ದೆಂಬುದು ಕಮಿಟಿಯವರ ಅಭಿಪ್ರಾಯವಾಗಿದೆ. ಬೊಂಬಾಯಿ ರಾಜ್ಯದ ರೇವೆಗಳ ಮಧ್ಯೆ ಕೊಚ್ಚಿನ್ ರೇವೆಯೇ ದೊಡ್ಡದು. ಇಲ್ಲಿ ದೊಡ್ಡ ಸ್ಟೀಮರುಗಳು ಬರಲು ಅವಕಾಶವಿರುತ್ತದೆ. ಆದುದರಿಂದ ಈ ರೇವೆಯ ಮೇಲೆ ಎರಡು ಸಂಸ್ಥಾನಗಳಿಗಿರುವ ಹಕ್ಕನ್ನು ಕೇಂದ್ರ ಪ್ರಭುತ್ವದವರು ಕೊಂಡುಕೊಳ್ಳಬೇಕು. ಆದರೆ ಇತರ ರೇವೆಗಳ ವಿಷಯವು ಈರೀತಿಯಾಗಿರುವುದಿಲ್ಲ. ಫೆಡರಲ್ ಪ್ರಭುತ್ವಕ್ಕೆ ಸೇರಿದ ರಾಷ್ಟ್ರಗಳು ಸುಂಕವನ್ನು ವಸೂಲ್ಮಾಡುವುದು ವಿರುದ್ಧ ಪದ್ಧತಿಯಾಗಿರುವುದಾದರೂ, ಈ ಹಕ್ಕನ್ನು ಬಿಟ್ಟುಕೊಡಲು ಫೆಡರಲ್ ರಾಷ್ಟ್ರಗಳಿಗಿಷ್ಟವಿಲ್ಲದಿರುವುದರಿಂದ ಯಾವುದಾದರೊಂದು ವಿಧದಲ್ಲಿ ರಾಜಿಮಾಡಿಕೊಳ್ಳುವುದು ಒಳ್ಳೆಯದು. ಇವರುಗಳ ಹೊಣೆಗಟ್ಟಿನಂತೆ ಫೆಡರಲ್ ಪ್ರಭುತ್ವದವರು ಪ್ರತ್ಯೇಕವಾಗಿ ಒಂದು ತಪೆಯನ್ನು ಕಲ್ಪಿಸಿ ಸುಂಕವನ್ನು ವಸೂಲ್ಮಾಡುವಲ್ಲಿ ಇವರುಗಳು ಯಾವ ಪ್ರತಿಬಂಧವನ್ನೂ ಮಾಡಕೂಡದು. ಆದುದರಿಂದ ಫೆಡರಲ್ ಪ್ರಭುತ್ವಾಧಿಕಾರಕ್ಕೆ ಭಂಗಬಾರದ ವಿಧಾನವನ್ನು ಸಂಬಂಧಿಸಿದ ಸಂಸ್ಥಾನಗಳಿಗೆ ಉಂಟಾಗುವ ಆದಾಯಕ್ಕೆ ಅಪಾಯಬರುವ ವಿಷಯದಲ್ಲಿ ರಾಜೀಮಾಡಿಕೊಳ್ಳುವುದು ಆವಶ್ಯಕವು. ಇನ್ನೂ ಇದೆ.

ಸ್ವಸ್ವಾಭಾವಿಕವಾದ ಆಹಾರ.

ನಾವು ತಿನ್ನುವ ಪದಾರ್ಥಗಳು ಬೆಂಕಿಯಿಂದ ಬೇಯಿಸಲ್ಪಡಬೇಕೆಂದು ನಮ್ಮ ಅಭಿಪ್ರಾಯವಿರುತ್ತದೆ. ಈ ಪ್ರಯೋಜನವನ್ನು ಪಡೆಯುವುದಕ್ಕೆ ಸ್ವಾಭಾವಿಕವಾದ ಆಹಾರವನ್ನು ... ಬೇರೆ ಸಲ್ಲುತ್ತ ಆಹಾರದಿಂದ ಶರೀರಕ್ಕೆ ... ಸ್ವಾಭಾವಿಕವಾದ ... ಒಂದು ದಿವಸ ಎಣ್ಣೆಯ ಅನ್ನವನ್ನು ತಿಂದರೆ ಮಾರನೆಯ ದಿವಸ ಶರೀರದಲ್ಲಿ ಮಾಲಿನ್ಯ ಉಂಟಾಗುವುದು. ಬೇಯಿಸಿದ ಅನ್ನ ಮೊದಲಾದುವು ಕರುಳಿನಲ್ಲಿರುವ ಪಸ್ತುಗಳಲ್ಲಿ ಕ್ಷೀಣವಾಗಿಯೂ, ಕೊಳೆತು ಹೋಗುವುದು. ಆರೋಗ್ಯವಾದ ಉಪಾಯವನ್ನು ನಾವು ನೋಡಿ ನಮ್ಮ ಶರೀರ ಆರೋಗ್ಯವೆಂದು ತಿಳಿದುಕೊಳ್ಳುತ್ತೇವೆ. ಈ ಕಾಲದಲ್ಲಿ ಆರೋಗ್ಯವಾದ ಶರೀರಕ್ಕೆ ... ಅನುಕೂಲವು. ಈ ಕಾರಣದಿಂದ ಪ್ರಕೃತಿಶಾಸ್ತ್ರವನ್ನು ನೋಡಿ ಎಲ್ಲರೂ ಸ್ವಾಭಾವಿಕವಾದ ಆಹಾರವನ್ನು ಉಪಯೋಗಿಸುವುದು ಒಳ್ಳೆಯದು.

ಸ್ವಾಭಾವಿಕ ಆಹಾರವನ್ನು ತೆಗೆದುಕೊಂಡರೆ ಅನ್ನವನ್ನು ತಿಂದಂತಾಗುವುದಿಲ್ಲ ಎಂದು ಹೇಳುವರು. ಮೊದಲು ಹಾಗೆ ತೋರಿದರೂ ಕ್ರಮವಾಗಿ ತೃಪ್ತಿಯುಂಟಾಗುವುದು. ಈ ಆಹಾರವನ್ನು ಅಭ್ಯಾಸ ಮಾಡಲು ಸ್ವಲ್ಪ ಕಾಲ ಹಿಡಿಯುವುದು. ಅಷ್ಟರೊಳಗೆ ಶರೀರವು ಕೃಶವಾಗಲಾರಂಭಿಸುವುದು. ಕೆಲದಲ್ಲಿ ವಿಶೇಷವಾದ ಉತ್ಸಾಹವು ಕಂಡುಬರುವುದು. ... ಇವುಗಳಿಗೆ ಪ್ರಕೃತಿ ಚಿಕಿತ್ಸೆಯ ವಿಧಾನವೇ ... ಹಾಗೆ ಮಾಡುವಾಗ ಸ್ವಲ್ಪ ವಿಶೇಷದಿಂದ ಆಹಾರವನ್ನು ತೆಗೆದುಕೊಳ್ಳಬೇಕು. ಬೇಯಿಸಿದ ಸಾಧಾರಣವಾದ ಆಹಾರದಂತೆ ತೆಗೆದುಕೊಳ್ಳುವುದು ಶ್ರೇಯಸ್ಕರವಲ್ಲ. ಕ್ರಮೇಣ ಶರೀರಬಾಧೆಯು ನಿವಾರಣೆಯಾಗುವುದು. ಆಹಾರದ ಮೇಲೆ ಇಚ್ಛೆಯಾಗುವುದು. ಹಸಿವು ಉಂಟಾಗುವುದು. ಬಲವು ಬರುವುದು. ಶರೀರವು ಹಗುರವಾಗಿಯೂ ಚುರುಕಾಗಿಯೂ ಆಗುವುದು. ಅನ್ನ ತಿನ್ನುವಾಗಿರುವ ಆಯಾಸವು ಈ ಆಹಾರವನ್ನು ತಿನ್ನುವಾಗ ಇರುವುದಿಲ್ಲ. ಮಧ್ಯೆ ಮಧ್ಯೆ ಹಸಿವು ತೋರಿ ಶಕ್ತಿಯುಳ್ಳ ಹಣ್ಣು ಮೊದಲಾದ ಪದಾರ್ಥಗಳನ್ನು ತಿನ್ನಬಹುದು. ನಾನಾ ರೀತಿಯಂತೆ ಕೆಲಸಮಾಡಲು ಶಕ್ತಿಯಿರುವುದು. ಇದಕ್ಕೆ ಉತ್ತರ ......

ಕಂಡಗಳಿಗಿರುವ ಶಕ್ತಿಯು ಅವನ ಅಭ್ಯಾಸ ಮತ್ತು ಸಾಧನವನ್ನನುಸರಿಸಿರುತ್ತದೆ. ಕೆಲಸಮಾಡುವವನಿಗೆ ಅವನ ಕೆಲಸಕ್ಕೆ ತಕ್ಕ ಕಂಡಪುಷ್ಟಿಯಾಗಿರುವುದು. ಆದುದರಿಂದ ಶಕ್ತಿಲೋಪವೇನೂ ಇರುವುದಿಲ್ಲ. ತಾಳ್ಮೆಯೂ, ಲವಲವಿಕೆಯೂ ಹೆಚ್ಚುತ್ತವೆ. ಆಲಸ್ಯವು ಕಡಿಮೆಯಾಗುವುದು. ಈ ಪರಿವರ್ತನವಾಗಲು ತಕ್ಕ ಅವಕಾಶವನ್ನು ಕೊಡಬೇಕು. ಕೊಂಡರೆ ... ಎಂದಿನಂತಿರುವುದೇ ? ಇದು ಎಲ್ಲಕ್ಕಿಂತಲೂ ದೊಡ್ಡ ಪ್ರಶ್ನೆಯು. ಕೆಲ ವಿದ್ಯಾರ್ಥಿಗಳು ಈ ಆಹಾರವನ್ನು ತೆಗೆದುಕೊಳ್ಳಬೇಕೆಂದಿದ್ದರೂ ಅಂಗವೈದ್ಯರ ಸಲಹೆಯನ್ನು ಕೇಳಿದರು. ಇದರಿಂದ ಇಂದ್ರಿಯಶುಷ್ಕತೆ ಹೋಗುತ್ತದೆಂದು ಅವರು ವಿದ್ಯಾರ್ಥಿಗಳನ್ನು ಹೆದರಿಸಿದರು. ಆ ಸಲಹೆಯನ್ನು ಕೊಡಲು ಅವರಿಗೆ ಯಾವ ಆಧಾರವಿದ್ದಿತೋ ತಿಳಿಯಲಿಲ್ಲ. ಶರೀರವನ್ನು ಆಹಾರಶಾಸ್ತ್ರವನ್ನನುಸರಿಸಿ ಪರಿಶೀಲಿಸಿದವರ ಅಭಿಪ್ರಾಯವು ನಿರಾಧಾರವೆಂದು ತೋರುತ್ತದೆ. ಮೇಲೆ ವಿವರಿಸಿದ ಸಂಗತಿಗಳಿಂದ ಪ್ರಕೃತಿಸಿದ್ಧವಾದ ಆಹಾರವು ಎಲ್ಲಾ ವಿಧದಲ್ಲೂ ಆರೋಗ್ಯದಾಯಕವೆಂದೂ, ರಕ್ತಶುದ್ಧಿ ಮಾಡುವುದೆಂದೂ, ತ್ರಿದೋಷವಿಕಾರವನ್ನು ಹೋಗಲಾಡಿಸುತ್ತದೆಂದೂ ಸ್ಪಷ್ಟವಾಗುತ್ತದೆ. ಪರಿಶುದ್ಧ ರಕ್ತದಿಂದುಂಟಾಗುವ ಶುಕ್ಲವು ಪರಿಶುದ್ಧವಾಗಿರುವುದೆಂದು ಬೇರೆ ಹೇಳಬೇಕಾಗಿಲ್ಲ. ಆದರೆ ಡಾಕ್ಟರುಗಳ ಅಭಿಪ್ರಾಯವು ಸಂಭೋಗಶಕ್ತಿ ಕಡಿಮೆಯಾಗುವುದೆಂದಿರಬಹುದು. ಈ ಅಭಿಪ್ರಾಯವೂ ನಿರಾಧಾರವಾದುದು. ಏಕೆಂದರೆ, ಈ ಶಕ್ತಿಯು ದೇಹಸ್ಥ ಶಕ್ತಿಯ ಮೇಲಿಂದ ನಿರ್ಣಯಿಸಲ್ಪಡುವುದು. ದೇಹಸ್ಥಿತಿ ಸ್ಪಷ್ಟವಾದ ಮುಂದೆ ವಾಗಿದ್ದಲ್ಲಿ ಈ ಶಕ್ತಿಗೆ ತೊಂದರೆಯಾಗುವುದಿಲ್ಲ. ಈಗ ನಮ್ಮಲ್ಲಿ ಅನೇಕ ಜನರು ನಿರ್ವೀರ್ಯರಾಗಿಯೂ, ನಿಸ್ತೇಜಸ್ಕರಾಗಿಯೂ, ದುರ್ಬಲರಾಗಿಯೂ ಇರುತ್ತಾರೆ. ಇದಕ್ಕೆ ವಿಷಯಭೋಗವೇ ಮುಖ್ಯ ಕಾರಣವು. ಈ ವಿಷಯ ತೀವ್ರತೆಯು ಹೋಗುವುದೇನೋ ಎಂದು ಅವರು ಅಭಿಪ್ರಾಯಪಟ್ಟಿರಬಹುದು. ವಾಸ್ತವ್ಯವಾಗಿ ನೋಡಿದರೆ ಪ್ರವರನ್ನು ನಪುಂಸಕರನ್ನಾಗಿ ಮಾಡುವುದು. ಆಹಾರ ವಿಹಾರಾದಿಗಳಲ್ಲಿ ನಿಯಮವಿಲ್ಲದಿದ್ದರೆ, ಬಹಳವಾಗಿ ಭುಂಜಿಸಿದರೆ ದುಷ್ಪರಿಣಾಮವಾಗುವುದು. ಪ್ರಕೃತಿಸಿದ್ಧವಾದ ಆಹಾರದಲ್ಲಿ ಕಾಮೋತ್ತೇಜಕವಾಗಲಿ ವಿಷಯಭೋಗವಾಗಲಿ ಇರುವುದಿಲ್ಲವೆಂದು ಸ್ಪಷ್ಟವಾಗಿ ಹೇಳಬಹುದು. ಅದು ಸತಿಪತಿಗಳ ಇಚ್ಛೆಯಿಂದುಂಟಾಗತಕ್ಕದು. ಬಾಕಿವೇಳೆಯಲ್ಲಿ ಅದರ ಪ್ರಸಕ್ತಿಯೇ ಇರುವುದಿಲ್ಲ. ಮನುಷ್ಯನ ಕ್ಷೇಮವನ್ನೂ ದೇಶದ ಸೌಭಾಗ್ಯವನ್ನೂ ಲೋಕಕಲ್ಯಾಣವನ್ನೂ ಇದು ವಾಂಛನೀಯವಲ್ಲವೆಂದು ಹೇಳುವರು. ... ತಪ್ಪುತ್ತಿದ್ದ ಋಷಿಪುಂಗವರಲ್ಲಿ ಬಹಳ ಮಂದಿ ಗೃಹಸ್ಥರಾಗಿಯೇ ಇದ್ದರು. ಅವರು ನಿರ್ವೀರ್ಯರಾಗಿದ್ದರೆಂದು ಹೇಳುವುದಕ್ಕೆ ಯಾವ ಶಾಸ್ತ್ರಾಧಾರವೂ ಬೇಕಾಗಿಲ್ಲ. ಆದರೆ ಒಂದು ವಿಷಯವನ್ನು ಗಮನಿಸಬೇಕಾಗಿದೆ. ಸಂತಾನಾಪೇಕ್ಷೆ ಇರುವ ಸ್ತ್ರೀಪುರುಷರಿಬ್ಬರೂ ಈ ಆಹಾರವನ್ನು ಅವಲಂಬಿಸುವುದು ಅವಶ್ಯವು. ಈ ಆಹಾರದಿಂದ ಶರೀರದಲ್ಲಿರುವ ವಸ್ತುಗಳ ನಿರ್ಮಾಣವೇ ಬದಲಾಯಿಸುವುದು. ಆದುದರಿಂದ ದಂಪತಿಗಳಿಬ್ಬರೂ ಸತ್ಸಂತಾನವನ್ನು ಪಡೆಯಲು ಒಂದೇ ವಿಧವಾದ ಶರೀರ ನಿರ್ಮಾಣವನ್ನು ಹೊಂದಿರುವುದು ಅವಶ್ಯಕವು.

ಈ ಆಹಾರಾಭ್ಯಾಸದಿಂದ ಅವಾಂತರ ಫಲವಾಗಿ ಅನೇಕ ಸುಗುಣಗಳು ಕೂಡ ಉಂಟಾಗುವುವು. ದುಶ್ಚಟಗಳು ... ಆಗುವುದು. ಕಾಫಿ, ಟೀ, ಸಿಗರೇಟು, ಬೀಡಿ ಇವುಗಳ ಸೇವನೆಯು ತಪ್ಪಿಹೋಗುವುದು. ಧರ್ಮಜೀವನದಲ್ಲಿ ಆಸಕ್ತಿ ಹುಟ್ಟುವುದು. ದಯೆ, ಸತ್ಯ, ಸೌಜನ್ಯಗಳ ಮೇಲೆ ಅಭಿರುಚಿಯುಂಟಾಗುವುದು. ಮನಸ್ಸಿನ ಚಾಂಚಲ್ಯವು, ಕ್ರೋಧವೂ, ಕಾಮವೂ, ಪ್ರೇಮದ ಹೆಚ್ಚುವುವು. ಈಚೆಗೆ ಇಂಗ್ಲೆಂಡಿನಲ್ಲಿ ಒಬ್ಬ ದಾರ್ಶನಿಕ ಉಪನ್ಯಾಸದಲ್ಲಿ ಹಾಗೆ ಆಯುಧಸಂಸರ್ಜನವನ್ನು ಯುದ್ಧಕ್ಷೋಭೆಯ ನಿರ್ಮೂಲನಕ್ಕೆ ನಿಷ್ಫಲವಾದ ಉಪಾಯವು ಆಗಿಯದಾಗಿ ಹೊಸದಾರಿಗಳನ್ನು ಮಾಡುತ್ತವೆ. ಮಾಂಸವನ್ನು ತಿನ್ನುವುದರಿಂದಲೇ ಕಾಮಕ್ರೋಧಗಳು ಹೆಚ್ಚಿ ಯುದ್ಧವನ್ನು ತಂದೊಡ್ಡುವುವೆಂದು ಆತನ ಅಭಿಪ್ರಾಯ. ಈ ವಿಷಯವಾಗಿ ಚಿಕ್ಕರೆಗಳನ್ನು ಪಂಜರದಲ್ಲಿ ಸಾಕ್ಷಾತ್ಕಾರದ ಮೇಲೆ ಬೆಳೆಯುವ ಚಿಕ್ಕರೆಗಳು ತಮ್ಮ ಆಹಾರವಾದ ಇಲಿಗಳನ್ನು ನೋಡಿ ಅವುಗಳನ್ನು ಕೊಲ್ಲುವುದಿಲ್ಲವೆಂದು ಒಬ್ಬ ಶಾಸ್ತ್ರಜ್ಞನು ಬರೆದಿರುತ್ತಾನೆ.

ಪ್ರಕೃತಿಸಿದ್ಧವಾದ ಆಹಾರದಿಂದೊಡನೆ ಬೇಯಿಸಿದ ಆಹಾರವನ್ನು ಬೆರಸಿ ತಿನ್ನಬಹುದೇ ಎಂಬ ಪ್ರಶ್ನೆಗೆ ತಿನ್ನಕೂಡದೆಂದು ಕೆಲವರು ಬರೆದಿರುತ್ತಾರೆ. ತಿನ್ನಬೇಕೆಂಬುದು ಮತ್ತೆ ಕೆಲವರ ಅಭಿಪ್ರಾಯವು. ಈಗ ಯೂರೋಪುಖಂಡಗಳಲ್ಲೆಲ್ಲಾ ಕಲ್ಪಿಸಿಟ್ಟಿರುವ ಉಪಾಯದಲ್ಲಿ ಪ್ರಕೃತಿಸಿದ್ಧವಾದ ಆ[redacted]ಗಿ ಸೇರಿಸಬೇಕೆಂದು ಬಹಳ ಜನರಿಗೆ ... ಅನೇಕರು ಒಂದು ಹೊತ್ತು ಸ್ವಾಭಾವಿಕ ... ಒಂದು ಹೊತ್ತು ಬೇಯಿಸಿದ ಆಹಾರವನ್ನು

ಮಕ್ಕಳಿದ್ದರೆಮನೆ ಚೆಂದ.

ಮಕ್ಕಳಿಲ್ಲೆಂದು | ಬಂಜೆತನದಿಂದ ಮುಕ್ತರಾಗುವಿರಿ | ಚಿಂತಿಸಬೇಡಿರಿ

ಗರ್ಭಧಾರಣಾ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರ ಫಲಿತ್ರಾಂ ಆವಿಗುರಿ ೯ ಗುಳಿಗೆಗಳ ಕಿ. ೩ ರೂಪಾಯಿ.

ಟ. ಖ [redacted]

ಪತ —ವೈದ್ಯ ವಿ. [redacted]

ಬೇಗಿಸುತ್ತಿದ್ದಾರೆ. ಕೆಲ ಪ್ರಸಿದ್ಧ ಡಾಕ್ಟರುಗಳು ಈ ಅಭಿಪ್ರಾಯವನ್ನು ಅನುಮೋದಿಸಿದ್ದಾರೆ ಪ್ರತ್ಯಕ್ಷವಾದ ಆಧಾರದಲ್ಲಿರುವ ಸಮಸ್ಯೆ [illegible] ಇದು ತಪ್ಪೆಂದು ಬರೆಯಬೇಕಾಗಿದೆ [illegible]

ಪತ್ರವ್ಯವಹಾರ

[illegible] ಪತ್ರವ್ಯವಹಾರದ ಲೇಖನಗಳಿಗೆ [illegible] ಪತ್ರಗಳಲ್ಲಿರುವ ಅಭಿಪ್ರಾಯಗಳಿಗೆ ನಾವು ಬಾಧ್ಯರಲ್ಲ.—ಸಂಪಾದಕ

ಪತ್ರವ್ಯವಹಾರಕರಿಗೆ ಒಂದು ಸೂಚನೆ

ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡತಕ್ಕ ವಿಷಯಗಳು ಶುದ್ಧವಾಗಿಯೂ, ಸಾರ್ವಜನಿಕವಾಗಿಯೂ, ಸಂಕ್ಷಿಪ್ತವಾಗಿಯೂ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟವಾಗಿಯೂ, ಇರಬೇಕೆಂಬುದು ಬಾಧವಾಗುವಂತಹವುಗಳಿಗೆ ನಮ್ಮ ಕೈಬಿಡುವಂತೆ ಇಟ್ಟುಕೊಳ್ಳಬೇಕೆಂದು, ಈ ನಿಬಂಧನೆಗೆ ವಿರುದ್ಧವಾದ ಲೇಖನಗಳು ಖಂಡಿತವಾಗಿ ಪ್ರಕಟಿಸಲ್ಪಡುವುದಿಲ್ಲವೆಂದೂ [illegible] ಲೇಖಕರು ಒತ್ತಿ ಹೇಳಿ [illegible] ಬೇಕಾದವರನ್ನು ಭೂಷಿಸಿ ಬೇಡವಾದವರನ್ನು ದೂಷಿಸಿ [illegible] ಬರೆದ [illegible] ನಿಬಂಧನೆಗಳನ್ನು ಉಲ್ಲಂಘಿಸಿ ಬರೆಯಲ್ಪಡುವ ಯಾವ ಪತ್ರವ್ಯವಹಾರವೂ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂಬ [illegible] ತಿಳಿಸಬೇಕಾಗಿದೆ.—ಸಂ

ಮ|| ರಾಮಯ್ಯಂಗಾರರವರಿಗೆ ಪಬ್ಲಿಕ್ ಎಂಟರ್‌ಟೇನ್‌ಮೆಂಟ್ ಎಂಬ ಲೇಖನದಲ್ಲಿ ತಪ್ಪು ದಿದ್ದಿ

ಕಳೆದ ತಾ|| 25 ನೆಯ ಮೈಸೂರು ಸ್ಟಾರ್ ಪತ್ರಿಕೆಯ 5 ನೇ ಪೇಜು 1 ನೇ ಕಾಲಮ್ಮಿನ ಕೆಳಗಿನಿಂದ 13 ನೇ ಲೈನಿನಲ್ಲಿ "ಕೆರೆಯಲ್ಲಿ 3500 ರೂ [illegible] ಎಂಬ ವಾಕ್ಯವನ್ನು [illegible] ತಿದ್ದಿ ಓದಿಕೊಳ್ಳಬೇಕು. ಅಡ್ಮಿನ್

ಜಗದಾಚಾರ್ಯರ ಅಡ್ಡಪಲ್ಲಕ್ಕೀ ಮಹೋತ್ಸವ

[illegible] ಜಗದಾಚಾರ್ಯ ಸ್ವಾಮಿ ಶ್ರೀ [illegible] ಒಡೆಯರನ್ನು ತಮ್ಮ ಗ್ರಾಮಕ್ಕೆ ತಾ|| 17 32ನೇ ದಿವಸ ದಯಮಾಡಿಸಿಕೊಂಡು ಅತ್ಯಂತ [illegible] ಆ ಊರ ಗೌಡರು [illegible] ರಾಜಮನ್ನಣೆ [illegible] ಜನಾಂಗದಿಂದಲೂ [illegible] ಬೋಧಕ ವಿಷಯಗಳನ್ನು ಸರ್ವಜನಾಂಗಕ್ಕೆ ಲೇಸಿನ [illegible] ತಾ|| 22 7-32 ನೇ ದಿವಸ ಕಡುಬಸಂಭ್ರಮವನ್ನು [illegible] ತಾ|| 24 7 32ರಲ್ಲಿ [illegible] ರಾಜಮನ್ನಣೆ [illegible] ಜನರೆಲ್ಲರೂ [illegible] ತಾ|| 25 7 32 ರಲ್ಲಿ ಗ್ರಾಮವನ್ನು [illegible] ಉತ್ಸವ [illegible] ವೈಭವದಿಂದ [illegible] ಓರ್ವ ಪ್ರತ್ಯಕ್ಷದರ್ಶಿ

ವೀರಶೈವ ಮಹನೀಯರು ಜೀರ್ಣೋದ್ಧಾರ ಮಾಡುವರೆ?

ಈ ಕೈಲಾಸವೆಂದು ಪ್ರಸಿದ್ಧಿಯಾಗಿರುವ ನಂಜನಗೂಡು [illegible] 30 ವರ್ಷ [illegible] ವೀರಶೈವರ ಒಂದು ಸಂಘವನ್ನು [illegible] ಕೊಂಡು [illegible] ಮೊದಲಾದವನ್ನು [illegible] ಮಾಡಿ ಕೆಲವರ [illegible] ವನ್ನು ನಡೆಸಿ [illegible] ಮಾಡಿದರು [illegible] ಕ್ಷೇತ್ರಕ್ಕೆ ಬರುವ ವೀರಶೈವ ಮಹಾಜನಗಳು [illegible] ಅಭಿವೃದ್ಧಿ ಕಾರ್ಯಗಳನ್ನು [illegible] ಈ ಮಠಕ್ಕಾಗಿ [illegible] ಮೇಲ್ಗಡೆ [illegible] 1924 ನೇ ಇಸವಿಯಲ್ಲಿ [illegible] ಈ ಮಠದ [illegible] ವೀರಶೈವ ಯಾತ್ರಾರ್ಥಿಗಳ ವಸತಿಗೆ ಸೌಕರ್ಯ ಕಲ್ಪಿಸಿಕೊಡುವ ಮಹನೀಯರಿಗೆ ಶ್ರೀ [illegible] ಸನ್ನಿಧಿಗಳವರನ್ನು ಪ್ರಾರ್ಥಿಸುವ ಸ್ಥಳೀಯರು

ಶ್ರೀ ಪಗಡದಿನ್ನಿ ಚಂದ್ರಶೇಖರಶಾಸ್ತ್ರಿಗಳವರಿಗೆ ಉತ್ತರ.

ಶ್ರೀ ಪಗಡದಿನ್ನಿ ಚಂದ್ರಶೇಖರಶಾಸ್ತ್ರಿಗಳವರ ಸನ್ನಿಧಿಗೆ—ಮಾಡಿದ

ತಾವು ತಾ|| 19 7-1932 ನೆಯ ದಿವಸ ಶ್ರೀ ಬಸವರಾಜಶಾಸ್ತ್ರಿಗಳವರ [illegible] "ವೀರಶೈವ ತತ್ತ್ವ ಪ್ರಚಾರಕ ಸಂಘದವರಿಗೆ [illegible]" ಎಂಬ ಲೇಖನ [illegible] ಪತ್ರಿಕೆಯಲ್ಲಿ ಪ್ರಕಟಿಸುವ [illegible] ವೀರಶೈವ ತತ್ತ್ವ [illegible] ಪ್ರವಚನವನ್ನು [illegible] [redacted] [illegible]

ಈ ತಮ್ಮ [illegible] ದಯಪೂರ್ವಕ [illegible] ನಿವೇದಿಸಿಕೊಳ್ಳುತ್ತೇವೆ [illegible]

(1) ವೀರಶೈವ ತತ್ತ್ವ ಪ್ರಚಾರಕ ಸಂಘದವರು [illegible] ನ್ಯಾಯ [illegible] ಸಂಘದವರು ತಮ್ಮ [illegible] ಸಿದ್ಧವಾಗಿದ್ದಾರೆ

(2) ತಾವು ಬರೆದಂತೆ [illegible] ಸಂಸ್ಥೆ [illegible] ಪ್ರಮುಖರ [illegible]

(3) ತಾವು ಬರೆದ [illegible]

ಈ ವಿಷಯದಲ್ಲಿ [illegible] ನ್ಯಾಯಾಧೀಶರನ್ನಾಗಿ [illegible] ಯುಕ್ತ [illegible]

ಈ ವಿಷಯಗಳಲ್ಲಿ [illegible] ನ್ಯಾಯಾಧೀಶರನ್ನಾಗಿರಿಸುವುದು ಅತ್ಯಂತ ಮುಖ್ಯವಾದುದಾಗಿದೆ. ಈ ವಿಷಯದಲ್ಲಿ ತಾವು ಈ ಪ್ರಕಾರ [illegible]

[illegible] ಸರ್ವಸಂಮತಿಯಿಂದ ಆರಿಸಲ್ಪಟ್ಟವರೇ ಅಧ್ಯಕ್ಷರು [illegible] ನ್ಯಾಯಾಧೀಶರನ್ನು [illegible]

ಉಭಯ ಪಕ್ಷಗಳಿಂದ [illegible] ಜನರನ್ನು ಆರಿಸಬೇಕೆಂದು [illegible] ಸರ್ವಸಮ್ಮತ [illegible] ನ್ಯಾಯಾಧೀಶರನ್ನು [illegible] ನಾಲ್ಕು ಜನರನ್ನು ನಿಯಮಿಸಿ [illegible] ಈ ಪ್ರಕಾರ [illegible] 3 ಜನ ನ್ಯಾಯಾಧೀಶರ [illegible] ಉಭಯ ಪಕ್ಷದವರು [illegible]

ಈ ವಾದವನ್ನು ಕೇವಲ ಸಿದ್ಧಾಂತ [illegible] ಅಥವಾ ಪಂಚಾಚಾರ್ಯ [illegible] ಸಿದ್ಧಾಂತ [illegible] ನ್ಯಾಯಾಧೀಶರನ್ನು [illegible] ಸಂಘಗಳನ್ನು [illegible] ಅಭಿಪ್ರಾಯವನ್ನು [illegible]

ತಮ್ಮ ಅಭಿಪ್ರಾಯದಂತೆ ತಮ್ಮ ಲೇಖನವನ್ನು [illegible] ಪತ್ರಿಕೆಯಲ್ಲಿ ಪ್ರಕಟಿಸಿದಾಗ [illegible] ಉತ್ತರ ಪ್ರತ್ಯುತ್ತರಗಳನ್ನು [illegible] ಪ್ರಕಟಿಸಬೇಕಾಗಿ ಬರುತ್ತದೆ.

ಅನುಕೂಲಕ್ಕಾಗಿ ಈ ಪ್ರಕಾರ ಪ್ರತ್ಯೇಕವಾಗಿ ಬರೆದಿದ್ದೇವೆ

ಬೆಂಗಳೂರು, 26 7 32 — ತಮ್ಮ ವಿಧೇಯ [illegible]

[illegible] ಮಹೋತ್ಸವ

ಶ್ರೀ [illegible] ಬೋರ್ಡಿಂಗ [illegible] ಸಂಸ್ಥೆಯ [illegible] 4 8 32 ರಿಂದ 14ರ ವರೆಗೆ [illegible] ಈ ಸಂಸ್ಥೆಯಲ್ಲಿ [illegible] 5 ರಿಂದ 8 ಘಂಟೆಯವರೆಗೆ [illegible] ಶ್ರೀ [illegible] ಸಂಸ್ಥೆ [illegible] ತಾ|| 16 ರಿಂದ ತಾ|| 19-8-1932 ವರೆಗೆ [illegible] ಜರಗುತ್ತವೆ. ಈ ಉತ್ಸವದ ವಿಚಾರ ಬೋರ್ಡಿಂಗ ಸಂಸ್ಥೆಯಿಂದ ವಹಿಸಲ್ಪಡದೆ ಸರ್ವಭಕ್ತಾದಿಗಳಿಂದ ವಹಿಸಲ್ಪಡುತ್ತದೆ. ಕಾರಣ ಸರ್ವರೂ ಆಗಮಿಸಿ ಈ ಸತ್ಕಾರ್ಯಗಳಲ್ಲಿ ಭಾಗಿಗಳಾಗಿ ಶ್ರೀಮಹಾಂತಪ್ಪಗಳವರ ಕೃಪಾಶೀರ್ವಾದಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ

ಎಲ್ಲಪ್ಪ ನಾಸ್ತಿ [illegible] ಗದಗ, ಬೋರ್ಡ್

ನಾರಿನಹುಣ್ಣಿನ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಜಗುವದಿಲ್ಲ ನಾರಿನವರು ಬರೋಣ ತರಿಸಿ ಕೊಳ್ಳಿರಿ. ಕಿ. ೧। ರೂ. ಟ. ಖ ೫ ಆಣೆ.

ಪತ್ತಾ—ವೈದ್ಯ ಪಿ. ಎಸ್. ಕಾನಡೆ, ಮಿರಜ.

15 [redacted] M. C

ಜಾಯಿಕಾಹೋಂದ್ರ ಸಹಿತಾ

ಉದಿತೋ ಗುರುವಾಸರಃ

[illegible] ಶ್ರೀಕೃಷ್ಣ ಸಹಾಯಾರ್ಥಂ [illegible] ಗರ್ಭಸಾಗರೇ [illegible] ಶ್ರೀ ಕೃಷ್ಣಃ ದೇವಕೀ ದೇವ್ಯಾಃ [illegible]

ಚಾಮುಂಡೀತಿ ಸುಪ್ರಸಿದ್ಧ ದೇವೀ, ದ್ವಾಪರಯುಗೇ ಕಂಸಮರ್ದನಾಯ ಶ್ರೀಕೃಷ್ಣಸ್ಯ ಸಹಾಯಾರ್ಥಂ [illegible] ಯಶೋದಾದೇವ್ಯಾಃ ಗರ್ಭಸಾಗರೇ [illegible] ಕಂಸಂ ಪ್ರತಿ [illegible] ಕರ್ಣಾಟಕ ಭಾಷಾಯಾಂ ಪ್ರಸಿದ್ಧ ಮಧೂಕ ದೇವೀ ವ ಹಿಷಾಸುರ ಮರ್ದಿನೀತಿ ಸುಪ್ರಸಿದ್ಧಾ ಬಭೂವ ಚಾಮುಂಡೀದೇವೀ ಇತಿ [illegible] ವರ್ಣನೇ ತಸ್ಯಾಃ ಸ್ವರೂಪವರ್ಣನಂ ಕ್ರಮಕ್ರಮಶಃ ಕರೋಮಿ

ಸ್ವಾಮಿದಯಾಸಾಗರಭೀಷ್ಮಾರ್ಯಃ

ಪ್ರಕಟನೆ.

ಧಾರವಾಡ ಲಿಂಗಾಯತ ಎಜ್ಯುಕೇಷನ್ ಅಸೋಸಿಯೇಶನ್ನದ ವಾಙ್ಮಯ ಶಾಖೆಯವರು.

೧ ಶ್ರೀ ಬಸವಣ್ಣನವರ ವಚನಗಳು

ಷಡಕ್ಷರದೇವಕೃತ.

೨ ಕವಿಕರಣರಸ [illegible] ನ.

ಈ ಗ್ರಂಥಗಳನ್ನು ಪರಿಶೋಧಿಸಿ ಮುದ್ರಿಸಿ ಪ್ರಕಟಿಸುವ ಕಾರ್ಯವನ್ನು ಕೈಕೊಂಡಿದ್ದಾರೆ ಅದಕ್ಕಾಗಿ ಯಾವ ಮಹನೀಯರಲ್ಲಾದರೂ ಮೇಲ್ಕಂಡ ಗ್ರಂಥಗಳ ಕೈಬರಹದ ಅಥವಾ ತಾಡವಾಲೆಯ ಪ್ರತಿಗಳು ಇದ್ದುದಾದರೆ ಅವುಗಳನ್ನು ಕೆಳಗೆ ಕಾಣಿಸಿದ ವಿಳಾಸಕ್ಕೆ ಆದಷ್ಟು ಬೇಗನೆ ದಯವಿಟ್ಟು ಕಳುಹಬೇಕೆಂದು ಬಿನ್ನಹ. ಪರಿಶೋಧನೆಯ ಕಾರ್ಯ ಮುಗಿದ ಕೂಡಲೆ ಅವರವರ ಗ್ರಂಥಗಳನ್ನು ಅವರವರಿಗೆ ತಿರುಗಿ ಕಳುಹಿಸಿಕೊಡಲಾಗುವದು. ಈ ಗ್ರಂಥಗಳ ಹಳೇ ಪ್ರತಿಗಳು ಯಾರಲ್ಲಿಯಾದರೂ ಇದ್ದ ಸಂಗತಿಯನ್ನು ದಯವಿಟ್ಟು ತಿಳುಹಿದಲ್ಲಿ ವಾಙ್ಮಯ ಶಾಖೆಯವರು ಉಪಕೃತರಾಗುವರು.

ಎಸ್. ಎಸ್. ಮಳೀಮಠ,

ಲಾಯಿಬ್ರೇರಿಯನ್

ಲಿಂಗಾಯತ ಎಜ್ಯುಕೇಷನ್ ಅಸೋಸಿಯೇಷನ್ನರ

ವಾಙ್ಮಯಶಾಖೆ, ಧಾರವಾಡ

೧೯೩೨ ನೆಯ ಇಸವಿ ಆಗಸ್ಟ ತಾ|| ೧ ರಿಂದ ಆಗಸ್ಟ ತಾ|| ೭ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ನೆಯ ಆಂಗಿರಸನಾಮಸಂವತ್ಸರದ ಆಷಾಢ ಬಹುಳ ಚತುರ್ದಶಿಯಿಂದ ಶ್ರಾವಣ ಶುದ್ಧ ಪಂಚಮಿ ವರೆಗಿನ ಪಂಚಾಂಗ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕರ್ಕ ಮಾಸ
1	ಸೋಮ	ಚತು	22 37	ಪುನ	20-53	17
2	(1) ಮಂಗಳ	ಅಮಾ	21 27	ಪುಷ್ಯ	22 20	18
3	ಬುಧ	ಪಾಡ್ಯ	2[illegible] 13	ಆಶ್ಲೇ	22 25	19
4	ಗುರು	ಬಿದಿ	17 52	ಮಘ	21 36	20
5	(2) ಶುಕ್ರ	ತದಿ	14 8	ಪುಬ್ಬ	19-44	21
6	(3) ಶನಿ	ಚೌತಿ	9-27	ಉತ್ತ	16-54	22
7	(4) ಭಾನು	ಪ-ಷ	4-8 54-32	ಹಸ್ತ	13-32	23

(1) ಭೀಮನಅಮಾವಾಸ್ಯಾ, ಮಳೆನಕ್ಷತ್ರ-ಆಶ್ಲೇಷ ೧ ನೆಯಪಾದ, (2) ಮಳೆನಕ್ಷತ್ರ-ಆಶ್ಲೇಷ ೨ ನೆಯಪಾದ (3) ಶ್ರಾವಣಶನಿವಾರ, (4) ಗರುಡ ಪಂಚಮಿ.

ಮೈಸೂರು : ಪ್ಯಾ. ದಿ[redacted] ಎಡಿಟರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟ[redacted]

N. O. M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

[illegible] ||
[illegible] ||
[illegible] ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೩-೮-೦] [ಕೈಪ್ರತಿಗೆ ೦-೧-೦]

ಸಂಪುಟ ೪೫] ಮೈಸೂರು ಸ್ಟಾರ್ ಸೆ ೧೯೩೨ ನೆಯ ಇಸವಿ ಆಗಸ್ಟ್ ತಾರೀಖು ೮ ನೆಯ ಸೋಮವಾರ [ಸಂಚಿಕೆ ೩೨

1932 ನೆಯ ಇಸವಿಯ ಮೈಸೂರು ದಸರಾ ವಸ್ತುಪ್ರದರ್ಶನ.

ಇಡೀ ಭರತಖಂಡದಲ್ಲೆಲ್ಲಾ ನಿಮ್ಮ ವಸ್ತುಗಳಿಗೆ ಗಿರಾಕಿಯನ್ನು ಪಡೆಯುವ ಅಭಿಲಾಷೆಯು ನಿಮಗಿದೆಯೆ?

ದಸರಾ ಕಾಲದಲ್ಲಿ ಭರತಖಂಡದ ಸಮಸ್ತ ಪ್ರಾಂತಗಳಿಂದಲೂ ಧನಿಕರಾದ ಜನರು ಗುಂಪು ಗುಂಪಾಗಿ ಮೈಸೂರು ನಗರಕ್ಕೆ ಬರುತ್ತಾರೆ ಅವರು ನಿಮ್ಮ ವಸ್ತುಗಳನ್ನು ಕೊಳ್ಳುವ ಭರವಸೆಯು ವಿಶೇಷವಾಗಿದೆ

ಅವರು ನಿಮ್ಮ ಸರಕುಗಳನ್ನು **1932** ನೆಯ ಇಸವಿ ಅಕ್ಟೋಬರು **1** ರ ಲಾಗಾಯಿತು **15** ನೆಯ ತಾರೀಖಿನವರಗೂ ನಡೆಯುವ ಮೈಸೂರು ದಸರಾ ವಸು ಪ್ರದರ್ಶನದಲ್ಲಿ ಅಜಮಾಯಿಷಿಮಾಡಿ ನೋಡುವುದಕ್ಕೆ ಅವಕಾಶಕೊಡಿ

ಪ್ರದರ್ಶಕರಿಗೆ ಸಮಸ್ತ ಸೌಕರ್ಯಗಳನ್ನೂ ಒದಗಿಸಲಾಗುವುದು.

ಪ್ರದರ್ಶನಕ್ಕೆ ಸಂಬಂಧಪಟ್ಟಒಂದು ಕೈಪಿಡಿಯನ್ನು ಪ್ರಕಟಿಸುತ್ತೇವೆ ಇದಕ್ಕೆ ಹಿಂದಣ ವರುಷಗಳಂತೆಯೇ ಅತ್ಯಧಿಕವಾಗಿ ಅದರ ಪ್ರತಿಗಳು ಮಾರಾಟವಾಗುವುವು. ಅದರಲ್ಲಿ ಕೆಲವು ಜಾಹಿರಾತುಗಳಿಗೆ ಮಾತ್ರವೇ ಸ್ಥಳವಿರುತ್ತದೆ

"ಪ್ರಾಸ್ಪೆಕ್ಟಸ್" ಎಂಬ ಪ್ರಸಿದ್ಧಪತ್ರಿಕೆಗಾಗಿಯೂ ಜಾಹಿರಾತು ಪ್ರಕಟಣೆಯ ದರಗಳು ಮುಂತಾದವುಗಳಿಗಾಗಿಯೂ ಈ ಕೆಳಗಿನ ವಿಳಾಸಕ್ಕೆ ಬರಯಿರಿ:—

(೬೦—೬) ಸೆಕ್ರೆಟರಿ, ಮೈಸೂರು ದಸರಾ ಎಗ್ಜಿಬಿಷನ್ ಕಮಿಟಿ,
ಅಠಾರಾಕಚೇರಿ, ಬೆಂಗಳೂರು.

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಸ್ವಲ್ಪಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು

ಮ್ಯಾನೇಜರ್, ಸ್ಟಾರಾಫೀಸು ,ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	ವಿ.ಪಿ. ಸಹ.
ವೀರಶೈವ ಶಿವಪೂಜಾವಿಧಿ	೦ ೧೬—೦	೧— ೨—೦
ಸಚಿತ್ರ ವೀರಶೈವ ವಿವಾಹವಿಧಿ	೦ — ೮ ೦	೦—೧೪—೦
ಷಟ್ಸ್ಥಲವಚನ	೦— ೪— ೬	೦— ೯—೦
ಜಾಜೂರೀವಚನ	೦ — ೩—೬	೦—೧೦—೯
ಭಜನಾಸ	೦— ೪—೦	೦— ೯—೦
ಪ್ರಸಂಗಶತ	೦— ೪—೧	೦— ೯—೦
ಗುರುಶಂಕರಲೀಲೋತ್ಸವಕಳ	೦ — ೧— ೦	೨— ೬—೦
ಬಸವೇಶ್ವರಚರಿತ	೦— ೯— ೦	—೧೩—೦
ಸಚಿತ್ರ ಚರಿತ್ರೆ ಸಿಕ್ಷಣ ಮಾಲಿಕೆ	೯— ೮—೦	೦—೧೩—೦
ಸಚಿತ್ರ ಶರಣಸ್ತುತಿ	೧ ೧ ೨	೧— ೬—೦

ಸತ್ಯದ ಬಿಗತ್ತು] ೧೦೦೦ ರೂಪಾಯಿ ಇನಾಮು: [ಆದೇನು ನೋಡೋಣ

ಮಿರಜಯಲ್ಲಿಯ ಪ್ರಸಿದ್ಧ ವೈದ್ಯ ಕೌಜಲಗಿ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಸ್ಕಾಗ ಕ್ಷೀಣರಾಗ ಬೇಡಿರಿ	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕದ. [ಸ್ಟರ	ದಿಕ್ಕರಿಸಿದರೆ ಕ್ಷೀಣರಾಗೆ ಕಾಯ್ದು ಕೊಳ್ಳುವಿರಿ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಅತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ [illegible], [illegible], [illegible] ಉಷ್ಣತೆ, [illegible], ನಿದ್ರೆ [illegible] ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, [illegible] ಸ್ತ್ರೀಯರ ಎಲ್ಲ ರೋಗಗಳು [illegible] ರೂಪಾಯಿ [illegible] ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣ ಚೂರ್ಣ.

ಎಲ್ಲ ಬಣ್ಣದ ಸೆರಗು, ಮುಟ್ಟುಕಟ್ಟು ಆಗುವದು [illegible] ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ [illegible], ಗರ್ಭಧಾರಣೆ ಆಗದೆ ಇರೋದು, ಗರ್ಭಪಾತವಾಗೋದು, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. [illegible] ೪೦ ವರ್ಷದ ಸ್ತ್ರೀಯರಿಗೂ [illegible] ರೂಪಾಯಿ. [illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಆದೆ ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣೆ ಮಾಡುವ ಶಕ್ತಿ [illegible] ಗರ್ಭಧಾರಣ [illegible] ಮತ್ತು [illegible] ಗುಳಿಗೆ [illegible] (೬೦—೩೨)

ಪತ್ತಾ [redacted] ವ್ಹಿ. ಎನ್. ಕೌಜಲಗ, ಮು. ಪೋ [redacted] ಸ್. ಎಂ

ಡಾಕ್ಟರ್ ಜೇ ಬೀ. ಯವರ

ಸುಗಂಧ ನಶ್ಯದ ಪುಡಿ.

ತಿರುವಳ್ಳೂರಿಗೆ ಸೇರಿದಂತಿರುವ [illegible] ಎಂಬ ಗ್ರಾಮದಲ್ಲಿ ಒಬ್ಬ ರೆಡ್ಡಿ ಹೆಂಗುಸು ಒಂದು ವಿಚಿತ್ರ ಗಂಡು ಮಗುವನ್ನು ಹೆತ್ತಿರುವಳು ಆಕೆಯೂ ಮಗುವೂ ಆರೋಗ್ಯ ವಾಗಿರುತ್ತಾರೆ ಈ ಮಗುವಿನ ಅವಯವಗಳೆಲ್ಲ ಸಲಕ್ಷಣ ವಾಗಿರುತ್ತವೆ ಆದರೆ ಅದರ ಹೊಟ್ಟೆಯ ಮೇಲ್ಗಡೆ ಎದೆಯ ಕೆಳಗೆ ಒಂದು ಪುಟ್ಟ ತಲೆಯಿದೆ. ಇದಕ್ಕೆ 2 ಕಣ್ಣುಗಳಿದ್ದು ಮುಚ್ಚಿಕೊಂಡಿವೆ ಮೂಗು ಬಾಯಿಗಳಿಗೆ ಬದಲಾಗಿ 2 ರಂಧ್ರ ಗಳಿರುತ್ತವೆ ಗದ್ದವಿದೆ, ತಲೆಯಮೇಲೆ ಕೂದಲುಗಳಿವೆ, ಭುಜ ಗಳಿಲ್ಲ, ಆದರ ತಲೆಯ ಪಕ್ಕದಲ್ಲಿ 2 ಚಿಕ್ಕ ಕೈಗಳು ನೇತಾಡು ತ್ತಿವೆ ಆಸಯ ಕೈಗಳೆರಡೂ ಸರಿಯಾಗಿವೆ ಹೊಟ್ಟೆಯ ಮೇಲಿ ರುವ ತಲೆಯು ಕಂಚಿಕಾಯಿ ಗಾತ್ರವಿದೆ ಮಗುವು ಸರಿ ಯಾಗಿ ಅಳುತ್ತಿದೆ ಮತ್ತು ಹಾಲನ್ನು ಕುಡಿಯುತ್ತದೆ ಎಂದು ಹಿಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಭಾರತ ಆರ್ಡಿನೆನ್ಸ್ ಪರಿಪಾಲನೆಯು ತಪ್ಪಬೇಕ.

'' ಭಾರತ ದೇಶದಲ್ಲಿ ಆರ್ಡಿನೆನ್ಸು ಪರಿಪಾಲನವು ತೊಲಗ ದಿದ್ದಲ್ಲಿ ಕೂಡಲೆ ನೂತನ ರಾಜ್ಯಾಂಗ ವಿಧಾನವನ್ನು ಸ್ಥಾಪಿ ಸಲು ದೊರತನದವರು ಮಾಡುತ್ತಿರುವ ಪ್ರಯತ್ನವು ನಿಷ್ಫಲ ವಾಗುವುದು. ಆರ್ಡಿನೆನ್ಸ್ ಪರಿಪಾಲನದಿಂದ ಭಾರತ ದೇಶದ ಪ್ರಜೆಗಳೆಲ್ಲರಿಗೂ ದೊರತನದವರ ಮೇಲಿನ ದ್ವೇಷವು ಅಧಿಕ ವಾಗುತ್ತಿದೆ ಈವರೆಗೆ ಅನುಕೂಲರಾಗಿದ್ದವರು ಕೂಡ ಈಗ ಪ್ರತಿಕೂಲರಾಗಿರುತ್ತಾರೆ ದೊರತನದವರು ಅನೇಕ ಸೇಲೆ ಔದಾರ್ಯ ತೋರಿಸಿರುತ್ತಾರೆ. ಆದುದರಿಂದ ಈ ಕಾರ್ಯದೂ ಹಾಗೆಯೇ ಔದಾರ್ಯವನ್ನು ತೋರಿಸಬೇಕು ಅದರಿಂದ ಭಾರ ತೀಯರಿಗೆ ಸದ್ಭಾವವು ಹೆಚ್ಚುವುದೇ ವಿನಾ ವಿಪರೀತ ಭಾವ ವುಂಟಾಗುವುದಿಲ್ಲ. ಈಗ ಭಾರತ ದೇಶದಲ್ಲಿ ಶಾಂತಿಯು ಸ್ಥಾಪಿ ತವಾದಲ್ಲಿ ನೂತನ ರಾಜಕೀಯ ವಿಧಾನವು ಕೆಲಸಗಾರರು ಷದು ದೊರತನದವರಿಗೂ ಕಾಂಗ್ರೆಸಿನವರಿಗೂ ಸಮಾಧಾನ ವನ್ನುಂಟುಮಾಡಲು ಕಾಂಗ್ರೆ [redacted] ನವರೆಲ್ಲರೂ ಪ್ರಯತ್ನಿಸಬೇಕು'' ಎಂದು ಸ್ಕಾಟ್ಲೆಂಡ್ ಮಿಷನರಿಗಳು ಪಾರ್ಲಿ ಮೆಂಟಿನಲ್ಲಿ ಸ್ಟೇಟ್ ಮೆಂಬರಾಗಿರುವ ಸ್ಕಾಟ್ಲೆಂಡ್, ಎಂ.ಪಿ. ಯವರಿಗೆ ಬರೆದಿರುತ್ತಾರೆ

ಮೂರನೆಯ ರೌಂಡುಟೇಬಲು ಸಭೆ

ಬರುವ ನವೆಂಬರ್ ತಿಂಗಳಿನಲ್ಲಿ ಲಂಡನ್ ಪಟ್ಟಣದಲ್ಲಿ ನಡೆಯುವ ಮೂರನೆಯ ರೌಂಡುಟೇಬಲ್ ಸಭೆಗೆ ಭಾರತದೇಶ ದಿಂದ ಆಹ್ವಾನಿಸಲ್ಪಡಬೇಕಾಗಿರುವ ಪ್ರತಿನಿಧಿಗಳ ಹೆಸರನ್ನು ಭಾರತ ದೊರತನದವರು ಭಾರತ ಮಂತ್ರಿಯವರಿಗೆ ಬರೆದು ತಿಳಿಸಿರುವರು ಈ ಹೆಸರುಗಳ ಪಟ್ಟಿಯು ಪ್ರಾಯಶಃ ಈ ದಿವಸ ಪ್ರಕಟಿಸಲ್ಪಡುವುದಾಗಿ ನಿರೀಕ್ಷಿಸಲ್ಪಟ್ಟಿದೆ ಮತ್ತು ತತ್ಸಂಬಂಧವಾಗಿ ಭಾರತ ಮಂತ್ರಿಯವರಿಗೂ ವೈಸ್ರಾಯರಿ ಗೂ ತಂತೀವಾರ್ತೆಯು ನಿರಂತರವೂ ನಡೆಯುತ್ತಲೇ ಇದೆ ಈಗ ಕಳುಹಲ್ಪಟ್ಟಿರುವ ಪಟ್ಟಿಯಲ್ಲಿ ದಿವಾನ್ ಬಹದ್ದೂರ್ ಎ ರಾಮಸ್ವಾಮಿ ಮೊದಲಿಯಾರರ ಮತ್ತು ಸರ್ ಎ ಪಿ. ಪತ್ರೊ ಯವರ ಹೆಸರುಗಳು ಸೇರಿಸಲ್ಪಟ್ಟಿರುವುದಾಗಿಯೂ ರೈಟ್ ಆನರಬಲ್ ಶ್ರೀನಿವಾಸ ಶಾಸ್ತ್ರಿಗಳ ಹೆಸರು ಬಿಡಲ್ಪಟ್ಟಿರುವು ದಾಗಿಯೂ ಸರ್ ತೇಜ್ ಬಹದ್ದೂರ್ ಸಪ್ರೂ ಮತ್ತು ಎಂ. ಆರ್ ಜಯಕರ್ ರವರ ಪಕ್ಷದವರು ಬಹಳ ಕಡಿಮೆಯಾಗಿರು ವುದಾಗಿಯೂ, ಪ್ರತ್ಯೇಕ ನಿಯೋಜಕವರ್ಗಗಳನ್ನೇ ಕೋರು ವವರ ಸಂಖ್ಯೆಯು ಹೆಚ್ಚಾಗಿರುವುದಾಗಿಯೂ, ಜಾತೀಯ ನಾಯಕರುಗಳು ವಿಶೇಷವಾಗಿ ಜಾತೀಯ ಮಹಮ್ಮದೀಯ ನಾಯಕರುಗಳು ಆರಿಸಲ್ಪಟ್ಟಿರುವುದಾಗಿಯೂ ತಿಳಿಯಬರುತ್ತದೆ ಮಹಾತ್ಮರೂ, ಅವರ ಪಕ್ಷಕ್ಕೆ ಸೇರಿದ ಹಿಂದು ಮುಸಲ್ಮಾನರ ನಾಯಕರುಗಳೂ ಕಾರಾಗೃಹಗಳಲ್ಲಿರುವಾಗ್ಗೆ ಈ ಸಭೆಯನ್ನು ನಡೆಯಿಸುವುದು ನಿಷ್ಫಲವೆಂದು ಕಳೆದ ಬುಧವಾರ ಲಾಹೋರಿ ನೊಳಗೆ ರಾಜಾ ಜಂಗ್ ಬಹದ್ದೂರ್ ರವರ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ತೀರ್ಮಾನಿಸಲ್ಪಟ್ಟಿತು

ಕಲಿಯುಗದಲ್ಲಿ ಮಹಾದ್ಭುತಕಾರ್ಯ

ಈಗ ಭಾರತದೇಶದಲ್ಲಿ ಸಂಚರಿಸುತ್ತಿರುವ ಪಾರ್ಲಿಮೆಂಟು ಮೆಂಬರಾದ ಎಚ್ ಜೆ ಪೋಲ್ ರವರು ಈಗ ಭಾರತದೇಶದಲ್ಲಿ ಪರಿವರ್ತನವಾಗುತ್ತಿರುವ ವಿಚಾರವನ್ನು ಕುರಿತು ಹೀಗೆ ಬರೆ ದಿರುತ್ತಾರೆ —ಕಲಿಯುಗದಲ್ಲಿ ನಾಗರಿಕರಾದ ಮನುಷ್ಯರು ಈ ವರೆಗೆ ನೋಡದಿರುವ ಮಹಾದ್ಭುತಕಾರ್ಯಗಳನ್ನು ನಮ್ಮ ಶಕದ ವರು ಇಂದು ನೋಡುತ್ತಿರುವರು ಅನೇಕ ಶತಮಾನಗಳಿಂದ ಹಿಂದುಗಳಿಗುಂಟಾಗಿದ್ದ ನಿರ್ಬಂಧಗಳು ಒಬ್ಬ ಮನುಷ್ಯನ ದೃಢ ಸಂಕಲ್ಪದಿಂದ ಒಂದು ರಾತ್ರಿಯಲ್ಲಿ ಕಣ್ಣುರೆಪ್ಪೆ ಮುಚ್ಚುವುದ ರೊಳಗಾಗಿ ಬಟ್ಟಬಯಲಾಗಿ ಹೋಯಿತು ದೊರತನದವರು ಮಾಡಲೆತ್ನಿಸಿ ವಿಫಲವಾದ ಕಾರ್ಯವನ್ನು ಓರ್ವ ಹಿಂದು ವ್ಯಕ್ತಿಯು ಸಾಧಿಸಿದನು ಪೂನಾದಲ್ಲಿ ಈಚೆಗೆ ಮಾಡಲ್ಪಟ್ಟ ಶಪಥದಿಂದ ಭಾರತದೇಶವೆಲ್ಲವೂ ಮೂಲಾಧಾರದಿಂದ ಕದಲಿಹೋಗಿದೆ, ದೇಶ ವು ವಿಭ್ರಾಂತವಾಗಿದೆ. ಆ ಭಯಂಕರ ಶಪಥದಿಂದಲೇ ಈ ಮಹಾ ದ್ಭುತವುಂಟಾಗಿದೆ ದೇವಾಲಯ ಬಾಗಿಲುಗಳು ಹಿಂದುಗಳೆಲ್ಲ ರಿಗೂ ಸಂಪೂರ್ಣವಾಗಿ ತೆರೆಯಲ್ಪಟ್ಟಿವೆ. ಜಾತಿಭೇದವು ತೊಲ ಗಿತು ಈವರೆಗೆ ದೇವಾಲಯಗಳೊಳಕ್ಕೆ ಹೋಗಿ ಪೂಜೆಮಾಡ ಬಾರದವರಾಗಿದ್ದವರೆಲ್ಲರೂ ಈಗ ಅಭ್ಯಂತರವಿಲ್ಲದೆಯೇ ಪೂಜೆ ಮಾಡುವಂತಾಗಿರುವುದು. ಪ್ರಪಂಚದಿದಿರಿಗೆ ಭಾರತೀಯರೆಲ್ಲರೂ ಒಂದು ಏಕಾಂಗವಾಗೇರ್ಪಟ್ಟು ನಿಲ್ಲುವುದಕ್ಕೆ ಮೊದಲು ಅಂದರೆ ಸ್ವಪರಿಪಾಲನಾಧಿಕಾರವು ವಹಿಸಲ್ಪಡುವುದಕ್ಕೆ ಮೊದಲು ಇದ ಕ್ಕಿಂತಲೂ ಪ್ರಬಲವಾದ ಮತ್ತೊಂದು ಮಹಾದ್ಭುತವು ನಡೆಯ ಬೇಕಾಗಿದೆ ಹಿಂದುಗಳಿಗೂ ಮಹಮ್ಮದೀಯರಿಗೂ ಬಹಳ ಕಾಲ ದಿಂದಿರುವ ವಿವಾದವು ಹೋಗಬೇಕು. ಇದು ನೆರವೇರಲು ಪುನಃ ಇಂತಹ ಮಹಾತ್ಯಾಗವು ನಡೆಯಬೇಕಾಗಿದೆಯೆ ? ಇದನ್ನು ಕೊನೆಮುಟ್ಟಿಸಲು ಮೌಲಾನಾ ಷೌಕತಾಲಿಯವರು ಪುನಃ ಉಪವಾಸ ವ್ರತವನ್ನು ಹಿಡಿಯಬೇಕೆ ? ಇದನ್ನೆರವೇರಿಸುವುದು ಅಸಾಧ್ಯ ಕಾರ್ಯವಲ್ಲ. ಇದಕ್ಕಾಗಿ ಕೂಡಲೆ ಒಂದು ಸಭೆಯು ನಡೆಯಬೇಕು ಆ ಸಭೆಯಲ್ಲಿ ಮಹಮ್ಮದೀಯ ನಾಯಕರುಗಳೂ ಹಿಂದು ನಾಯಕರುಗಳೂ ತಮ್ಮ ತೊಂದರೆಗಳನ್ನು ಸ್ಪಷ್ಟವಾಗಿ ತಿಳಿಸಬೇಕು ಹಿಂದು ಮಹಮ್ಮದೀಯ ಸಖ್ಯವೇರ್ಪಡುವವರೆಗೆ ಸಭೆಯನ್ನು ನಿಲ್ಲಿಸದಿರಲು ನಾಯಕರುಗಳು ಸಂಕಲ್ಪಿಸಬೇಕು. ಈ ಪ್ರಕಾರವಾಗಿ ಈ ಎರಡನೆಯ ಮಹಾದ್ಭುತವನ್ನು ನಾಯ ಕರುಗಳು ಉಂಟುಮಾಡಿದರೆ ದೇಶಕ್ಕೆ ಘನತಮವಾದ ಸೇವೆ ಮಾಡಿದವರಾಗುವರು ಅನೇಕ ಶತಮಾನ ವರ್ಷಗಳಿಂದ ಗೂಢ ವಾಗಿದ್ದ ಈ ಅಮೂಲ್ಯ ಪ್ರಕೃತಿ ರಹಸ್ಯಗಳು ಈ 20 ನೆಯ ಶತಮಾನದಲ್ಲಿ ಪರಿಶೋಧಕರಿಂದಲೇ ಹೊರಪಡಿಸಲ್ಪ ಟ್ಟಿತು. ವಿಮಾನ ಸಂಚಾರವೂ, ವಾಯು ವಾರ್ತೆಯೂ, ದೂರ ದಲ್ಲಿರುವವರನ್ನು ನೋಡುವುದು ಮೊದಲಾದವುಗಳೆಲ್ಲ ಸಾಧಿಸ ಲ್ಪಟ್ಟಿರುತ್ತವೆ ಹೀಗಿರುವಾಗ್ಗೆ ಒಂದು ದೇಶದಲ್ಲಿರುವ ಎರಡು ಜಾತಿಯವರು ಸಾಮರಸ್ಯ ಸೌಹಾರ್ದಗಳನ್ನು ಹೊಂದಿ ಬಾಳ ವಾಗಿ ಬಾಳುವಂತಾಗುವುದು ಯಾತಕ್ಕೆ ಅಸಂಭವವು ? ಓ ಭಾರತೀಯರುಗಳಿರಾ ! ಏಳಿರಿ, ಈ ಮಹಾ ಅವಕಾಶವನ್ನು ಕಳೆ ದುಕೊಳ್ಳಬೇಡಿ ಭಾರತೀಯರು ನಿದ್ರಾವಸ್ಥೆಯಲ್ಲಿಲ್ಲ, ಪೂರ್ವ ಕಾಲದಲ್ಲಿದ್ದ ನಿಮ್ಮ ಮಹೋನ್ನತ ಪದವಿಯನ್ನು ಸರಿಯಾಗಿ ಗುರ್ತಿಸಿರಿ ನಿಮ್ಮಲ್ಲಿ ಸಹಜವಾಗಿರುವ ಘನತೆಯನ್ನು ತಿಳಿದು ಕೊಳ್ಳುವವರಾಗಿ ಅನಂತರ ಮೊದಲಿಗಿಂತಲೂ ಹೆಚ್ಚಾದ ನಿಮ್ಮ ಖ್ಯಾತಿಯನ್ನು ಪಡೆಯಿರಿ ಅದಕ್ಕೆ ತಕ್ಕ ಸಮಯವು ಈಗ ಪ್ರಾಪ್ತವಾಗಿರುತ್ತದೆ ಇನು ಕೆಲಸದ ಸ್ಪರ್ಶ ಮಾತ್ರ ವಾಗಬೇಕು ಅದಕ್ಕೆ [redacted] ಯಿದರು,

DISTRICT BOARD, TUMKUR DISTRICT.

Notice No G 694/1930-31 dated 16th Sept 1932

It is hereby notified for the information of the public that the undermentioned Musafirkhanas which were under the management of this District Board are closed for the use of the travelling public in pursuance of Government Order No. L. 1314-5/L B. 9A-31-11 dated 18/22nd August 1932

1 Bellavi, Tumkur Taluk
2 Baichapur, Koratagere Taluk
3. Nagalmadike, Pavagada Taluk
4. Kibbanahalli, Tiptur Taluk.
5. Huliyurdurga, Kunigal Taluk
6 Yelladabagi, Gubbi Taluk
7 Hagalvadi, Gubbi Taluk
8 Ankasandra Gubbi Taluk
9 Nittur, Gubbi Taluk
10 Gubbi
11 Urdagere, Tumkur Taluk
12 Turuvekere Only one wing is available.

D S MALLAPPA,
President, District Board
Tumkur District

ನೋಟೀಸು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಬೋರ್ಡು

ತಾ|| 29-9-1932

ಈ ಕೆಳಗೆ ನಮೂದುಮಾಡಿರುವ ಕಾಂಟ್ರಾಕ್ಟುಗಳನ್ನು ನಡೆಸತಕ್ಕ ಬಗ್ಗೆ ಪ್ರೆಸಿಡೆಂಟರವರ ಆಫೀಸಿನಲ್ಲಿ 20-10-32 ನೇ ಮಧ್ಯಾಹ್ನ 2 ಗಂಟೆಯವರೆಗೂ ಸೀಲ್ಡು ಟೆಂಡರುಗಳನ್ನು ಕೊಡಬಹುದು

ಪ್ಲಾನ್ ವಗೈರೆ ಇತರ ವಿಷಯಗಳನ್ನು ಕೆಲಸ ನಡೆಯುತ್ತಾಯಿರುವ ಕಾಲಗಳಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

ಕಾಂಟ್ರಾಕ್ಟು ಹೆಸರು	ಡಿಪಾಜಿಟ್ ಮೊಬಲಗು
ಚಿತ್ರದುರ್ಗ ತಾಲ್ಲೂಕು	ರೂ
(1) ಬಾಳ್ಯ ಬಾವಿ ಸರಿಪಡಿಸುವುದು	200—0—0
ಚಳ್ಳಕೆರೆ ತಾಲ್ಲೂಕು	
(2) ಹೆಗ್ಗೆರೆ ಭಾವಿಯನ್ನು ಸರಿಪಡಿಸುವುದು	100—0—0
ಹಿರಿಯೂರು ತಾಲ್ಲೂಕು	
(3) ಕೋಡಿಹಳ್ಳಿಯಲ್ಲಿ ಗ್ರಾಮಸ್ಥರಿಗೆ ಹೊಸ ಭಾವಿ ಮಾಡುವುದು	100—0—0
ಹೊಳಲಕೆರೆ ತಾಲ್ಲೂಕು	
(4) ಹಿರಿಯೆಮ್ಮಿಗನೂರು ಭಾವಿ ಸರಿಪಡಿಸುವುದು	100—0—0
(5) ತಾಳ್ಯದ ಭಾವಿ ಸರಿಪಡಿಸುವುದು	100—0—0
(6) ದಾಸಿಕಟ್ಟೆ ಭಾವಿ ಸರಿಪಡಿಸುವುದು	100—0—0

(7) ಹರಿಹರದ ಸಬ್ ತಾಲ್ಲೂಕು ಕೊಂಡಜ್ಜಿ ಆದಿಕರ್ನಾಟಕರ ಭಾವಿ ಕಾಂಟ್ರಾಕ್ಟುಗಳನ್ನು 1933 ನೇ ಏಪ್ರಿಲ್ ಮೊದಲು ಆಖೈರುವಳಗಾಗಿ ಪೂರೈಸಬೇಕು

ಜಿ. ಚನ್ನಪ್ಪ,
ಪ್ರೆಸಿಡೆಂಟ್,
2 ಡಿ|| ಬೋ|| ಚಿತ್ರದುರ್ಗ

ಸರ್ಕಾರ ಮತ್ತು ಕಂಪೆನಿಗಳ
ಸಾಲ ಮತ್ತು ಷೇರ್ ಮಾರ್ಕೆಟ್ ದರಗಳು

ಇಂಡಿಯಾ ಸರ್ಕಾರದ 1910—13 ರ ಸಾಲವನ್ನು 17—8—32 ರಿಂದ 31—8—32 ರ ವರೆಗೆ ತೆಗೆದುಕೊಳ್ಳುತ್ತಿದ್ದಾರೆ 100 ರೂ ಗೆ 98 ರೂಪಾಯಿ ಕೊಡಬೇಕು.

ಸರ್ಕಾರದ ಸಾಲ ಪತ್ರಗಳ ಬೆಲೆ

ಇಂಡಿಯಾ ಸರ್ಕಾರದಲ್ಲಿ

(ಆದಾಯ ತೆರಿಗೆಯುಳ್ಳವು)

ಸೇಕಡ ಬಡ್ಡಿ 3½	(.... . ..)	ಪತ್ರದ ಬೆಲೆ	70—15—0
" " 4	(1931—36)		97—1—0
" " 4	(1934—37)		95—15—0
" " 4	(1960—70)		80—10—0
" " 4½	(1944)		99—10—0
" " 4½	(1955—60)		89—14—0
" " 5	(1929—47)		99—1—0
" " 5	(1935)		100—6—1
" " 5	(1939—44)		99—3—0
" " 6	(1933—36)		101—10—0
" " 6½	(1935)		104—1—1
" " 6½	(1938—40)		107—6—0
(ಆದಾಯ ತೆರಿಗೆ ಇಲ್ಲದ್ದು)			
" " 5	(1939)		107—0—0
5	(1945—55)		104—11—0
ಮೈಸೂರು ಸರ್ಕಾರದಲ್ಲಿ			
(ಆದಾಯ ತೆರಿಗೆಯುಳ್ಳದ್ದು)			
ಸೇಕಡ ಬಡ್ಡಿ 6	(1929—44)		95—[illegible]
(ಆದಾಯ ತೆರಿಗೆ ಇಲ್ಲದ್ದು)			
" " 6½	(1941—51)		110—0—0
" " 6¼	(1949)		107—4—0
" " 5½	(1938)		103—6—0
" 5	(1955)		101—8—0
ಶಿವಮೊಗ್ಗ ರೈಲ್ವೆ			85—8—0
ಚಿತ್ರದುರ್ಗ ರೈಲ್ವೆ, ...			84—8—0

ಕಂಪೆನಿಗಳ ಷೇರುಗಳ ಬೆಲೆ

ಬ್ಯಾಂಕುಗಳಲ್ಲಿ

ಇಂಪೀರಿಯಲ್ ಎಫ್ ಪಿ	500 ರೂ ಷೇರಿಗೆ	1203—0—0	ರೂ ಬೆಲೆ
" ಕಾಂಟ್	125	280—0—0	
ಇಂಡಿಯಾ	50 "	93—4—0	"
ಮೈಸೂರು	100 ,	193—0—0	,
ಬೆಂಗಳೂರು	10 ,	10—2—0	,
ಇಂಡಸ್ಟ್ರಿಯಲ್	25 ,	7—4—0	,
ದೇವಾಂಗ	10 "	6—0—0	,
ವೈಶ್ಯ	50 "	50—0—0	,
ಎಸ್ ಎಂ ಎಸ್ ಎ	10	10—0—0	
ಬಾದಾಮಿ		ನಾಮಿನಲ್	

ಇತರ ಬ್ಯಾಂಕುಗಳಲ್ಲಿ

ಬಿ ಸಿ ರೈಲ್ವೆ	25 ರೂ ಷೇರಿಗೆ	14—4—0	ರೂ ಬೆಲೆ
ಬೆಂಗಳೂರು ಪ್ರೆಸ್	100	78—0—0	
ಬಾರ್ಟನ್ ಸನ್ (ಆ)	10 ,	7—10—0	
(ಬಿ)	10	6—4—0	
ಸ್ಪೆನ್ಸರ್ಸ್		8—0—0	
ಟ್ರೂವರಿಸ್ (ಆ)	100	85—0—0	
(ಪ್ರಿ)	100	84—0—0	
ಟೈಲ್ ಅಂಡ್ ಪಾಟರೀಸ್		ನಾಮಿನಲ್	
ಪ್ರೀಮಿಯರ್		ಡಿಟೋ	
ಟಾಟಾ ಹೈಡ್ರೋ (ಆ)		132—4—0	"
(ಪ್ರಿ)		106—4—0	
ಟಾಟಾ ಐರನ್ (ಆ)		28—0—0	,
(ಡಿ)		216—0—0	,
(1)		121—0—0	
(2)		46—0—0	
ಶ್ರೀ ಕೃಷ್ಣ		ನಾಮಿನಲ್	

ಇನ್ಷೂರೆನ್ಸು ಕಂಪೆನಿಯಲ್ಲಿ

ಏಷಿಯಾಟಿಕ್	5 ರೂ ಷೇರಿಗೆ	5—2—0	ರೂ ಬೆಲೆ
ಓರಿಯಂಟಲ್	500	2000—0—0	"
ರಿಲೈಯನ್ಸ್	100 ,	93—0—0	

ಡಿಬೆಂಚರುಗಳು

ಕೋಲಾರ	100 ರೂ ಡಿಬೆಂಚರಿಗೆ	80—0—0	ರೂ ಬೆಲೆ
ಮೈಸೂರು	100 "	104—4—0	
ತುಮಕೂರು	100 ,	104—0—0	
ಹಾಸನ	100	94—0—0	

ಮಿಲ್ಲುಗಳಲ್ಲಿ

ಬೆಂಗಳೂರು	100 ರೂ ಗೆ	65—14—0	ರೂ ಬೆಲೆ
ಬಿನ್ನಿಂಗ್ಯಾಂ	100	114—2—0	
ಗೋಕಾಕ್	100 "	78—0—0	,
ಕೈಸರ್ ಹಿಂದ್	2½	1—5—0	
ಮಿನರ್ವಾ	100 ,	42—0—0	
ಮಹಾರಾಜ	100 ,	50—8—0	
ಮಹಾಲಕ್ಷ್ಮಿ		ನಾಮಿನಲ್	
ಕೃಷ್ಣರಾಜೇಂದ್ರ	25 "	5—0—0	

ಗಣಿಗಳಲ್ಲಿ

ಬಾಲಘಾಟ್ ಷಿಲಿಂಗ್	10 ಕ್ಕೆ	0—13—0	ಬೆಲೆ
ಚಾಂಪಿಯನ್	, 10	1—0—5	,
ಮೈಸೂರು	10 ,	0—14—0	"
ನಂದೀದ ಗರ್	, 10 "	1—6—5	"
ಉರಿಗಾಂ	10 ,	1—6—7	"
ಪೊನ್ಸ್ಟೀರ್	10	ನಾಮಿನಲ್	
ಶಿವಮೊಗ್ಗ		ನಾಮಿನಲ್	

ಎಂ. ನಂಜಪ್ಪ, ಜಹಗೀರ್‌ದಾರ್,
ಷೇರ್, ಸ್ಟಾಕ್ ಮತ್ತು ಜನರಲ್ ಬ್ರೋಕರ್,
131 ಕ್ಯಾವಲ್ರಿ ರೋಡು, ಬೆಂಗಳೂರು.

ಪತ್ರವ್ಯವಹಾರ.

(ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲ. ಲೇಖನಗಳು ಸಂಕ್ಷೇಪವಾಗಿರಬೇಕು —ಸಂಪಾದಕ)

ಕುಂಚಿಟಿಗರ ಹಾಸ್ಟೆಲ್, ಮೈಸೂರು

ರಾವ್ ಬಹದ್ದೂರ್ ಧರ್ಮಪ್ರಕಾಶ ಸಾಹುಕಾರ್, [illegible] ಬನುಮಯ್ಯನವರು [illegible] ಮೈಸೂರಿನಲ್ಲಿ ಹಾಸ್ಟೆಲ್ [illegible] ತಾ|| 14 ರಲ್ಲಿ [illegible] ಕ್ರಿಶ್ಚಿಯನ್ [illegible] ಈ ಪ್ರಕರಣವನ್ನು [illegible] ಧರ್ಮಶಾಸ್ತ್ರಗಳಲ್ಲಿ [illegible] ಪ್ರೀತಿಯೂ ಇರುವುದನ್ನು ನೋಡಿದರೆ ಮೇಲ್ಕಂಡ ಧರ್ಮಪ್ರಭುಗಳಾದ ಲೇಟ್ ಬನುಮಯ್ಯನವರ ಕೀರ್ತಿಯು ಆಚಂದ್ರಾರ್ಕವಾಗಿರುವುದು ವ್ಯಾಪಕವಾಗುತ್ತದೆಂಬುವಕ್ಕೆ ಸಂದೇಹವಿಲ್ಲ. ಇವರೆ ಇಷ್ಟು ಸಣ್ಣ ವಯಸ್ಸಿನಲ್ಲಿ ಇವರಿಗಿಷ್ಟರಮಟ್ಟಿಗೆ ಧರ್ಮ ಕೆಲಸಗಳಲ್ಲಿ ಮನಸ್ಸುಂಟಾಗಿರುವುದನ್ನು ನೋಡಿದರೆ ಕಲಿಯುಗದ (ದಾನಶೂರ ಕರ್ಣ) ನೆಂಬ ಬಿರುದನ್ನೊಪ್ಪಿ ತಮ್ಮ ತಂದೆಯವರ ಉದರದಲ್ಲಿ ಜನಿಸಿದುದಕ್ಕೆ ಸಾರ್ಥಕವಾಯಿತೆಂದೇ ಭಾವಿಸಬೇಕು. ವರ್ತಕಶ್ರೇಷ್ಠರುಗಳಾದ ಇವರಿಗೂ ಇವರ ಸಹೋದರರಿಗೂ ಇವರ ಹಿರಿಯರಿಗೆ ಲಭಿಸಿರುವ ಆಧೂಕಪೂರ್ವವಾದ ಶಾಶ್ವತ ಕೀರ್ತಿಯನ್ನು ಸರ್ವಶಕ್ತನಾದ ಪರಮೇಶ್ವರನು [illegible] ಪ್ರಾರ್ಥನೆ ಎಂ ಸಿ ನರಸಿಂಹಯ್ಯ

ಕಲ್ಕುಣಿಯಲ್ಲಿ ಪಾರ್ಟಿ [illegible]

ಮಳವಳ್ಳಿ ತಾಲ್ಲೂಕಿಗೆ ಸೇರಿದ ಕಲ್ಕುಣಿ ಗ್ರಾಮದಲ್ಲಿ [illegible] ನರ ಜನಸಂಖ್ಯೆಯೇ ಹೆಚ್ಚಾಗಿದ್ದು ಸುಮಾರು 200 ವರೆಗೆ ಅವರುಗಳ ಮನೆಗಳಿರುವವು ಇವರುಗಳಲ್ಲಿ 2 ಪಾರ್ಟಿಗಳೇರ್ಪಟ್ಟು 1 ಪಾರ್ಟಿಯಲ್ಲಿ 15, 20 ಮನೆಗಳು ಮಾತ್ರ ಸೇರಿರುತ್ತವೆ ಇಲ್ಲಿಯ [illegible] ಚಿಕ್ಕ ಪಾರ್ಟಿಗೆ ಸೇರಿದವರಾಗಿರುತ್ತಾರೆ ಇವರು ಮಸೀದಿಯಲ್ಲಿ ನಮಾಜು ವಗೈರೆ ನಡಿಸಲು ದೊಡ್ಡ ಪಾರ್ಟಿಯವರೊಪ್ಪದೆ ತಮ್ಮ ಕಡೆಯವನೊಬ್ಬನನ್ನು ನೇಮಿಸಿಕೊಂಡು ನಮಾಜನ್ನು ನಡಿಸಲು ಪ್ರಯತ್ನಪಟ್ಟುದರಮೇಲೆ ಸಣ್ಣ ಪಾರ್ಟಿಯವರು ಮಂಡ್ಯದ ಮುನ್ಸೀಫ್ ಕೋರ್ಟಿನಲ್ಲಿ ದಾವಾ ಮಾಡಿ ಇಂಜಕ್ಷನ್ ಆರ್ಡರನ್ನು ಪಡೆದಿದ್ದರು. ಅದರಮೇಲೆ ಮೈಸೂರು ಸಬ್ ಜಡ್ಜ್ ಕೋರ್ಟಿಗೆ ಅಪೀಲಾಗಿದ್ದು ಮೊದಲಿನ ಡಿಕ್ರಿಯಿಂದಲೇ ನಮಾಜು ಕಾರ್ಯ ನಡೆಸಬೇಕೆಂದು ತೀರ್ಮಾನವಾಯಿತು ಆದರೂ ಕಲಹ ತಪ್ಪದೆ ಇನ್ನೂ ಪ್ರಬಲವಾಗುತ್ತಿದೆ ಮೋರಡಾರ ಚಿಕ್ಕಪಾರ್ಟಿಗೆ ಸೇರಿದ [illegible] ಸಾಬರೆಂಬ ವೃದ್ಧರು ಸತ್ತುಹೋದರು ಅವರ ದೇಹವನ್ನು ಅವರ ಕಡೆಯವರು ಕಬರಸ್ಥಾನಕ್ಕೆ ತೆಗೆದುಕೊಂಡುಹೋಗಲೆತ್ನಿಸಿದಾಗ ದೊಡ್ಡ ಪಾರ್ಟಿಯವರು ಕಬರ್‌ಸ್ಥಾನಕ್ಕೆ ಹೆಣವನ್ನು ತರಕೂಡದೆಂದು ಅಡ್ಡಿಪಡಿಸಿದರು ಅದರಮೇಲೆ ಅವರ ಕಡೆಯವರು ಮಳವಳ್ಳಿಗೆ ಹೋಗಿ ಅಮಲ್ದಾರರಿಗೂ ಪೋಲೀಸು ಇನ್ಸ್‌ಪೆಕ್ಟರಿಗೂ ವಿದ್ಯಮಾನವನ್ನು ತಿಳಿಸಿ, ನೀವುಗಳು ಬಂದು ದಫನ್ ಮಾಡಿಸಲೇಬೇಕಾಗಿಸಬೇಕೆಂದು ಬೇಡಿಕೊಂಡು ಮೋಟಾರು ಬಂಡಿಯಲ್ಲಿ ಕಲ್ಕುಣಿಗೆ ಕರೆದುಕೊಂಡುಬಂದರು ಅಮಲ್ದಾರರೂ ಇನ್ಸ್‌ಪೆಕ್ಟರೂ ದೊಡ್ಡ ಪಾರ್ಟಿಯವರಲ್ಲಿಗೆ ಹೋಗಿ ಹೆಣವನ್ನು ದಫನ್ ಮಾಡಲು ತಡೆಯುವದೇಕೆಂದು ಕೇಳಲಾಗಿ ನಮ್ಮ ಇದಿರು ಪಾರ್ಟಿಯವರು ಕಬರಸ್ಥಾನಕ್ಕೆ ಬರಕೂಡದು ಹೆಣವನ್ನು ನಾವೇ ತೆಗೆದುಕೊಂಡು ಬಂದು ದಫನ್ ಮಾಡುತ್ತೇವೆಂದು ಹೇಳಿದರು ಅದಕ್ಕೆ ಹೆಣದಕಡೆಯವರೂ ಬಂಧುಗಳೂ ಒಪ್ಪಲಿಲ್ಲವಾಗಿ ಅಮಲ್ದಾರರೂ ಇನ್ಸ್‌ಪೆಕ್ಟರೂ ಏನನ್ನೂ ಮಾಡದೆ ಮಳವಳ್ಳಿಗೆ ಹೋರಟುಹೋದಲಾಗಿ ಹೆಣದ ಕಡೆಯವರು ಗಗೇರಿಸ್ಪರಿಗೆ ವರ್ತಮಾನಕೊಟ್ಟು 60 70 ಜನರನ್ನು ಬರಮಾಡಿಕೊಂಡರು ಅವರು ಬಂದು ದೊಡ್ಡಪಾರ್ಟಿಯವರಿಗೆ ಸಮಾಧಾನ ಹೇಳಿದಾಗ್ಯೂ ಕೇಳದೆ ಎದುರು ಕಕ್ಷಿಯವರು ಯಾರೂ ಬಾರದೆ ನೀವುಗಳೇ ದಫನ್ ಮಾಡಿ [illegible] ಎಂದು ಹೇಳಿ ಮಾರಾಮಾರಿಗೆ ಸಿದ್ಧವಾಗಿದ್ದುದನ್ನು ನೋಡಿ ಗಗೇರಿಸ್ಪರಿಯವರು ತಾವುಗಳೇ ಹೆಣವನ್ನು ತಂದು ದಫನ್ ಮಾಡಿದರು ಈಗ ಕೆಲವು ದಿವಸಗಳಿಂದ ಚಿಕ್ಕಪಾರ್ಟಿಯವರೇನಾದರೂ ಕಬರ್‌ಸ್ಥಾನಕ್ಕೆ ಬಂದಾರೆಂದು ದೊಡ್ಡಪಾರ್ಟಿಯವರು ಸಾಯುಧರಾಗಿ ದೀಪಗಳನ್ನು [illegible] ಕಾಯುತ್ತಿದ್ದಾರೆ ಅವರುಗಳ್ಯಾರೂ ಅಲ್ಲಿರಲಿಲ್ಲವಾಗಿ [illegible] ಇದರಮೇಲೆ ಉಭಯ ಪಾರ್ಟಿಗಳ ದ್ವೇಷ ಹೆಚ್ಚು ಮಸಿಯುತ್ತಿದೆ ಚಿಕ್ಕಪಾರ್ಟಿಯವರು ಪ್ರಾಣಭೀತಿಪಟ್ಟು ಕೊಂಡು ತಮ್ಮ ರಕ್ಷಣೆಗೆ ತಕ್ಕ ಬಂದೋಬಸ್ತು ಮಾಡಬೇಕೆಂದು ಮೈಸೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಟೆಲಿಗ್ರಾಮನ್ನು ಕೊಟ್ಟಿದ್ದಾರೆ ಮುದ್ದು [illegible] ಹೇಳಿಕೊಂಡುದರ ಮೇಲೆ ಮಳವಳ್ಳಿ ತಾ|| ಅಮಲ್ದಾರರಿಗೂ ಪೋಲೀಸ್ ಇನ್ಸ್‌ಪೆಕ್ಟರಿಗೂ ತಕ್ಕ ಬಂದೋಬಸ್ತು ಮಾಡುವಂತೆ ಅಪ್ಪಣೆಮಾಡಿದವುದಾಗಿ ಕೇಳುತ್ತೇನೆ ತಾಲ್ಲೂಕು ಅಧಿಕಾರಿಗಳು ಆ ದಿವಸ ನಿಂತು ದಫನ್ ಕಾರ್ಯ ಮಾಡಿಸಿದ್ದರೆ ಇಷ್ಟೊಂದು ಮನಸ್ತಾಪ ಬೆಳೆದು ಪ್ರಾಣಭೀತಿಯುಂಟಾಗಲು ಕಾರಣವಾಗುತ್ತಿರಲಿಲ್ಲ ಡಿ|| ಮ್ಯಾಜಿಸ್ಟ್ರೇಟರ ಅಪ್ಪಣೆಯಾಗಿರುವದರಮೇಲಾದರೂ ಅಧಿಕಾರಿಗಳು ಮುತವರ್ಜಿವಹಿಸಿ ತಕ್ಕ ಬಂದೋಬಸ್ತು ಮಾಡಿ ದುರ್ಬಲಪಕ್ಷದವರಿಗುಂಟಾಗಿರುವ ಪ್ರಾಣಭೀತಿಯನ್ನು ಹೋಗಲಾಡಿಸುವರೆಂದು ನಿರೀಕ್ಷಿಸಿದೆ ಸ್ಥಳವಾಸಿ

ಪ್ರೈಮರಿಬಾಯಿಸ್‌ಸ್ಕೂಲ್ ವಾರ್ಷಿಕೋತ್ಸವ

ಬಾನುವಾಸಜನಗರದ ತಾ|| ಸರ್ವವಿನ್ಯ ತಮ್ಮಡಹಳ್ಳಿ ಪ್ರೈಮರಿ ಬಾಯಿಸ್ ಸ್ಕೂಲು 6 ನೇ ವಾರ್ಷಿಕೋತ್ಸವವು ಹರವೆ ಹೋ|| ರೇಂಜು ಇನ್ಸ್‌ಪೆಕ್ಟರ್ ಮ|| ಜಿ ಅಶ್ವತ್ಥನಾರಾಯಣನವರ ಅಧ್ಯಕ್ಷತೆಯಲ್ಲಿ ಕಳೆದ ತಾ|| 20 ರ ಮಧ್ಯಾಹ್ನ 3 ಘಂಟೆಗೆ ಸ್ಕೂಲ್ ಕಟ್ಟಡದೊಳಗೆ ನೆರವೇರಿಸಲ್ಪಟ್ಟಿತು. ಮ|| ಗುಂಡ ಟಿ ಸೀತಾರಾಮಯ್ಯನವರು, ಶ್ರೀನಿವಾಸಮೂರ್ತಿಯವರು ಉಡಿಗಾಲದ ಭಕ್ತದ ಮಠದ ವೇ|| ಭಕ್ತದಸ್ವಾಮಿಗಳವರು ತಾಲ್ಲೂಕು ಕೆಲವು ಸರ್ಕಾರಿ ಉದ್ಯೋಗಸ್ಥರು ಇತರ ಅನೇಕ ದೊಡ್ಡ ಮನುಷ್ಯರು ಸಹ ದಯಮಾಡಿಸಿದ್ದರು ದೇವರ ಪ್ರಾರ್ಥನೆಯಾದನಂತರ ಸದರಿ ಸ್ಕೂಲ್ ಹೆಡ್ಮಾಸ್ಟರ್ ಮ|| ಚನ್ನಪ್ಪನವರು ಸ್ಕೂಲ್ ರಿಪೋರ್ಟನ್ನು ಓದಿದರು. ಆ|| ಮ|| ಎನ್. ಸಿದ್ದಯ್ಯನವರು, ಗೋವಿಂದ್ವಾಡಿ ಸ್ಕೂಲ್ ಮಾಸ್ಟರ್ ಕೆಚ್.ಬಿ ಸಿದ್ದಪ್ಪನವರು, ಹೊಮ್ಮದ ಸ್ಕೂಲ್ ಮಾಸ್ಟರ್ ಎಸ್. ಹೊನ್ನಪ್ಪನವರು, ಪಾರ್ಲಿಮೆಂಟರಿ ಮೆಂಬರ್ ಅಜ್ಜಾನಾಮಯ್ಯನವರು, ಪಟೇಲ್ ಚನ್ನಪ್ಪನವರ ಮಕ್ಕಳು ಗುರುನಂಜಪ್ಪನವರುಗಳ ಉಪನ್ಯಾಸವಾದನಂತರ ಮ|| ಟಿ ಸೀತಾರಾಮಯ್ಯನವರು, ವಿದ್ಯಾಭ್ಯಾಸದ ವಿಚಾರದಲ್ಲಿ ಗ್ರಾಮಸ್ಥರಿಗೆ ಅಭಿರುಚಿಹುಟ್ಟುವಂತೆ ಬಹಳ ಸ್ವಾರಸ್ಯವಾಗಿ ಭಾಷಣ ಮಾಡಿದರು, ಅಧ್ಯಕ್ಷರಾದ ಮ|| ಜಿ. ಅಶ್ವತ್ಥನಾರಾಯಣನವರು ಗ್ರಾಮಾಭಿವೃದ್ಧಿ ಮತ್ತು ವಿದ್ಯಾಭಿವೃದ್ಧಿ ವಿಚಾರವಾಗಿಯೂ ಬಡವಿದ್ಯಾರ್ಥಿಗಳಿಗೆ

[illegible] ಧನಸಹಾಯಮಾಡುವ ವಿಚಾರವಾಗಿಯೂ [illegible] ಮಾಡಿದರು. ಮ|| [illegible] ಸೋಶಲ್ [illegible] ಮ|| [illegible] ಸದರಿ [illegible] ಸಂಬಂಧ [illegible] ಮಹಾರಾಜ [illegible] ಸಹಾಯ [illegible] ಪ್ರಶಂಸನೀಯ [illegible] ಕಿರ್ತಿಯನ್ನು [illegible] ಸಂಘವು [illegible] ಫಲಿಸಿದ [illegible]

ಜಹಾಂಗೀರ್

ಮಾಧ್ಯಮಿಕ ಶಾಲೆಯ ಚರ್ಚಾಸಂಘ.

ಕಳೆದ ಸೆಪ್ಟಂಬರ್ ತಾ|| 24 ನೇ ಶನಿವಾರ ಮಧ್ಯಾಹ್ನ 3 ಘಂಟೆಗೆ [illegible] ತಾ|| ಬುಕ್ಕಪಟ್ಟಣದಲ್ಲಿ ಮೊಟ್ಟಮೊದಲ ಸಂಘದ ತೃತೀಯ ಸಮ್ಮೇಳನ ನಡೆಯಿತು. ಸೆಕ್ರೆಟರಿಯವರಾದ ಮ|| ಟಿ ಬೌಡಯ್ಯನವರು ಪುರಪ್ರಮುಖರಿಗೂ ಆಹ್ವಾನವನ್ನಿತ್ತು ಕರೆಯಿಸಿಕೊಂಡಿದ್ದರು. ಸೆಕ್ರೆಟರಿಯವರ ಸೂಚನೆಯಂತೆ ಸಮಾನ ಅನುಮೋದನೆಯಿಂದ ಗ್ರಾಮ ಪಂಚಾಯತಿ [illegible]ರಾದ, ತಾ|| ಮ|| ವೆಂಕಟರಾಮಯ್ಯನವರು ಅಧ್ಯಕ್ಷರಾಗಿ [illegible] ಬಾಲಕಿಯರು ಬಹು ಇಂಪಾದ ಧ್ವನಿಯಿಂದ ದೇವತಾ ಪ್ರಾರ್ಥನೆ ಮಾಡಿದರು. ಮಾಧ್ಯಮಿಕ ಶಾಲೆಯ ವಿದ್ಯಾರ್ಥಿನಿ [illegible] ಹುಡುಗಿಯು "World Wonders" ಎಂಬ ಇಂಗ್ಲಿಷ್ [illegible] ಹಾಡನ್ನು ಸಮಯೋಚಿತವಾದ ಹಾವಭಾವ [illegible] ಬಹಳ ಚೆನ್ನಾಗಿ ಹಾಡಿದಳು. ಪ್ರೇಕ್ಷಕರು ಕರತಾಡನಗಳ ಮೂಲಕ ತಮ್ಮ ಆನಂದವನ್ನು ವ್ಯಕ್ತಪಡಿಸಿದರು. [illegible] ವಿದ್ಯಾರ್ಥಿಯು ಓದಿ ಹೇಳಿದ ಪ್ರಬಂಧವು ತುಂಬಾ ಆಕರ್ಷಣೀಯವಾಗಿತ್ತು. ಈ ದಿನದ ಚರ್ಚಾ ವಿಷಯವು ಬಹು ಮುಖ್ಯವಾದ ದೆಂದೆನಿಸಿ ಇರಬಹುದು. ಪ್ರೇಕ್ಷಕರು ಬಹುಮಂದಿ ನೆರೆದಿದ್ದರು. "ಆಧುನಿಕ ವಿದ್ಯಾಭ್ಯಾಸ ಕ್ರಮವೇ ಅತ್ಯುತ್ತಮವಾದುದು" ಎಂಬುದೇ ಆ ಚರ್ಚಾ ವಿಷಯ. ಮಂತ್ರಿ ಮಂಡಲದ ಇರ್ವರಲ್ಲಿ ಬಾಲಕರ ಪರ ಪ್ರಧಾನ ಪಾತ್ರವಹಿಸಿದ್ದ ಮ|| ಎಚ್. ಸಂಜುಂಡಯ್ಯನವರು ಮತ್ತು ಎಚ್. [illegible]ನವರು ಬಹು ಸ್ವಾರಸ್ಯವಾಗಿ ವಾದ ವಿವಾದ ನಡೆಸಿದರು. ಅವರು [illegible] ಸಹಜವಾದ ಮಾರ್ಗದರ್ಶಕರೇ ಇದ್ದಿರಬಹುದು. ಉಭಯ ಪಕ್ಷದ [illegible]ರೂ ಬಹು ಧೈರ್ಯೋತ್ಸಾಹಗಳಿಂದ ವಾದಮಾಡಿದರು. ಪ್ರೇಕ್ಷಕರ ಪರವಾಗಿ ಮ|| ವ|| ರವರು ಪೂರ್ವಕಾಲದ ವಿದ್ಯಾಭ್ಯಾಸ ಕ್ರಮವೇ ಉತ್ತಮವಾಗಿತ್ತೆಂದೂ, ಸೆಕ್ರೆಟರಿಯವರು ಈಗಿನ ಕ್ರಮವೇ ಅತ್ಯುತ್ತಮವೆಂದೂ [illegible] ತಮ್ಮ ಅಭಿಪ್ರಾಯಗಳನ್ನು ಸಮರ್ಥಿಸಿದರು. ಅನಂತರ ಅಧ್ಯಕ್ಷರು [illegible] ಮಧ್ಯೆ ಎದ್ದು ನಿಂತು ತಮ್ಮ ಸ್ವಾಭಾವಿಕವಾದ ಗಂಭೀರ [illegible]ಯಿಂದ ಮಾತನಾಡಿದರು. ಕೊನೆಗೆ "ಆಧುನಿಕ ಕಾಲದ ವಿದ್ಯಾಭ್ಯಾಸ ಕ್ರಮವೇ ಉತ್ತಮವಾದುದು" ಎಂಬುದಕ್ಕೆ ಸರ್ವಾನುಮತಿ ದೊರೆಯಿತು. ಸೆಕ್ರೆಟರಿಯವರು ಊರಿನ ಪ್ರಮುಖರ ಸಹಾಯ, ಸಹಾನುಭೂತಿಗಳ [illegible]ವಾಗಿ ಮಾತನಾಡುತ್ತ, ಆಹ್ವಾನವನ್ನು ಸ್ವೀಕರಿಸಿ ದಯಮಾಡಿಸಿದ್ದ [illegible]ಯಿಗೆ ಸಂಘದ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು. [illegible] ಮಹಾರಾಜರವರ ಶ್ರೇಯಃ ಪ್ರಾರ್ಥನೆಯೊಂದಿಗೆ ಈ ದಿನದ [illegible] ಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ

ವಿನೋದವೂ ದಾನಧರ್ಮದ ಶೀಲವಾಗಿ ಪರಿಣಮಿಸಿತು.

ಮದ್ದೂರು ತಾ|| ಸೋಮನಹಳ್ಳಿ ಬಳಿ ಮ|| ಎಸ್ ಸಿ ಮಲ್ಲಯ್ಯ [illegible] "ಪರೋಪಕಾರಾರ್ಥಮಿದಂ ಶರೀರಂ" ಎಂಬ ಆರ್ಯೋಕ್ತಿಯಂತೆ [illegible] ಒಕ್ಕಲಿಗರ ಹಾಸ್ಟೆಲ್ ಸ್ಥಾಪನೆ ಮೊದಲಾದ ಅನೇಕ ಧರ್ಮ ಕಾರ್ಯಗಳಲ್ಲಿ ನಿರತರಾಗಿ, ಸದಾ ಜನಾಂಗದ ಮೇಲ್ಮೆಯನ್ನು ಬಯಸುತ್ತಾ [illegible] ಮಾಡುತ್ತಿರುವುದು ಸುತ್ತಮುತ್ತಲಿನ ಜನಗಳಲ್ಲಿ ಒಳ್ಳೆಯ ಪರಿಣಾಮ [illegible]ಟುಮಾಡುತ್ತಿರುವುದು. ಜನರು ಧರ್ಮಕಾರ್ಯಗಳಿಗಾಗಿ ನಾ [illegible] ಮುಂದು, ಎಂದು ನುಗ್ಗುತ್ತಿರುವುದು ಒಂದು ಶುಭ ಸೂಚನೆ [illegible] ಕಳೆದ ತಾ|| 6 ರ ಸಾಯಂಕಾಲ ಸುಮಾರು 4 ಗಂಟೆಯ ಹೊತ್ತಿನಲ್ಲಿ ಮ|| ಎಸ್ ಸಿ ಮಲ್ಲಯ್ಯನವರ ಬಾಸಾ [illegible] ಲಿಂಗೇಗೌಡರವರು ತಮ್ಮ ಸ್ನೇಹಿತರೊಂದಿಗೆ ಕುಳಿತು ಧರ್ಮಸಂಬಂಧ [illegible] ವಾಗ್ವಾದ, ಅಲ್ಲಿಯೇ ಕುಳಿತಿದ್ದ ನಾನು ವಿನೋದಕ್ಕಾಗಿ [illegible] ಕೈಯಲ್ಲಿರುವ ಬಂಗಾರದ ಸರಿಗೆಯನ್ನು ವೃಥಾ ಧರಿಸಿರುವುದಕ್ಕಿಂತಾಗಿ ಅದು ಒಕ್ಕಲಿಗರ ಹಾಸ್ಟೆಲಿನ ಧರ್ಮಕಾರ್ಯಗಳನ್ನವಲಂಬಿಸ [illegible]" ಎಂದು ಪ್ರಶ್ನೆಮಾಡಿದ ಕೂಡಲೆ ಸದರಿ ಲಿಂಗೇಗೌಡರವರು [illegible]ವನ್ನವಲಂಬಿಸದ ಈ ಒಡವೆಯಿಂದ ನನಗಾವ ಪ್ರಯೋಜನ" [illegible] ಹೇಳಿ ತಮ್ಮ ಮೈಮೇಲೆ ಧರಿಸಿದ್ದ ಸುಮಾರು 120 ರೂ ಬೆಲೆ [illegible] 1 ಸರಿಗೆ ಮತ್ತು 1 ಉಂಗುರ ಇವೆರಡನ್ನ ತೆಗೆದುಕೊಟ್ಟ [illegible] ತ್ಯಾಗಬುದ್ಧಿಯನ್ನು ನೋಡಿ, ಅಲ್ಲಿ ಕುಳಿತಿದ್ದ ಮ|| [illegible] [illegible]ಗೌಡರು ತಮ್ಮ ಮೈಮೇಲಿದ್ದ ಸುಮಾರು 18 ರೂ ಬೆಲೆ ಬಾಳತಕ್ಕ [illegible] ಮತ್ತು 1 ಜತೆ ಬೆಳ್ಳಿಯ ಬಳೆಗಳನ್ನೂ, ಮರಿಗೌಡರವರು ತಮ್ಮ ಮೈಮೇಲೆ ಧರಿಸಿದ್ದ ಸುಮಾರು 13 ರೂ ಬೆಲೆ ಬಾಳ [illegible] 1 ಜತೆ ಬಾವಲಿ ಮತ್ತು 1 ಜತೆ ಬೆಳ್ಳಿಯ ಬಳೆಗಳನ್ನೂ, ಅಬ್ಬೂರ [illegible]ಗೌಡರವರು ತಮ್ಮ ಮೈಮೇಲೆ ಧರಿಸಿದ್ದ ಸುಮಾರು 16 ರೂ ಬೆಲೆ [illegible] 1 ಮುರು, 1 ಜತೆ ಬಾವಲಿ ಮತ್ತು 1 ಜತೆ ಬೆಳ್ಳಿಯ ಬಳೆಗಳನ್ನೂ, [illegible]ಗೌಡರವರು ತಮ್ಮ ಕೈಯಲ್ಲಿ ಧರಿಸಿದ್ದ ಸುಮಾರು 6 ರೂ ಬೆಲೆಯ [illegible] ಬೆಳ್ಳಿಯ ಬಳೆಗಳನ್ನೂ, ಅಬ್ಬೂರು ಮಲ್ಲೇಗೌಡರ ಕೆಂಪೇಗೌಡರು ಕೈಯಲ್ಲಿದ್ದ ಸುಮಾರು 3 ರೂ [illegible] ಬೆಳ್ಳಿ ಬಳೆಯನ್ನೂ, ಎಸ್ ಸಿ [illegible]ಯ್ಯನವರು ಸುಮಾರು 13 ರೂ ಬೆಲೆಯ 1 ಉಂಗುರವನ್ನೂ, ಮೋಟ್ಟೇ [illegible]ಗೌಡರು ಸುಮಾರು 15 ರೂ ಬೆಲೆಯ 1 ಉಂಗುರವನ್ನೂ ತಂತಮ್ಮ

ಪ್ರತ್ಯೇಕ ಬಹಳ ಸಂಶೋಧನೆಯಿಂದ ಧರ್ಮಕ್ಕಾಗಿ ತೆಗೆದು ಕೊಟ್ಟಿರುತ್ತಾರೆ. "[illegible] ಕಾರ್ಯಕ್ಕಾಗಿ [illegible] ಘಂಟೆಯೊಳಗಾಗಿ [illegible] ಹಣ [illegible] ಮೇಲ್ಪಂಕ್ತಿಯನ್ನು [illegible] ಮುಖಂಡರು [illegible] ಉತ್ತಮ [illegible] ಹಿಡಿದು [illegible] ಗ್ರಾಮಗಳ [illegible] ವರ್ಗ [illegible] ಸದ್ಯಕ್ಕೆ [illegible] ಧರ್ಮ ಕಾರ್ಯಗಳಿಗೆಲ್ಲಾ [illegible] ಪರೋಪಕಾರ [illegible] ಕೊಟ್ಟು ಕಾಪಾಡಲಿ [illegible]

ಕೆ ಸಿ ಸಂಜುಂಡಯ್ಯ

ನೂತನ ಮಸೀದಿಯಾರಂಭೋತ್ಸವ

ಕಳೆದ ತಾ|| 26 ನೇ ಸೋಮವಾರ ಎಡತೊರೆ ಹೊಸ ಟವನ್ನಿನಲ್ಲಿ ಹೊಸದಾಗಿ ಕಟ್ಟಲ್ಪಟ್ಟಿರುವ ಮಸೀದಿಯ ಆರಂಭಮಹೋತ್ಸವವು ಈ ನೂತನ ಪಟ್ಟಣದ ಚರಿತ್ರಾಂಶದಲ್ಲಿ ಒಂದು ಬಹು ಮುಖ್ಯವಾದ ಪ್ರಕರಣವೆಂದು ಹೇಳಲು ಬಹಳ ಸಂತೋಷವಾಗುತ್ತದೆ. ಈ ಮಸೀದಿಯು ಮೈಸೂರಿನಲ್ಲಿ ನರಸಿಂಹರಾಜ ಬೂಲೆವಾರ್ಡ್ ಬಳಿ ಇರುವ ಜುಮ್ಮಾ ಮಸೀದಿಯ ಮಾದರಿ ಬಹಳ ಅಂದವಾಗಿ ಕಟ್ಟಲ್ಪಟ್ಟಿದೆ. ಇದರ ಆರಂಭಮಹೋತ್ಸವಕ್ಕಾಗಿ ಈ ಎಡತೊರೆ ಹೊಸ ಟವನ್ ಫಾರ್ಮೇಷನ್ ಕಮಿಟಿಯವರ ಬಿನ್ನಹದ ಪ್ರಕಾರ ಹಜರತ್ ಮೈಸೂರು ಡೆಪ್ಯುಟೀಕಮಿಷನರ್ ಮ|| ಅಬ್ದುಲ್‌ವಾಜಿದ್, ಬಿ ಎ. ರವರು ದಯಮಾಡಿಸಿದ್ದರು. ಆ ದಿವಸ ಪ್ರಾತಃಕಾಲದಿಂದ ಮಧ್ಯಾಹ್ನ 4 ಘಂಟೆಯವರೆಗೂ ಸಾವಿರಾರು ಮುಸಲ್ಮಾನರಿಗೆ ಸಂತೋಷವಾಗಿ ಭೋಜನಾದಿಗಳ ನೆರವೇರಿತು. 6 ಘಂಟೆ ಸಮಯಕ್ಕೆ ಎಲ್ಲರೂ ಮಸೀದಿಗೆ ಬಂದರು. ಹಾಜಿಯವರು ತಳಿರುತೋರಣಗಳಿಂದ ಶೃಂಗರಿಸಲ್ಪಟ್ಟಿದ್ದ ನೂತನ ಮಸೀದಿಯ ಮುಂಭಾಗದಲ್ಲಿ ನೆರೆದಿದ್ದಂತೆ ಮುಸಲ್ಮಾನರ ಮಧ್ಯೆ ಕೊರಾನವನ್ನು ಓದಿದಮೇಲೆ ಟವನ್ ಫಾರ್ಮೇಷನ್ ಕಮಿಟಿಯ ಪರವಾಗಿ ಮ|| ಕೆ. ಬಸವರಾಜ ಅರಸಿನವರು ಈ ಮಸೀದಿಯ ಕಟ್ಟಡದ ವಿಷಯವಾಗಿ ಇಂಜನೀಯರ್ ಇಲಾಖೆಯವರು ತೋರಿಸಿದ ಪ್ರೋತ್ಸಾಹ ವಿಚಾರವಾಗಿಯೂ ಅನೇಕ ರಾಜಕಾರ್ಯಗಳ ಮಧ್ಯೆಯೂ ಹಜರತ್ ಡೆಪ್ಯುಟೀಕಮಿಷನರ್‌ರವರು ಇದಕ್ಕಾಗಿ ಅಭಿಮಾನವಿಟ್ಟು ದಯಮಾಡಿಸಿದಕ್ಕಾಗಿಯೂ ಕೃತಜ್ಞತೆಯನ್ನು ತೋರಿಸುವ ಒಂದು ಪತ್ರಿಕೆಯನ್ನು ಓದಿದರು. ಮ|| ಭಾಷ್ಯಾಚಾರ್ಯರೆಂಬ ಬ್ರಾಹ್ಮಣರು ಹಿಂದು ಮುಸಲ್ಮಾನರ ಸಹೋದರಭಾವವನ್ನು ಕುರಿತು ಬಹಳ ಸ್ವಾರಸ್ಯವಾಗಿ ಆಂಗ್ಲೇಯ ಭಾಷೆಯಲ್ಲಿ ಉಪನ್ಯಾಸಮಾಡಿದರು. ಅನಂತರ ಸ್ಥಳೀಯ ದೊಡ್ಡ ಮನುಷ್ಯರ ಮತ್ತು ಕೃಷ್ಣರಾಜಸಾಗರದ ಇಂಜನೀಯರು ಮತ್ತು ಇತರ ಮುಸಲ್ಮಾನರು ಇವರುಗಳ ಪ್ರಾರ್ಥನೆಯಂತೆ ನೂತನ ಮಸೀದಿಯ ಬಾಗಿಲನ್ನು ತೆರೆದರು. ಅನೇಕ ಜನ ಮುಸಲ್ಮಾನರು ಈ ಪವಿತ್ರವಾದ ನೂತನ ಮಸೀದಿಯಲ್ಲಿ ತಮ್ಮ ಮೊದಲ ನೆಮಾಜನ್ನು ಅರ್ಪಿಸಿದರು. ಹಿಂದು ಮುಸಲ್ಮಾನರ ಏಕೀಭಾವದ ಚಿಹ್ನೆಯು ಎಲ್ಲರಲ್ಲಿಯೂ ತಲೆದೋರುತ್ತಲಿತ್ತು. ಮ|| ಅಬ್ದುಲ್ ವಾಜಿದ್‌ರವರು ಮುಸಲ್ಮಾನ್ ಬಡಬಗ್ಗರಿಗೆ ವಸ್ತ್ರದಾನವನ್ನು ಮಾಡಿದರು. ಈ ನೂತನ ಪಟ್ಟಣದ ಅಭಿವೃದ್ಧಿಗೆ ಇಲ್ಲಿಯ ರೆವಿನ್ಯೂ ಸಬ್‌ಡಿವಿಜನ್ ಆಫೀಸರಾದ ಮ|| ಕೆ. ಬಸವರಾಜ ಅರಸಿನವರು, ಅಮಲ್ದಾರ್ ಮ|| ಬಿ. ಲಕ್ಷ್ಮಣರಾಯರು ಮತ್ತು ಅಸಿಸ್ಟೆಂಟ್ ಇಂಜನಿಯರ್ ಮ|| ಬಿ ಸುಬ್ಬರಾಯರು ತೋರಿಸುತ್ತಿರುವ ಶ್ರದ್ಧೆಯು ತುಂಬಾ ಶ್ಲಾಘನೀಯವಾಗಿದೆ. ಮ|| ಬಸವರಾಜ ಅರಸಿನವರು ಸ್ವಲ್ಪ ದಿವಸಗಳ ಹಿಂದೆ ಇದೇ ಹೊಸ ಟವನ್ನಿನಲ್ಲಿ ಆದ ನೂತನ 2 ದೇವಾಲಯಗಳ ಪ್ರತಿಷ್ಠಾಕಾರ್ಯಕ್ಕಾಗಿ ಉದಾರವಾಗಿ ಧನ ಸಹಾಯಮಾಡಿದ್ದಲ್ಲದೆ ತಮ್ಮ ಸ್ವಂತಕಾರ್ಯಕ್ಕಿಂತಲೂ ಹೆಚ್ಚಾಗಿ ಶ್ರದ್ಧೆಯನ್ನು ತೋರಿಸಿದಂತೆಯೇ ಈ ನೂತನ ಮಸೀದಿಯ ಆರಂಭಮಹೋತ್ಸವಕ್ಕೂ ಉದಾರವಾಗಿ ಧನ ಸಹಾಯ ಶ್ರದ್ಧಾಭಕ್ತಿಯನ್ನು ತೋರಿಸಿದ್ದು ಎಲ್ಲರ ಮನಸ್ಸಿಗೂ ಆಹ್ಲಾದಕರವಾಗಿದೆ. ಈ ನೂತನ ಪಟ್ಟಣದ ಅಭಿವೃದ್ಧಿಗೆ ಈ ಸ್ಥಳದ ಮ|| ಬಿ. ಸಿದ್ದಲಿಂಗಶೆಟ್ಟರು ಸಹ ತಮ್ಮ ಸ್ವಂತ ಕಾರ್ಯಗಳಿಗಿಂತಲೂ ಹೆಚ್ಚಾಗಿ ಉತ್ಸಾಹಸಾಹಸಗಳನ್ನು ತೋರಿಸುತ್ತಿರುವುದು ನಿಜವಾಗಿಯೂ ಸರ್ಕಾರ ಗಮನಕ್ಕೆ ಬಾರದೇ ಇರಲಾರದು. ಘನಸರ್ಕಾರದವರು ಈ ಹೊಸಟವನ್ನಿನ ಅಭಿವೃದ್ಧಿಗಾಗಿ ವಹಿಸಿಕೊಂಡಿರುವ ಶ್ರದ್ಧೆಯಿಂದ ದಿನೇ ದಿನೇ ಉತ್ತಮಸ್ಥಿತಿಗೆ ಬರುತ್ತಿದೆ ಎಂಬುವದು ಎಲ್ಲರಿಗೂ ತಿಳಿದ ವಿಷಯವಾಗಿಯೇ ಇದೆ. ಆದುದರಿಂದ ಸರ್ಕಾರದವರು ಶೀಘ್ರದಲ್ಲಿಯೇ ಈ ಹೊಸ ಟವನ್ನಿಗೆ ಮ್ಯುನಿಸಿಪಾಲಿಟಿ [illegible] ಕೋರ್ಟು ಮತ್ತು ಹೈಸ್ಕೂಲು ದಯಪಾಲಿಸಿದಲ್ಲಿ ಇದು ನಮ್ಮ ಪ್ರಾಂತದ ಸಂಸ್ಥಾನದ ಮಾದರಿಯ ಪಟ್ಟಣವನ್ನಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲ.

ಪುರವಾಸಿ

ಬ್ರಾಹ್ಮಣರಿಗೆ ಮುಡುಪು

ರಾಜಧಾನಿಯಲ್ಲಿ ಶ್ರೀ ಚಾಮರಾಜೇಂದ್ರ ಒಡೆಯರವರಿಂದ ಸ್ಥಾಪಿತವಾದ ಒಂದು ಸಂಸ್ಕೃತ ಮಹಾಪಾಠಶಾಲೆ (ಕಾಲೇಜು) ಯಿರುವ ವಿಷಯವು ವಾಚಕರಿಗೆ ಹೊಸದಲ್ಲವು. ಇಲ್ಲಿ ಪುಸ್ತಕಭಂಡಾರ ವಿದ್ಯಾರ್ಥಿನಿಲಯ ವಿದ್ಯಾರ್ಥಿವೇತನ ಮೊದಲಾದ ಸಕಲ ಸೌಕರ್ಯಗಳೂ ಕಲ್ಪಿಸಲ್ಪಟ್ಟಿರುತ್ತವೆ. [illegible] ವೇದಪಾಠವು ಉನ್ನತಿಗಾಗಿ ಮಾಡಿರುವ ಈ ಏರ್ಪಾಡುಗಳೆಲ್ಲವೂ ಸ್ತೋತ್ರಾರ್ಹವಾಗಿರುತ್ತವೆ. ಸರ್ಕಾರದವರು ಈ ಮಹಾ ಪಾಠಶಾಲೆಯ ವೆಚ್ಚಕ್ಕಾಗಿ ಪ್ರತಿ ವರ್ಷವೂ ತಮ್ಮ ಬೊಕ್ಕಸದಿಂದ ಸುಮಾರು [illegible] ಸಾವಿರ ರೂಗಳನ್ನು ಖರ್ಚುಮಾಡುತ್ತಿರುವುದೂ ಸ್ತೋತ್ರಾರ್ಹವಾಗಿರುತ್ತದೆ. ಆದರೆ ಈ ಸಾರ್ವಜನಿಕ ಪಾಠಶಾಲೆಯಲ್ಲಿ ದೀಕ್ಷಿತ, ಜೈನ ಮೊದಲಾದ ಉತ್ತಮವರ್ಗದವರಿಗೂ ಪ್ರವೇಶಕ್ಕವಕಾಶವನ್ನು ಕೊಡದೆ ಬ್ರಾಹ್ಮಣರಿಗೆ ಮಾತ್ರ ಇದು ಮುಡುಪಾಗಿರುವುದು ವಿಷಾದಕರವಾಗಿರುತ್ತದೆ. ವೀರಶೈವ, ಜೈನ ಮೊದಲಾದ ಶ್ರೇಷ್ಠ ಜಾತಿಯವರು ಯಜ್ಞಯಾಗಾದಿಗಳ [illegible] ವೇದಮಂತ್ರಗಳನ್ನು ಮಾಡುವವರು [illegible] ಅವಕಾಶವನ್ನು [illegible] ಭಾಷಾಸೇವೆಯಲ್ಲಿ ಅವರ [illegible]

ಗತಕಾಲದ ಬೊಕ್ಕಸದಿಂದಲೆ ವಿಶ್ವವಿದ್ಯಾನಿಲಯ [illegible] ಗೌರವ [illegible] ಬ್ರಾಹ್ಮಣರಾಯರು [illegible] ಈ ಪಾಠಶಾಲೆಯ [illegible] ಇದರಲ್ಲಿ [illegible] ಕೊಡದೆ [illegible] ಬ್ರಾಹ್ಮಣೇತರರ ಪ್ರವೇಶಕ್ಕೆ [illegible] ತಾತ್ತ [illegible] ಬ್ರಾಹ್ಮಣ ವಿದ್ವಾಂಸರು [illegible] ಸಮಂಜಸವಾದ ಮಾತೇ? ಹಾಗೆ ಅವರು ಹೇಳುವುದು ನಿಜವಾದರೆ ಅದರಿಂದ ಅವರ ಸಂಕುಚಿತಭಾವವು ಹೊರಪಡುವುದಲ್ಲದೆ [illegible] ಉದಾರತೆಯೆನ್ನಿಸಿಕೊಳ್ಳುವುದೇ? ಗೊಡ್ಡು [illegible] ಬೇವ [illegible] ಅಂಜುಬುರುಕತನವಲ್ಲವೇ?

ಬ್ರಾಹ್ಮಣೇತರರಿಗೆ ವೇದವನ್ನು ಓದುವ ಅಧಿಕಾರವಿಲ್ಲವೆಂದೂ ಅವರು ವೇದವನ್ನು ಕೇಳಿದರೆ ಕಿವಿಗೆ ಸೀಸವನ್ನು ಕರಗಿಸಿ ಹುಯ್ಯಬೇಕೆಂದೂ ಈ ಬ್ರಾಹ್ಮಣರು ಹೇಳುವುದುಂಟಷ್ಟೆ. ಅದೇಕೆ ಅಧಿಕಾರವಿಲ್ಲ? ವೇದವನ್ನೋದಿದ ಬ್ರಾಹ್ಮಣೇತರರು ಪವಿತ್ರರಾಗುವರೆಂದಲ್ಲವೋ? ಅಪವಿತ್ರರಾಗುವರೆಂದಲ್ಲವೋ? ಪವಿತ್ರರಾಗುವುದೆಂದಾದರೆ ಹಾಗಾಗುವುದು ಬ್ರಾಹ್ಮಣರಿಗೆ ಸಹನವಿಲ್ಲವೇ? ಅಪವಿತ್ರರಾಗುವರೆಂದಾದರೆ ಅವರನ್ನು ಅಪವಿತ್ರರನ್ನಾಗಿ ಮಾಡುವುದಾದರೆ ವೇದವೇ ಏಕೆ? ಹಾಗೆ ವೇದದಲ್ಲಿ ಅಪವಿತ್ರತೆಯನ್ನು ಆರೋಪಿಸುವವರಿಗೆ ವೇದಾಧ್ಯಯನಾಧಿಕಾರವುಂಟೋ ಅಥವಾ ಇತರರಿಗುಂಟೋ ಎಂಬುದನ್ನು ವಾಚಕರು ನಿಷ್ಪಕ್ಷಪಾತದಿಂದ ವಿಚಾರಿಸಬೇಕಾಗಿದೆ.

ಇನ್ನು ಕಿವಿಗೆ ಸೀಸವನ್ನು ಕರಗಿಸಿ ಹುಯ್ಯುವ ಮಾತು, ಅದೇಕೆ? ವೇದವನ್ನು ಕೇಳಿದ ಕಿವಿಯು ಕಿವುಡಾಯಿತೆಂದೋ? ಅಪವಿತ್ರವಾಯಿತೆಂದೋ? ಪವಿತ್ರವಾಯಿತೆಂದೋ? ಕಿವುಡಾಯಿತೆನ್ನುವುದು ಪ್ರತ್ಯಕ್ಷವಿರೋಧ. ಅಲ್ಲದೆ ಹಾಗೆ ಕಿವುಡುಮಾಡುವ ವೇದಕ್ಕೆ ಒಕ್ಕಣಾಶಕ್ತಿವೂ ಇಲ್ಲ. ಬ್ರಾಹ್ಮಣರ ಕಿವಿಯನ್ನೂ ಕಿವುಡುಮಾಡಬಹುದು. ಅಪವಿತ್ರವಾಯಿತೆನ್ನುವುದಾದರೆ ಹಾಗಾದುದು ವೇದಶ್ರವಣದಿಂದ ತಾನೆ? ಹಾಗಾದರೆ ಕಿವಿಯನ್ನು ಅಪವಿತ್ರಮಾಡುವವು ಅಪವಿತ್ರವೇ ವೇದ? ಹಾಗೆ ಹೇಳುವುದು ಮಹಾ ಪಾಪವಲ್ಲವೇ? ಕಿವಿಯು ಪವಿತ್ರವಾಯಿತೆನ್ನುವ ಮೂರನೆಯ ಪಕ್ಷವಾದರೆ ಅದೇಕೆ ಸೀಸವನ್ನು ಕರಗಿಸಿ ಹುಯ್ಯಬೇಕು? ಕಿವಿಯು ಪವಿತ್ರವಾಗುವುದು ಅನಿಷ್ಟವೇ ಬ್ರಾಹ್ಮಣರಿಗೆ? ಇಂಗ್ಲಿಷ್ ಭಾಷೆಯಲ್ಲಿ ಕೂಡ ವೇದಗಳು ಭಾಷಾಂತರಿಸಲ್ಪಟ್ಟಿವೆಯಲ್ಲ. ಬ್ರಾಹ್ಮಣೇತರರಾದ ಆ ಭಾಷಾಂತರ ಕರ್ತರಿಗೂ ಓದಿದವರಿಗೂ ಕೇಳಿದವರಿಗೂ ಏನೇನು ಅನಿಷ್ಟಗಳಾಗಿವೆ? ಹೇಳಬಲ್ಲರೆ ಈ ಬ್ರಾಹ್ಮಣರು? ಅದಕ್ಕೆ ಪರಿಹಾರ ಪ್ರಾಯಶ್ಚಿತ್ತವನ್ನೇನು ಮಾಡಿದ್ದಾರೆ?

ಅದಿರಲಿ, ವರುಷಕ್ಕೊಮ್ಮೆ ವಿಘ್ನೇಶ್ವರಚತುರ್ಥಿಯ ಮಂಗಳಾರತಿಯ ಸಂದರ್ಭದಲ್ಲಿ ಈ ಮಹಾ ಪಾಠಶಾಲೆಯ ಸಭಾಮಂದಿರದಲ್ಲಿ ಬ್ರಾಹ್ಮಣ ವಿದ್ವಾಂಸರು ಉಪನ್ಯಾಸಗಳನ್ನು ಮಾಡುತ್ತಿರುವರಷ್ಟೆ. ಆಗ ಅನೇಕ ವೇದ ವಿಷಯಗಳನ್ನೂ ಉಪನ್ಯಾಸಮಾಡುತ್ತಾರೆ. ಅದನ್ನು ಕೇಳುವುದಕ್ಕೆ ದೊಡ್ಡದಾಗಿ ಆಹ್ವಾನಪತ್ರಿಕೆಯನ್ನೂ ಅಧ್ಯಕ್ಷರು ಕಳುಹಿಸುತ್ತಾರೆ. ಆಹ್ವಾನದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ ತಾರತಮ್ಯವಿಲ್ಲ. ಬ್ರಾಹ್ಮಣೇತರರು ವೇದ ವಿಷಯಗಳನ್ನು ಕೇಳಬಾರದೆಂದೂ ಅವರಿಗೆ ಆ ವಿಷಯಗಳನ್ನು ಹೇಳಬಾರದೆಂದೂ ಹೇಳಿದಮೇಲೆ ಈ ಉಪನ್ಯಾಸಗಳ ಮೂಲಕವಾಗಿ ಆ ವಿಷಯಗಳನ್ನು ಕೇಳಬಹುದೇ? ಹೇಳಬಹುದೋ? ಆಗಬಹುದೆಂದರೆ ಆದಾವುದು ಅಪವಾದ ಸೂತ್ರ? ಆಗಬಾರದೆಂದರೆ ದೂರಾಲೋಚನೆಯಿಲ್ಲದೆ ಹಾಗೆ ವಿರೋಧ ಮಾರ್ಗದಲ್ಲಿ ನಡೆದವರು ಪ್ರಾಯಶ್ಚಿತ್ತವನ್ನೇನು ಮಾಡಿಕೊಳ್ಳುವರು?

ಈಸಲದ ಉಪನ್ಯಾಸ ಸಮಾರಂಭದಲ್ಲಿ ಇನ್ನೊಂದು ವಿಶೇಷವೇನೆಂದರೆ, ಬ್ರಾಹ್ಮಣ ಭಕ್ತರಾದ ಬ್ರಾಹ್ಮಣೇತರರು ಉಪನ್ಯಾಸಕರುಗಳಿಗೆ ಪುಷ್ಪಮಾಲೆಯನ್ನು ಹಾಕುತ್ತಿದ್ದುದು. ಬ್ರಾಹ್ಮಣ ಬ್ರಾಹ್ಮಣೇತರರಲ್ಲಿ ಮೇಲೆ ಹೇಳಿದಂತೆ ವರ್ತಿಸುತ್ತಿರುವಾಗ ಈ ಬ್ರಾಹ್ಮಣೇತರರು ಪುಷ್ಪಮಾಲೆಯನ್ನು ಹಾಕುವುದರಲ್ಲಿ ಯಾವ ಪುರುಷಾರ್ಥವನ್ನು ಕಂಡುಕೊಂಡರೋ ತಿಳಿಯದು. ಸಭಾಮಧ್ಯಗಳಲ್ಲಿ ಹಾರವನ್ನು ಹಾಕುವುದೊಂದು ಗೌರವವೆಂದು ತಿಳಿದರೋ ಅಥವಾ ಎಲ್ಲರ ಕಣ್ಣಿಗೆ ತಾವು ಗೋಚರರಾಗಿ ಪ್ರಸಿದ್ಧಪುರುಷರಾಗುವೆವೆಂದು ತಿಳಿದರೋ? ಅಥವಾ ಹೀಗೆ ಮಾಡುವುದರಿಂದ ಓಟಿಗೀಟಿನ ಸಮಯದಲ್ಲಿ ಏನಾದರೂ ಪ್ರಯೋಜನವಾಗಬಹುದೆಂದು ತಿಳಿದರೋ ಗೊತ್ತಾಗಲಿಲ್ಲ. ಕೋಳಿಯು ಕೆದಕುವುದು ತನ್ನ ತಡೆಗೇ ಎಂಬುದು ಇವರಿಗೆ ನೆನಪಿರಲಿ.

ಲೇಖಕನು ಬ್ರಾಹ್ಮಣರ ಅಭಿವೃದ್ಧಿಯನ್ನು ನೋಡಿ ಕರುಬುತ್ತಾನೆಂದು ಯಾರೂ ತಿಳಿಯಬಾರದು. ಈ ಬ್ರಾಹ್ಮಣರು "ಎಲ್ಲರೂ ಒಂದಾಗಬೇಕು, ಅಸ್ಪೃಶ್ಯತೆಯನ್ನು ತೊಡೆದುಹಾಕಬೇಕು" ಇತ್ಯಾದಿಯಾಗಿ ಸಕ್ಕರೆಯಂತೆ ಸಿಹಿಯಾಗಿ ಬೇರೆಯವರಿಗೆ ಉಪದೇಶಮಾಡುತ್ತಾರಲ್ಲ, ಬೇರೆಯವರಲ್ಲಿ ಇವರ ನಡೆಯಂತೆ ನಡೆಯುತ್ತಿರುವುದೇ? ಸಮಾನಭೂತಿಯುಳ್ಳವರೇ? ಎಂಬುದನ್ನು ಸ್ವಲ್ಪಮಟ್ಟಿಗೆ ತೋರಿಸ ಬೇಕಾಗಿ ಬರೆಯಬೇಕಾಯಿತು, ಕಹುಬಾವ ಮಾತಲ್ಲ. ಕೆಲವರು ಬ್ರಾಹ್ಮಣರು "ನನ ಗೇನೂ ಸಮಾನಭೂತಿಯಿದೆ. ಆದರೆ ನಮ್ಮ ಕೆಲವು ಆರ್ಥಡಾಕ್ಸ್‌ಗಳು ಕೇಳುವುದಿಲ್ಲ" ವೆಂಬ ಉಪಚಾರದ ಮಾತುಗಳನ್ನಾಡುವುದುಂಟು. ಅಂಥವರಿಗೆ ನಾನು ಹೇಳುವುದೇನೆಂದರೆ, ನಿಮ್ಮವರನ್ನೇ ತಿದ್ದಲಾಗದಮೇಲೆ ಬೇರೆಯವರಿಗೇಕೆ ಉಪದೇಶ ಮಾಡುತ್ತೀರಿ? ನಿಮ್ಮವರು ನಿಮ್ಮ ಮಾತನ್ನು ಕೇಳಲಿಲ್ಲವೆಂದು ನೀವು ಸತ್ಯಾಗ್ರಹವನ್ನೇನಾದರೂ ಮಾಡಿದಿರೋ? ಇಲ್ಲವೆಂದಮೇಲೆ ಈ ಬಾಯುಪಚಾರವೇಕೆ?

ಬ್ರಾಹ್ಮಣೇತರಸಹೋದರರೇ! ನೀವು ಬ್ರಾಹ್ಮಣರನ್ನು ಕಂಡರೆ ದ್ವೇಷಿಸಬೇಕೆಂದು ಈ ಲೇಖನದ ಉದ್ದೇಶವಲ್ಲ. ಒಬ್ಬರಿಗೊಬ್ಬರು ಪ್ರೀತಿಯಿಂದಿರುವುದು ಸರ್ವೋತ್ತಮ. ಆದರೆ ಬಣ್ಣದ ಮಾತುಗಳಿಗೆ ಮರುಳಾಗಿ ನೀವು ಮೋಸಹೋಗಬಾರದೆಂದು ಈ ಲೇಖನವು ನಿಮ್ಮಗಳಿಗೆ ಎಚ್ಚರಿಕೆಯನ್ನು ಕೊಡುವುದು. "ನೀವೂ ವಿದ್ಯಾಬುದ್ಧಿ ಸಂಪತ್ತುಗಳಲ್ಲಿ ಹೋರಾಡಿ ಮುಂದುವರಿದು ನಿಮ್ಮ ಆತ್ಮಗೌರವವನ್ನು ಕಾಪಾಡಿಕೊಳ್ಳಬೇಕವೇ!" ಎಂಬ ಪಲ್ಲವಿಯನ್ನು ಹಾಡಿ ಈ ಎರಡನೆಯ ಲೇಖನವನ್ನು ಮುಗಿಸುವೆನು.

ದೇಶಭಕ್ತ.

ಮಂಗಳೂರು ಕೋಟೆಯಲ್ಲಿ ನಿರ್ಮಿತವಾಗುವ ಸೇಂಟ್‌ಲ್ಯೂಕ್ಸ್ ಚರ್ಚಿನ ಅಸ್ತಿಭಾರಶಿಲೆಯನ್ನು ಪ್ರತಿಷ್ಠಿಸುವಾಗ್ಗೆ ಮೈಸೂರು ಸಂಸ್ಥಾನದ ದಿವಾನರವರು ಮಾಡಿದ ಭಾಷಣ.

(1932 ನೇಯ ಇಸವಿ ಸೆಪ್ಟೆಂಬರ್ 29 ನೆಯ ತಾರೀಖು.)

ಇಲ್ಲಿ ಕಟ್ಟುವ ಸೇಂಟ್‌ಲ್ಯೂಕ್ಸ್ ಚರ್ಚಿನ ಹೊಸ ಕಟ್ಟಡದ [redacted] ಶಿಲೆಯನ್ನು ಪ್ರತಿಷ್ಠಿಸುವುದಕ್ಕೆ ನನಗೆ ಆಹ್ವಾನವ[redacted] ಆ ಚರ್ಚಿಗೆ ಸೇರಿದ ಸಮಸ್ತರಿಗೂ ನಾನ[redacted]

ಮಕ್ಕಳಿದ್ದರೆಮನೆ ಚಂದ.

ಬಂಜೆತನದಿಂದ ಮುಕ್ತರಾಗುವಿರಿ

ಮಕ್ಕಳಿ [illegible]ದು | ಚಿಂತಿಸ ಬೇಡಿರಿ

ಗರ್ಭಧಾರಣಾ ಸಂಜೀವಿನಿ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾತ ಆಗುವವರೆಗೆ ಪ್ರತಿ ಸಾರೆ [illegible]ರು ಮೂರು ದಿವಸ ತಕ್ಕೊಂಡರೆ ಫಲಿತ್ಶಾಪ ಆಗಿಗುರಿ ೯ ಗುಳಿಗೆಗಳ ಕಿ. ೩ ರೂಪಾಯಿ. ಪಿ. ೫೫ ಆಣೆ

ಪತ್ತೆ: [redacted] ಕಾಪಸಿ. ಮಿರಜ M. C.

ವಾಗಿ ವಂದನೆಗಳನ್ನು ಸಮರ್ಪಿಸುವೆನು. ಬೆಂಗಳೂರಿನಲ್ಲಿರುವ ಕ್ರೈಸ್ತ ಸಂಘಟನೆಗಳೆಲ್ಲರಿಗೂ ಒಂದು ಉತ್ಸವ [illegible] ಮುಖ್ಯವಾದ ಈ ಉತ್ಸವದಲ್ಲಿ ನಿವೇದನೆ ಸಲ್ಲಿಸುವ ಸುಯೋಗವು ಲಭಿಸಿದ್ದು ನನಗೆ ವಿಶೇಷ ಸಂತೋಷಕರವಾಗಿದೆ.

[illegible]

ಮೈಸೂರಿನಲ್ಲಿ ನಡೆದ ಪತ್ರಿಕೋದ್ಯಮಿಗಳ ಸಮ್ಮೇಳನವನ್ನು ಪ್ರಾರಂಭಗೊಳಿಸುವುದರಲ್ಲಿ ದಿವಾನರವರು ಮಾಡಿದ ಭಾಷಣ.

1932 ನೆಯ ಇಸವಿ ಅಕ್ಟೋಬರ್ 6 ನೆಯ ತಾರೀಖು

ಮಹನೀಯರೆ, ಈ ದಿನ ಇಲ್ಲಿಗೆ ಬಂದು ಈ ಸಮ್ಮೇಳನದಲ್ಲಿ ಭಾಗಿಯಾಗುವುದು ನನಗೆ ವಿಶೇಷ ಸಂತೋಷಕರವಾಗಿದೆ.

[illegible]

ನಾರಿನ ಮೇಲೆ ರಾಮಬಾಣ

ನಾಲ್ಕೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಬಾರದ ಹಾಗೆ ಮಾಡುವುದು. ನಾರಿನವರು ಜರೂರಾಗಿ ಕೊಳ್ಳಿರಿ. [illegible] ರೂ [illegible] ಆಣೆ

ಸತ್ಯಪ್ರಿಯ ವೈದ್ಯಶ್ರೀ ಎಸ್. ಕಾಪಸೆ, ಮಿರಜ

M C

೧೯೩೨ ನೆಯ ಇಸವಿ ಅಕ್ಟೋಬರ್ ತಾ ೧೦ರಿಂದ ಅಕ್ಟೋಬರ್ ತಾ ೧೬ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ನೆಯ [illegible] ಅಂಗಿರಾ ನಾಮಸಂವತ್ಸರದ ಆಶ್ವಯುಜ ಶುದ್ಧ ದಶಮಿಯಿಂದ ಆಶ್ವಯುಜ ಬಹುಳ ಬಿದಿಗೆ ವರೆಗಿನ ಪಂಚಾಂಗ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶನಾ ಮಾ
10	ಸೋಮ	ಏಕಾ	10 45	ಧನಿ	24 55	18
11	ಮಂಗಳ	ದ್ವಾದ	19 27	ಶತ	26 20	19
12	ಬುಧ	ತ್ರಯೋ	20 20	ಪೂಭಾ	28 48	20
13	ಗುರು	ಚತು	22 41	ಉಭಾ	32 52	21
14	ಶುಕ್ರ	ಪೌರ್ಣ	25 24	ರೇವ	37 47	22
15	ಶನಿ	ಪಾಡ್ಯ	30 30	ಅಶ್ವಿ	43 37	23
16	ಭಾನು	ಬಿದಿ	35 41	ಭರ	50 3	24

(1) ಮಹಾನಕ್ಷತ್ರ-ಚಿತ್ತ ೧ ನೆಯ ಪಾದ, (2) ಶ್ರೀ ಚಾಮುಂಡೇಶ್ವರಿ ರಥ, ಮಹಾನಕ್ಷತ್ರ ಚಿತ್ತ ೩ ನೆಯ ಪಾದ (3) ಮಹಾನಕ್ಷತ್ರ-ಚಿತ್ತ ೪ ನೆಯ ಪಾದ.

ಮೈಸೂರು, ಸ್ಟಾರ್ ವಿರೂಪಾಕ್ಷಯ್ಯನವರಿಂದ ಬ್ರೈಟ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG NO M 124

ಮೈಸೂರ್ ಸ್ಟಾರ್

[illegible]

[ಸ್ಥಳದವರಿಗೆ ವಾರ್ಷಿಕಚಂದಾ ೬—೧೦—೦]   [ವರಸ್ಥಳದವರಿಗೆ ೭—೮—೦]   [ಪ್ರತಿಪ್ರತಿಗೆ ೩—೬—೦]

ಸಂಪುಟ ೪೫]   ಮೈಸೂರು ಸ್ಟಾರ್ ಸನ್ ೧೯೩೭ ನೆಯ ಇಸವಿ ಅಕ್ಟೋಬರ್ ತಾರೀಖು ೧೮ ನೆಯ ಸೋಮವಾರ   [ಸಂಚಿಕೆ ೪೨

Insurance in the Mysore State Life Insurance, Public Branch.

Life Insurance is admittedly the best form of investment and the greatest seafeguard against the old age and death

The best safest, cheapest most profitable and most convenient place of Insurance is the Public Branch of the Mysore State Life Insurance

Policies are issued from Rs 100 to Rs 10 000 and copies of rules and forms of application can be had from all Government Treasuries Economic Superintendents, Helpers and the Insurance Office, Public Office Buildings Bangalore

(Sd) S SHA MANNA,
Secretary, Insurance Committee

[50—10]

ಲಗ್ನಪತ್ರಿಕೆಗಳ

ಮುದ್ರಣಕ್ರಮ

ನಮ್ಮ ಕರ್ರಿ ಎಲೆಕ್ಟ್ರಿಕ್ ಮುದ್ರಣಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಸ್ವಲ್ಪಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	ವಿ ಪಿ ಸೇರಿ
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲ ವಚನ	೦—೪—೦	೦—೯—೦
ಚಾರುಶೀಲೆಯಚರಿತ್ರೆ	೦—೫—೦	೦—೧೦—೦
ಹರಿದಾಸ	೦—೪—೦	೦—೯—೦
ಪ್ರತಾಪಸಿಂಹ	೦—೬—೦	೦—೯—೦
ಗುರುಬಸವೇಶ್ವರ	೦—೨—೦	೦—೬—೦
ಬಸವೇಶ್ವರವಚನ	೦—೮—೦	೦—೧೩—೦
[illegible]	೦—೮—೦	೦—೧೩—೦
[illegible]	೧—೦—೦	೧—೫—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅವೇನು ನೋಡೋಣ

ಮಿರಜಯಿಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಸ್ಸಾಗಿ ಕ್ಷೀಣಬಾಗ ಬೇಡಿರಿ	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಪಿ] ವಜ್ರಾಂಗ ಸುಂದರಪಾಕದ [ಸ್ವರ	ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ

[illegible]

ಸ್ತ್ರೀ ರೋಗ ನಿವಾರಣೇ ಚೂರ್ಣ

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

[60—12]

ಪತ್ತಾ ಮಾಲಕ—ವೈದ್ಯ ವ್ಹಿ. ಎಸ್ ಕಾಪಸೆ, ಮು. ಪೋ. ಮಿರಜ ಎಂ ಎಸ್ ಎಂ

ಡಾಕ್ಟರ್ ಜೀ ಜೀ. ಯವರ

ಸುಗಂಧ ನಶ್ಯದ ಪುಡಿ.

[illegible]

(Registered Trade Mark)

[illegible]

ವಿಳಾಸ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[60—7]   ಪೋ. ಬಾ. ೫೧೧೦. ಮುಂಬಯಿ

ಮೈಸೂರು ಸ್ಟಾರ್

೧೯೩೨ನೇ ಇಸವಿ ಅಕ್ಟೋಬರ್ ತಾರೀಖು ೧೭ನೆಯ ಸೋಮವಾರ

MYSORE ASSEMBLY

THE DEWAN'S ADDRESS

The Dasara Session of the Representative Assembly commenced its sittings on Monday the 10th instant and concluded on the 16th instant after deliberating for six days. The Dewan-President in his address paid a fitting tribute to the memory of late Sahukar Dharmaprakash Rao Bahadur D Banumiah who was a member of the Assembly for a long time. It is given to few to earn a tribute of that kind. The entire House joined the Dewan Saheb in standing up in reverential silence for a while. The Dewan made a particular reference to Federation and the reports of the enquiries preliminary to the final discussions at the next R T Conference. He complained that the main fault lay with the terms of reference to these committees. The Federal Finance Committee were given wide powers to go into all questions of federal revenue and expenditure and adjustment of past obligations only with relation to the Provinces but not States the result being that they have not taken into consideration the equities in favour of the States at all and have taken the present contributions from States as one of the sources of Federal revenue. The Davidson Committee on the other hand were instructed that an ideal scheme of federal finance would be one under which all units including States would contribute on a uniform basis. The Dewan said that their recommendations would only reproduce the worst features of the 1919 reforms. As expected the Dewan Saheb has devoted a portion of the address to the consideration of the payment of subsidy. At the last budget session of the Assembly the Dewan expressed a hope that the Davidson Committee would do justice by Mysore. But he is evidently surprised that having said all things in favour of abolition the Committee have made halting recommendations such as a remission of whatever is in excess of 5 percent of the total revenues of the present and the balance in the course of twenty years and taking into consideration the immunities enjoyed by States by way of postal privileges etc which should be recovered by withholding the remission proposed to that extent. The Dewan's statements are to our mind irrefutable and telling. He has referred to differential treatment in the case of these exactions. When the net amount of the tributes to rank for effective remission would only be Rs. 30 lakhs the Dewan could not understand why the Federal Government should victimise a few States for the sake of this small and diminishing sum. He characterised the levy as a source of humiliation and added 'Being such a levy and levied in so unfair a proportion it is an onerous payment which no amount of camouflage can make less odious to those from whom it is exacted'. As regards the postal privilege for official correspondence which the Committee had termed as one of the immunities the Dewan said that that privilege was only in consideration of giving up the local postal system known as anche carried on by Mysore 40 years ago and if they want to put a cash value on the privilege Mysore could well ask for the revival of its own anche system. The Dewan also regretted that the Committee had not made any specific recommendations about the Civil and Military Station although they have not overlooked the anomolous status of the tract as evidenced by its hybrid title. As regards the internal affairs, the Dewan referred to the redistribution of seats of the Assembly and the introduction of the system of proportional representation in electing members from the Assembly to the Council and from the cities of Bangalore and Mysore to the Assembly. We will refer to other matters which came up for consideration before the Assembly in our next issue.

ಮೈಸೂರು ಪ್ರಜಾಪ್ರತಿನಿಧಿ ಸಭೆ

ಈ ಸಭೆಯು ದಸರಾ ದಿನಗಳಲ್ಲಿ [illegible] ಸೋಮವಾರ ದಿವಾನರ ಅಧ್ಯಕ್ಷತೆಯಲ್ಲಿ ಆರಂಭಗೊಂಡು ಶನಿವಾರ [illegible] ... [illegible] ಫೆಡರಲ್ ಫೈನಾನ್ಸ್ ಕಮಿಟಿಯವರಿಗೆ ... [illegible] ... 1919 ರಲ್ಲಿ ನಡೆದ ಸುಧಾರಣೆಗಳ ... [illegible] ... ದಿವಾನರು ತಿಳಿಸಿರುವರು ... [illegible] ... ಸಂಸ್ಥಾನವು ... [illegible] ... ಬೆಂಗಳೂರು ... [illegible] ... ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಪ್ರತಿನಿಧಿ ಸಭೆಯಿಂದ ನ್ಯಾಯವಿಧಾಯಕ ಸಭೆಗೂ, ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಿಂದ ಪ್ರಜಾಪ್ರತಿನಿಧಿ ಸಭೆಗೂ ಹೊಂದಿಕೆಯಾಗಿ ಮೆಂಬರುಗಳನ್ನು ಆರಿಸುವ ನೂತನಕ್ರಮವನ್ನೂ ಕುರಿತು ತಿಳಿಸಿ, ಇತರರು ಸಭೆಯಲ್ಲಿ ಚರ್ಚಿಸಿದ ಇತರ ವಿಷಯಗಳನ್ನು ಕುರಿತು ಮುಂದೆ ಪ್ರಸ್ತಾಪಿಸುವೆವು.

ಅನುಕರಣ ಪ್ರದರ್ಶನ

ಮುಂಬಾಯಿಯಾಧಿಪತ್ಯದ ವೀರಶೈವರಲ್ಲಿ ಅಗ್ರಗಣ್ಯರೂ ವೃದ್ಧಪಿತಾಮಹರೂ ಧಾರವಾಡ ವೀರಶೈವ ವಿದ್ಯಾವರ್ಧಕ ಸಂಘದ ಸಂಸ್ಥಾಪಕರೂ ಆಗಿದ್ದ [illegible] ಬೆಳಗಾವಿಯಲ್ಲಿರುವ ಸ್ವಗೃಹದಲ್ಲಿ [illegible] ಕೈಲಾಸವಾಸಿಗಳಾದರೆಂದು ತಿಳಿಸಲು [illegible] ... ದಿಂದಲೂ, ಶಿಸ್ತಿನಿಂದಲೂ, [illegible] ಉದ್ಯೋಗ ನಿರ್ವಹಿಸಿ ಪ್ರಭುಪ್ರಜಾಮನ್ನಣೆಗೆ ಪಾತ್ರರಾಗಿ ರಾವ್ ಬಹದ್ದೂರ್ ಪ್ರಶಸ್ತಿಯನ್ನು ಪಡೆದು ಈಗ್ಗೆ 20 ವರ್ಷಗಳ ಹಿಂದೆ ಉದ್ಯೋಗದಿಂದ ನಿವೃತ್ತರಾಗಿ ಸುಖದಿಂದ ಕಾಲಯಾಪನೆ ಮಾಡುತ್ತಿದ್ದರು. ಇವರು ಸರ್ಕಾರಿಯುದ್ಯೋಗದಲ್ಲಿರುವಾಗ್ಗೆ ಸ್ವಾರ್ಥಪರರಾಗಿರದೆ ವೀರಶೈವ ತರುಣರು ಆಂಗ್ಲ ಭಾಷೆಯಲ್ಲಿ ಪ್ರೌಢವಿದ್ಯಾಭ್ಯಾಸಂಗವನ್ನು ಮಾಡಿ ಪ್ರಶಸ್ತಿಗಳನ್ನು ಪಡೆದು ಸರ್ಕಾರೀ ದೊಡ್ಡ ಉದ್ಯೋಗಗಳನ್ನು ಹೊಂದ [illegible] ಶ್ರೀ|| [illegible] ಗುರುಸಿದ್ಧಪ್ಪನವರೊಡನೆ ಸೇರಿ ಲಕ್ಷಾಂತರ ರೂಪಾಯಿಗಳನ್ನು [illegible] ಧಾರವಾಡ ವಿದ್ಯಾವರ್ಧಕ ಫಂಡ್ [illegible] ಧನರಾಶಿಯನ್ನು ಕೂಡಿಸಿ ಅದರ ಸ್ಥಾಪಕರೆನಿಸಿಕೊಂಡರು. ಶ್ರೀ|| ಲಿಂಗಪ್ಪ ಚಾಯಪ್ಪ ಸರ್ ದೇಸಾಯಿ ಶಿರಸಂಗಿಕರ ಇವರು ಅಪುತ್ರವಂತರಾಗಿದ್ದುದರಿಂದ ದತ್ತ ಪುತ್ರನನ್ನು ಮಾಡಿಕೊಳ್ಳಬೇಕೆಂದು ಹವಣಿಸುತ್ತಿದ್ದಾಗ್ಗೆ, ದತ್ತಪುತ್ರನು ಸನ್ಮಾರ್ಗನಲ್ಲದಿದ್ದರೆ ಮನಃಸಂಕಟವು ಪ್ರಾಪ್ತವಾಗುವುದಲ್ಲದೆ ಆಸ್ತಿಯು ಹಾಳಾಗುವುದಾದ್ದರಿಂದ ವಿದ್ಯಾವಂತರಾದ ಅನೇಕ ಪುತ್ರರನ್ನು ಪಡೆದಲ್ಲಿ ಇವರ ಸುಖಸಾಧನೆಯಾಗಿ ಶಾಶ್ವತ ಕೀರ್ತಿಯುಂಟಾಗುವುದೆಂದು ಬೋಧಿಸಿ ಪ್ರತಿ ವರ್ಷದಲ್ಲೂ [illegible] ರೂಪಾಯಿಗಳಿಗೆ ಮೀರಿ ಉತ್ಪನ್ನವುಳ್ಳ ದೇಶಗತಿಯನ್ನು ಸಮಾಜದವರ ಪ್ರೌಢ ವಿದ್ಯಾಭಿವೃದ್ಧಿಗಾಗಿ ಧಾರೆ [illegible] ಸಮಾಜದ ಚಿರಕೃತಜ್ಞತೆಗೆ ಪಾತ್ರರಾದರು ಮತ್ತು ಈ ಲೋಕೋತ್ತರವಾದ ದಾನದಿಂದ ಶ್ರೀ|| ದೇಸಾಯಿಯರು ಪ್ರಮ [illegible] ಪೂಜಾರ್ಹರಾಗಲು ಕಾರಣಭೂತರಾದರು. [illegible] ಸರ್ಕಾರಿ ಉದ್ಯೋಗದಲ್ಲಿರುವಾಗ್ಗೆ ಲಂಚ [illegible] ನ್ಯಾಯಪರರಾಗಿದ್ದರಲ್ಲದೆ ರೈತ ಜನೋಪಕಾರ [illegible] ಚತುರರೂ, ಲೋಕಾ [illegible] ಪ್ರೀತಿ [illegible]

ಶ್ರೀ|| ಗಂಗಮ್ಮನವರು

[illegible] ಶ್ರೀ|| ಶಂಕರಣ್ಣ [illegible] ವೀರಶೈವರ [illegible] ವಿದ್ಯಾಭ್ಯಾಸಕ್ಕಾಗಿ [illegible] ಮೇಲ್ಪಟ್ಟ ದ್ರವ್ಯ [illegible] ಸಂಸ್ಕೃತ ಮಹಾಪಾಠಶಾಲೆಯನ್ನು ಸ್ಥಾಪಿಸಿ [illegible] ಪಂಡಿತರುಗಳ ವೇತನ [illegible] ಮಾಡಿ ಆಚಂದ್ರಾರ್ಕ [illegible] ಹೊಂದಿದ [illegible] ಗಂಗಮ್ಮನವರು [illegible] ಸೋಮವಾರರಾತ್ರಿಯ ಪೂಜಾ [illegible] ದಾನಮಾಡಿ ಸ್ವರ್ಗ [illegible] ಪ್ರಪಂಚಕ್ಕೇ ಮಾರ್ಗದರ್ಶ [illegible] ವಿದ್ಯಾಭಿಮಾನಿಯಾದ [illegible] ಮಹಾಪಾಠಶಾಲೆಯ ವ್ಯವಸ್ಥಾಪಕ ಸಂಘದ [illegible] ಕೈಲಾಸವಾಸಿ [illegible] ವೀರಶೈವ [illegible] ಆರಾಧಕರ ಮತ್ತು [illegible] ಸಮಾಜಕ್ಕೆ ವಿಶೇಷ [illegible] ಸಂದೇಹವಿಲ್ಲ. ಈ ಉಭಯರ [illegible] ಶಾಂತಿಯನ್ನೂ ಅವರ ಬಂಧುವರ್ಗಕ್ಕೆ [illegible] ಸಮಾಧಾನವನ್ನೂ ಕೋರುತ್ತೇವೆ.

ವಿಜಯದಶಮಿಯಲ್ಲಾದ ಗಲಭೆ

ವಿಜಯದಶಮಿ ರಾತ್ರಿ ಶ್ರೀಮನ್ಮಹಾರಾಜರವರ ಅಂಬಾರಿಯುತ್ಸವದ ಕೋಟೆಯನ್ನು ಪ್ರವೇಶಿಸುವ ವೇಳೆಯಲ್ಲಿ ನಡೆದ ಗಲಭೆಯಿಂದ ಇದಕ್ಕೆ ಕಾರಣಭೂತನಾದ ಒಬ್ಬ ಹುಡುಗನ ವಿನಾ ಮತ್ತಾರಿಗೂ ಅಪಾಯವಾಗಲಿಲ್ಲವೆಂದು ಕಳೆದ ವಾರ ತಿಳುಹಿಸಿದ್ದೆವಷ್ಟೆ. ಈಚೆಗೆ ವಿಚಾರಿಸಿದುದರಲ್ಲಿ ಲಾಟಿ ಪ್ರಯೋಗದಿಂದಲೂ ಶಿಲಾ ವರ್ಷದಿಂದಲೂ ಅನೇಕರಿಗೆ ಘೋರ ಪೆಟ್ಟುಗಳು ಬಿದ್ದು ರಕ್ತ ಸುರಿದುದಾಗಿಯೂ ಮಹಾಸ್ವಾಮಿಯವರು ಅರಮನೆಯನ್ನು ಸುರಕ್ಷಿತವಾಗಿ ಸೇರಿ ಜನರ ಗುಂಪು ಚದುರಿಹೋಗಿ ಶಾಂತವಾದ ಮೇಲೂ ಅಲ್ಲಲ್ಲಿ ಕುಳಿತಿದ್ದ ಮಲಗಿದ್ದ ಜನರನ್ನು ಪೋಲೀಸಿನವರು ಲಾಟಿ ಪ್ರಯೋಗದಿಂದ ಓಡಾಡಿಸಿದರೆಂದೂ ತಿಳಿಯಬಂದಿದೆ. ನಮ್ಮ ಸಂಸ್ಥಾನದ ಅದರಲ್ಲೂ ರಾಜಧಾನಿಯ ಪ್ರಜೆಗಳು ಅದ್ವಿತೀಯ ಮತ್ತು ಅಕುಟಿಲ ರಾಜಭಕ್ತಿ ಪರಾಯಣರೆಂದೂ, ತಮ್ಮ ಪ್ರಭುಗಳ ಸಲುವಾಗಿ

ಕನು ಮುಸಲ್ಮಾನರ್ ಮೂರ್ಖರು ಸಿದ್ಧರಾಗಿರುವರೆಂದೂ ಪ್ರಸಿದ್ಧವಾಗಿರುವುದಲ್ಲದೆ ಶ್ರೀಮನ್ಮಹಾರಾಜರವರಿಗೂ ವೇದ್ಯವಾಗಿದೆ. ಇಂತಹವರು ಪ್ರಜೆಗಳ ಮುಖಂಡರುಗಳೇ ತಮ್ಮ ಸ್ವಾರ್ಥಕ್ಕಾಗಿ ಜನರು ಬಾಯಿಸಿ ಅವರ ಕಿವಿಗೆ ಚುಚ್ಚಿದನ್ನು ಕಾವ್ಯಕಥೆಗಾಗಿ ಬರೆ ರಾಜ್ಯದ ಉತ್ಸವವನ್ನು ನೋಡಿ ಜನಗಳನ್ನು ಎಬ್ಬಿಸಿ ಸಮಯದಲ್ಲಿ ಕೆಲವರು ಪೋಲೀಸ್ ತಿರುಗಿ ಬೀಳಲು ಅನುಕೂಲ ಮಾಡಿ ಸಿನ್ನ ಮೇಲೆ ಪ್ರಾಣ ಹೋಗವದೇ ಎಂದು ತೋರುತ್ತದೆ. ಆ ದಿನದ ಸಭೆ. ಗಲಭೆಗೆ ಕಾರಣವನ್ನು ಕಂಡು ಹಿಡಿಯಲು ಎಂದು ನಮ್ಮ ಕೇಳಿದೆ ಪ್ರಶ್ನೆಗಳಿಗೆ, ಪೋಲೀಸರು ಕೆಲ ಜನರ ಮೇಲೆ ಏಟಿ ಕೊಟ್ಟಿರುವ ಕೆಲವರಿಗೆ ಗಾಯವನ್ನು ಮಾಡಿರುವುದಾಗಿಯೂ ಕೇಳುತ್ತೇವೆ ಆ ದಿವಸದ ಉತ್ಸವದಲ್ಲಿ ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ರವರು ಇದ್ದಿದ್ದರೆ ಗಲಭೆಗೆ ಅವಕಾಶವಾಗುತ್ತಿರಲಿಲ್ಲವೆಂದು ಜನರು ಆಡಿಕೊಳ್ಳುತ್ತಾರೆ. ವಿಚಾರಣೆಯ ಕಮಿಟಿಯವರು ಗಲಭೆಯ ಕಾರಣವನ್ನು ಕಂಡುಹಿಡಿದು ತಪ್ಪಿತಸ್ಥರಾರೆಂಬುದನ್ನು ನಿಪಕ್ಷಪಾತದಿಂದ ನಿರ್ಧರಿಸಿ ತಿಳಿಸುವರೆಂದು ನಂಬಿ ನಿರೀಕ್ಷಿಸುತ್ತೇವೆ.

ಮಹಾತ್ಮರಾರೋಗ್ಯಾಭಿವೃದ್ಧಿ

ಕಳೆದ ಬುಧವಾರ ದೇವದಾಸ ಗಾಂಧಿಯವರು ಮಹಾತ್ಮರ ದರ್ಶನವನ್ನು ತೆಗೆದುಕೊಂಡು ಬಂದು "ಮಹಾತ್ಮರಿಗೆ ಮಧ್ಯಾಹ್ನಕಾರ ಆರೋಗ್ಯಸ್ಥಿತಿಯುಂಟಾಗಿದೆ ಇವರ ತೂಕ 100 ಪೌಂಡಿರುವುದು ಮಹಾತ್ಮರು ಉಲ್ಲಾಸವಾಗಿರುತ್ತಾರೆ" ಎಂದು ತಿಳಿಸಿರುತ್ತಾರೆ.

ಹಿಂದು ಮಹಮ್ಮದೀಯ ವಿವಾಹ

ಆಂಧ್ರ ವಿಶ್ವವಿದ್ಯಾಲಯದ ಉದ್ಯೋಗದಲ್ಲಿರುವ ಹುಮಾಯೂನ್ ಕಬೀರ್, ಬಿ.ಎ, (ಆಕ್ಸ್‌ಫರ್ಡ್) ಇವರು ಕುಮಾರಿ ಶಾಂತಿದಾಸ್, ಎಂ.ಎ, ಇವರನ್ನು ಬ್ರಹ್ಮೋಧರ್ಮದ ಪ್ರಕಾರ ವಿವಾಹಮಾಡಿಕೊಂಡರು. ಕುಮಾರಿ ಶಾಂತಿದಾಸ್‌ರವರು ಕಲಕತ್ತಾ ರಾಜಕೀಯರಂಗದಲ್ಲಿ ಹೆಸರ್ವಡೆದ ಸ್ತ್ರೀ 1930 ರಲ್ಲಿ ಬಂಗಾಳಾ ಸ್ತ್ರೀ ಸಭೆಗೆ ಕಾರ್ಯದರ್ಶಿಯಾಗಿದ್ದರು ಡಾ|| ರವೀಂದ್ರ ಟಾಗೂರ್‌ರವರು ದಂಪತಿಗಳನ್ನು ಆಶೀರ್ವದಿಸಿದರು

ಎಸ್. ಬೋಸ್‌ರವರು ಭಾವಲಿಗೊಯ್ಯಲ್ಪಟ್ಟರು

ಸುಭಾಷ ಚಂದ್ರ ಬೋಸ್‌ರವರು ಮದ್ರಾಸು ಕಾರಾಗೃಹದಿಂದ ಕಳೆದ ತಾ|| 8 ನೆಯ ಶನಿವಾರ ಸಂಯುಕ್ತರಾಷ್ಟ್ರದಲ್ಲಿರುವ ಭಾವಲೀ ಸ್ಯಾನಿಟೋರಿಯಂ ಎಂಬ ಆರೋಗ್ಯ ವಾಸಸ್ಥಳಕ್ಕೆ ಕರೆದೊಯ್ಯಲ್ಪಟ್ಟರು ಬೋಸ್‌ರವರು ಮದ್ರಾಸಿನಲ್ಲಿ ರೈಲುಬಂಡಿಯನ್ನು ಹತ್ತುವ ಸಮಯದಲ್ಲಿ ನೋಡಿ ಮಾತನಾಡಿಸಿದಾಗ್ಗೆ "ನನಗಿನ್ನೂ ನಿಶ್ಶಕ್ತಿಯಾಗಿದೆ ಸಾಯಂಕಾಲದಲ್ಲಿ ಜ್ವರ ಬರುತ್ತಲೇ ಇರುವುದು" ಎಂದು ಬೋಸ್‌ರವರು ಹೇಳಿದುದಾಗಿ ಶ್ರೀವಾದಶಂಕರರವರು ಬರೆದಿರುತ್ತಾರೆ.

ಅಂಗಡಿ ಮುಚ್ಚುವುದು ಅಪರಾಧವಲ್ಲ

ತನ್ನ ಅಂಗಡಿಯನ್ನು ಮುಚ್ಚಿ ಆಕ್ರಮಸಂಘದ ಕಾರ್ಯಕ್ರಮಕ್ಕೆ ಸಹಾಯಮಾಡಿದರೆಂದು ಬೆಳಗಾಂ ಡಿ|| ಹುಕ್ಕೇರಿ ಗ್ರಾಮದ ಶಿವಲಿಂಗಪ್ಪನವರಿಗೆ ಡಿಸ್ಟ್ರಿಕ್ಟು ಮೆಜಿಸ್ಟ್ರೇಟರು 6 ತಿಂಗಳ ಕಠಿಣ ಕಾರಾಗೃಹವಾಸಶಿಕ್ಷೆ ವಿಧಿಸಿದ್ದರು ಇದರ ಮೇಲೆ ಅಪರಾಧಿಯು ಹೈಕೋರ್ಟಿಗೆ ಅಪೀಲನ್ನು ಮಾಡಿಕೊಂಡಿರಲಾಗಿ ಅಂಗಡಿಯನ್ನು ಮುಚ್ಚಿದ ಮಾತ್ರಕ್ಕೆ ಆಕ್ರಮ ಸಂಘಕ್ಕೆ ಸಹಾಯಮಾಡಿದಂತಾಗುವುದಿಲ್ಲವೆಂದು ನ್ಯಾಯಮೂರ್ತಿಗಳು ತೀರ್ಮಾನಿಸಿ ಶಿಕ್ಷೆಯನ್ನು ತಪ್ಪಿಸಿದ್ದರು.

ದೊರೆತನದವರು ಮಹಾತ್ಮರೊಡನೆ ರಾಜಿ ಮಾಡಿಕೊಳ್ಳಬೇಕು

"ಗಾಂಧಿಯವರೊಡನೆ ರಾಜಿ ಮಾಡಿಕೊಳ್ಳಲು ದೊರೆತನದವರು ಪುನಃ ಪ್ರಯತ್ನಿಸುವುದು ಅತ್ಯಾವಶ್ಯಕವು. ಬ್ರಿಟಿಷರ ಪರಿಪಾಲನ ವಿಧಾನದಿಂದ ಭಾರತೀಯರಿಗುಂಟಾಗಿರುವ ವಿರುದ್ಧ ಭಾವವು ಬಹಳ ಉಗ್ರಸ್ವರೂಪವನ್ನು ತಾಳಿರುತ್ತದೆ ದೊರೆತನದವರು ಕಠಿಣವಿಧಾನದ ಮೇಲೆ ಆಧಾರಪಟ್ಟುಕೊಂಡಿದ್ದರೆ ಯಾವ ಸಮಯದಲ್ಲಿ ಯಾವ ಮಹೋಪದ್ರವವುಂಟಾಗದೆ ಇರುವುದಿಲ್ಲ. ಆಗ ಪರಿಪಾಲನವರ್ಗವೂ ಅರ್ಧಿಕವರ್ಗವೂ ಸಂಪೂರ್ಣವಾಗಿ ವಿಚ್ಛಿನ್ನವಾಗುವುವು" ಎಂದು ಮಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಬರೆದಿರುತ್ತದೆ.

ಮಹಾತ್ಮರನ್ನು ಕೂಡಲೆ ಬಿಡಬೇಕು

"ಅಲ್ಪ ಸಂಖ್ಯಾಕರ ಸಮಸ್ಯೆಯನ್ನು ಪರಿಹರಿಸುವ ವಿಚಾರದಲ್ಲಿ ಹಿಂದು ಮಹಮ್ಮದೀಯ ನಾಯಕರುಗಳೊಳಗೆ ರಾಜಿಯಾಗುವವು ನಡೆಯುತ್ತಿರುವುದೆಂದೂ ಕೇಳಿ ನಮಗೆ ಬಹಳ ಸಂತೋಷವಾಗಿರುತ್ತದೆ. ಭಾರತ ದೇಶದಲ್ಲಿ ಶಾಂತಿಯುತವಾದ ರಾಜಕೀಯಪರಿಸ್ಥಿತಿಯೇರ್ಪಡುವುದೆಂದು ಆಶಿಸುತ್ತೇವೆ. ವಾಣಿಜ್ಯಸ್ಥಿತಿಯು ನೆಟ್ಟಗಾಗಲು ಇದು ಅತ್ಯಾವಶ್ಯಕವು. ಎಲ್ಲ ಪಕ್ಷದವರನ್ನು ಒಟ್ಟುಗೂಡಿಸಿ ಒಪ್ಪಂದವನ್ನು ಮಾಡಲು ಮಹಾತ್ಮರ ವಿನಾ ಮತ್ತಾರಿಗೂ ಸಾಧ್ಯವಿಲ್ಲವಾದುದರಿಂದ ಮಹಾತ್ಮರನ್ನು ಕೂಡಲೆ ಬಂಧವಿಮುಕ್ತರನ್ನಾಗಿ ಮಾಡಬೇಕೆಂದಾಗಿ ಪ್ರಾರ್ಥಿಸುತ್ತೇವೆ" ಎಂದು ಬೊಂಬಾಯಿನ ಹಿಂದು ವಾಣಿಜ್ಯ ಸಂಘದವರು ವೈಸ್‌ರಾಯರಿಗೆ ತಂತಿಯನ್ನು ಕೊಟ್ಟಿರುತ್ತಾರೆ.

ಪ್ರತ್ಯೇಕ ನಿಯೋಜಕ ವರ್ಗವನ್ನು ಕೇಳುವುದಿಲ್ಲ

ಕ್ರೈಸ್ತಮತದ ಮುಖಂಡರುಗಳೂ, ಉಪಾಧ್ಯಾಯರುಗಳೂ, ಮಹಾಸಭೆಯಲ್ಲಿ ಸೇರಿ ತೀರ್ಮಾನಿಸಿದ್ದೇನೆಂದರೆ ಕ್ರೈಸ್ತರಿಗೆ ಪ್ರತ್ಯೇಕವಾಗಿ ನಿಯೋಜಕ ವರ್ಗವು ಬೇಕಾಗಿಲ್ಲ. ಕ್ರೈಸ್ತರಿಗೆ ಇತರ ಜನಗಳಂತೆ ಹಕ್ಕುಗಳನ್ನು ಮಾತ್ರ ಕೊಡಬೇಕು. ಕ್ರೈಸ್ತರಿಗೆ ಬೇರೆಯಾದ ನಿಯೋಜಕ ವರ್ಗ ಅವಶ್ಯಕವಿಲ್ಲ ಎಂದು ಹೇಳಿದೆ. ಕ್ರೈಸ್ತರೊಳಗೆ ಅನೇಕ ಪಂಗಡಗಳಿರುವುದರಿಂದ ಅವರೆಲ್ಲರೂ ಸೇರಿ ಪ್ರತ್ಯೇಕ ನಿಯೋಜಕ ವರ್ಗವಿಲ್ಲದೆ ತಮ್ಮ ಹಕ್ಕುಗಳನ್ನು ಪಡೆಯಬೇಕೆಂದು ನಿಯೋಜಕ ವರ್ಗವೇ ಬೇಡವೆನ್ನುವರು ಅತ್ಯಂತ ದೇಶಭಕ್ತಿಯೂ ರಾಷ್ಟ್ರೀಯ ಐಕ್ಯತೆಯೂ ಇರುವ ಭಾವನೆಯನ್ನು ವ್ಯಕ್ತಪಡಿಸುತ್ತಿರುವರು.

ಡಾ|| ವಾರ್ಟರವರ ಅಭಿಪ್ರಾಯ

ಡಾ|| ಫಾರೆಸ್ಟು ವಾರ್ಟರವರು ಸಾಟಿಂಗ್ಹಾಮಿನಲ್ಲಿ ಪೂನಾ ಒಡಂಬಡಿಕೆಯನ್ನು ಕುರಿತು ಉಪನ್ಯಾಸಮಾಡುವಾಗ್ಗೆ "೩೦ ವರ್ಷಗಳಲ್ಲಿ ಅಸ್ಪೃಶ್ಯರಿಗೆ ದೊರೆತನದವರು ಮಾಡಲಾರದೆ ಹೋದ ಮಹೋಪಕಾರವನ್ನು ಕೆಲ ವಾರಗಳಲ್ಲಿಯೇ ಮಹಾತ್ಮ ಗಾಂಧಿಯವರು ಮಾಡಿರುತ್ತಾರೆ ಭಾರತ ದೇಶಕ್ಕೆ ತಾವು ಟ್ರಸ್ಟಿಗಳೆಂದು ಇಂಗ್ಲೀಷರು ಹೇಳಿ ಕೊಂಡಿರುತ್ತಾರೆ ಆದರೆ ಟ್ರಸ್ಟಿಗಳು ಕೂಡ ಕೆಲ ಕಾಲಾನಂತರ ತಮ್ಮ ಅಧಿಕಾರವನ್ನು ಸ್ವಂತಗಾರರಿಗೆ ಬಿಟ್ಟುಕೊಡಬೇಕಾಗುವುದು ಭಾರತ ಪ್ರಜೆಗಳು ಇನ್ನೂ ಸ್ವಪರಿಪಾಲನಕ್ಕೆ ಅರ್ಹರಲ್ಲವೆಂದು ತಿಳಿದಿರತಕ್ಕವರು, ಈಗ ಭಾರತೀಯರಲ್ಲಿ ಹುಟ್ಟಿರುವ ನೂತನ ಭಾವವನ್ನು ಹೃದಯದಿಂದ ಗಮನಿಸಬೇಕು ಪರಾಧೀನತೆಯನ್ನು ಕೊಲಗಿಸಲಿಕ್ಕೆ ಗಟ್ಟಿ ಪ್ರಯತ್ನವನ್ನು ಮಾಡುತ್ತಿದ್ದಾರೆ" ಎಂದು ಹೇಳಿದರು

ಕೇಂದ್ರ ದಲ್ಲಿ ಸಮಸ್ತ ಬಾಧ್ಯತೆ ಯಿರಕೂಡದು

ಸಾಂಘಿಕ ಸಮಸ್ಯಾ ಪರಿಹಾರದಲ್ಲಿ ಮುಖ್ಯ ಮಂತ್ರಿ ಮೆಕ್‌ಡೋನಾಲ್ಡ್‌ರವರು ಸೆಂಟ್ರಲ್ ಅಂದರೆ ಕೇಂದ್ರದಲ್ಲಿ ಬಾಧ್ಯತೆಯಿರಬೇಕೆಂದು ಬರೆಯದಿರುವುದಕ್ಕಾಗಿ ಅವರನ್ನು ನಾನು ಬಹಳವಾಗಿ ವಂದಿಸುತ್ತೇನೆ ಪ್ರಧಾನ ರಾಷ್ಟ್ರೀಯ ಸ್ವಪರಿಪಾಲನನ್ನು ಮಾತ್ರ ಏರ್ಪಡಿಸಬೇಕು ಕೇಂದ್ರದಲ್ಲಿ ಅಧಿಕಾರವನ್ನು ಇಟ್ಟುಕೊಂಡಿದ್ದರೆ ರಕ್ಷಣೆಯನ್ನು ಸರಿಯಾಗಿ ಜಾರಿಗೆ ತರಲು ಅವಕಾಶವಾಗುವುದು ರಾಷ್ಟ್ರೀಯ ಸ್ವಪರಿಪಾಲನದಲ್ಲೂ ಬಹಳ ತೊಂದರೆಗಳಿರುವುದರಿಂದ ಭಾರತ ದೊರೆತನವು ಬ್ರಿಟಿಷ್ ದೊರೆತನಕ್ಕೆ ಅಧೀನವಾಗಿರುವವರೆಗೂ ರಾಷ್ಟ್ರೀಯ ಸ್ವಪರಿಪಾಲನದಿಂದ ಯಾವ ಮಹೋಪಕಾರವೂ ಉಂಟಾಗುವುದಿಲ್ಲವೆಂದು ಲಾರ್ಡ್ ಸಾಲಿಸ್‌ಬರಿಯವರು ಟೈಮ್ಸ್ ಪತ್ರಿಕೆಯಲ್ಲಿ ಬರೆದಿರುತ್ತಾರೆ

ವೈದ್ಯಶಾಲೆಗಾಗಿಯೂ ಲಾಟರಿ ಹಾಕಕೂಡದು

ನಾಟಿಂಗ್‌ಹ್ಯಾಮಿನಲ್ಲಿ ಇಂಗ್ಲೀಷು ಆಸ್ಪತ್ರೆಗಳ ಸಹಾಯಾರ್ಥವಾಗಿ ಲಾಟರಿಯೇರ್ಪಡಿಸಲ್ಪಟ್ಟಿರುವುದು ರೋಗಿಗಳಿಗೂ, ಬಾಧಿತರುಗಳಿಗೂ ಸಹಾಯಮಾಡುವುದು ಸತ್ಕಾರ್ಯವೇ ಆದರೂ ಇಂತಹ ಸತ್ಕಾರ್ಯಕ್ಕಾಗಿಯೂ ಲಾಟರಿಯನ್ನೇರ್ಪಡಿಸಕೂಡದು. ಇದರಿಂದ ಜೂಜನ್ನು ಪ್ರೋತ್ಸಾಹಿಸಿದಂತಾಗುವುದು. ಈ ದೇಶದಲ್ಲಿ ಜೂಜಿನಿಂದ ಎಷ್ಟೋ ಕುಟುಂಬಗಳು ಹಾಳಾಗುತ್ತಿವೆ ಇದಕ್ಕೆ ತಿರುಗಿ ಲಾಟರಿಯನ್ನೇರ್ಪಡಿಸಿದರೆ ಜೂಜಿ ಪ್ರೋತ್ಸಾಹವಾಗಿ ಧರ್ಮಕಾರ್ಯಕ್ಕೆ ಸಹಾಯ ಮಾಡತಕ್ಕವರು ಇದ ಇನ್ನು ಮೇಲೆ ಹೀಗೆ ಸಹಾಯ ಮಾಡುವುದಿಲ್ಲ. ಆದುದರಿಂದ ದೊಡ್ಡ ವೈದ್ಯಶಾಲೆಯವರು ಐಶ್ವರ್ಯಾವಂತರ ದಾನಸಹಾಯದ ಮೇಲೆ ಆಧಾರಪಟ್ಟುಕೊಂಡಿರಬೇಕಲ್ಲದೆ ಲಾಟರಿಯ ಮೇಲೆ ಬಂಡವಾಳಯಾಗಿಯೂ ಆಧಾರಪಟ್ಟುಕೊಂಡಿರಕೂಡದು." ಎಂದು ಕಾಂಟರ್‌ಬರೀ ಆರ್ಚ್‌ಬಿಷಪ್‌ರವರು ಕಾಂಟರ್‌ಬರಿಯಲ್ಲಿ ಜರುಗಿದ ಸಭೆಯಲ್ಲಿ ಹೇಳಿದರು

ಅಮೇರಿಕೆಯಲ್ಲಿ ರೀಡಿಂಗ್‌ರವರ ಪ್ರಚಾರ

ಭಾರತ ದೇಶದ ವೈಸ್ರಾಯರಾಗಿದ್ದ ಲಾರ್ಡ್ ಇರ್ವಿನ್‌ರವರು ಕೆಲ ತಿಂಗಳ ಹಿಂದೆ ಅಮೇರಿಕೆಗೆ ಹೋಗಿದ್ದು, ಹಿಂದೂಸ್ತಾನದಲ್ಲಿ ಬ್ರಿಟಿಷರ ಪರಿಪಾಲನವನ್ನು ಪ್ರಶಂಸಿಸಿ ಉಪನ್ಯಾಸಗಳನ್ನು ಮಾಡಿದ್ದರು ಇರ್ವಿನ್‌ರವರ ಹಿಂದೆ ವೈಸ್ರಾಯರಾಗಿದ್ದ ಲಾರ್ಡ್ ರೀಡಿಂಗ್‌ರವರು, ಈಗ ಅಮೇರಿಕೆಗೆ ಹೋಗಿ ಬ್ರಿಟಿಷರ ಇಂಡಿಯಾ ಪರಿಪಾಲನವನ್ನು ಕುರಿತು ಉಪನ್ಯಾಸಮಾಡುತ್ತಿರುವರು. ನ್ಯೂಯಾರ್ಕಿನಲ್ಲಿ ಆಂಗ್ಲಭಾಷೆಯನ್ನು ಆಡುವ ಸಂಘದವರು ರೀಡಿಂಗ್‌ರವರ ಗೌರವಾರ್ಥವಾಗಿ ಒಂದು ಔತಣವನ್ನು ಮಾಡಿದರು. ಆ ಸಮಯದಲ್ಲಿ ರೀಡಿಂಗರವರು ಮಾತನಾಡುವಾಗ್ಗೆ "ಇಂಗ್ಲೆಂಡು ಅಮೇರಿಕೆ ದೇಶಗಳ ಸಂಬಂಧವನ್ನು ವಿಶೇಷವಾಗಿ ಪ್ರಶಂಸಿಸಿ ಇತಿಹಾಸದಲ್ಲಿ ಎರಡು ದೇಶಗಳ ಆಶಯವೂ ಒಂದೇ ಎಂದು ಹೇಳಿದರು ಇಂಡಿಯಾದಲ್ಲಿ ಬ್ರಿಟಿಷರವರು ಅನುಸರಿಸುವ ಪದ್ಧತಿಯನ್ನು ಅಮೇರಿಕೆಯವರು ಬಲಪಡಿಸಬೇಕೆಂದು ಕೋರುವುದಕ್ಕೆ ಪೀಠಿಕೆಯಾಗಿ ಬ್ರಿಟನ್ ಅಮೇರಿಕ ದೇಶಗಳ ಸಂಬಂಧವನ್ನು ಹೊಗಳಿದರು. ಭಾರತದೇಶದಲ್ಲಿ ಬ್ರಿಟಿಷರ ಪರಿಪಾಲನವು ಬ್ರಿಟಿಷರ ಚರಿತ್ರೆಯಲ್ಲಿ ಬಹಳ ಪ್ರಖ್ಯಾತವಾಗಿದೆ. ಬ್ರಿಟಿಷರು ತಮ್ಮ ವಿಧಿಯನ್ನು ಅತ್ಯಂತ ನಿಷ್ಠೆಯಿಂದ ಉದಾರಭಾವದಿಂದ ನೆರವೇರಿಸುತ್ತಿರುವರೆಂದು ಹೆಮ್ಮೆ ಪಡಲು ತಕ್ಕ ಕಾರಣಗಳಿರುತ್ತವೆ" ಎಂದು ತಿಳಿಸಿದರು.

ಮೈಸೂರು ಯುವರಾಜರಿಗೂ ಶೌಕತ್ ಅಲಿಯವರಿಗೂ ನಡೆದ ಉತ್ತರ ಪ್ರತ್ಯುತ್ತರ

ಹಿಂದು ಮಹಮ್ಮದೀಯ ಸಮಸ್ಯೆಯನ್ನು ಪರಿಹರಿಸಲು ಬೇಕಾಗಿರುವುದರಿಂದ ಮಹಾತ್ಮ ಗಾಂಧಿಯವರನ್ನು ಕಾರಾಗೃಹದಿಂದ ಬಿಡುಗಡೆ ಮಾಡಬೇಕೆಂದೂ, ಹಿಂದುಗಳಿಗೆ ಮಹಮ್ಮದೀಯರು ಸಮ್ಮತಿಸಬೇಕೆಂದೂ ಯುವರಾಜರವರು ಶೌಕತ್ ಅಲಿಯವರಿಗೆ ತಂತಿ ಮುಖಾಂತರ ತಿಳಿಸಿದರು. ಶೌಕತ್ ಅಲಿಯವರು ವೈಸ್‌ರಾಯರಿಗೆ ತಂತಿ ಕೊಟ್ಟಿದ್ದರು ವೈಸ್‌ರಾಯರು ಇದಕ್ಕೆ ಉತ್ತರವನ್ನು ಕೊಡದೆ ಸ್ಪಷ್ಟ ಸಕಲ ಮಹಮ್ಮದೀಯರ ಸಮ್ಮತಿಯನ್ನು ಪಡೆಯದೆ ರಾಜಿ ಪ್ರಯತ್ನವನ್ನು ನಡೆಸುವುದು ಸರಿಯಲ್ಲವೆಂದು ತಿಳಿಸಿರುವರು. ಆದರೆ ಮೇಲೆ "ಇಡೀ ಭಾರತ ದೇಶವು ಒಂದು ನೂತನ ದೀಯ ರಾಜಕೀಯ ಕೆಲಸವನ್ನಾಗಲಿ ಮತ ಕಲಹವನ್ನಾಗಲಿ ಪ್ರೋತ್ಸಾಹಿಸುವುದಿಲ್ಲ ಇವು ದೇಶದ ಕೀರ್ತಿಯನ್ನು ಪ್ರಭುತ್ವದ ಕೀರ್ತಿಯನ್ನು ಮಲಿನಗೊಳಿಸುವುವು ಆದುದರಿಂದ ನಾನು ಸಾಹಸಪಟ್ಟು ಅಕ್ಟೋಬರ್‌ನಲ್ಲಿ ಮಹಮ್ಮದೀಯರನ್ನು ಸಮಾಧಾನಗೊಳಿಸುತ್ತೇನೆ, ಆದರೆ ಮಹಾತ್ಮರ ಸಹಾಯವಿಲ್ಲದೆ ಇಂತಹ ಸಮಸ್ಯೆಯನ್ನು ಪರಿಹಾರಗೊಳಿಸಲಾಗುವುದಿಲ್ಲ ಆದುದರಿಂದ ಮಹಾತ್ಮರನ್ನು ಬಿಟ್ಟುಕೊಡಲು ವೈಸ್ರಾಯರು ಸಮ್ಮತಿಸಬೇಕು, ಎಂದು ಶೌಕತ್ ಅಲಿಯವರು ವೈಸ್ರಾಯರಿಗೆ ಪುನಃ ತಂತಿಮೂಲಕ ವಿಜ್ಞಾಪಿಸಿಕೊಂಡಿದ್ದರಾದರೂ ಏನೂ ಪ್ರಯೋಜನವಾಗಲಿಲ್ಲ.

ಒಳದೇಶದ ವೃತ್ತಾಂತಗಳು

ಮಹಾನವಮಿಯುತ್ಸವಕ್ಕೆ ಬಿಸ್ಟ್ರಾಗಳಿಂದ ಬಂದಿದ್ದ ಜನರೆಲ್ಲರೂ ಸ್ವಸ್ಥಳಗಳಿಗೆ ಹೊರಟು ಹೋಗಿ ಚಿಕ್ಕಾಪೇಟೆಯು ಬರಿದಾಗಿ ನಡೆಸಿ ಊರಿನ ಕಳೆಯೆಲ್ಲಲ್ಲ ಹೋಗಿರುವುದು ಸ್ವಸ್ಥಗೊಳಿಸಿತು ಪ್ಲೇಗುರೋಗದಿಂದ 1 8 ಮರಣಗಳಾಗುತ್ತಿವೆ

ಮೈಸೂರು ವಿಶ್ವವಿದ್ಯಾಲಯದ ಪಟ್ಟಪ್ರದಾನೋತ್ಸವವು ಚಾನ್ಸಲರಾದ ಶ್ರೀಮನ್ಮಹಾರಾಜರವರ ಅಧ್ಯಕ್ಷತೆಯಲ್ಲಿ ಈ ತಿಂಗಳ ಕಡೆಯ ಬೆಳಗಿನ ೯ ಘಂಟೆಗೆ ರಾಜಧಾನಿಯ ಜಗನ್ಮೋಹನಮಹಲಿನ ಸಭಾಂಗಣದೊಳಗೆ ನಡೆಯುವುದು. ಮದ್ರಾಸಿನ ಸರ್ ಸಿ ಪಿ ರಾಮಸ್ವಾಮಿ ಅಯ್ಯರವರು ಪಟ್ಟಾಂಗಿಕರ ಹಿತಬೋಧಕೋಪನ್ಯಾಸವನ್ನು ಮಾಡುವರು

ದಸರಾ ಮಹೋತ್ಸವಕ್ಕೆ ಆಹ್ವಾನಿಸಲ್ಪಟ್ಟಿದ್ದ ಸಂಸ್ಥಾನದ ಸಂಸ್ಥಾನಿಕರಾದ ಬಂಗಾಳದ ನ್ಯಾಯವಿಧಾಯಕ ಸಭೆಯ ಮೆಂಬರು ದಾವಣಗೆರೆ ಅಡ್ವೊಕೇಟ್ ಮ|| ಡಿ ಎಚ್ ಚಂದ್ರಶೇಖರಯ್ಯನವರು ಊರಿಗೆ ಬಂದು ಪ್ಲೇಗುರೋಗದಿಂದ ಮೃತರಾಯಿತೆಂದು. ಕೇಳಿ ವಿಷಾದಿಸುತ್ತೇವಲ್ಲದೆ ಮ|| ಚಂದ್ರಶೇಖರಯ್ಯನವರ ಕುಟುಂಬವರ್ಗಕ್ಕೆ ನಮ್ಮ ಸಹಾನುಭೂತಿಯನ್ನು ಸೂಚಿಸುತ್ತೇವೆ

ಮೈಸೂರು ಸೀಮೆಯ ಬಸ್ಸುಗಳ ಮೇಲೆ ವಿಧಿಸಲ್ಪಟ್ಟಿರುವ ಹಾಲೀ ತೆರಿಗೆಯನ್ನು ಕಡಿಮೆ ಮಾಡುವ ವಿಚಾರವನ್ನು ಪರಿಶೀಲಿಸಲು, ಪ್ರಭುತ್ವದಿಂದ ನೇಮಿಸಲ್ಪಟ್ಟಿರುವ ಕಮಿಟಿಗೆ ಅಡ್ವೊಕೇಟರುಗಳಾದ ರಾಜಧಾನಿಯ ಮ|| ಎಚ್ ಸಿ ದಾಸಪ್ಪನವರನ್ನೂ, ತುಮಕೂರಿನ ಮ|| ಕೆ. ರಂಗಯ್ಯಂಗಾರ್ಯರವರನ್ನೂ ಬಸ್ಸು ಯಜಮಾನರುಗಳ ಪ್ರತಿನಿಧಿಗಳನ್ನಾಗಿ ತೆಗೆದುಕೊಳ್ಳಬೇಕೆಂದು ಪ್ರಭುತ್ವದವರಿಗೆ ಬಸ್ಸುಗಳ ಸಂಘದ ಸೆಕ್ರೆಟರಿಯವರು ಅರ್ಜಿ ಕೊಟ್ಟಿರುವುದಾಗಿ ಕೇಳುತ್ತೇವೆ ಇದು ಯುಕ್ತವಾದ ಪ್ರಾರ್ಥನೆಯು.

ಬಿರ್ಲಾ ಸಾಹೇಬರು ಕಳೆದ ಗುರುವಾರ ರಾತ್ರಿ ಬೆಂಗಳೂರಿಗೆ ಪ್ರಯಾಣವಾಗಿ ಅಲ್ಲಿಯ ಕಾರ್ಯಗಳನ್ನು ಆಗಮಾಡಿಕೊಂಡು ನಾಳೆಯ ದಿವಸ ರಾಜಧಾನಿಗೆ ಬಂದು ಬುಧವಾರ ವಿಶ್ವವಿದ್ಯಾನಿಲಯದ ಪಟ್ಟಪ್ರದಾನೋತ್ಸವವನ್ನು ವಹಿಸಿಕೊಂಡು ತಾ 24ರಲ್ಲಿ ಕೋಲಾರಕ್ಕೆ ಪಯಣಮಾಡಿ ಅಲ್ಲಿ ಆ ದಿವಸ ಆ ಊರಿಗೆ ಸಮೀಪದ ನರಸಿಂಹದೇಗುಲ ಆವರಣದೊಳಗಿನ ವನಭೋಜನವನ್ನು ನೆರವೇರಿಸಿ ನಾಥಮೂರ್ತಿ ಆರ್ ಚಿಕ್ಕಬಳ್ಳಾಪುರ ಕೃಷ್ಣರಾಜ ನಗರದಲ್ಲಿ ನಡೆಯುವ ಔತಣಸತ್ಕಾರವನ್ನು ಕೈಕೊಂಡು ಬರುವುದಾಗಿಯೂ, ತಾ|| 24 ರಲ್ಲಿ ಬೊಂಬಾಯಿಗೆ ಪ್ರಯಾಣವಾಗುತ್ತಾ ಬರಲಿ ಪಡಿಗೆಟ್ಟು ಹತ್ತು ದಿವಸಗಳ ಕೆಲ ಪ್ರವಾಸದಲ್ಲಿ ಕಾರ್ಯವಿದೆಯೆಂದು ತಿಳಿಯಬಂದಿದೆ.

ಆಶಿತ ಗುರು ವಾರ ಬೆಳಿಗ್ಗೆ ರಾಜಧಾನಿಯ ಚಾಮುಂಡಿ ಬೆಟ್ಟದ ಮೇಲೆ ಶ್ರೀ ಚಾಮುಂಡೇಶ್ವರೀ ಅಮ್ಮನವರ ವಾರ್ಷಿಕ ರಥೋತ್ಸವಕ್ಕಾಗಿ ಶ್ರೀ ಅಮ್ಮನವರ ವಿಗ್ರಹವು ರಥಾರೋಹಣವಾದಿಲ್ಲಿ ಶ್ರೀಮನ್ಮಹಾರಾಜರವರ ಸಾನ್ನಿಧ್ಯದಿಂದ ಪೂಜೆ ಮಾಡಿಸಲಾದನಂತರ ಶ್ರೀಮನ್ಮಹಾರಾಜರವರ ಸ್ವಹಸ್ತದಿಂದ ಬಂಗಾಳ ದಿ ಪತ್ರ ಸಹಿತ ಶಿಷ್ಯರಾಗಿ ರಥದ ಮೂಲಕ ನಾಲ್ಕು ಬೀದಿಯ ಪ್ರದಕ್ಷಿಣೆ ಮೂಲಕ ಬರಲು ಯಾವ ಅಪಾಯವಾಗಲಿ ಜರುಗದೆ ಸಾಗಿದ ಶ್ರೀ ಅಮ್ಮನವರ ಉತ್ಸವ ರಾತ್ರಿ ತೆಪ್ಪೋತ್ಸವ ಹಾಗೂ ಬೆಟ್ಟದ ಸುತ್ತಲು ದೀಪಾಲಂಕಾರದ ಮುನ್ನಿರಿ ವೈದಿಕ ಮಂತ್ರಘೋಷವು ನಡೆದು ಶ್ರೀಮನ್ಮಹಾರಾಜರವರು ಕರೆತಂದ ಪ್ರಕಾರ ದೀಪಾರಾಧನೆಯೊಂದಿಗೆ ಶ್ರೀ ಅಮ್ಮನವರ ಉತ್ಸವವನ್ನು ನೋಡಿ ಆನಂದಪಟ್ಟು ಬಂದರು.

ಮ|| ಸರ್ಕಾರ ಚಿತ್ರದುರ್ಗ ಮುನ್ಸೀಫ್ ಪಿ. ನಾಗಭೂಷಣರಾವ್, ಬಿಎ ಎಲ್ಎಲ್ ಬಿ ಯವರು ೨ ನೇ ಮುನ್ಸೀಫರಾಗಿ ನಿಯಮಿಸಲ್ಪಟ್ಟಿದ್ದು, ೨ ನೇ ಮುನ್ಸೀಫರಾದ ಜಿ ಅಬ್ದುಲ್ ಗಫೂರರವರು 1 ನೇ ಮುನ್ಸೀಫರಾಗಿಯೂ, ಬೆಂಗಳೂರಿನ 1 ನೇ ಮುನ್ಸೀಫರಾದ ಬಿ. ರಾಮಣ್ಣನವರು 1 ನೇ ತರಗತಿ ಮಾಜಿಸ್ಟ್ರೇಟರಾಗಿ ನೇಮಕವಾಗಿ, ನಂಜನಗೂಡು ಮುನ್ಸೀಫರಾದ ಮ|| ಡಿ. ನಾರಾಯಣಮೂರ್ತಿಯವರು ತುಮಕೂರು ಶಿವಮೊಗ್ಗ ಗಳ, ಶಿವಮೊಗ್ಗ ಮುನ್ಸೀಫರಾದ ಎಸ್ ಶ್ರೀನಿವಾಸರಾವರು ಮುನ್ಸೀಫರಾಗಿ ಚಿತ್ರದುರ್ಗಕ್ಕೂ, ಸಾಗರದ ಮುನ್ಸೀಫರಾದ ಕೆ ಸಿ ಲಿಂಗೇಗೌಡರು ೨ ನೇ ಪ್ರಿ ಮುನ್ಸೀಫ್ ಕೋರ್ಟಿಗೂ, ತಿಪಟೂರು 2 ನೇ ಪ್ರಿ ಮುನ್ಸೀಫ್ ಎ. ವಿ. ಚಂದ್ರಶೇಖರಯ್ಯನವರು ಮುನ್ಸೀಫರಾಗಿ ಸಾಗರಕ್ಕೂ ವರ್ಗಾಯಿಸಲ್ಪಟ್ಟಿರುತ್ತಾರೆ ಬಹಳ ಕಷ್ಟದಿಂದಲೂ ನಿಜವಾದ ಸಂಪಾದನೆಯಿಂದಲೂ ಮತ್ತು ಸಮರ್ಥ ಕಾರ್ಯದಕ್ಷತೆಯಿಂದ ಪ್ರಜಾಪಾಲನೆಗಾಗಿ ಸೇವೆಸಲ್ಲಿಸುತ್ತಾ ಬರುವ ರಾಮಣ್ಣನವರು ವರ್ಗಾಯಿಸಲ್ಪಟ್ಟು ಸಾಗರಕ್ಕೆ ಬರುತ್ತಾರೆ ಇವರ ಜಾಗಕ್ಕೆ ಮ|| ಜಿ. ಅಬ್ದುಲ್ ಗಫೂರ್‌ರವರು ಬೆಂಗಳೂರಿಗೆ ವರ್ಗವಾಗಿ ಬರಲಿದ್ದಾರೆಂದು ತಿಳಿಯಬಂದಿದೆ.

ಬಹಳ ಬೆಲೆಯ ನಗಗಳ ಹರಾಜು

ಬೆಂಗಳೂರಿನ ಹೈ ಕೋರ್ಟಿನ 1932 ನೇ ಇಸವಿ ಒ. ಎ. ಸಿ. ಪಿ. ನಂ 407 ನೇ ಡಿಕ್ರಿ ಪ್ರಕಾರ ಬಹಳ ಬೆಲೆ ಬಾಳುವ ಕಂಪ್ಲ, [illegible] ಗಳು 1932 ನೇ ಅಕ್ಟೋಬರ್ ತಾ॥ 23 ನೇ ಭಾನುವಾರ ಮತ್ತು 24 ನೇ ಸೋಮವಾರ ಬೆಳಿಗ್ಗೆ 12-30 ಗಂಟೆಯಿಂದ ಮೈಸೂರು ದೇವರಾಜ ಮಾರ್ಕೆಟ್ಟಿನ ಉತ್ತರ ದ್ವಾರದ ಮಹಡಿ ಮೇಲಿರುವ ವರ್ತಕರ ಸಂಘದಲ್ಲಿ ಈ ಕೆಳಗೆ ಕಂಡವರಿಂದ ಬಹಿರಂಗವಾಗಿ ಹರಾಜುಮಾಡಲ್ಪಡುತ್ತವೆ. ಇಷ್ಟವುಳ್ಳವರು ಬಂದು ಬಿಡದರಕವನ್ನು ಮಾಡಿ ಪಡೆಯಬಹುದು ಮತ್ತು ಹೆಚ್ಚು ವಿಷಯಗಳನ್ನು ಕ್ಯಾಟಲಾಗನ್ನು ನೋಡಿ ತಿಳಿಯಬಹುದು.

ನಗಗಳು ತಾ॥ 21 ಮತ್ತು 22 ರ ಬೆಳಿಗ್ಗೆ 10 ರಿಂದ ಸಾಯಂಕಾಲ 6 ಘಂಟೆ ವರೆಗೆ ಪ್ರದರ್ಶಿಸಲ್ಪಡುವುವು.

ಹರಾಜುದಾರರು—

ಓರಾ ಅಂಡ್ ಕೊ (ಕೋಟೆ, ಬೊಂಬಾಯಿ)

ಜಾಹೀರ ವಿನಂತಿ

ಯಾವತ್ತೂ ವೀರಶೈವ ಮಹಾಶಯರಿಗೆ ವಿನಯಪೂರ್ವಕವಾಗಿ ಕೃತ ಪಡಿಸುವದೇನೆಂದರೆ—ಧಾರವಾಡದಲ್ಲಿ ಇದೇ ವರ್ಷ ಡಿಸೆಂಬರ್ ತಿಂಗಳೊಳಗೆ ಅಖಿಲಭಾರತ ವೀರಶೈವ ಮಹಾಸಭೆಯನ್ನು ಜರುಗಿಸಬೇಕೆಂದು ನಿರ್ಧರಿಸಿರುವರಷ್ಟೇ. ಆ ಕಾಲಕ್ಕೆ ವೀರಶೈವರೊಳಗಿನ ಸ್ತ್ರೀ ಪುರುಷರಿಂದ ತೆಗೆಯಲ್ಪಟ್ಟ ಚಿತ್ರ ಮುಂತಾದವುಗಳ ಪ್ರದರ್ಶನವನ್ನು ಕೂಡಿಸತಕ್ಕದ್ದೆಂದು ನಿರ್ಧರಿಸಲ್ಪಟ್ಟಿದೆ. ಆದ್ದರಿಂದ ವೀರಶೈವರೊಳಗಿನ ಜಾಣರಾದ ಚಿತ್ರಕಲೆಯುಳ್ಳವರು ತಮ್ಮ ಕೈಲಿ ಬರೆದ ಪೆನ್ಸಿಲ್ ವಾಟರಕಲರ್ ಆಯಿಲ್ ಪೇಂಟ್ ಪೆಸ್ಟಲ್ಸ ಮುಂತಾದ ಚಿತ್ರಪಟಗಳನ್ನು ಮತ್ತು ಕತ್ತರಿ ಚಾಕು, ಉಗುರಿನಿಂದ ಕಾಗದಗಳಲ್ಲಿ ತಯಾರಿಸಲ್ಪಟ್ಟಂಥವುಗಳನ್ನು, ಹಾಗೂ ಹೆಣಿಕೆ ಹೊಲಿಗೆ ಕಸೂತಿ ಮತ್ತು ಇತರ ಮುಂತಾದ ಯಾವತ್ತು ಕೈಗಾರಿಕೆಯ ಕೆಲಸಗಳನ್ನು ತಾ॥ 15-11-1932 ರೊಳಗಾಗಿ ತಮ್ಮ ವಿಳಾಸಕ್ಕೆ ಮುಟ್ಟುವಂತೆ ಕಳುಹಿಸುವ ವ್ಯವಸ್ಥೆ ಆಗಬೇಕು. ಚಿತ್ರಪಟಗಳು ಹಾಗೂ ಉಳಿದ ಸಾಮಾನುಗಳು ನಮಗೆ ಸುರಕ್ಷಿತವಾಗಿ ಮುಟ್ಟುವಂತೆ ಕಳಿಸುವವರು ಕಾಳಜಿ ತೆಗೆದುಕೊಳ್ಳತಕ್ಕದ್ದು. ತಮ್ಮ ಚಿತ್ರಪಟಗಳನ್ನು ಇಲ್ಲವೆ ಇತರ ಸಾಮಾನುಗಳನ್ನು ಯಾರಾದರೂ ಮಾರಲಿಚ್ಛಿಸುವವರಿದ್ದರೆ ಅದರಂತೆ ಅವುಗಳ ಕ್ರಯಗಳನ್ನು ಬರೆದು ತಿಳಿಸಬೇಕು. ಪ್ರದರ್ಶನ ಕಮಿಟಿಯವರಿಂದ 1 2 3 ನೇ ತರಗತಿಯಲ್ಲಿ ಪಾಸುಮಾಡಲ್ಪಟ್ಟಂಥ ಒಡವೆಗಳಿಗೆ ಬಹುಮಾನ ಸರ್ಟಿಫಿಕೇಟು ಮುಂತಾದವುಗಳನ್ನು ಕೊಡಲಾಗುವದು. ಪ್ರದರ್ಶನದ ಕೆಲಸವು ಮುಗಿದನಂತರ ಕಮಿಟಿಯ ಖರ್ಚಿನಿಂದ ಅವರವರ ಒಡವೆಗಳನ್ನು ತಿರುಗಿ ಕಳಿಸುವ ವ್ಯವಸ್ಥೆ ಮಾಡಲಾಗುವದು.

ಶಂಕರಯ್ಯ ರೇವಣಸಿದ್ಧಯ್ಯಸ್ವಾಮಿ ಕಿತ್ತೂರು
ಸೆಕ್ರೆಟರಿ
ಚಿತ್ರಕಲಾ ಪ್ರದರ್ಶನ ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭಾ
ಧಾರವಾಡ

ಪ್ರಶ್ನೆಗಳಿಗೆ ಉತ್ತರವನ್ನು ಕಳುಹಿಸಿ

ಧಾರವಾಡದಲ್ಲಿ ಜರುಗುವ 11 ನೇ ಅಖಿಲ ಶ್ರೀಮದ್ವೀರಶೈವ ಮಹಾಸಭೆಯ ಜೊತೆಗೆ ವೀರಶೈವ ಶಿಕ್ಷಣ ಸಂಸ್ಥೆಗಳ ಪರಿಷತ್ತನ್ನು ನಡೆಯಿಸುವ ಯೋಜನೆಯನ್ನು ಮಾಡಿದ್ದೇವೆ. [illegible] ಅಕ್ಟೋಬರ್ [illegible] ರೊಳಗಾಗಿ ನಮಗೆ ಕಳಿಸಬೇಕೆಂದು ವಿನಂತಿ ಇದೆ.

ಶಿಕ್ಷಣ ಸಂಸ್ಥೆಗಳ ಸಮ್ಮೇಳನದ ಧ್ಯೇಯ

[illegible]

ಹುಡುಕಿ ಎಲ್ಲ ಸಂಸ್ಥೆಯ [illegible] ಗಳನ್ನು ಒಗ್ಗೂಡಿಸುವದೇ ಮುಖ್ಯ ಧ್ಯೇಯವಾಗಿರುತ್ತದೆ.

(1) ಸಂಸ್ಥೆಯ ಹೆಸರು [illegible] (2) ತಮ್ಮ ಸಂಸ್ಥೆಯ ಆರಂಭದ ತಾರೀಖು [illegible]

[illegible]

ಶಿಕ್ಷಣ ಸಂಸ್ಥೆ ಕಮಿಟಿ ವೀರಶೈವ ಮಹಾಸಭಾ ಧಾರವಾಡ.

ಪತ್ರವ್ಯವಹಾರ

[illegible] ಸಂಪಾದಕ

ದುಃಖ ಪ್ರದರ್ಶನ

[illegible]

ಕಾರ್ಯದರ್ಶಿ ಶ್ರೀ ಲಿಂಗರಾಜ ವಾಚನಾಲಯ

ಗಂಗಾವತಿಯಲ್ಲಿ [illegible]

ಈ ತಿಂಗಳ 10 1932 ನೇ [illegible] 44 ಘಂಟೆಗೆ ಯಾದಗಿರಿಯಲ್ಲಿ [illegible] ಧರ್ಮವೀರ ಶಂಕರಣ್ಣನವರ ಶ್ರೀಮತಿ [illegible]

[illegible]

ಪ್ರಿನ್ಸಿಪಾಲ ಎಸ್ ಎಸ್ ಕಾಲೇಜ

ದುಃಖಪ್ರದರ್ಶನ ಸಭೆ

[illegible] ನೆಯ ದಿವಸ ಯಾದಗಿರಿ [illegible] ಕಾಲೇಜಿನಲ್ಲಿ [illegible] ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನೆರೆದಿತ್ತು. ಆದರಲ್ಲಿ [illegible] ಠರಾವುಗಳು [illegible] ಪಾಸುಮಾಡಲ್ಪಟ್ಟವು —

(1) ಯಾದಗಿರಿ [illegible] ಧರ್ಮವೀರ ಶಂಕರಣ್ಣನವರ ಪತ್ನಿಯವರಾದ [illegible] ಬಗ್ಗೆ ಕಾಲೇಜಿನ ಪ್ರಧಾನಾಧ್ಯಾಪಕರು [illegible] ವಿದ್ಯಾರ್ಥಿಗಳು [illegible] ದುಃಖಪ್ರದರ್ಶನವನ್ನು ಮಾಡುತ್ತಾರೆ. (2) [illegible] (3) ಶ್ರೀಮತಿಯವರು ವೀರಶೈವ ಸಮಾಜದಲ್ಲಿ ವಿದ್ಯಾಭಿವೃದ್ಧಿಗಾಗಿ [illegible] ಶ್ರೀ ಪರಮಾತ್ಮನು ದಯಪಾಲಿಸಬೇಕೆಂದು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ. (4) ಶ್ರೀಮತಿಯವರು [illegible] ಅದೇ ಪ್ರಕಾರ ಅವರ ಪುತ್ರಿಯವರಾದ ಶ್ರೀಮತಿ [illegible] ಕಾಲೇಜಿನ ಅಭ್ಯುದಯದ ವಿಷಯದಲ್ಲಿ [illegible] ವಿದ್ಯಾರ್ಥಿಗಳ ವಿಷಯದಲ್ಲಿ [illegible] ಸದಾ ಇಡುವವರಾಗಬೇಕೆಂದು ಕೋರುತ್ತೇವೆ.

[illegible], ಪ್ರಿನ್ಸಿಪಾಲ ಹಿರೇಮಠ
ಶಂಕರ ಸಂಸ್ಕೃತ ಕಾಲೇಜು, ಯಾದಗಿರಿ

ಮೈಸೂರು ಪ್ರಜಾಪ್ರತಿನಿಧಿ ಸಭೆಯ ದಸರಾಧಿವೇಶನದಲ್ಲಿ ದಿವಾನ್ ಸಾಹೇಬರವರು ಅಪ್ಪಣೆಕೊಡಿಸಿದ ಭಾಷಣ

(೧೯೩೨ನೆಯ ಇಸವಿ ಅಕ್ಟೋಬರ್ [illegible])

೧ನೆಯ ಭಾಗ

ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಈ ಅಧಿವೇಶನಕ್ಕೆ ತಮ್ಮನ್ನು [illegible] ಸಂತೋಷದಿಂದ [illegible] ಸ್ವಾಗತಿಸುತ್ತೇನೆ.

ದಿವಂಗತರಾದ [illegible] ಈ ವರ್ಷದ [illegible] ಧರ್ಮಕ್ಷೇತ್ರ [illegible] ಅವಶ್ಯಕರವಾಗಿದೆ ಈ ಸಭಾಸ್ಥಳದಲ್ಲಿ ತಾವುಗಳೆಲ್ಲರೂ ನನ್ನೊಡನೆ ಭಾಗಿಗಳಾಗಬೇಕೆಂದು ನಾನು ಕೋರುತ್ತೇನೆ. ಅವರು ತಮ್ಮ ಜೀವಮಾನದ ದೀರ್ಘಕಾಲದಲ್ಲಿ ಸಂಸ್ಥಾನದ ಸೇವೆಗಾಗಿ ಮಾಡಿದ ಸಹಾಯಗಳ ವಿವರಗಳನ್ನೆಲ್ಲ ನಾನು ತಮಗೆ ಜ್ಞಾಪಿಸಬೇಕಾದುದು ಅನಾವಶ್ಯಕ. ಅವರು ಸ್ವಲ್ಪ ಮಟ್ಟಿಗೆ ಬಡತನದಿಂದಲೇ ದೊಡ್ಡ ಮನೆತನದಲ್ಲಿ ಹುಟ್ಟಿ, ಬಡವರ ಮಧ್ಯದಲ್ಲೇ ಬೆಳೆದು, ಬಡತನದ ಕಷ್ಟಗಳನ್ನು ಸ್ವಂತ ಕಂಡು ಅನುಭವಿಸಿದ್ದರು. ಆದಕಾರಣ, ಬಡವರ ತೊಂದರೆಗಳನ್ನು [illegible] ಯಾವ ಯಾವ ಸಹಾಯಗಳಾಗಬೇಕೆಂಬುದು ಅವರಿಗೆ ಚೆನ್ನಾಗಿ ಗೊತ್ತಿದ್ದಿತು. ಮುಂದೆ ಅವರು ತಮ್ಮ ಶಕ್ತಿಸಾಮರ್ಥ್ಯಗಳ ಪ್ರಭಾವದಿಂದ ಶ್ರೀಮಂತರಾಗಿ ಹೇರಳವಾಗಿ ಹಣವನ್ನು ಗಳಿಸಿ ಕೂಡಿಸಿದರು. ಬಡವರಿಗೆ ಅತ್ಯವಶ್ಯವಾಗಿ ಒದಗಬೇಕಾದ ಸಹಾಯಗಳೆಂದು ಅವರ ಮನಸ್ಸಿಗೆ ತೋರಿಬಂದ ನಾನಾ ಧರ್ಮಕಾರ್ಯಗಳಿಗೆ ಅವರು ಔದಾರ್ಯದಿಂದಲೂ ವಿವೇಚನೆಯಿಂದಲೂ ಧನಸಹಾಯ ಮಾಡಿದರು. ಹೀಗೆ ಸಹಾಯ ಮಾಡಬೇಕಾದುದು ಅತ್ಯಗತ್ಯವೆಂದು ಅವರು ಭಾವಿಸಿದ್ದ ನಾನಾ ಕಾರ್ಯಗಳಿಗೂ, ಅವರು ತಮ್ಮ ಸಂಪತ್ತಿನ ಹೆಚ್ಚು ಭಾಗವನ್ನೇ ಮುಕ್ತಹಸ್ತದಿಂದ ದಾನಮಾಡಿದರು. ಈ ಮೈಸೂರು ನಗರದಲ್ಲಿ ಜನಜೀವನದ ಎಲ್ಲಾ ಧರ್ಮಕಾರ್ಯಗಳಿಗೂ ಅವರಿಂದ ಧನಸಹಾಯವು ದೊರೆತಿದೆಯೆನ್ನಬಹುದು. ನಾನಾ ಜೀವನಪದ್ಧತಿಗಳಲ್ಲಿ ಯಾವುದೊಂದರಲ್ಲಿರುವ ಬಡವರಾದ ಮೈಸೂರು ನಗರ ನಿವಾಸಿಗಳಿಗೂ ಅವರ ದಾನಸಹಾಯವು ತಪ್ಪಿಲ್ಲ. ನಾವುಗಳೆಲ್ಲರೂ ಅವರನ್ನು ಮನಸ್ಸಿನಲ್ಲಿ ಸ್ಮರಿಸಿ ಪ್ರೀತಿಗೌರವಗಳನ್ನರ್ಪಿಸುವುದರಲ್ಲಿಯೂ, ಇವರ ವಿಯೋಗದಿಂದ ಸಂತಪ್ತರಾದ ಇವರ ಕುಟುಂಬದವರಿಗೆ ನಮ್ಮ ಮನಃಪೂರ್ವಕವಾದ ಸಹಾನುಭೂತಿಯನ್ನೂ ಅನುಕಂಪವನ್ನೂ ತಿಳಿಸುವುದರಲ್ಲಿಯೂ, ಈ ಸಭೆಯ ಸದಸ್ಯರೆಲ್ಲರೂ ನನ್ನೊಡನೆ ಭಾಗಿಗಳಾಗುವರೆಂದು ನಾನು ನಂಬಿದ್ದೇನೆ.

ಪ್ರಪಂಚದ ಸ್ಥಿತಿಗತಿಗಳು — ಈ ಅಧಿವೇಶನದಲ್ಲಿ ನಾವು ಈಗ ಸಭೆ ಸೇರಿರುವ ಸಮಯವಾದರೂ, ಎಂತಹದೆಂಬುದನ್ನು ನೋಡಿ. ಪ್ರಪಂಚದ ಇತಿಹಾಸದಲ್ಲೇ ಅತಿ ಮುಖ್ಯವಾದ ಅವಧಿಗಳಲ್ಲೊಂದೆಂಬುದಾಗಿ ಎಣಿಸಲ್ಪಟ್ಟು ಮುಂದೆ ಎಂದೆಂದಿಗೂ ನೆನಪಿನಲ್ಲಿ ನಿಲ್ಲುವಂತಹುದಾದ ಅವಧಿಗೆ ಸೇರಿದಾಗಿರುವ ಸಮಯದಲ್ಲಿ ಈ ಅಧಿವೇಶನವು ನಡೆಯುತ್ತಿದೆ. ಕಳೆದ ವರುಷದಲ್ಲಿ ನಾವು, ಪ್ರಪಂಚವೇ ಘೋರವಾದುದೊಂದು ಆರ್ಥಿಕ ವಿಪತ್ತಿಗೆ ಗ್ರಾಸವಾಗುವುದೋ — ಎಂದು ತೋರುತ್ತಿದ್ದ ದುರವಸ್ಥೆಯ ಪರಿಸ್ಥಿತಿಯಲ್ಲಿದ್ದೆವು. ಜೀವನಕ್ಕೆ ಬೇಕಾದ ಪ್ರತಿಯೊಂದು ಪದಾರ್ಥವೂ, ಅವಕ್ಕೆ ಗಿರಾಕಿಯಿದ್ದವರ ಕೈಗಳಿಗೂ ಸೇರದ ಹೆಚ್ಚಿನ ಪ್ರಮಾಣದಲ್ಲಿ ಸಿದ್ಧಗೊಳಿಸಲ್ಪಟ್ಟಿದ್ದಿತು. ಆದರೆ, ಎಲ್ಲ ವಸ್ತುಗಳೂ ಸಮೃದ್ಧವಾಗಿದ್ದರೂ, ಪ್ರಪಂಚದಲ್ಲೆಲ್ಲ ಅನೇಕ ಕೋಟಿ ಜನರು ಹೊಟ್ಟೆಗಿಲ್ಲದೆ ಬಾಧೆಪಡುವ ವಿಚಿತ್ರವಾದ ಪರಿಸ್ಥಿತಿಯೊದಗಿದ್ದಿತು. ಎಲ್ಲಿ ನೋಡಿದರೂ ಹಣಕಾಸಿನ ಮುಗ್ಗಟ್ಟೇ. ವ್ಯಾಪಾರ ಸಂಸ್ಥೆಗಳಲ್ಲಿ ದಿವಾಳಿಗಳೆಂಬ [illegible] ನಡೆಯುವುದು ಸಾಮಾನ್ಯವಾಗಿದ್ದಿತು. ಅನೇಕರು ತಾವು ಕೊಡಬೇಕಾದ ಸಾಲಗಳೇ ಮುಂತಾದ ಮೊಬಲಗುಗಳನ್ನು ತೀರಿಸಲು ಅಸಮರ್ಥರಾದರು. ವ್ಯಕ್ತಿಗಳ ಮಾತು ದೂರವಿರಲಿ, ಕೆಲವು ಸರ್ಕಾರಗಳಿಗೂ ಇದೇ ಸ್ಥಿತಿಯೊದಗಿತು. ಕೆಲವು ಸರ್ಕಾರಗಳವರು ತಾವು ಇತರ ಸರ್ಕಾರಗಳಿಗೆ ಕೊಡಬೇಕಾದ ಹಣವನ್ನು ಕೊಡದೆ ನಿರಾಕರಿಸುವವರಾಗಿದ್ದಾರೆಂಬ ವದಂತಿಯೂ ಕೂಡ ಎಲ್ಲೆಲ್ಲಿಯೂ ಹರಡಿತ್ತು.

ಕಳೆದ ಕೆಲವು ತಿಂಗಳುಗಳಿಂದ ಉಂಟಾಗಿರುವ ಪರಿಸ್ಥಿತಿಯನ್ನು ನೋಡಿದರೆ, ವಿದ್ಯಮಾನಗಳು ಸರ್ವಸಾಧಾರಣವಾದ ಸ್ಥಿರಸ್ಥಿತಿಗೆ ಬರುವುದರ ಸೂಚನೆಯು ತಲೆದೋರುತ್ತಿದೆಯೆಂದು ಹೇಳಬಹುದಾಗಿದೆ. ಬ್ರಿಟಿಷ್ ಸರ್ಕಾರದವರೂ ಮತ್ತು ಫ್ರೆಂಚ್ ಸರ್ಕಾರದವರೂ ಭಾರಿ ಪರಿವರ್ತನದ ಏರ್ಪಾಡುಗಳ ಮೂಲಕ ಬಡ್ಡಿಯಲ್ಲಿ ಅನೇಕ ಕೋಟಿ ರೂ ತಮಗೆ ಮಿಗುವಂತೆ ಏರ್ಪಾಡುಗಳನ್ನು ಮಾಡಿಕೊಂಡಿದ್ದಾರೆ. ಇಂಡಿಯಾ ಸರ್ಕಾರದವರೂ ಬಹಳ ಕಡಿಮೆ ಬಡ್ಡಿಯ ದರದಲ್ಲಿ ಹೊಸ ಸಾಲ ಒಂದನ್ನು ಎತ್ತಿದ್ದಾರೆ. ಹಣವನ್ನು ಜೀವನ ಇಡತಕ್ಕ ಜನರಿಗೆ ತಮ್ಮ ಹಣಕ್ಕೆ ಲೋಪ ಬರುವುದಿಲ್ಲವೆಂಬುದಾಗಿ ಮತ್ತೆ ಪೂರ್ವದಂತೆಯೇ ನಂಬಿಕೆಯುಂಟಾಗುತ್ತಿದೆ. ಧಾರಣೆಗಳು ಏರುವ ಸೂಚನೆಯೂ ಕಂಡು ಬರುತ್ತಿದೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಜನಾಂಗಗಳೆಲ್ಲವೂ ಒಟ್ಟಾಗಿ ಸೇರಿರುತ್ತವೆ. ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸೇರಿದ ನಾನಾ ಭಾಗಗಳ ಪ್ರತಿನಿಧಿಗಳೂ ಅಟ್ಟಾವಾ ನಗರದ ಮಹಾ ಸಮ್ಮೇಳನವನ್ನು ನಡೆಯಿಸಿರುವುದನ್ನೂ ಅದರ ಫಲಿತಾಂಶಗಳನ್ನೂ ಇದಕ್ಕೆ ನಿದರ್ಶನವಾಗಿ ಹೇಳಬಹುದಾಗಿದೆ. ಜಿನೀವಾ ಪಟ್ಟಣದಲ್ಲಿ ಇತರ ಜನಾಂಗಗಳೊಡನೆ ನಡೆಯುವುದಾಗಿರುವ ಇದೇ ಬಗೆಯ ಸಮ್ಮೇಳನದಿಂದ ಅನೇಕ ಮಹತ್ತರವಾದ ಪ್ರಯೋಜನಗಳು ಲಭಿಸಬಹುದೆಂದು ನಾವು ನಿರೀಕ್ಷಿಸಿದ್ದೇವೆ.

ಸಂಯುಕ್ತ ರಾಜ್ಯಾಂಗ ವ್ಯವಸ್ಥೆ — ಒಟ್ಟು ಪ್ರಪಂಚಕ್ಕೇ ಒದಗಿದ ಈ ದುರವಸ್ಥೆಯು ನಮಗೆ ಕಲಿಸಿರುವ ಉದಾತ್ತ ತತ್ವವೊಂದಿದೆ. ಅದು ಯಾವುದೆಂಬುದನ್ನು ನಾನು ತಮ್ಮೆಲ್ಲರಿಗೂ ಹೊಸದಾಗಿ ತಿಳಿಸಬೇಕಾದ ಅವಶ್ಯಕತೆಯೇ ಇಲ್ಲ. ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯು ಏರ್ಪಡುವುದೊಂದೇ ಈ ಬಗೆಯ ದುರವಸ್ಥೆಗಳ ಪರಿಹಾರಕ್ಕೆ ದಿವ್ಯೌಷಧವೆಂದು ಒಂದೇ ವಾಕ್ಯದಲ್ಲಿ ಈ ತತ್ವವನ್ನು ತಿಳಿಸಬಹುದಾಗಿದೆ. ಅತಿ ಶೀಘ್ರವಾಗಿ ಪ್ರಯಾಣಮಾಡುವ ಸಾಧನಗಳು ಏರ್ಪಟ್ಟಿರುವ ಕಾರಣ, ದೂರದೇಶವೆಂಬ ಪದವೇ ಈಗ ಮಾಯವಾಗುತ್ತಿದೆ. ಪ್ರಪಂಚದ ವ್ಯವಹಾರಗಳಲ್ಲಿ ಸಮಾನ ಧರ್ಮಗಳುಳ್ಳಂತಿರುವ [illegible] ಯುರೋಪಿನ [illegible] ದೇಶಗಳೂ ಒಟ್ಟುಗೂಡಿ ಸಂಯುಕ್ತ ಸಂಸ್ಥೆಗಳಾಗಿ [illegible] ವ್ಯವಸ್ಥೆಯನ್ನು ಸೂಚಿಸಿರುವುದೂ, ಫ್ರೆಂಚ್ ಸರ್ಕಾರದ [illegible] ಹಿಂದೆ ಈ ವಿಷಯವನ್ನೇ [illegible] ಗ್ರಂಥವನ್ನು ಬರೆದಿರುವುದು [illegible] ತೋರುತ್ತದೆ. ಈಗ ನಡೆಯುತ್ತಿರುವ ಅನೇಕ ವ್ಯವಹಾರ ಸಂಬಂಧಗಳೂ ಈಗಾಗಲೇ ಸಂಯುಕ್ತ ವ್ಯವಸ್ಥೆಯ ರೂಪವನ್ನು ತಾಳುತ್ತಿವೆ ಎಂಬುದನ್ನು ಅವರು ಆ ಗ್ರಂಥದಲ್ಲಿ ತೋರಿಸಿದ್ದಾರೆ. ಇದೀಗ ನನ್ನ ಮನಸ್ಸಿಗೆ ಆ ಗ್ರಂಥದ ಅದ್ಭುತ ಲಕ್ಷಣವೆಂದು ತೋರುತ್ತದೆ. ಕೆಲವು ಅಂಶಗಳನ್ನು ನಿದರ್ಶನವಾಗಿ ತೆಗೆದುಕೊಂಡು ಅವರು ಈ ವಿಚಾರವನ್ನು ಬಹು ಚೆನ್ನಾಗಿ ತೋರ್ಪಡಿಸಿದ್ದಾರೆ. ಆ ರೀತಿ ಅವರು ಉದಹರಿಸಿರುವ ಅಂಶಗಳು ಯಾವುವೆಂದರೆ— ಅಂಚೆಯ ವ್ಯವಸ್ಥೆ, ರೈಲುಗಳ ಶಿಸ್ತು, 'ಟ್ಯಾರಿಫ್' ಎಂಬ [illegible] ಸುಂಕಗಳನ್ನು ಬಿಟ್ಟು ಇತರ ಸುಂಕದ ತೆರಿಗೆಗಳ ಶಿಸ್ತುಗಳ ಏಕೀಕರಣ, [illegible] ಸಹಾಯವಿಲ್ಲದೆ ಮಾರ್ಗಗಳೇ ಮುಂತಾದವುಗಳನ್ನು ಗುರುತಿಸಿ ಪ್ರಚಾರ ಮಾಡುವುದರ ಕ್ರಮ, ವಿಮಾನಗಳ ಸಂಚಾರಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ [illegible] ಮಾಡುವುದಕ್ಕಾಗಿ ನಡೆದಿರುವ ಕಾರ್ಯಕಲಾಪಗಳು, ಕೂಲಿಗಾರರಿಗೂ, ಒಡೆಯರೊಳಗೂ, ಹಣದ ಆವಶ್ಯಕತೆ ಮತ್ತು ಸಾಮಾನ್ಯ ಆರ್ಥಿಕ ವಿಚಾರಗಳಿಗೂ ಸಂಬಂಧಪಟ್ಟ ವಿಚಾರಗಳ ನಾನಾ ಶಿಸ್ತುಗಳ ಏಕೀಕರಣವು ನಡೆಯಬೇಕೆಂಬುದಾಗಿ ಇದರಲ್ಲಿ ಆಸಕ್ತಿಯುಂಟಾಗಿ ಅದಕ್ಕೆ ಸಾಧನವಾಗಿ ಕೇಳಿ ನಡೆಯುವ ಸೂಚನೆಗಳು ತಲೆದೋರಿರುವುದು — ಇವುಗಳೇ ಅವರು ನಿದರ್ಶನವಾಗಿ ತೆಗೆದುಕೊಂಡಿರುವ ಆ ಅಂಶಗಳು. ಯೂರೋಪು ಖಂಡದ ನಾನಾ ದೇಶಗಳಲ್ಲಿಯೂ ಹರಿಯುವ ಡ್ಯಾನ್ಯೂಬ್ ನದಿಯ ನೀರನ್ನು ಉಪಯೋಗಿಸಿಕೊಳ್ಳುವುದೇ ಮುಂತಾದ ವಿಷಯಗಳಲ್ಲಿ ನಾನಾ ದೇಶಗಳವರೂ ಕಾರ್ಯತಃ ಸಂಯುಕ್ತ ವ್ಯವಸ್ಥೆಗಳ ರೂಪದ ಏರ್ಪಾಡುಗಳನ್ನು ಮಾಡಿಕೊಂಡಿರುವುದನ್ನು ಅವರು ತಮ್ಮ ಪುಸ್ತಕದಲ್ಲಿ ನಿದರ್ಶನವಾಗಿ ಸೂಚಿಸಿದ್ದಾರೆ. ಯೂರೋಪು ಖಂಡದ ನಾನಾ ದೇಶಗಳಲ್ಲಿಯೂ ಬಗೆಬಗೆಯ ಭಾರಿ ಕೈಗಾರಿಕೆಗಳು ನಡೆಯುತ್ತಿವೆಯಷ್ಟೆ. ಒಂದೇ ಕೈಗಾರಿಕೆಯು ಅನೇಕ ದೇಶಗಳಲ್ಲಿ ನಡೆಯುತ್ತಿದ್ದರೆ ಆ ಕೈಗಾರಿಕೆಯ ಕಾರ್ಖಾನೆಗಳವರಲ್ಲಿ ಸ್ಪರ್ಧೆಯು ಹುಟ್ಟಿ ಅನರ್ಥವಾಗುವ ಸಂಭವವುಂಟು. ಅದಕ್ಕೆ ಅವಕಾಶಕೊಡದೆ ಅವರುಗಳು ತಮ್ಮೆಲ್ಲರ ಯೋಗಕ್ಷೇಮವನ್ನು ಕಾಪಾಡಿಕೊಳ್ಳುವುದಕ್ಕಾಗಿ ವ್ಯವಸ್ಥೆಯ ಒಪ್ಪಂದಗಳನ್ನು ಮಾಡಿಕೊಂಡು [illegible] ಪ್ರತಿಯೊಂದು ಭಾರಿ ಕೈಗಾರಿಕೆಯ ಸಂಬಂಧದಲ್ಲಿಯೂ ಈಗ ಈ ರೀತಿ 'ಕಾರ್ಟೆಲ್' ಎಂಬ ಒಪ್ಪಂದದ ವ್ಯವಸ್ಥೆಯು ಏರ್ಪಟ್ಟಿದೆ. ಈ ರೀತಿ ಒಪ್ಪಂದದ ವ್ಯವಸ್ಥೆಗಳು ನಡೆದಿರುವುದನ್ನು ನೋಡಿದರೆ, ಸಂಯುಕ್ತ ವ್ಯವಸ್ಥೆಯ ಮಾರ್ಗದಲ್ಲಿ ಒಂದೆರಡು ಮಜಲುಗಳ ಪ್ರಯಾಣವು ಸಾಗಿದಂತಾಗಿದೆಯೆನ್ನಬಹುದೆಂದೂ [illegible] ತಮ್ಮ ಗ್ರಂಥದಲ್ಲಿ ಹೇಳಿದ್ದಾರೆ.

[illegible] ಬರೆದಿರುವ ಪುಸ್ತಕದಲ್ಲಿರುವ [illegible] ವಿಶೇಷವಾಗಿ ಈಗ ಚರ್ಚೆಯಲ್ಲಿರುವ ಅನೇಕ ವಿಚಾರಗಳಿಗೂ ಸಹ ಅನ್ವಯಿಸತಕ್ಕವಾಗಿವೆ. ಒಂದು ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯು ಏರ್ಪಡುವುದಕ್ಕೆ ಬೇಕಾದ ಅನೇಕ ಗುಣಲಕ್ಷಣಗಳೂ ಸಹ, ಈಗ ಇಂಡಿಯಾ ದೇಶದಲ್ಲಿ ಕಾರ್ಯತಃ ಇದ್ದೇ ಇವೆ. ಆದಕಾರಣ ಅವಕ್ಕೊಂದು ರೂಪವನ್ನು ಕೊಟ್ಟು ಸ್ಪಷ್ಟಪಡಿಸಿ [illegible] ಪೂರ್ಣ ಸಂಯುಕ್ತ ವ್ಯವಸ್ಥೆಯನ್ನೇರ್ಪಡಿಸಬೇಕಾದುದು ಆರ್ಥಿಕ ಪ್ರಗತಿ ನಿಯಮಗಳ ದೃಷ್ಟಿಯಿಂದ [illegible] ಅತ್ಯಾವಶ್ಯಕವಾಗಿ ಪರಿಣಮಿಸಿದೆ.

[illegible] ಮತ್ತು ಡೇವಿಡ್ಸನ್ ಸಮಿತಿಗಳು — ಆದಕಾರಣ, ಇತ್ತಲಾಗಿ ಇಂಗ್ಲೆಂಡಿನಲ್ಲಿ ಮತ್ತೊಂದು 'ರೌಂಡ್ ಟೇಬಲ್' ಸಮ್ಮೇಳನವು ನಡೆಯುವುದೆಂಬುದಾಗಿ ಬ್ರಿಟಿಷ್ ಸರ್ಕಾರದವರು ತಿಳಿಸಿರುವ ವಾರ್ತೆಯನ್ನು ಕೇಳಿ ನಾವು ಸಂತೋಷಪಡಲೇಬೇಕಾಗಿದೆ. ಆದಾಗ್ಯೂ ಈ ಟೇಬಲಿಗೆ ಪೂರ್ವಭಾವಿಯಾಗಿ ಕೆಲವು ಅಂಶಗಳನ್ನು ಇಂಡಿಯಾ ದೇಶದಲ್ಲಿ ವಿಚಾರಮಾಡಿ ವರದಿಗಳನ್ನು ಒಪ್ಪಿಸುವುದಕ್ಕಾಗಿ ನೇಮಕವಾಗಿದ್ದ ೩ ಸಮಿತಿಗಳವರೂ ಒಪ್ಪಿಸಿರುವ ವರದಿಗಳನ್ನು ನೋಡಿ ನಮಗೆ ಆತಂಕವುಂಟಾಗಿದೆಯೆಂಬುದನ್ನು ನಾವು ಮರೆಯುವಂತಿಲ್ಲ. ಈ ಸಮಿತಿಗಳನ್ನು ನೇಮಕಮಾಡುವಲ್ಲಿ ಸಮಿತಿಗಳವರ ಪರಿಶೀಲನೆಗೆ ವಹಿಸಿದ್ದ ವಿಷಯಗಳೇ ಪ್ರಥಮತಃ ನಮ್ಮ ಆತಂಕಕ್ಕೆ ಕಾರಣಗಳಾಗಿವೆಯೆಂದು ಹೇಳಬೇಕಾಗಿದೆ. ಸಂಯುಕ್ತ ರಾಜ್ಯಾಂಗ [illegible] ಕ್ಕೆ ಮುಂಚಿನ ಸಾಲಗಳ ವಿಚಾರದಲ್ಲಿ ಯಾವ ಕ್ರಮವನ್ನನುಸರಿಸಬೇಕೆಂಬ ವಿಷಯ, ತೆರಿಗೆಗಳನ್ನು ವಿಧಾಯಕಮಾಡುವ ಅಧಿಕಾರಗಳು, ಹುಟ್ಟುವಳಿಯು ಬರುವ ಹೊಸ ಬಾಬುಗಳ ವಿಷಯ, ಪ್ರಾಂತಿಕವಾಗಿ ತೆರಿಗೆಗಳನ್ನು ವಿಧಿಸುವ ನಿಯಮ, ಸಾಲಗಳನ್ನು ಮಾಡುವ ಅಧಿಕಾರಗಳು, ಇವುಗಳನ್ನೆಲ್ಲಾ ಕುರಿತ ವಿಚಾರ ಮಾಡಬೇಕೆಂಬುದಾಗಿ [illegible] ಅಧಿಕಾರವನ್ನು [illegible] ಸಮಿತಿಯವರಿಗೆ ([illegible]) ಬ್ರಿಟಿಷ್ ಸರ್ಕಾರದವರು ವಹಿಸಿದ್ದರು. ಆ ಸಮಿತಿಯವರು ಹೀಗೆ ಮಾಡುವುದರಲ್ಲಿ ಸಂಯುಕ್ತ ಸರ್ಕಾರಕ್ಕೂ ಮತ್ತು ಪ್ರಾಂತಿಕ ಸರ್ಕಾರಗಳಿಗೂ ಪರಸ್ಪರವಾಗಿ ಸಂಬಂಧಪಡುವಷ್ಟು ಮಟ್ಟಿನ ವ್ಯವಹಾರದ ವಿಚಾರಗಳಲ್ಲಿ ಮಾತ್ರವೇ ಪ್ರವರ್ತಿಸಿ ವರದಿಯನ್ನೊಪ್ಪಿಸಬೇಕೆಂದು ಗೊತ್ತಾಗಿದ್ದಿತು. ಎಂದರೆ, [illegible] ಸಂಸ್ಥಾನಗಳ ವಿಚಾರವನ್ನೇ ಪರ್ಯಾಲೋಚಿಸದೆ ಕೇವಲ ಬ್ರಿಟಿಷ್ ಇಂಡಿಯಾ ಪ್ರಾಂತಗಳಿಗೂ ಸಂಯುಕ್ತ ಸರ್ಕಾರಕ್ಕೂ ಮಾತ್ರವೇ ಸಂಬಂಧಪಟ್ಟ ಹಾಗೆ ಹಣದ ಆದಾಯವು ಹೇಗೆ ನಡೆಯಬೇಕೆಂಬ ಶಿಸ್ತನ್ನು ಏರ್ಪಡಿಸಿ ವರದಿಮಾಡಿರುವರು. ಇತ್ತ ಡೇವಿಡ್ಸನ್ ಸಮಿತಿಯವರಿಗೆ [illegible] ಯಾವುದೇ ಒಂದು ಬಗೆಯ [illegible] ಸಾಧನಗಳಿಗೆ [illegible] ಕೆಲವು ವಿದ್ಯಮಾನಗಳ ದೆಸೆಯಿಂದ ಯಾವ ವಿಧದ ಪರಿಣಾಮವುಂಟಾಗುವುದೆಂಬುದನ್ನು ಪರಿಶೀಲಿಸಬೇಕಾದುದು ಗೊತ್ತಾದುದರಿಂದ, ಮತ್ತೊಂದು ಅನ್ಯಾಯಕ್ಕೆ ಕಾರಣವಾಯಿತು. ಈ ಸಮಿತಿಯವರು ಹಾಗೆ ಮಾಡುವಾಗ [illegible] ಸಂಯುಕ್ತ ವ್ಯವಸ್ಥೆಯು [illegible] ಗಳು, ಅಥವಾ ಸಂಯುಕ್ತ ವ್ಯವಸ್ಥೆಯ ಸಂಬಂಧದಲ್ಲಿ ಇತರ ಮುಖ್ಯ [illegible] ನಿರ್ದಿಷ್ಟವಾಗಿ ಅವರು ಗಮನಿಸಲಿಲ್ಲ. ಅವರು ಅಂತಹ ವ್ಯವಸ್ಥೆಯನ್ನು ಪರಿಗಣಿಸದೆ ಏನೋ ಒಂದು ವಿಧವಾಗಿ ತಮ್ಮ ಸಲಹೆಗಳನ್ನು ಹೇಳಿ, ಸಂಯುಕ್ತ ಸರ್ಕಾರಕ್ಕೆ ಸೇರಿದ ಸರ್ಕಾರಗಳಿಂದ [illegible] ಕೆಲವು ಬಾಬುಗಳಲ್ಲಿ ಹಣವು ಹೇಗೆ ಹೇಗೆ ಸಂದಾಯವಾಗಬೇಕೆಂಬುದನ್ನು ಸೂಚಿಸಿದರು. ಆದರೆ, ಹೀಗೆ ಹಣ ಸಂದಾಯವಾಗಬೇಕೆಂಬ ಸಲಹೆಗಳಿಗೂ, ಸರ್ವೋತ್ಕೃಷ್ಟವಾದ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ಏರ್ಪಾಡಿಗೂ ಸಂಬಂಧವೇ ಇಲ್ಲ. ೧೯೧೯ನೆಯ ಇಸವಿಯಲ್ಲಿ ಬ್ರಿಟಿಷ್ ಇಂಡಿಯಾದ ರಾಜಕೀಯ ಸುಧಾರಣೆಗಳ ಏರ್ಪಾಡೆಂದು ೧ [illegible] ಏರ್ಪಟ್ಟಿತಷ್ಟೆ. ಆ ಏರ್ಪಾಡಿನಲ್ಲಿದ್ದ ಪ್ರಬಲ ದೋಷಗಳೇ ಈ ಸಮಿತಿಯವರ ಸಲಹೆಗಳಿಂದಲೂ ಮತ್ತೆ ಒದಗುವಂತಿವೆ. ಈ ಸಮಿತಿಯವರ ಸಲಹೆಗಳಿಂದ ಉಂಟಾಗುವ ಫಲವೆಂದರೆ ಅಷ್ಟು ಮಾತ್ರವೇ ಸರಿ. ೧೯೧೯ನೆಯ ಇಸವಿಯ ಸುಧಾರಣೆಗಳ ಏರ್ಪಾಡನ್ನು ಯಾರೊಬ್ಬರೂ ಅನುಮೋದಿಸದೆ ಎಲ್ಲರೂ ಅದರಲ್ಲಿದ್ದ ನ್ಯೂನತೆಗಳನ್ನು ಉದ್ಘಾಟಿಸಿದ್ದರು. ಅದರಿಂದ ರಾಜಕೀಯ ವ್ಯವಸ್ಥೆಯ ಅಂಗವಾದ ೧ ಭಾಗದವರನ್ನು ಮತ್ತೊಂದು ಭಾಗದವರ ಮೇಲೆ ಎತ್ತಿಕಟ್ಟಿದಂತಾಗುವುದಕ್ಕೆ ಅವಕಾಶವಿದ್ದಿತು. ಅದೂ ಅಲ್ಲದೆ, ಎಲ್ಲ ಭಾಗಗಳವರೂ ಕೇಂದ್ರ ಸರ್ಕಾರದಲ್ಲಿ ಭಿನ್ನಾಭಿಪ್ರಾಯದಿಂದ ವರ್ತಿಸುವುದಕ್ಕೂ ಅವಕಾಶವಿದ್ದಿತು. ಈಗಿನ ಸಲಹೆಗಳ ಪರಿಣಾಮವೂ ಒಟ್ಟಿನಲ್ಲಿ ಅದೇ ಬಗೆಯದಾಗಿ ಕೇವಲ ಅಸಮಂಜಸವಾದ ಸಂಸ್ಥಿತಿಯುಂಟಾಗುವುದಕ್ಕೆ ಕಾರಣವಾಗುತ್ತದೆ.

ಈ ಎರಡು ಸಮಿತಿಗಳ ವರದಿಗಳಲ್ಲಿಯೂ ಇರುವ ಸಲಹೆಗಳನ್ನನುಸರಿಸಿ ಕೆಲಸಮಾಡಲು ಉಪಕ್ರಮಿಸಿದ್ದಾದರೆ ಮೇಲೆ ಹೇಳಿರುವ ಪರಿಣಾಮ ಫಲಗಳೇ ಪ್ರಾಪ್ತವಾದಾವೆಂಬ ದೊಡ್ಡ ಭಯವಿದೆ. ಈ ಸಲಹೆಗಳು ಮೈಸೂರು ಸಂಸ್ಥಾನದ ವಿಷಯದಲ್ಲಿ ಹೇಗೆ ಪರಿಣಾಮವನ್ನುಂಟುಮಾಡುತ್ತವೆಂಬುದನ್ನು ಕುರಿತು ಇನ್ನು ಸಂಕ್ಷೇಪವಾಗಿ ಕೆಲವು ಅಂಶಗಳನ್ನು ತಿಳಿಸುತ್ತೇನೆ.

ಪೊಗದಿ — ಡೇವಿಡ್ಸನ್ ಸಮಿತಿಯವರು ಒಪ್ಪಿಸಿರುವ ವರದಿಯ ಕೆಲವು ಭಾಗಗಳನ್ನು ಓದಿದರೆ, ನಾನಾ ಸಂಸ್ಥಾನಗಳವರೂ ಕೊಡುತ್ತಿರುವ ಪೊಗದಿಯನ್ನು ತೆಗೆದುಹಾಕಬೇಕೆಂಬ ವಿಚಾರವನ್ನು ಅವರು ಅತ್ಯಂತ ಸಮಂಜಸವಾಗಿಯೂ, ಸ್ಪಷ್ಟವಾಗಿಯೂ ಪ್ರತಿಪಾದಿಸಿ ನಿವೇದಿಸಿರುವುದು ವ್ಯಕ್ತವಾಗುತ್ತದೆ. ಇದನ್ನು ಎಲ್ಲರೂ ಒಪ್ಪಲೇಬೇಕು. ಕೆಲವು ಸಂಗತಿಗಳೆಲ್ಲವನ್ನೂ ಸಮಿತಿಯವರು ಒಪ್ಪಿಕೊಂಡು ನ್ಯಾಯವೆಂದು ಅಂಗೀಕರಿಸಿದ್ದಾರೆ. ಪೊಗದಿಯನ್ನು ಗೊತ್ತುಮಾಡುವುದರಲ್ಲಿ ಒಂದು ಸ್ಪಷ್ಟವಾದ ನಿಯಮವಿಲ್ಲದೆ ಮನಸ್ಸಿಗೆ ಬಂದಂತೆ ಪೊಗದಿಯು ವಿಧಾಯಕವಾಗಿದೆಯೆಂದೂ, ಕೆಲವು ಸಂಸ್ಥಾನಗಳಿಂದ ವಸೂಲಾಗುವ ಪೊಗದಿಯು ಬಹಳ ಹೆಚ್ಚಾಗಿದೆಯೆಂದೂ, ಅನೇಕ ಸಂಸ್ಥಾನಗಳವರಿಂದ ಪೊಗದಿಯೇನೂ ಬರುತ್ತಿಲ್ಲವೆಂದೂ ಸಮಿತಿಯವರು ಸೂಚಿಸಿದ್ದಾರೆ. ಅಲ್ಲದೆ, ಕೆಲವು ಸಂಸ್ಥಾನಗಳು ಮಾತ್ರವೇ ಪೊಗದಿಯನ್ನು ಕೊಡುತ್ತಿರುವುದನ್ನೂ, ಪೊಗದಿಯನ್ನು ಕೊಡುತ್ತಿರುವ ಸಂಸ್ಥಾನಗಳಲ್ಲಿ ಕೂಡ ಪೊಗದಿಯ ಮೊಬಲಗಿನ ವಿಚಾರದಲ್ಲಿ ಅವುಗಳಿಗೆ ಪರಸ್ಪರ ವ್ಯತ್ಯಾಸವಿರುವುದನ್ನೂ ನೋಡಿದರೆ, ಪೊಗದಿಯು ಒಂದು ಕಾಲದಲ್ಲಿ ಆಕಸ್ಮಿಕವಾಗಿ ಒದಗಿದ ಚಾರಿತ್ರಿಕ ಘಟನೆಗಳ ಸನ್ನಿವೇಶ ಪರಂಪರೆಗಳನ್ನು ಅನುಸರಿಸಿಕೊಂಡುದರಿಂದಲೇ ಮುಖ್ಯವಾಗಿ ಈ ರೀತಿ ಹೆಚ್ಚು ಕಡಿಮೆಗಳನ್ನು ಮಾಡುವುದಕ್ಕೆ ಕಾರಣವಾಯಿತೆಂದೂ ಸಮಿತಿಯವರು ಮನಗಂಡಿದ್ದಾರೆ. ಸಂಯುಕ್ತ ರಾಜ್ಯಾಂಗ ವ್ಯವಸ್ಥೆಗೆ ಸಂಸ್ಥಾನಗಳು ಸೇರಿದಮೇಲೆ, ಅವುಗಳು ಅದೇ ವ್ಯವಸ್ಥೆಗೆ ಸೇರಿರುವ ಇತರ ಪ್ರಾಂತಗಳು ಮುಂತಾದ ಘಟಕಗಳ ಪ್ರಯೋಜನಕ್ಕಾಗಿ ಈ ರೀತಿ ಪೊಗದಿಯನ್ನು ಕೊಡುತ್ತಲೇ ಇರಬೇಕೆಂಬುದು ಸಂಯುಕ್ತ ರಾಜ್ಯಾಂಗ ವ್ಯವಸ್ಥಾಕ್ರಮಕ್ಕೇ ಸಮಂಜಸವಾದುದಲ್ಲವೆಂದೂ, ಆದಕಾರಣ ಈಗ ಪೊಗದಿಯನ್ನು ಕೊಡುತ್ತಿರುವ ಸಂಸ್ಥಾನಗಳವರು ಸಂಯುಕ್ತ ರಾಜ್ಯಕ್ಕೆ ಅಂಗವಾಗಿ ಸೇರಿದ ಮೇಲೆ, ತಾವು ಪರೋಕ್ಷವಾದ ತೆರಿಗೆಯ ರೂಪದಲ್ಲಿ ಇತರರು ಕೊಡುವಂತೆಯೇ ತಮ್ಮ ಪಾಲಿನ ಮೊಬಲಗುಗಳನ್ನು ಸಲ್ಲಿಸುತ್ತಿರುವುದಲ್ಲದೆ ಅದರ ಜೊತೆಗೆ ಈ ಪ್ರತ್ಯೇಕವಾದ ಪೊಗದಿಯ ಮೊಬಲಗನ್ನೂ ಕೊಡಬೇಕೆನ್ನುವುದಕ್ಕೆ ಕಾರಣವಿಲ್ಲವೆಂಬುದಾಗಿ ಆ ಸಂಸ್ಥಾನಗಳವರು ಹೇಳುವುದು ನ್ಯಾಯವೆಂದೂ, ಅವರು ಹಾಗೆ ಹೇಳಿಯೂ ಹೇಳಬಹುದೆಂದೂ ಸರ್ ಡೇವಿಡ್ಸನ್ ಸಮಿತಿಯವರು ತಿಳಿಸಿದ್ದಾರೆ.

ಒಂದು ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ಏರ್ಪಾಡಿನಲ್ಲಿ ಪೊಗದಿಗೆ ಅವಕಾಶವಿಲ್ಲವೆಂದೂ, ಮತ್ತು ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯು ಏರ್ಪಟ್ಟಕೂಡಲೆ ಪೊಗದಿಯು ತೊಲಗಬೇಕೆಂದೂ, ಸಮಿತಿಯವರು ಯುಕ್ತವಾದ ತೀರ್ಮಾನಕ್ಕೇ ಬಂದಿದ್ದಾರೆ. ಆದರೆ, ಪೊಗದಿಗಳನ್ನು ರದ್ದು ಮಾಡುವ ವಿಚಾರದಲ್ಲಿ ಇಷ್ಟನ್ನೆಲ್ಲಾ ಹೇಳಿದ್ದಾಗ್ಯೂ, ಪೊಗದಿಯು ಯಾವಾಗ ಮತ್ತು ಹೇಗೆ ಹೋಗಬೇಕೆಂಬ ವಿಚಾರದಲ್ಲಿ ಮಾತ್ರ, ಸಮಿತಿಯವರು ಸಮಂಜಸವಲ್ಲದ ಸಲಹೆಗಳನ್ನು ಮಾಡಿರುವುದು ಆಶ್ಚರ್ಯಕರವಾಗಿದೆ. ಒಂದು ಸಂಸ್ಥಾನದವರು ಕೊಡುತ್ತಿರುವ ಪೊಗದಿಯ ಹಣದಲ್ಲಿ ಆ ಸಂಸ್ಥಾನದ [illegible] ಮತ್ತು [illegible] ಮೊಬಲಗಿಗೆ ಮೀರಿರುವ ಭಾಗವನ್ನು ಮಾತ್ರ ಕೂಡಲೇ ವಜಾಮಾಡಬೇಕೆಂದೂ, ಮಿಕ್ಕ ಮೊಬಲಗನ್ನು ಕಾಲಕ್ರಮೇಣ ಇಪ್ಪತ್ತು ವರುಷಗಳವರೆಗೂ ಹೋಗಬಹುದಾದ ಅವಧಿಯಲ್ಲಿ ವಜಾಮಾಡಬೇಕೆಂದೂ, ಈ ಸಮಿತಿಯವರು ಸೂಚನೆ ಮಾಡಿದ್ದಾರೆ. ಇದೂ ಅಲ್ಲದೆ ಕೆಲವು ಸಂಸ್ಥಾನಗಳವರು ಪೊಗದಿಯನ್ನೇ ಕೊಡಬೇಕಾದುದಿಲ್ಲದೆ ಅನುಭವಿಸುತ್ತಿರುವ ವಿನಾಯಿತಿಗಳ ಮತ್ತು ಹಣದ ರೂಪದ ಮೌಲ್ಯವನ್ನು ಲೆಕ್ಕ [illegible] ಎಂದೂ [illegible]

ಮಕ್ಕಳಿದ್ದರೆ ಮನೆ ಚಂದ.

ಮಕ್ಕಳಿಲ್ಲೆಂದು | ಚಿಂತಿಸಬೇಡಿ

ಬಂಜೆತನದಿಂದ ಮುಕ್ತರಾಗುವಿರಿ

ಗರ್ಭಧಾರಣಾ ಸಂಜೀವಿನಿ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಮುಟ್ಟುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರವತಿ ಆಗುವಿರಿ. ೯ ಗುಳಿಗೆಗಳ ಕ. ೩ ರೂಪಾಯಿ. ಟ. ಖ. ೫ ಆಣೆ

[illegible] —ವೈದ್ಯ ವ್ಹಿ. ಎಸ್. ಕಾಪಸೆ. [illegible]

[illegible] ಈ ಸಮಿತಿಯವರು [illegible] ಸಂಸ್ಥಾನಗಳ ಅದೇ ಬಗೆಯ [illegible] ಉತ್ತರ [illegible]

[illegible] ಸಂಸ್ಥಾನಗಳ [illegible] ಸಮಿತಿಯವರ ಸಲಹೆಗಳಿಂದ ಬಾಧಕವುಂಟಾಗುತ್ತದೆ. ಇಂಥ ಸಂಸ್ಥಾನಗಳ ಪೈಕಿ, ಮೊದಲು ಗಮನಕ್ಕೆ ಬರುವಂತೆ [illegible] ಮೈಸೂರು ಸಂಸ್ಥಾನದಿಂದ [illegible] ಅಭಿವೃದ್ಧಿಯನ್ನು [illegible] ಸಂಯುಕ್ತ ರಾಜ್ಯಭಾರದ [illegible]

[illegible] ಸಂಯುಕ್ತ ಸರ್ಕಾರಕ್ಕೆ [illegible]

[illegible] ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ [illegible]

[illegible] ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ [illegible]

[illegible] ಕಾಗದ ಪತ್ರಗಳ [illegible] ಸರ್ಕಾರಕ್ಕೆ [illegible] 5,57,000 ರೂ [illegible]

ಬೆಂಗಳೂರು ದಂಡಿನ ಬಿಡಾರ — [illegible] ಬೆಂಗಳೂರು ದಂಡಿನ ಬಿಡಾರ [illegible] ಸಂಯುಕ್ತ ರಾಜ್ಯಾಂಗ [illegible]

[illegible] 1931 ನೆಯ ಸಾಲಿನ ಲೆಕ್ಕಗಳು [illegible]

[illegible] 1931-32 ನೆಯ ಸಾಲಿನಲ್ಲಿ [illegible] IX ಎಕ್ಸ್, XIII [illegible] XXA [illegible]

[illegible] 20 ಲಕ್ಷ ರೂಪಾಯಿಗಳು [illegible] 2 71 ಲಕ್ಷ ರೂ [illegible]

[illegible] 1931-32 ನೆಯ ಸಾಲಿನಲ್ಲಿ [illegible] 352 72 ಲಕ್ಷ ರೂ [illegible] 9 88 ಲಕ್ಷ ರೂ [illegible] 1931-32 ನೆಯ ಸಾಲಿನಲ್ಲಿ [illegible] 98 915 ರೂ [illegible] ಗಂಧದ ಎಣ್ಣೆಯ [illegible] ಗಂಧದ ಎಣ್ಣೆಯ ಬೆಲೆಯಲ್ಲಿ ಹುಟ್ಟುವಳಿಯು ತೃಪ್ತಿಕರವಾಗಿ [illegible]

ವರದಿಗಾರ

ನಾರಿನ ಮಂಜೂರಿ

ಮೂರು ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಖಾಯಂ ಆಗುವುದಿಲ್ಲ ನಾರಿನವರು ಬರೂರಿತರಿಸಿ ಕೊಳ್ಳಿರಿ. ಕಿ. ೧|| ರೂ ೬ ೫ ೩ ಆಣೆ.

ಪತ್ತಾ ವೈದ್ಯ ಪ್ಪಿ ಎಸ್ ಕಾವಸೆ, ಮಿರಜ
25 M C

೧೯೩೨ ನೆಯ ಇಸವಿ ಅಕ್ಟೋಬರ್ ತಾ|| ೧೭ರಿಂದ ಅಕ್ಟೋಬರ್ ೨೩ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸ ನಾಮಸಂವತ್ಸರದ ಆಶ್ವಯುಜ ಬಹುಳ ಷಷ್ಠಿಯಿಂದ ಆಶ್ವಯುಜ ಬಹುಳ ನವಮಿ ವರೆಗಿನ ಪಂಚಾಂಗ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತುಲಾ ಮಾಸ
17	ಸೋಮ	ಷಷ್ಠಿ	10-13	ಕೃತ್ತಿ	56 43	1
18	ಮಂಗಳ	ಷಷ್ಠಿ	16 1	ರೋಹಿ	60	2
19	ಬುಧ	ಸಪ್ತಮಿ	60 33	ರೋಹಿ	2 54	3
20	[1] ಗುರು	ಸಪ್ತ	54-20	ಮೃಗ	8 30	4
21	ಶುಕ್ರ	ಸಪ್ತ	.0 66	ಆದ್ರಾ	13 8	5
24	ಶನಿ	ಅಷ್ಟ	69 21	ಪುನ	15-41	6
23	[2] ಭಾನು	ನವ	57 58	ಪುಷ್ಯ	18-56	7

[1] ಮಳೆನಕ್ಷತ್ರ ಚಿತ್ತ ೪ ನೆಯ ಪಾದ (2) ಮಳೆನಕ್ಷತ್ರ ಸ್ವಾತಿ ೧ ನೆಯ ಪಾದ

ಮೈಸೂರು. ವೈ ತಿರುಮಲಾಚಾರ್ಯರವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG NO M. 124

ಮೈಸೂರ್ ಸ್ಟಾರ್

[illegible]

[ಸ್ಥಳದವರಿಗೆ ವಾರ್ಷಿಕಚಂದಾ ೧-೧೪-೦] [ಪರಸ್ಥಳದವರಿಗೆ ೩-೮-೦] [ಶೈತ್ರರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸನ್ ೧೯೩೨ ನೆಯ ಇಸವಿ ಅಕ್ಟೋಬರ್ ತಾರೀಖು ೨೪ ನೆಯ ಸೋಮವಾರ [ಸಂಚಿಕೆ ೪೩

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death

The best, safest, cheapest, most profitable and most convenient place of Insurance is the Public Branch of the Mysore State Life Insurance

Policies are issued from Rs 100 to Rs 10,000 and copies of rules and forms of application can be had from all Government Treasuries Eco. omic Superintendents, Helpers and the Insurance Office, Public Office Buildings Bangalore

(Sd) S SHAMANNA,
Secretary, Insurance Committee

[60—16]

ಲಗ್ನಪತ್ರಿಕೆಗಳ

ಮುದ್ರಣಕ್ರಮ

ನಮ್ಮ ಕರ್ರೆ ಎಲೆಕ್ಟ್ರಿಕ್ ಮುದ್ರಾಶಾಲೆ ಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮ ಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾ ಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವು ಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ ಹೆಚ್ಚು ವಿಷಯ ವನ್ನು ಬರೆದು ತಿಳಿದುಕೊಳ್ಳಬಹುದು

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	(ಪ್ರತಿ ಸೇ೦.
[illegible]	೦—೧೨—೦	೧—೩—೦
[illegible]	೦—೮—೦	೦—೧೪—೦
[illegible]	೦—[illegible]—೦	೦—[illegible]—೦
[illegible]	೦—[illegible]—೦	೦—೧೦—೦
[illegible]	೦—[illegible]—೦	೦—[illegible]—೦
[illegible]	೦—[illegible]—೦	೦—[illegible]—೦
ಗುರುಶಂಕರೇಶ್ವರ[illegible]	೦—೧—೦	೦—[illegible]—೦
[illegible]	೦—[illegible]—೦	೦—೧[illegible]—೦
[illegible]	೦—[illegible]—೦	೦—೧[illegible]—೦
[illegible]	೧—[illegible]—೦	೧—[illegible]—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಆದೇನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಸ್ಕರಾಗಿ ಕ್ಷೀಣರಾಗ ಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕದ [ಸ್ವರ

ಧಿಕ್ಕರಿಸಿ ದರೆ ಕ್ಷೀಣತೆ ಕಾಯ್ದು ಕೊಳ್ಳಿರಿ

[illegible]

ಸ್ತ್ರೀ ರೋಗ ನಿವಾರಣೀ ಚೂರ್ಣ

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

(60—41)

ಸ್ವಾ. ಮಾಲಕ:—ವೈದ್ಯ ಪಿ. ಎಸ್. ಕಾಪಸೆ, ಮು. ಪೋ. ಮಿರಜ. ಎಂ. ಎಸ್. ಎಂ.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

[illegible]



[illegible]

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[60—8] ಪೋ. ಬಾ. [illegible]

ಮೈಸೂರು ಸ್ಟಾರ್

೧೯೩೭ನೇ ಅಕ್ಟೋಬರ್ ೨೫ನೇ ಸೋಮವಾರ

ASSEMBLY DELIBERATIONS

One of the chief defects noticeable in the conduct of the Representative Assembly is the extremely short time allotted to non-official business though the business is permitted to be heavy on the agenda. Out of about 200 questions not even 30 or 40 are taken up at each session. Evidently the half hour allotted at the beginning of each day is totally insufficient. Not even one fourth the number of resolutions are gone through as even the short period of two days set apart for them get reduced to only one very often. As regards representations on which the rural members are very keen not more than one tenth of them are taken up. Quite apart from the value of these discussions which do not seem to affect the course of administration in the slightest this method of curtailing non official business while getting through the entire official business even by encroaching on non official days is hardly fair or encouraging. This has been a standing complaint and we think that the Government which appoints so many committees could well constitute a committee to go into the question of providing sufficient time to non official business. This time the official business was not very heavy. The bill to amend the Co-operation Regulation with a view to introduce safeguards against mismanagement of societies audit and inspection attachments before orders and widening the purposes for which Land Mortgage Banks could finance so as to include the improvement and development of lands also was generally welcome by the House and was accepted unanimously. The motion to repeal the Breach of Contract Act was very hotly debated the main opposition coming from the coffee planters. But the statement of Srimathi Sakamma herself one of the most experienced of coffee planters in favour of the repeal was effective and decisive. The result was that a large majority voted for the repeal. The debate on the non official bill for the suppression of immoral traffic which was moved by Mr D S Mallappa occupied a whole day and both those in favour and against did their best to win the House to their side. The main object of the bill with which even the oppositionists agreed was to prevent young girls being seduced into a life of prostitution and to prevent people from making a living by such a trade. Those who opposed did so mostly on the ground that there were already enough provisions in the Indian Penal Code Municipal Regulation and the Police Regulation to prevent the evil and that the new bill was only going to put more powers into the hands of the police which may not have the desired result at all. The bill was lost by a narrow majority. One of the questions relating to the right of non-Brahmins to read puranas in a temple in Santhepet Mysore caused a lot of stir. The Government evaded facing the issue in spite of the utmost heckling by the House. They sheltered themselves under the opinion of the Agamiks who happened to be all Brahmins which was against non Brahmins reading puranas in temples. We wonder why this progressive Government of ours should not have come to a decision on the matter without much ado. It would have been graceful if they had stated without hesitating that they were not going to countenance such a restriction. We are afraid such restrictions will lead to a lot of trouble in these days when things are moving so fast, when even depressed classes are allowed into temples. Of the non-official resolutions the one relating to the formation of a committee to review the land revenue policy of the State was passed unanimously. The main idea was that the rates of assessment should not be increased without reference to the legislative body. It was a desirable suggestion but the Government were not favourable as was only to be expected. The resolution for reducing assessment from 12½ per cent to 25 per cent owing to the heavy fall in prices was also passed unanimously. The Governments have given such a relief in many other parts of India but our Government was adamant. Another important resolution was for making legislation to enable men of all communities to go in procession in all public streets irrespective of any mamool. This was only called for in our State as the various restrictions have led to a lot of litigation and done havoc on the people. It is also a measure of barest justice in allowing a fundamental right of the subjects. Even here our Government which calls itself progressive was reactionary and was afraid of action in spite of the House being unanimously in favour of the resolution. The attitude of Government in the matter is much to be regretted. One thing is becoming increasingly evident that is that Government is not willing to respond to the progressive reforms either political or social and is only good at marking time. The effectiveness of the Assembly which was never much, is only getting less. Either its powers should be increased or it should go. As it is it is too archaic and unsuited to modern times.

UNIVERSITY CONVOCATION

Almost the largest number of students since the founding of Mysore University took their degree this year. The Convocation address was delivered by Sir C V Kumaraswamy Sastri. It was pitched in the old time style and was hardly audible to even a portion of the Hall. We think that persons selected to address convocations should be possessed of good voice otherwise the address falls flat and people will not have much patience to read the same later. Sir Sastri emphasised on culture the cultivation of which was one of the main things in University life. He emphasised the remodelling of studies so as to infuse students with high ideals of culture and character. He was against early specialisation. He even suggested that it must begin after B A which may not meet with much support. He pleaded for the study of Sanskrit and vernaculars. His plea for not looking down upon Pundits is we are afraid is not going to be heard much. As regards education of women his idea was that as their functions were different so should their education be developed on different lines. He regretted the high cost of education recalling his own early days when text books were few and not subject to annual changes. He pleaded for love of country and social service. He advised the young men to devote some time each day for the study of religion and philosophy. The address though traversing on familiar old grounds is worth close reading and contains many useful hints.

ಪ್ರಜಾಪ್ರತಿನಿಧಿಸಭಾ ಕಾರ್ಯಕಲಾಪಗಳು

ಪ್ರತಿನಿಧಿಗಳಿಂದ ಪ್ರತಿಪಾದಿಸಲ್ಪಡುವ ವಿಷಯಗಳ ಸಂಖ್ಯೆಯು ಅಧಿಕವಾಗಿರುವುದಾದರೂ ಅವುಗಳ ವಿಮರ್ಶೆಗಾಗಿ ಕೊಡಲ್ಪಡುವ ಕಾಲ ವ್ಯವಧಾನವು ಬಹಳ ಕಡಿಮೆಯಾಗಿರುವುದು ಸಭಾ ನಡವಳಿಕೆಯಲ್ಲಿ ದೊಡ್ಡ ಕೊರತೆಯಾಗಿರುವುದು. ಈ ವೇಳೆ ಪ್ರತಿಪಾದಿಸಲ್ಪಟ್ಟಿದ್ದ 200 ವಿಷಯಗಳಲ್ಲಿ 30 40 ವಿಷಯಗಳು ಸಹ ಚರ್ಚೆಗೆ ಬರಲವಕಾಶವಾಗಲಿಲ್ಲ. ಇವುಗಳ ಚರ್ಚೆಗಾಗಿ ಪ್ರತಿ ದಿವಸವೂ ಗೊತ್ತುಮಾಡಲ್ಪಟ್ಟಿದ್ದ ಅರ್ಧ ಘಂಟೆಯ ಕಾಲವು ಸುತರಾಂ ಸಾಲದುದಾಗಿದ್ದಿತು. ನಿರ್ಧಾರಗಳನ್ನು ಪರ್ಯಾಲೋಚಿಸಲು 2 ದಿವಸಗಳ ಕಾಲ ವಿನಿಯೋಗಿಸಲ್ಪಟ್ಟಿದ್ದಾಗ್ಯೂ ಕಾಲು ಭಾಗವು ಸಹ ನಡೆಯಲು ವ್ಯವಧಾನವಾಗಲಿಲ್ಲ. ಕೋರಿಕೆಗಳ ವಿಚಾರದಲ್ಲಿ ಗ್ರಾಮಾಂತರಗಳ ಮೆಂಬರುಗಳು ವಿಶೇಷ ಕುತೂಹಲವುಳ್ಳವರಾಗಿದ್ದರೂ ಹತ್ತರಲ್ಲೊಂದು ಭಾಗಕ್ಕಿಂತ ಹೆಚ್ಚಾಗಿ ತೆಗೆದುಕೊಳ್ಳಲ್ಪಡಲಿಲ್ಲ. ಮೆಂಬರುಗಳಿಂದ ತರಲ್ಪಡುವ ವಿಷಯಗಳ ಚರ್ಚೆಯು ಬಹಳ ಪ್ರಾಮುಖ್ಯವಾಗಿದ್ದರೂ ಮತ್ತು ಅದರಿಂದ ಪ್ರಭುತ್ವಕ್ಕೆ ಸಂಬಂಧಪಟ್ಟ ವಿಷಯಗಳ ಪರ್ಯಾಲೋಚನೆಗೆ ಲೇಶ ಪ್ರತಿಬಂಧಕವಿಲ್ಲದಿದ್ದರೂ, ಅವುಗಳಿಗಾಗಿ ಗೊತ್ತುಮಾಡಲ್ಪಟ್ಟಿರುವ ಕಾಲ ವ್ಯವಧಾನವನ್ನು ಪ್ರಭುತ್ವ ವಿಷಯಗಳ ಪರ್ಯಾಲೋಚನೆಗಾಗಿ ಕಡಿಮೆ ಮಾಡಿದ್ದು ಹಿತ. ಯೋಗ್ಯವಾದುದಲ್ಲವಲ್ಲದೆ ಉತ್ತೇಜಕರವಾಗಿಯೂ ಇಲ್ಲ. ಈ ವಿಚಾರದಲ್ಲಿ ದೂರು ನಿರಂತರವಾಗಿರುವುದರಿಂದ ಮೆಂಬರುಗಳಿಗೆ ತಮ್ಮ ವಿಷಯ ಪರ್ಯಾಲೋಚನೆಗೆ ಸಾಕಷ್ಟು ಕಾಲ ವ್ಯವಧಾನವನ್ನು ಕಲ್ಪಿಸುವ ಬಗ್ಗೆ ಒಂದು ಸ್ಪೆಷಲ್ ಕಮಿಟಿಯನ್ನು ಪ್ರಭುತ್ವದವರೇರ್ಪಡಿಸುವುದುತ್ತಮವು. ಈ ವೇಳೆ ಪ್ರಭುತ್ವದವರ ಕಾರ್ಯಕಲಾಪವು ವಿಶೇಷವಾಗಿರಲಿಲ್ಲ. ಸಹಕಾರ ಸಂಘಗಳ ಅಕ್ರಮ ಆಡಳಿತ, ಲೆಕ್ಕ ಪರಿಶೋಧನೆ, ಮೇಲ್ವಿಚಾರಣೆ, ಆರ್ಡರಿಗೆ ಮೊದಲು ಜಪ್ತಿ ಮಾಡುವುದು, ಇವುಗಳ ವಿಚಾರವಾಗಿಯೂ, ಜಮೀನುಗಳಭಿವೃದ್ಧಿಗಾಗಿ ಸಾಲವನ್ನು ಕೊಡಲೇರ್ಪಟ್ಟಿರುವ ಅಡಮಾನ ಬ್ಯಾಂಕುಗಳ ಉದ್ದೇಶಗಳನ್ನು ವಿಸ್ತರಿಸುವುದಕ್ಕಾಗಿಯೂ ತರಲ್ಪಟ್ಟಿದ್ದ ಬಿಲ್ಲು ಸರ್ವಾನುಮತದಿಂದ ಅನುಮೋದಿಸಲ್ಪಟ್ಟಿತು. ಬ್ರೀಚ್ ಆಫ್ ಕಾಂಟ್ರಾಕ್ಟ್ ಆಕ್ಟನ್ನು ತೆಗೆದುಬಿಡತಕ್ಕ ಬಿಲ್ಲು ಬಹಳ ತೀಕ್ಷ್ಣವಾಗಿ ಚರ್ಚಿಸಲ್ಪಟ್ಟು ಯೂರೋಪಿಯನ್ ಕಾಫಿ ಪ್ಲಾಂಟರುಗಳು ಈ ಆಕ್ಟನ್ನು ತೆಗೆಯಕೂಡದೆಂದು ಬಹಳವಾಗಿ ವಾದಿಸಿದರಾದರೂ ದೊಡ್ಡ ಕಾಫಿ ತೋಟಗಾತಿಯರೂ ಅನುಭವಸ್ಥೆಯರೂ ಆದ ಶ್ರೀಮತಿ ಸಾಕಮ್ಮನವರ ಅಭಿಪ್ರಾಯಾನುಸಾರವಾಗಿ ಆಕ್ಟು ತೆಗೆಯಲ್ಪಡಬೇಕೆಂಬ ಬಿಲ್ಲು ಬಹುಮತದಿಂದ ಅನುಮೋದಿತವಾಯಿತು. ಮ|| ಡಿ ಎಸ್ ಮಲ್ಲಪ್ಪನವರಿಂದ ತರಲ್ಪಟ್ಟಿದ್ದ ವ್ಯಭಿಚಾರ ನಿರೋಧಕ ಬಿಲ್ಲಿನ ವಿಚಾರವಾಗಿ ಅನುಕೂಲ ಪ್ರತಿಕೂಲ ಪಕ್ಷದವರ ವಾದವು ಒಂದು ದಿನವೆಲ್ಲ ಬಹಳ ತೀಕ್ಷ್ಣವಾಗಿ ನಡೆಯಿತು. ಚಿಕ್ಕ ಹುಡುಗಿಯರು ವ್ಯಭಿಚಾರವೃತ್ತಿಗೆ ಬಿದ್ದು ಅದರಿಂದ ಜೀವನ ಹೊರೆಯುವಂತೆ ದುರ್ಬೋಧಿಸಲ್ಪಡುವುದನ್ನು ತಪ್ಪಿಸಬೇಕೆಂಬ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲದಿದ್ದಾಗ್ಯೂ, ಈ ಕೃತ್ಯವನ್ನು ತಡೆಯಲು ಪಿನಲ್ ಕೋಡಿನಲ್ಲೂ ಮ್ಯುನಿಸಿಪಲ್ ಮತ್ತು ಪೋಲೀಸು ರೆಗ್ಯುಲೇಷನ್ನುಗಳಲ್ಲೂ ಅವಕಾಶವು ಕಲ್ಪಿಸಲ್ಪಟ್ಟಿರುವಾಗ್ಗೆ ಹೊಸದಾಗಿ ಒಂದು ವಿಧಿಯನ್ನು ಮಾಡುವುದರಿಂದ ಪೋಲೀಸಿನವರಿಗೆ ಹೆಚ್ಚು ಅಧಿಕಾರವು ಬಂದು ಜನರಿಗೆ ವಿಶೇಷ ತೊಂದರೆಯನ್ನೂ ಕಿರುಕುಳವನ್ನೂ ಉಂಟುಮಾಡಿದಂತಾಗುವುದಲ್ಲದೆ ದುರ್ಬೋಧಕರ ಸೆರೆಯಿಂದ ಬಿಡಿಸಲ್ಪಟ್ಟ ಹುಡುಗಿಯರಿಗೆ ಪ್ರತ್ಯೇಕ ರಕ್ಷಣಾಲಯಗಳಿಲ್ಲದಿರುವ ಪ್ರಯುಕ್ತ ಅನ್ಯಮಾರ್ಗಾವಲಂಬನೆಗೆ ಅವಕಾಶವನ್ನು ಕಲ್ಪಿಸಿದಂತಾಗುವುದರಿಂದ ನೂತನ ಶಾಸನಾವಶ್ಯಕತೆಯಿಲ್ಲವೆಂದು ಬಹುಮತದಿಂದ ಬಿಲ್ಲು ಅನಂಗೀಕೃತವಾಯಿತು. ರಾಜಧಾನಿಯ ಸಂತೇಪೇಟೆ ಶ್ರೀ ಪ್ರಸನ್ನ ನಂಜುಂಡೇಶ್ವರ ದೇವಸ್ಥಾನದಲ್ಲಿ ಬ್ರಾಹ್ಮಣೇತರರು ಪುರಾಣವನ್ನೋದಿದುದರ ಮೇಲೆ ಗೊಂದಲವೆದ್ದು ಮುಜರಾಯಿ ದೇವಸ್ಥಾನಗಳಲ್ಲಿ ಬ್ರಾಹ್ಮಣೇತರರು ಪುರಾಣವನ್ನೋದಕೂಡದೆಂದು ಹೊಸದಾಗಿ ಮಾಡಲ್ಪಟ್ಟಿರುವ ಅಪ್ಪಣೆಯ ವಿಚಾರವಾಗಿ ಸಭೆಯಲ್ಲಿ ಬಹಳ ಖಂಡನೆಯು ನಡೆದಿತಾದರೂ ಪ್ರಭುತ್ವದವರು ತಕ್ಕ ಸಮಾಧಾನವನ್ನು ಕೊಡದೆ ದೇವಸ್ಥಾನಗಳ ಆಗಮಿಕರ ಅಭಿಪ್ರಾಯಾನುಸಾರ ಈ ನಿರ್ಬಂಧ ಕಲ್ಪಿಸಲ್ಪಟ್ಟಿರುವುದಾಗಿ ಹೇಳಿ ಭಾರವನ್ನೆಲ್ಲಾ ಬ್ರಾಹ್ಮಣ ಆಗಮಿಕರ ತಲೆಯ ಮೇಲೆ ಹೊರಿಸಿಬಿಟ್ಟು ತಾವು ಸುಮ್ಮನೆ ಕುಳಿತುಕೊಂಡರು. ಈ ನಾಗರಿಕ ಕಾಲದಲ್ಲಿ ಅದರಲ್ಲೂ ಅಸ್ಪೃಶ್ಯರ ದೇವಸ್ಥಾನ ಪ್ರವೇಶಕ್ಕೆ ಅವಕಾಶ ಕಲ್ಪಿಸಲ್ಪಡುತ್ತಿರುವ ಕಾಲದಲ್ಲಿ ಈ ರೀತಿ ಬ್ರಾಹ್ಮಣೇತರರ ಪುರಾಣ ಪಠನಕ್ಕೆ ನಿರೋಧವನ್ನು ಕಲ್ಪಿಸಿರುವುದು ಬಹಳ ಸುಧಾರಿಸಿದ ನಮ್ಮ ಪ್ರಭುತ್ವದವರಿಗೆ ಅನುಚಿತವೂ ಲಜ್ಜಾಸ್ಪದವೂ ಆಗಿರುತ್ತದೆ. ಇಂತಹ ನಿರ್ಬಂಧಕ್ಕೆ ತಾವೆಡೆಗೊಡುವುದಿಲ್ಲವೆಂದು ಪ್ರಭುತ್ವದವರು ಸಂಕೋಚವಿಲ್ಲದೆ ಹೇಳಿದ್ದರೆ ಅವರಿಗೆ ಭೂಷಣವಾಗಿರುತ್ತಿದ್ದಿತು. ಈ ನಿರ್ಬಂಧವು ಅನರ್ಥಕ್ಕೆ ಕಾರಣವಾಗಿರುವುದೆಂದು ಹೇಳಬೇಕಾಗಿಲ್ಲ. ಭೂಗಂದಾಯವನ್ನು ವಿಧಿಸುವ ರೀತಿಯನ್ನು ಪುನರ್ವಿಮರ್ಶಿಸುವುದಕ್ಕಾಗಿ ಒಂದು ಕಮಿಟಿಯೇರ್ಪಡಿಸಲ್ಪಡಬೇಕೆಂದು ಮೆಂಬರುಗಳು ತಂದಿದ್ದ ರೆಜ್ಯುಲೇಷನ್ನು ಏಕವಾಕ್ಯದಿಂದ ಅನುಮೋದಿತವಾಯಿತು. ಭೂಗಂದಾಯದ ದರವು ನ್ಯಾಯವಿಧಾಯಕ ಸಭೆಯ ಅನುಮೋದನವಿಲ್ಲದೆ ಹೆಚ್ಚಿಸಲ್ಪಡಕೂಡದೆಂಬುದು ಮುಖ್ಯೋದ್ದೇಶವು. ಇದು ವಿಹಿತವಾದ ಸೂಚನೆಯಾಗಿದ್ದಿತಾದರೂ ನಿರೀಕ್ಷಿಸಿದ್ದಂತೆಯೇ ಪ್ರಭುತ್ವದವರಿಗೆ ಮಾತ್ರ ಸಮ್ಮತವಾಗಿರಲಿಲ್ಲ. ಧಾನ್ಯದ ಬೆಲೆಯು ಅತ್ಯಂತ ಕಡಿಮೆಯಾಗಿರುವ ಪ್ರಯುಕ್ತ ಕಂದಾಯವು ಶೇಕಡ 12½ ಇಂದ 25 ಕ್ಕಿಳಿಸಲ್ಪಡಬೇಕೆಂಬ ರೆಜ್ಯುಲೇಷನ್ನು ಸರ್ವಾನುಮತದಿಂದ ಪ್ಯಾಸಾಯಿತು. ಭಾರತ ದೇಶದ ಇತರ ಕಡೆಗಳಲ್ಲಿ ಕಂದಾಯವಿಳಿಸಲ್ಪಟ್ಟಿರುವುದಾದರೂ ನಮ್ಮ ಪ್ರಭುತ್ವದವರ ಮನಸ್ಸು ಮಾತ್ರ ಕರಗದೆ ವಜ್ರದಷ್ಟು ಕಠಿಣವಾಗಿದ್ದಿತು. ಇಂತಿಂತಹ ಬೀದಿಗಳಲ್ಲಿ ಇಂತಿಂತಹ ಜಾತಿಯವರು ಉತ್ಸವದಲ್ಲಿ ಹೋಗಬೇಕೆಂಬ ನಿರ್ಬಂಧವಿರುವುದರಿಂದ ಮನುಷ್ಯನ ಸ್ವಭಾವಸಿದ್ಧವಾದ ಹಕ್ಕಿಗೆ ಕುಂದಕವಾಗಿರುವುದಲ್ಲದೆ ಪರಸ್ಪರ ಕಲಹದಿಂದ ಅನರ್ಥಗಳಿಗೆ ಅವಕಾಶವಾಗಿರುತ್ತದೆ. ಆದಪ್ರಯುಕ್ತ ಎಲ್ಲ ರಾಜ ಬೀದಿಗಳಲ್ಲೂ ಎಲ್ಲ ಜಾತಿ ಮತಸ್ಥರೂ ಯಾವ ತಾರತಮ್ಯವೂ ಇಲ್ಲದೆ ಉತ್ಸವದಿಂದ ಹೋಗುವಂತೆ ಮಾಡಬೇಕೆಂಬ ಬಗೆಗೆ ತರಲ್ಪಟ್ಟಿದ್ದ ರೆಜ್ಯುಲೇಷನ್ನಿನ ವಿಚಾರವಾಗಿ ಅನುಕೂಲವಾಗಿಯೂ ಪ್ರತಿಕೂಲವಾ

ಗಿಯೂ ಆಫೀಸುಗಳು ನಡೆದ ಶಿಕ್ಷಾ ಸಂಖ್ಯೆಯು ಮೆಂಬರುಗಳು ಪಸ್ತುತಿಸಿದರಾಗಲೂ ಇ ಆಫೀಸುಗಳಿಗೆ ಅಧಿಪತಿ ಇರುವ ಕರ್ತ ಅನುಕೂಲವಾಗಿರಲಿಲ್ಲ. ಇದೆಲ್ಲದ ಪ್ರಯತ್ನವನ್ನು ದಾರಿ ತೀರುವ ವಿಷ್ಯ ನಾವು ಮಾಡಿಲ್ಲ. ಅಧಿಕಾರಿಗಳಿಗೆ ಮೇಲೆ ಸ್ಪಷ್ಟ ವ್ಯಾಪಕವಾಗಿ ಕಾಲಿಡುತ್ತಿರುವರೆಂದು ವ್ಯಕ್ತವಾಗುತ್ತಿದೆ. ಪ್ರತಿನಿಧಿ ಸಭೆಯ ಸದಸ್ಯರ ಕೂಡ "ರಿಫಾರ್ಮ್ಸ್" ಸಮಿತಿಯವರೂ ಕ್ರಮೇಣ ಕಡಿಮೆಯಾಗುತ್ತ ಬರುತ್ತಿದೆ. ಅಧಿಕಾರವು ಪಕ್ಷಪಾತ ಸ್ವಭಾವ ಬಾಹೀರವಾಗಿ ತಗ್ಗಿರುವ ರೀತಿಯು ಇದು ಪ್ರಜಾಪ್ರಭುತ್ವ ಕಾಲಕ್ಕೆ ಅನುಚಿತವೂ ಆಗಿರುವುದು.

ಮೈಸೂರು ವಸ್ತುಪ್ರದರ್ಶನ

ರಾಜಧಾನಿಯಲ್ಲಿ ದಸರಾಮಹೋತ್ಸವ ಸಂಬಂಧವಾಗಿ ನಡೆಯುವ ಯೋಪದ್ಯಾರಿತವಸ್ತು ಪ್ರದರ್ಶನವು ಈವೇಳೆ ೧೯ ದಿವಸಗಳವರೆಗೆ ನಡೆಯಿತು. ಪ್ರೇಕ್ಷಕರ ಸಂಖ್ಯೆಯೂ ಅನುಕೂಲವಾಗಿಯೇ ಇದ್ದಿತು. ಲಕ್ಷ್ಮೀಪ್ರಭೃತಿ ಕೈಗಾರಿಕೆಯ ಶಾಲೆಯಲ್ಲಿ ಬಹಳ ರಮಣೀಯವೂ ಕೌಶಲ್ಯಪ್ರದರ್ಶಕವೂ ಆದ ನಾನಾ ಬಣ್ಣದ ಚಿತ್ರಗಳಿಂದ ತಯಾರಿಸಲ್ಪಟ್ಟ ಇಟ್ಟಿ ಪೆಂಟ್ ಕಂಪಿನಿ ಶಾಲೆ ಮೊದಲಾದ ಚಿತ್ತಾಳಿಯ ಪದಾರ್ಥಗಳು ಜನಾಕರ್ಷಣೆಯವಾಗಿದ್ದು ಚೆನ್ನಾಗಿ ಮಾರಾಟವಾದುವು. ಸ್ವದೇಶೀ ಸಾಮಾನು, ಸುಗಂಧದ್ರವ್ಯಗಳು, ಎಣ್ಣೆದ ಸಾಮಾನುಗಳು ಸ್ತ್ರೀ ಪುರುಷರು ಉಪಯೋಗಿಸುವ ವಸ್ತ್ರಗಳು ಬಿಸ್ಕತ್ತು ಮೊದಲಾದ ತಿಂಡಿ ಪದಾರ್ಥಗಳೂ ಇತರ ನಾನಾ ವಿಧ ವಸ್ತುಗಳೂ ಬಂದಿದ್ದುವು. ಇವುಗಳ ಬೆಲೆಯಾಗಲಿ ನಾಜೂಕಾಗಲಿ ಮಾರಾಟಕ್ಕೆ ಕಾರಣವಾಗಿರದೆ ಬರೀ ಸ್ವದೇಶಾಭಿಮಾನವೇ ಮುಖ್ಯ ಕಾರಣವಾಗಿದ್ದಿತು. ಬಂದಿದ್ದ ಪದಾರ್ಥಗಳಿಗೆ ಅವುಗಳ ಯೋಗ್ಯತಾನುಸಾರ ಬೆಳ್ಳಿ ಬಂಗಾರ ಪದಕಗಳೂ ಯೋಗ್ಯತಾ ಪತ್ರಗಳೂ ಎರಡನೆಯ ಕೌನ್ಸಿಲರ್ ಮ|| ಕೆ. ಮೆಥಾರ್ ರವರಿಂದ ಕೊಡಲ್ಪಟ್ಟುವು. ಬ್ರೂಕ್‌ಬಾಂಡ್ ಇಂಡ್ಯಾ ಲಿಮಿಟೆಡ್ ಕಂಪೆನಿಯವರು ಪ್ರದರ್ಶಿಸಿದ್ದ ಟಿ ಶಾಖೆಗಳಲ್ಲಿ ಬಿಶ್ ಕಾಪ್ ಕಾಫಿಯ ಔತ್ಕೃಷ್ಟ್ಯಕ್ಕಾಗಿ ಬಂಗಾರದ ಪದಕವು ಕೊಡಲ್ಪಟ್ಟಿತು. ಪ್ರತಿ ವರ್ಷದಲ್ಲೂ ಈ ವಸ್ತುಪ್ರದರ್ಶನವನ್ನು ನಡೆಸುವುದರಿಂದ ನೂತನ ಪದಾರ್ಥಗಳನ್ನು ಮಾಡಲಿಕ್ಕೆ ವ್ಯವಧಾನವೂ ಅನುಕೂಲವೂ ಇರುವುದಿಲ್ಲವಾದುದರಿಂದ ಹಳೆಯ ಪದಾರ್ಥಗಳೇ ಪ್ರತಿವೇಳೆಯೂ ಪ್ರದರ್ಶಿಸಲ್ಪಡುವುವು. ಅದು ಕಾರಣ ೩ ವರ್ಷಕ್ಕೊಮ್ಮೆ ಪ್ರದರ್ಶನವು ನಡೆಸಲ್ಪಡುವುದಾದರೆ ಕೈಗಾರಿಕೆಯ ಜನರಿಗೆ ಹೊಸವಸ್ತುಗಳನ್ನು ಮಾಡಲು ಅವಕಾಶವೂ ಅನುಕೂಲವೂ ಉಂಟಾಗುವುವಲ್ಲದೆ ಪ್ರೇಕ್ಷಕರಿಗೆ ನವೀನವಸ್ತುಗಳನ್ನು ನೋಡಲು ಕುತೂಹಲವೂ ಹುಟ್ಟಿ ಪ್ರದರ್ಶಕರಿಗೆ ಆದಾಯವು ಹೆಚ್ಚುವುದು. ಇದನ್ನು ಪ್ರಭುತ್ವದವರು ಪರ್ಯಾಲೋಚಿಸಬೇಕು.

ಅಖಿಲಭಾರತ ವೀರಶೈವ ಮಹಾಸಭೆ

ಈ ಮಹಾಸಭೆಯ ೧೧ ನೇ ಅಧಿವೇಶನವು ಬರುವ ಡಿಸೆಂಬರ್ ತಾ|| ೨೮ ನೆಯ ಗುರುವಾರ ಮತ್ತು ೩೦ ನೆಯ ಶುಕ್ರವಾರ ಧಾರವಾಡದಲ್ಲಿರುವ ಲಿಂಗಾಯತ ಟ್ರೇನಿಂಗ್ ಕಾಲೇಜಿನಲ್ಲಿ ಜರುಗುವಂತೆ ಈ ಮಹಾಸಭಾಕಾರ್ಯಕಾರಿ ಮಂಡಲಿಯವರಿಂದ ನಿರ್ಧರಿಸಲ್ಪಟ್ಟಿರುವುದಾಗಿ ಈ ಪತ್ರಿಕೆಯ ಬೇರೆ ಕಡೆ ಪ್ರಕಟವಾಗಿರುವ ಪ್ರಸಿದ್ಧ ಪತ್ರಿಕೆಯಿಂದ ವ್ಯಕ್ತವಾಗುತ್ತದೆ. ಈ ಮಹಾಸಭೆಯ ಅಧ್ಯಕ್ಷತೆಯನ್ನು ನವಕರ್ನಾಟಕ ವಾರ ಪತ್ರಿಕೆಯ ಮತ್ತು ಶಿವಾನುಭವ ಮಾಸ ಪತ್ರಿಕೆಯ ಸಂಪಾದಕರೂ ಕರ್ನಾಟಕ ಭಾಷಾ ಸೇವಕರೂ ಪ್ರಸಾರಕರೂ ವೀರಶೈವ ಸಮಾಜಾಭಿವೃದ್ಧಿಗಾಗಿ ತ್ರಿಕರಣಪೂರ್ವಕ ಹೋರಾಡುತ್ತಿರುವವರೂ, ಅಗೋಚರವಾಗಿದ್ದ ವಚನ ಶಾಸ್ತ್ರವನ್ನು ಸಂಗ್ರಹಿಸಿ ಪ್ರಚುರಪಡಿಸಿಯೂ ಪಡಿಸುತ್ತಲೂ ವೀರಶೈವ ಸಮಾಜಕ್ಕೆ ಮಹೋಪಕಾರವನ್ನು ಮಾಡುತ್ತಿರುವವರೂ ವೀರಶೈವ ಸಮಾಜವನ್ನು ಬೆಳಸುತ್ತಲಿರುವ ಗುರುವಿರಕ್ತ ಕೆಲಸಾಗ್ಗಿನ್ನ ಶಿಸ್ತಿನ ನಿಷ್ಪಕ್ಷಪಾತದಿಂದ ವರ್ತಿಸುವವರೂ, ಆದ ರಾವ್ ಸಾಹೇಬ್ ಹಳಕಟ್ಟಿ, ಬಿ. ಎ., ಎಲ್. ಎಲ್. ಬಿ. ಇವರು ವಹಿಸುವುದರಿಂದ ಮಹಾಸಭೆಯು ಸುಲಲಿತವಾಗಿಯೂ, ನಿರ್ವಿಘ್ನವಾಗಿಯೂ ಸಫಲಪ್ರದವಾಗಿಯೂ ನಡೆಯುವುದೆಂದು ನಿರೀಕ್ಷಿಸುತ್ತೇವೆ.

ಅಂಬೇಡ್ಕರರು ಮಹಾತ್ಮರ ದರ್ಶನ ಮಾಡಿದರು

ಕಳೆದ ಸೋಮವಾರ ರಾತ್ರಿ ಡಾಕ್ಟರ್ ಅಂಬೇಡ್ಕರವರು ಪೂನಾ ಎರವಾಡಾ ಜೈಲಿಗೆ ಹೋಗಿ ಮಹಾತ್ಮರ ದರ್ಶನವನ್ನು ತೆಗೆದುಕೊಂಡು ಅಸ್ಪೃಶ್ಯತಾ ನಿರ್ಮೂಲನ ವಿಚಾರವಾಗಿ ಸಂಭಾಷಿಸಿ ಬಂದರು. ಅಂಬೇಡ್ಕರರು ರೌಂಡುಟೇಬಲ್ ಸಭೆಗೆ ಆಹ್ವಾನಿಸಲ್ಪಟ್ಟಿರುವುದರಿಂದ ಕೂಡಲೆ ಲಂಡನ್ನಿಗೆ ಪ್ರಯಾಣ ಮಾಡುವರು. ಇವರು ಮಹಾತ್ಮರ ಸಂದರ್ಶನ ಕಾಲದಲ್ಲಿ ನಡೆದ ವಿಚಾರವನ್ನು ಕುರಿತು ಪತ್ರಿಕಾಪ್ರತಿನಿಧಿಯೊಡನೆ ಪ್ರಸ್ತಾವಿಸುವಾಗ್ಗೆ "ಬರೀ ಆಡಂಬರದಿಂದ ಪ್ರಯೋಜನವಿಲ್ಲ. ಅಸ್ಪೃಶ್ಯತಾನಿರ್ಮೂಲನ ಸಂಘದವರು ಹರಿಜನರ ಆರ್ಥಿಕಸ್ಥಿತಿಯನ್ನೂ, ವಿದ್ಯಾ ಸೌಕರ್ಯವನ್ನೂ, ಸಾಂಘಿಕ ಮರ್ಯಾದೆಯನ್ನೂ ವೃದ್ಧಿಗೊಳಿಸಲು ಬಲವಾದ ಪ್ರಯತ್ನವನ್ನು ಮಾಡಬೇಕು. ದೇವಾಲಯ ಪ್ರವೇಶವೂ ಸಹಪಂಕ್ತಿ ಭೋಜನವೂ ಬರೀ ಆಡಂಬರ ಮಾತ್ರ. ಹರಿಜನರಿಗೆ ಉಪಯೋಗವಾಗುವ ಸ್ಥಳಗಳು ಅಲ್ಲದೆ ನಾನು ಹೇಳಿರುವುದನ್ನು ಪತ್ರಿಕೆಗಳು ಪ್ರಕಟಿಸಿರುವುದರಿಂದ ಹರಿಜನರು ಕೂಡ ಹೀಗೆ ತಿಳಿಯದಿರಲಿ" ಎಂದು ಹೇಳಿದರು.

ಅಸ್ಪೃಶ್ಯರ ಸೌಕರ್ಯ ವಿಷಯದಲ್ಲಿ ಗಾಂಧೀಜಿ

"ಹರಿಜನರ ಸ್ಥಿತಿ ಸುಧಾರಿಸಬೇಕಾದರೆ ಅವರು ದೇವಾಲಯ ಪ್ರವೇಶ ಮಾಡುವಂತಾಗಬೇಕು" ಎಂದು ಅನೇಕ ಜನರು ಹೇಳುತ್ತಿರುವುದು ಮಹಾತ್ಮರಿಗೆ ಒಪ್ಪಿಗೆಯಾಗಿಲ್ಲ. ಹರಿಜನರ ಸ್ಥಿತಿ ಉತ್ತಮವಾಗಬೇಕಾದರೆ ಕೇವಲ ದೇವಾಲಯ ಪ್ರವೇಶದಿಂದಲೇ ಆಗುವುದಿಲ್ಲ. ವಿದ್ಯಾ, ಆರ್ಥಿಕ, ಸಾಮಾಜಿಕ ವಿಷಯಗಳಲ್ಲಿ ಸಂಬಂಧವಾಗಿರುವುದರೊಳ ಹರಿಜನರೊಡನೆ ಆದೇಶ ನಡೆಯಬೇಕು. ಬಾವಿ ಮೊದಲಾದುವುಗಳಿಂದ ಸಮಾನವಾಗಿ ಹರಿಜನರನ್ನು ಕಾಣಬೇಕು. ಪೂರ್ವದಂತೆ ದೇವಾಲಯದೊಳಕ್ಕೆ ಬರಗೊಡುತ್ತಿರುವಾಗಲೇ ಹರಿಜನರನ್ನು ದೇವಾಲಯ, ಪಾಠಶಾಲೆ ಮೊದಲಾದ ಬಹಿರಂಗ ಸ್ಥಳಗಳಿಗೆ ಬರಗೊಡಬೇಕು. ಆಸ್ತಿಕರಾದವರೂ ಹರಿಜನರೂ ಕೂಡಿ ಊಟಮಾಡುವುದು ಅಸ್ಪೃಶ್ಯತಾ ನಿವಾರಣೆಗೆ ಮುಖ್ಯ ವಿಷಯವಲ್ಲ. ಇಷ್ಟಪಟ್ಟವರು ಮಾಡಬಹುದು. ಇಲ್ಲದವರು ಬಿಡಬಹುದು. ಹಿಂದಿನಿಂದ ಸಂಪ್ರದಾಯವನ್ನನುಸರಿಸಿ ಒಬ್ಬನು ತಾನು ಯಾರೊಂದಿಗೂ ತಿನ್ನುತ್ತಿರುವ ಆಹಾರವನ್ನು ಇತರರ ಪಂಕ್ತಿಯಲ್ಲಿ ತಿನ್ನುವುದು ದೋಷವಲ್ಲವೆಂದೇ ನಾನು ನಂಬಿರುತ್ತೇನೆ. ಇದು ನನ್ನ ವ್ಯಕ್ತಿಯಭಿಪ್ರಾಯವು.

ಮಿಸ್ ಸ್ಲೇಡ್ ಕನ್ಯೆಯ ವ್ಯಾಖ್ಯಾನ

ಈಗ ಭಾರತದೇಶ ಸಂಚಾರಮಾಡುತ್ತಿರುವ ಇಂಡಿಯಾ ಲೀಗು ಪ್ರತಿನಿಧಿಗಳು ದಿಲ್ಲಿಯಲ್ಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಸಭೆಗೆ ಹೋಗಿದ್ದವೇಳೆಯಲ್ಲಿ ಅಧ್ಯಕ್ಷರ ಕೋರಿಕೆಯ ಮೇರೆಗೆ ಮಿಸ್ ಸ್ಲೇಡ್ ಕನ್ಯೆಯು ಈ ಪ್ರಕಾರ ಉಪನ್ಯಾಸವನ್ನು ಮಾಡಿದರು.— "ನಾನು ಭಾರತದೇಶಕ್ಕೆ ಬರುತ್ತಲೇ ಉತ್ತಮರಾದ ಭಾರತೀಯರೆಲ್ಲರೂ ಪ್ರಭುತ್ವದವರಲ್ಲಿ ಭಕ್ತಿಯುಳ್ಳವರಾಗಿರುತ್ತಾರೆಂದು ಒಬ್ಬ ಬ್ರಿಟಿಷ್ ಉದ್ಯೋಗಿಯು ಹೇಳಿದರು. ಭಾರತೀಯರೆಲ್ಲರೂ ಜೈಲಿನಲ್ಲಿರುವಾಗ್ಗೆ ಉತ್ತಮರಾದವರನ್ನು ನೋಡುವುದೆಂತು ಎಂದು ನಾನು ಕೇಳಿದೆನು. ನಮ್ಮ ಪಾಯಟಿಂಗನ ಉದ್ದೇಶವೇನೆಂದರೆ— ಅರ್ಜಿನ್ನು ಜಾರಿಗೆ ತರಲ್ಪಟ್ಟಾರದ್ದ ಇಂಡ್ಯಾ ಸಂಬಂಧವಾಗಿ ಸಮಾಚಾರವೇ ಆಂಗ್ಲದೇಶದಲ್ಲಿ ಸರಿಯಾಗಿ ಹರಿಯದಂತಾದುದರಮೇಲೆ ಸ್ಥಿತಿಗತಿಗಳನ್ನು ಸ್ವಯವಾಗಿ ನೋಡಿ ಕೇಳಿ ತಿಳಿದುಕೊಳ್ಳುವುದಕ್ಕಾಗಿ ಬಂದಿರುತ್ತೇನೆ. ಸ್ವದೇಶಕ್ಕೆ ಹೋದಮೇಲೆ ನಿಜ ಸ್ಥಿತಿಗತಿಗಳನ್ನು ಆಂಗ್ಲ ಪ್ರಜೆಗಳಿಗೆ ತಿಳಿಸಿ ಭಾರತೀಯರು ಸ್ವಾತಂತ್ರ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆಂದು ಅವರ ಮನಸ್ಸಿಗೆ ಹಿಡಿಯುವಂತೆ ಹೇಳುವೆವು. ಸಂಗತಿಗಳನ್ನೆಲ್ಲ ವಿಶದವಾಗಿ ತಿಳಿಯಹೇಳಿ ಭಾರತೀಯೋದ್ಧಮಕ್ಕೆ ಸಹಾಯಮಾಡಬೇಕೆಂದಿರುತ್ತೇವೆ. ಉತ್ತಮರಾದ ಸ್ತ್ರೀಯರೂ ಪುರುಷರೂ ಬಂದಿಗಳಾಗಿರುವುದರಿಂದ ನಮಗೆ ನಾಚಿಕೆಯಾಗಿರುತ್ತದೆ. ನಿರ್ಬಂಧ ವಿಧಾನದಿಂದ ಒಂದು ಜಾತಿಯು ಮತ್ತೊಂದು ಜಾತಿಯನ್ನು ಹೇಗೆ ಆಳಲಾಗುವುದೋ ನನಗೆ ಅರಿಯದು. ಭಾರತ ದೇಶಕ್ಕೂ ಆಂಗ್ಲದೇಶಕ್ಕೂ ಶಾಂತಿಯುಂಟಾಗುವಂತೆ ಪ್ರಯತ್ನಿಸುವೆವು."

ಸರ್ ಇಕ್ಬಾಲರವರ ಅಭಿಪ್ರಾಯ

ಮಹಮ್ಮದ್ ಇಕ್ಬಾಲರವರು ಮೂರನೆಯ ರೌಂಡು ಟೇಬಲ್ ಸಭೆಗೆ ಆಹ್ವಾನಿಸಲ್ಪಟ್ಟಿರುವುದರಿಂದ ಕಳೆದ ಗುರುವಾರ ಬೊಂಬಾಯಿನಲ್ಲಿ ಹಡಗನ್ನು ಹತ್ತಿ ಲಂಡನ್ನಿಗೆ ಪ್ರಯಾಣಮಾಡಿದರು. ಆ ಸಮಯದಲ್ಲಿ ಹಿಂದು ಮಹಮ್ಮದೀಯ ಸಮಸ್ಯೆಯನ್ನು ಕುರಿತು ಈ ಪ್ರಕಾರವಾಗಿ ಹೇಳಿದರು—"ಪ್ರಕೃತ ಸ್ಥಿತಿಯಲ್ಲಿ ಭಾರತ ದೇಶದ ಮಹಮ್ಮದೀಯರು ಪ್ರತ್ಯೇಕ ನಿಯೋಜಕ ವರ್ಗವನ್ನು ಬಿಡರು. ಲಕ್ನೋದಲ್ಲಿ ಮಹಮ್ಮದೀಯ ನಾಯಕರೊಳಗೆ ನಡೆದಿರುವ ಒಡಂಬಡಿಕೆಯು ಜಯಪ್ರದವಾಗಿ ಆಗುವುದೇ ಎಂಬ ಸಂದೇಹವು ನನಗುಂಟಾಗಿದೆ. ಅಖಿಲ ಭಾರತ ಮುಸ್ಲೀಂ ಸಭೆಯವರೂ ಅಖಿಲಭಾರತ ಮುಸ್ಲೀಂ ಸಮಿತಿಯವರೂ ಮಾಡಿರುವ ತೀರ್ಮಾನವನ್ನು ಮಹಮ್ಮದೀಯರುಗಳೆಲ್ಲರೂ ಅನುಮೋದಿಸಿರುತ್ತಾರೆಂದು ನಾನು ನಂಬುತ್ತೇನೆ. ಪ್ರತ್ಯೇಕ ನಿಯೋಜಕವರ್ಗವು ಜಾತೀಯತೆಗೆ ಭಂಗಕರವೆಂದು ಹೇಳುವವರ ವಾದರೀತಿಯನ್ನು ನಾನೊಪ್ಪುವುದಿಲ್ಲ. ಭಾರತ ದೇಶದ ಸ್ಥಿತಿಗತಿಗಳಿಗೂ ಪಾಶ್ಚಾತ್ಯ ದೇಶಗಳ ಸ್ಥಿತಿಗತಿಗಳಿಗೂ ವ್ಯತ್ಯಾಸವುಂಟು. ಅಂದರೆ ಅಲ್ಲಿಯ ಪ್ರಜಾಪ್ರತಿನಿಧಿ ಪ್ರಭುತ್ವ ವಿಧಾನವು ಇಲ್ಲಿಗೆ ಉಪಯೋಗವಿಲ್ಲವೆಂದು ಮಹಾತ್ಮರು ಹೇಳುವ ಮಾತನ್ನು ನಾನು ಅಂಗೀಕರಿಸುತ್ತೇನೆ. ಹಿಂದುಗಳೂ ಮಹಮ್ಮದೀಯರೂ ಪರಸ್ಪರ ಇರುವ ಹಕ್ಕುಗಳನ್ನು ಅಂಗೀಕರಿಸಿದಲ್ಲದೆ ಭಾರತ ಜಾತೀಯ ಅಭಿವೃದ್ಧಿಯಾಗುವುದೆಂದು ನಾನು ತಿಳಿದಿರುವುದು. ಹಿಂದುಗಳೂ ಮಹಮ್ಮದೀಯರೂ ಒಡಂಬಡಿಕೆಯನ್ನು ಮಾಡಿಕೊಳ್ಳಲು ಈಗ ತಕ್ಕ ಸಮಯವು ಇನ್ನೂ ಬಂದಿಲ್ಲವೆಂಬುದು ನನ್ನ ಅಭಿಪ್ರಾಯ. ಮಹಮ್ಮದೀಯರ ಹಕ್ಕುಗಳ ಅಂತಹ ಒಡಂಬಡಿಕೆಯನ್ನು ಕುದುರಿಸಲು ನಾನು ಯಾವಾಗಲೂ ಸಿದ್ಧನಾಗಿರುತ್ತೇನೆ. ಆ ನಿಟ್ಟಿನಲ್ಲಿ ಒಂದಿಲ್ಲ ನನ್ನಷ್ಟು ಸಂತೋಷಪಡುವವರು ಮತ್ತಾರೂ ಇಲ್ಲ. ಒಡಂಬಡಿಕೆಯ ತೀರ್ಮಾನವು ಮಾಡಲ್ಪಟ್ಟಿರುವುದರಿಂದ ಒಬ್ಬರಿಗಾಗಿ ಒಬ್ಬರು ಮುಜರಾಯಿ ಸಂಘದವರು ಯಾವ ಕಾರ್ಯೋದ್ದೇಶವನ್ನು ನಡೆಸುತ್ತಾರೆಯೋ ನೋಡಬೇಕು."

ಒಳದೇಶದ ವೃತ್ತಾಂತಗಳು

ಕೋಲಾರ ಜಿ|| ಮುಳಬಾಗಲು ಮ|| ಎಚ್. ಕೆ. ...

ಪ್ರತಿನಿಧಿ ಸಭೆಯ ಸದಸ್ಯರ ಪ್ರತಿಭಟನೆಯ ಮೇಲೆ ಕಮಿಷನರವರ ಆಜ್ಞೆಯಿಂದ ಮುನಿಸಿಪಲ್ ಕೌನ್ಸಿಲಿನ ಅಧ್ಯಕ್ಷತೆಯನ್ನು ಕಿತ್ತುಕೊಳ್ಳಲ್ಪಟ್ಟಿರುತ್ತದೆ.

... ಧಾನಿಯ ... ಪಟ್ಟಣದ ... ಮೆಜಿಸ್ಟ್ರೇಟರು ... ಬ್ಯಾಂಕಿನ ಹಣವನ್ನು ದುರುಪಯೋಗಪಡಿಸಿದ ಅಪರಾಧಕ್ಕೆ ಶಿಕ್ಷೆಯ ನ್ಯಾಯಾಲಯದಲ್ಲಿ ಒಳಪಟ್ಟು ವಿಚಾರಣೆ ಹೊಂದಿದ್ದರು. ಅದರ ಮೇಲೆ ಒಡೆಯುವರು ಹೂಡಿದರು ಕೆಲ ಸಾಕ್ಷಿಗಳನ್ನು ವಿಚಾರಿಸಿ ಪಿರ್ಯಾದು ಅಪರಾಧಿಗಳ ಪರ ವಕೀಲರುಗಳ ಆರ್ಗ್ಯುಮೆಂಟನ್ನು ಕೇಳಿ ಸುಳ್ಳು ಹೇಳಿದ್ದಕ್ಕಾಗಿ ೧೦೦೦ ರೂ ಜುಲ್ಮಾನೆ ಮತ್ತು ೬ ತಿಂಗಳು ಕಠಿಣ ಸಜವೂ ಮೋಸಮಾಡಿದ್ದಕ್ಕಾಗಿ ೧೦೦೦ ರೂ ಜುಲ್ಮಾನೆ ಮತ್ತು ೬ ತಿಂಗಳ ಕಠಿಣ ಸಜವೂ ವಿಧಿಸಲ್ಪಟ್ಟಿತು. ಇದರಲ್ಲಿ ಅರ್ಧಗಂಡವನ್ನು ಸ್ಥಿರಗೊಳಿಸಿ ಇವನ್ನು ೬-೬ ತಿಂಗಳಿಗಿಳಿಸಿ ಏಕಕಾಲದಲ್ಲಿ ಅನುಭವಿಸುವಂತೆ ತೀರ್ಮಾನಿಸಿರುವರು. ಇಗರ ಮೇಲೆ ಅಪರಾಧಿ ನೇತರು ಹೈ ಕೋರ್ಟಿಗೆ ಅಪೀಲನ್ನು ಮಾಡ ಹೋಗುವ ಮೇಲೆ ಬಿಡುಗಡೆಯನ್ನು ಹೊಂದಿರುವರು. ಹೈ ಕೋರ್ಟಿನ ತೀರ್ಮಾನವು ಎಲ್ಲರ ಕುತೂಹಲದಿಂದ ನಿರೀಕ್ಷಿಸಲ್ಪಟ್ಟಿದೆ.

ರಾಜಧಾನಿಯ ದಸರಾಮಹೋತ್ಸವ ಚರಿತ್ರೆಯಲ್ಲೇ ಈ ವರೆಗೆ ನಡೆಯದಿದ್ದಂತಹ ಮತ್ತು ಅತ್ಯಂತ ಹೀನವೂ ಅಕುಟಿಲವೂ ಆದ ರಾಜಭಕ್ತಿಗೆ ಕಳಂಕಪ್ರಾಯವಾದ ಗಲಭೆಯು ವಿಜಯ ದಶಮಿ ಉತ್ಸವದಲ್ಲಿ ಯಾರ ದುರಾದೃಷ್ಟದಿಂದಲೋ ನಡೆದು ಪ್ರಜೆಗಳಿಗೆ ಪೋಲೀಸಿನವರ ಮೇಲೂ ಅಧಿಕಾರಿಗಳಿಗೆ ಪ್ರಜೆಗಳ ಮೇಲೂ ಅನುಮಾನವುಂಟಾಗಿರುತ್ತದೆ. ಈ ಗಲಭೆಯನ್ನು ವಿಚಾರಿಸಲು ಯಾವ ಕಮಿಟಿಯೂ ನಿಯಮಿಸಲ್ಪಡದ ರೆವಿನ್ಯೂ ಕಮಿಷನರ್ ಮ|| ಎಸ್. ವಿ. ರಾಜಗೋಪಾಲಾಚಾರ್ ರವರು ಮಾತ್ರ ನಿಯಮಿಸಲ್ಪಟ್ಟಿರುವರು. ಇವರು ಕೃತ್ಯನಡೆದ ಸರಿ ಹೋರೆ ಸ್ಥಳಗಳನ್ನು ಸ್ವತಃ ಪರೀಕ್ಷಿಸಿ ತಾಲೂಕಿದ್ದ ಲೇಖಾಪ್ರಭವನಕ್ಕೆ ಕೆಲ ಕೆಲ ಅಧಿಕಾರಿಗಳನ್ನು ಪುರಜನಾಸಿಗಳನ್ನೂ ಬರಮಾಡಿಕೊಂಡು ಬಹಳ ರಹಸ್ಯವಾಗಿ ವಾಂಗ್ಮೂಲವನ್ನು ಕೇಳಿ ತಿಳಿದುಕೊಂಡು ಇಷ್ಟರಲ್ಲೇ ತಮ್ಮ ವರದಿಯನ್ನು ಪ್ರಭುತ್ವಕ್ಕೆ ನಿವೇದಿಸುವವರಾಗಿರುವರು. ಮ|| ಆಚಾರ್ಯರು ಯಾರ ಮೇಲೂ ದಯೆದಾಕ್ಷಿಣ್ಯಾಭಿಮಾನಗಳನ್ನು ತೋರಿಸದೆ ಪಕ್ಷಪಾತರಹಿತರಾದುದನ್ನು ನಿಷ್ಪಕ್ಷಪಾತದಿಂದ ತಿಳಿಸುವರೆಂದು ನಂಬುತ್ತೇವೆ.

ರಿಟೈರ್ಡ್ ಅಮೃತಮಹಲ್ ಸೂಪರಿಂಟೆಂಡೆಂಟರಾದ ಮ|| ಅಬ್ದುಲ್ಲತೀಫ್‌ರವರ ಮಡದಿಯಾದ ಹಂತಿತಿ ಬೇಗಂ ಎಂಬಾಕೆಯು ಜೀವನಾಂಶಕ್ಕಾಗಿ ಮೈಸೂರು ಸಿಟಿ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಗಂಡನಮೇಲೆ ಪಿರ್ಯಾದು ಮಾಡಿದ್ದರು. ಈಕೆಯ ಹೇಳಿಕೆಯೇನೆಂದರೆ—"ನಾನು ಕಾಯಿಲೆಯಾಗಿದ್ದುದರಿಂದ ಕಾಯಿಲೆಯನ್ನು ಗುಣ ಮಾಡಿಕೊಂಡು ಬರುವಂತೆ ಹೇಳಿ ನನ್ನನ್ನು ಮಳವಳ್ಳಿಯಲ್ಲಿರುವ ನನ್ನ ತೌರುಮನೆಗೆ ಕಳುಹಿಕೊಟ್ಟು ನನಗೆ ಕಾಯಿಲೆ ಗುಣವಾಗಿದೆ ಕರೆಸಿಕೊಳ್ಳಬೇಕೆಂದು ಅನೇಕ ಕಾಗದಗಳನ್ನು ಬರೆದಾಗ್ಯೂ ನನ್ನನ್ನು ಕರೆಸಿಕೊಳ್ಳಲಿಲ್ಲ. ಅದಕ್ಕಾಗಿ ನನ್ನ ತಂದೆಯು ಪಂಚಾಯತಿಕೆ ಮಾಡಿಸಿದುದರಮೇಲೆ ನನ್ನನ್ನು ಕರೆದುಕೊಂಡು ಬರುವಂತೆ ನನ್ನ ತಂದೆಗೆ ಹೇಳಿದರು. ಅದರಂತೆ ನಾನು ಮನೆಗೆ ಬಂದನಂತರ ನನ್ನನ್ನು ಕ್ರೂರವಾಗಿ ಹಿಂಸಿಸಿ ನನ್ನ ನಗಗಳನ್ನೆಲ್ಲ ಕಿತ್ತುಕೊಂಡು ಪುನಃ ತೌರುಮನೆಗೆ ಕಳುಹಿಸಿಬಿಟ್ಟು ಬೇರೊಬ್ಬಳನ್ನು ಮದುವೆಯಾಗಿ ಅವಳ ಕೂಡ ಸಂಸಾರ ಮಾಡುತ್ತಿರುವರು. ನನ್ನ ಗಂಡನಿಗೆ ಪ್ರತಿ ತಿಂಗಳಲ್ಲೂ ೧೫೦ ರೂ. ಪಿಂಚನ್ನು ಬರುತ್ತಿರುವುದಲ್ಲದೆ ೬೦-೭೦ ಸಾವಿರ ರೂಪಾಯಿ ಆಸ್ತಿಯಿರುವುದರಿಂದ ತಿಂಗಳಿಗೆ ೫೦ ರೂ ನಂತೆ ಜೀವನಾಂಶಕೊಡಿಸಬೇಕು." ಇದಕ್ಕೆ ಇದಿರು ಅರ್ಜಿದಾರರಾದ ಮ|| ಷರೀಫರು ಈಕೆಯ ನಡತೆಯು ಚೆನ್ನಾಗಿರಲಿಲ್ಲ. ಮನೆಯಲ್ಲಿ ಕಲಹ ಮಾಡುತ್ತಿದ್ದುದರಮೇಲೆ ೧೨-೬-೧೯೩೦ ರಲ್ಲಿ ತಲಾಖ್ ಅಂದರೆ ವಿವಾಹವಿಚ್ಛೇದನಮಾಡಿ ೩ ತಿಂಗಳ ವರೆಗೆ ಖರ್ಚಿಗೆ ೩೦ ರೂ ಗಳನ್ನೂ ದಾರೀ ಖರ್ಚನ್ನೂ ಕೊಟ್ಟು ಒಬ್ಬ ಹೆಂಗುಸಿನ ಕೂಡ ಆಕೆಯ ತೌರುಮನೆಗೆ ಕಳುಹಿಸಿದೆನು. ಆಕೆಯನ್ನು ನ್ಯಾಯರೀತಿಯಿಂದ ಬಿಟ್ಟಿರುವುದರಿಂದ ಜೀವನಾಂಶಕ್ಕೆ ಆಕೆಯು ಅರ್ಹಳಲ್ಲವೆಂದು ವಾದಿಸಿದರು. ಇದರ ಮೇಲೆ ಮೆಜಿಸ್ಟ್ರೇಟರು ವಿವಾಹವಿಚ್ಛೇದನವಾಗಿರುವುದು ಸಿದ್ಧವಾದುದರಿಂದ ಜೀವನಾಂಶ ಸ್ವತಕ್ಕೆ ಅರ್ಹಳಲ್ಲವೆಂದು ನಿರ್ಧರಿಸಿ ಫಿರ್ಯಾದನ್ನು ವಜಾ ಮಾಡಿದರು.

೧೧ ನೇ ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭಾ ಧಾರವಾಡ

ತಾ|| ೧೧-೧೦-೩೨ ನೇ ದಿವಸ ೬ ಘಂಟೆಗೆ ಧಾರವಾಡ ಲಿಂಗಾಯತ ಟ್ರೇನಿಂಗ್ ಕಾಲೇಜಿನಲ್ಲಿ ಶ್ರೀಮದ್ವೀರಶೈವ ಮಹಾ ಸಭೆಯ ಕಾರ್ಯಕಾರಿ ಕಮಿಟಿಯ ಸಭೆಯಲ್ಲಿ ೧೧ ನೇ ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭೆಯನ್ನು ಡಿಸೆಂಬರ್ ತಾ|| ೨೮, ೨೯ ನೇ ದಿವಸ ಕರೆಯುವುದಕ್ಕೆ ನಿರ್ಧರಿಸಲಾಯಿತು.

ಅಖಿಲಭಾರತ ಶ್ರೀಮದ್ವೀರಶೈವ ಮಹಿಳಾ ಪರಿಷತ್ ಧಾರವಾಡ

ತಾ|| ೧೪-೧೦-೩೨ ನೇ ದಿವಸ ಧಾರವಾಡ ಲಿಂಗಾಯತ ಟ್ರೇನಿಂಗ್ ಕಾಲೇಜಿನಲ್ಲಿ ಅಖಿಲಭಾರತ ಶ್ರೀಮದ್ವೀರಶೈವ ಮಹಿಳಾ ಪರಿಷತ್ತಿನ ಪ್ರಾರಂಭ ಅಧಿವೇಶನದ ಚರ್ಚೆ ... ಶ್ರೀಮದ್ವೀರಶೈವ ಮಹಿಳಾ ಪರಿಷತ್ತಿನ ಸ್ವಾಗತಸಂಘದ ಸದಸ್ಯರಾಗುವ ... ಶುಲ್ಕ ೧ ರೂ ವರ್ಷಕ್ಕೆ ಕೊಡತಕ್ಕದ್ದು ...

[illegible] ಮಹಿಳೆಯರನ್ನು ಸೇರಿಸಿಕೊಳ್ಳುವುದು [illegible]

ಎಸ್ ಎಸ್ [illegible] (ಸಪ್ಲೈಕರ್ಸ್ [illegible])

ಪತ್ರ ವ್ಯವಹಾರ.

[illegible] ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ — ಸಂಪಾದಕ

ಪಂಡಿತ ಭಾಳಿಂಕ್ಷ ಶಾಸ್ತ್ರಿಗಳ ತ್ಯಾಗ.

ಜ್ಞಾನವಯೋವೃದ್ಧರೂ ಸ್ವಕೀಕವ್ಯ ನೈಷ್ಠಿಕರೂ ನಿರಾಡಂಬರರೂ ಆದ ಪಂ|| ಭಾಳಿಂಕ್ಷ ಶಾಸ್ತ್ರಿಗಳವರು ಕಾಶೀ ಶ್ರೀ ಜಗದ್ಗುರು ವಿಶ್ವಾರಾಧ್ಯ ಮಹಾ ಸಂಸ್ಥಾನದಲ್ಲಿ ಸುಮಾರು 30-40 ವರ್ಷಗಳಿಂದ [illegible] ಆಸ್ಥಾನ ವಿದ್ವಾಂಸರಾಗಿಯೂ ಇದ್ದುದು ವೀರಶೈವ [illegible] ಪಂಡಿತ ವರ್ಗಕ್ಕೂ ಮಹಾಜನಗಳಿಗೂ ಸುಪರಿಚಿತವಷ್ಟೆ। ಅತ್ಯಂತ ಸಂಯಮಿತ ಜೀವನವನ್ನು ನಡೆಸುವುದರಿಂದ ಅವರಿಗೆ ಈಗಿನ ಎಪ್ಪತ್ತು ವರ್ಷದ [illegible]

[illegible] ತಮ್ಮ ಮುಖ್ಯ ಸಂಪತ್ತನ್ನು ಇತರರಿಗೆ ಹಂಚತಕ್ಕವರು ದುರ್ಲಭರಷ್ಟೆ ಶ್ರೀ ಶಾಸ್ತ್ರಿಗಳು ವಿದ್ಯಾಪಂಚಕರನ್ನೇ ತಮ್ಮ ಉತ್ತರಾಧಿಕಾರಿಗಳನ್ನಾಗಿ ಭಾವಿಸಿ ಗ್ರಂಥ ಸಮೂಹವನ್ನೆಲ್ಲ ಕೊಟ್ಟು ಇತರರಿಗೆ ಉದಾತ್ತ ಮಾರ್ಗವನ್ನು ತೋರಿಸಿದರೆಂಬುದರಲ್ಲಿ ಸಂದೇಹವಿಲ್ಲ. ಈ ತ್ಯಾಗವೊಂದಲ್ಲದೆ ಅವರ ಅನೇಕ ಗುಣಗಳು ಸ್ತೋತ್ರಾರ್ಹಗಳಾಗಿದ್ದರೂ ಪೂಜ್ಯ ಶಾಸ್ತ್ರಿಗಳವರ ಆತ್ಮಪ್ರಶಂಸಾ ವಿಮುಖವಾದ ಸೂಕ್ಷ್ಮ ಸ್ವಭಾವವನ್ನನುಸರಿಸಿ ಎತ್ತರಿಸಲು ಶಕ್ತನಲ್ಲನೆಂದು ಗುಣಗ್ರಾಹಿಗಳಲ್ಲಿ ವಿಜ್ಞಾಪಿಸುತ್ತೇನೆ

ಓರ್ವ ವೀರಶೈವ ವಿದ್ಯಾರ್ಥಿ ಕಾಶಿ

ಉಪಕಾರ ಸ್ಮರಣೆ

ಶ್ರೀ ಜಗದ್ಗುರು ವಿಶ್ವಾರಾಧ್ಯ ಮಹಾ ಸಂಸ್ಥಾನದ ಆಸ್ಥಾನ ವಿದ್ವಾಂಸರಾದ ವೇ|| ಭಾಳಿಂಕ್ಷ ಶಾಸ್ತ್ರಿಗಳು 10-10-32 ರಲ್ಲಿ ನೂರಾರು ರೂಪಾಯಿ ಬೆಲೆಯುಳ್ಳ ತಮ್ಮ ಗ್ರಂಥರತ್ನಗಳನ್ನು ಸಮಸ್ತ ವಿದ್ಯಾರ್ಥಿಗಳಿಗೆ ಶಿವಾರ್ಪಣ ಬುದ್ಧಿಯಿಂದ ಸಮರ್ಪಿಸಿದ ಸಮಾರಂಭದಲ್ಲಿ ನನ್ನಯ ವೇಳೆ [illegible] ಸುಮಾರು 30 ರೂಪಾಯಿ ಬೆಲೆಯಾಗುವ ಅತ್ಯುತ್ತಮಗಳಾದ ಗ್ರಂಥಗಳನ್ನು « ಶೈವ ಭಾರತೀ ಭವನ » ಕ್ಕೆ ಅನುಗ್ರಹಿಸಿ ಮಹೋಪಕಾರಮಾಡಿರುತ್ತಾರೆ ಇವುಗಳಲ್ಲಿ ಕೆಲವಲಭ್ಯ ಗ್ರಂಥಗಳೂ ಇವೆ ಶ್ರೀ ಶಾಸ್ತ್ರಿಗಳವರು ನಿರಪೇಕ್ಷಾ ಬುದ್ಧಿಯಿಂದ ಪ್ರದಾನಿಸಿದ್ದರೂ ಅವರ ಉದಾತ್ತ ವಿಚಾರಗಳಿಂದ ನಮ್ಮಗಾಗಿರುವ ಉಪಕಾರವನ್ನೀಮೂಲಕ ಸಮಾಜಕ್ಕೆ ನಿವೇದಿಸುವುದು ಕರ್ತವ್ಯವೆಂದು ಭಾವಿಸುತ್ತೇನೆ—

ಜಿ ಮ ವೀರಭದ್ರಶರ್ಮ

ಕಾರ್ಯದರ್ಶಿ ಶೈವ ಭಾರತೀ ಭವನ

ಭ್ರೂಣಹತ್ಯೆಗೆ ಅಸ್ಪೃಶ್ಯರ ಪ್ರವೇಶ

ಮಹಾತ್ಮನ ಉಪವಾಸ ವ್ರತಕ್ಕೆ ಮಹಾ ಗುರುವಿನ ಆಶೀರ್ವಾದ ಎಂಬ ಹೆಡ್ಡಿಂಗಿನಿಂದ ನಾನು ಪ್ರಕಟಿಸಿದ್ದ ಪತ್ರ ಪತ್ರಿಕೆಯಲ್ಲಿ ಚಿತ್ರದುರ್ಗದ ಶ್ರೀ [illegible] ಜಗದ್ಗುರು [illegible] ಶ್ರೀ [illegible] ರಾಜೇಂದ್ರ ಮಹಾಸ್ವಾಮಿಗಳು ತಮ್ಮ [illegible] ಅಸ್ಪೃಶ್ಯರು ಪ್ರವೇಶಿಸಲು ಅವಕಾಶವನ್ನಿತ್ತು ಅವರನ್ನು ಪುನೀತರನ್ನಾಗಿ ಅನುಗ್ರಹಿಸಿದರೆಂದು ತಿಳಿಸಿದ್ದೆನು ಈ ಮಠ ಪ್ರವೇಶಕ್ಕೆ ಅವಕಾಶಕೊಡಲಾಗಿದ್ದುದು ಸುಳ್ಳೆಂದು ಕೆಲವು ವದಂತಿಯನ್ನು ಹುಟ್ಟಿಸಿದ್ದರಲ್ಲದೆ ನನಗೂ ಬರೆದಿದ್ದರು ಅದು ಇದರಿಂದ ಶ್ರೀ ಜಗದ್ಗುರು ಮಹಾ ಸಂಸ್ಥಾನದ [illegible] ಪತ್ರಿಕೆಯನ್ನು ನನ್ನ ಮಾತಿನ ತಪ್ಪಾಸಣೆಗಾಗಿಯೂ ಸಮಸ್ತರ ತಿಳುವಳಿಕೆಗಾಗಿಯೂ ಅನವಸರವಿರಹಾರಕ್ಕಾಗಿಯೂ ಈ ಕೆಳಗೆ ಪ್ರಕಟಿಸುತ್ತೇನೆ

ಎಸ್ ಎ ಹನುಮಂತರಾಜು

ಸೆಕ್ರೆಟರಿ ಆದಿಕರ್ನಾಟಕ ಅಸೋಸಿಯೇಷನ್ ಚಿತ್ರದುರ್ಗ ಡಿ||

ಶ್ರೀಮತ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾ ಸ್ವಾಮಿನಾಂ

ಶ್ರೀಮಚ್ಚಿನ್ಮೂಲಾದ್ರಿ ಬೃಹನ್ಮಠ ಮಹಾ ಸಂಸ್ಥಾನದ ಏಜಂಟರ ಆಫೀಸಿನಿಂದ— ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ — ಅಸ್ಪೃಶ್ಯರ ಪವಿತ್ರ ತಾ 25-9-1932 ರಲ್ಲಿ ನಡೆದ [illegible] ಕೆಲವು ಪತ್ರಿಕೆಗಳಲ್ಲಿ ಚಿತ್ರದುರ್ಗದ ಶ್ರೀ|| ಮಠವು ಯಾವ ಜಾತಿ [illegible] ಅಸ್ಪೃಶ್ಯರಿಗೆ ದರ್ಶನ ಪೂಜಾ [illegible] ಕೆಲವು ಪತ್ರಿಕೆಗಳಲ್ಲಿ ಪ್ರಕಟಿಸಿರು [illegible] ಈ ಜಾಗದಲ್ಲಿ [illegible] ತಮ್ಮ ಸಂಕೋಚವನ್ನು [illegible] ಇನ್ನು ಒಪ್ಪಿರು ಮಾತ್ರ ತಮ್ಮ ಅಸಂತೋಷ [illegible] « ಶಿವೇತಿ ಮಂಗಳ ನಾಮ | ಯಸ್ಯ ವಾಚಿ ಪ್ರವರ್ತತೇ | ಭಸ್ಮ [illegible] ಕಂಠಾಬಾಹಂ | ಭಕ್ತಿ [illegible] » ಎಂಬ ಶ್ರುತಿಯಂತೆ ಸದಾಚಾರಿಯವರನ್ನು ಸಾಮಾನ್ಯ ಜನರು ಬರುವ ಸ್ಥಾನ ಪರ್ಯಂತ ಬರಲು ಸದರಿಯವರು ಅತ್ಯಂತ ಹರ್ಷಮನಸ್ಕರಾಗಿ [illegible] « ಜಯ ನಮಃ ಪಾರ್ವತೀಪತೇ ಹರಹರ ಮಹಾದೇವ » ಎಂದು [illegible] ನಮಗೆ [illegible] ಧನ್ಯರಾದೆವೆಂದು [illegible] « ಸಾಮಾನ್ಯ ಜನರಿಗೆ ಪ್ರವೇಶಕ್ಕೆ ಅವಕಾಶವಿದ್ದಂತೆ ಸದರಿ ಜನಗಳಿಗೂ ಕೊಡತಕ್ಕದ್ದು ಯಾವತ್ತೂ ಹಿಂದು ಧರ್ಮಗಳಿಗೆ ಯುಕ್ತವಾಗಿದೆ » ಎಂದು ಈ ಮೂಲಕ ಪ್ರಸಿದ್ಧಗೊಳಿಸಲ್ಪಟ್ಟಿದೆ

ಟಿ ಜಿ ಹೊನ್ನಯ್ಯ ಹೆಡ್ ಏಜಂಟ್

ಭಾರತ ರಾಜಕೀಯದೃಶ್ಯ

(ಲೇ—ಕಣಕುಪ್ಪಿ ಗುರುಪಾದಪ್ಪ ಶ್ರೀ ಜಯದೇವ ಪ್ರೆಸ್ ದಾವಣಗೆರೆ)

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಇಲ್ಲಿಯವರೆಗೂ ಬ್ರಿಟಿಷರ ರಾಜ್ಯಾಡಳಿತೆಯ [illegible] ಈ ಹಿಂದೆಯೇ ಪ್ರಸ್ತಾಪಿಸಿದೆ ಇವರೆಲ್ಲರ ಕಾರ್ಯಕ್ರಮ ಆಕಾಂಕ್ಷೆಗಳನ್ನು ರಾಷ್ಟ್ರೀಯ ಗುರಿಯಲ್ಲಿ ಕೇಂದ್ರೀಕರಿಸಿಕೊಂಡು ದೇಶದ ಸರ್ವತೋಮುಖವಾದ ಅಭಿವೃದ್ಧಿಯ ಮೂಲಕ ಅದನ್ನು ಪಾರತಂತ್ರ್ಯದಿಂದ ಬಿಡುಗಡೆ ಮಾಡಲು ಹೊರಟಿರುವ ರಾಷ್ಟ್ರೀಯ ಸಭೆಯ ಉತ್ಪತ್ತಿ ಚಲನೆ ಚಟುವಟಿಕೆ ಬೆಳವಣಿಗೆಗಳನ್ನು ಈಗ ಪ್ರಸ್ತಾಪಿಸಲಾಗುವುದು

ದಯೆ ದಾಕ್ಷಿಣ್ಯ ಪರೋಪಕಾರ ಬುದ್ಧಿ ದೀನಜನಸೇವೆ ಪರೋತ್ಕರ್ಷದಲ್ಲಿ ಸಾನುಭೂತಿ ಸಂತೋಷಗಳು ಯಾವೊಂದು ಜನಾಂಗಕ್ಕೆ ಅಥವಾ ದೇಶಕ್ಕೆ ಮೀಸಲಾಗಿಟ್ಟ ಸೊತ್ತುಗಳಲ್ಲ ಇವು ಅಂತರಿಕ್ಷದ ವಾಯುವಿನಂತೆ ಸರ್ವ ಜಗತ್ತಿಗೂ ಸೇರಿದವುಗಳಾಗಿರುತ್ತವೆ ಆದರೆ ಮಾನವ ಜಾತಿಗೆ ಸಹಜವಾದ ಈ ಗುಣಗಳ ಪ್ರಕಾಶವೂ ಪ್ರಯೋಜನವೂ ದೇಶ ಕಾಲಸ್ಥಿತಿ ಸಾಂಪ್ರದಾಯಗಳನ್ನನುಸರಿಸಿರುತ್ತವೆ ಇಂಗ್ಲೆಂಡಿನಲ್ಲಿ ಕಡು ದೇಶಾಭಿಮಾನಿಗಳೂ ಗಹನ ವಿಚಾರಿಗಳೂ ಆದ ಸ್ಟ್ಯಾನ್ಲೆ ಬಾಲ್ಡ್ವಿನ್ ಲಾರ್ಡ್ ರೋನಾಲ್ಡ್ಶೆ ಚರ್ಚಿಲ್ ಲಾರ್ಡ್ ಪೀಲ್ ಸರ್ ಸ್ಯಾಮುಯಲ್ ಹೋರ್ ಮುಂತಾದವರು ಹಿಂದುಸ್ಥಾನದ ವಿಚಾರದಲ್ಲಿ ಕೇವಲ ಸಂಕುಚಿತ ಮತ್ತು ವಿರೋಧ ಭಾವಪೂರ್ಣರು ಫ್ರಾನ್ಸ್ ದೇಶದ ಉದ್ಧಾರಕ [illegible] ಹಿಂದುಸ್ಥಾನದ ತಿಲಕ ಗಾಂಧಿ ನೆಹರು [illegible] ಮೊದಲಾದವರ ಉಜ್ವಲ ದೇಶಾಭಿಮಾನವು ಪರಹಿಂಸಾತ್ಮಕದಿಂದ ಸ್ವಹಿತಸಾಧಕವಾದುದಾದರೂ ಇವರು ಇಂಗ್ಲೆಂಡಿಗೆ ದ್ರೋಹಿಗಳೆಂದು ಭಾವಿಸಲ್ಪಟ್ಟಿರುವರು ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆ ಇದರಂತೆ ಈ ಭೇದ ಬುದ್ಧಿಯು ವ್ಯಕ್ತಿ ಇಲ್ಲವೆ ರಾಷ್ಟ್ರ ಎಷ್ಟೇ ನಾಗರಿಕವಿರಲಿ ಅದರಲ್ಲಿ ಬಹು ಸೂಕ್ಷ್ಮ ರೂಪದಲ್ಲಿ ಇದ್ದೇ ಇರುವುದು ಮನುಷ್ಯನ ಮನ ಮತ್ತು ವೇದನೆಗಳಲ್ಲಿರತಕ್ಕ ವ್ಯಕ್ತತ್ವವೇ ಇದಕ್ಕೆ ಕಾರಣವು ಆಂದರೆ ಮೇಲಿನದು ಒಪ್ಪಿದುದು ಮನಸ್ಸಿಗೆ ಒಪ್ಪಿಗೆಯಾಗದಿರುವುದು ಎಂದು ಭಾವವು ಮನಸ್ಸಿನಲ್ಲಿರತಕ್ಕ ಪಕ್ಷಪಾತ ಲಕ್ಷಣಗಳನ್ನುಳ್ಳ ದುರಾಗ್ರಹ ದುರಾಸೆ ಪರೋತ್ಕರ್ಷ ಅಸಹನೆಗಳು ಹೆಚ್ಚಾಗಿ ಪ್ರಾದುರ್ಭವಿಸಿ ಅವನಲ್ಲಿರತಕ್ಕ ಉತ್ತಮ ಗುಣಗಳನ್ನು ಮರೆಮಾಡಿ ಅವುಗಳ ಪ್ರಕಾಶವನ್ನು ಅಡ್ಡಿ ಮಾಡುತ್ತಿರುವುದೇ ಈ ಪಂಕ್ತಿಗೆ ಕಾರಣವು ಇಂತಹ ವಿಷಮಾವಸ್ಥೆಯ ಸೆರೆಯಿಂದ ಬಿಡಿಸಿಕೊಂಡು ತನ್ನ ಪರಿಪೂರ್ಣತೆಯನ್ನು ಹೊಂದಲು ಮನುಷ್ಯನಿಗೆ ಪೂರ್ಣ [illegible]

[illegible] ಅವಕಾಶವು [illegible]

ಆವ ವರ್ಷದ ಕಾಂಗ್ರೆಸ್ ಸಮ್ಮೇಳನದ ಪ್ರೆಸಿಡೆಂಟ್ ಮಿಸ್ಟರ್ ಗ್ಲಾಡ್ಸ್ಟನ್ [illegible] ಗಾಂಧಿ [illegible] ಲಾರ್ಡ್ ರಿಪ್ಪನ್ [illegible]

[illegible] ರಾಷ್ಟ್ರ ಸಭೆಯನ್ನು ಸ್ಥಾಪಿಸಿದವರು ಆಂಗ್ಲೇಯರೆಂಬುದು ಈಗಿನ ಪ್ರಕ್ಷುಬ್ಧ ವಾತಾವರಣದಲ್ಲಿ ಬಹು ವಿಲಕ್ಷಣ ವಿಚಿತ್ರವಾಗಿ ಕಾಣಬಹುದು ಆದಾಗ್ಯೂ ಇದು ಯಥಾರ್ಥವಾದುದೇ ಆಗಿರುವುದು ಈ ವೈಲಕ್ಷಣ್ಯ ಈ ವೈಚಿತ್ರ್ಯಗಳ ವಿವರಣೆಗಾಗಿಯೇ ಇಂತಹ ಪೀಠಿಕೆಯೊಡನೆ ಈ ಮಹನೀಯರ ಹೆಸರನ್ನು ಎತ್ತಬೇಕಾಯಿತು

ಇವರು ತಮ್ಮ ಬಹಿರಂಗದಲ್ಲಿ ಅಷ್ಟು ಪ್ರಕಾಶ ಪ್ರಖ್ಯಾತಿಗಳನ್ನು ಪಡೆಯದವರೆಂದು ಸತ್ಯಸಂಧರಾದ ಸಮರ್ಥರಾದ ಖಂಡಿತರಾದ [illegible]

ಇವರು ಕಳೆದ ಶತಮಾನದ ಅಂತ್ಯಭಾಗದಲ್ಲಿ ಹಿಂದುಸ್ಥಾನ ಸರ್ಕಾರದ [illegible] ಉದಾಸೀನ [illegible] ಭಾರತ ಬ್ರಿಟಿಷ್ ರಾಷ್ಟ್ರಗಳಿಗೆ ಬಹು ಸ್ನೇಹಭಾವವು ಬೆಳೆದು [illegible] ಈ ವಿಚಾರಗಳ 1884 ರಲ್ಲಿ ಈ ದೇಶಕ್ಕೆ ವೈಸರಾಯಿಗಳಾಗಿ ಬಂದಿದ್ದ ಲಾರ್ಡ್ ಡಫರಿನ್ನರ ಮುಂದೆ ಇಟ್ಟರು [illegible]

[illegible]

ಮೊದಲು ರಾಷ್ಟ್ರ ಸಂಘವೆಂದಿದ್ದುದು (National Union) ಆನಂತರ ರಾಷ್ಟ್ರ ಸಭೆಯೆಂಬ ಹೆಸರನ್ನು ಪಡೆಯಿತು ಇದು 1885 ನೇ ಡಿಸೆಂಬರಿನಲ್ಲಿ ಮೊದಲು ಪೂನಾದಲ್ಲಿ ಸೇರಬೇಕೆಂದು ಗೊತ್ತಾಗಿದ್ದುದು ಅಲ್ಲಿ ಮಾರಕ ಜಾಡ್ಯದ ಭಯದಿಂದ ಬೊಂಬಾಯಿಯಲ್ಲಿ ಸೇರಿತು 72 ಜನ ದೇಶೀಯ ಪ್ರತಿನಿಧಿಗಳು [illegible] ಜನ ಸ್ನೇಹಿತರೂ ಹಿತಚಿಂತಕರೂ ಬಂದಿದ್ದರು ಬಂಗಾಳ [illegible] ಡಬ್ಲ್ಯು ಸಿ ಬಾನರ್ಜಿಯವರ ಅಧ್ಯಕ್ಷತೆ [illegible] ದಾದಾಭಾಯಿ ನೌರೋಜಿ ಫಿರೋಜ್‌ಷಾ ಮೆಹ್ತಾ [illegible] ನಾರಾಯಣ ಚಂದಾವರಕರ ಜಿ ಸುಬ್ರಹ್ಮಣ್ಯ ಅಯ್ಯರ ಪಿ ಆನಂದಾಚಾರ್ಲು ಗಂಗಪ್ರಸಾದ ನರೇಂದ್ರನಾಥಸೇನ ಗೋಪಾಳ ಗಣೇಶ ಆಗರ್ಕರ್ ಸೀತಾರಾಂ ಚಿಪ್ಳೂಣಕರ ಪಿ ಕೇಶವಪಿಳ್ಳೈ ಇವರ ಮೊದಲಾದವರು ಅಧಿಕಾರಿಗಳ ಭಯ ಬೆದರಿಕೆಗಳಿಗೆ ಸೊಪ್ಪುಹಾಕದೆ ದೇಶಕ್ಕಾಗಿ ಸೇವೆಗೈಯ್ಯಲು ಒಂದಿದ್ದರು ಅನಧಿಕಾರಿ ರೀತಿಯಿಂದ ಹಿತೈಷಿಗಳಾಗಿ ಬಂದಿದ್ದವರಲ್ಲಿ ವಿಲಿಯಂ ವೆಡ್ಡರ್ ಬರ್ನ್ ದಿವಾನ ಬಹದ್ದೂರ ರಘುನಾಥರಾವ್ ಮಹದೇವ ಗೋವಿಂದರಾನಡೆ ರಾಮಕೃಷ್ಣ ಭಂಡಾರಕರ್ ಕಾಶಿನಾಥ [illegible] ಇವರು ಮುಖ್ಯರು

ಮೈಸೂರು ಪ್ರಜಾಪ್ರತಿನಿಧಿ ಸಭೆಯ ದಸರಾಧಿವೇಶನದಲ್ಲಿ ದಿವಾನ್‌ಸಾಹೇಬರವರು ಅಪ್ಪಣೆಕೊಡಿಸಿದ ಭಾಷಣ

1932ನೆಯ ಇಸವಿ ಅಕ್ಟೋಬರ್ 10ನೆಯ ತಾರೀಖು.

1 ನೆಯ ಭಾಗ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಬಂಡವಾಳದ ವೆಚ್ಚಕ್ಕಾಗಿ ಬಜೆಟ್ಟಿನಲ್ಲಿ ಒದಗಿಸಿರತಕ್ಕ ಮೊಬಲಗನ್ನು ಬಹಳಮಟ್ಟಿಗೆ ಹೆಚ್ಚಿಸಬೇಕಾಗುತ್ತದೆಂದು ಈಗ ಕಂಡುಬಂದಿದೆ. ಏಕೆಂದರೆ ಕೆಲವು ಜರೂರಾದ ಮತ್ತು ಅತ್ಯಾವಶ್ಯಕವಾದ ಕಾಮಗಾರಿಗಳನ್ನು ಈಗ ನಡೆಸಬೇಕಾಗಿದೆ ಇವುಗಳನ್ನು ಮುಂದಕ್ಕೆ ತಳ್ಳಿಹಾಕುವ ಹಾಗಿಲ್ಲ ಬೆಂಗಳೂರು ನೀರು ಸರಬರಾಯಿಯ ಹೊಸ ಕಾಮಗಾರಿಗಳಿಗೆ ಇನ್ನೂ 8.9 ಲಕ್ಷ ರೂ. ಗಳ ಹೆಚ್ಚಿಗೆ ಗ್ರಾಂಟು ಅವಶ್ಯಕವಾಗಿರುವುದಾಗಿ ಕಂಡುಬಂದಿದೆ ಈ ಪೈಕಿ 3 ಲಕ್ಷ ರೂ ಗಳು ಹೋದವರ್ಷ ವೆಚ್ಚವಾಗದೆ ವಾಪಸಾಗಿ, ಈ ವರ್ಷ ಪುನಃ ಒದಗಿಸಬೇಕಾಗಿರುವ ಮೊಬಲಗಾಗಿದೆ ಉಳಿದ 6 ಲಕ್ಷ ರೂ ಬಲಾಕಾಯದ ಅಷ್ಟರಮಟ್ಟಿಗೆ ಉದ್ದೇಶಿಸಿರತಕ್ಕ ಪೂರ್ತಿ ಆಗಬಹುದಾದ ಅಟ್ಟಿಯನ್ನು ಅಗಲಮಾಡುವುದಕ್ಕಾಗಿ ಬೇಕಾಗುತ್ತದೆ ಇಂಜಿನಿಯರುಗಳ ಅಭಿಪ್ರಾಯದಿಂದ ಮಾಡಿರತಕ್ಕ ಸಲಹೆಯಮೇರೆ ಈ ಏರ್ಪಾಟನ್ನು ಕೈಕೊಳ್ಳಬೇಕಾಗಿ ಬಂದಿತು ಈ ಕೆಲಸದ ಜೊತೆಗೆ, ಬೆಂಗಳೂರು ನಗರದ ನೀರನ್ನು ಸರಬರಾಯಿ ಮಾಡುವುದಕ್ಕಾಗಿ ಹಳೆಯ ಕೊಳಾಯಿಗಳಿಗೆ ಬದಲು ಹೊಸ ಕೊಳಾಯಿಗಳನ್ನು [illegible] ಯುಗಳ [illegible] ಮಾಡಿ [illegible]

ಅಮೇರಿಕೆಯ ಎಣ್ಣೆ ಕಂಪೆನಿ (ಮದ್ರಾಸು)

[4—1]

ನಮ್ಮ ಕಂಪೆನಿಯ ಸೀಮೆಯೆಣ್ಣೆ, ಪೆಟ್ರೋಲು, ಲೂಬ್ರಿಕೇಟಿಂಗ್ ಎಣ್ಣೆ ಚರಬಿ ವಗೈರೆ ಕೆಲ್ಲರಗು ಪೆಟ್ರೋಲಿಗೆ ಸಂಬಂಧಪಟ್ಟ ಪದಾರ್ಥಗಳನ್ನು ಮಾರಲು ಬೆಂಗಳೂರು ಸಿಟಿ ಅವಿನ್ಯೂ ರೋಡಿನಲ್ಲಿರುವ ಮಾ|| ಪಿ ವಿ ಭದ್ರಪ್ಪನವರನ್ನು ಮೈಸೂರು ಮತ್ತು ಕೊಡಗು ಸೀಮೆಗಳಿಗೆ ಪಿಟ್ಟು ಏಜಂಟರನ್ನಾಗಿ ನಿಯಮಿಸಿದೆ, ಸಬ್ ಏಜಂಟರಾಗಿರಲಿಷ್ಟಪಡುವವರು ಬೆಂಗಳೂರು ಸಿಟಿ ಶ್ರೀ ನರಸಿಂಹರಾಜ ರೋಡಿನಲ್ಲಿರುವ 170-171 ನೇ ನಂಬರಿನ ನಮ್ಮ ಆಫೀಸಿಗೆ ಬರೆದುಕೊಳ್ಳತಕ್ಕದು

ದಿ ಅಮೆರಿಕನ್ ಆಯಿಲ್ ಕಂಪೆನಿ

[illegible]

[illegible]

[illegible]

ಮಕ್ಕಳಿದ್ದರೆ ಮನೆ ಚಂದ.

ಮಕ್ಕಳಿಲ್ಲಿಂದು

ಬಂಜೆತನದಿಂದ ಮುಕ್ತರಾಗುವಿರಿ

ಗರ್ಭಧಾರಣಾ ಸಂಜೀವಿನೀ

ಕ್ರಯ ರೂ ೩೦

ಈ ನಮ್ಮ ಅನುಭವಿಕ ಔಷಧ ಮೂರು ಸಾರ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಫಲಪ್ರದ ಆಗುವುದು ೯ ಗುಳಿಗೆಗಳ ಕ್ರಿ. ೩ ರೂಪಾಯಿ. ಟ. ಖ ೫ ಆಣೆ

ಪತ್ತೆ—ವೈದ್ಯ ವ್ಹಿ. ಎಸ್. ಕಾ

[illegible] ಕಾಮಗಾರಿಗಳನ್ನು [illegible] ವಿದ್ಯುಚ್ಛಕ್ತಿ [illegible] ಗ್ರಾಮಗಳಿಗೆ [illegible] ನಡೆಸುವ ಕಾಮಗಾರಿಗಳೂ ಪೂರೈಸುತ್ತ [illegible] ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕಿಸುವುದಕ್ಕಾಗಿ [illegible] ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವ [illegible] ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕಿಸುವುದಕ್ಕಾಗಿ [illegible] ಸ್ಥಳಗಳಿಗೆ ವಿದ್ಯುಚ್ಛಕ್ತಿಯನ್ನ ಸರಬರಾಯಿ ಮಾಡಲಾಗಿದೆ

ಈ ಕೆಲಸಗಳಿಗಾಗಿ ವೆಚ್ಚಮಾಡಿದ ಒಟ್ಟು ಬಂಡವಾಳವು 1932 ನೆಯ ಇಸವಿಯ ಜೂನ್ ಆಖೈರಿನವರೆಗೆ ಸುಮಾರು [illegible] ರೂ ಗಳವರೆಗೆ ಆಗಿದೆ [illegible]

[illegible]

ರೈಲ್ವೆಗಳು — ಮದ್ರಾಸ್ ಮತ್ತು ಸದರ್ನ್ ಮರಾಟಾ ರೈಲ್ವೆ ಕಂಪೆನಿಯವರಿಂದ [illegible]

[illegible]

ಜುಡಿಷಿಯಲ್ ಇಲಾಖೆ — [illegible]

[illegible]

ಪೋಲೀಸು ಇಲಾಖೆ — [illegible]

[illegible]

ಸ್ಯಾನಿಟರಿ [illegible]

[illegible]

ಮೈಸೂರು ವಿಶ್ವವಿದ್ಯಾನಿಲಯ — ವಿಶ್ವವಿದ್ಯಾನಿಲಯದಲ್ಲಿ [illegible] ವಿದ್ಯಾರ್ಥಿಗಳಿದ್ದರು [illegible]

[illegible]

ವಿದ್ಯಾಭ್ಯಾಸ — [illegible] 1931 ನೆ ಇಸವಿ ಜೂನ್ 1 ನೆಯ [illegible]

[illegible]

ವ್ಯವಸಾಯ ಇಲಾಖೆ — [illegible]

[illegible] ವ್ಯವಸಾಯ [illegible]

[illegible] ಅಗ್ರಿಕಲ್ಚರಲ್ ರಿಸರ್ಚ್ ಸಂಸ್ಥೆಯವರು ದ್ರವ್ಯಸಹಾಯ ಮಾಡಿದರೆ ಇಲ್ಲಿ ನಡೆಯಿಸುವುದಾಗಿ [illegible] ಅವರಿಗೆ ಬರೆಯಲಾಗಿದೆ

ಸಶೇಷ

ನಾರಿನ ಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರತರಿಸಿ ಕೊಳ್ಳಿರಿ. ಕಿ. ೧। ರೂ [illegible] ಅಣೆ

ಪತ್ತಾ — ವೈದ್ಯ ಪ್ಪಿ ಎಸ್ ಕಾಪಸೆ, ಮಿರಜ

26 M C

ಬೇಕಾಗಿದ್ದಾರೆ.

ರಾಯಚೂರ, [illegible], ಹೈದರಾಬಾದ್, ಹುಬ್ಬಳ್ಳಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸ ಮಾಡಲು ಅನುಭವಸ್ಥರಾದ ಮತ್ತು ಯೋಗ್ಯ [illegible] ಬೇಕಾಗಿದ್ದಾರೆ, ಧಾರಾಳ [illegible] ಕಮಿಷನ್ ಕೊಡಲಾಗುವುದು

ಯುಡಿಪಾರ್ಕ್ ಅಂಡ್ ಸನ್,

[illegible] ಸ್ಟ್ಯಾಂಪು ಮತ್ತು ಫೋಟೋ ಬ್ಲಾಕುಗಳನ್ನು ತಯಾರಿಸುವವರು

[—] [illegible], ಬೆಂಗಳೂರು ಸಿಟಿ

೧೯೩೭ ನೆಯ ಇಸವಿ ಅಕ್ಟೋಬರು ತಾ ೨೫ರಿಂದ ಅಕ್ಟೋಬರ್ ೩೦ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೯ ನೆಯ ಆಂಗಿರಸ ನಾಮಸಂವತ್ಸರದ ಆಶ್ವಯುಜ ಬಹುಳ ದಶಮಿಯಿಂದ ಕಾರ್ತಿಕ ಶುದ್ಧ ಪಾಡ್ಯಮಿ ವರೆಗಿನ ಪಂಚಾಂಗ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತಮಿಳು ಮಾಸ
1	ಸೋಮ	ದಶ	56 53	ಆಶ್ಲೇ	20 0	8
[illegible]	ಮಂಗಳ	ಏಕಾ	51 11	ಮಖ	19 4	9
	1 ಬುಧ	ದ್ವಾದ	50 35	ಪುಬ್ಬ	18.32	10
27	2 ಗುರು	ತ್ರಯೋ	46 8	ಉತ್ತ	16.10	11
28	3 ಶುಕ್ರ	ಚತು	41 2	ಹಸ್ತ	13 -2	12
29	4 ಶನಿ	ಅಮಾ	3. 19	ಚಿತ್ತ	9 46	13
30	5 ಭಾನು	ಪಾಡ್ಯ	29 22	ಸ್ವಾತಿ	6 66	14

(1) ಮಳೆನಕ್ಷತ್ರ ಸ್ವಾತಿ ೨ ನೆಯ ಪಾದ (2) ಅಭ್ಯಂಗನಸ್ನಾನ (3) ನರಕಚತುರ್ದಶಿ (4) ಕೇದಾರೇಶ್ವರವ್ರತ (5) ಕಾಮಧೇನುಪೂಜೆ ಬಲೀಂದ್ರಪೂಜೆ, ದೀಪಾವಳಿ, ಮಳೆನಕ್ಷತ್ರ ಸ್ವಾತಿ ೪ ನೆಯ ಪಾದ

ಮೈಸೂರು, ಪೈ ಎಂ. [illegible] ನವರಿಂದ [illegible] ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು

KNG NO 124

ಮೈಸೂರ್ ಸ್ಟಾರ್

[illegible]

[ಸ್ಥಳದವರಿಗೆ ವಾರ್ಷಿಕ ಚಂದಾ ೧-೧೦-೦] [ಪರಸ್ಥಳದವರಿಗೆ ೩-೦-೦] [ಶ್ರೀಮಂತರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸನ್ ೧೯೩೧ ನೆಯ ಇಸವಿ ಅಕ್ಟೋಬರ್ ತಾರೀಖು ೩೧ ನೆಯ ಸೋಮವಾರ [ಸಂಚಿಕೆ ೪೪

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death.

The best, safest, cheapest most profitable and most convenient place of Insurance is the Public Branch of the Mysore State Life Insurance.

Policies are issued from Rs 100 to Rs 10,000 and copies of rules and forms of application can be had from all Government-Treasuries Economic Superintendents Helpers and the Insurance Office Public Office Buildings Bangalore.

(Sd.) S SHAMANNA
Secretary, Insurance Committee

[60—17]

ಲಗ್ನಪತ್ರಿಕೆಗಳು

ಮುದ್ರಣಕ್ರಮ

ನಮ್ಮ ಕ್ರಾಕ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇರಿ.
[illegible]	೦—೧೨—೦	೧—೨—೦
[illegible]	೦—೮—೦	೦—೧೪—೦
[illegible]	೦—೪—೦	೦—೯—೦
[illegible]	೦—೫—೦	೦—೧೦—೦
[illegible]	೦—೪—೦	೦—೯—೦
[illegible]	೦—೪—೦	೦—೯—೦
[illegible]	೦—೧—೦	೦—೬—೦
[illegible]	೦—೮—೦	೦—೧೩—೦
[illegible]	೦—೪—೦	೦—೧೩—೦
[illegible]	೧—೦—೦	೧—೬—೦

ಸ್ವಾದ ಬಿಗತ್ತು] ೧೦೦೦ ರೂಪಾಯಿ ಇನಾಮು [ಆದೇನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕೆ. ಬಿ. ಸಿ. ಇವರ ೪೦ ವರ್ಷ ಅನುಭವಸಿದ್ಧ

ಅಜೀರ್ಣ ದಾಹಕ್ಕಾಗಿ ಕ್ಷೀಣರಾಗ [illegible]	ಧಾತುಪೌಷ್ಟಿಕ ಮಾತ್ರೆ ಶಕ್ತಿವರ್ಧಕ	ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು [illegible]
	ರಜಿ] ಸರ್ವಾಂಗ ಸುಂದರಪಾಕದ [ಸ್ವರ	

[illegible]

ಸ್ತ್ರೀ ರೋಗ ನಿವಾರಣಿ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

[60—14]

ಪ್ರಕಾಶ್ಯ ಮಾಲಿಕ:—ವೈದ್ಯ ಕೆ. ಎಸ್. ಕಾಬಕ ಮು. ಪೋ. [illegible]

ಡಾಕ್ಟರ್ ಜೀ ಬೀ. ಯವರ

ಸುಗಂಧ ನಶ್ಯದ ಪುಡಿ.

[illegible]

[illegible]

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್, [illegible]

[60—0]

ಮೈಸೂರು ಸ್ಟಾರ್

೧೯೩೨ ನೇ ಇಸವಿ ಅಕ್ಟೋಬರ್ ತಾ|| ೩೧ನೆಯ ಸೋಮವಾರ

THE THIRD R. T. C.

It is difficult for any one to hope for anything much from the third Round Table Conference. It is very much so that the R. T. Cs and it is now popularly called a pocket edition of the earlier ones. From the point of view of the political power that India is to gain it is certainly less encouraging than its predecessors. For one thing the fact that the Congress is out of it is enough to take away much of its utility and helpfulness. Without Mahatma Gandhi it is practically certain that it will not interest India anything more than what the previous ones have done. But possibly there are other matters which though not directly relating to the transfer of power from Britain to India are yet of vital concern so far as the Federal units are concerned. The Indian States and Mysore in particular have got to settle certain problems of finance and political relationship with the Federal Government on the one hand and the British Government on the other. The Davidson Committee's findings which the Dewan Saheb referred at considerable length are so reactionery from Mysore point of view that it will tax all the resources of our resourceful Dewan to get a proper and equitable decision at the coming conference. It may be that the British people have already got their bill on their hands and this new Conference is just a formality. But surely there is no room in any bill for archaic anachronisms. First and foremost we hope the Dewan Saheb will succeed in getting the Conference to efface the payments of subsidy by various Indian States to the Central Government. It is not very easy we know but it is just that we trust that will spur our *Dewan Saheb to use all his best talent to win* over those who may either be opposed which element may be small or be indifferent which element may be large. We are sure that Sir Mirza will also succeed in the justice of retrocession of the Civil and Military Station. As regards the setting off the postal immunity enjoyed by Mysore Durbar against any reduction of subsidy as suggested by the Davidson Committee we can fairly be sure that such a suggestion will never commend itself to any but a most calculating man. Of one thing we are certain that if there is any one who can gain the utmost advantage to Mysore at this psychological juncture it is Sir Mirza. We learn he is leaving Bangalore on the 5th morning. We have had occasion to express along with the rest of our countrymen the great contribution Sir Mirza has made to the conception and development of the Federal ideal and to the redress of the disabilities Mysore is suffering under as regards subsidy etc. We do hope that in this last and final act Sir Mirza will make a supreme effort to win as much tangible freedom for India as possible on the one hand and on the other to win for Mysore the advantages we have been striving after for so long.

ಕೆಲ ಮುಜರಾಯಿ ಸತ್ರ ವ್ಯಯಕರ್ತನ

The situation in which the Unity Conference was convened under the presidency of that veteran statesman Mr Vijayaraghavachariar of South India, at Allahabad was not very hopeful. Every one had misgivings about the turn it may take at any time during the progress of the conference. The unavoidable departure of Maulana Shaukat Ali from the conference and the refusal of Sir Mohamed Yakub and his adherents to attend, rendered the situation critical. Under such auspices the conference began to work out an *agreement satisfactory to the Hindus*, Muslims and the Sikhs. It will be remembered that all previous attempts at Hindu-Muslim rapproachment had failed and obstacles in the way of amicable settlement were not few especially in view of some of the leaders of both the communities having departed to attend the third R T C. The old adage "darkest hour is before the dawn" was true of the atmosphere in which the conference began to evolve a formula acceptable to the Hindus, Muslims and the Sikhs alike. There gathered threatening clouds of dead-lock failure and disagreement during the discussion of some of the ticklish questions in the Committee of the Unity Conference. Thanks, to the patriotic efforts and untiring zeal of the aged President Mr Vijayaraghavacharlar, Pandit Malaviyaji, Abdul Kalam Azad and others, a satisfactory settlement has been reached on all the points affecting the relationship between the two communities on 17th evening, the full text of which is released to the press. It is most gratifying that the *agreement* is unanimous and the feelings of the leaders throughout this momentous session of eighteen days, have been cordial. It is really very happy that success has at last attended the strenuous efforts of the Unity *Committee* and this we believe, will ensure permanent cordiality mutual good will and trust between the two great communities thus laying a surer foundation for the growth of United India. This ensured other minor questions solve themselves and pave the way for the speedy emancipation of Indian Nation from the thraldom of foreign bureaucracy. In this connection we are compelled to observe that immediate steps should be taken to get the agreement ratified by every section of the Nation. If it is adopted whole heartedly by All India the *Communal Award* which had become an inevitable alternative in the absence of an agreement, will have to be modified in the light of the memorable agreement now reached. It is also necessary that the R. T. C. delegates of both the communities should take their stand on the agreement and fight out the salvation of their motherland. Coming now to the details of the settlement the main provisions are -firstly that adequate protection is guaranteed to the culture, language, script, education and the practice and personal laws of the communities in the constitution, secondly that provincial autonomy and responsibility in the centre—with safeguards for a period of ten years shown to be demonstrably in the interest of India, thirdly the powers of *Provincial* Governments being scheduled exhaustively questions of doubt to be settled by the Supreme Court; fourthly that the Army and the Judiciary to be open to all the communities *selection being made on merit alone*; fifthly that Judiciary must be separated from the Executive and the recruitment to the service being made by a Public Service Commission creating equal opportunities to all. Other important items of the decisions are the separation of Sind as a Governor's province with safeguards for the Hindus in that province, reservation of 51 percent of seats to the Muslims both in Bengal and Punjab and 32% in the Central Legislature. It is also agreed that the method of election should be through joint electorates, but for the next ten years the method of election being the modified form of ... for ... All this, which had hitherto baffled the efforts of so many, is no small achievement of the Conference. In conclusion we heartily congratulate all those patriotic men who laboured hard in the cause of Unity, on the successful consummation of their efforts in solving India's most difficult and knotty problem.

CONGRATULATIONS

We offer our hearty and sincere congratulations to Mr Justice P Mahadeviah on his elevation as Chief Justice of the High Court of Mysore and to Mr K Shankaranarayana Rao on his being raised to the High Court as Puisne Judge. Mr. P Mahadeviah has by *dint of honest, conscientious and able work* proved himself worthy of the high trust now reposed in him by His Highness the Maharaja of Mysore. It is not often that the highest Judicial office in the land is secured to a member of the unprivileged communities and we think that it is a matter in which the country as a whole feels justly proud. We have no doubt that Mr Mahadeviah will prove a great success in the high office even as many of his predecessors have been. Mr K. Shankaranarayana Rao in fact deserved the present elevation much earlier. His bright academic career his long experience at the Bar and his success as a District and Sessions Judge along with his innate courtesy all fit him supremely for the task he is called upon to discharge. We wish both these officers every success.

ಅಲಹಾಬಾದು ತೀರ್ಮಾನ

ಹಿಂದು ಮಹಮ್ಮದೀಯ ಮತ್ತು ಸಿಕ್ಕರುಗಳಲ್ಲಿ ಐಕಮತ್ಯವನ್ನುಂಟುಮಾಡಬೇಕೆಂಬುದ್ದೇಶದಿಂದ ಮೌಲಾನಾ ಷೌಕತಾಲಿಯವರೂ ಪಂಡಿತ ಮದನಮೋಹನ ಮಾಳವೀಯವರೂ ಬಹಳ ಪ್ರಯಾಸಪಟ್ಟು ಮೂರು ಮತದವರ ನಾಯಕರುಗಳ ಸಭೆಯನ್ನು ಮಯೋವೃದ್ಧರೂ, ರಾಜಕೀಯ ವಿಚಾರಂದಲ್ಲಿ ನುರುಗಿದವರೂ ಆದ ಶ್ರಾಲ್ಯದ ಮ|| ವಿಜಯರಾಘವಾಚಾರ್ಯರ ಅಧ್ಯಕ್ಷತೆಯಲ್ಲಿ ಅಲಹಾಬಾದಿನೊಳಗೆ ಇದೇ ತಾ|| 3 ರಲ್ಲಿ ಕೂಡಿಸಿದರು. ಹಿಂದು ಮಹಮ್ಮದೀಯರ ಐಕಮತ್ಯವೂ ಸಂಯುಕ್ತ ನಿಯೋಜಕ ವರ್ಗದೇರ್ಪಾಟೂ ಭಾರತ ಸ್ವರಾಜ್ಯಸಾಧನೆಗೆ ವಶ್ಯವೆಂದು ಮನಗೊಂಡು ಆ ಸಮ್ಮಿಸಮ್ಮೇಳನಕ್ಕೆ ಪ್ರಯತ್ನಿಸಿದ ಮೌಲಾನಾ ಷೌಕತಾಲಿಯವರು ಪರದೇಶ ಪ್ರಯಾಣಮಾಡಿದುದರಿಂದಲೂ, ಸರ್ ಮಹಮ್ಮದ್ ಯಾಕೂಬ್ ರವರೂ ಅವರ ಅನುಯಾಯಿಗಳೂ ಆಹ್ವಾನವನ್ನು ತಿರಸ್ಕರಿಸಿದುದರಿಂದಲೂ, ಕೆಲ ನಾಯಕರುಗಳು ಬಿಗಿಪಟ್ಟಿನಲ್ಲಿದ್ದುದರಿಂದಲೂ ಸಭೆಯ ಸದುದ್ದೇಶವು ನೆರವೇರಲಾರದೆಂಬ ಶಂಕೆಯುಂಟಾಗಿದ್ದಿತು. ಆದರೆ ಪಂಡಿತ ಮಾಳವ್ಯರವರು ಅಬ್ದುಲ್ ಕಲಂ ಆಜಾದ್ ಮೊದಲಾದ ಪ್ರಮುಖರ ಮತ್ತು ಅಧ್ಯಕ್ಷರ ಕಾಲೋಚಿತವಾದ ಸಲಹೆಯಿಂದಲೂ ಪ್ರಯತ್ನವಿಶೇಷದಿಂದಲೂ ನಾಯಕ ಸಭಿಕರುಗಳು ಭಿನ್ನಾಭಿಪ್ರಾಯಗಳನ್ನು ಬಿಟ್ಟು ಐಕಮತ್ಯ ಪ್ರಯತ್ನ ಕೈಕೊಂಡುದರಮೇಲೆ ಪರಸ್ಪರ ಸಮಾಧಾನ ಕ್ರಮಗಳನ್ನು ಆಲೋಚಿಸಿ ನಿರ್ಧರಿಸಲು ಒಂದು ಕಮಿಟಿಯೇರ್ಪಡಿಸಲ್ಪಟ್ಟಿತು. ಈ ಕಮಿಟಿಯವರು 18 ದಿವಸಗಳವರೆಗೆ ಸಮಾಧಿಸ್ಥರಾಗಿ ಸಮಸ್ತ ವಿಷಯಗಳನ್ನೂ ಚರ್ಚಿಸಿ ಹಿಂದು ಮಹಮ್ಮದೀಯ ಸಿಕ್ಕರುಗಳಿಗೆ ಒಪ್ಪಿತವಾಗಿರುವ ರೀತಿಯಲ್ಲಿ ತೀರ್ಮಾನಿಸಿ ತಮ್ಮ ಕಾರ್ಯವನ್ನು ತಾ|| 17 ರ ಸಾಯಂಕಾಲದಲ್ಲಿ ಮುಗಿಸಿದರು. ಈ ಕಮಿಟಿಯ ಸೆಕ್ರೆಟರಿಯವರಾದ ಪಂಡಿತ ಗೋವಿಂದ ಮಾಳವ್ಯರವರು "ಭಾರತದೇಶದಲ್ಲಿ ನಾನಾ ಮತದವರೊಳಗೆ ಕೆಲವರ್ಷಗಳಿಂದಲೂ ಬೇಧಭಾವವು ಹುಟ್ಟಲು ಕಾರಣವಾಗಿದ್ದ ಎಲ್ಲ ವಿಷಯಗಳಲ್ಲೂ ಏಕಮತ್ಯ ಕಮಿಟಿಯವರ 17 ದಿನಗಳ ವರೆಗೆ ಚರ್ಚೆ ನಡೆಸಿದಮೇಲೆ ಏಕಾಭಿಪ್ರಾಯವುಂಟಾದುದು ಮಹಾಸಂತೋಷಪ್ರದವು. ಈ ಸಂತೋಷಕ್ಕೆ ಪಾರವೇ ಇಲ್ಲ. ಏಕಮತ್ಯ ಕಾಣಲು 150 ಘಂಟೆಗಳಕಾಲ ಚರ್ಚೆ ನಡೆದುದರ ಮೇಲಿಂದ ವಿಷಯಗಳು ಎಷ್ಟು ಕ್ಲಿಷ್ಟವಾಗಿದ್ದುವೆಂಬುದು ವ್ಯಕ್ತವಾಗುತ್ತದೆ. ಪಂಜಾಬು, ಬಂಗಾಳ, ಸಿಂಧು ರಾಷ್ಟ್ರಗಳ ವಿಷಯದಲ್ಲೂ, ಸಂಯುಕ್ತ ನಿಯೋಜಕವರ್ಗದ ವಿಷಯದಲ್ಲೂ ಸಭಿಕರು ಏಕಾಭಿಪ್ರಾಯಕ್ಕೆ ಬಂದರು. ತಮಗೆ ಕೊಡಲ್ಪಟ್ಟ ರಕ್ಷಣೆಗಳಿಂದ ಮೈನಾರಟಿಯವರು ತೃಪ್ತಿಪಟ್ಟುಕೊಂಡರು. ಅವರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾದುದರಿಂದ ಮೆಜಾರಿಟಿಯವರಿಗೂ ಸಂತೋಷವಾಯಿತು" ಎಂದು ಪ್ರಕಟಿಸಿರುವರು. ಇವರುಗಳ ಪ್ರಾಮಾಣಿಕ ಪ್ರಯತ್ನಗಳಿಂದ ಸಾಧ್ಯವಾಗಿದ್ದ ಹಿಂದು ಮಹಮ್ಮದೀಯ ಐಕಮತ್ಯವು ಕುದುರಿದುದೂ ಇದರಿಂದ ಭಾರತ ಮಂತ್ರಿಗಳ ಪ್ರಯತ್ನವಾದ ಪ್ರತ್ಯೇಕ ನಿಯೋಜಕ ವರ್ಗ ಏರ್ಪಾಟು ಮಣ್ಣುಗೂಡಿರುದುದೂ, ಭಿನ್ನಮತದವರ ಭಿನ್ನಭಾವಗಳನ್ನು ಪ್ರಸ್ಫುಟಗೊಳಿಸಿ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುತ್ತಿದ್ದ ಬ್ರಿಟಿಷ್ ಪ್ರಭುತ್ವದವರ ಭೇದೋಪಾಯವು ನಿಷ್ಫಲವಾದುದು, ಹಿಂದೂ ಐಕ್ಯತಾ ಭಾವವು ಹುಟ್ಟಿ ವೃದ್ಧಿಯಾಗಿ ಪಾಶ್ಚಾತ್ಯ ಪ್ರಭುತ್ವವೇರ್ಪಡಲವಕಾಶವಾದುದೂ ಸಂತೋಷದಾಯಕವಾಗಿರುತ್ತದೆ. ಇಂತಹ ಸಂತೋಷ ಪ್ರದವಾದ ಏಕಮತ್ಯ ಸಮ್ಮೇಳನವನ್ನು ಕೂಡಿಸಿ ಜಯಪ್ರದವಾಗಿ ನಡೆಸಿದ ಮ|| ವಿಜಯ ರಾಘವಾಚಾರ್ಯ, ಮಾಳವ್ಯ ಪ್ರಭೃತಿಗಳನ್ನು ಅಭಿನಂದಿಸುತ್ತೇವೆ ಮತ್ತು ಈ ತೀರ್ಮಾನವು ಭಾರತೀಯರೆಲ್ಲರಿಂದಲೂ ಅನುಮೋದಿತವಾಗಿ ಬ್ರಿಟಿಷರಿಗೆ ವಿಸ್ಮಯವನ್ನೂ ತಳಮಳವನ್ನೂ ಉಂಟುಮಾಡುವುದೆಂದು ನಿರೀಕ್ಷಿಸುತ್ತೇವೆ.

ರೌಂಡುಟೇಬಲು ಸಭಾರಂಭ

ಮೂರನೆಯ ರೌಂಡುಟೇಬಲು ಸಭೆಯು ಕಳೆದ ಗುರುವಾರ ಲಂಡನ್ ಪಟ್ಟಣದ ಪಾರ್ಲಿಮೆಂಟು ಭವನದೊಳಗೆ ಪ್ರಧಾನಾಮಾತ್ಯರಾದ ಮೆಕ್ಡೋನಾಲ್ಡ್ ರವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಆ ದಿವಸ ಅಧ್ಯಕ್ಷರು ಉಪಚಾರೋಕ್ತಿಯಿಂದ ಪ್ರತಿನಿಧಿಗಳನ್ನು ಸುಸ್ವಾಗತಿಸಿ "ಸಭೆಯಲ್ಲಿ ಜರುಗುವ ಕಾರ್ಯಗಳಿಂದ ಎಲ್ಲರಿಗೂ ಸಂತೃಪ್ತಿಯುಂಟಾಗುವುದೆಂದು ನಾನು ನಂಬುತ್ತೇನೆ. ನಮ್ಮಗಳ ಪರಸ್ಪರಾಭಿಪ್ರಾಯಗಳೆಲ್ಲ ನಮ್ಮೆಲ್ಲರಿಗೂ ಚೆನ್ನಾಗಿ ತಿಳಿದಿರುವುದರಿಂದ ಕಾಲಹರಣವಾಗದಂತೆ ಮುಖ್ಯ ವಿಚಾರಗಳನ್ನು ಕುರಿತು ಮಾತ್ರ ನಾವು ಚರ್ಚಿಸಬೇಕಾಗಿದೆ. ಕ್ರಿಸ್ತಮಸ್ ಹಬ್ಬದೊಳಗೆ ಈ ಸಭೆಯನ್ನು ಮುಗಿಸಲು ಬೇಕಾದಷ್ಟು ಅವಕಾಶವಿರುವುದು. ನಾನು ಪ್ರತಿದಿವಸವೂ ಸಭೆಗೆ ಬರಲವಕಾಶವಿಲ್ಲದಿರುವುದರಿಂದ ಪ್ರಭುತ್ವ ಪ್ರತಿನಿಧಿಗಳು ಈ ಸಭೆಯಲ್ಲಿ ತಿಳಿಸುವ ಅಭಿಪ್ರಾಯಗಳನ್ನೆಲ್ಲ ನಾನೂ ಮಂತ್ರಿವರ್ಗದವರೂ ಸೇರಿ ನಿರ್ಣಯಿಸದೆವೆಂದೇ ನೀವು ನಂಬತಕ್ಕದ್ದು. ಇದು ನೆರವೇರಲು ದೊರೆತನದವರು ಸರ್ವವಿಧದಲ್ಲೂ ಸಹಾಯಮಾಡುವರು" ಎಂದು ಭಾಷಣ ಮಾಡಿದರು. ಅನಂತರ ಹಿಜ್ ಹೈನೆಸ್ ಆಗಾಖಾನರವರು ಪ್ರತಿನಿಧಿಗಳ ಪರವಾಗಿ ಅಧ್ಯಕ್ಷ ಮಂತ್ರಿಗಳನ್ನು ವಂದಿಸಿ "ಹೇಗಾದರೂ ವಿಜಯವನ್ನು ಹೊಂದಬೇಕೆಂಬ ದೃಢಸಂಕಲ್ಪದಿಂದ ಈ ಸಭೆಗೆ ಬಂದಿರುತ್ತೇನೆ. ಈ ಸಭಾಕಾರ್ಯವು ಕ್ರಿಸ್ತಮಸ್ ಹಬ್ಬದೊಳಗೆ ಪೂರೈಸಿ ಭಾರತೀಯರಲ್ಲಿ ನ್ಯಾಯವಾದ ಕೋರಿಕೆಯುಳ್ಳವರಿಗೆ ಸಂತೃಪ್ತಿಕರವಾಗಿ ರಾಜ್ಯಾಂಗವಿಧಾನವು ನಿರ್ಮಿಸಲ್ಪಡುವುದೆಂದು ನಂಬುತ್ತೇನೆ" ಎಂದು ಹೇಳಿದರು. ಈವರೆಗೆ ಸಂಪೂರ್ಣವಾಗಿ ಚರ್ಚಿಸಲ್ಪಡದ ವಿಷಯಗಳುಮಾತ್ರ ಚರ್ಚಿಸಲ್ಪಡುವವು. ಡಿಸಂಬರ್ ತಾ|| ೨೦ ರೊಳಗೆ ಮುಗಿದರೆ ರಾಜ್ಯಾಂಗ ವಿಧಾನವನ್ನು ದೊರೆತನದವರು ಸಿದ್ಧಪಡಿಸುವರು. ಇದನ್ನು ಪಾರ್ಲಿಮೆಂಟಿನಲ್ಲಿ ಪರ್ಯಾಲೋಚಿಸಲನುಕೂಲವಾಗುವುದು. ಒಂದೊಂದು ವಿಷಯವನ್ನು ಒಂದೊಂದು ದಿವಸ ಚರ್ಚಿಸಲು ಏರ್ಪಡಿಸಬೇಕು. ಇತ್ಯಾದಿಯಾಗಿ ಭಾರತ ಮಂತ್ರಿಯವರು ಉಪನ್ಯಾಸಮಾಡಿದರು. ಕಾರ್ಯಕ್ರಮವು —(1) ಲೋಥಿಯನ್ ಕಮಿಟಿ ವರದಿ ಚುನಾವಣೆಯ ಪದ್ಧತಿ, ಎರಡು ಫೆಡರಲ್ ಶಾಸನಸಭೆಗಳ ಮೆಂಬರುಗಳ ಸಂಖ್ಯೆ (2) ಫೆಡರಲ್ ಪ್ರಭುತ್ವಕ್ಕೂ ರಾಷ್ಟ್ರೀಯ ಪ್ರಭುತ್ವಕ್ಕೂ ಪರಿಪಾಲನ ವಿಚಾರದಲ್ಲಿರಬೇಕಾದ ಸಂಬಂಧ (3) ಗೌರ್ನರ್ ಜನರಲ್ಲಿಗೂ ಗೌರ್ನರುಗಳಿಗೂ ಪ್ರತ್ಯೇಕಾಧಿಕಾರ (4) ಆರ್ಥಿಕ ಮತ್ತು ವಾಣಿಜ್ಯ ವಿಷಯಗಳಲ್ಲಿ ರಕ್ಷಣೆ (5) ದೇಶರಕ್ಷಣೆಗೆ ಸಂಬಂಧಪಟ್ಟ ಆರ್ಥಿಕ ವಿಚಾರ (6) ಫೆಡರಲ್ ಆರ್ಥಿಕ ಸಂಸ್ಥಾನಗಳ ಸಂಘದ ವರದಿ ಫೆಡರಲ್ ಆರ್ಥಿಕ ಸಂಘದ ವರದಿ (7) ಮುಖ್ಯ ಹಕ್ಕುಗಳು (8) ಭಾರತ ಶಾಸನ ಸಭೆಗಳಿಗೂ ಪಾರ್ಲಿಮೆಂಟಿಗೂ ಇರುವ ಅಧಿಕಾರಗಳು (9) ಸಂಸ್ಥಾನಾಧಿಪತಿಗಳ ರಾಜ್ಯಾಧಿಕಾರ. ಈ ವಿಚಾರಗಳು ಪರ್ಯಾಲೋಚಿಸಲ್ಪಟ್ಟು ಕಡೆಯಲ್ಲಿ ಅಂಗೀಕರಿಸಲ್ಪಡುವುವು.

ಅಭಿನಂದನ

ಮೈಸೂರು ಹೈಕೋರ್ಟ್ ಜಡ್ಜಿಯವರಾದ ಮ|| ಪಿ. ಮಹಾದೇವಯ್ಯ, ಬಿ ಎ, ಬಿ ಎಲ್, ರವರು ಆಫಿಸಿಯೇಟಿಂಗ್ ಚೀಫ್ ಜಡ್ಜಿಯವರಾಗಿಯೂ, ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರಾಗಿದ್ದ ಮ|| ಕೆ. ಶಂಕರನಾರಾಯಣರಾವ್, ಬಿ.ಎ., ಬಿ.ಎಲ್ ರವರು, ಚೀಫ್ ಕೋರ್ಟಿನ ಆಕ್ಟಿಂಗ್ ಜಡ್ಜಿಯವರಾಗಿಯೂ ಶ್ರೀಮನ್ಮಹಾರಾಜರವರಿಂದ ನಿಯಮಿಸಲ್ಪಟ್ಟಿರುವುದಕ್ಕಾಗಿ ಈ ಉಭಯ ನ್ಯಾಯಾಧೀಶರುಗಳನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ ಮತ್ತು ಹಿಂದುಳಿದ ವರ್ಗದವರಿಗೆ ಅಲಭ್ಯವಾಗಿದ್ದ ಪ್ರಧಾನ ನ್ಯಾಯಮೂರ್ತಿ ಸ್ಥಾನವನ್ನು ಈಗ ಅನುಗ್ರಹಿಸಿದುದಕ್ಕಾಗಿ ಪ್ರಭುವರ್ಯರನ್ನು ವಂದಿಸುತ್ತೇವೆ. ಈ ನ್ಯಾಯಮೂರ್ತಿಗಳ ನ್ಯಾಯಶಾಸ್ತ್ರ ನಿಪುಣತೆಯೂ, ಕಾರ್ಯಾಸಕ್ತಿಯೂ, ನಿಸ್ಪೃಹತೆಯೂ ನಿಷ್ಪಕ್ಷಪಾತತೆಯೂ ಉನ್ನತಿಗೆ ಕಾರಣಗಳಾಗಿರುತ್ತವೆ. ಈ ಉಭಯರಿಗೂ ದೀರ್ಘಾಯುರಾರೋಗ್ಯಾಭಿವೃದ್ಧಿಯನ್ನು ಪರಮೇಶ್ವರನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಮೆಕ್ಡೊನಾಲ್ಡರವರ ರಾಜೀನಾಮೆ

ಬ್ರಿಟನ್ನಿನ ಪ್ರಧಾನ ಮಂತ್ರಿಯಾದ ಮೆಕ್ಡೊನಾಲ್ಡರವರು ಕಣ್ಣಿನಿಂದ ಬಹಳ ತೊಂದರೆ ಪಡುತ್ತಿರುವರು. ಅವರು ಕಣ್ಣಿಗೆ ಚಿಕಿತ್ಸೆ ಮಾಡಿಸಿಕೊಳ್ಳಲು ಉದ್ಯೋಗವನ್ನು ಬಿಟ್ಟು ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ವೈದ್ಯರು ಹೇಳಿದ್ದರಿಂದಲೇ ಉದ್ಯೋಗದಿಂದ ನಿವೃತ್ತರಾಗುವರೆಂದು ಇಂಗ್ಲೆಂಡಿನ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರ್ತಮಾನವು ನಿರಾಧಾರವೆಂದು ರೂಟರ್ ವಾರ್ತೆಯಿಂದ ತಿಳಿಯಬರುತ್ತದೆ

ರಾಧಾದೇವಿಯವರ ಮರಣ

ಕೀರ್ತಿಶೇಷರಾದ ಅಂಬಾಲಾಲ ಸಕರಲಾಲರವರ ಧರ್ಮಪತ್ನಿ ಶ್ರೀಮತಿ ರಾಧಾದೇವಿಯವರು ಜ್ವರರೋಗ ಪೀಡಿತರಾಗಿದ್ದು ಕಳೆದ ಗುರುವಾರ ಪರಲೋಕಯಾತ್ರೆಯನ್ನು ಮಾಡಿದರು ಇವರಿಗೆ ೬೩ ವರ್ಷವಯಸ್ಸಾಗಿದ್ದಿತು ಇವರು ತಮ್ಮ ಪತಿಯವರ ವಾರ್ಷಿಕ ಸ್ಮರಣೋತ್ಸವ ದಿವಸ ಪತಿ ಸಾನ್ನಿಧ್ಯವನ್ನು ಹೊಂದಿದುದು ಜನರಿಗೆ ಆಶ್ಚರ್ಯವನ್ನುಂಟುಮಾಡುತ್ತದೆ ಇವರ ಶವಸಂಸ್ಕಾರವನ್ನು ಊರ ಜನರು ಬಹಳ ಭಕ್ತಿವೈಭವಗಳಿಂದ ನಡಿಸಿದರು

ಲಾರ್ಡ್ ಲಾಯಿಡ್‌ರವರ ಶಂಕೆ

ಭಾರತ ದೇಶಕ್ಕೆ ಸ್ವಾತಂತ್ರ್ಯವು ಕೊಡಲ್ಪಟ್ಟಲ್ಲಿ ಪ್ರಜೆಗಳು ದುಃಖಸಾಗರದಲ್ಲಿ ಮುಳಗಬೇಕಾಗುತ್ತದೆಂದೂ ಪೆಶರೇ ಷನ್ನಿನಿಂದ ಕೆಲ ದೇಶೀಯ ಸಂಸ್ಥಾನಾಧಿಪತಿಗಳ ನಡವಳಿಕೆಯು ಮತ್ತಷ್ಟು ಕಠಿಣವಾಗುತ್ತದೆಂದೂ ಅಹೋರಾತ್ರಿ ಭಾರತೀಯರ ಅಶ್ರೇಯಸ್ಸನ್ನೇ ಕೋರುತ್ತಿರುವ ಚರ್ಚಿಲ್‌ರವರ ಪಕ್ಷಕ್ಕೆ ಸೇರಿದ ಲಾಯಿಡ್‌ರವರು ಶಂಕಿಸುತ್ತಾರೆ ಇಂತಹ ಹಿತ ಶತ್ರುಗಳ ಸಂಖ್ಯೆಯು ಹೆಚ್ಚಾಗಿರುವಾಗ್ಗೆ ಭಾರತೀಯರ ಇಷ್ಟಾರ್ಥಸಿದ್ಧಿಯು ಎಷ್ಟರಮಟ್ಟಿಗಾಗಬಹುದು !

ವಾಟ್ಸನ್‌ರವರನ್ನು ಕೊಲ್ಲಲೆತ್ನಿಸಿದವರಿಗೆ ಶಿಕ್ಷೆ

ಸರ್ ವಾಟ್ಸನ್‌ರವರನ್ನು ಕೊಲ್ಲಲು ಪ್ರಯತ್ನಿಸಿದ್ದ 6 ಮಂದಿಗಳ ಪೈಕಿ ರಣಾಯಲ್ಲಿ ಸುನೀಲು ಚಟರ್ಜಿಗೆ ದ್ವೀಪಾಂತರವಾಸ ಶಿಕ್ಷೆಯೂ ಮನೋದರಂಜನ ಬೋಸನಿಗೆ 10 ವರ್ಷ, ಅಮರಚಂದ್ರ ಘೋಷ್‌ನಿಗೆ 4 ವರ್ಷ ಕಠಿಣ ಕಾರಾಗೃಹವಾಸ ಶಿಕ್ಷೆಯೂ ಅಲಿಪುರದ ಸ್ಪೆಷಲ್ ಜಡ್ಜಿ ಟಿ ಎಚ್ ಎಲ್ಲಿಸನ್‌ರವರಿಂದ ವಿಧಿಸಲ್ಪಟ್ಟು ಅವನಿದತ್ತ, ಪರ್ಣಕುಮಾರದಾಸ, ಮಿನಾಕ್ಷಿ ಭಕ್ಷಿ ಇವರುಗಳು ಬಿಡಲ್ಪಟ್ಟರು ಅಪರಾಧಿಗಳು ಶಿಕ್ಷೆಯನ್ನು ಬಹಳ ಉಲ್ಲಾಸದಿಂದ ಅಂಗೀಕರಿಸಿದರು

ಸೌ|| ಕಮಲಾ ನೆಹರುರವರ ಅಸ್ವಸ್ಥತೆ

ಪಂಡಿತ ಜವಹಾರಲಾಲರ ಪತ್ನಿ ಸೌ|| ಕಮಲ ನೆಹರುರವರಿಗೆ ಹೃದ್ರೋಗವು ಪ್ರಬಲವಾಗಿರುವುದರಿಂದ ಕಳೆದ ಮಂಗಳವಾರ ಅವರು ಬಹಳವಾಗಿ ಬಾಧೆಪಟ್ಟರು ಅದರಮೇಲೆ ಡಾಕ್ಟರುಗಳಾದ ಆಟಲ್, ಬಿ ಸಿ ರಾಯಿ, ಜೋರಜಬಿಹಾರಿ ಇವರುಗಳು ಆಕೆಯವರನ್ನು ಕಲಕತ್ತಾಕ್ಕೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಬೇಕೆಂದು ಅಭಿಪ್ರಾಯಪಟ್ಟುದರ ಮೇಲೆ ಆಕೆಯವರು ತಮ್ಮ ತಾಯಿ ಮತ್ತು ಡಾಕ್ಟರ್ ಆಟಲ್‌ರವರೊಡನೆ ಕಲಕತ್ತಾಕ್ಕೆ ಹೋಗಿರುವರು ಕಲಕತ್ತಾದಲ್ಲೂ ಹೃದ್ರೋಗವನ್ನು ಪರೀಕ್ಷಿಸಲು ತಕ್ಕ ಸಲಕರಣೆಗಳಿಲ್ಲವಂತೆ

ತುಫಾನಿನಿಂದ ಪಟ್ಟಣ ನಾಶವಾಯಿತು

ದಕ್ಷಿಣ ಅಮೇರಿಕೆಯ ಪಶ್ಚಿಮಕ್ಕೆ ಪೆಸಿಫಿಕ್ ಸಾಗರದಲ್ಲಿರುವ ಸಾಂತಕ್ರೂಜ್ ದ್ವೀಪದಲ್ಲಿ ತುಫಾನೆದ್ದು 2500 ಜನರು ಹತರಾದರು ಮತ್ತು ಪಟ್ಟಣವು ನಾಶವಾಗಿ ವಾಸಕ್ಕೆ ಯೋಗ್ಯವಾಗಿಲ್ಲದಿರುವುದರಿಂದ ಪುನಃ ನಿರ್ಮಿಸಲ್ಪಡಬೇಕಾಗಿದೆ ಉಳಿದಿರುವ ಜನರ ಆರೋಗ್ಯರಕ್ಷಣೆಗಾಗಿ ಸತ್ತವರನ್ನು ಸುಡಬೇಕಾಗಿಬಂದಿತು ಬಮ್ಯೂಡಾದಿಂದ 100 ಮೈಲುಗಳ ದೂರದಲ್ಲಿರುವ ಬ್ರಿಟಿಷರ ಲಿಟ್ಲ್ ಕೇಮನ್ ದ್ವೀಪವು ಬಿರುಗಾಳಿಯಿಂದ ನಾಶವಾಗಿ 60 ಮಂದಿ ಸತ್ತರು ಅನೇಕರು ಅಪಾಯವನ್ನು ಹೊಂದಿರುವರು ಈ ಬಿರುಗಾಳಿಯಿಂದಲೂ ತುಫಾನಿನಿಂದಲೂ ಕಬ್ಬಿನ ಬೆಳೆಯು ಶೇಕಡ 10 ರಂತೆ ನಾಶವಾಗಿ 50 ಲಕ್ಷ ಡಾಲರ್ ಹಣವು ನಷ್ಟವಾಗಿರುತ್ತದೆ

ಐರ್ಲೆಂಡು ರೈತರಿಗೆ ಡಿವೆಲೆರಾಯವರ ವಾಗ್ದಾನ

ಭೂಗಂದಾಯವನ್ನು ಐರ್ಲೆಂಡು ಕೊಡುವುದು ನ್ಯಾಯವಲ್ಲವೆಂದೂ, ಈ ವಿಚಾರವನ್ನು ನಿರ್ಣಯಿಸಲಿಕ್ಕಾಗಿ ಒಂದು ನಿಷ್ಪಕ್ಷಪಾತವಾದ ಕಮಿಟಿಯೇರ್ಪಡಿಸಬೇಕೆಂದೂ ಡಿವೆಲೆರಾಯವರು ಹಟಹಿಡಿದು ಹೋರಾಡುತ್ತಿರುವುದರಮೇಲೆ ಬ್ರಿಟಿಷಿನವರು ಆಗ್ರಹಗೊಂಡು ಐರ್ಲೆಂಡಿನಿಂದ ತಮ್ಮಲ್ಲಿಗೆ ಬರುವ ಪದಾರ್ಥಗಳ ಮೇಲೆ ಪ್ರತ್ಯೇಕ ಸುಂಕವನ್ನು ವಿಧಿಸಿರುತ್ತಾರೆ ಇದರಿಂದ ಐರ್ಲೆಂಡಿನ ರೈತರುಗಳಿಗೆ ಬಹಳ ಕಷ್ಟನಷ್ಟವಾದುದರಮೇಲೆ ಕಂದಾಯವನ್ನು ಕೊಡಲಾಗುವುದಿಲ್ಲವೆಂದು ರೈತರು ಮೊರೆಯಿಟ್ಟುಕೊಳ್ಳಲಾಗಿ, ಡಿವೆಲೆರಾಯವರು ಕನಿಕರಪಟ್ಟು ರೈತರು ಕೊಡಬೇಕಾದ ಕಂದಾಯದಲ್ಲಿ ಅರ್ಧಭಾಗವನ್ನು ಬಿಟ್ಟುಕೊಡುವುದಾಗಿ ವಾಗ್ದಾನ ಮಾಡಿದರು ಇದರಿಂದ ರೈತರುಗಳಿಗೆ ಉಪಶಾಂತಿಯಾಗಿ ಸಂತೋಷವುಂಟಾಗಿರುವುದು

ಚಂಡಾಲರಾರು ?

" ನಿಮ್ಮ ಜಾತಿಯವರು ದೇವಾಲಯದೊಳಕ್ಕೆ ಬರಲು ಆಗಮ ಸೂತ್ರಗಳು ಅಂಗೀಕರಿಸುವುದಿಲ್ಲವೆಂಬ ವಿಷಯವನ್ನು ಖಂಡಿಸಿ ಪೂರ್ವ ಪಕ್ಷವನ್ನು ಮಾಡಲು ಇಲ್ಲಿಯ ಸಾಧಾರಣ ಆರ್ಯ ಸಮಾಜದ ಪರವಾಗಿ ನಾನು ವಾದಿಸುವೆನು ಈಗಿರುವ ನಿಮ್ಮ ಜಾತಿಯವರು ನಮ್ಮ ಶಾಸ್ತ್ರಗಳಲ್ಲಿ [illegible] [illegible] [illegible] [illegible] ರಾಜ್ಯಪ್ರಪಂಚದ ಸಾಧಾರಣ ಆರ್ಯ ಸಮಾಜದ [illegible] ಶಿಷ್ಯರ ಅಭ್ಯುದಯಕ್ಕಂಟು ಮಾಡು ಹಸರೆಲ್ಲ ಶ್ರೀಮಹಿಸುವ [illegible] ಸ್ವಾಮಿ ಪಿ ಎ ಬಿ ಎಲ್ , ರವರು [illegible] ಚಾಕುಲಿ ಡಾಡ್ ನವರ ಮುಖಾಂತ ತಿಳಿಸಿರುತ್ತಾರೆ

ಬೊಂಬಾಯಿನಲ್ಲಿ ಬೆಂಕಿಯ ಅನಾಹುತ

ಬೊಂಬಾಯಿ ಪಟ್ಟಣದ ಕಾಲ್ಬಾದೇವಿ ರೋಡಿನಲ್ಲಿ ಎರಡಂತಸ್ತಿನ ಒಂದು ಮನೆಯು ಕೆಳಗಡೆಯಂಗಡಿಗೆ ಬೆಂಕಿಬಿದ್ದು ಮನೆಯು ಹೊತ್ತಿಕೊಂಡಿತು ಒಳಗಿದ್ದ ಜನರು ಹೊಗೆಯನ್ನು ಕಂಡಕೂಡಲೆ ಹೊರಕ್ಕೆ ಓಡಿಹೋದರು ಆದರೆ ಒಬ್ಬ ಹೆಂಗುಸು ಮಾತ್ರ ಸಾವಕಾಶಮಾಡಲಾಗಿ ನಾಲ್ಕು ದಿಕ್ಕಿನಿಂದಲೂ ಜ್ವಾಲೆಯು ವ್ಯಾಪಿಸಿಕೊಂಡು ಒಂದುದರ ಮೇಲೆ ತಪ್ಪಿಸಿಕೊಂಡು ಹೋಗಲೆತ್ನವಿಲ್ಲದೆ ಜ್ವಾಲೆಗೆ ಸಿಕ್ಕಿ ಮೃತಳಾದಳು 7 ಫೈರು ಇಂಜಿನ್ನುಗಳು ಬಂದು ಅರ್ಧ ಘಂಟೆಯವರೆಗೆ ನೀರನ್ನು ಸುರಿಯುದುದರ ಮೇಲೆ ಜ್ವಾಲೆಯು ಶಮನವಾಯಿತು ಮಹಡಿಯ ಕೆಲಭಾಗವು ಸುಟ್ಟುಹೋಯಿತು ಇದರಿಂದ 60,000 ರೂ ವರೆಗೆ ನಷ್ಟವಾಗಿರಬೇಕೆಂದೂಹಿಸಲ್ಪಟ್ಟಿದೆ ಬೆಂಕಿಯನ್ನಾರಿಸುವ ಯಂತ್ರದ ಕೆಲಸಗಾರರಲ್ಲೊಬ್ಬನು ಪ್ರಮಾದದಿಂದ ಸತ್ತುಹೋದನು ಮನೆಯಲ್ಲಿದ್ದವರನ್ನು ಸಾಗಿಸಲಿಕ್ಕೆ ಬರುತ್ತಿದ್ದ ಬಂಡಿಯು ನೀರನ್ನಾರಿಸುವ ಯಂತ್ರಕ್ಕೆ ತಾಕಿ ಒಡಿದುದರಿಂದ ಒಬ್ಬ ಯಂತ್ರದವನು ಸತ್ತನು ಒಟ್ಟು 3 ಮರಣಗಳಾದವು

ಜಪಾನಿನಲ್ಲಿ ಜಲಪ್ರಳಯ

ಜಪಾನ್ ದೇಶದ ರಾಜಧಾನಿಯಾದ ಟೋಕಿಯೋ ಪಟ್ಟಣದಲ್ಲಿ ವಿಪರೀತ ಮಳೆಸುರಿದು ಸಮುದ್ರವು ಉಕ್ಕಿ 100 ಮಂದಿ ಸತ್ತರು ಮತ್ತು 40 000 ಮನೆಗಳು ನಷ್ಟವಾದುವು ಅನೇಕ ಕಡೆ ಬೆಟ್ಟಗಳ ಮೇಲಿಂದ ಪಾಷಾಣಗಳು ಜಾರಿಬಿದ್ದಿರುತ್ತವೆ ಸಮುದ್ರ ತೀರದಲ್ಲಿರುವ ಎಲ್ಲ ಗ್ರಾಮಗಳಲ್ಲೂ ಬಹಳ ನಷ್ಟ ಸಂಭವಿಸಿರುವುದರಿಂದ ಜನರು ಭಯಗ್ರಸ್ತರಾಗಿರುತ್ತಾರೆ ಈ ಪ್ರಳಯವು ಟೋಕಿಯೋದಲ್ಲಿ ಮಾತ್ರವಲ್ಲದೆ ಸಮುದ್ರ ತೀರದಲ್ಲೆಲ್ಲ ಸಂಭವಿಸಿರುವುದು ತಂತಿಯ ಕಂಭಗಳು ಬಿದ್ದುಹೋಗಿರುತ್ತವೆ 2000 ಟನ್ನು ತೂಕವಿರುವ ಸ್ಟೀಮರು ತುಫಾನಿನ ಹೊಡತದಿಂದ ಒಂದು ಬಂಡೆಗೆ ತಾಕಲಾಗಿ ಅದರೊಳಗಿದ್ದ 50 ಮಂದಿ ನಾವಿಕರಲ್ಲಿ 41 ಮಂದಿ ಮೃತರಾದರು, ಉಳಿದ 9 ಮಂದಿ ಸಂರಕ್ಷಿಸಲ್ಪಟ್ಟರು ಟೋಕಿಯೊ ಪಟ್ಟಣಕ್ಕೆ ಸೇರಿದ ಒಂದು ಗ್ರಾಮವು ಬೆಂಕಿಯಿಂದ ಹೊತ್ತಿಕೊಳ್ಳಲಾಗಿ ಅದರಲ್ಲಿದ್ದ 800 ಮನೆಗಳು ನಾಶವಾದುವು ಟೋಕಿಯೊದಲ್ಲಿ ಜಲಪ್ರಳಯವಾಗಿರಲಿಲ್ಲವೆಂದೂ, ಇಂತಹ ಪ್ರಳಯವು ಜಪಾನಿನಲ್ಲಿ 1917 ರಿಂದೀಚೆಗೆ ಆಗಿರಲಿಲ್ಲವೆಂದೂ, ಯೊಕೊಹಾಮಕ್ಕೆ ಬಹಳ ನಷ್ಟ ಸಂಭವಿಸಿರುವುದೆಂದೂ 30,000 ಜನರು ವಾಸಕ್ಕೆ ಮನೆಯಿಲ್ಲದೆ ಕಷ್ಟಪಡುತ್ತಿರುವರೆಂದೂ, ಒಟ್ಟಿನಲ್ಲಿ ದೇಶಕ್ಕೆ ವಿಶೇಷ ನಷ್ಟವಾಗಿರಬೇಕೆಂದೂ ತಿಳಿಯಬರುತ್ತದೆ

ಕೈ|| ದೊರಸ್ವಾಮಿ ಅಯ್ಯರ್‌ರವರ ಪ್ರಶಂಸೆ

ಮೈಸೂರು ಹೈಕೋರ್ಟ್ ಪ್ರಧಾನ ನ್ಯಾಯಮೂರ್ತಿ ರಾಜಧರ್ಮಪ್ರವೀಣ ಮ|| ಸಿ ಎಸ್ ದೊರಸ್ವಾಮಿ ಅಯ್ಯರ್ ಬಿ ಎ ಬಿ ಎಲ್ , ರವರು 1932ನೆಯ ನವೆಂಬರ್ ತಾ|| 12 ನೇ ಶನಿವಾರ ಸಾಯಂಕಾಲ ಅಕಸ್ಮಾತ ಮೃತರಾದುದರಿಂದುಂಟಾದ ನಷ್ಟವು ಪ್ರಭುತ್ವದ ಕಡತದಲ್ಲಿ ಈ ಪ್ರಕಾರವಾಗಿ ಉಲ್ಲೇಖಿಸಲ್ಪಡಬೇಕೆಂದು ಶ್ರೀಮನ್ಮಹಾರಾಜರವರ ಅಭಿಮತವಾಗಿರುತ್ತದೆ

ಕೈ|| ಮ|| ದೊರಸ್ವಾಮಿ ಅಯ್ಯರ್‌ರವರು ಮೈಸೂರು ಚೀಫ್ ಕೋರ್ಟು ಅಡ್ವೊಕೇಟರಾಗಿದ್ದು ಕೆಲ ವರ್ಷಗಳಕಾಲ ವಕೀಲಿಯನ್ನು ಸಫಲವಾಗಿ ನಡೆಸಿದುದರಮೇಲೆ 1910 ನೆಯ ಫೆಬ್ರವರಿಯಲ್ಲಿ ಬೆಂಗಳೂರು ಡಿವಿಜನ್ ಸಬ್ ಆರ್ಡಿನೇಟ್ ಜಡ್ಜಿಯಾಗಿಯೂ, 1 ವರ್ಷಕಾಲಾನಂತರ ಗವರ್ನಮೆಂಟ್ ಅಡ್ವೊಕೇಟರಾಗಿಯೂ ನಿಯಮಿಸಲ್ಪಟ್ಟು ಆ ಉದ್ಯೋಗವನ್ನು 9 ವರ್ಷಗಳವರೆಗೆ ಬಹಳ ಸಮರ್ಥತೆಯಿಂದ ನಿರ್ವಹಿಸಿದರು 1919 ನೆಯ ಜನವರಿಯಲ್ಲಿ ಚೀಫ್ ಕೋರ್ಟಿನಲ್ಲಿ 1 ವರ್ಷದವರೆಗೆ ಆಕ್ಟಿಂಗ್ ಜಡ್ಜಿಯರಾಗಿದ್ದು 1920 ನೆಯ ಜುಲೈ ತಿಂಗಳಲ್ಲಿ ಚೀಫ್ ಕೋರ್ಟಿನ ಜಡ್ಜಿಯರಾಗಿ ನಿಯಮಿಸಲ್ಪಟ್ಟು 2 ವರ್ಷಗಳ ಅನಂತರ ಚೀಫ್ ಜಡ್ಜಿಯವರಾಗಿ ಮಾಡಲ್ಪಟ್ಟರು ಇವರು ತಮ್ಮ ನ್ಯಾಯ ವ್ಯವಹಾರಗಳಲ್ಲಿ ವಿಶಾರದರಾದ ಬುದ್ಧಿಯನ್ನೂ ನ್ಯಾಯಾನುವರ್ತನಾ ನೈಪುಣ್ಯವನ್ನೂ ಉದ್ಯೋಗ ನಿರ್ವಹಣಶಕ್ತಿಯನ್ನೂ ವ್ಯಕ್ತಪಡಿಸಿದರು ಇಂತಹ ಸದ್ಗುಣಗಳಿಂದ ಜನಾದರಣೀಯರಾಗಿದ್ದಿರು. ಇವರು ನ್ಯಾಯಶಾಖೆಯಲ್ಲಿ ಮಾಡಿದ ಉತ್ಕೃಷ್ಟ ಸೇವೆಗೆ ಮೆಚ್ಚಿ ಶ್ರೀಮನ್ಮಹಾರಾಜರವರು ಇವರಿಗೆ 1928 ನೆಯ ದಸರಾ ದರ್ಬಾರಿನಲ್ಲಿ " ರಾಜಧರ್ಮಪ್ರವೀಣ " ಎಂಬ ಪ್ರಶಸ್ತಿಯನ್ನು ದಯಪಾಲಿಸಿದರು ಶ್ರೀ ಮನ್ಮಹಾರಾಜರವರು ತಮ್ಮ ಸಹಾನುಭೂತಿಯನ್ನು ಕೈ|| ದೊರಸ್ವಾಮಿ ಅಯ್ಯರ್‌ರವರ ವಿಯೋಗದುಃಖಕ್ಕೆ ಪಾತ್ರರಾದ ಅವರ ಕುಟುಂಬಕ್ಕೆ ತಿಳುಹಲಿಚ್ಛಿಸುತ್ತಾರೆ

ರಾಜಧಾನಿಯ ವರ್ತಮಾನಗಳು

ಕಳೆದ ತಾ|| 13 ರಲ್ಲಿ ಬಸವನಗುಡಿಯ ಶ್ರೀ ಶಂಕರಮಠದಲ್ಲಿ ಶ್ರೀಮದ್ಭಗವದ್ಗೀತಾ ಜಯಂತಿಯು ಬಹಳ ವೈಭವದಿಂದ ನಡೆಯಿತು. ಅನೇಕ ವಿದ್ವಾಂಸರು ಉಪನ್ಯಾಸಗಳನ್ನು ಮಾಡಿದರು

ರಾಜಧಾನಿಯ ಬ್ರಾಹ್ಮಣ ಮಂಡಳಿಯವರು ಪಟ್ಟಣದ ಬಡವರಿಗೆ ವಸ್ತ್ರ ಸಂತರ್ಪಣೆಯನ್ನು ನೆನ್ನೆ ದಿವಸ ಚಾಮರಾಜೇಂದ್ರ ಪೇಟೆಯ ಕೆಳಗಿರುವ ಆಂಜನೇಯ ದೇವಸ್ಥಾನದ ಉದ್ಯಾನದಲ್ಲಿ ಬಹಳ ಔದಾರ್ಯದಿಂದಲೂ ಉತ್ಸಾಹದಿಂದಲೂ ದಿವ್ಯಭಕ್ಷ್ಯ ಭೋಜ್ಯಾದಿಗಳಿಂದಲೂ ನೆರವೇರಿಸಿದರು

ರಾಜಧಾನಿಯ ದೇವರಾಜ ಮೊಹಲ್ಲ ಮ್ಯುನಿಸಿಪಲ್ ಕೌನ್ಸಿಲರುಗಳಲ್ಲಿ ಖಾಲಿಯಾಗಿರುವ ಒಂದು ಸ್ಥಾನದ ಚುನಾವಣೆಗೆ ಮ|| ಗಳಾದ ಚಿಕ್ಕವೀರಣ್ಣನವರು ರೈಸ್ ಮಿಲ್ಲಿನ ಎಂ ಸಿ ತಮ್ಮಯ್ಯನವರೂ, ರಾಜರಾಜೇಶ್ವರೀ ಹಾಲಿನ ಡೈರಿ ಮಾಲೀಕರಾದ ಮ|| ಬಿ ಆರ್ ರಾಮಚಂದ್ರರಾಯರೂ ಉಮೇದವಾರರುಗಳಾಗಿ ನಿಂತಿರುತ್ತಾರೆ

ಕಳೆದ ಶನಿವಾರ ರಾಜಧಾನಿಯ ಕುಂಚಿಟಿಗರ ಸಂಘದ ನಿಲಯದಲ್ಲಿ ಕೈ|| ರಾವ್ ಬಹದ್ದೂರ್ ಧರ್ಮಪ್ರಕಾಶ ಡಿ ಬನುಮಯ್ಯನವರ, ಧರ್ಮಪತ್ನಿಯಾದ ಶ್ರೀಮತಿ ಅಲಮ್ಮನವರ ಮತ್ತು ನಂಜನಗೂಡಿನ ಶ್ರೀಮತಿ ತಿಮ್ಮಮ್ಮನವರ ಭಾವಚಿತ್ರಗಳ ಅನಾವರಣಮಹೋತ್ಸವವು ಡೆಪ್ಯುಟಿಕಮಿಷನರ್ ಮ|| ಸಿ ಎಸ್ ಕುಪ್ಪಸ್ವಾಮಯ್ಯಂಗಾರ್ಯರಿಂದ ನಡಸಲ್ಪಟ್ಟಿತು

ಯಳಂದೂರಿನ ಸಾಹುಕಾರ್ ಮ|| ಬಳೆ ಸಿದ್ಧಲಿಂಗ ಶೆಟ್ಟರು ಈಚೆ ವಾರದಲ್ಲಿ ಬಾಸಬಂಗಲೆಯೊಳಗೆ ಶ್ರೀಮನ್ಮಹಾರಾಜರವರ ದರ್ಶನಕ್ಕೆ ಅಪ್ಪಣೆಯನ್ನು ಪಡೆದು ಹೋಗಿದ್ದು ಹೊಸ ಯಳಂದೂರು ಪಟ್ಟಣದ ಆರಂಭೋತ್ಸವವನ್ನು ಮಹಾಸ್ವಾಮಿಯವರ ಅಮೃತ ಹಸ್ತದಿಂದ ನೆರವೇರಿಸಬೇಕೆಂದು ಪುರನಿವಾಸಿಗಳ ಪರವಾಗಿ ಬೇಡಿಕೊಂಡುದರ ಮೇಲೆ ಬರುವ ಡಿಸೆಂಬರ್ ತಿಂಗಳಲ್ಲಿ ನೆರವೇರಿಸಲು ಪ್ರಭುಗಳು ಸಮ್ಮತಿಸಿರುತ್ತಾರೆಂದು ಕೇಳುತ್ತೇವೆ

ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನವನ್ನು ಈ ವರ್ಷ ಕೊಡಗು ಪ್ರಾಂತದವರು ತಮ್ಮ ರಾಜಧಾನಿಯಾದ ಮಡಕೇರಿಯಲ್ಲಿ ನಡಯಿಸಬೇಕೆಂದು ಸಂಕಲ್ಪಿಸಿ ಅದಕ್ಕಾಗಿ ಒಂದು ಸ್ವಾಗತ ಮಂಡಲಿಯನ್ನು ನಿಯಮಿಸಿಕೊಂಡು ಕನ್ನಡ ಪಂಡಿತರುಗಳ ಮತ್ತು ಅಭಿಮಾನಿಗಳ ಸಹಾಯಸಹಾನುಭೂತಿಗಳನ್ನು ಕೋರಿರುತ್ತಾರೆ ಈ ನಮ್ಮ ನೆರೆನಾಡಿನ ಕನ್ನಡ ಭಾಷಾಭಿಮಾನಿಗಳ ಪ್ರಯತ್ನವು ಯಶಸ್ವಿಯಾಗಿ ನಡೆದು ಅವರುಗಳು ಕೃತಕೃತ್ಯರಾಗುವಂತೆ ಸಾಹಿತ್ಯಸಮ್ಮೇಳನಾಭಿಮಾನಿಗಳು ಸಹಕರಿಸುವರೆಂದು ನಿರೀಕ್ಷಿಸುತ್ತೇವೆ.

ರಾಜಧಾನಿಯ ಲಾಯರುಗಳ ಸಂಘದವರು ಮ|| ಕೆ ಶಂಕರನಾರಾಯಣರಾಯರನ್ನು ಆಹ್ವಾನಿಸಿಕೊಂಡು ನೆನ್ನೆಯ ದಿವಸ ಶ್ರೀ ಚಾಮುಂಡೇಶ್ವರೀ ಬೆಟ್ಟದ ಮೇಲೆ ದಿವ್ಯವಾದ ಔತಣದಿಂದಲೂ ಸಂಗೀತ ಶ್ರವಣದಿಂದಲೂ ಸತ್ಕರಿಸಿ ಅವರಿಗೆ ಮೈಸೂರು ಚೀಫ್ ಕೋರ್ಟು ಜಡ್ಜಿಯ ಪದವಿಯು ಲಭ್ಯವಾದುದರಿಂದ ತಮಗುಂಟಾದ ಆನಂದಾತಿಶಯವನ್ನು ಪ್ರದರ್ಶಿಸಿ ಅವರ ಗುಣಪ್ರಶಂಸೆ ಮಾಡಿದರು ಅತಿಥಿಗಳಾದ ಮ|| ಶಂಕರನಾರಾಯಣರಾಯರು ತಮಗಾದ ಸತ್ಕಾರಕ್ಕಾಗಿ ಕಾಲೋಚಿತವಾದ ಭಾಷಣದಿಂದ ಲಾಯರು ಸಂಘದವರನ್ನು ವಂದಿಸಿದರು

ಅಖಿಲಭಾರತ ತತ್ತ್ವವಿಚಾರ ಮಹಾಸಭೆಯು 8 ನೆಯ ಅಧಿವೇಶನವು ಬರುವ ಡಿಸೆಂಬರು ತಾ|| 19 ನೆಯ ಸೋಮವಾರ ರಾಜಧಾನಿಯ ಜಗನ್ಮೋಹನ ಪ್ರಾಸಾದದ ಸಭಾಂಗಣದೊಳಗೆ ಶ್ರೀಮನ್ಮಹಾರಾಜರವರಿಂದ ಆರಂಭಿಸಲ್ಪಟ್ಟು 3 ದಿವಸಗಳವರೆಗೆ ನಡೆಯುವುದು ಈ ಮಹಾಸಭೆಗೆ ಭಾರತ ದೇಶದ ಎಲ್ಲ ಕಡೆಯಿಂದಲೂ ಪ್ರತಿನಿಧಿಗಳೂ ಪ್ರೇಕ್ಷಕರೂ ಬರುವರು. ಇವರ ಸ್ವಾಗತಕ್ಕಾಗಿ ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರಾದ ಡಾ|| ಮೆಟ್ಕಾಫ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಂಘವೇರ್ಪಟ್ಟಿರುತ್ತದೆ ಇದಕ್ಕೆ ಮ|| ಎ ಸುಬ್ರಹ್ಮಣ್ಯಯ್ಯರ್‌ರವರು ಮತ್ತು ಪ್ರೊಫೆಸರ್ ಮ|| ಎ ಆರ್ ವಾಡಿಯಾರವರು ಸಕ್ರೆಟರಿಗಳಾಗಿರುತ್ತಾರೆ.

ರಾಜಧಾನಿಯ ರೈಲ್ವೆ ವರ್ಕ್‌ಷಾಪಿನಲ್ಲಿ ಕೆಲಸ ಮಾಡುತ್ತಿದ್ದ ಮಧ್ಯವಯಸ್ಸಿನ ಒಬ್ಬ ಹಿಂದು ಕಳೆದವಾರ ದೊಡ್ಡಕೆರೆಯೇರಿಯ ಮೇಲಿರುವ ಕಲ್ಲಿನ ಮಂಟಪದಲ್ಲಿ ಸತ್ತು ಬಿದ್ದಿದ್ದನು ಈ ಸಂಗತಿಯನ್ನು ಪೋಲೀಸಿನವರು ತಿಳಿದು ಸ್ಥಳಕ್ಕೆ ಹೋಗಿ ಶವದ ಮುಖ ಮೊದಲಾದ ಭಾಗಗಳು ಮುಚ್ಚಲ್ಪಟ್ಟಿದ್ದುದನ್ನು ನೋಡಿ ಅನುಮಾನಪಟ್ಟುಕೊಂಡು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಶವವನ್ನು ಸಾಗಿಸಿದರು ಅಲ್ಲಿ ಡಾಕ್ಟರು ಪರೀಕ್ಷಿಸಿ ವಿಷ ಪ್ರಯೋಗದಿಂದ ಮರಣವಾಗಿರುವುದಾಗಿ ಅಭಿಪ್ರಾಯಪಟ್ಟರು ವರೆಂದೂ, ಪೋಲೀಸಿನವರು ವಿಚಾರಿಸಿದುದರಲ್ಲಿ ಸತ್ತವನಿಗೆ ಜೀವವಿಮೆ ಬಾಬತು 3000 ರೂ ಬಂದಿದ್ದುದನ್ನು ಅಪಹರಿಸುವುದಕ್ಕಾಗಿ ಅವನ ಜತೆಗಾರರಲ್ಲಾರೊ ಅವನಿಗೆ ವಿಷಪ್ರಯೋಗ ಮಾಡಿ ಅವನು ಸತ್ತುಹೋದಮೇಲೆ ಅವನ ಶವವನ್ನು ಕೆರೆಯೇರಿಯ ಮೇಲಿನ ಮಂಟಪಕ್ಕೆ ತಂದು ಮುಖಮುಚ್ಚಿ ಮಲಗಿಸಿ ಸ್ವಾಭಾವಿಕವಾಗಿ ಸತ್ತಂತೆ ತಿಳಿದು ಬಂದಿರುತ್ತದೆಂದೂ, ಪೋಲೀಸರು ಅನುಮಾನದ ಮೇಲೆ ಕೆಲವನ್ನು ಸೆರೆಹಿಡಿದಿರುವರೆಂದೂ ಕೇಳುತ್ತೇವೆ

ಅಸ್ಪೃಶ್ಯರ ವಿಚಾರದಲ್ಲಿ ಸನಾತನಧರ್ಮೀಯರ ಸಂಕಲ್ಪ

ಕಳ್ಳತನದಿಂದ ಹಿಂದೂಮತವನ್ನು ಬಿಟ್ಟು ಹೋಗುವುದು ಸನಾತನ ಧರ್ಮದವರಿಗೆ ಅವಮಾನಕರವೆಂದು ನಮ್ಮ ದೇಶದವರನ್ನು ತಿಳಿಸುವುದು ನಮ್ಮ ಮತದ ಹಿತದ ದೃಷ್ಟಿಯಿಂದ ಉಪಕಾರವನ್ನು ಹೊಂದುತ್ತಿರುವ ಪಂಚಮರಿಗೆ ಈಗ ನಮ್ಮನ್ನು ಬಿಟ್ಟು ಹೋಗುವುದಕ್ಕೆ ನ್ಯಾಯವಾದ ಕಾರಣವೇನೂ ಇರುವುದಿಲ್ಲ. ಸರ್ಕಾರದವರು ಪ್ರತ್ಯೇಕ ಚುನಾವಣೆಯನ್ನು ಕೊಟ್ಟು ಪಂಚಮರಿಗೆ ರಾಜಕೀಯ ಹಕ್ಕುಗಳನ್ನು ನೀಡಿದರೂ ಅವರಿಗೆ ಮತಾಂತರದಿಂದ ಪ್ರಯೋಜನವಿಲ್ಲ. ... ಸ್ವಾರ್ಥ ಬುದ್ಧಿಯಿಂದ ಪಂಚಮರು ನಮ್ಮ ಮತದವರೊಳಗೆ ಸೇರಬೇಕೆಂಬ ಉದ್ದೇಶವು ಬಲಗೊಳ್ಳುತ್ತಿದೆ. ಇದು ರಾಜನೀತಿಯೊಳಗೆ ಭೇದೋಪಾಯವು. ಅದನ್ನು ಅವಲಂಬಿಸಿರುತ್ತಾರೆ. ಅವರನ್ನು ನಾವು ಆಕ್ಷೇಪಿಸಲು ಕಾರಣವಿಲ್ಲ. ನಾವು ಮಾತ್ರ ಜಾಗರೂಕರಾಗಿರಬೇಕು. ಸನಾತನ ಧರ್ಮಿಗಳು ದ್ವೇಷಭಾವದಿಂದ ಪಂಚಮರನ್ನು ದೂರವಾಗಿಟ್ಟಿರುವುದು ನ್ಯಾಯವಲ್ಲವೆಂದು ಮಧ್ಯಸ್ಥಗಾರರು ಹೇಳಬಹುದು. ಪಂಚಮಾದಿಗಳು ನಮ್ಮ ಮತದವರೇ. ಬ್ರಾಹ್ಮಣ ಸ್ತ್ರೀಯಲ್ಲಿ ಶೂದ್ರನಿಗೆ ಹುಟ್ಟಿದವರು ಚಂಡಾಲರೆಂದು ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. ಪ್ರತಿಲೋಮರು ಸಂಕರಜಾತಿಗಳೊಳಗೆ ಕಡೇ ಜಾತಿಯವರು. ಇವರು ಅವರನ್ನು ಉತ್ತಮಗೊಳಿಸಬೇಕೆಂದೂ, ಇವರು ಪ್ರತಿಲೋಮಜಾತಿಗಳೊಳಗೆ ಕಡೇ ಜಾತಿಯವರೆಂದೂ ಅವರನ್ನು ಸವಿಸುಸಿದ್ದಾದರೆ, ಸ್ನಾನವನ್ನು ಹೊಸದಾಗಿ ಜನಿವಾರವನ್ನು ಹಾಕಿಕೊಂಡು ಗಾಯತ್ರೀ ಜಪಾದಿಗಳನ್ನು ಮಾಡಬೇಕೆಂದು ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. ಮನು॥ ಅ॥ ೧೦ "ಶೂದ್ರಾದಾಯೋಗವಃ ಕ್ಷತ್ತಾ ಚಂಡಾಲಶ್ಚಾಧಮೋ ನೃಣಾಂ ಚಂಡಾಲಶ್ವಪಚಾನಾಂತು ಬಹಿರ್ಗ್ರಾಮಾತ್ಪ್ರತಿಶ್ರಯಃ" ಇತ್ಯಾದಿ ರೀತಿಯಾಗಿ ಶಾಸ್ತ್ರಗಳು ಹೇಳುವುದಾಗಿರುತ್ತವೆ.

ನಮಗೆ ಅತ್ಯಂತ ಪ್ರಿಯರಾದ ತಾಯಿ ಹೆಂಡತಿ ಮೊದಲಾದವರು ಬಹಿಷ್ಠೆಯರಾದಾಗ್ಗೆ ಶಾಸ್ತ್ರ ಬದ್ಧರಾದವರು ಅವರನ್ನು ದೂರವಾಗಿಡುವರು. ಮರಣಾದಿಯಿಂದುಂಟಾಗುವ ಆಶೌಚಾದಿ ಸಮಯದಲ್ಲಿ ತಮ್ಮ ಸಮೀಪ ಬಂಧುಗಳನ್ನಾದರೂ ಮುಟ್ಟಕೂಡದು. ಒಂದುವೇಳೆ ಮುಟ್ಟಿದಲ್ಲಿ ಸ್ನಾನಾದಿಗಳನ್ನು ಮಾಡಬೇಕಾದುದು ಶಾಸ್ತ್ರರೀತಿಯಾಗಿ ಬ್ರಾಹ್ಮಣಾದಿಗಳ ಆಚರಣೆಯಾಗಿರುತ್ತದೆ. ಯಾವ ಶಾಸ್ತ್ರಾಧಾರದ ಮೇಲೆ ಹಿಂದುಗಳು ದಾಯಭಾಗವನ್ನು ಅನುಭವಿಸುತ್ತಿರುವರಲ್ಲಿ ಯಾವ ಶಾಸ್ತ್ರದ ಬ್ರಾಹ್ಮಣರನ್ನು ಅಂಗೀಕರಿಸಿ ಸಗೋತ್ರ ಕನ್ಯೆಯನ್ನು ಮದುವೆಮಾಡಿಕೊಳ್ಳುವುದಿಲ್ಲವೋ ಯಾವ ಶಾಸ್ತ್ರದಲ್ಲಿ ನಂಬಿಕೆಯನ್ನಿಟ್ಟುಕೊಂಡು ಪಿತೃದೇವತೆಗಳಿಗೆ ಶ್ರಾದ್ಧ ಪಿಂಡ ದಾನಾದಿಗಳನ್ನು ಅನುಸರಿಸುತ್ತಾರೋ ಆ ಶಾಸ್ತ್ರಗಳಲ್ಲೇ ಪಂಚಮಾದಿಗಳ ಸ್ಪರ್ಶವು ಪಾಪಕ್ಕೆ ಕಾರಣವೆಂದು ನಿಷೇಧಿಸಲ್ಪಟ್ಟಿರುವುದರಿಂದ ಇಂತಹ ಶಾಸ್ತ್ರಗಳಲ್ಲಿ ಕೆಲವು ಪ್ರಮಾಣವೆಂದೂ ಮತ್ತೆ ಕೆಲವು ಅಪ್ರಮಾಣವೆಂದೂ ಹೇಳುವುದು ಯುಕ್ತವಲ್ಲವಾದುದರಿಂದ ಎಂತಹ ಇಕ್ಕಟ್ಟು ಪ್ರಾಪ್ತವಾದರೂ ವೇದಶಾಸ್ತ್ರಗಳ ಪ್ರಮಾಣಗಳನ್ನು ಅಂಗೀಕರಿಸಿ ಆಸ್ತಿಕರು ಅಸ್ಪೃಶ್ಯರ ಸ್ಪರ್ಶವನ್ನು ಪೂರ್ವರೀತಿಯಾಗಿ ನಿಷೇಧಿಸುವುದಲ್ಲದೆ ಅಂಗೀಕರಿಸುವುದಿಲ್ಲ. ಬಡಿಲು ಕಷ್ಟವಿಲ್ಲದೆ ನಿರ್ಬಂಧಗಳಿಂದಲೂ, ದೌರ್ಜನ್ಯಗಳಿಂದಲೂ ಅಂತಹ ಸಂದರ್ಭದಲ್ಲಿ ಹೇಗಾದರೂ ಪ್ರಾಯಶ್ಚಿತ್ತವಿಟ್ಟು ಶುದ್ಧಿ ಮಾಡಬೇಕಾದ್ದು ತಮಗೆ ಸಾಧ್ಯವಾದ ಪ್ರಾಯಶ್ಚಿತ್ತದಿಂದ ಶುದ್ಧಿ ಮಾಡಿಕೊಳ್ಳುವರು. ಇದನ್ನು ದೃಷ್ಟಾಂತವಾಗಿಟ್ಟುಕೊಂಡು ಚಂಡಾಲರನ್ನೂ ಶೇರಮಾಡಬಹುದೆಂದು ಹೇಳುವುದು ಬುದ್ಧಿವಂತರ ಲಕ್ಷಣವಲ್ಲ. ಪಂಚಮರು ಮೊದಲಿಂದಲೂ ಈ ದೇಶದಲ್ಲಿಯೇ ಇರುವವರೆಂದೂ, ಆರ್ಯರು ಎಲ್ಲಿಂದಲೋ ಬಂದು ಇವರನ್ನು ಸೀಚರನ್ನಾಗಿ ಭಾವಿಸಿದರೆಂದೂ ಭಾವಿಸುವ ಆಧುನಿಕ ಚರಿತ್ರಕಾರರ ವಾದವೆಲ್ಲವೂ ಮೋಹ ಮೂಲಕವಾದ ಅಸತ್ಯವು. ಮನುಷ್ಯರ ಸೃಷ್ಟಿಕರ್ತನಾದ ಮನು ಈ ಭರತಖಂಡದಲ್ಲಿ ಹುಟ್ಟಿದವನು. ಅವನ ಮಗನಾದ ಪ್ರಿಯವ್ರತನೆಂಬ ಸಪಾದ ಇಲ್ಲಿಯವನೇ "ಕೆಟುಮನುನಿನಾಥಿಮ್ಯೋ" ಎಂದು ಹೇಳಲಾಗಿದೆ. ಪುರಾತನವಾದ ಮನುಷ್ಯರಲ್ಲಿ ಈ ಬ್ರಾಹ್ಮಣಾದಿಗಳು ಇಲ್ಲಿಯವರಂದೇ ಹೇಳಲ್ಪಟ್ಟಿದೆ. ತ್ರೇತಾಯುಗದಲ್ಲಿ ಶ್ರೀ ರಾಮಚಂದ್ರನು ದಕ್ಷಿಣದೇಶ ಸಂಚಾರಮಾಡಿದಾಗ್ಗೆ ಈ ದೇಶದಲ್ಲಿದ್ದ ಮಹರ್ಷಿಗಳ ಆಶ್ರಮಗಳು ವರ್ಣಿಸಲ್ಪಟ್ಟಿವೆ. ಈ ಗ್ರಂಥಗಳಲ್ಲಿ ಸುಳ್ಳೆಂದು ಇವರು ಹೇಳುವ ಮಾತನ್ನು ಬುದ್ಧಿಶಾಲಿಗಳೆಂದಿಗೂ ನಂಬುವುದಿಲ್ಲ. ಲೋಕ ಸೃಷ್ಟಿಯೇ ನಾಲ್ಕು ಸಾವಿರ ವರ್ಷಗಳಲ್ಲಿ ಆಯಿತೆಂದು ಹೇಳುವವರ ವಿಜ್ಞಾನಕ್ಕೆ ಜ್ಯೋತಿಶ್ಶಾಸ್ತ್ರಮತದಂತೆ ಅನೇಕ ಕೋಟಿ ವರ್ಷಗಳ ಹಿಂದೆ ಆಯಿತೆಂದು ಹೇಳುವವರ ವಿಜ್ಞಾನಕ್ಕೂ ಬಹಳ ವ್ಯತ್ಯಾಸವಿರುತ್ತದೆ. ಪಂಚಮರು ದೇವಾಲಯಗಳಿಗೆ ಪ್ರವೇಶಗೊಳಿಸಲ್ಪಡದಿರುವುದರಿಂದ ಅವರು ನಮ್ಮನ್ನು ಬಿಟ್ಟು ಹೋಗುವರು. ಅವರ ಜನಸಂಖ್ಯೆಯು 7 ಕೋಟಿಯಿರುತ್ತದೆ. ಇಂತಹವರು ನಮ್ಮನ್ನು ಬಿಟ್ಟು ಹೋಗುವುದರಿಂದ ನಮ್ಮ ಮತವು ಬಲಹೀನವಾಗುವುದು. ಆದುದರಿಂದ ನಾವು ಅವರನ್ನು ದೇವಾಲಯಗಳಿಗೂ ಮನೆಗಳಿಗೂ ಬರಗೊಡಬೇಕೆಂದು ನಾಗರಿಕರು ಬೋಧಿಸುತ್ತಿರುವರು. ಈ ಅಭಿಪ್ರಾಯವು ಮೇಲೆ ನಮಗೆನ್ನು ಸಾಲದು. ನಮ್ಮ ಸಹಭೋಜನವಾಗಬೇಕೆಂದೂ ಹೆಣ್ಣು ಕೊಟ್ಟು ತರಬೇಕೆಂದೂ ಅವರೀಗ ಕೇಳದೆ ಬಾರದು. ಅದಕ್ಕೆ ನಾವು ಒಪ್ಪದಿದ್ದರೆ ಅವರು ನಮ್ಮನ್ನು ಬಿಟ್ಟು ಹೋಗುವರು. ನಮ್ಮ ಮತದ ಸಂಖ್ಯಾಬಲವು ಆಗ ಕಡಿಮೆಯಾಗುವುದು. ಈ ರೀತಿಯಾಗಿ ಯುಕ್ತಿಯನ್ನು ಹೇಳುವ ಹೊಸ ಮತದವರು ನಾವು ಅಂಗೀಕರಿಸುವುದಿಲ್ಲವೆಂದು ವೇದಶಾಸ್ತ್ರಗಳನ್ನು ನಿರಾಕರಿಸಿ ಅನ್ಯಮತಗಳಿಗಾಗಿ ತಮ್ಮನ್ನು ಬಿಡುವ ನಾವು ಚಂಡಾಲರಿಗಿಂತ ನಿಕೃಷ್ಟರಾಗ ಬೇಕಲ್ಲದೆ ನಾವು ಹಿಂದುಗಳೆಂದು ಹೇಳಿಕೊಳ್ಳಲು ಸಹ ಅವಕಾಶವಿಲ್ಲದಿರುವ ದುಸ್ಥಿತಿಗೆ ನಮ್ಮ ಮತವನ್ನು ಒಯ್ಯುವುದು. ಆಗ ಈ ಮತದವರನ್ನು ವೇದಬಾಹ್ಯರೆಂದು ಕಡೆಗಣಿಸಬಹುದು. "ನಾಸ್ತಿಕೋ ವೇದನಿಂದಕಃ" ಎಂದು ಶ್ರೀ ವಿದ್ಯಾರಣ್ಯರು ವೇದಭಾಷ್ಯದಲ್ಲಿ ಒಪ್ಪಿರುವರು. ಹಿಂದುಗಳ ಸಂಖ್ಯೆಯು ಕಡಿಮೆಯಾಗುವುದರಿಂದ ಕೆಡಿಸುವ ಧರ್ಮಾಚರಣೆಗಳು ಸ್ವಧರ್ಮತ್ಯಾಗದಿಂದ ಹೀನ ಮತವನ್ನು ಸಮರ್ಥಿಸುವುದು ಸರಿಯಲ್ಲ. ಗೋಳಿಸುವುದು ಎಷ್ಟು ಮಾತ್ರವೆಂಬುದನ್ನು ನೋಡಬೇಕು. ವ ಪಾಶ್ಚಾತ್ಯ ನಾಗರಿಕತೆಯವರು ಪಂಚಮರನ್ನು ಹಿಂದು ಮತದಿಂದ ದೂರಮಾಡಲೆಂದೇ ಪಟ್ಟುಹಿಡಿದಿರುವರು. ನಮಗೂ ಸಿದ್ಧವಾದ ಅಸ್ಪೃಶ್ಯತೆಯನ್ನು ನಿರ್ಮೂಲಗೊಳಿಸಬೇಕೆಂದೂ, ಪಂಚಮರನ್ನು ದೇವಾಲಯಗಳಿಗೆ ಬರಗೊಡಬೇಕೆಂದೂ ಅವರು ಅಭಿಪ್ರಾಯಪಟ್ಟಿರುವುದರಿಂದ ಅವರನ್ನು ಧರ್ಮಸಂರಕ್ಷಕರೆಂದು ವೇದಶಾಸ್ತ್ರಗಳನ್ನು ಒಪ್ಪದವರು ಭಾವಿಸುವುದು ಸರಿಯಲ್ಲ. "ಶ್ರುತಿಸ್ಮೃತೀ ಮಮೈವಾಜ್ಞೆ ಯಸ್ತೇ ಉಲ್ಲಂಘ್ಯ ವರ್ತತೇ ಆಜ್ಞಾಚ್ಛೇದೀ ಮಮ ದ್ರೋಹೀ ಮದ್ಭಕ್ತೋಪಿ ನ ವೈಷ್ಣವಃ" ಎಂದು ಶ್ರುತಿಸ್ಮೃತಿಗಳು ಹೇಳುವ ನ್ಯಾಯದಿಂದ ಧರ್ಮವನ್ನು ಕೆಡಿಸುವವರು ನಮ್ಮವರಲ್ಲ. ಎಂದು ಮನುಸ್ಮೃತಿಯಲ್ಲಿ ಹೇಳಿದ ಹಿಂದೂಗಳ ಸಂಖ್ಯೆಯು ಸಂಖ್ಯಾಬಲದಿಂದ ವೃದ್ಧಿಸಬೇಕಾದದ್ದು ಅವಶ್ಯಕವೆಂಬುದನ್ನು ನಾವು ಒಪ್ಪುವೆವು. ಆದುದರಿಂದ ಇತರ ಪಾದವನ್ನು ಸಾಧುಗಳು ಸರ್ವಪ್ರಕಾರವಾಗಿ ಬಹಿಷ್ಕರಿಸಬೇಕೆಂದು ಹೇಳುವುದು ಇವರಿಗೂ ಈ ವಿಷಯದಲ್ಲಿ ಎಂದಿಗೂ ಏಕೀಭವಿಸಕೂಡದು. ಹೀಗೆ ಇವರೊಡನೆ ಏಕೀಭವಿಸುವುದಕ್ಕಿಂತ ಬೇರೆ ಪಾಪಕೃತ್ಯವು ಸನಾತನಧರ್ಮಿಯರಿಗೆ ಕೊಡುವುದಿಲ್ಲ.

ಇವರು ಪಂಚಮರನ್ನು ಹಿಂದುಮತದಿಂದ ದೂರೀಕರಿಸಿದಲ್ಲಿ ಪ್ರಪಂಚಕ್ಕಾಗಲಿ ಪ್ರಯೋಜನವಿಲ್ಲ. ಪಂಚಮರಿರುವರೆ. ಆದುದರಿಂದ ಅವರ ಪ್ರತ್ಯೇಕ ವಿಧಾನ ಹಕ್ಕುಗಳನ್ನು ಇರುವಲ್ಲಿಯೂ ಹೇರಿ ಬಹಿಷ್ಕರಿಸುವುದು ಸರಿಯಲ್ಲ. ನಮ್ಮ ಸರ್ವಾಂಗೀಣ ಅಭಿವೃದ್ಧಿಗಳನ್ನು ಪಡೆಯುತ್ತಿರುವ ಪ್ರಾಚೀನ ಧರ್ಮದ ದಿನದ ನಿತ್ಯನೈಮಿತ್ತಿಕ ಕರ್ಮಗಳೊಡನೆ ನೇರ ಸಮ್ಮತಿಸುವವರು ಹಿಂದೂಗಳಿಂದ ಬೇರೆಯಾಗಿ ಬದುಕಲಾರರು. ಸಂಕಲ್ಪಿತ ವಿಚಾರಗಳೆಲ್ಲಾ ಆಗುವುದರಿಂದ ಬಾಹ್ಯ ಶ್ರದ್ಧೆಯಿಂದ ನಮ್ಮ ಶ್ರೇಯಸ್ಸಿಗಾಗಿರುವ ಧರ್ಮಶಾಸ್ತ್ರಗಳಿಗೆ ಒಪ್ಪಿದ ಭಾರತೀಯರ ಧರ್ಮವನ್ನು ಸರಿಯಾಗಿ ಅನುಸರಿಸಬೇಕೆಂದು ನಮ್ಮ ಸಂಪ್ರದಾಯ ಇದೆ. ಪಾಶ್ಚಾತ್ಯ ನಾಗರಿಕರ ಈ ಕಾಲದ ಸುಧಾರಣೆಗಳನ್ನು ಸಮ್ಮತಿಸುವ ಶಿಕ್ಷಿತರ ಅಭಿಪ್ರಾಯಗಳಿಂದ ಪಂಚಮರನ್ನು ಹೇಗೆ ಉದ್ಧರಿಸಬೇಕು ಎಂಬುದನ್ನು ನಮ್ಮ ಧರ್ಮಶಾಸ್ತ್ರವು ಹೇಳುವುದು. ನಾವು ಅದನ್ನೇ ಅನುಸರಿಸಬೇಕು. ಪಂಚಮರಿಗೆ ಸಹಾಯ ಮಾಡುವುದು ನಮ್ಮ ಧರ್ಮವು. ನಮಗೆ ನಮ್ಮ ಸ್ವಧರ್ಮವು ಪ್ರಿಯವಾಗಿರುತ್ತದೆ. ಆದುದರಿಂದಲೇ ಧರ್ಮಸಂರಕ್ಷಣೆಗಾಗಿ ಛತ್ರಪತಿ ಶಿವಾಜಿಯೂ ಗುರು ಗೋವಿಂದಸಿಂಗರು ಮೊದಲಾದವರು ಪ್ರಾಣತ್ಯಾಗ ಮಾಡಿರುತ್ತಾರೆ. ಇಂತಹವರನೇಕರಿರುವರು. ಧರ್ಮಕ್ಕಾಗಿ ತಮ್ಮ ಪ್ರಾಣವನ್ನು ಬಲಿಕೊಟ್ಟವರಿಗೆ ಇತರ ಪ್ರಾಣಿಗಳ ಮೇಲೆ ದಯೆಯುಂಟು. ಪಂಚಮರಿಗೆ ಕಳಿಸಲು ಉಪದೇಶಿಸುವುದಕ್ಕೆ ಅವರ ದೇವಾಲಯ ಪ್ರವೇಶವು ನಮಗೆ ಸಮ್ಮತವೆಂದು ಕೆಲ ಬ್ರಾಹ್ಮಣ ಕುಟುಂಬಗಳಲ್ಲಿ ಹುಟ್ಟಿದ ಆಂಗ್ಲೇಯ ವಿದ್ಯಾವಂತರು ಹರಿಜನೋದ್ಧಾರವನ್ನು ಹಾಕಿರುವರೆಂದು ಪ್ರಚಾರಮಾಡುತ್ತಿರುವ ಒಂದು ಕಾಗದವನ್ನು ನೋಡಿದೆನು. ಈ ಹಿಸ್ಟ್ಯಾರಿ ಪಾಠಿಗಳವರು ಧರ್ಮಶಾಸ್ತ್ರದ ಗುಟ್ಟನ್ನೇ ಅರಿಯರು. ಅದರಲ್ಲಿ ಇವರಿಗೆ ನಂಬಿಕೆಯುಂಟಾಗುವುದಾದರೆ ಆಂಗ್ಲ ಭಾಷೆಯನ್ನೇ ಅಭ್ಯಾಸಿಸಿರುವ ಆ ಗ್ರಂಥಗಳನ್ನೇ ಓದಿ ಅದೇ ಸರಿಯೆಂದು ನಂಬಿರುವ ಇಂಥವರು ನಮ್ಮ ಮನೆಯಲ್ಲಿ ಹುಟ್ಟಿದರೂ ವಿನಾ ಆಂಗ್ಲೇಯರ ರೀತಿ ಅನುಸರಿಸಬೇಕಾಗಿದೆ. ಇಂತಹವರ ಜನರು "ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ" ಎಂದು ಪರಧರ್ಮ ಮತವನ್ನು ಅವರು ಮುಟ್ಟರು. ಧರ್ಮಶಾಸ್ತ್ರಗಳನ್ನು ಸರ್ವಥಾ ಸ್ವೀಕರಿಸಿ ಸೌಕರ್ಯಗಳನ್ನು ನೀಡಿದರೆಂದು ಹೇಳಿದವರು. ಇವರು ಇಂತಹ ಭ್ರಷ್ಟ ಕಾರ್ಯಗಳನ್ನು ಈವರೆಗೆ ಮಾಡಿರುವುದರಿಂದ ಅದರಂತೆಯೇ ಎಲ್ಲರೂ ಮಾಡಬೇಕೆಂದು ಬೋಧಿಸುತ್ತಿರುವರು. ವೇಶ್ಯೆಯನ್ನು ಕೇಳಿದಲ್ಲಿ ಅವಳು ಪಾತಿವ್ರತ್ಯಧರ್ಮವನ್ನು ಬೋಧಿಸಬಲ್ಲಳೇ? ತನ್ನಂತೆಯೇ ಇರಬೇಕೆಂದು ಹೇಳುವಳು. ಅದೇನೂ ಆಶ್ಚರ್ಯವಲ್ಲ. ಒಟ್ಟಿನಲ್ಲಿ ಶಾಸ್ತ್ರಗಳೆಂದು ಹೆಸರಿಟ್ಟುಕೊಂಡವರು, ನವನಾಗರಿಕ ವಾದವ ಶಾಸ್ತ್ರೀಯವೆಂದು ಹೇಳುವವರೂ ಇರುತ್ತಾರೆ. ಅವರ ವಾದಗಳೆಲ್ಲ ಅಖಿಲಭಾರತ ವರ್ಣಾಶ್ರಮ ಸ್ವರಾಜ್ಯ ಸಂಘದ ಸಭೆಯಲ್ಲಿ ವಾದ ಪ್ರತಿವಾದಗಳಿಂದ ನಿರಾಕರಿಸಲ್ಪಟ್ಟಿವೆ. ಧರ್ಮಾಚಾರ್ಯರುಗಳಿಂದ ಸ್ವೀಕರಿಸಲ್ಪಟ್ಟಿರುವುದರಿಂದ ಅವನ್ನು ಖಂಡಿಸುವುದು ನಿಷ್ಪ್ರಯೋಜನವಾದದರಿಂದ ಬಿಟ್ಟಿರುವೆ.

ನಾಲ್ಕು ವರ್ಷಗಳ ಹಿಂದೆ ಶ್ರೀ ಕಾಶೀ ಮಹಾಕ್ಷೇತ್ರದಲ್ಲಿ ಅಖಿಲಭಾರತ ವರ್ಣೀಯ ಬ್ರಾಹ್ಮಣ ಮಹಾಸಭೆಯು ದರ್ಭಾಂಗ ಮಹಾರಾಜರ ಅಧ್ಯಕ್ಷತೆಯಲ್ಲಿ ನೆರವೇರಿದಾಗ್ಗೆ ಎಲ್ಲ ದೇಶಗಳಿಂದಲೂ ಮಠಾಚಾರ್ಯರುಗಳು, ಮಹಾಪಂಡಿತರುಗಳು ಹನ್ನು ಸಾವಿರ ಮಂದಿಗಳವರೆಗೆ ಬಂದಿದ್ದು ಸ್ಪೃಶ್ಯಾಸ್ಪೃಶ್ಯ ಬಾಲ್ಯವಿವಾಹಾದಿ ವಿಚಾರಗಳು ಚೆನ್ನಾಗಿ ವಾದ ಪ್ರತಿವಾದಗಳಿಂದ ಚರ್ಚಿಸಲ್ಪಟ್ಟು ಚಂಡಾಲ ಸ್ಪರ್ಶಕೂಡದೆಂದೂ, ಬಾಲ್ಯವಿವಾಹವನ್ನು ಮಾಡಬೇಕೆಂದೂ ತೀರ್ಮಾನಿಸಿದರು. ಅವು ನಮಗೆ ಆದರ್ಶಗಳು. ಈ ತೀರ್ಮಾನಗಳು ದೂರದವರಿಗೆ ಕಳುಹಲ್ಪಟ್ಟಿದ್ದವಾದರೂ ಅವರು ಸನಾತನಧರ್ಮಪರರಿಗೂ ಧರ್ಮಗುರುಗಳಿಗೂ ಅಗೌರವವನ್ನುಂಟುಮಾಡುವುದು ದಕ್ಷಾಗಿಯೇ ನಮಗೆ ವಿರುದ್ಧವಾಗಿ ಕಾರಿದಾರ. ಆತನನ್ನು ಪಾಸುಮಾಡಿದರು. ಆದಾಗ್ಯೂ ಸನಾತನಧರ್ಮಪರರು ಎಲ್ಲ ದೇಶಗಳಲ್ಲೂ ಸಜಾನನ್ನು ಜುಲ್ಮಾನೆಯನ್ನು ಅನುಭವಿಸುತ್ತ ಬಾಲ್ಯವಿವಾಹಗಳನ್ನೇ ಮಾಡುತ್ತಿರುವರು. ಶಾಸ್ತ್ರ ಪ್ರಾಣಿಗಳಾದ್ದರಿಂದ ಆಪತ್ತುಗಳ ಕಷ್ಟಗಳನ್ನು ಸಹಿಸುವುದು ಪರಮೋತ್ಕೃಷ್ಟನಿಗೆ ಪ್ರೀತಿಕರವಾದ ತಪಸ್ಸು ಆಗುವುದು. ಯಾಗ ಗೋಚರಿಸ ಹೋಗದ ತಮ್ಮ ಪ್ರತಿಕ್ಕೆ ಕಾವು ದೊರಕುವುದಕ್ಕೆ ಧರ್ಮದಿಂದ ಸಂತುಷ್ಟರಾಗಿ ಮತಧರ್ಮಗಳನ್ನು ಬಲಿಸುವವರಿಗೆ ಸಾನಾ ವಿಧ ಕಷ್ಟ ಬಾಧಕಗಳು ದಾರಿಸಿದವರಿಂದ ಮಾಡಲ್ಪಟ್ಟು ಶಿಕ್ಷಿಸಲ್ಪಡಲು ಪ್ರಯತ್ನಿಸುತ್ತಿರುವ ಸಂಘಸೂತ್ರೀತ್ರರು ಧರ್ಮಧ್ವಂಸ ಮಾಡುವುದಕ್ಕೆ ರಾಕ್ಷಸರ ಆಚಾರವನ್ನು ಹೇಳುತ್ತಾರೆಂದು ಸನಾತನಧರ್ಮಪರರು ತಿಳಿದಿರುತ್ತಾರೆ.

ಚಂಡಾಲ ಸ್ಪರ್ಶ ನಿಷೇಧ ಆಚಾರವಿಲ್ಲದ ಮತವನ್ನೂ, ಸ್ತ್ರೀ ಸ್ವಾತಂತ್ರ್ಯ ನೀಡದಿಂದ ಸ್ತ್ರೀಯರನ್ನು ಒಂದಿಗೆ ಕೂಡಿ ವಾಸವನ್ನೂ, ಕ್ರೈಸ್ತರಿಗೂ ರಾಜರಿಗೂ ಮಧ್ಯೆ ಬೇರೆಯಾಗಿರಕೂಡದೆಂದು ಭೂಸ್ವಾಮಿಗಳ ಮತ್ತು ಧನಿಕರುಗಳ ಧನವನ್ನೂ, ಇವುಗಳ ಮೂಲಕ ಸಮಾಜದಲ್ಲಿ ಸಂಭವಿಸುವ ವಿಪ್ಲವದಿಂದ ಪ್ರಾಣವನ್ನು ನಾಶಪಡಿಸುತ್ತಿರುವ ನವನಾಗರಿಕರು ಕೋರುತ್ತಿರುವ ದೌರ್ಭಾಗ್ಯದ ಸ್ವರಾಜ್ಯವು ನಮಗೆ ಮಾತ್ರವಲ್ಲದೆ ನಮ್ಮ ಶತ್ರುಗಳಿಗೂ ಕೂಡ ಪ್ರಾಪ್ತವಾಗದಿರಲಿ. ಸ್ವಾತಂತ್ರ್ಯದ ಪ್ರತಿಯೊಬ್ಬ ಮನುಷ್ಯನಿಂದಲೂ ಕೋರಲ್ಪಡತಕ್ಕದ್ದಾಗಿದೆ. ಆದು ನಮಗೂ ನಮ್ಮ ಶತ್ರುಗಳಿಗೂ ಸ್ವರಾಜ್ಯದ ಹೆಸರಿನಿಂದ ಸ್ವಾತಂತ್ರ್ಯವನ್ನು ಕೋರುವುದಕ್ಕೆ ಮೊದಲು ಮತ ಸ್ವಾತಂತ್ರ್ಯವನ್ನೂ ವಿವಾಹಸ್ವಾತಂತ್ರ್ಯವನ್ನೂ ಹೊಂದಲು ಯತ್ನಿಸುವುದು ನ್ಯಾಯಕ್ಕೆ. ಮೊದಲೇ ಸಂಸಾರ ವಿಧಾನವನ್ನು ಗೊತ್ತುಮಾಡಲೆತ್ನಿಸದಂತಿರುವುದು ಈ ಪ್ರಯತ್ನವು ಸ್ವರಾಜ್ಯ ಧ್ವಂಸಕವಲ್ಲದೆ ಪೋಷಕವಲ್ಲವು.

ಎಲ್ಲ ಮತದವರಿಗೂ ತಂತಮ್ಮ ಧರ್ಮವನ್ನು ನಂಬಿ ಆಚರಿಸುವ ಸನ್ನತಿಗೆ ಯಾವ ಬಾಧೆಯುಂಟಾಗದಂತೆ ಜನರ ಸೌಖ್ಯಕ್ಕೆ ತಕ್ಕ ಆರ್ಥಿಕ ಸೌಕರ್ಯವನ್ನುಂಟುಮಾಡುವಂತಹ ಧಾರ್ಮಿಕ ಸ್ವರಾಜ್ಯವು ನಮಗಿಷ್ಟವಾದುದು. ಪಂಚಮರಿಗೆ ತಕ್ಕ ವಿದ್ಯೆಯನ್ನು ಕಲಿಸುವುದೂ, ಅವರಿಗೆ ವಾಸಕ್ಕೆ ಕೇರಿಗಳನ್ನೂ, ಬಾವಿಗಳನ್ನೂ, ಅವರಿಗಾಗಿ ಪ್ರತ್ಯೇಕ ದೇವಾಲಯಗಳನ್ನೂ ಕಟ್ಟಿಸಿಕೊಡುವುದೂ, ಅವರಿಗೆ ಮಂದಿರವನ್ನೇರ್ಪಡಿಸಿ ಭಾರತ ಪ್ರವಚನಗಳನ್ನು ಧಚಿಸುವುದನ್ನು ಹೇಳಿಕೊಡುವುದೂ, ಇವುಗಳಿಗಾಗಿ ಚಂದಾಹಣವನ್ನು ಕೊಡುವುದೂ ನಮ್ಮಲ್ಲಿ ನಿಗೂ ಬಹಳ ಇಷ್ಟವಾಗಿರುತ್ತವೆ. ಅವರಿಗೆ ಬೇಕಾದುದೂ ಇಷ್ಟೇ. ದ್ವಿಜರಾದಿ ಕೆಲಸಕ್ಕೆ ಅವರುಗಳನ್ನು ನಿಯಮಿಸಿಕೊಳ್ಳುತ್ತಿದ್ದೇವೆ. ಗೃಹಕೃತ್ಯಗಳಿಗೆ ಅವರನ್ನು ಸೇವಕರನ್ನಾಗಿ ನಿಯಮಿಸಿಕೊಳ್ಳಲು ಶಾಸ್ತ್ರ ಧಾರವಿರುತ್ತದೆ. ಅನಾದಿ ಕಾಲದಿಂದಲೂ ದಿನಗಳು ನಮ್ಮ ಜೊತೆಯ ಅವುಗಳ ಚರ್ಮವನ್ನು ಯಜಮಾನರು ಒಪ್ಪಿಸುವುದು ಭರತಖಂಡದಲ್ಲಿ ಬಹಳ ಅಪರಾಧವಾಗಿಸಲ್ಪಟ್ಟಿರುವುದಾದರೂ ಆ ಚರ್ಮವು ತಮ್ಮ ಮನೆಗಳಲ್ಲಿ ಜೀತಕ್ಕಿರುವ ಪಂಚಮರಿಗೆ ಉಚಿತವಾಗಿ ಕೊಡಲ್ಪಡುವುದು. ಹೀಗೆ ಕೊಡಲ್ಪಡುವ ಚರ್ಮಗಳನ್ನು ಮಾರಿ ಸ್ವಾಮಿ ಕೊಳ್ಳುವುದರಿಂದ ಅವರ ಜೀವನಕ್ಕೆ ಸಹಾಯವಾಗುವುದು.

ಬಹಳ ನಾಗರಿಕರಾಗಿರುವವರು ತನ್ನ ತಕ್ಕ ದನಗಳನ್ನು ಖಾವೇ ಸನಾಕೇರ್ಳುತ್ತಿರುವಂತೆ ಪಂಚಮರ ಜೀವನಕ್ಕೆ ಹೊಂದಿಕೆಯಾಗಿರುತ್ತಿದ್ದ ಜೋಡನ್ನು ಹೊಲೆಯುವುದೇ ವೈವಾಹಿಕ ಕೃತ್ಯಗಳು ಮೊದಲಿಂದಲೂ ಪಂಚಮರ ದಿನಾ ಮಿತ್ತಾಂಡ ಪಾದುಕೆ ಪಟ್ಟಿ. ಈಗ ಆಂಗ್ಲೇಯ ನಾಗರಿಕತೆಯು ಬೆಳೆದ ಮೇಲೆ ಬ್ರಾಹ್ಮಣಾದಿಗಳು ಜೋಡನ್ನು ಕೊಳ್ಳುವ ಜೀವನವನ್ನಾಶಿಸಿದರು. ಹೀಗೆ ಅವರ ಕಸಬನ್ನು ಅಪಹರಿಸಿ ಅವರಿಗೆ ಏಷ್ಟು ಕಷ್ಟ ಮಾಡಿದ್ದಾರೆ ಎಂಬುದನ್ನು ವಿಚಾರಮಾಡಬೇಕು. ವಿದ್ಯೆ ಚೆನ್ನಾಗಿ ಜನರು ಮಾಡತಕ್ಕ ಕೆಲಸಗಳನ್ನು ಯಂತ್ರಗಳ ಮೂಲಕ ಮಾಡಿಕೊಳ್ಳತಕ್ಕ ವ್ಯಾಪಾರದಿಂದ ಕೆಲವರಿಗೆ ಹಣವು ವೃದ್ಧಿಯಾದರೂ ಬಹಳ ಜನರಿಗೆ ಉದ್ಯೋಗವಿಲ್ಲದೆ ದಾರಿದ್ರ್ಯವುಂಟಾಗಿದೆ. ಈ ಯಂತ್ರಗಳನ್ನು ಮಾರಿ ಆಂಗ್ಲೇಯರು ಧನಿಕರಾಗುತ್ತಿದ್ದಾರೆ. ಸ್ವದೇಶೀ ನೂಲಿನಿಂದ ಬಟ್ಟೆಗಳನ್ನು ಧರಿಸುವುದರಿಂದ ದೇಶಕ್ಕೆ ಕ್ಷೇಮವಾಗುವುದೆಂಬುದನ್ನು ನಾವು ಒಪ್ಪುತ್ತೇವೆ. ಈ ಉದ್ಯೋಗಗಳೆಲ್ಲ ಪ್ರಾಚೀನಾಚಾರವನ್ನನುಸರಿಸಿ ಬೋಧಿಸಿ ಸಂಪಾದಿಸಿಕೊಳ್ಳುವುದು ಬಹಳ ಅಗತ್ಯವು. ನಮ್ಮ ಮತವು ಸ್ಪೃಶ್ಯಾಸ್ಪೃಶ್ಯ ನಿಯಮಗಳೂ, ನಮ್ಮ ದೇವಸ್ಥಾನ ನಿಯಮಗಳೂ ಪೂರ್ವಕಾಲದಿಂದಲೂ ನಡೆಯುತ್ತಿವೆ. ಕೋ॥ ವಿನಾಯುಷ್ಯೇ ಸಹಿತೇನ ವಿನಾಶಿ ಹಿಮಯಾಕ್ಯಕ್ತಂ। ಶಾಸ್ತ್ರವಿರೋಧವಾದ ಸ್ವತಂತ್ರ್ಯ ಆಕೃಷ್ಟಃ ಇತಿ ಎಂದು ಶಾಸ್ತ್ರದಲ್ಲಿ ವಿಧಿಸಲ್ಪಟ್ಟಿರುವ ನಿಷೇಧಗಳನ್ನು ಕ್ಷಮಿಸ ಹಗಲು ದೇವಸ್ಥಾನಗಳಿಗೆ ಅಂಗ್ಲೇಯರನ್ನು ಸೇರಿಸಬೇಕೆಂದು ಅಪ್ಪಣೆಯನ್ನು ನೀಡಿ ಇವರ್ಯ ಕಕ್ಷೆಗಳ ದೇವಸ್ಥಾನಕ್ಕೆ ಧಕ್ಕೆ ಇರುವವರ ಮುಖದ ನ್ನು ನೋಡಿ ವಡುದ ಪಾಪವೆಂದು ಶಾಸ್ತ್ರವು ಹೇಳುತ್ತಿರುವುದನ್ನು ನಂಬದೆ ತಮ್ಮ ತಂದೆ ತಾತಂದಿರ ಆಚರಣೆಯನ್ನೂ ಲಕ್ಷಿಸದೆ ಮನಸ್ಸಿಗೆ ಬಂದಂತೆ ವಿಕಾರ ವೇಷವನ್ನು ಧರಿಸುವುದು ದೇಶದ ಗೌರವಕ್ಕೂ ತಮ್ಮ ಗೌರವಕ್ಕೂ ಭಂಗಕರವು. ಆದುದರಿಂದ ದೇಶಕ್ಷೇಮಚಿಂತಕರಾದ ಕಾಂಗ್ರೆಸು ನಾಯಕರಿಗೆ ನಂಘ ಸಂಸ್ಥರವರಿಂದ ಹೇಳಿಕೊಳ್ಳುವವರಾಗಲಿ ಈ ದುರಾಚಾರಗಳನ್ನು ಬಿಟ್ಟು ತಮ್ಮ ಪೂರ್ವಿಕರ ದೇಶ ಮತ ವೇಷಗೌರವಗಳನ್ನು ಕಾಪಾಡಬೇಕೆಂದು ಅವರುಗಳನ್ನು ವಿನಯದಿಂದ ಪ್ರಾರ್ಥಿಸುವುದಾಗಿದೆ.

ಆಂಗ್ಲೇಯರು ಅನೇಕ ದೇಶಗಳಲ್ಲಿ ವಾಸಿಸುತ್ತಿರುವರು. ನಮ್ಮ ದೇಶದಲ್ಲಿ ನಮ್ಮ ಮತವು ಬಹಳ ದೊಡ್ಡದು. ಆವರು ಬಹಳ ಸ್ವಲ್ಪ ಸಂಖ್ಯೆಯುಳ್ಳವರು. ಆದರೂ ಅವರು ನಮ್ಮ ಸಹವಾಸದಲ್ಲಿ ಎಷ್ಟು ಕಾಲವಿದ್ದರೂ ತಮ್ಮ ಆಚಾರವನ್ನಾಗಲಿ ಮತ ನಿಯಮಗಳನ್ನಾಗಲಿ ವೇಷ ಭಾಷೆಗಳನ್ನಾಗಲಿ ಎಷ್ಟು ಮಾತ್ರಕ್ಕೂ ಬದಲಾಯಿಸಲಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ನಾವು ಅವರಂತೆಯೇ ಜೀವನಕ್ಕಾಗಿ ಇತರ ವಿದ್ಯೆಗಳನ್ನು ಕಲಿತರೂ ನಮ್ಮ ಧರ್ಮಶಾಸ್ತ್ರವನ್ನೂ ವೇಷ ಭಾಷೆಗಳನ್ನೂ ಬದಲಾಯಿಸಕೂಡದೆಂಬ ಉಪದೇಶವನ್ನು ಕೇಳದೆ ಅಲ್ಪ ಬುದ್ಧಿಯಿಂದ ನಾಟಕ ವೇಷಧಾರಿಗಳಂತೆ ವರ್ತಿಸುವುದು ದೇಶಕ್ಕೂ ಮತಕ್ಕೂ ಎಷ್ಟು ಅಪಾಯಕರವೂ ಪಾಪಕರವೂ ಎಂಬುದನ್ನು ಸಾವಧಾನ ಮನಸ್ಸಿನಿಂದ ನವನಾಗರಿಕರು ಗ್ರಹಿಸಿ ಇನ್ನುಮೇಲಾದರೂ ತಮ್ಮ ಸ್ವರೂಪವನ್ನು ಸಂಸ್ಕರಿಸಿಕೊಳ್ಳುವವರಾಗಲಿ.

ನದಿ ನೀರ್ಗಳಿಗೆ ಎಂಬ ವಿಷಯವನ್ನು ಗಮನಿಸದೆ ಕ್ಲಬ್ಬುಗಳಲ್ಲಿ ವರ್ಣಸಂಕರವಾದ ತಿಂಡಿಯನ್ನೂ, ಹೋಟೇಲುಗಳಲ್ಲಿ ಅನ್ನವನ್ನೂ ತಿಂದು ಆರೋಗ್ಯವನ್ನು ಕೆಡಿಸಿಕೊಂಡು ಬೇಬುಗಳಲ್ಲಿ ಯಾವಾಗಲೂ ಔಷಧಿಯ ಸೀಸೆಗಳನ್ನಿಟ್ಟುಕೊಂಡಿರುವ ದುಸ್ಥಿತಿಯು ಪ್ರಾಪ್ತವಾಗಿರುತ್ತದೆ. ಇಂತಹ ದುರ್ಭೋಜನವನ್ನು ಬಿಟ್ಟು ನಿಯಮಾನುಸಾರವಾಗಿ ಊಟಮಾಡುವವರ ಆರೋಗ್ಯ ಬಹಳ ಚೆನ್ನಾಗಿರುವುದೆಂಬುದು ಲೋಕ ವಿದಿತವಾಗಿರುವುದು.

ನಾವು ಎಲ್ಲ ವಿಧದಲ್ಲೂ ಪಂಚಮರಿಗೆ ಸಹಾಯ ಮಾಡಿದಾಗ್ಯೂ ಅವರು ನಮ್ಮನ್ನು ಬಿಟ್ಟು ಬೇರೆ ಹೋದರೂ ನಮಗೆ ನಷ್ಟವಿಲ್ಲ. ನಮ್ಮಲ್ಲಿ ಉಳಿದ ಸ್ಪೃಶ್ಯ ಸಂಖ್ಯಾಕರಾದ ಮಹಮ್ಮದೀಯರಿಗೂ ಪಾರ್ಸಿಯವರಿಗೂ ಪ್ರತ್ಯುತ್ಪನ್ನದಿಂದ ರಕ್ಷಣೆಯು ಉಂಟಾಗಿಲ್ಲವೇ? ಆ ಭಯದಿಂದ ಅವರು ತಮ್ಮ ಮತಧರ್ಮವನ್ನು ಬಿಟ್ಟು ನಮ್ಮೊಡನೆ ಸೇರಿರುವರೇ? ಹಾಗೆಯೇ ನಮ್ಮ ಸನಾತನ ಧರ್ಮಪರರು ಮತದವರು ಕೂಡ ಮೊರಕನದವರಿಂದ ವಿಶ್ವಮಾನ ದನ ಪ್ರಾಣಸಂರಕ್ಷಣೆಯನ್ನು ಕೋರಲಿಕ್ಕೆ. ಹಾಗೆ ಅವರು ನಿರ್ದಯಿಯಿಂದ ಅಂತಹ ರಕ್ತವನ್ನು ಕೊಡದಿದ್ದಲ್ಲಿ "ಧರ್ಮ ಸಂರಕ್ಷಣಾರ್ಥಾಯ ಸಂಭವಾಮಿಯುಗೇಯುಗೇ" ಎಂದು ಪ್ರತಿಜ್ಞೆ ಮಾಡಿರುವ ಲೋಕನಿಯಾಮಕನಾದ ಪರಮೇಶ್ವರನನ್ನು ಪ್ರಾರ್ಥಿಸವೆವು. ನಾವು "ಸ್ವಧರ್ಮೇ ನಿಧನಂಶ್ರೇಯಃ ಪರಧರ್ಮೋ ಭಯಾವಹಃ" ಎಂದು ಆಜ್ಞೆ ಮಾಡಿರುವ ಪರಮೇಶ್ವರನ ಆಜ್ಞೆಯನ್ನು ವಿನಾ ಧೃಷ್ಟವಾದವುಗಳಿಗೆ ಪರರಿಸ್ಪರನನ್ನು ಪ್ರಾರ್ಥಿಸಿ ಪ್ರಯೋಜನವಿಲ್ಲ. ಆದುದರಿಂದ ವೇದ ಶಾಸ್ತ್ರಗಳಿಗೆ ಅಂಗೀಕಾರವಲ್ಲದ ಯಾವ ಸೌಕರ್ಯಗಳನ್ನೂ ಪಂಚಮರಿಗೆ ನಾವು ಸನಾತನಧರ್ಮಪರರು ನೀಡಲಾರೆವು.

ಶಾಸ್ತ್ರ ವಿರೋಧವಲ್ಲದ ಎಲ್ಲ ಸೌಕರ್ಯಗಳನ್ನೂ ಈ ವರೆಗೆ ನಮ್ಮ ಪೂರ್ವಿಕರು ಮಾಡಿರುತ್ತಾರೆ. ಈಗ ನಾವು ಕೂಡ ಮಾಡಲು ಸಿದ್ಧರಾಗಿರುತ್ತೇವೆ. ನಾವು ನಮ್ಮ ಆಚಾರ ಧರ್ಮಗಳಲ್ಲಿ ಕೈ ಹಾಕಕೂಡದೆಂದೂ, ಹಾಗೆ ಮಾಡಲು ಯಾವ ಪ್ರಭುತ್ವಕ್ಕೂ ನ್ಯಾಯವಾದ ಅಧಿಕಾರವಿಲ್ಲವೆಂದೂ ದೊರೆತನದವರಲ್ಲಿ ಬಿನ್ನೈಸುತ್ತೇವೆ. ಮುಂದೆ ನಮ್ಮ ನವನಾಗರಿಕರಿಗೆ ಸ್ವರಾಜ್ಯ ಪ್ರಾಪ್ತವಾದರೂ ಅವರನ್ನು ಸಹ ಹೀಗೆಯೇ ಕೇಳಿಕೊಳ್ಳುತ್ತೇವೆ.

32 ಕೋಟಿ ಭಾರತೀಯರಲ್ಲಿ ಪಾಶ್ಚಾತ್ಯ ವಾಸನೆಯುಳ್ಳ ಕೆಲ ಲಕ್ಷ ಜನರ ಹೊರತಾಗಿ ಉಳಿದವರೆಲ್ಲರೂ ಶ್ರುತಿ ಸ್ಮೃತಿಗಳನ್ನು ನಂಬಿ ಯಥಾಶಕ್ತಿಯಿಂದ ತಂತಮ್ಮ ಕುಲಧರ್ಮಗಳನ್ನು ಆಚರಿಸುವವರೇ ಆಗಿರುವರು. ಉತ್ಸವ ದಿನಗಳಲ್ಲೂ ಶ್ರಾದ್ಧದಿನಗಳಲ್ಲೂ ಕೆಲ ನಾಸ್ತಿಕರ ವಿನಾ ಉಳಿದವರೆಲ್ಲರೂ ಸ್ನಾನಸಂಧ್ಯಾವಂದನೆಗಳನ್ನೂ ದೇವರ ದರ್ಶನವನ್ನೂ ಮಾಡಿ ತಮ್ಮನ್ನು ಕೃತಕೃತ್ಯರನ್ನಾಗಿ ಮಾಡಬೇಕೆನ್ನುವವರೇ. ನೂರಕ್ಕೆ 90 ಮಂದಿಯವರು ಇದರ ಅರ್ಥ ಈಗ ಅವರು ತಮಗೆ ಪ್ರಾಪ್ತವಾಗುತ್ತಿರುವ ಮತವಿಪ್ಲವವನ್ನೂ ಅನರ್ಥವನ್ನೂ ಚೆನ್ನಾಗಿ ತಿಳಿಯದಿರುವುದರಿಂದ ಅವರು ಉದಾಸೀನರಾಗಿರುತ್ತಾರೆ. ಸರಕಾರದವರು ರಾಜಕೀಯ ವಿಚಾರದಲ್ಲಿ ಬಹಳ ಕಾಲದಿಂದಲೂ ಪ್ರವೇಶಿಸಿರುವುದರಿಂದ ಅವರೇ ಹಿಂದೂ ಪ್ರತಿನಿಧಿಗಳೆಂದೂ, ಅನಧಿಕಾರಿಗಳಾಯೂ ಹಿಂದುಗಳ ಅಭಿಪ್ರಾಯವೆನ್ನುವುದೂ ಪ್ರತಿಷ್ಠಿತರೆಂದು ತಪ್ಪು ತಿಳಿದುಕೊಂಡಿರುತ್ತಾರೆ. ಆಂಗ್ಲೇಯ ಭಾಷಾ ಪಾಂಡಿತ್ಯವನ್ನು ಅವರ ಆಚಾರವನ್ನು ಅನುಸರಿಸಿಕೊಂಡಿರುವವರು ಪ್ರಚಾರಪ್ರತಿನಿಧಿಗಳಾಗಿ ಅಸೆಂಬ್ಲಿಯಲ್ಲಿ ಸೇರಿ ಮತ ಸ್ವಾತಂತ್ರ್ಯಕ್ಕೆ ವಿರುದ್ಧವಾದ ಶಾಸನಗಳನ್ನು ಮಾಡುತ್ತಿರುವರು. ಇವರ ಮೂಲಕ ಎಂತಹ ಅನರ್ಥಗಳು ಪ್ರಾಪ್ತವಾಗಿದೆಯೆಂಬುದು ಯಾರಿಗೆ ಗೊತ್ತು. ಸನಾತನ ಧರ್ಮಪರರು ಅಖಿಲ ಭಾರತ ವರ್ಣಾಶ್ರಮ ಸ್ವರಾಜ್ಯ ಸಂಘದ ಉಪ ಸಂಘಗಳನ್ನಾಗಿ ಪಟ್ಟಣಗಳಲ್ಲೂ ಹಳ್ಳಿಗಳಲ್ಲೂ ಸಭೆಗಳನ್ನೇರ್ಪಡಿಸಿ ಅಧ್ಯಕ್ಷರನ್ನೂ, ಕಾರ್ಯದರ್ಶಿಗಳನ್ನೂ, ಸಭಿಕರನ್ನೂ ಗೊತ್ತುಮಾಡಿಕೊಂಡು ಕಟ್ಟು ಏರ್ಪಡಿಸಿಕೊಳ್ಳಬೇಕು. ಅಖಿಲ ಭಾರತ ವರ್ಣೀಯ ವರ್ಣಾಶ್ರಮ ಸ್ವರಾಜ್ಯ ಸಂಘದ ಸಕ್ಯುಲರು "ಆರ್ಗನೈಸೇಷನ್" ಎಂದು ಇಂಗ್ಲೀಷಿನಲ್ಲಿ ಇರುವುದನ್ನು ಹಿಂದಿಯಲ್ಲಾಗಲಿ

ಬರೆದು ತಿಳಿಸುತ್ತೇವೆ. ಕಾಂಗ್ರೆಸಿನವರಾಗಲಿ [illegible] ಧರ್ಮವನ್ನಾಗಲಿ [illegible] ಸಮಾಜವನ್ನಾಗಲಿ [illegible] ರಾಜಕೀಯ [illegible] ಧರ್ಮವನ್ನು [illegible] ಆರ್ಥವನ್ನು ಬಲಪಡಿಸುತ್ತದೆ. ಆದ್ದರಿಂದ ಕ್ರಿಸ್ತೀಯ ಮತದವರಿಂದ ಸಂಭವಿಸಿದ ನಾನಾ ಕಷ್ಟಗಳನ್ನು ಅನುಭವಿಸಿ ತಂತಮ್ಮ ಮತಗಳನ್ನು ಕಾಪಾಡಿರುವ ಸಂಗತಿಯು ಆಯಾ ಚರಿತ್ರೆಯಿಂದ ವಿಶದವಾಗುವುದರಿಂದ ಮನುಷ್ಯರಿಗೆ ಸ್ವಭಾವಸಿದ್ಧವಾದ ಮತಶ್ರದ್ಧೆಯನ್ನು ಬಿಟ್ಟು ಚಂಡಾಲರಲ್ಲಿ ಸೇರುವುದು ಹಿಂದೂಗಳಿಗೆ ಮಹಾಪಾತಕವು. ಕ್ರೈಸ್ತರೂ ಮಹಮ್ಮದೀಯರೂ ತಂತಮ್ಮ ಮತ ಗ್ರಂಥಗಳಲ್ಲಿ ಇತರ ಜಾತಿಯವರನ್ನು ತಮ್ಮೊಳಗೆ ಸೇರಿಸಿಕೊಳ್ಳುವುದು [illegible] ಹಾಗೆ ಮಾಡುವರು. ಅವರ ಗಳೊಡನೆ ಎಲ್ಲ ವಿಷಯದಲ್ಲೂ ಸಮಾನ ಗೌರವವನ್ನು ಸಂತೋಷದಿಂದ ಕೊಡುವುದಿಲ್ಲ. ಈಸ್ಟಿಂಡಿಯನ್ನರನ್ನು ನಿಜವಾದ ಆಂಗ್ಲೇಯರು ತಮ್ಮೊಡನೆ ಸಮವಾಗಿ ಗೌರವಿಸದಿರುವುದು ನಮಗೆ ತಿಳಿದ ವಿಚಾರವಾಗಿದೆ. ಬ್ರಿಟಿಷ್‌ನವರ ಸಾಮ್ರಾಜ್ಯದಲ್ಲಿ [illegible] ನಮ್ಮಗಳಿಗೆ ಯಾವ ದ್ವೇಷಭಾವವೂ ಇಲ್ಲ. ಅವರಾಗಲಿ ಸಂಪೂರ್ಣ ಸ್ವರಾಜ್ಯ ವಾದಿಗಳಾಗಲಿ ನಮ್ಮ ವೇದಶಾಸ್ತ್ರ ಸಿದ್ಧವಾದ ಮತ ಕಟ್ಟಳೆಗಳನ್ನು ಉಲ್ಲಂಘಿಸಿ ಪರಿಪಾಲಿಸುವರೆಂದು ಸವಾಗಿ ತಿಳಿದು ಈ ಅಭಿಪ್ರಾಯವನ್ನು ಖಂಡಿಸಿರುವುದಿಲ್ಲ. ಅವರು ಆ ಅಭಿಪ್ರಾಯವನ್ನು ಬದಲಾಯಿಸುವವರೆಗೂ ನಾವು ಪ್ರತಿಭಟಿಸುವೆವು. ನಮ್ಮ ಕುಲ ಧರ್ಮವನ್ನು ಕಾಪಾಡುವವರೆಗೂ ರಾಜನನ್ನು ಪರಮೇಶ್ವರನೆಂದು ಭಾವಿಸುವೆವು. ಕಾಂಗ್ರೆಸಿನವರಿಂದ ನಮಗೆ ಸಂಭವಿಸುತ್ತಿರುವ ಅನರ್ಥಗಳನ್ನು ತೊಲಗಿಸಬೇಕೆಂದು ದೊರೆತನದವರನ್ನು ಸಹಸ್ರ ವಿಧಗಳಿಂದ ಪ್ರಾರ್ಥಿಸುತ್ತೇವೆ. ನಮಗೆ ಯಾರ ಮೇಲೂ ದ್ವೇಷವಿಲ್ಲ. ನಮ್ಮ ಧರ್ಮವನ್ನು ನಾವು ಬುದ್ಧಿಪೂರ್ವಕವಾಗಿ ಬಿಡುವುದಿಲ್ಲ. ನಿರ್ಬಂಧಪಡಿಸಿ ದೌರ್ಜನ್ಯ ನಡೆಸಿದಲ್ಲಿ ಅದಕ್ಕೆ ಸ್ವರಾಜ್ಯ ವಾದಿಗಳೇ ಜವಾಬ್ದಾರರಾಗುವರು. ಇಂತಹ ತೊಂದರೆಗಳುಂಟಾಗದಂತೆ ಧರ್ಮ ರಕ್ಷಕನಾದ ಪರಮೇಶ್ವರನೂ ಅವನ ರೂಪಾದ ದೊರೆತನದವರೂ ಸನಾತನ ಧರ್ಮಪರರನ್ನು ರಕ್ಷಿಸಬೇಕೆಂಬುದೇ ಸನಾತನ ಧರ್ಮಿಗಳ ಅಭಿಪ್ರಾಯವು.

ಆ. ವಿ.

ಭಾರತ ರಾಜಕೀಯಾಭ್ಯುದಯ

(ಲೇ—ಕಡಕುಪ್ಪಿ ಗುರುಪಾದಪ್ಪ ಶ್ರೀ ಜಯದೇವ ಪ್ರೆಸ್, ದಾವಣಗೆರೆ)

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ಸಂಸ್ಥೆಯು ಆರಂಭ ದೆಸೆಯಲ್ಲಿ ಹ್ಯೂಂರವರು ಕಾರ್ಯದರ್ಶಿಗಳಾಗಿದ್ದು ವರ್ಷ ವರ್ಷವೂ ಇದು ಕಷ್ಟದ ಸೇರುವಂತೆ ಏರ್ಪಡಿಸುವುದರಲ್ಲಿ ತೊಡಗಿ ಅದನ್ನೊಂದು ಸುವ್ಯವಸ್ಥಿತ ಅವಸ್ಥೆಗೆ ತಂದರು. ಸುಮಾರು 25 ವರ್ಷಗಳ ವರೆಗೆ ಆಡಳಿತದ ಗುಣದೋಷಗಳನ್ನು ವಿಮರ್ಶಿಸಿ ಪ್ರಭುತ್ವದವರಿಗೆ ಸಲಹೆಗಳನ್ನು ಕೊಡುವುದರಲ್ಲಿಯೇ ಇದು ತೊಡಗಿತು. ನ್ಯಾಯ ಶಾಖೆಯ ಮತ್ತು ಕಾರ್ಯನಿರ್ವಾಹಕ ಕರ್ತವ್ಯಗಳನ್ನು ವಿಭಾಗಿಸುವುದು, ಸೈನ್ಯದ ಖರ್ಚನ್ನು ಕಡಿಮೆಮಾಡುವುದು, ಶಾಸನ ಸಭೆಗಳ ಸುಧಾರಣೆ, ಪಂಚಾಯತರ ಮೂಲಕ ವಿಚಾರಣೆ, ಲಂಡನ್ನಿನಲ್ಲಿರುವ ಇಂಡಿಯ ಕಛೇರಿಯ ಉಚ್ಚಾಟನೆ, ಐ. ಸಿ. ಎಸ್. ಪರೀಕ್ಷೆಯನ್ನು ಇಂಗ್ಲೆಂಡು ಮತ್ತು ಇಂಡಿಯಾಗಳಲ್ಲಿ ಏಕಕಾಲದಲ್ಲಿಯೇ ನಡೆಸುವ ವಿಚಾರವು, ಸೈನ್ಯ ಶಾಖೆಗೆ ದೇಶೀಯರನ್ನು ಸೇರಿಸುವುದು ಮತ್ತು ಅವರನ್ನು ತರಬೇತು ಮಾಡಲು ಸೈನ್ಯ ವಿದ್ಯಾಲಯಗಳನ್ನು ಸ್ಥಾಪಿಸುವುದು, ಆಯುಧ ಶಾಸನ ರದ್ದುಪಡಿಸುವುದು, ದಕ್ಷಿಣ ಆಫ್ರಿಕದಲ್ಲಿನ ಭಾರತೀಯರ ಕಷ್ಟನಿವಾರಣೋಪಾಯ, ಉಪ್ಪಿನ ತೆರಿಗೆ, ಪ್ರೌಢ ಮತ್ತು ಪ್ರಾಥಮಿಕ ವಿದ್ಯಾಪ್ರೋತ್ಸಾಹ, ನಾಟು ಸೋಗನರ ಗಡೀಪಾರು ಹಿಂದಣ ಭರತಖಂಡದ ಬಡತನ ನಿವಾರಣೋಪಾಯ, ಪ್ರತ್ಯೇಕ ಚುನಾವಣೆ ಇವೇ ಮೊದಲಾದ ಅಂಶಗಳ ಬಗ್ಗೆ ಪ್ರಭುತ್ವದವರಿಗೆ ಪ್ರಾರ್ಥನಾ ಮೂಲಕ ಸೂಚನೆಕೊಡುತ್ತಿದೆ. ಇದರ ಕಾರ್ಯವಾಗಿದ್ದಿತು. ಇವುಗಳಲ್ಲಿ ಕೆಲವನ್ನು ಕುರಿತು ಸಂದರ್ಭಾನುಸಾರ ಈ ಹಿಂದೆಯೇ ಪ್ರಸ್ತಾಪಿಸಿದೆ. ಉಳಿದವುಗಳ ವಿಚಾರದಲ್ಲಿ ಕೆಲಮಟ್ಟಿಗೆ ಇಲ್ಲಿ ತಿಳಿಸಲಾಗುವುದು.

ನ್ಯಾಯ ಶಾಖೆ ಮತ್ತು ಕಾರ್ಯನಿರ್ವಾಹಕ ಕರ್ತವ್ಯಗಳನ್ನು ನೆರವೇರಿಸಲು ಒಬ್ಬ ಅಧಿಕಾರಿಯೇ ಇರುತ್ತಾನೆ. ಉದಾಹರಣೆಗಾಗಿ ಜಿಲ್ಲಾಧಿಕಾರಿಗಳನ್ನು ತೆಗೆದುಕೊಳ್ಳೋಣ. ಇವರು ಏಕಕಾಲದಲ್ಲಿಯೇ ಪೊಲೀಸ್ ಅಧಿಕಾರಿಗಳೂ ದಂಡಾಧಿಕಾರಿಗಳೂ ಆಗಿರುತ್ತಾರೆ. ಒಬ್ಬರೇ ಒಂದು ಕಡೆ ಪೊಲೀಸು ಅಧಿಕಾರಿಗಳಾಗಿ ಅಪರಾಧಿ ಶೋಧನೆ ರುಜುವಾತಿಗೆ ಏರ್ಪಡಿಸುವುದು ಇನ್ನೊಂದು ಕಡೆ ಅವನ ವಿಚಾರಣೆ ತೀರ್ಪುಗಳಿಗಾಗಿ ನ್ಯಾಯಾಧೀಶನಾಗಿ ಕುಳಿತುಕೊಳ್ಳುವುದು ಇದರಿಂದ ಅಪರಾಧಿಗೆ ನ್ಯಾಯ ದೊರೆಯುವುದು ಹೇಗೆ ಸಾಧ್ಯವಾದೀತು? ಪಿರ್ಯಾದಿಯೇ ನ್ಯಾಯಾಧೀಶನಾಗಿ ಅಪರಾಧಿಗೆ ನಿಷ್ಪಕ್ಷ ಮನಸ್ಸಿನಿಂದ ತೀರ್ಪುಕೊಡುವುದು ಅಸಂಭವ. ಇದರಿಂದ ಅಪರಾಧಿಗೆ ಬಹು ಅನ್ಯಾಯ ಮಾಡಿದಂತಾಗುತ್ತದೆಯಾದುದರಿಂದ ಮೇಲೆ ಹೇಳಿದ ಎರಡು ಕರ್ತವ್ಯಗಳಿಗೂ ಬೇರೆ ಬೇರೆ ಅಧಿಕಾರಿಗಳನ್ನು ನಿಯಮಿಸಿರೆಂದು ರಾಷ್ಟ್ರ ಸಭೆಯು ಬಹುಕಾಲದಿಂದಲೂ ಪ್ರತಿಭಟಿಸಿಕೊಳ್ಳುತ್ತ ಬಂದಿರುವುದು. ಈ ಏರ್ಪಾಡಿನಿಂದ ದುಷ್ಟಟ್ಟು ಖರ್ಚು ಬರುತ್ತದೆಂದು ಪ್ರಭುತ್ವದವರು ಹೇಳುತ್ತ ಬಂದಿರುತ್ತಾರೆ. ಇಂಡಿಯಾ ಸರಕಾರದ ಸೇವೆಯಲ್ಲಿ ದೊಡ್ಡ ಅಧಿಕಾರಿಗಳಾಗಿ ಅನುಭವಹೊಂದಿದ [illegible] ಜಾರ್ಜ್ [illegible] ಸಹ [illegible] ಸ್ಟೇಟ್ [illegible] ಆದ [illegible] ಈ ಏರ್ಪಾಡಿನ [illegible] ತೋರಬೇಕು.

ನ್ಯಾಯ ಶಾಖೆ ಮತ್ತು [illegible] ಕರ್ತವ್ಯಗಳನ್ನು [illegible] ದಂಡಾಧಿಕಾರಿಗಳೆಂಬವರು (Judicial Magistrates) ನಿಯಮಿಸಲ್ಪಟ್ಟಿದ್ದಾರೆ.

ಪಂಚಾಯತರ ಮೂಲಕ ವಿಚಾರಣೆ (Trial by Jury) ಬಗ್ಗೆ ಪ್ರತಿಗಳಲ್ಲಿ ಬಹು ಅಸಮಾಧಾನವಿದ್ದು ಅದರ ಸುಧಾರಣೆಗಾಗಿ ರಾಷ್ಟ್ರ ಸಭೆಯು [illegible] ಹೋರಾಡುತ್ತಿರುವುದು. ನ್ಯಾಯಸ್ಥಾನಗಳಲ್ಲಿ ನ್ಯಾಯಾಧೀಶರು ತೀರ್ಪುಕೊಡಲು ತಮ್ಮ ಸಲಹೆಗಳಿಂದ ಸಹಾಯವಾಗುವಂತೆ ಪಂಚಾಯತರೆಂಬವರು ಇರುವರು. ಈ ಪಂಚಾಯತ ಪದ್ಧತಿಯು ಐರೋಪ್ಯ ಅಪರಾಧಿಗೇ ಬೇರೆ ತರವಾಗಿರುವುದು, ಭಾರತೀಯ ಅಪರಾಧಿಗೇ ಬೇರೆ ತೆರನಾದುದು. ಐರೋಪ್ಯನ, ಅಥವಾ ಬ್ರಿಟಿಷ್ ಪ್ರಜೆ ಇರದಿದ್ದರೂ ಜಿಂತೆಯಲ್ಲ ಕನಿಷ್ಠ ಪಕ್ಷ ಅರ್ಧ ಭಾಗದಷ್ಟು ಮಂದಿ ಪಂಚಾಯತರು ಐರೋಪ್ಯರೇ ಇರಬೇಕೆಂದು ಕೇಳಿಕೊಳ್ಳುವ ಹಕ್ಕು ಅವನಿಗಿರುವುದು. ಅಧಿಕಾರಿಗಳ ದೆಸೆಯಿಂದ ಸಂಭವಿಸುವ ಅಪಾಯಗಳಿಂದೊಂದು ರಕ್ಷಣೆಯಾಗಿರುವುದಷ್ಟೇ ಅಲ್ಲ, ಜನರ ಉದ್ವೇಗದಿಂದೊದಗುವ ಅಪಾಯಕ್ಕೆ ಒಂದು ರಕ್ಷಣೆಯಾಗಿರುವುದು. ಭಾರತೀಯನ ವಿಚಾರದಲ್ಲಿ ಈ ದೇಶದಲ್ಲಿರುವ ಐರೋಪ್ಯರೆಲ್ಲರೂ ಮನೋವಿಕಾರಕ್ಕೊಳಗಾಗಿ ನಾಶವಾದಷ್ಟು ಕಾರಣವಿಲ್ಲದೆಯೇ ದ್ವೇಷಭಾವವುಳ್ಳವರಾಗಿರಲಿ. ಇತರ ಜನ ವರ್ಗಗಳ ಮೇಲಿನ ವಿರೋಧಿಗಳಿಗೆ ಸುಲಭದ ಪ್ರಾಣಿಯಾಗಿ ಅವನಿರಲಿ. ಅದಾಗ್ಯೂ ತನ್ನ ದೇಶೀಯರಿಂದಲೇ ತನಗೆ ಯೋಗ್ಯ ವಿಚಾರಣಾ ಪ್ರಯೋಜನವು ದೊರೆಯಬೇಕೆಂದು ಅವನು ಕೇಳಿಕೊಳ್ಳಲಾಗದು. ವಿಚಾರಣೆಯೆಂಬ ನಾಟಕದ ಮೂಲಕ ಅವನು ತಪ್ಪಿಗೆ ಶಿಕ್ಷೆಗೊಳಗಾಗಬೇಕು. ಏಕೆಂದರೆ ಮನೋವಿಕಾರಕ್ಕೊಳಗಾದವರನ್ನು ವಿಚಾರಣೆಯು ಹಕ್ಕೊಟಿಯಲ್ಲಿಡುವುದು ಅವರಿಂದ. ಇಂತಹ ಸಂದರ್ಭದಲ್ಲಿ ಅಪರಾಧಿಯು ರಕ್ಷಣೆಗೆಂದು ಏರ್ಪಟ್ಟಿರುವ ಪಂಚಾಯತಿ ಮೂಲಕವಾದ ವಿಚಾರಣೆಯು ನಿಷ್ಪಕ್ಷಪಾತರಾದ ಪಂಚಾಯತರಿಲ್ಲದಿದ್ದರೆ ಮತ್ತು ಅಪೀಲ್ ಹಕ್ಕಿಲ್ಲದಿದ್ದರೆ ಒಂದು ಮಾಯಾ ಬಲೆಯಾಗಿ ಪರಿಣಮಿಸುತ್ತದೆ.

1897 ರಲ್ಲಿ ಪೂನಾದಲ್ಲಾದ ಪ್ಲೇಗಿನ ಗಲಭೆಗಳ ದೆಸೆಯಿಂದ ಬಾಲ ಗಂಗಾಧರ ಟಿಳಕರು ರಾಜದ್ರೋಹಕ್ಕಾಗಿ ನ್ಯಾಯಸ್ಥಾನಕ್ಕೆ ವಿಚಾರಣೆಗೊಳಪಟ್ಟರು. ಈ ಭಾರತ ಭೂಮಿಯಲ್ಲಿ ಐರೋಪ್ಯರಿಗಿರುವಂತೆ ಭಾರತೀಯರಿಗೂ ಶಾಸನವು ಒಂದೇ ಸಮನಾದ ರಕ್ಷಣೆಯನ್ನು ಕೊಡುವಂತಿದ್ದರೆ ಅರ್ಧ ಜನ ಪಂಚಾಯತರು ಭಾರತೀಯರೇ ಇರಬೇಕೆಂದು ಕೇಳಿಕೊಳ್ಳುವ ಹಕ್ಕು ಅವರಿಗಿರುತ್ತಿತ್ತು. ದೇಶೀಯ ಪಂಚಾಯತರಿಂದಲೇ ವಿಚಾರಣೆ ನಡೆಸತಕ್ಕ ಅಪರಾಧವಾದುದಾದರೂ ಈ ದೇಶದಲ್ಲಿಯುವುದಾದರ ರಾಜದ್ರೋಹ ಸಂಬಂಧವಾದ ಅಪರಾಧವೇ ಆಗಿರುವುದು. ದೇಶೀಯರೇ ಪಂಚಾಯತರಾಗಿದ್ದರೆ ಭಾಷಾಪರಿಚಯ ಚೆನ್ನಾಗಿರುತ್ತಿತ್ತು ಮತ್ತು ಟಿಳಕರು ಬರೆದ ಲೇಖನಗಳ ಉದ್ದೇಶ ಮತ್ತು ಜನರ ಮನಸ್ಸಿನ ಮೇಲೆ ಉಂಟಾಗಬಹುದಾದ ಪರಿಣಾಮ ಇವುಗಳನ್ನು ಚೆನ್ನಾಗಿ ಆಲೋಚಿಸಲು ಶಕ್ತರಾಗುತ್ತಿದ್ದರು. ಪ್ರಾಯಶಃ ಇಂತಹ ಸಂದರ್ಭದಲ್ಲಿ ಟಿಳಕರು ಶಿಕ್ಷೆಗೆ ಗುರಿಮಾಡಲ್ಪಡುತ್ತಿರಲಿಲ್ಲ. ಐರೋಪ್ಯರು ಮನೋವಿಕಾರದ ಆಗಿನ ಸಂದರ್ಭದಲ್ಲಿ ಇವರನ್ನು ಶಿಕ್ಷೆಗೆ ಗುರಿಮಾಡತಕ್ಕವರೆ. ಅಧಿಕಾರಸೂತ್ರ ಚಾಲಕರಾದ ಐರೋಪ್ಯರು ತಾವೇ ಹೆಚ್ಚು ಸಂಖ್ಯೆಯುಳ್ಳ ಪಂಚಾಯತಿಯನ್ನು ಏರ್ಪಡಿಸುವಂತೆ ಸಾಧಿಸಿಕೊಂಡರು. 6 ಜನ ಐರೋಪ್ಯರೂ 3 ಜನ ದೇಶೀಯರೂ ಉಳ್ಳ ಪಂಚಾಯತಿಯು ಟಿಳಕರನ್ನು ವಿಚಾರಣೆಮಾಡಿ ಬಹುಮತದಿಂದ ಅಂದರೆ 3 ಜನ ದೇಶೀಯರು ವಿರುದ್ಧವಾಗಿ 6 ಜನ ಐರೋಪ್ಯರು ಅವರನ್ನು ಶಿಕ್ಷೆಗೆ ಗುರಿಮಾಡಿದರು. ಇದಕ್ಕೂ ಬಲವಾದ ಇನ್ನೊಂದು ನಿದರ್ಶನವು ಮೈಯಲ್ಲಿ ಆಂಗ್ಲೇಯ ನ್ಯಾಯಸ್ಥಾನಗಳಲ್ಲಿ ತರಬೇತು ಹೊಂದಿ ಅನುಭವಿಗಳಾಗಿದ್ದ ಒಬ್ಬಾನೊಬ್ಬ ಮುಖ್ಯ ನ್ಯಾಯಾಧೀಶರು ಒಬ್ಬರೇ ದೇಶೀಯರಿದ್ದ 3 ಜನರ ಪಂಚಾಯತಿಯವರು ಇಬ್ಬರ ವಿರುದ್ಧವಾಗಿ 7 ಜನರು ಕೊಟ್ಟ ತೀರ್ಮಾನವನ್ನು ತಿರಸ್ಕರಿಸಿಬಿಟ್ಟರು. ಇದಕ್ಕೂ ಮೇಲೆ ಹೇಳಿದ ಟಿಳಕರ ಮೊಕದ್ದಮೆಗೂ ಇರತಕ್ಕ ವ್ಯತ್ಯಾಸವನ್ನು ನೋಡಿರಿ.

ಶಾಸನ ಸಭೆಗಳ ಉದಯ

ಈ ದೇಶದ ಪ್ರಭುತ್ವಾಧಿಕಾರವನ್ನು ಈಸ್ಟ್ ಇಂಡಿಯ ಕಂಪೆನಿಯವರಿಂದ ವಿಕ್ಟೋರಿಯಾ ಚಕ್ರವರ್ತಿನಿಯವರು 1858 ರಲ್ಲಿ ವಹಿಸಿಕೊಂಡಾಗ ಲಾರ್ಡ್ ಪಾಮರ್‌ಸ್ಟನ್‌ರವರು ಇಂಗ್ಲೆಂಡಿನಲ್ಲಿ ಮುಖ್ಯ ಮಂತ್ರಿಗಳಾಗಿದ್ದರು. ಇಲ್ಲಿನ ಆಳ್ವಿಕೆಗಾಗಿ ಒಂದು ಮಸೂದೆಯನ್ನು ರಚಿಸಿ ಪಾರ್ಲಿಮೆಂಟಿನ ಮುಂದೆ ಇಟ್ಟರು. ಭಾರತ ಪ್ರಭುತ್ವಾಧಿಕಾರವು ಭರತಖಂಡದಲ್ಲಿ ಒಬ್ಬ ವೈಸರಾಯಿ ಮತ್ತು ಮಂತ್ರಾಲೋಚನಾ ಸಭೆಗಳಲ್ಲಿಯೂ, ಲಂಡನ್ನಿನಲ್ಲಿ ಸಂಸ್ಥಾನ ಮಂತ್ರಿಗಳ (Secretary of State) ಅಧ್ಯಕ್ಷತೆಯಲ್ಲಿ ನಿವೃತ್ತಿಹೊಂದಿದ 8 ಜನ ಭಾರತ ನೌಕರರ ಮಂತ್ರಾಲೋಚನಾ ಸಭೆಯಲ್ಲಿಯೂ ಇರತಕ್ಕದ್ದು. ಈ ಎರಡು ಪ್ರತ್ಯೇಕ ಸಂಸ್ಥೆಗಳ ಕಾರ್ಯಕಲಾಪಗಳು ಸಾಮಾನ್ಯರ ಸಭೆಯ ಪುನರಾವರ್ತನೆಗೂ ಕಟ್ಟಕಡೆಯ ತೀರ್ಮಾನಕ್ಕೂ ಒಳಪಟ್ಟಿರತಕ್ಕದ್ದು. ಈ ವಿಷಯಗಳನ್ನೊಳಕೊಂಡು ಆ ಮಸೂದೆಯು ಏರ್ಪಟ್ಟಿತು. ಇದಕ್ಕೆ ಮುಖ್ಯವಾದ ಆಕ್ಷೇಪಣೆಯೆಂದರೆ ನಮ್ಮ ದೇಶೀಯರ ಪ್ರಾತಿನಿಧ್ಯಕ್ಕೆ ಎಳ್ಳಷ್ಟು ಅವಕಾಶವಿಲ್ಲದಿರುವುದೇ ಆಗಿರುತ್ತದೆ. ಇದೇ ಅಭಿಪ್ರಾಯವನ್ನೇ ಎದುರು ಪಕ್ಷದ ಮುಖಂಡರಾಗಿದ್ದ ಡಿಸ್ರೇಲಿಯವರು ವ್ಯಕ್ತಪಡಿಸಿ ಜನರ ಕಷ್ಟನಷ್ಟಗಳ ಪರಿಹಾರಕ್ಕೆ ಸಾಧನೋಪಾಯವೇ ಇಲ್ಲವಾದುದರಿಂದ ಆಂಗ್ಲೇಯರ ರಕ್ಷಣೆಯು ಇದನ್ನು ಒದಗಿಸಿಕೊಡಬೇಕೆಂದು ಅವರು ಹೇಳಿದರು. ಇದೇ [illegible] ಮಾರ್ಗವಾಗಿ ಭಾರತೀಯರಿಗೂ ಇಂಗ್ಲೆಂಡಿನಲ್ಲಿ ಸ್ಥಾನ ಸಿಕ್ಕಬೇಕೆಂದು ಬಿನ್ನಹ ಮಾಡಿಕೊಂಡರು. ಇದನ್ನು [illegible] ಸಾಮಾನ್ಯರ ಸಭೆಯು (House of Commons) ಮಸೂದೆಯಾಗಿ [illegible] ಈ ಪಾರ್ಲಿಮೆಂಟ್ [illegible] ಸಂಖ್ಯೆಯನ್ನು 8 ರಿಂದ [illegible] ಈ ಸಭೆಯ ಸದಸ್ಯರು [illegible] ಸ್ವತಂತ್ರರಾಗಿರತಕ್ಕದ್ದು. ಈ ದೇಶದ [illegible] ಲಂಡನ್ ನಗರದಲ್ಲಿಯೇ [illegible] ಇರುವುದರ ಬಗ್ಗೆ ಅನುಮಾನವನ್ನು ತೋರ್ಪಡಿಸಿದರು. ತನ್ನ ಉದ್ದೇಶ ಸಾಧನೆಗಾಗಿ ಮಂತ್ರಾಲೋಚನಾ ಸಭೆಯು ಚುನಾಯಿತ ಅರ್ಧ ಭಾಗದ ಸದಸ್ಯರಲ್ಲಿ ನಾಲ್ವರು ಭಾರತದೇಶದ ಸಾಮಾನ್ಯ ಮತ್ತು ಸೈನ್ಯ ಶಾಖೆಗಳಲ್ಲಿ 10 ವರ್ಷಗಳ ವರೆಗೆ ಸೇವೆ ಮಾಡಿದವರಾಗಿರಬೇಕು, ಉಳಿದ ಐವರು ಹಿಂದೂಸ್ಥಾನದೊಡನೆ 5 ವರ್ಷಗಳಿಂದ ವ್ಯಾಪಾರೋದ್ಯೋಗಗಳಲ್ಲಿ ತೊಡಗಿದವರಾಗಿರಬೇಕು ಎಂದು ವ್ಯವಸ್ಥೆ ಮಾಡಿದರು. ಭಾರತ ದೇಶದ ಸಾಮಾನ್ಯ ಮತ್ತು ಸೈನ್ಯ ಶಾಖೆಗಳ ಎಲ್ಲ ನೌಕರರೂ ಹಿಂದುಸ್ಥಾನದ ಸೈನ್ಯದಲ್ಲಿ 38000 ರೂ ಗಳನ್ನು ಹಾಕಿರುವ ಮತ್ತು 19000 ರೂ ಬಾಳುವ ಸರಕಾರದ ಸಾಲ ಪತ್ರಗಳನ್ನುಳ್ಳ ಹಿಂದುಸ್ಥಾನದಲ್ಲಿ ವಾಸಿಗಳಾಗಿದ್ದವರೂ ಮೊದಲನೆಯ ನಾಲ್ವರನ್ನು ಚುನಾಯಿಸತಕ್ಕದ್ದು. ಉಳಿದೈವರನ್ನು ಲಂಡನ್ ಬೆಲ್‌ಫಾಸ್ಟ್, ಲಿವರ್‌ಪೂಲ್, ಮ್ಯಾಂಚೆಸ್ಟರ್ ಮತ್ತು ಗ್ಲಾಸ್ಗೊ ಇವುಗಳಲ್ಲಿನ ಪಾರ್ಲಿಮೆಂಟಿನ ವೋಟರುಗಳೇ ಚುನಾಯಿಸತಕ್ಕದ್ದು. ಈ ಮಸೂದೆಯು ಅತೃಪ್ತಿಕರವೆಂದು ತಿಳಿಯಲ್ಪಟ್ಟಿತು. ಎರಡು ಬಗೆಯ ಓಟರುಗಳ ಹಿತಗಳು ಪರಸ್ಪರ ವಿರುದ್ಧವಾಗಿದ್ದವು. ಅಲ್ಲದೆ ಇವರಲ್ಲನೇಕರು ತಾವೆಂದೂ ಕಾಣದ ಹಿಂದುಸ್ಥಾನದ ಹಿತಕ್ಕೆ ಪ್ರತಿನಿಧಿಗಳಾಗಿ ಮಾಡಲ್ಪಟ್ಟರು. ಇದೂ ತಿರಸ್ಕರಿಸಲ್ಪಟ್ಟು ಕಟ್ಟಕಡೆಗೆ ಹೀಗೆ ತೀರ್ಮಾನವಾಯಿತು.

ಹಿಂದುಸ್ಥಾನ ನ್ಯಾಯವಿಭಾಗದ ಮತ್ತು ಆಡಳಿತದ ಕಾರ್ಯಗಳು ಹಿಂದುಸ್ಥಾನದಲ್ಲಿ ಒಬ್ಬ ವೈಸರಾಯಿ ಮತ್ತು ಒಂದು ಮಂತ್ರಾಲೋಚನ ಸಭೆಗೆ ವಹಿಸಲ್ಪಟ್ಟಿತು. ಇವರ ಮೇಲೆ ಅಂಕುಶವೆಂದರೆ ಲಂಡನ್ನಿನಲ್ಲಿ 15 ಸದಸ್ಯರ ಸಭೆಯೊಂದು. ಈ ಸಭೆಯು ಒಬ್ಬ ಸಂಸ್ಥಾನ ಮಂತ್ರಿಯ ಮೂಲಕ (Secretary of State) ಬ್ರಿಟಿಷ್ ಮಂತ್ರಿ ಮಂಡಳಿಗೆ ಉತ್ತರವಾದಿಗಳಾಗಿರಬೇಕು. ಇವರ ಮೇಲೆ ಕೊನೆಯ ಅಧಿಕಾರಿಯೆಂದರೆ ಸಾಮಾನ್ಯರ ಸಭೆಯೇ (House of commons) ಇಷ್ಟನ್ನೆಲ್ಲ ಪ್ರತಿಪಾದನೆ ಮಾಡುತ್ತ ಬಂದುದರ ಉದ್ದೇಶವೆಂದರೆ ಆಡಳಿತಗಾರರಿಗೆ ಅವರು ಯಾರೇ ಇರಲಿ ಒಂದು ಮೇಲ್ವಿಚಾರಣೆ ಒಂದು ಬಗೆಯ ಅಂಕುಶವೆಂಬುದು ಇರುವುದು ಅಗತ್ಯವೆಂದು ನಮ್ಮ ದೇಶೀಯರು ಹೇಳುತ್ತ ಬಂದಿರುವಂತೆ ಇಂಗ್ಲೆಂಡಿನಲ್ಲಿ ಜನರು ತಿಳಿದಿದ್ದರೆಂದು ತೋರಿಸುವುದೇ ಆಗಿರುವುದು. ಆದಾಗ್ಯೂ ಅವರ ಈ ಸದುದ್ದೇಶವು ಸರಿಯಾಗಿ ನೆರವೇರುತ್ತದೋ ಇಲ್ಲವೋ ಎಂಬುದನ್ನು ಎಡೆಬಿಡದೆ ನೋಡಿಕೊಳ್ಳುವ ಕಷ್ಟವನ್ನು ಅವರು ವಹಿಸಲಿಲ್ಲ. ಹಿಂದುಸ್ಥಾನ ಪ್ರಭುತ್ವವು ನಿರಂಕುಶವಾಗಿ ನಡೆಯುತ್ತ ಹೋಯಿತು. ಇಂತಹ ಅನ್ಯಾಯ್ಯ ಸ್ಥಿತಿಯನ್ನು ಸುಧಾರಿಸಲು ದೇಶಹಿತೈಷಿಗಳೂ ಸಹೃದಯರಾದ ಆಂಗ್ಲೇಯರೂ ಪದೇಪದೆ ಆಂದೋಳನ ನಡೆಸುತ್ತ ಬಂದರು.

ಭಾರತ ಪ್ರಭುತ್ವವು ಆಡಳಿತಕ್ಕೆ ಸೇರಿದ ಕಾರ್ಯಗಳನ್ನು ಆರಂಭಿಸುವ ಅಧಿಕಾರವುಳ್ಳದು. ಲಂಡನ್ನಿನ ಮಂತ್ರಾಲೋಚನಾ ಸಭೆಯು ಈ ಕಾರ್ಯಗಳನ್ನು ವಿಮರ್ಶಿಸುವ ಅಧಿಕಾರವುಳ್ಳದ್ದು, ಸಾಮಾನ್ಯರ ಸಭೆಯು ಕಟ್ಟಕಡೆಯ ತೀರ್ಮಾನವನ್ನು ಕೊಡುವ ಅಧಿಕಾರವುಳ್ಳದ್ದು. ಮೇಲೆ ಹೇಳಿದ ಕಾನೂನು ಭರತಖಂಡದ ಮೇಲೆ ಈ ಬಗೆಯ ಮೂವರು ಅಧಿಕಾರಿಗಳನ್ನು ಏರ್ಪಡಿಸಿತು, ಒಬ್ಬರ ಮೇಲೆ ಒಬ್ಬರು ಅಂಕುಶ ರೂಪವಾಗಿರಲಿ. ಇದರಿಂದ ಆಡಳಿತವು ಜನರಿಗೆ ಹಿತಕರವಾದೀತೆಂಬುದೆ ಆಶಯವು. ಆದರೆ ರೂಢಿಯಲ್ಲಿ ಇದು ವಿರೋಧವಾಗಿ ಪರಿಣಮಿಸಿತು. ಭರತಖಂಡದಲ್ಲಿ ಅಧಿಕಾರಮಾಡಿ ನಿವೃತ್ತರಾದವರು ಲಂಡನ್ನಿನ ಸಭೆಗೆ ಸದಸ್ಯರಾಗುತ್ತಿದ್ದರು. ಭರತಖಂಡದ ಬಗ್ಗೆ ಇವರಿಗೆ ತಕ್ಕಷ್ಟು ತಿಳಿವಳಿಕೆ ಇರುವುದರಿಂದ ಇವರಿಂದ ಪ್ರಯೋಜನವಾದೀತೆಂದು ನಿಯಮಿಸಲ್ಪಡುತ್ತಿದ್ದರು. ಆದರೆ ಇಲ್ಲಿನ ನಿರಂಕುಶಾಡಳಿತದಲ್ಲಿ ಸ್ವೇಚ್ಛಾವಿಹಾರಿಗಳಾಗಿ ಬೆಳೆದ ಇವರು ಜನಹಿತಕ್ಕೆ ಲಕ್ಷ್ಯಕೊಡದೆ ನಡೆಯುತ್ತಿದ್ದರು.

ಬಿ. ಎಲ್. ಕಾಡಾದಿಯವರ ವೀರಶೈವ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೋತ್ಸವ

ಸೊಲ್ಲಾಪುರದ ವೀರಶೈವರಲ್ಲಿ ಗಣ್ಯರೂ ಒಳ್ಳೇ ಶ್ರೀಮಂತರೂ ವೀರಶೈವ ವಿದ್ಯಾರ್ಥಿಗಳ ಸಹಾಯಕರೂ ಆಗಿದ್ದ ಕೈ॥ ಬಂಡಪ್ಪ ನಾಗಪ್ಪ ಕಾಡಾದಿಯವರ ನಂತರ ಆವರ ಮಕ್ಕಳುಗಳಾದ ಮ॥ ನಾಗಪ್ಪ ಬಂಡಪ್ಪ ಕಾಡಾದಿ ಸಹೋದರರು ತಮ್ಮ ತಂದೆಯವರ ಸ್ಮಾರಕವಾಗಿ ಅವರ ಹೆಸರಿನ ಮೇಲೆ ವೀರಶೈವ ವಿದ್ಯಾರ್ಥಿ ನಿಲಯವನ್ನು ಕಟ್ಟಿಸುವುದಕ್ಕಾಗಿ ಸರಕಾರದವರಿಂದ ಪಡೆದುಕೊಂಡಿರುವ ನಿವೇಶನದಲ್ಲಿ ಶಂಕುಸ್ಥಾಪನೆಯನ್ನು ಕಳೆದ ತಾ॥ 7 ನೆಯ ಸೋಮವಾರ ಬೊಂಬಾಯಿ ಗವರ್ನರಾದ ಮಹನೀಯ ಸರ್ ಫ್ರೆಡರಿಕ್ ಸೈಕ್ಸ್‌ರವರಿಂದ ಮಾಡಿಸಿದರು. ಈ ಸಮಾರಂಭಕ್ಕೆ ಸ್ಥಳ ಪರಸ್ಥಳಗಳ ಸರ್ಕಾರಿಯಧಿಕಾರಿಗಳು, ವಕೀಲರುಗಳು ವರ್ತಕರುಗಳು ಮೊದಲಾದವರು ನೂರಾರು ಮಂದಿಯು ನೆರೆದಿದ್ದರು. ಆ ಕಾಲದಲ್ಲಿ ಮ॥ ನಾಗಪ್ಪ ಬಂಡಪ್ಪ ಕಾಡಾದಿಯವರು ಗೌರ್ನರವರಿಗೊಪ್ಪಿಸಿದ ವಿನಂತಿ ಪತ್ರಿಕೆಯೂ, ಅದಕ್ಕೆ ಗೌರ್ನರರ ಉತ್ತರವೂ ಈ ಕೆಳಗೆ ಕೊಡಲ್ಪಟ್ಟಿವೆ.

ಗೌರ್ನರಿಗೊಪ್ಪಿಸಲ್ಪಟ್ಟ ವಿನಂತಿ ಪತ್ರಿಕೆ

ಮಹಾಸ್ವಾಮಿ ಗೌರ್ನರ್ ಸಾಹೇಬರೆ,

ನಮ್ಮ ತಂದೆಯವರ ಸ್ಮಾರಕವಾಗಿ ಕಟ್ಟಲ್ಪಡುವ ಬಿ. ಎಲ್. ಕಾಡಾದಿ ವೀರಶೈವ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೋತ್ಸವ ಸಮಯದಲ್ಲಿ ನಾವು ಅತ್ಯಾನಂದದಿಂದ ತಮ್ಮ ಸುಸ್ವಾಗತವನ್ನು ಬಯಸುತ್ತೇವೆ. ತಮ್ಮ ತಾವು ಕೊಂದರೆಯನ್ನು, ಅನೇಕ ಕೆಲಸಗಳನ್ನು ಲಕ್ಷಿಸದೆ ನಮ್ಮ ಆಮಂತ್ರಣವನ್ನು ಅಂಗೀಕರಿಸಿ ದಯಮಾಡಿಸಿರುವುದಕ್ಕಾಗಿ ತಮ್ಮನ್ನು ನಾವು ಹೃತ್ಪೂರ್ವಕವಾಗಿ ವಂದಿಸುತ್ತೇವೆ.

ಬೊಂಬಾಯಿ ಇಲಾಖೆಯಲ್ಲಿರುವ ನಮ್ಮ ವೀರಶೈವ ಸಮಾಜವು ವಿದ್ಯೆಯಲ್ಲಿ ಹಿಂದುಳಿದಿರುವುದರ ಕಡೆ ನಮ್ಮ ಚಿತ್ತಕ್ಕೆ ಚೆನ್ನಾಗಿ ವೇದ್ಯವಾಗಿರುತ್ತದೆ. ಈ ಡಿಸ್ಟ್ರಿಕ್ಟಿನೊಳಗೆ ನಾವು ಐವತ್ತುವರ್ಷಗಳಲ್ಲಿ ಹುಟ್ಟಿಗಿದ್ದು ವ್ಯಾಪಾರದಲ್ಲಿ ಮುಂದುಗಂಡವರಾಗಿದ್ದರೂ, ಪ್ರಕೃತ ನಾಗರಿಕ ವಿದ್ಯಾರ್ಜನೆಯಲ್ಲಿ ಎಲ್ಲ ಹಿಂದುಳಿದಿರುತ್ತೇವೆ. ನಮ್ಮ ತಂದೆಯವರಾದ ಕೈಲಾಸವಾಸಿ ಬಂಡಪ್ಪ ಕಾಡಾದಿಯವರು, ಈಗಿನ ಸ್ಪರ್ಧೆಯ ಕಾಲದಲ್ಲಿ ವಿದ್ಯೆಯಿಲ್ಲದೆ ನಮ್ಮ ಸಮಾಜದವರಿಗೆ ಉಂಟಾಗಿರುವ ಅಡಚಣೆಗಳನ್ನು ಅರಿತು ಸ್ವಜನ ವಿದ್ಯಾಭಿವೃದ್ಧಿಗಾಗಿ ತಮ್ಮ ಮರಣಾವಧಿ ಬಹಳ [illegible] ನಮ್ಮ ಸಮಾಜದಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆ ಪಾಸಾದ ಚಿಕ್ಕ ಹುಡುಗರು ಉಚ್ಚ ವಿದ್ಯಾಭ್ಯಾಸಮಾಡಲು ಸೊಲ್ಲಾಪುರದ ಮನೆಯಲ್ಲಿ ಕೆಲವರಿಗೆ ಆಶ್ರಯ ಕೊಟ್ಟಿದ್ದರು.

ಮಕ್ಕಳಿದ್ದರೆಮನೆ ಚೆಂದ.

ಮಕ್ಕಳಿಲ್ಲೆಂದು | ಬಂಜೆತನದಿಂದ ಮುಕ್ತರಾಗುವಿರಿ
ಗರ್ಭಧಾರಣಾ ಸಂಜೀವಿನೀ | ಚಿಂತಿಸ ಬೇಡಿರಿ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಪ್ರಾಪ್ತಿ ಆಗುವುದು ೯ ಗುಳಿಗೆಗಳ ಕಿ. ೩ ರೂಪಾಯಿ ಟ. ಖ. ೫ ಆಣೆ

ಪತ್ತೆ—ವೈದ್ಯ ವಿ. ಎಸ್. ಕಾಪಸೆ. ಮಿರಜ M. C.

ಸೊಲ್ಲಾಪುರದಲ್ಲಿ ತಮ್ಮ ಮತಧರ್ಮಗಳಿಗೆ ಕೊರತೆಯುಂಟಾಗುತ್ತದೆಂಬ ಶಂಕೆಯಿಲ್ಲದೆ ಕಂಡ ಕಾಣುಗಳ. ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಕಳುಹಿಸಲಿಚ್ಛಿಸುವವರಿಗೆ [illegible]

[illegible]

ಗೌರ್ನರವರ ಉತ್ತರ

[illegible]

ಪತ್ರವ್ಯವಹಾರ.

[illegible] ಪತ್ರವ್ಯವಹಾರದ ಲೇಖನಗಳಿಗೆ ಸಂಪಾದಕರು ಜವಾಬ್ದಾರರಲ್ಲ. — ಸಂಪಾದಕ

ಶ್ರೀಯುತ ಎಂ. ವಿ. ಶಾಂತಪ್ಪಸೆಟ್ಟರ ಧರ್ಮಪ್ರಸಂಗವೂ ಮತ್ತು [illegible]

[illegible]

ಶಿವಧರ್ಮಮಂಡಳಿ ಜೈಪುರ

ಆದರ್ಶಪ್ರಾಯರಾದ ಸ್ವಾಮಿಗಳು.

ಅಸ್ಪೃಶ್ಯತಾನಿವಾರಣೆ ಮತ್ತು ಧಾರ್ಮಿಕಸುಧಾರಣೆ [illegible]

[illegible]

ಮಾತೃಭೂಮಿಯಾದ ಭಾರತದಲ್ಲಿ ದಿನ ದಿನಕ್ಕೆ [illegible] ಅಸ್ಪೃಶ್ಯತಾ ನಿವಾರಣೆಯು ದೇಶದ ಹಿತದೃಷ್ಟಿಯಿಂದಲೇ ಅಲ್ಲದೆ ಗೋರಕ್ಷಣಾ ದೃಷ್ಟಿಯಿಂದಲೂ ಅತಿ ಮಹತ್ವದ್ದಾಗಿದೆ.

ಮಹಾತ್ಮ ಗಾಂಧಿಯವರಂಥಹ ಜಗದ್ವಂದ್ಯರು ಅಸ್ಪೃಶ್ಯತಾ ನಿವಾರಣೆಗಾಗಿ ತಮ್ಮ ಪ್ರಾಣವನ್ನೇ ತ್ಯಜಿಸಲು ತಯಾರಾಗಿರುವರು. ಇದೇ ಭಾರತ ಮಂಡಲದಲ್ಲೆಲ್ಲಾ ಅತ್ಯಂತ ಆಚಾರವಂತರೆಂಬುದಾಗಿ ಹೇಳಿಸಿಕೊಳ್ಳುವ ಸನಾತನ ಧರ್ಮಾಭಿಮಾನಿಗಳಾದ ಪಂಡಿತ ಮದನ ಮೋಹನ ಮಾಳವೀಯರವರು ಕೂಡ ಅಸ್ಪೃಶ್ಯತಾನಿವಾರಣೆಗೆ ತಮ್ಮ ಒಪ್ಪಿಗೆಯನ್ನಿತ್ತು [illegible] ಅಸ್ಪೃಶ್ಯತಾ ನಿವಾರಣಾ ಕೆಲಸವು ಬಹು ಜೋರಿನಿಂದ ನಡೆಯುತ್ತಿರುವಲ್ಲದೆ ಉತ್ತಮ ವರ್ಣದವರಾದ ಎಲ್ಲಾ [illegible] ದೇವಾಲಯಗಳ ಬಾಗಿಲುಗಳು ತೆರೆದು ಅಸ್ಪೃಶ್ಯರ ಪ್ರವೇಶ ಮತ್ತು ದರ್ಶನಕ್ಕೆ ಅವಕಾಶವು ದೊರೆಯಿತು. [illegible]

[illegible]

ದಾವಣಗೆರೆ ೩. ೧೦-೧೧-೩೨ — ಕಾರ್ಯದರ್ಶಿ, ಪ್ರಾಣಿದಯಾ ಜ್ಞಾನ ಪ್ರಸಾರಕ ಸಂಘ

ನಾರಿನವಲೋಲ [illegible]

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವುದಿಲ್ಲ. ನಾರಿನವರು ಜರೂರತರಿಸಿಕೊಳ್ಳಿರಿ. ಕಿ. ೧| ರೂ. ೬ ಮಿ. ೩ ಆಣೆ.

ಪತ್ತಾ: ವೈದ್ಯ [illegible] ಮಿರಜ

M C

೧೯೩೨ ನೆಯ ಇಸವಿ ನವಂಬರ್ ತಾ. ೨೧ ರಿಂದ ನವಂಬರ ತಾ. ೨೭ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸ ನಾಮಸಂವತ್ಸರದ ಕಾರ್ತಿಕ ಬಹುಳ ಅಷ್ಟಮಿಯಿಂದ ಕಾರ್ತಿಕ ಬಹುಳ ಚತುರ್ದಶಿ ವರೆಗಿನ ಪಂಚಾಂಗ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಶ್ಚಿಕ ಮಾಸ
21	[1] ಸೋಮ	ಅಷ್ಟ	32 25	ಮಖ	59 7	7
22	[2] ಮಂಗಳ	ನವ	30 11	ಪುಬ್ಬ	38-10	8
23	ಬುಧ	ದಶ	26 31	ಉತ್ತ	36 1	9
24	ಗುರು	ಏಕಾ	22 4	ಹಸ್ತ	33 18	10
25	[3] ಶುಕ್ರ	ದ್ವಾದ	16 55	ಚಿತ್ತ	35 14	11
26	ಶನಿ	ತ್ರಯೋ	11-26	ಸ್ವಾತಿ	26 52	12
27	ಭಾನು	ಚತು	5-34-54-4	ವಿಶಾ	21 10	13

(1) ಕಾರ್ತಿಕ ಸೋಮವಾರ (2) ಮಳೆನಕ್ಷತ್ರ ಅನೂರಾಧ ३ ನೆಯ ಪಾದ (3) ಮಳೆನಕ್ಷತ್ರ ಅನೂರಾಧ ४ ನೆಯಪಾದ.

ಮೈಸೂರು ಪ್ರೈ. ವಿದ್ಯಾವಿಸ್ತರಣಸಭೆಯವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲಪಟ್ಟಿತು.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟವಾಗುವ ಪತ್ರಿಕೆ

[illegible]

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೬-೦] [ಬಿಡಿಪ್ರತಿಗೆ ೪-೦-೦]

ಸಂಪುಟ ೪೫] ಮೈಸೂರು ಸ್ಟಾರ್ ಸನ್ ೧೯೩೦ ನೆಯ ಇಸವಿ ನವಂಬರ್ ತಾರೀಖು ೨೪ ನೆಯ ಸೋಮವಾರ [ಸಂಚಿಕೆ ೪೮

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death

The best, safest, cheapest, most profitable and most convenient place of Insurance is the Public Branch of the Mysore State Life Insurance

Policies are issued from Rs 100 to Rs 10,000 and copies of rules and forms of application can be had from all Government Treasuries Economic Superintendents, Helpers and the Insurance Office, Public Office Buildings Bangalore

(Sd) S SHA MANNA,
Secretary, Insurance Committee

[50—21]

ಯುನಿವರ್ ಅಂಡ್ ಸನ್

ಫೋಟೊ, ಲೈನ್, ಬ್ಲಾಕುಗಳು ಹಿತ್ತಾಳೆ, ಸೀಸದ ಬ್ಲಾಕುಗಳು ಅರಗಿನಸೀಲು, ಜವಾನರ ಬಿಲ್ಲೆ ಮತ್ತು ರಬ್ಬರ್ ಮೊಹರುಗಳೂ ತಯಾರಿಸಲ್ಪಡುವುವು

ಚಿಕ್ಕಪೇಟೆ ಬೆಂಗಳೂರು ಸಿಟಿ

[50—3]

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	[illegible]
[illegible]	೦—೧೨—೦	೧—೨—೦
[illegible]	೦—೮—೦	೦—೧೪—೦
[illegible]	೦—೪—೦	೦—೯—೦
[illegible]	೦—೫—೦	೦—೧೦—೦
[illegible]	೦—೪—೦	೦—೯—೦
ನೃಪಸಂಚಾರ	೦—೪—೦	೦—೯—೦
[illegible]	೦—೧—೦	೦—೬—೦
[illegible]	೦—೪—೦	೦—೧೪—೦
[illegible]	೦—೮—೦	೦—೧೪—೦
[illegible]	೧—೦—೦	೧—೬—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಆದೇನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಸ್ಸಿಗೆ ಕ್ಷೀಣರಾಗ ಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕದ [ಸ್ಟರ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳಿರಿ

[illegible]

ಸ್ತ್ರೀರೋಗ ನಿವಾರಣೀ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

[50—48]

ವೈದ್ಯ ವ್ಹಿ. ಎಸ್. ಕಾಪಸೆ, [illegible] ಎಂ. ಎಸ್. ಎಂ

ಡಾಕ್ಟರ್ ಜೀ ಬೀ. ಯವರ

ಸುಗಂಧ ನಶ್ಯದ ಪುಡಿ.

[illegible]

(Registered Trade Mark)

[illegible]

ನಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್.

[50 [illegible] ಚಾ ೫೧೦. ಮೈಸೂರು

ಮೈಸೂರು ಸ್ಟಾರ್

೧೯೩೨ ನೇ ಇಸವಿ ನವೆಂಬರ್ ೨೮, ೨೮ ನೇ ಸೋಮವಾರ

ALLAHABAD CONFERENCE AND AFTER

We had referred to in our last issue to the agreement reached at by the Unity Conference and its acceptance by the leaders of the Hindus, Muslims and the Sikhs It is gratifying also to note that Moulana Shaukat Ali and Dr Ansari representing two schools of thought among the Muslims have given their hearty approval to the settlement It is true that the reported agreement has yet to be endorsed in a plenary session of both the Hindus, Muslims and the Sikhs It is most unwise and unpatriotic that efforts should be made at this critical juncture in the history of India to repudiate such an agreement without giving a chance of its acceptance at the hands of the proposed All parties Conference One such wrong step is that of the meeting convened by Sir Mahomed Yakub and others of his out-look *Hasty resolutions have been passed repudiating the agreement as being injurious to the* Muslim interests If the press reports are correct we gather that others of different thinking were given no chance whatever to place their views in support of the Allahabad agreement Thus one need not attach much importance to those out bursts of communal rancour and attempts at mischievous propaganda We also smell that some unseen hand is at the back of this move to widen the gulf *that had been so wisely bridged at Allahabad* It is regrettable also that the R T C delegates are reticent over the agreement and have not taken this opportunity to support the agreement and get it endorsed by the Cabinet It requires all the resources of statesman-ship when the constitution making is on the anvil to get the conclusions of the Unity Conference embodied in the constitution We earnestly hope that the R T C delegates will rise to the occasion and save the country from the throes of communal upheaval

ಅಲಹಾಬಾದು ತೀರ್ಮಾನಾನಂತರ

ಅಲಹಾಬಾದಿನಲ್ಲಿ ನೆರೆದಿದ್ದ ಹಿಂದು ಮಹಮ್ಮದೀಯ ಸಿಕ್ಕರುಗಳ ಐಕ್ಯ ಸಮ್ಮೇಳನದಲ್ಲಾದ ತೀರ್ಮಾನವು ನಮ್ಮನ್ನು ತೃಪ್ತಿ ಆಹ್ಲಾದಕರವೂ ಆಗಿರುವುದರಿಂದ ಈ ಸಮ್ಮೇಳನವನ್ನು ಸೇರಿಸಲು ಪ್ರಯತ್ನಪಟ್ಟ ಮೌಲಾನಾ ಶೌಕತಾಲಿಯವರಿಗೂ, ಪಂಡಿತ ಮದನಮೋಹನ ಮಾಳವೀಯರವರಿಗೂ ಭಿನ್ನಮತದವರ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಿ ಸರ್ವಸಮ್ಮತವಾದ ತೀರ್ಮಾನವನ್ನು ಮಾಡಲು ತಮ್ಮ ದೀರ್ಘ ರಾಜಕೀಯಾನುಭವವನ್ನೂ, ಚಾತುರ್ಯವನ್ನೂ ವ್ಯಕ್ತಪಡಿಸಿದ ಪ || ವಿಜಯ ರಾಘವಾಚಾರ್ಯ ಪ್ರಭೃತಿಗಳಿಗೂ ಎಲ್ಲ ವರ್ಗಗಳ ನಾಯಕರುಗಳಿಂದಲೂ, ಸಂಘಗಳವರಿಂದಲೂ, ಭಾರತ ಹಿತಚಿಂತಕರ ಪತ್ರಿಕೋದ್ಯಮಿಗಳಿಂದಲೂ ಧನ್ಯವಾದಗಳು ಅರ್ಪಿಸಲ್ಪಟ್ಟವು ಸಮ್ಮೇಳನವು ನಡೆಯುತ್ತಿರುವ ವೇಳೆಯಲ್ಲಿ ಅನಿವಾರ್ಯ ಕಾರ್ಯ ಗೌರವದಿಂದ ಸೀಮೆಗೆ ಪ್ರಯಾಣಮಾಡಿದ ಶೌಕತಾಲಿಯವರು ತಾವು ಸಾಧಿಸಪಟ್ಟು ಸ್ಥಾಪಿಸಿದ ಐಕ್ಯ ಒಪ್ಪಂದವು ಒಟ್ಟುವುದವಾಗಿ ನಡದ ಅನುಕೂಲವಾದ ತೀರ್ಮಾನವಾಗಿರುವುದು ತಮಗೂ ತಮ್ಮ ಪಕ್ಷಕ್ಕೆ ಸೇರಿದ ಎಲ್ಲ ಸಂಖ್ಯಾಕ ಮಹಮ್ಮದೀಯರಿಗೂ ಮಹಾ ಸಂತೋಷ ಪ್ರದವಾಗಿರುವುದೆಂದೂ, ಭಾರತೀಯರ ಸ್ವರಾಜ್ಯಸಾಧನ ಪ್ರಯತ್ನಕ್ಕೆ ಅನುಕೂಲವಾಗಿರುವುದೆಂದೂ ತಿಳಿಸಿರುವರಲ್ಲದೆ, ಡಾಕ್ಟರ್ ಅನ್ಸಾರಿಯವರೂ ಆ ತೀರ್ಮಾನದಿಂದ ತಮಗುಂಟಾಗಿರುವ ಸಂತೋಷವನ್ನು ಸೂಚಿಸಿರುವರು ಈ ಒಪ್ಪಂದವು ಈ ತೀರ್ಮಾನವು ಭಾರತೀಯರೆಲ್ಲರಿಂದಲೂ ಅನುಮೋದಿಸಲ್ಪಡುವುದೆಂದು ಆಶಿಸುತ್ತಾರೆ ಆದರೆ ಸರ್ ಮಹಮ್ಮದ್ ಯಾಕೂಬ್ ರವರೂ ಅವರ ಅಭಿಪ್ರಾಯಾನುಸಾರ ಕೆಲವು ಜನರೊಂದು ಸಭೆಯನ್ನು ನಡೆಸಿ ಅಲಹಾಬಾದು ತೀರ್ಮಾನವನ್ನು ಸಮರ್ಥಿಸಿ ಮಾತನಾಡುವವರಿಗೆ ಅವಕಾಶವನ್ನು ಕೊಡದೆ ಅದನ್ನು ಖಂಡಿಸಿ ಮುಸಲ್ಮಾನರ ಹಿತ ಸಮ್ಮತಿಸು ವೃದ್ಧಿಯಲ್ಲವೆಂದು ನಿರ್ಧರಿಸಿದಂತೆ ಆ ತೀರ್ಮಾನವು ಬರುವ ಡಿಸೆಂಬರು ತಿಂಗಳಲ್ಲಿ ನಡೆಯುವ ಸರ್ವಪಕ್ಷ ಸಮ್ಮೇಳನದಲ್ಲಿ ಅನುಮೋದಿತವಾಗದಂತೆ ಮಾಡಲು ಪ್ರಯತ್ನಪಡುತ್ತಿರುವುದು ಬಹಳ ಶೋಚನೀಯವಾಗಿರುತ್ತದೆ ಇಂತಹ ವಿಘ್ನಸಂತೋಷಿಗಳ ಮತವೈಷಮ್ಯಸಾಧನ ಪ್ರಯತ್ನಕ್ಕೆ ಪ್ರತಿಕೂಲವಾದ ಗಮನಕೊಡುವುದಿಲ್ಲ ಈ ದುಷ್ಪ್ರಯತ್ನವನ್ನು ಕೆಲವು ನಾಯಕರುಗಳು ಪ್ರೋತ್ಸಾಹಿಸಿ ಹಿಂದು ಮಹಮ್ಮದೀಯರ ಐಕ್ಯಪ್ರಯತ್ನವು ನಿರರ್ಥಕವಾಗಿ ಹೋಗುವಂತೆ ಪ್ರಚುರಿಸುವಂತೆ ಮಾಡುತ್ತಿರುವುದಾಗಿ ತಿಳಿಯಬರುತ್ತದೆ ರೌಂಡುಟೇಬಲು ಸಭೆಗೆ ಹೋಗಿರತಕ್ಕ ಪ್ರತಿನಿಧಿಗಳು ಅಲಹಾಬಾದು ತೀರ್ಮಾನದ ವಿಚಾರದಲ್ಲಿ ಏನೊಂದನ್ನೂ ಹೇಳದೆ ಸುಮ್ಮನಿರುವುದು ಇದನ್ನು ಬ್ರಿಟಿಷ್ ಮಂತ್ರಿಮಂಡಲಕ್ಕೆ ತಿಳಿಸಿ ಒಪ್ಪಿಸುವಂತೆ ಮಾಡಲು ಯಾವ ಪ್ರಯತ್ನವನ್ನೂ ನಡಸದೆ ಮೌನದಲ್ಲಿರುವುದು ಸಹ ಖೇದಕರವಾಗಿದೆ ರಾಜ್ಯಾಂಗರಚನೆಯಲ್ಲಿ ಎಲ್ಲ ಪಕ್ಷಗಳು ಸಮ್ಮತಿಸಿದ ಸಮ್ಮೇಳನದೊಳಗಾದ ತೀರ್ಮಾನಾಂಶಗಳು ಗರ್ಭಿತವಾಗುವಂತೆ ರಾಜ್ಯಾಂಗರಚನೆಯವೇಳೆಯಲ್ಲಿ ಮಂತ್ರಿಮಂಡಲದವರನ್ನೊಂದಿಸುವಲು ರಾಜನೀತಿ ಪ್ರೌಢಿಮೆಗೆ ತಕ್ಕ ಉಪಾಯಗಳನ್ನೆಲ್ಲ ಉಪಯೋಗಿಸಬೇಕಾಗಿರುವುದು ಆದುದರಿಂದ ರೌಂಡುಟೇಬಲು ಸಭೆಯ ಭಾರತ ಪ್ರತಿನಿಧಿಗಳು ಎಚ್ಚೆತ್ತುಕೊಂಡು ಭಾರತದೇಶವನ್ನು ಮತವೈಷಮ್ಯ ದಿಂದುಂಟಾಗಿರುವ ಅನೈಕ್ಯ ಸಂಕಟದಿಂದ ಪಾರುಮಾಡಲು ಸಹಾಯಿಸುವರೆಂದು ನಿರೀಕ್ಷಿಸುತ್ತೇವೆ ಅಲಹಾಬಾದು ತೀರ್ಮಾನಾನುಮೋದನಕ್ಕಾಗಿ ಸರ್ವಪಕ್ಷ ಸಮ್ಮೇಳನವು ಬರುವ ಡಿಸೆಂಬರು ತಾ|| ೩ರಲ್ಲಿ ನಡೆಯಬೇಕೆಂದಿದ್ದುದು, ಇತ್ತ ಕೆಲವು ಕಾರಣಕ್ಕಾಗಿ ಡಿಸೆಂಬರು ತಾ|| ೧೪ ರಲ್ಲಿ ನಡೆಯಲು ಗೊತ್ತಾಗಿರುವುದು

ಜಗದ್ಗುರು ಶಂಕರಾಚಾರ್ಯರೂ ಅಸ್ಪೃಶ್ಯತೆಯೂ

ಕುಂಭಕೋಣದ ಶ್ರೀ ಜಗದ್ಗುರು ಶಂಕರಾಚಾರ್ಯರು ಅಸ್ಪೃಶ್ಯತೆಯು ಇದ್ದೇ ತೀರಬೇಕೆಂಬ ಬಗೆಗೆ ಶಾಸ್ತ್ರಾಧಾರವನ್ನು ಉದಹರಿಸಿ ಒಂದು ದೀರ್ಘವಾದ ಲೇಖನವನ್ನು ಮಹಾತ್ಮರಿಗೆ ಬರೆದಿರುವುದಾಗಿ ತಿಳಿಯಬರುತ್ತದೆ

ಬಿಳೀ ಆನೆ

ತಿರುವಾಂಕೂರು ಸಂಸ್ಥಾನದ ಕಾಡುಗಳೊಂದರಲ್ಲಿ ಬಿಳೀ ಆನೆಯು ಕಾಣಿಸಿಕೊಂಡಿತೆಂದು ಅಟವಿ ಶಾಖೆಯವರು ಪ್ರಭುತ್ವದವರಿಗೆ ತಿಳಿಸಿದುದರ ಮೇಲೆ ಅದನ್ನು ಕೊಲ್ಲದೆ ಸಾಹಸಪಟ್ಟು ಅದನ್ನು ಹಿಡಿಯಬೇಕೆಂದು ಅಪ್ಪಣೆಮಾಡಿರುವುದಾಗಿ ಪ್ರಕಟವಾಗಿದೆ

ಸಂಸ್ಥಾನಾಧೀಶರಿಗೆ ಬ್ರಿಟಿಷರ ಸಂಬಂಧವು ಮುಖ್ಯ

ಕಳೆದ ತಾ|| ೧೪ರಲ್ಲಿ ಲಂಡನ್ನಿನ ಪಾರ್ಲಿಮೆಂಟು ಭವನದಲ್ಲಿ ನೆರೆದಿದ್ದ ಕನ್ಸರ್ವೆಟಿವ್ ಇಂಡ್ಯಾ ಕಮಿಟಿಯವರ ಸಭೆಯಲ್ಲಿ ನವನಗರದ ಮಹಾರಾಜರು ಫೆಡರೇಷನ್ ಕುರಿತು ಭಾಷಣ ಮಾಡುವಾಗ್ಗೆ "ಭಾರತದೇಶೀಯ ಸಂಸ್ಥಾನಾಧಿಪತಿಗಳಿಗೆ ಸಮಯೋಚಿತವಾದ ರಕ್ಷಣೆಗಳು ಶಾಸನದಲ್ಲಿ ಸೇರಿಸಲ್ಪಟ್ಟರೆ ಮಾತ್ರ ಅವರುಗಳು ಫೆಡರೇಷನ್ನಿಗೆ ಅಂಗೀಕರಿಸುವರು" ಎಂದು ಹೇಳಿದರು

ರೈಲ್ವೆಯನಾಹುತ

ಗ್ರೇಟ್ ಬ್ರಿಟನ್ನಿಗೆ ಸೇರಿದ ವಾಟ್ ಫೋರ್ಡ್ ಎಂಬಲ್ಲಿ ಕೂಲಿ ಆಳುಗಳು ರೈಲು ಮಾರ್ಗವನ್ನು ಸರಿಪಡಿಸುತ್ತಿರುವಾಗ್ಗೆ ಇಂಜನ್ನಿನ ಹೊಗೆಯು ಬೈಲಿನಲ್ಲಿ ಆವರಿಸಿಕೊಂಡಿದ್ದರಿಂದ ಇನ್ನೊಂದು ಬಂಡಿಯು ರಭಸವಾಗಿ ಬರುತಿದ್ದುದು ಕೆಲಸಗಾರರಿಗೆ ಕಾಣಿಸದಿದ್ದುದಾಗಿ ಅವರುಗಳಲ್ಲಿ ಕೆಲರು ಬಂಡಿಗೆ ಸಿಕ್ಕಿ ೬ ಮಂದಿ ತುಂಡುತುಂಡಾಗಿ ಸತ್ತರು ಇತರರು ಹೋದರು ಉಳಿದವರು ಪೂರಾ ಅಪಾಯವನ್ನು ಹೊಂದಿದರು

ಅತಿಥಿ ಸಭಿಕರಿಗೆ ಔತಣ

ರೌಂಡುಟೇಬಲು ಸಭಿಕರುಗಳಿಗೆ ಲಂಕಾಸ್ಟರು ಭವನದಲ್ಲಿ ಪ್ರಭುತ್ವದವರಿಂದ ಔತಣವು ಮಾಡಿಸಲ್ಪಟ್ಟಿತು ಈ ಔತಣಕ್ಕೆ ಮಂತ್ರಿಮಂಡಲದವರು ರಾಜನೀತಿ ವಿಚಾರದರು ನಾನಾ ಸಂಘಗಳ ನಾಯಕರು, ವಿದ್ಯಾ ಪಂಡಿತರು, ಮತ ಗುರುಗಳು ಮೊದಲಾದವರು ೧೦೦೦ ಮಂದಿ ವರೆಗೆ ಆಹ್ವಾನಿಸಲ್ಪಟ್ಟಿದ್ದರು ಈ ಅತಿಥಿಗಳನ್ನೆಲ್ಲ ಮುಖ್ಯ ಮಂತ್ರಿ ಮೆಕ್ಡೊನಾಲ್ಡರವರು ಸ್ವಯಮಾಗಿ ಸನ್ಮಾನಿಸಿ ಮಾತನಾಡಿಸಿದರು

ಅಸ್ಪೃಶ್ಯರ ದೇವಾಲಯ ಪ್ರವೇಶ

ಚಂಡಾಲರೆಂದು ಕರೆಯಲ್ಪಡುತ್ತಿರುವ ಜಾತಿಯವರು ಅಸ್ಪೃಶ್ಯರೆಂಬುದು ಅಶಾಸ್ತ್ರೀಯವೆಂದೂ, ಅವರು ದೇವಾಲಯಗಳಿಗೆ ಒಳಹೋಗುವುದು ಶಾಸ್ತ್ರಸಮ್ಮತವೆಂದೂ ಬಂಕಿಪಲ್ಲಿ ಮಲ್ಲಯ ಶಾಸ್ತ್ರಿಗಳು ಪ್ರಕಟಿಸಿರುವರು ಈ ವಿಷಯವನ್ನು ಸಿದ್ಧಾಂತಪಡಿಸಲು ಪಂಡಿತರ ಸಭೆಯನ್ನು ಸೇರಿಸಬೇಕೆಂದು ಅವರೂ ಮತ್ತೆ ಬೇರೆಯವರೂ ಕೋರುತ್ತಿದ್ದಾರೆ ಈ ಸಭೆಯನ್ನು ಸೇರಿಸಿ ಚರ್ಚಿಸಲು ಬೇಕಾದ ಅನುಕೂಲತೆಗಳನ್ನೆಲ್ಲ ಒದಗಿಸಿಕೊಡುವೆನೆಂದು ಹೇಳಿ ಶಾಸ್ತ್ರಿಗಳು ತಿಳಿಸಬೇಕೆಂದು ಸ್ವಧರ್ಮ ಸ್ವರಾಜ್ಯ ಸಭೆಯ ಸೆಕ್ರಿಟರಿ ಪಾಂಡೇಯ ಕೃಷ್ಣರವರು ಬರೆದಿರುತ್ತಾರೆ

ಮಹಾತ್ಮರ ಆಹಾರ

"ನಾನು ಈಗ ಕೆಂಡವನ್ನು ಬೆಳೆಸತಕ್ಕ ಪದಾರ್ಥಗಳನ್ನೂ ಪುಷ್ಟಿಯನ್ನುಂಟುಮಾಡತಕ್ಕ ಪದಾರ್ಥ (ಟಾನಿಕ್ಸು) ಗಳನ್ನೂ ಸೇವಿಸುವುದಿಲ್ಲ ಮೇಕೆ ಹಾಲು, ಹೊಟ್ಟುಸಮೇತವಾದ ಗೋಧಿರೊಟ್ಟಿ, ನೀರಿನಲ್ಲಿ ನೆನೆ ಹಾಕಿದ ಖರ್ಜೂರ, ಬೇಯಿಸಿದ ಟೊಮಾಟೊ, ಕಿತ್ತಲೆಹಣ್ಣು ಇವುಗಳನ್ನು ಮಾತ್ರ ಸೇವಿಸುತ್ತಿದ್ದೇನೆ ರೊಟ್ಟಿಯಿಂದಲೂ ಹಾಲಿನಿಂದಲೂ ಕೊಂಚ ಮಾಂಸವರ್ಗದ ಪದಾರ್ಥವು ನನಗೆ ಲಭಿಸುತ್ತಿದೆ" ಎಂದು ಮಹಾತ್ಮರು ಒಬ್ಬ ಸ್ನೇಹಿತರಿಗೆ ಬರೆದಿರುತ್ತಾರೆ

ತೆಂಗಲೆ ವಡಗಲೆಯವರ ವಿವಾದ

ಕಾಂಚೀಪುರದ ವರದರಾಜಸ್ವಾಮಿ ದೇವಸ್ಥಾನದಲ್ಲಿ ಗರುಡ ವಾಹನೋತ್ಸವ ಕಾಲದಲ್ಲಿ ವಿದ್ಯಾಗಲಿ ಶ್ಲೋಕವು (ತೆಂಗಲೆಯವರದು) ಹೇಳಲ್ಪಡದೆ ಬದಲಾಗಿ ಬೇರೆ ಪ್ರಬಂಧವು ಆದರೆ ಶ್ರೀಶೈಲ ದಯಾಪಾತ್ರಂ ಎಂಬ ಶ್ಲೋಕ (ತೆಂಗಲೆಯವರದು) ಹಾಡುವರೆಂದು ಕೆಲ ಕಾಲದಲ್ಲಿ ಹಿಂದೆ ತೀರ್ಮಾನವಾದ ಮೇಲೆ ವಡಗಲೆಯವರು ಅಸಮಾಧಾನ ಹೊಂದಿ ತೆಂಗಲೆ ಶ್ರೀನಿವಾಸಾಚಾರ್ಯರೆಂಬುವರು ಆಕ್ಷೇಪಣೆ ಮಾಡಿರುವುದರ ಮೇಲೆ ವಡಗಲೆಯವರಿಗೆ ಆಕ್ಷೇಪಣೆಯಿಲ್ಲದೆ ಪೊಲೀಸಿನವರು ತೆಂಗಲೆಯವರಿಗೆ ಆಜ್ಞಾಪಿಸಿ ಯಾವ ಗಲಭೆಯೂ ಆಗದಂತೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕೆಂದು ಮೆಜಿಸ್ಟ್ರೇಟರು ಅಪ್ಪಣೆ ಮಾಡಿರುತ್ತಾರೆ

ಅಸ್ಪೃಶ್ಯರಿಗೆ ಕಾಫಿ ಹೋಟಲು

ತುತ್ತುಕುಡಿ ಮ್ಯುನಿಸಿಪಾಲಿಟಿಗೆ ಸೇರಿದ ಯಾವ ಕಾಫಿ ಹೋಟೆಲಿನಲ್ಲಾಗಲಿ ಕ್ಷೌರದಂಗಡಿಗಳಲ್ಲಾಗಲಿ ಅಸ್ಪೃಶ್ಯರಿಗೆ ಪ್ರತ್ಯೇಕವಾಗಿ ಪ್ರತ್ಯೇಕ ಏರ್ಪಾಟನ್ನು ಮಾಡಿದಲ್ಲಿ ಆ ಕಾಫಿ ಹೋಟೆಲುಗಳಿಗೂ ಕ್ಷೌರದಂಗಡಿಗಳಿಗೂ ಮ್ಯುನಿಸಿಪಾಲಿಟಿಯವರು ಲೈಸೆನ್ಸ್ ಕೊಡಲಾಗದೆಂದು ಪ ಮ್ಯುನಿಸಿಪಲ್ ಕೌನ್ಸಿಲಿನಲ್ಲಿ ನಿಮ್ನ ಜಾತಿಯವರ ಪ್ರತಿನಿಧಿಯಾಗಿರ ಶ್ರೀ ಎಲ್ ಪೊರನ್ನೊಡೆಯವರು ಒಂದು ತೀರ್ಮಾನವನ್ನು ಪ್ರತಿಪಾದಿಸಬೇಕೆಂದು ಕೋರಿದುದರ ಮೇಲೆ ಅವರ ಪರವಾಗಿ ಮತ್ತೊಬ್ಬ ಕೌನ್ಸಿಲರು ಅದನ್ನು ಪ್ರತಿಪಾದಿಸಿದರು ಈ ಭೇದವು ಮ್ಯುನಿಸಿಪಾಲಿಟಿಗೆ ಸೇರಿದ ಯಾವ ಹೋಟಲಿನಲ್ಲೂ ನಡೆಯುತ್ತಿಲ್ಲವೆಂದು ಒಬ್ಬ ಮೆಂಬರು ಹೇಳಿದ ಮೇಲೆ ಆ ತೀರ್ಮಾನವು ಅನುಮೋದಿತವಾಯಿತು

ಮಹಾತ್ಮ ಗಾಂಧಿಯವರ ಜಾತಕ ಫಲ

ಶುಕ್ಲ ಸಂವತ್ಸರದ ಭಾದ್ರಪದ ಬಹುಳ ದ್ವಾದಶಿ ಶನಿವಾರ ಸೂರ್ಯೋದಯಾದಿ ಘಟಿಕಾ ೫೬–೦ ಗೆ ಸಲ್ಲುವ ಮಘಾ ನಕ್ಷತ್ರ ೪ ನೆಯ ಪಾದ ಸಿಂಹ ಲಗ್ನದಲ್ಲಿ ಮಹಾತ್ಮರ ಜನನ ಕಾಲವೆಂದು ನಿರ್ಧರಿಸಿ ಶೀರಾಪುರದ ಭಾರತಿ ತೀರ್ಥೋಪಾಧ್ಯಾಯ ನಡಲಿ ಸೀತಾರಾಮಯ್ಯನವರು ಒನಸ ಕುಂಡಲಿಯನ್ನು ಹಾಕಿ ತಾತ್ಕಾಲಿಕ ಗ್ರಹಚಾರವನ್ನು ಗುಣಿಸಿ ಫಲವನ್ನು ಪ್ರಕಟಿಸಿರುವುದರಲ್ಲಿ, ೧೯೩೨ ನೆಯ ಡಿಸಂಬರು ತಾ|| ೧೪ ರ ಮೇಲೆ ಮಹಾತ್ಮರ ಆರೋಗ್ಯ ವೃದ್ಧಿಯಾಗಿ ಸಂಕಲ್ಪವು ಸಿದ್ಧಿಸುವುದು, ೧೯೩೩ ನೆಯ ಜನವರಿ ತಿಂಗಳು ಕಳೆದ ಮೇಲೆ ರಾಜಕೀಯ ವಿಚಾರದಲ್ಲಿ ಜಯವಾಗಲು ತಕ್ಕ ಏರ್ಪಾಟು ನಡೆಯುವುದು ಎಂದು ತಿಳಿಸಿರುತ್ತಾರೆ ಈ ಭವಿಷ್ಯದ ಸಿದ್ಧಾಂತವು ಮುಂದೆ ವ್ಯಕ್ತವಾಗಬೇಕಾಗಿದೆ

ರೌಂಡುಟೇಬಲು ಸಭೆ

ರೌಂಡುಟೇಬಲು ಸಭೆಯು ಕಳೆದ ತಾ|| ೨೩ ರಲ್ಲಿ ಸಮಾಪ್ತವಾಗಿದ್ದು ರಾಷ್ಟ್ರಗಳಿಗೂ ಕೇಂದ್ರಸ್ಥಾನಕ್ಕೂ ಇರಬೇಕಾದ ಪರಸ್ಪರ ಸಂಬಂಧದ ವಿಚಾರವಾಗಿ ದೀರ್ಘ ಚರ್ಚೆಯು ನಡೆದು ಭಿನ್ನಾಭಿಪ್ರಾಯಗಳು ಉಂಟಾದ ದರ ಮೇಲೆ ಈ ವಿಚಾರವನ್ನು ಚೆನ್ನಾಗಿ ಪರಿಷ್ಕರಿಸಿ ತಮ್ಮ ಅಭಿಪ್ರಾಯದೊಡನೆ ವರದಿಕಳುಹಿಸಲು ಸಮರ್ಥಿಸುವುದಕ್ಕಾಗಿ ಲಾರ್ಡ್ ಸಾಂಕೀಯರ ಅಧ್ಯಕ್ಷತೆಯಲ್ಲಿ ಒಂದುಉಪಸಂಘವೇರ್ಪಡಿಸಲ್ಪಟ್ಟು ಸಪ್ರೂ, ಜಯಕರ್, ಪಾತ್ರೊ, ಹೈದರಿ, ಮನುಬಾಯಿ ಮೆಹತ ಮತ್ತು ಬಟ್ಲರ್ ಇವರುಗಳು ಮೆಂಬರುಗಳಾಗಿ ನಿಯಮಿಸಲ್ಪಟ್ಟಿರುವರು ಇವರು ತಮ್ಮ ವರದಿಯನ್ನು ನಾಳೆಯ ದಿವಸ ಸಮರ್ಪಿಸಿದ ಮೇಲೆ ರೌಂಡುಟೇಬಲು ಸಭೆಗೂಡುವುದು ಸಂಸ್ಥಾನಾಧಿಪತಿಗಳಿಗೆ ಸಂಬಂಧಪಟ್ಟ ಮತ್ತು ಬೇರೆ ಕೆಲವು ವಿಚಾರಗಳಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯಗಳನ್ನು ಪರ್ಯಾಲೋಚಿಸಿ ವರದಿ ಮಾಡಲು ಬೇರೆ ಕೆಲ ಉಪ ಸಭೆಗಳೇರ್ಪಟ್ಟಿರುವುವು

ಶಾರದಾ ಶಾಸನೋಲ್ಲಂಘನಕ್ಕಾಗಿ ಶಿಕ್ಷೆ

ಶಾರದಾ ಶಾಸನ ನಿರ್ಬಂಧಕ್ಕೆ ಸಿಕ್ಕರಬಾರದೆಂದು ೧೭ ವರ್ಷದ ಮಗನಿಗೆ ಟಾನಾ ಎಂಬುವನ ವಾಸಸ್ಥಳದಿಂದ ಪೋರ್ಚುಗೀಸು ರಾಜ್ಯಕ್ಕೆ ಸೇರಿದ ಸಿಲ್ವಾಸ ಎಂಬ ಗ್ರಾಮಕ್ಕೆ ಹೋಗಿ ಮದುವೆ ಮಾಡಿಕೊಂಡು ಬಂದನು ಇದಕ್ಕಾಗಿ ತಂದೆ ಮತ್ತು ಮಗನ ಮೇಲೆ ಟಾನಾ ಡಿಸ್ಟ್ರಿಕ್ಟು ಮೆಜಿಸ್ಟ್ರೇಟರಲ್ಲಿ ವಿವಾದವು ನಡೆದು, ಪೋರ್ಚುಗೀಸು ರಾಜ್ಯದಲ್ಲಿ ವಿವಾಹ ನಡೆದಿದ್ದರೂ ಅಪರಾಧಿಗಳು ಬ್ರಿಟಿಷ್ ಪ್ರಜೆಗಳಾದುದರಿಂದ ತಪ್ಪಿತಸ್ಥರೆಂದು ನಿರ್ಧರಿಸಲ್ಪಟ್ಟು ತಲಾ ೨೦೦ ರೂಪಾಯಿಗಳ ದಂಡವಿಧಿಸಲ್ಪಟ್ಟರು ಇದರ ಮೇಲೆ ಅಪರಾಧಿಗಳು ಟಾನಾ ಸೆಷನ್ಸು ಜಡ್ಜಿಯವರಲ್ಲಿ ಅಪೀಲನ್ನು ಮಾಡಿಕೊಂಡಿರಲಾಗಿ ಅಪರಾಧಿಗಳು ದೋಷಿಗಳಾಗಿರುತ್ತಾರೆಂದು ಆ ಜಡ್ಜಿಯು ಅಭಿಪ್ರಾಯಪಟ್ಟು ತಂದೆಯ ದಂಡವನ್ನು ೫೦ ರೂ ಗೂ ಮಗನ ದಂಡವನ್ನು ೨೫ ರೂ ಗೂ ಇಳಿಸಿದರು, ರಾಮೇಶ್ವರಕ್ಕೆ ಹೋದರೂ ಶನಿಕಾಟ ತಪ್ಪದು!

ಪರ್ವತವು ಯಾವಾಗ ಕದಲುವುದು?

ಕಾರ್ತಿಕ ಬಹುಳ ೩೦ ಅಮಾವಾಸ್ಯೆ ಭಾನುವಾರ ದೊಡ್ಡ ಬಿರುಗಾಳಿ ಮಳೆ ಬಂದು ಪರ್ವತಗಳು ಕದಲುವುವೆಂದೂ, ಭೂಮಿಯೆಲ್ಲ ಸಮುದ್ರಮಯವಾಗುವುದೆಂದೂ, ಭೂಕಂಪಗಳಾಗುವುವೆಂದೂ, ಅನೇಕ ಉಪದ್ರವಗಳುಂಟಾಗುವುವೆಂದೂ, ಭೂಮಿಯಲ್ಲಿ ಅಡಗಿಕೊಂಡು ಪ್ರಾಣಗಳನ್ನು ಉಳಿಸಿಕೊಳ್ಳಬೇಕೆಂದೂ ಕೆಲ ಸಿದ್ಧಾಂತಿಗಳು ಬರೆದಿರುವುದಾಗಿ ತಿಳಿಯಬರುತ್ತದೆ

[illegible] ಭಯಗ್ರಸ್ತರಾಗಿದ [illegible] 10-[illegible] [illegible] ತಪ್ಪಿಸಲು [illegible] ಹುಟ್ಟಿಸುವ [illegible] ಪ್ರತಿನಿಧಿಗಳ [illegible] ತಮ್ಮ [illegible] ವಿಚಾರವಾಗಿ [illegible] ಪತ್ರಿಕೆಗಳಲ್ಲಿ [illegible] ಸಾಧ್ಯವಿಲ್ಲವೆಂದು ಬಂಗಾಳದ ಪ್ರಜಾಪ್ರತಿನಿಧಿ [illegible] ಸ್ಥಾನಗಳಲ್ಲಿ ರಾಜ್ಯಭಾರವೆಂಗೆ [illegible] ವುದೆಂದು ಬರೆಯುವ ಸ[illegible] ಎಂದು ಬಂಗಾಳದ ಪ್ರೊ ಕೆ ಎಸ್ [illegible]ಂಗ್ ರಾಕೂರ್ ಎಂಬವರು ಪ್ರಕಟಿಸಿದ್ದರು

ಅಸ್ಪೃಶ್ಯರ ಗುರುವಯ್ಯೂರು ದೇವಾಲಯ ಪ್ರವೇಶ

ಸವರ್ಣ ಹಿಂದುಗಳೇ ಗುರುವಯ್ಯೂರು ದೇವಾಲಯವನ್ನು ಪ್ರವೇಶಿಸಲು ಅರ್ಹರೆಂಬುದೂ, ಅವರಿಗಾಗಿಯೇ ಜಾಮೊರಿನವರು ದೇವಾಲಯದ ಧರ್ಮಕರ್ತರಾಗಿರುವರೆಂಬುದೂ ಜಾಮೊರಿನ್ನರವರ ವಾದವಾಗಿರುತ್ತಾಗ್ಗೆ ಹಾಗಿದ್ದರೆ ಸವರ್ಣದವರಾದ ಹಿಂದುಗಳ ಇಷ್ಟ ಪ್ರಕಾರವೇ ಅವರು ಧರ್ಮಾಧಿಕಾರವನ್ನು ನಡೆಯಿಸಬೇಕು ಆದುದರಿಂದ ಸವರ್ಣದ ಹಿಂದುಗಳೆಲ್ಲರ ಅಭಿಪ್ರಾಯವನ್ನು ತಿಳಿಯಲು ಒಂದು ಪಂಚಾಯಿತಿಯೇರ್ಪಾಟಾಗಬೇಕಾಗಿದೆ ಯಾಗಲ್ಲವೆ ಸವರ್ಣದವರಾದ ಹಿಂದುಗಳಿಗೆ ಜವಾಬದಾರಿಯನ್ನು ವಹಿಸಬೇಕಾದ ಅವಶ್ಯಕತೆಯಿಲ್ಲದ ಜಾಮೊರಿನ್ನರ ಇಷ್ಟಾನುಸಾರ ಅಧಿಕಾರವನ್ನು ನಡೆಯಿಸಬಹುದೆಂದೂ ಆ ದೇವಸ್ಥಾನವು ಅವರ ಸ್ವಂತ ಸ್ವತ್ತೆಂದೂ ಅವರ ಅನುಮತಿಯಿಲ್ಲದೆ ಸವರ್ಣದ ಹಿಂದುಗಳು ಆ ದೇವಾಲಯವನ್ನು ಪ್ರವೇಶಿಸಕೂಡದೆಂದೂ ನಿರ್ಧರವಾದರೆ ನಾವು ಈ ಪ್ರವೇಶ ಕಾರ್ಯವನ್ನು ಬಿಟ್ಟುಬಿಡಬೇಕು ನಾವು ಅವಮಾನಿತರಾದವೆಂದು ಭಾವಿಸದೆ ಒಪ್ಪಿಕೊಳ್ಳಬೇಕು ಅಲ್ಲಿನ ಸಂಗತಿ ಸಂದರ್ಭಗಳೆಲ್ಲ ಹೇಗಿವೆ ಎಂದು ಗೊತ್ತುಮಾಡಿ ತಿಳಿಸುವುದು ಎಂದು ಮಹಾತ್ಮರು ಕಲ್ಲಿಕೋಟೆಯಲ್ಲಿರುವ ಪತ್ರಿಕಾ ಸುದ್ದಿಗಾರರಿಗೆ ಬರೆದಿರುತ್ತಾರೆ

ಮಹಾತ್ಮರು ಶಾಂತಿಯವರಿಗೆ ಬರೆದುತ್ತರ

" ನಾನು ಸ್ವಭಾವವಾಗಿ ಸಹಕಾರಕ್ಕೋಸ್ಕರ ಹೇಚಾಡುತ್ತಿದ್ದೇನೆ ಪ್ರಜೆಗಳಿಗಿಷ್ಟವಿಲ್ಲದಿದ್ದರೂ ಅವರು ಆಟಾವಾ ಒಡಂಬಡಿಕೆಯನ್ನು ಅನುಮೋದಿಸುವಂತೆ ದೊರತನದವರು ಬಲವಂತಪಡಿಸುವುದು, ಪ್ರಜೆಗಳ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಅಣಗಿಸುವುದು, ನ್ಯಾಯಸಮ್ಮತವಾಗಿ ಮಾಡಲ್ಪಟ್ಟ ಭಯಂಕರ ವಿಧಾನಗಳನ್ನು ಸ್ಥಿರಪಡಿಸುವುದು ಮೊದಲಾದ ಕಾರ್ಯಗಳನ್ನು ನೋಡಿದರೆ ರಾಜ್ಯಾಧಿಕಾರವನ್ನು ನಿಜವಾಗಿ ಪ್ರಜೆಗಳಿಗೆ ದೊರತನದವರು ಕೊಡಲಿಷ್ಟವುಳ್ಳವರಾಗಿರುವರೆಂದು ನಂಬಲು ಯಾವ ಕಾರಣವೂ ತೋರುವುದಿಲ್ಲ ದೊರತನದವರು ನಿರ್ಬಂಧ ವಿಧಾನವನ್ನು ಅವಲಂಬಿಸುವುದರಿಂದ ಪ್ರಜೆಗಳ ನೀತಿಯನ್ನು ಸಂಪೂರ್ಣವಾಗಿ ಹಾಳುಮಾಡುವರು ನನಗೆ ಸತ್ಯಾಗ್ರಹದಲ್ಲಿ ಪೂರ್ಣ ನಂಬಿಕೆ ಇರುತ್ತದೆ ನಾನು ಅದನ್ನು ನಿಲ್ಲಿಸಿ ಬಿಟ್ಟರೂ ದೊರತನದವರು ಪ್ರಜೆಗಳನ್ನು ಬಯಗೊಳಿಸುವ ಧರ್ಯವನ್ನವಲಂಬಿಸಲು ಯಾವ ನಿರೋಧವೂ ಉಂಟಾಗುವುದಿಲ್ಲ ಶಾಂತೀಯವರ ಧೈರ್ಯಕ್ಕಾಗಿಯೂ ಕಾರ್ಯದೀಕ್ಷೆಗಾಗಿಯೂ ಅವರಲ್ಲಿ ನನಗೆ ಬಹಳ ಗೌರವವಿರುತ್ತದೆ ದೊರತನದವರು ಮನಸ್ಸು ನಿಶ್ಚಯವಾಗಿ ಬದಲಾಯಿಸಿರುವುದೆಂದು ಅವರು ಸ್ಪಷ್ಟಪಡಿಸುವುದಾದರೆ ನಾನು ಅವರ ಜೊತೆಯಲ್ಲೇ ಇರುವೆನು ಎಂದು ಮಹಾತ್ಮರು ಶಾಂತೀಯವರಿಗೆ ಕೊಟ್ಟುತ್ತರದಲ್ಲಿ ತಿಳಿಸಿರುತ್ತಾರೆ

ಮಹಾತ್ಮರಿಗೆ ಸ್ವಧರ್ಮ ಸ್ವರಾಜ್ಯ ಸಂಘದವರ ಲೇಖನ

ಅಸ್ಪೃಶ್ಯತಾನಿವಾರಣೆಯ ವಿಚಾರವಾಗಿ "ನೀವು ಮಾಡುತ್ತಿರುವ ಪ್ರಕಟಣೆಗಳಲ್ಲೆಲ್ಲ ಅಸ್ಪೃಶ್ಯತೆಯನ್ನು ಪುರಸ್ಕರಿಸುವುದು ಭಗವದ್ಗೀತೆಗೆ ವಿರುದ್ಧವೆಂದು ಹೇಳುತ್ತಿರುವಿರಿ ಅಸ್ಪೃಶ್ಯತೆಯು ಭಗವದ್ಗೀತೆಗೆ ವಿರುದ್ಧವೆಂದು ನೀವು ನಮ್ಮ ಕಡೆಯ ವಿದ್ವಾಂಸರುಗಳನ್ನು ಕಳುಹಿಸಿ ಸಭೆಯಲ್ಲಿ ಅಸ್ಪೃಶ್ಯತೆಯು ಭಗವದ್ಗೀತೆಗೆ ವಿರುದ್ಧವೆಂದು ಸಾಧಿಸಿ ಸನಾತನ ಧರ್ಮದವರನ್ನು ಒಡಂಬಡಿಸಿದಲ್ಲಿ ನಿಮ್ಮ ಪ್ರಚಾರಕ್ಕೆ ನಮ್ಮ ಸಂಘವು ಅಡ್ಡಿ ಬರುವುದಿಲ್ಲ ಹಾಗಲ್ಲದೆ ನಿಮ್ಮ ಸಂಗಡಿಗರುಗಳು ಒತ್ತಾಯದಿಂದ ನಡೆಸಹೋದಲ್ಲಿ ಸನಾತನ ಧರ್ಮಕ್ಕೆ ವಿರೋಧವಿಲ್ಲದಂತೆ ನಿಮ್ಮ ಪ್ರಚಾರ ಕಾರ್ಯವನ್ನು ನಡೆಸಿಕೊಳ್ಳಬೇಕು ಅಂತಹ ಸಭೆಯನ್ನು ಏರ್ಪಡಿಸಲಿಕ್ಕೆ ಇಷ್ಟವಿಲ್ಲವಾದರೆ ನಿಮ್ಮಲ್ಲಿಗೆ ಒಂದು ನಿಯೋಗದೊಡನೆ ಮಾತನಾಡಲಿಕ್ಕೆ ನಮಗವಕಾಶವನ್ನು ಕೊಡಬೇಕು ನಿಮ್ಮ ಸಿದ್ಧಾಂತ ಭಗವದ್ಗೀತೆಗೆ ಸಮ್ಮತವೆಂದು ನೀವು ಒಡಂಬಡಿಸಿದಲ್ಲಿ ನಾವು ನಿಮಗೆ ವಿರುದ್ಧವಾಗಿ ಯಾವ ಪ್ರಚಾರವನ್ನೂ ಮಾಡುವುದಿಲ್ಲ ಉಭಯರ ಚರ್ಚೆಯನ್ನು ಸಮಗ್ರವಾಗಿ ಪ್ರಕಟಿಸಲು ಏರ್ಪಾಟು ಮಾಡಬೇಕೆಂದು ಮಹಾತ್ಮರನ್ನು ಕೇಳಿಕೊಂಡಿದ್ದುದಕ್ಕೆ ಆ ವಿಚಾರವಾಗಿ ಸಂಪೂರ್ಣವಾಗಿ ಉತ್ತರವನ್ನು ಕೊಡದೆ ಸನಾತನರು ಎಂದಿಗೂ ಅವರ ಕೂಡ ಮಾತನಾಡಲು ನಾನು ಸಂತೋಷಿಸುತ್ತೇನೆ ಎಂದು ಮಹಾತ್ಮರು ಪತ್ರಿಕೆಗಳಲ್ಲಿ ಪ್ರಕಟಿಸಿರುತ್ತಾರೆ ನಾವು ಕೋರಿರುವ ವಿಷಯವನ್ನು ಮಹಾತ್ಮರು ಅಂಗೀಕರಿಸಿದಲ್ಲಿ ಆಲೋಚನೆ ಮಾಡುವ ಸಂಭಾಷಣವು ಉಭಯ ಪಕ್ಷ[illegible] ಕಿಕರವಾಗಿದು

[illegible] ಸ್ವರಾಜ್ಯ [illegible]ಗೆ ಬರುತ್ತಿದ್ದಾರೆ

ಭಾರತೀಯ ಸ್ವಾತಂತ್ರ್ಯ [illegible]

[illegible] ನೀವು ಭಾರತ [illegible] ಕೆನ್ಯಾ [illegible] ದಿಂದ [illegible] ಪ್ರತ್ಯಕ್ಷವಾಗಿ ನೋಡಿ ಕೇಳಿ ತಿಳಿದುಕೊಂಡು ಮರಳಿ ಸ್ವದೇಶಕ್ಕೆ ಈ ವಾರದಲ್ಲಿ ಹೊರಡುವವರಾಗಿರುತ್ತಾರೆ ಇವರು ಈ ಮಧ್ಯೆ ಮಹಾತ್ಮರಿಗೆ ಒಂದು ಲೇಖನವನ್ನು ಬರೆದು ಅದರಲ್ಲಿ ಭಾರತ ಸಮಸ್ಯಾ ಪರಿಹಾರ ವಿಚಾರವಾಗಿ ನೀವು ಪಾರ್ಲಿಮೆಂಟಿನವರಿಗೇನಾದರೂ ಸಂದೇಶವನ್ನು ಕಳುಹುವುದಾದರೆ ನಾನು ಅದನ್ನು ಸಂತೋಷದಿಂದೊಪ್ಪಿಸುವೆನು ಈಗುಂಟಾಗಿರುವ ಭೇದವನ್ನು ಹೋಗಲಾಡಿಸಿ ಪರಸ್ಪರ ತೃಪ್ತಿಕರವಾದ ಸಮಾಧಾನವನ್ನುಂಟುಮಾಡಬಲ್ಲವರು ನಿಮ್ಮ ವಿನಾ ಮತ್ತಾರೂ ಇಲ್ಲವು ಅಂತಹ ಸಮಾಧಾನವು ಕುದುರಿದರೆ ಭಾರತ ದೇಶದಲ್ಲಿ ಸಂಪದ್ಯುಕ್ತವಾದ ನೂತನ ಶಕವಾರಂಭವಾಗುವುದು ಕಾಂಗ್ರೆಸಿನವರಾದರೂ ಮೂರನೆ ರೌಂಡು ಟೇಬಲು ಸಭೆಯಲ್ಲಿ ಭಾಗಿಗಳಾಗದಿರುವುದು ಬಹಳ ಸಂತಾಪಕರವು ಅಂದನ್ನಿನಲ್ಲಿ ಏನಾದರೂ ಒಡಂಬಡಿಕೆಯು ಕುದುರಿದರೂ ಕಾಂಗ್ರೆಸಿನವರ ಸಹಕಾರವು ದೊರಕಿದ ಹೊರತು ಅದು ಸರಿಯಾಗಿ ನೆರವೇರುವುದಿಲ್ಲ ನೀವು ಭಾರತ ದೇಶದ ಮುಂದಣ ಕಲ್ಯಾಣವನ್ನು ಮನಃಪೂರ್ವಕವಾಗಿ ಕೋರುತ್ತಿರುವರೆಂಬುದರಲ್ಲಿ ತಿಲಾಂಶವೂ ಸಂಶಯವಿಲ್ಲ ಆದುದರಿಂದ ಅಂತಹ ಅನುಕೂಲ ಫಲವನ್ನುಂಟುಮಾಡಲು ನೀವು ಇನ್ನೂ ಹೆಚ್ಚಾಗಿ ಸ್ವಾರ್ಥತ್ಯಾಗಮಾಡುತ್ತೀರೆಂದು ನಾನು ನಂಬಿರುತ್ತೇನೆ ನಾನು ಪ್ರತ್ಯಕ್ಷವಾಗಿ ತಮ್ಮನ್ನು ಸಂದರ್ಶಿಸಿದ್ದರೆ ನನಗೆ ಮಹಾನಂದವಾಗುತ್ತಿದ್ದಿತು ಆದರೆ ನನಗಂತಹ ಪುಣ್ಯಪ್ರಾಪ್ತಿಯಿಲ್ಲವು ನೀವು ರೌಂಡು ಟೇಬಲು ಸಭೆಯಲ್ಲಿ ಭಾಗಿಗಳಾಗಿದ್ದ ಹೊರತು ಈ ಸಮಸ್ಯಾ ಪರಿಹಾರವೆಂದಿಗೂ ಆಗುವುದಿಲ್ಲ ಭಾರತದೇಶ ಚರಿತ್ರೆಯಲ್ಲಿ ಮುಖ್ಯತಮವಾದ ಈ ಭಾಗದಲ್ಲಿ ಅಪಾರವಾದ ನಿಮ್ಮ ಧೀಶಕ್ತಿಯನ್ನುಪಯೋಗಪಡಿಸಲಿಕ್ಕಿಲ್ಲವಾಗಿರುವುದಕ್ಕಾಗಿ ನಾನೂ ಬಹಳವಾಗಿ ಚಿಂತಿಸುತ್ತೇನೆ. ನನ್ನಂತೆಯೇ ಅನೇಕ ಕೋಟಿ ಪ್ರಜೆಗಳು ಕೂಡ ಚಿಂತಿಸುತ್ತಿದ್ದಾರೆ ಎಂದು ತಿಳಿಸಿರುವರು

ಗುಲಾಬ್ ಚಂದ್‌ರವರ ದೋಷವಿಮುಕ್ತಿ

ವಾಲ್‌ಚಂದ್ ಹೀರಾಚಂದ್‌ರವರ ಸಹೋದರ ಗುಲಾಬ್ ಚಂದ್ ಹೀರಾಚಂದರವರು ಕಳೆದ ಒನವು ತಿಂಗಳಿನಲ್ಲಿ ಆರ್ಡಿನೆನ್ಸು ಪ್ರಕಾರ ಶಿಕ್ಷಿಸಲ್ಪಟ್ಟು ಬಿಜಾಪುರದ ಜೈಲಿನಲ್ಲಿಡಲ್ಪಟ್ಟಿದ್ದರು ಇವರು ಬಂಧನದಿಂದ ಬಿಡಲ್ಪಡಬೇಕೆಂದೂ ಬಿಡಲ್ಪಟ್ಟ 18 ಘಂಟೆಯೊಳಗ ಪೊಲೀಸಿನವರಲ್ಲಿಗೆ ಬಂದು ಕಾಣಿಸಿಕೊಳ್ಳಬೇಕೆಂದೂ, ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಅಪ್ಪಣೆಯಿಲ್ಲದೆ ಸೋಲಾಪುರವನ್ನು ಪ್ರವೇಶಿಸ ಕೂಡದೆಂದೂ ಸೋಲಾಪುರದ ಡಿ॥ ಮೆಜಿಸ್ಟ್ರೇಟರು ಫೆಬ್ರುವರಿ ತಾ॥ 26 ರಲ್ಲಿ ಅಪ್ಪಣೆ ಮಾಡಿದರು ಇದಾದ ಒಂದು ವಾರದಲ್ಲಿ ಗುಲಾಬಚಂದರವರ ಬಿಡಲ್ಪಟ್ಟರು ಇದಕ್ಕೆ ಮೊದಲೇ ಅಪರಾಧಿಯು ಡಿ॥ ಮೆಜಿಸ್ಟ್ರೇಟರ ಅನುಮತಿಯನ್ನು ಪಡೆದ ಗೊಂಬಾಯಿಗೆ ಹೋಗಿ ಅಸ್ವಸ್ಥರಾಗಿದ್ದ ತಮ್ಮ ಮಗಳನ್ನು ನೋಡಿಕೊಂಡು ಹಿಂದಿರುಗಿ ಬರುವಾಗ್ಗೆ ಮಾರ್ಗದಲ್ಲಿ ಸೋಲಾಪುರದ ಸ್ಟೇಷನ್ನಿನ ಹತ್ತಿರ ಅಪರಾಧಿಯು ತಮ್ಮ ಬಂಗಲೆಗೆ ಬಂದು ತಮ್ಮನ್ನು ಕಾಣಬೇಕೆಂದು ಡಿ॥ ಮೆಜಿಸ್ಟ್ರೇಟರು ಮಾಡಿದ್ದ ಅಪ್ಪಣೆಯನ್ನು ಕೊಟ್ಟುಬಿಟ್ಟುದರ ಮೇಲೆ ಅಪರಾಧಿಯು ಡಿ॥ ಮೆಜಿಸ್ಟ್ರೇಟರ ಬಂಗಲೆಗೆ ಹೋಗಿ ಅವರನ್ನು ನೋಡಿದರು ಅಷ್ಟರಲ್ಲಿ ಇವರನ್ನು ಪೊಲೀಸರು ಸೆರೆ ಹಿಡಿದು ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಪಡಿಸಲು ಆರ್ಡಿನೆನ್ಸ್ 21 ನೆಯ ಸೆಕ್ಷನ್ ಪ್ರಕಾರ 18 ತಿಂಗಳು ಕಠಿಣ ಸಜಾ ಮತ್ತು 22 100 ರೂ ಜುಲ್ಮಾನೆ ವಿಧಿಸಲ್ಪಟ್ಟರು ಆದರ ಮೇಲೆ ಅಪರಾಧಿಯು ಸೆಷನ್ಸ್ ಕೋರ್ಟಿಗೆ ಅಪೀಲು ಮಾಡಿಕೊಳ್ಳಲಾಗಿ ಜುಲ್ಮಾನೆಯು 12 00 ಕ್ಕೆ ಇಳಿಸಲ್ಪಟ್ಟಿತು ಇದರ ಮೇಲೆ ಬೊಂಬಾಯಿ ಹೈಕೋರ್ಟಿಗೆ ಅಪೀಲು ಮಾಡಿರಲಾಗಿ ಇಬ್ಬರು ನ್ಯಾಯಮೂರ್ತಿಗಳು ಅಪರಾಧಿ ಕಡೆಯ ವಕೀಲರ ವಾದವನ್ನು ಕೇಳಿ ಅಪರಾಧಿಯು ಡಿ॥ ಮೆಜಿಸ್ಟ್ರೇಟರ ಅಪ್ಪಣೆಯ ಪ್ರಕಾರ ಸೋಲಾಪುರವನ್ನು ಪ್ರವೇಶಿಸಿದುದು ತಪ್ಪಲ್ಲವೆಂದು ನಿರ್ಧರಿಸಿ ದೋಷಮುಕ್ತರನ್ನಾಗಿ ಮಾಡಿದರು.

ಬಳೆದೇಶದ ವೃತ್ತಾಂತಗಳು

ಒಂದನೆಯ [illegible] [illegible] ಮೇಘಾ[illegible] [illegible] (ಲಂಡನ್) ರವರು [illegible] ನ್ನಿನ ಮೇಲೆ ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ಚಿತ್ರಿಸಿರುವ [illegible] ಪ್ರದರ್ಶಿಸಲ್ಪಟ್ಟಿರುತ್ತದೆ

ಬರುವ ಡಿಸೆಂಬರು ತಾ॥ 4 ನೆ [illegible] ಬಾಲಕ ಬಾಲಕಿಯರುಗಳಿಗೆ [illegible] ದಿಂದ ನಡೆಯುವ [illegible] ಪ್ರದರ್ಶನದಲ್ಲಿ ಉತ್ತಮವಾದ [illegible] ಗಳಿಗೆ ಬಹುಮಾನಗಳು [illegible] ಡಿ॥ ಡೆಪ್ಯುಟಿಕಮಿಷನರ್ ಮ॥ ಟಿ. ಜಿ. ರಾ[illegible] ಕೊಡುವರು.

[illegible] ಸ್ಟೇಷನ್ [illegible] ನಡೆಸುವ [illegible] ಮತ್ತು [illegible] ಕೌನ್ಸಿಲ್ [illegible] ಯವರಾಗಿದ್ದು [illegible] ನಿಯಮಿಸಲ್ಪಟ್ಟಿರುವರು

ಮೈಸೂರು ಸಂಸ್ಥಾನದ ಪ್ರಾಥಮಿಕ ಪಾಠಶಾಲೆಗಳ ಉಪಾಧ್ಯಾಯರ ಸಮ್ಮೇಳನವು ಬೇಗಳೂರು ನಗರದೊಳಗೆ ಬರುವ ಡಿಸೆಂಬರ್ ತಾ॥ 20-21 ಮತ್ತು 22 ರ ಬದಲು ತಾ॥ 21, 22 ಮತ್ತು 23 ರಲ್ಲಿ ನಡೆಯಬೇಕೆಂದು ಗೊತ್ತಾಗಿರುತ್ತದೆಂದೂ ಶೃಂಗೇರಿ ಜಗದ್ಗುರುಗಳು ಈ ಸಮ್ಮೇಳನವು ಜಯಪ್ರದವಾಗಿ ನಡೆಯಬೇಕೆಂದು ಆಶೀರ್ವದಿಸಿ ಇದರ ವೆಚ್ಚಕ್ಕಾಗಿ ದ್ರವ್ಯಸಹಾಯವನ್ನು ಅನುಗ್ರಹಿಸುತ್ತಾರೆಂದೂ ಸಮ್ಮೇಳನದ ಕಾರ್ಯದರ್ಶಿಯವರು ತಿಳಿಸಿರುತ್ತಾರೆ

ಟಿ [illegible] ತಾ॥ [illegible] ಸಮೀಪದಲ್ಲಿರುವ ರಂಗಸಮುದ್ರದಲ್ಲಿ ಎರಡು [illegible] ಕ್ಷೇತ್ರದ [illegible]ವಾಗಿ ಹಿಂ[illegible] ಮನೆಯ [illegible] ಮಾಡಿ [illegible] ಕಡೆಗಳಿಂದ ಹೊಡೆದಾಡಿದರು. ಇದರಿಂದ [illegible] ಹಿಂದುಗಳಿಗೂ [illegible] ಗಾಯಗಳಾಗಿ [illegible] ಆಸ್ಪತ್ರೆಗೆ [illegible] ಚಿಕಿತ್ಸೆ ಹೊಂದುತ್ತಿರುವುದಾಗಿಯೂ [illegible] ನೇಮಿಸಲ್ಪಟ್ಟಿರುವುದಾಗಿಯೂ ತಿಳಿಯುತ್ತದೆ

ಹಾಸನ ಡಿ॥ ಅರಕಲಗೂಡು ತಾ॥ ರಾಮನಾಥಪುರದಲ್ಲಿ ಪದ್ಧತಿಯ ಪ್ರಕಾರ ಸುಬ್ರಾಯನ ಷಷ್ಠಿ ದಿವಸ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿಯ ರಥೋತ್ಸವ ನಡೆಯುವಾಗ್ಗೆ ಅಧಿಕ ಜನರ ಆಮಿತ್ತದಿಗಾಗಿ [illegible] ಡಿಸೆಂಬರು ತಾ॥ [illegible] ರಿಂದ [illegible] ರ ವರೆಗೆ ಶ್ರೀ ಬ್ರಹ್ಮತಂತ್ರ ಪರಕಾಲ ಸ್ವಾಮಿಯವರ ಮಠದವರು ಸ್ಥಳ ಬಿಟ್ಟುಕೊಟ್ಟಿರುವ ಸ್ಥಳದಲ್ಲಿ ಬರುತ್ತಾದುದರಿಂದ ವ್ಯಾಪಾರಿಗಳು ಆ ಕಾಲಕ್ಕೆ ದಯಮಾಡಿಸಬೇಕೆಂದೂ ಬೇಕಾದವರ ವಾಸಕ್ಕೂ ಊಟಕ್ಕೂ ಉಚಿತವಾದೇರ್ಪಾಟು ಮಾಡಲ್ಪಟ್ಟಿರುವುದೆಂದೂ ಅರಕಲಗೂಡಿನ ಮ॥ ಎಸ್ ಕೃಷ್ಣಸ್ವಾಮಿಯವರು ತಿಳಿಸಿರುತ್ತಾರೆ

ರಾಜಧಾನಿಯ ಕ್ಷಯರೋಗದ ಆಸ್ಪತ್ರೆಯಲ್ಲಿ ಜನರಲ್ ವಾರ್ಡಿನಲ್ಲಿರಲು ಪ್ರತಿ ರೋಗಿಯೂ ದಿನವೊಂದಕ್ಕೆ 2 ರೂ ನಂತೆಯೂ ಪ್ರತ್ಯೇಕ ವಾರ್ಡಿನಲ್ಲಿರಲು 4 ರೂ ನಂತೆಯೂ ಕೊಡಬೇಕಾಗಿದ್ದಿತು ಈಗ ಜನರಲ್ ವಾರ್ಡಿಗೆ [illegible] ರೂ ನಂತೆಯೂ ಪ್ರತ್ಯೇಕ ವಾರ್ಡಿಗೆ [illegible] ರೂ ನಂತೆಯೂ ಕೊಡಬೇಕೆಂದು ಪ್ರಭುತ್ವದವರಿಂದ ವಿಧಾಯಕ ಮಾಡಲ್ಪಟ್ಟಿದೆ ಇದರಿಂದ ಮಧ್ಯ ತರಗತಿಯ ರೋಗಿಗಳಿಗೆ ಸ್ವಲ್ಪಮಟ್ಟಿಗೆ ಉಪಕಾರವಾಯಿತೆಂದು ಹೇಳಬಹುದು ಆದರೆ ಈ ಆಸ್ಪತ್ರೆಯ ಯಾವ ವಾರ್ಡಿನಲ್ಲೂ ಸ್ಥಳ ಸಿಕ್ಕುವುದು ಬಹಳ ಪ್ರಯಾಸವಾಗಿದೆ, ಇದು ನಿವಾರಣೆಯಾದಲ್ಲಿ ರೋಗಿಗಳಿಗೆ ಉಪಕಾರವೂ, ಆಸ್ಪತ್ರೆಯ ಸ್ಥಾಪನೋದ್ದೇಶ ಸಾರ್ಥಕವೂ ಆಗುವುದರಲ್ಲಿ ಅಭ್ಯಂತರವಿಲ್ಲ

ವಿದ್ಯಾಭೂಷಣ ಮ॥ ವಿ. ಎಸ್ ಸಂಜೀವರಾಯರು ಬೆಂಗಳೂರು ಸೆಷನ್ಸ್ ಜಡ್ಜಿಯವರ ಅಪೀಲು ತೀರ್ಮಾನದ ಮೇಲೆ ಹೈಕೋರ್ಟಿಗೆ ಅಪೀಲು ಮಾಡಿಕೊಂಡಿದ್ದ ಅಪೀಲಿನಲ್ಲಿ ಕಾರಾಗೃಹವಾಸ ಶಿಕ್ಷೆಯು ತಪ್ಪಿಸಲ್ಪಟ್ಟು 100 ರೂ ಜುರ್ಮಾನೆಯು ಸ್ಥಿರಗೊಳಿಸಲ್ಪಟ್ಟಿದ್ದಿತು ಈ ಅರ್ಥ ದಂಡವನ್ನು ಮನ್ನಿಸಬೇಕೆಂದೂ ಒಂದುವೇಳೆ ಇದು ಸಾಧ್ಯವಾಗದಿದ್ದಲ್ಲಿ ಹಾಗೆ ಮಾಡಲು ಪ್ರಭುತ್ವದವರಿಗೆ ಶಿಫಾರಸ್ಸನ್ನು ಮಾಡಬೇಕೆಂದೂ ಮ॥ ಸಂಜೀವರಾಯರು ಹೈಕೋರ್ಟಿಗೆ ಅರ್ಜಿ ಕೊಂಡಿದ್ದುದರ ಮೇಲೆ ಮೊದಲು ಈ ಅಪೀಲು ಬಂದುದನ್ನು ತೀರ್ಮಾನಿಸಿದ ಜಸ್ಟಿಸ್ ಮ॥ ರಾಮಚಂದ್ರರಾಯರು ತಾವು ಮಾಡಿರುವ ತೀರ್ಮಾನವನ್ನು ಬದಲಾಯಿಸಲು ಅವಕಾಶವಿಲ್ಲವೆಂದು ವಿನ್ನಪವನ್ನು ತಿರಸ್ಕರಿಸಿಬಿಟ್ಟರು

ಅರಮನೆಯ ಇಂಗ್ಲೀಷು ಬ್ಯಾಂಡು ಮಾಸ್ಟರಾಗಿದ್ದ ಡೆಬ್ರಸ್ ಎಂಬುವರು ಹರ್ಷ ರೋಡಿನ ಮೇಲ್ಗಡೆ ಬಹದ್ದೂರ್ ದಾವೂದ್ ಖಾನ್ ರೋಡು ಬೆಂಗಳೂರು-ನೀಲಗಿರಿ ರೋಡು ಮತ್ತು ಕರ್ಜನ್ ರೋಡುಗಳು ಕೂಡುವ ಸ್ಥಳದಲ್ಲಿ ಮಿ॥ ಡೆಬ್ರಸ್‌ರವರ ಬಂಗಲೆಗೆ ಒತ್ತರಿಸಿಕೊಂಡಿರುವ ಸರ್ಕಲ್ಲಿಗೆ ಇಂಗ್ಲೆಂಡ್ ಮತ್ತು ಇಂಡ್ಯಾ ಸಂಗೀತಗಳನ್ನು ಮಿಶ್ರಮಾಡಿ ಬರೆದ ಹೊಸ ರಾಗವನ್ನು ಡೆಬ್ರಸ್‌ರವರು ಪಡೆದಿದ್ದುದರಿಂದ ಅವರ ಹೆಸರನ್ನಿಡಬೇಕೆಂದು ಮ್ಯು॥ ಕೌನ್ಸಿಲರು ಮಿ॥ ಡಬ್ಲ್ಯು ಎಚ್ ರಿಯೋ ಬಾಲ್ಡ್‌ವಿನ್ ಒಂದು ಸೂಚನೆಯನ್ನು ತಂದು ಚರ್ಚಿಸ ಬೇಕೆಂದಿದ್ದರು ಇವರು ಅಂತಾ ಪ್ರಖ್ಯಾತ ಪುರುಷರಾಗಿರದೆ ಅರಮನೆಯಲ್ಲಿ ಸಾಮಾನ್ಯ ನೌಕರರಾಗಿದ್ದುದರಿಂದ ಸರ್ಕಲ್ಲಿಗೆ ಅವರ ಹೆಸರನ್ನಿಡಕೂಡದೆಂದು ಚರ್ಚೆಯು ನಡೆಯುತ್ತಿದ್ದು ಇದೇ ತಾ॥ [illegible] ನೆಯ ಶನಿವಾರ ನಡೆದ ಕೌನ್ಸಿಲ್ ಮೀಟಿಂಗಿನಲ್ಲಿ ಸರ್ಕಲ್ಲಿಗೆ ಡೆಬ್ರಸ್‌ರವರ ಹೆಸರನ್ನಿಡ ಬೇಕು ಪ್ರಖ್ಯಾತ ಪುರುಷರಾಗಿ ಡೆಬ್ರಸ್‌ರವರದೆ ಸಾಮಾನ್ಯರಾಗಿದ್ದರೆಂದು ಅರಮನೆಯ ಸಂಬಂಧ ಪ್ರತಿನಿಧಿಗಳಾಗಿರುವ ಮ॥ ಎಂ ರಾಮರಾಯರು [illegible] ಮೇಲೆ ಮ॥ [illegible]ರವರು ತಮ್ಮ ಸೂಚನೆಯನ್ನು [illegible]ನು

ಪತ್ರವ್ಯವಹಾರ

[illegible]

ಲಿಂಗಾಯತ ... ಉದಾಸೀನತೆ

[illegible]

ಪ್ರತ್ಯಕ್ಷದರ್ಶಿ

ಕರ್ನಾಟಕ ಸಾಹಿತ್ಯ ಸಮ್ಮೇಲನ

ಈ ವರ್ಷದ ಕನ್ನಡ ಸಾಹಿತ್ಯ ಸಮ್ಮೇಲನವನ್ನು ಧಾರವಾಡದಲ್ಲಿ ... [illegible] ... ಸಾಹಿತ್ಯ ಸಮ್ಮೇಲನವನ್ನು ಮಾಡಬೇಕೆಂದು ನನ್ನ ಸೂಚನೆಯು.

ಚಂದ್ರಶೇಖರಶಾಸ್ತ್ರಿ
ವ್ಯಾಕರಣತೀರ್ಥ ಗಂಗಾಧರಕಾಲೇಜು

ವೀರಶೈವ ಮಹಾಸಭೆಯು

(ಲೇ: ಚಂದ್ರಶೇಖರ ಶಾಸ್ತ್ರೀ ವ್ಯಾಕರಣತೀರ್ಥ ಪ್ರಿನ್ಸಿಪಾಲ ಗಂಗಾಧರ ಸಂಸ್ಕೃತ ಕಾಲೇಜು ಹುಬ್ಬಳ್ಳಿ)

ವೀರಶೈವ ಮಹಾಸಭೆಯು ... [illegible]

ಓಂ ಶಾಂತಿಃ ಶಾಂತಿಃ ಶಾಂತಿಃ

ಶಿವಪ್ರಸ್ತಾವಪತ್ರ

[illegible]

ಶ್ರೀಮನ್ಮಹಾರಾಜರವರ ಸಂಸ್ಕೃತಪಾಠಶಾಲೆಯ ಪಾಂಚರಾತ್ರಾಗಮ ತರಗತಿ

[illegible]

ಕಳಕಳಿಯ ಹಿತಚಿಂತಕ

ವೀರಶೈವ ಮಹಾಸಭೆ

[illegible]

ಜನೇಶ ಮಂಡಿ.........ಇದ್ದರೆ ಇದನಿ ಶ್ರೀಯುತ ಹಳಕಟ್ಟಿಯವರು ಕೈಗೊಂಡಿರುವ ಕಾರ್ಯಕ್ಕೆ ಪ್ರೋತ್ಸಾಹನ ದೀವಿಸ್ಟಿರ ಗ್ರಂಥಗಳ ಪ್ರಕಟಣೆ [illegible] ಮಾಡಿದ್ದಾರೆ. [illegible] ಕಾರ್ಯಕ್ಕೆ ಇಂದಿನವರೆಗೆ [illegible] ಅಭಿನಂದನೀಯರಾಗಿದ್ದಾರೆ. [illegible] ಶ್ರೀಯುತ ಹಳಕಟ್ಟಿಯವರು ಶ್ರೀ [illegible] ಮೊದಲಾದ ಸುಶರಣರುಗಳ ವಚನಶಾಸ್ತ್ರಗಳನ್ನು ಪ್ರಕಟಪಡಿಸಿ [illegible] ಜಗತ್ತಿನಲ್ಲಿ ಒಂದು ಮಹತ್ಪರಿಣಾಮವನ್ನುಂಟುಮಾಡಿರುವ ಈ ಶಿವನಾದ ಸೇವೆಯು ಈ ಮಹನೀಯರಿಂದ ಬೇಕಾದಷ್ಟು ನಡೆದಿರುವುದು ಅದನ್ನೆಲ್ಲ ಸವಿಸ್ತಾರವಾಗಿ ವರ್ಣಿಸುವುದು ಈ ಲೇಖನದ ಉದ್ದೇಶವಲ್ಲ.

ಶ್ರೀಯುತ ಹಳಕಟ್ಟಿಯವರು ಆಧ್ಯಕ್ಷ ಪದವಿಗೆ ಸರ್ವವಿಧದಲ್ಲಿಯೂ ಅರ್ಹರು. ಇವರ ಸಮಾಜಸೇವೆಗೆ ಬಹುಮಾನವಾಗಿ ಸಮಾಜವು ಇವರನ್ನು ಕೊಡಬೇಕಾದರೆ ಈ ಮಹಾಸಭೆಯ ಅಧ್ಯಕ್ಷ ಪದವಿಯನ್ನು ಕೊಟ್ಟರೆ ಅದೊಂದು ಘೋಷವಾದೀತು. ಅಥವಾ ಆ ಮಾನ್ಯ ಅಧ್ಯಕ್ಷಸ್ಥಾನಕ್ಕೆ ಸಮಾಜದವರು ಈ ಮಹನೀಯರನ್ನು ತರುವುದು ಭೂಷಣಪ್ರಾಯವೇ ಸರಿ. ಹೀಗಾದರೂ ಇಂಥ ಆ ಸ್ಥಾನಕ್ಕೆ ಅವರು ಅರ್ಹರೇ ಸರಿ.

ಅಧ್ಯಕ್ಷರ ಚುನಾವಣೆ ವಿಷಯದಲ್ಲಿ ಮಹಾಸಭೆಯ ಸ್ವಾಗತ ಸಂಘದವರು ಇದುವರೆಗೆ ಕೈಹಾಕಿದಂತೆ ಕಾಣುವುದಿಲ್ಲ. ಧಾರವಾಡದ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಯಲ್ಲಿ ಅಲ್ಲಿನ ಎಲ್ಲ ಜನರ ಬುದ್ಧಿಯೂ ಕೇಂದ್ರೀಕೃತವಾಗಿರುವಂತೆ ತೋರುತ್ತದೆ. [illegible] ಶ್ರೀಯುತ ಹಳಕಟ್ಟಿಯವರ ಹೆಸರನ್ನೇ [illegible] ಈ ಚುನಾವಣೆಯು ಮಾತ್ರ ಸಕಾಲವಾದುದೆಂದು ಬಹುಜನರ ಅಭಿಪ್ರಾಯವಿದೆ. ಡಿ. ಬೋರ್ಡ್ ಚುನಾವಣೆಯ ವಿಷಯ ಇದ್ದಲ್ಲಿ ಮುಗಿದಿರಬಹುದಾದ್ದರಿಂದ ಸ್ವಾಗತ ಸಂಘದವರು ಈ ಭಾಗದಲ್ಲಿ ತೀವ್ರ ಪ್ರಯತ್ನಗಳನ್ನು ನಡೆಸಬೇಕಾಗಿ ಕೋರುತ್ತೇವೆ.

ಬಿ. ಎಚ್. ಚೆನ್ನಪ್ಪ
ನಾಡಿಗ್ ಮುದ್ರಾಕ್ಷರಶಾಲಾ ಬೆಂಗಳೂರು ಸಿಟಿ

ಪತಿತ ಸ್ತ್ರೀಯರ ಉದ್ಧಾರ (೧)

(ಶ್ರೀ ಹೊಸಹಳ್ಳಿ ಕೆ ಶೀಲಿಂಗೇಗೌಡರಿಂದ)

ಪೀಠಿಕೆ

ಮೈಸೂರು ಸಂಸ್ಥಾನದಲ್ಲಿ ಸರ್ಕಾರದ ಸಹಾಯದಿಂದ ವ್ಯಭಿಚಾರ ವೃತ್ತಿಯನ್ನು ತಪ್ಪಿಸಿ, ಪತಿತ ಸ್ತ್ರೀಯರನ್ನು ಉದ್ಧರಿಸಲು ಶ್ರೀ ಡಿ. ಎಸ್. ಮಲ್ಲಪ್ಪನವರು ಮಾಡುತ್ತಿರುವ ಪ್ರಯತ್ನವು ಸುಶ್ಲಾಘನೀಯವಾದುದು. ಈ ಸಂಬಂಧವಾಗಿ ಶ್ರೀ ಮಲ್ಲಪ್ಪನವರು ಕಂದಿರುವ ಮಸೂದೆಯು ಮೊನ್ನೆ ನಡೆದ ಪ್ರತಿನಿಧಿ ಸಭೆಯ ದಸರ ಅಧಿವೇಶನದಲ್ಲಿ ಒಂದು ದಿವಸವೆಲ್ಲಾ ಬಹು ಸ್ವಾರಸ್ಯವೂ ತೀಕ್ಷ್ಣವೂ ಆದ ಚರ್ಚೆಗೆ ಒಳಗಾಗಿತ್ತು. ಚರ್ಚೆಯ ಅಂತ್ಯದಲ್ಲಿ ಸಭಿಕರ ಅಭಿಪ್ರಾಯವನ್ನು ಲೆಕ್ಕಿಸುವಾಗ ಈ ಮಸೂದೆಯನ್ನು ಒಪ್ಪಿದವರಿಗಿಂತಲೂ ಒಪ್ಪದವರ ಸಂಖ್ಯೆ ಸ್ವಲ್ಪ ಹೆಚ್ಚಾಗಿದ್ದುದರಿಂದ ಪ್ರತಿನಿಧಿ ಸಭೆಯಲ್ಲಿ ಮಸೂದೆಯು ಬಿದ್ದುಹೋಯಿತು. ನ್ಯಾಯವಿಧಾಯಕ ಸಭೆಯಲ್ಲಿ ಚರ್ಚಿಸಬೇಕಾಗಿರುವ ಪ್ರಶ್ನೆಯೊಂದು ಮಸೂದೆಯು ಮೇಲೂ ಪ್ರತಿನಿಧಿಸಭೆಯವರು ತಮ್ಮ ಅಭಿಪ್ರಾಯವನ್ನು ಸೂಚಿಸಲು ಅವಕಾಶ ಕೊಡಬೇಕೆಂಬ ನಿಬಂಧನೆಯಿರುವುದರಿಂದ ಪ್ರತಿನಿಧಿಸಭೆಯವರು ನಿರಾಕರಿಸಿದ ಮಸೂದೆಯನ್ನು ನ್ಯಾಯವಿಧಾಯಕಸಭೆಯ ಮುಂದೆ ಚರ್ಚೆಗೆ ತರಕೂಡದೆಂಬ ನಿರ್ಬಂಧವೇನೂ ಇಲ್ಲ. ಆದುದರಿಂದ ಶ್ರೀ ಮಲ್ಲಪ್ಪನವರು ತಂದಿರುವ ವ್ಯಭಿಚಾರ ನಿರೋಧ ಮಸೂದೆಗೆ ಪ್ರತಿನಿಧಿಸಭೆಯವರ ಒಪ್ಪಿಗೆ ದೊರೆಯದಿದ್ದರೂ, ಅದು ಬರುವ ಡಿಸೆಂಬರ್ ೧೩ ರಿಂದ ಪ್ರಾರಂಭವಾಗುವ ನ್ಯಾಯವಿಧಾಯಕಸಭೆಯ ಅಧಿವೇಶನದಲ್ಲಿ ಚರ್ಚೆಗೆ ಬಂದೇ ಬರುವುದಾಗಿದೆ.

ವ್ಯಭಿಚಾರವೃತ್ತಿಯು ಕೀಳು, ಹೇಯವಾದುದೆಂದು ಎಲ್ಲರೂ ಒಪ್ಪುವರು. ಇಂತಹ ನೀಚಕರ್ಮವನ್ನು ಮೂಲೋತ್ಪಾಟನ ಮಾಡಿ, ತಿಳಿದೋ ತಿಳಿಯದೆಯೋ, ಕಾರಣಾಂತರಗಳಿಂದ ಈ ನಿಂದ್ಯವಾದ ವೃತ್ತಿಯನ್ನು ಅವಲಂಬಿಸಿರುವ ಪತಿತ ಸ್ತ್ರೀಯರನ್ನು ಉದ್ಧರಿಸಿ ಮುಂದೆ ಈ ನರಕದ ಬಾವಿಗೆ ಸೇರಲಿರುವವರನ್ನು ತಪ್ಪಿಸುವ ವಿಚಾರ ತಿಳಿಯದ ಅಭಿಪ್ರಾಯ ಮಾಡುಗರನ್ನು ರಕ್ಷಿಸುವ ಪ್ರಯತ್ನಕ್ಕೆ ಎಲ್ಲರ ಸಹಾಯ ಬೇಕೇ ಬೇಕು. [illegible] ಈ ನಿಂದ್ಯ ವ್ಯಭಿಚಾರವೃತ್ತಿಯನ್ನು ನಿರೋಧಿಸುವುದು ಸಾಧ್ಯವೇ ಸಾಧ್ಯವೇ ಎಷ್ಟರಮಟ್ಟಿಗೆ ಯಾವ ಯಾವ ಮಾರ್ಗಗಳಿಂದ ತಪ್ಪಿಸಬಹುದು, ಈ ಕೆಲಸದಲ್ಲಿ ಜನರು ಕೆಡಬೇಕೆಂದರೆ ಇನ್ನು ಯಾವ ಯಾವ ಪ್ರಯತ್ನಗಳನ್ನು ಕೈಗೊಳ್ಳಬೇಕು - ಇವೇ ಮೊದಲಾದ ವಿಷಯಗಳನ್ನು ಕುರಿತು ಆಲೋಚಿಸುವುದು ಅವಶ್ಯವಾಗಿದೆ. ಒಂದು ರೋಗವನ್ನು ವಾಸಿಮಾಡಬೇಕಾದರೆ ಆ ರೋಗ ಬಂದುದರ ಕಾರಣಗಳನ್ನು ಕಂಡುಹಿಡಿಯ ಬೇಕಾಗಿರುವಂತೆಯೇ ವ್ಯಭಿಚಾರವೃತ್ತಿಯನ್ನು ತಪ್ಪಿಸಲು ಪ್ರಯತ್ನಿಸುವಾಗ ಆ ವೃತ್ತಿಯ ಹೇಗೆ ಏಕೆ ಆಯಿತೆಂಬ ಕಾರಣಗಳನ್ನು ತಿಳಿದುಕೊಳ್ಳುವುದು ಆವಶ್ಯಕವಾಗಿದೆ. ಏಕೆಂದರೆ ವ್ಯಭಿಚಾರವೃತ್ತಿಯ ನಿರೋಧ ಪ್ರಯತ್ನವು ಸುಲಭವಾದುದಲ್ಲ. ಈ ಕಾರ್ಯವು ಬಹಳ ಮೇಲೆ [illegible] ಸಂಬಂಧಪಟ್ಟ ಅನೇಕ ತೊಡಕಾದ ವಿಷಯಗಳನ್ನೊಳಗೊಂಡಿರುವ ಸಮಸ್ಯೆಯಾಗಿದೆ. ಮಾನವ ಸ್ವಭಾವವಾದ ಕರುಣೆಯ ಉತ್ಸಾಹದಿಂದ ಪುರಿಗೊಂಡು ಆತುರದಿಂದ ಈ ಕೆಲಸ ಮಾಡಲು ಪ್ರಯತ್ನಿಸಿದರೆ, ಪ್ರಯತ್ನವು ವಿಫಲವಾಗುವುದು ಮಾತ್ರವೇ ಅಲ್ಲದೆ, ಅನಿರೀಕ್ಷಿತವಾದ ಅನೇಕ ಅಡಚಣೆ

ಗಳಿಗೆ ಕಾರಣವಾಗುವುದು. [illegible] ಪ್ರಶ್ನೆಗಳಿಗೆ ಸಂಬಂಧಪಟ್ಟ [illegible] ಈ ಲೇಖನ [illegible]

ವ್ಯಭಿಚಾರವೃತ್ತಿಗೆ ಕಾರಣ

ವ್ಯಭಿಚಾರವೃತ್ತಿಯು [illegible] ಪ್ರಪಂಚದ [illegible] ವ್ಯಭಿಚಾರವು [illegible] ಒಂದು ವೃತ್ತಿಯಾಗಿ [illegible] ದೇವದಾಸಿ ಪದ್ಧತಿಯು ಬಹುಮಟ್ಟಿಗೆ ಕಾರಣವಾಗಿರುವುದೆಂದು ಹೇಳಬಹುದು.

ದೇವದಾಸಿ ಪದ್ಧತಿಯು ಹಿಂದೂಸಮಾಜದಲ್ಲಿ ಅಂಗೀಕಾರವನ್ನು ಪಡೆದಿರುವುದು ಮಾತ್ರವೇ ಅಲ್ಲದೆ ಮನ್ನಣೆಯನ್ನೂ ಹೊಂದಿರುತ್ತದೆ. ಒಂದು ಪದ್ಧತಿಯಾಗಿಯೇ [illegible] ಮುಂತಾದ ಉತ್ತಮ ಧ್ಯೇಯಗಳಿಗೆ ಆದರ್ಶಪ್ರಾಯವಾಗಿರುವ ಹಿಂದೂ ಸಮಾಜದಲ್ಲಿ ದೇವದಾಸಿ ಪದ್ಧತಿಯಂತಹ ಅಧಮ ಸಂಸ್ಥೆಯು ಬೇರೂರಿರುವುದು ಮೇಲಿನ ಮೇಲೆ ವಿಚಿತ್ರವಾಗಿ ತೋರುತ್ತದೆ. ಆದರೆ ದೇವದಾಸಿ ಪದ್ಧತಿಯು ಹಿಂದೂ ಸಮಾಜದಲ್ಲಿ ಆಚರಣೆಗೆ ಬರುವುದಕ್ಕೆ ಆ ಕಾಲದಲ್ಲಿ ಆವಶ್ಯಕತೆ, ಆಗ ಈ ಪದ್ಧತಿಯು ಸ್ವಭಾವ ಇವೇ ಮೊದಲಾದುವುಗಳನ್ನು ನೋಡಿದರೆ ಈಗ ಇದು ಈಗಿರುವಷ್ಟು ಅಧೋಗತಿಯಲ್ಲಿರಲಿಲ್ಲವೆಂದೂ ಇದು ಯಾವ ಕಾರಣದಿಂದ ಪ್ರಾರಂಭಿಸಲ್ಪಟ್ಟಿತೋ ಆ ಕಾರಣವಾಗಲಿ, ಅವಶ್ಯಕತೆಯಾಗಲಿ ಈಗಿಲ್ಲದಿರುವುದರಿಂದ ಈ ಪದ್ಧತಿಯು ಈಗಿನ ಹೀನಾಯವಾದ ಸ್ಥಿತಿಗೆ ಇಳಿದಿದೆಯೆಂದೂ ಗೊತ್ತಾಗುವುದು.

ದೇವದಾಸಿ ಪದ್ಧತಿಗೆ ಕಾರಣ

ಬೌದ್ಧ ಮತವು ಪ್ರಬಲಕ್ಕೆ ಬಂದಮೇಲಂತೂ, ಅಶೋಕ ಚಕ್ರವರ್ತಿಯೇ ಮೊದಲಾದ ಬೌದ್ಧ ಮತಾವಲಂಬಿಗಳಾದ ರಾಜ ಮಹಾರಾಜರುಗಳು, ಆ ಮತದ ತತ್ತ್ವಗಳನ್ನು ತಂತಮ್ಮ ಪ್ರಜೆಗಳು ಕಡ್ಡಾಯವಾಗಿ ಅವಲಂಬಿಸಬೇಕೆಂದು ಒತ್ತಾಯಪಡಿಸಿದ್ದಾಗೆಲ್ಲಾ, ಬೌದ್ಧ ಮತದ ಶ್ರೇಷ್ಠ ತತ್ತ್ವಗಳು ಜನರ ಮನಸ್ಸಿನ ಮೇಲೆ ಹೆಚ್ಚು ಹೆಚ್ಚಾಗಿ ಪರಿಣಾಮವನ್ನುಂಟುಮಾಡುತ್ತಾ ಬಂದದ್ದಾಗಿ [illegible] ಸರ್ವ ಸಾಧಾರಣವಾಗಿ ಜನರ ವ್ಯಾಸಂಗಕ [illegible] ವ್ಯಾಪಾರಗಳನ್ನು ಉದಾಸೀನಮಾಡಿ, ವಿಷಯ ಭೋಗ ಲಂಪಟತೆಗಳನ್ನು ಮರೆತು ಪಾರಮಾರ್ಥಿಕ ವಿಚಾರಗಳಲ್ಲಿ ಹೆಚ್ಚು ಹೆಚ್ಚಾಗಿ ಮಗ್ನರಾಗುತ್ತ ಬಂದರು. ಕಾಲಕ್ರಮದಲ್ಲಿ ಜನಸಾಮಾನ್ಯರು ಸಹ ಸನ್ಯಾಸಿಗಳೂ ಯೋಗಿಗಳೂ ಆಗ ತೊಡಗಿ ಪ್ರಪಂಚವು ಮಿಥ್ಯೆ. ದೇಹವು ನಶ್ವರವೆಂಬ ಭಾವನೆಗೆ ಒಳಗಾಗಿ ವಿರಕ್ತಿಯನ್ನು ಹೊಂದುತ್ತ ಬಂದರು. [illegible] ಮುಂದಾಲೋಚನೆಯಿಲ್ಲದ ಜನಸಾಮಾನ್ಯರಲ್ಲಿ ವೈರಾಗ್ಯವು ಬೆಳೆಯುತ್ತ ಇದ್ದು ಚರಿತ್ರೆಯು [illegible] ಪೀಳಿಗೆಯ ದೇಶದ ರಾಜಕೀಯ [illegible] ಹೊಂದುತ್ತಿರುವುದನ್ನು [illegible] ವ್ಯಾಪಾರೋದ್ಯಮಗಳು ನಶಿಸಿಹೋಗುತ್ತಿರುವುದನ್ನು ನೋಡಿ [illegible] ಸಲಹಿದ ಪ್ರಯತ್ನಗಳನ್ನು ಕೈಕೊಂಡರು.

ಪ್ರಾಪಂಚಿಕ ಕಡೆಗೆ ಮನಸ್ಸನ್ನೆಳೆಯುವ ವಿವಿಧ ಪ್ರಸಂಗಗಳೂ ಚಿತ್ರಪಟಗಳೂ ಆ ಕಾಲದಲ್ಲಿ ಹೆಚ್ಚಾಗಿ ಪ್ರಚಾರಗೊಂಡವು. ಆಗಲೇ ದೇವದಾಸಿ ಪದ್ಧತಿಯೂ ಸಮಾಜದಲ್ಲಿ ಒಂದು ವಿಧವಾದ ಅಂಗೀಕಾರ ಮತ್ತು ಗೌರವಗಳನ್ನು ಪಡೆದು ಹೆಚ್ಚಾಗಿ ಆಚರಣೆಗೆ ಬಂದಿರಬಹುದೆಂದು ಹೇಳಬಹುದು. ವಿಧಾತನ ಸೃಷ್ಟಿಯಲ್ಲಿ ಮನುಷ್ಯನನ್ನು ಆಕರ್ಷಿಸುವ [illegible] ನೋಡಿದರೆ ಕಲೆಗಳು [illegible] ಆಕರ್ಷಣೆಯಿಂದ ನಿಜವಾಗಿ [illegible] ಆಶ್ಚರ್ಯವೇನೂ ಇಲ್ಲ.

ಸ್ತ್ರೀ, ಸಂಗೀತ, ನರ್ತನ ಇವು ಮೂರರಲ್ಲಿ ಒಂದೊಂದೇ ಮಾನವನನ್ನು ಬೇಕಾದಷ್ಟು ಆಕರ್ಷಿಸಬಲ್ಲವಾಗಿರುವಲ್ಲಿ, ಇವು ಮೂರರ ವಿಷಯದಲ್ಲಿ ಸಮ್ಮಿಲನ [illegible] ಪರಿಣಾಮ ಪ್ರಭಾವವನ್ನುಂಟುಮಾಡುವುದು [illegible] ಸ್ತ್ರೀಯು [illegible] ಆಕೆಯ ಪ್ರಕೃತಿ ಸಂಗೀತ ಮತ್ತು ಭರತಶಾಸ್ತ್ರಗಳು [illegible] ಸಂಗೀತ ಕಲೆಗಿರುವ ಪ್ರಾಶಸ್ತ್ಯವನ್ನು ಹೆಚ್ಚಿಸಿದವರು ನಾರದ [illegible] ಸಂಗೀತ ವಿದ್ಯೆಯನ್ನು ಸಾಕ್ಷಾತ್ [illegible] ಸಭೆಯಲ್ಲಿ [illegible] ಸಂಗೀತ ನರ್ತನಗಳಿಂದ ಇಂದ್ರ ಸಭೆಗೆ ಬಂದ [illegible]

ಹೀಗೆ ಸಂಗೀತ ಮತ್ತು ಭರತಶಾಸ್ತ್ರಗಳಿಗೆ ದೊರೆತಿರುವ ಮನ್ನಣೆ, ಈ ಕಲೆಗಳನ್ನಭ್ಯಸಿಸಿರುವ ಸುಂದರ ತರುಣಿಯರು ಜನರ ಮನಸ್ಸನ್ನಾಕರ್ಷಿಸಬಲ್ಲರೆಂಬ ಅಂಶ, ಇವುಗಳು ಭಾರತಭೂಮಿಯಲ್ಲಿ ಜನಸಾಮಾನ್ಯರಲ್ಲಿ ಯೋಗಿಗಳನ್ನುತ್ಪತ್ತಿಸುವ ಸಮಯದಲ್ಲಿ ಅವರು ಬೋಧಿಸಬಾರದಂತೆ ಮಾಡುವುದಕ್ಕಾಗಿ ಆಗಿನ ಕಾಲದಲ್ಲಿ ಏನಸಂಸ್ಥೆಯ ಸ್ಥಳಗಳಾದ ದೇವಸ್ಥಾನ [illegible] ಮೊದಲಾದ ಸಾರ್ವಜನಿಕ ಸ್ಥಳಗಳಲ್ಲಿ ಕಲಾಕೋವಿದೆಯರಾದ ನರ್ತಕಿಯರು ಅಥವಾ ಬೇಂದ್ರಾಣಿಯರಿಗೆ ವ್ಯವಸ್ಥೆ ಮಾಡಿದ ವು ದೇವದಾಸಿಯರಿಗೆ ಸಮಾಜದಲ್ಲಿ, ದೇವಸ್ಥಾನಗಳಲ್ಲಿ, ಗುರುಮಠಗಳಲ್ಲಿ ಮತ್ತು ರಾಜಾಸ್ಥಾನಗಳಲ್ಲಿ ಅಂಗೀಕಾರ ಪುರಸ್ಕಾರಗಳು ಸಿಕ್ಕಿ ದೇವದಾಸಿ ಪದ್ಧತಿಯು ಹೆಚ್ಚಾಗಿ ಆಚರಣೆಗೆ ಬರುವುದಕ್ಕೆ ಅನುಕೂಲವಾಯಿತು.

ದೇವದಾಸಿ ಪದ್ಧತಿ

ದೇವದಾಸಿ ಪದ್ಧತಿಯು ಹಿಂದುಸಮಾಜದಲ್ಲಿ ಬೇರೂರಿ ಉತ್ತಮವಾಗಿಯೇ ಇದ್ದಿತು. [illegible] ಚಟುವಟಿಕೆಯುಳ್ಳವಳೂ ಆದ ಹುಡು

ಗಿಯೇ ದೇವದಾಸಿಯಾಗಲು ಯೋಗ್ಯಳೆಂದು ಪರಿಗಣಿಸಲ್ಪಡುತ್ತಿದ್ದಳು. [illegible] ಪೂರ್ಣವಾದ [illegible] ಸಭೆಯಲ್ಲಿ ಪರೀಕ್ಷೆ ನಡೆಸಿ [illegible] ಆಕೆಯು ನೃತ್ಯಗಳಿಂದ ಸಭಿಕರನ್ನು ಮೆಚ್ಚಿಸಿ ಅಷ್ಟು ಯೋಗ್ಯತೆಯುಳ್ಳವಳಾದರೆ [illegible] ಗೀತ, ಪ್ರಬಂಧ, ಶಾಸ್ತ್ರ, ನಾಟಕ, ನೃತ್ಯ, ಆಟ ಮಹಾಕಾವ್ಯ [illegible] ಇವುಗಳಲ್ಲಿ ಪಂಡಿತರು, ಕವಿಗಳು ಎಂದು [illegible] ಅರ್ಹತೆಯನ್ನು ಸಂಪಾದಿಸಿದ ಆಕೆಯು ಸರ್ವಯೋಗ್ಯಳೆಂದು ತಮ್ಮ ಅಭಿಪ್ರಾಯವನ್ನು ಸೂಚಿಸಿದ ಮೇಲೆ ಗುರುಹಿರಿಯರ ಪ್ರತಿನಿಧಿಯೋ ಸಭಿಕರೆಲ್ಲರಿಂದಲೂ ಮಟ್ಟಿ [illegible] ಅನೇಕ ಕ್ರಮಗಳಿಂದ [illegible] ಧರ್ಮವನ್ನು ರಕ್ಷಿಸುತ್ತೇನೆಂದು ದೇವದಾಸಿ ವೃತ್ತಿಗೆ ಯಾವ ವಿಧದಲ್ಲೂ ಕಳಂಕ ಬರದಂತೆ ನಡೆದುಕೊಂಡು ತನ್ನ ಕರ್ತವ್ಯಕರ್ಮಗಳನ್ನು ಮಾಡುವುದು ಆಕೆಯ ಸಭೆಯಲ್ಲಿ ಕೊಡುತ್ತಿದ್ದ ಪ್ರಮಾಣ ವಚನಗಳಲ್ಲಿ ಮೊದಲನೇ [illegible] ಆಕೆಯು ತನ್ನ ತಲೆಯನ್ನು ಆ ದೇವರ ಮುಂದೆ ಆಕೆ ಮಹಾನಿವೇದನೆಯಾಗಿ [illegible] ಇದಕ್ಕಾಗಿ ಆಕೆಗೆ ದೇವಸ್ಥಾನದಿಂದ ಕೊಡಗೆ, [illegible]

ಅಲ್ಲದೆ ಆಕೆಯು ರಾಜಸ್ಥಾನಗಳಿಗೆ ಹೋಗಿ ತನ್ನ ವಿದ್ಯಾಪ್ರದರ್ಶನದಿಂದ ರಾಜರನ್ನು ಆಸ್ಥಾನದ ಪಂಡಿತರು, ಕವಿಗಳು ಮೊದಲಾದವರನ್ನು ಮೆಚ್ಚಿಸಿ [illegible] ಆಕೆ ಸಂಗೀತ, ನರ್ತನ, ವಿನೋದ [illegible] ಮುಂತಾದ [illegible] ಆಕೆಯ ಅಭ್ಯಾಸವನ್ನು [illegible] ದೇವದಾಸಿಯು ಪುನಃ ಗೆಜ್ಜೆ ಕಟ್ಟುವ ತಾಗಿಂದಲೇ [illegible] ರಾಜಸ್ಥಾನ, ಬಹುರಂಗಸಭೆ ಮುಂತಾದ ಯಾವ ಕಡೆಗೂ ಆಕೆಯನ್ನು [illegible] ಆಕೆಯು ಸಮಾಜಕ್ಕೆ ಬಾಹಿರಳು ಆಗಲಿಲ್ಲ. ಅವಳ ಸಹವಾಸ ಮಾಡಿದವರೂ ಬಹಿಷ್ಕಾರಕ್ಕೆ ಗುರಿಯಾಗುತ್ತಿದ್ದರು. ದೇವಸ್ಥಾನ ಗುರುಮಠ, ರಾಜಸ್ಥಾನ ಪ್ರಸಂಗ ಇವುಗಳಲ್ಲಿ ದೇವದಾಸಿಯು ಸ್ಥಾನಮಾನಗಳು ಮೇಲ್ಮಂದಿತ್ತು [illegible] ಆಕೆಯೊಡನೆ ಸಹವಾಸಗೊಳ್ಳುವುದು ಪಾಪವೆಂದಾಗಲಿ ಅಸಮಾನವೆಂದಾಗಲಿ ಯಾರೂ ಭಾವಿಸಿರಲಿಲ್ಲ. ಅಲ್ಲದೆ ಆಗಿನ ಕಾಲದ ದೇವದಾಸಿಯರು ಕೇವಲ ಸಂಗೀತ, ಭರತಶಾಸ್ತ್ರಗಳಲ್ಲಿ ಮಾತ್ರವೇ ಪಂಡಿತರಾಗಿರದೆ, ಅನೇಕರು ಕವಿತಾಶಕ್ತಿಯುಳ್ಳವರಾಗಿಯೂ ಇದ್ದರು. ಆದುದರಿಂದಲೇ ಪಂಡಿತರು, ವಿದ್ವಾಂಸರುಗಳು, ಕವಿಗಳು, ರಾಜರು ಇವರೆಲ್ಲರೂ ದೇವದಾಸಿಗೆ ತಮ್ಮ ಮನಸ್ಸಿನಲ್ಲಿ ಒಂದು ಯೋಗ್ಯಸ್ಥಾನವನ್ನು ಕೊಟ್ಟು ಆಕೆಯೊಡನೆ ಯೋಗ್ಯರೀತಿಯಿಂದ ವ್ಯವಹರಿಸುತ್ತಿದ್ದರು.

ವಿದ್ಯಾವತಿಯೂ ಕಲಾವತಿಯೂ, ರಸಿಕಳೂ ಸುಂದರಿಯೂ, ತರುಣಿಯೂ ಆದವಳು, ಹಾಗೂ ಪಂಡಿತರು, ವಿದ್ವಾಂಸರುಗಳು, ಕವಿಗಳು, ರಸಿಕರು, ರಾಜರು ಮುಂತಾದವರಿಂದ ಕೂಡಿದ ಸಭೆಗಳಲ್ಲೂ ಜನಸಂದಣಿಯ ಸ್ಥಳಗಳಲ್ಲೂ ಹೆಚ್ಚಾಗಿ ಸೇರುತ್ತಿದ್ದಳು. ಅಂತಹ ಜನರು ತನ್ನ ಮನೆಗೆ ಬರಲು ಅವಕಾಶ ಕೊಡುತ್ತಿದ್ದವಳು. ದೇವದಾಸಿಯೆನಿಸಿಕೊಂಡ ವೇಶ್ಯೆಯು ವಿನ್ಯಾಸ ಧರ್ಮವನ್ನು ರಕ್ಷಿಸಿಕೊಂಡಿರಬೇಕಾಗಿತ್ತು. [illegible] ಆದರೆ ದೇವದಾಸಿಯಾದವಳು ಪತಿವ್ರತೆಯಾಗಿರುವುದು ಮಾನ ಮರ್ಯಾದೆಯಿಂದ ಜೀವಿಸುವುದಕ್ಕೆ ತಕ್ಕ ಅವಕಾಶಗಳಿದ್ದುವು.

ಪ್ರತಿಯೊಬ್ಬ ದೇವದಾಸಿಯೂ ತಾನು ಸೇವೆಮಾಡುತ್ತಿದ್ದ ದೇವರನ್ನೇ ಪತಿಯನ್ನಾಗಿ ವರಿಸಿ ಆತನ ಹೆಸರಿನ ಮೇಲೆ ತಾಳಿ ಅಥವಾ ಮಾಂಗಲ್ಯ ಧಾರಣೆ ಮಾಡಿಕೊಳ್ಳುತ್ತಿದ್ದಳು. ಭಗವಂತನ ಸೇವೆಗಾಗಿ ತನ್ನನ್ನೇ ಅರ್ಪಿಸಿ ಆತನನ್ನೇ ಪತಿಯನ್ನಾಗಿ ವರಿಸುತ್ತಿದ್ದುದರಿಂದಲೇ ದೇವದಾಸಿಯಾದವಳಿಗೆ ನಿತ್ಯ ಸುಮಂಗಲಿಯೆಂಬ ಹೆಸರು ಬಂದಿದೆ. ದೇವದಾಸಿಯಾದವಳು ತನ್ನ ಕಾಮೇಚ್ಛೆಯನ್ನು ತೃಪ್ತಿಪಡಿಸಿಕೊಳ್ಳುವುದಕ್ಕೆ ಅಗತ್ಯವಾದರೆ, ಆಗಲಿ, ಕೆಲವು ಸಂದರ್ಭಗಳಲ್ಲಿ ಪುರುಷರೊಬ್ಬನನ್ನು ಆಕೆ ತನ್ನ ಜೀವನದಲ್ಲಿ ಪತಿಯನ್ನಾಗಿ ವರಿಸಿ ಆತನಲ್ಲಿ ಏಕಭಾವದಿಂದ ಕೂಡಿ ಪತಿವ್ರತೆಯಾಗಿ ಬಾಳಬೇಕಾಗಿತ್ತು. ಆ ಪುರುಷನಿಗೆ ಎತ್ತರೆನಿಸುವ ಹೆಸರು.

ಯಾವ್ಯು ಕಾರಣದಿಂದ ರಾಜಗೋಗಿಗಳು ಅವಕಾಶವಾಗುತ್ತಿರಲಿಲ್ಲ. [illegible] ಆ ಹೊತ್ತಿಗೆ ಇಲ್ಲವಾದರೆ ಆತನ ಸಂಸಾರ ಸುಖವು ಕೆಡುತ್ತಿತ್ತು. ಆ ಮೇಲೆ ಆತನ ವಿದ್ಯಾವತಿಯೂ ಕಲಾವತಿಯೂ ರಸಿಕಳೂ ಆದ ಸುಂದರ ತರುಣಿಯೊಬ್ಬಳ ಸಹವಾಸಕ್ಕೆಳಸುತ್ತ ಪೂರ್ವಶಿಕ್ಷಣದಿಂದಲೂ ಸಹವಾಸದಿಂದಲೂ ಉತ್ತಮ ಶಿಕ್ಷಣ, ಸೌಂದರ್ಯ, ಪ್ರೇಮ, ನ್ಯಾಯ, ಅನುಕಂಪ, ದಾಕ್ಷಿಣ್ಯ, ರಸಿಕತೆ ಆಗಿರಬೇಕು ಮತ್ತು ಉತ್ತಮ ವರ್ತನೆ ಸಂಪಾದಿಸುವ ಗುಣಗಳುಳ್ಳ ಪುರುಷನನ್ನು ದೇವದಾಸಿಯೊಡನೆ ಆಯ್ಕೆಮಾಡಿಕೊಂಡು ಆತನನ್ನು ತನ್ನ ರಕ್ಷಕನನ್ನಾಗಿ ಅಂಗೀಕರಿಸಿ, ಆತನೊಡನೆ ಭೋಗಗಳನ್ನು ಪಡೆದು, ಪತಿವ್ರತೆಯಿಂದ ಬಾಳಿ ಪತಿವ್ರತೆಯಾಗಿ ತನ್ನ ಧರ್ಮಗಳನ್ನು ನಡೆಸಬೇಕಾಗಿತ್ತು. ತನ್ನ ವೃತ್ತಿಗಾಗಿ ಕೊಡಲ್ಪಟ್ಟ ಕೊಡುಗೆ, ಮಾನ್ಯಗಳು, ಸೇವೆ ಸಭೆಗಳಲ್ಲಿ ದೊರೆಯುತ್ತಿದ್ದ ಪಾರಿತೋಷಕಗಳು, ತನ್ನ ಮನೆಯಲ್ಲಿ ನಿತ್ಯ ಮಾನ್ಯಗಳು, ತನ್ನ ರಕ್ಷಕನಿಂದ ದೊರೆಯುತ್ತಿದ್ದ ಧನ ಇವುಗಳಿಂದ ಆಕೆಯು ಸ್ವಾತಂತ್ರ್ಯದಿಂದ ಸುಖ ಮತ್ತು ಸುಸ್ಥಿತಿಯ ಜೀವನ ನಡೆಸಲು ಸಹಾಯಕವಾಗಿದ್ದವು. ರಕ್ಷಕನಾದವನು ಆಕೆಯ ನ್ಯಾಯವಾದ ಕರ್ತವ್ಯಕಾರ್ಯದಲ್ಲಿ ಅಡ್ಡಿ ಬರಕೂಡದಾಗಿತ್ತು. ಹೀಗೆ ಆಗಿನ ಕಾಲದಲ್ಲಿ ದೇವದಾಸಿ ಪದ್ಧತಿಯು ಉನ್ನತಸ್ಥಿತಿಯಲ್ಲಿತ್ತು.

ದೇವದಾಸಿ ಪದ್ಧತಿಯ ಹೀನಸ್ಥಿತಿ

ಅಷ್ಟು ಉನ್ನತವಾದ ಧ್ಯೇಯಗಳಿಂದಲೂ ಕಟ್ಟುನಿಟ್ಟುಗಳಿಂದಲೂ ಕೂಡಿದ್ದ ದೇವದಾಸಿ ಪದ್ಧತಿಯು ಕಾಲಕ್ರಮದಲ್ಲಿ ಅಧೋಗತಿಗಿಳಿಯುವುದಕ್ಕೆ ಕಾರಣಗಳು ಹಲವಾರಿವೆ. ಯಾವ ಉದ್ದೇಶ ಸಾಧನೆಗಾಗಿ ಮೊದಲು ಯಾವ ಕಾರಣದಿಂದ ಈ ಪದ್ಧತಿಯು [illegible]

ಮಕ್ಕಳಿದ್ದರೆ ಮನೆ ಚೆಂದ.

ಬಂಜೆತನದಿಂದ ಮುಕ್ತರಾಗುವರಿ

ಮಕ್ಕಳಿಲ್ಲದವರಿಗೆ	ಗರ್ಭಧಾರಣಾ ಸಂಜೀವಿನೀ	ಬಂಜೆತನ ಹೋಗುವುದು

ಈ ನಮ್ಮ ಅನುಭವಿಕ ಔಷಧ ಮೂರು ಸಾರಿ ಮುಟ್ಟುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಪ್ರಾಪ್ತಿ ಆಗುವುದು. ೮ ಗುಳಿಗೆಗಳ ಕಿ. ೩ ರೂಪಾಯಿ.

ಟ. ಖ. ೫ ಆಣೆ.

ಪತ್ತೆ.—ವೈದ್ಯ ವ್ಹಿ. ಎಸ್. ಕಾಪಸೀಮಿರಜ . M. C. [illegible]

[illegible]

[illegible]

ಮೈಸೂರು ಸಂಸ್ಥಾನದ ...

11 ನೇ ... ಚಿತ್ರದುರ್ಗ ಡಿಸ್ಟ್ರಿಕ್ಟ್ ... ಲೆಕ್ಕ

		ರೂ ಆ ಪೈ
1	...	40—1—9
2	...	108—1—0
3	...	2—10—6
4	...	[illegible]
5	...	65—0—0
6	...	24—12—6
7	...	4—0—0
8	...	15—1—0
9	...	37—8—0
10	ಹಾಲು ಮೊಸರು	59—12—0
11	...	13—8—0
12	ಸಂಗೀತ ಮತ್ತು ...	27—0—0
13	...	48—0—3
14	...	11—8—0
15	...	38—8—0
16	...	1—0—0
17	...	1—15—0
18	...	40—6—1
	ಒಟ್ಟು	1114—15—10

	ರೂ ಆ ಪೈ
ಚಂದಾ ವಸೂಲಿ	1,079—0—0
ಉಳಿದ ಸಾಮಾನು ಮಾರಿ ಬಂದದ್ದು	180—6—0
ಒಟ್ಟು	159—1—0
ಖರ್ಚು ಬಾಕಿ	1144—15—10
...	1014—0—4

ನಾರಿನ ಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರತರಿಸಿ ಕೊಳ್ಳಿರಿ. ಕಿ ೧। ರೂ ... ಆಣೆ

ಪತ್ತಾ ವೈದ್ಯ ... ಎಸ್ ಕಾಪಸೆ, ಮಿರಜ

M C

ಬೇಕಾಗಿದೆಯಂತೆ.

... ಬಳ್ಳಾರಿ, ಹೈದರಾಬಾದ್, ಹುಬ್ಬಳ್ಳಿ ... ಧಾರವಾಡ ಈ ಪ್ರಾಂತ್ಯ ಕೆಲಸ ಮಾಡಲು ಅನುಭವಸ್ಥರಾದ ಮತ್ತು ಯೋಗ್ಯ ... ಬೇಕಾಗಿರುತ್ತಾರೆ, ಧಾರಾಳ ... ಕೊಡಲಾಗುವದು

ಯುನಿವರ್ಸಲ್ ಆಂಡ್ ಸನ್,

... ಮತ್ತು ಫೋಟೋ ಚಿತ್ರಗಳನ್ನು ತಯಾರಿಸುವವರು

[—] ... ಬೆಂಗಳೂರು ಸಿಟಿ

೧೯೩೨ ನೆಯ ಇಸವಿ ಆಕ್ಟೋಬರ್ ೩೧ ನೇ ... ನವಂಬರ ... ವರೆಗೆ ಸಲ್ಲುವ ಶಾಲಿವಾಹನ ಶಕ ೧೮೫೪ ನೆಯ ಅಂಗೀರಸ ನಾಮಸಂವತ್ಸರದ ಕಾರ್ತಿಕ ಶುದ್ಧ ಬಿದಿಗೆಯಿಂದ ಕಾರ್ತಿಕ ಶುದ್ಧ ನವಮಿ ವರೆಗಿನ ಪಂಚಾಂಗ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಲಬಾ ಮಾಸ
31	(1) ಸೋಮ	ಬಿದಿ	53 26	ವಿಶಾ	37 00 18	15
1	ಮಂಗಳ	ತದಿ	17 28	ಜ್ಯೇಷ್ಠ	61 00	16
2	(2) ಬುಧ	ಚೌತಿ	1 49	ಮೂಲ	49 31	17
3	(3) ಗುರು	ಪಂಚ	0 41	ಪೂರ್ವಾ	40 52	18
4	ಶುಕ್ರ	ಷಷ್ಠಿ	2 10 45	ಉತ್ತರಾ	44 44	19
5	(4) ಶನಿ	ಅಷ್ಟ	56 16	ಶ್ರವ	11 0	20
6	ಭಾನು	ನವ	51 11	ಧನಿ	48 8	21

(1) ... ಸೋಮವಾರ (2) ಮಳೆನಕ್ಷತ್ರ ಸ್ವಾತಿ ... (3) ... (4) ಮಳೆನಕ್ಷತ್ರ ... (5) ... ಉತ್ಸವ

ಮೈಸೂರು ...

ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು

[ಸ್ಥಳದವರಿಗೆ ವಾರ್ಷಿಕಚಂದಾ ...] [ಪರಸ್ಥಳದವರಿಗೆ ...] [ಬೈಪ್ರತಿಗೆ ...]

[ಸಂಪುಟ ೪೫] ಮೈಸೂರು ಸ್ಟಾರ್ ... ನೆಯ ಇಸವಿ ... ತಾರೀಖು ... ನೆಯ ಸೋಮವಾರ [ಸಂಚಿಕೆ ೪೫

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the c[illegible]eath.

The best safest cheapest most profitable and most convenient place of insurance is the Public Branch of the Mysore State Life Insurance.

Policies are issued from Rs. [illegible] to Rs. [illegible]. Copies of rules and forms of application can be had from [illegible] Government Treasuries, Economic Superintendents, [illegible] and the Insurance Office, Public Offices Buildings, Bangalore.

(Sd.) [illegible] SHAMANNA,
Secretary, Insurance Committee.

[illegible]—18

[illegible]50—21

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ			ಅಂ. ವೆ.	
[illegible]	[illegible]				
[illegible]	[illegible]				
[illegible]	[illegible]				
[illegible]	[illegible]				
[illegible]	[illegible]				
[illegible]	[illegible]				
[illegible]	[illegible]				
[illegible]	[illegible]				
[illegible]	[illegible]				
[illegible]	[illegible]				

[ಸ್ತ್ರೀಯ ಜಗತ್ತು] ೧೦೦೦ ರೂಪಾಯಿ ಇನಾಮು [ಅಜ್ಞಾನ ನೋಡೋಣ

[illegible] ವರ್ಷ [illegible]

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ... ಸುಂದರಪಾಕದ [ಸ್ವರ

[illegible]

ಸ್ತ್ರೀ ರೋಗ ನಿವಾರಣೀ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

ಪತ್ರ ಮೂಲಕ:—ವೈದ್ಯ ... ಎಸ್ ... ಎಂ. ಎಸ್ ಎಂ

ಡಾಕ್ಟರ್ ...

ಸುಗಂಧ ನಕ್ಷತ್ರದ ಪುಡಿ.



[illegible]

ವಿಳಾಸ ... ಕಂಪೆನಿ ...

ಮೈಸೂರು ಸ್ಟಾರ್

೧೯೩೨ ನೇ ಇಸವಿ ನವಂಬರ್ ತಾ|| ೭ ನೆಯ ಸೋಮವಾರ.

ಮೂರನೆಯ ರೌಂಡು ಟೇಬಲ್ ಸಭೆ.

ಮೂರನೆಯ ರೌಂಡು ಟೇಬಲು ಸಭೆಯು ಈ ತಿಂಗಳ ಕಡೆಯ ಭಾಗದಲ್ಲಿ ಲಂಡನ್ ನಗರದಲ್ಲಿ ನಡೆಯುವುದು. ಈ ಸಭೆಗೆ ಆಹ್ವಾನಿಸಲ್ಪಟ್ಟಿರುವ ಭಾರತ ಸಂಸ್ಥಾನಗಳ ಮತ್ತು ಇತರ ಪ್ರತಿನಿಧಿಗಳು ಆಗಲೇ ಪ್ರಯಾಣಮಾಡಿರುವರು. ನಮ್ಮ ಸಂಸ್ಥಾನದ ಪ್ರತಿನಿಧಿಯಾದ ಸರ್ ಮಿರ್ಜ ಎಂ. ಇಸ್ಮೈಲ್‌ರವರೂ ಮೊನ್ನೆಯ ದಿವಸ ಬೆಂಗಳೂರಿನಿಂದ ಪ್ರಯಾಣಮಾಡಿದರು. ಈ ಸಭೆಗೆ ಕಾಂಗ್ರೆಸ್ಸು ದೂರವಾಗಿರುವುದರಿಂದಲೂ ಮಹಾತ್ಮರು ಆಹ್ವಾನಿಸಲ್ಪಡದಿರುವುದರಿಂದಲೂ ಇದರ ಪರಿಸ್ಥಿತಿಯು "ವರನನ್ನು ಬಿಟ್ಟು ಕನ್ಯೆಯು ದಿಬ್ಬಣಕ್ಕೆ ಹೋದಂತೆ" ಇದೆ ಮತ್ತು ಇದರಿಂದ ಭಾರತದೇಶಕ್ಕೆ ಆಗತಕ್ಕ ರಾಜಕೀಯ ಪ್ರಯೋಜನವಾದರೂ ಹಿಂದಿನೆರಡು ಸಭೆಗಳಿಗಿಂತಲೂ ಉತ್ತೇಜನಕರವಾಗುವುದಿಲ್ಲ. ಆದರೆ ಬ್ರಿಟಿಷರು ಭಾರತ ಸ್ವಾತಂತ್ರ್ಯಾಧಿಕಾರವನ್ನು ಭಾರತೀಯರಿಗೆ ವಹಿಸಿಕೊಡುವ ವಿಚಾರಕ್ಕೆ ಸಂಬಂಧಪಡದಿರುವ ಬೇರೆ ಕೆಲ ಮುಖ್ಯ ವಿಚಾರಗಳು ಅಂದರೆ ಸಂಯುಕ್ತ ಏಕೈಕ ಪ್ರಭುತ್ವಕ್ಕೆ ಸಂಬಂಧಪಟ್ಟ ವಿಚಾರಗಳು ಪರ್ಯಾಲೋಚಿಸಲ್ಪಡಬಹುದಾಗಿದೆ. ಭಾರತದ ದೇಶೀಯ ಸಂಸ್ಥಾನಗಳ ಪೈಕಿ ಗಳಲ್ಲಿ ಮುಖ್ಯವಾಗಿ ಮೈಸೂರು ಆರ್ಥಿಕ ಸಮಸ್ಯೆಗಳನ್ನು, ಒಂದು ಕಡೆ ತಮಗೂ ಸಂಯುಕ್ತ ಪ್ರಭುತ್ವಕ್ಕೂ ಇನ್ನೊಂದು ಕಡೆ ತಮಗೂ ಬ್ರಿಟಿಷ್ ಪ್ರಭುತ್ವಕ್ಕೂ ಇರಬೇಕಾದ ಸಂಬಂಧವನ್ನು ಬಗೆಹರಿಸಿಕೊಳ್ಳಬೇಕಾಗಿದೆ. ನಮ್ಮ ಸಂಸ್ಥಾನವು ಬ್ರಿಟಿಷ್ ಪ್ರಭುತ್ವಕ್ಕೆ ತೆರುತ್ತಿರುವ ಪೊಗದಿಯ ವಿಚಾರವಾಗಿ ಡೇವಿಡ್‌ಸನ್ ಕಮಿಟಿಯವರು ಕೊಟ್ಟಿರುವ ಪ್ರತಿಕೂಲಾಭಿಪ್ರಾಯವನ್ನು ಕುರಿತು ನಮ್ಮ ದಿವಾನರು ಬಹಳ ದೀರ್ಘವಾಗಿ ಹೇಳಿದ್ದಾರೆ. ಕಮಿಟಿಯವರ ಈ ಪ್ರತಿಕೂಲಾಭಿಪ್ರಾಯವನ್ನು ಹೋಗಲಾಡಿಸಿ ಯುಕ್ತವೂ ಧರ್ಮವೂ ಆದ ತೀರ್ಮಾನವನ್ನು ಹೊಂದಲು ದಿವಾನರು ರೌಂಡು ಟೇಬಲ್ ಸಭೆಯಲ್ಲಿ ತಮ್ಮ ಬುದ್ಧಿ ಶಕ್ತಿ ಸಾಮರ್ಥ್ಯಗಳನ್ನೆಲ್ಲ ಉಪಯೋಗಿಸಬೇಕಾಗಿರುತ್ತದೆ. ಬ್ರಿಟಿಷರು ರಾಜ್ಯಾಂಗ ಸುಧಾರಣಾ ಕ್ರಮವನ್ನು ತಮಗೆ ತಾವೇ ಸಿದ್ಧಪಡಿಸಿಕೊಂಡು ನೆಪಮಾತ್ರಕ್ಕೆ ಈ ಮೂರನೆಯ ಸಭೆಯನ್ನು ಕೂಡಿಸುವವರಾಗಿರುತ್ತಾರೆ. ಆದರೆ ಹಿಂದಿನಿಂದ ಅಕ್ರಮವಾಗಿ ನಡೆದುಕೊಂಡು ಬರುತ್ತಿರುವ ಅಂಗಾಚಾರದ ಪದ್ಧತಿಗೆ ಈಗ ಅವರು ಸಿದ್ಧಪಡಿಸಿಕೊಂಡಿರುವ ಸುಧಾರಣಾ ಕ್ರಮದಲ್ಲಿ ಖಂಡಿತವಾಗಿ ಅವಕಾಶವಾಗುವುದಿಲ್ಲ. ಕೇಂದ್ರ ಪ್ರಭುತ್ವಕ್ಕೆ ದೇಶೀಯ ಸಂಸ್ಥಾನಗಳು ಸಲ್ಲಿಸುತ್ತಿರುವ ಪೊಗದಿಯನ್ನು ಈ ಸಭೆಯವರು ಪ್ರಥಮತಃ ತೊಲಗಿಸುವಂತೆ ನಮ್ಮ ದಿವಾನರು ಪ್ರಯತ್ನಿಸಿ ಜಯಶಾಲಿಗಳಾಗುವರೆಂದು ನಾವು ನಿರೀಕ್ಷಿಸುತ್ತೇವೆ. ಇದು ಸುಲಭಸಾಧ್ಯವಾದ ಕೆಲಸವಲ್ಲವಾದರೂ, ಇದಕ್ಕೆ ವಿರುದ್ಧವಾದವರ ಸಂಖ್ಯೆಯು ಹೆಚ್ಚಾಗಿದ್ದರೂ ಅಥವಾ ಕಡಿಮೆಯಾಗಿದ್ದರೂ ನಮ್ಮ ದಿವಾನರು ಪೊಗದಿಯನ್ನು ತೊಲಗಿಸಲು ಮತ್ತು ಬ್ರಿಟಿಷ್ ಪ್ರಭುತ್ವಾಡಳಿತಕ್ಕೆ ವಹಿಸಿಕೊಟ್ಟಿರುವ ದಂಡು ಪ್ರದೇಶವನ್ನು ಬಿಡಿಸಿಕೊಳ್ಳಲು ತಮ್ಮ ಕೈಲಾದ ಸಾಹಸವನ್ನೆಲ್ಲ ಮಾಡುವರೆಂಬ ಭರವಸೆಯು ನಮಗೆ ಸಂಪೂರ್ಣವಾಗಿರುತ್ತದೆ. ಮೈಸೂರು ಪ್ರಭುತ್ವದವರು ತಮ್ಮ ಕಾನೂನು [illegible] ಗಳನ್ನೆಲ್ಲ ಉಚಿತವಾಗಿ, ಬ್ರಿಟಿಷ್ ಪ್ರಭುತ್ವದ ಅಂಚೆ [illegible] ಸಾಗಿಸುತ್ತಿರುವರಷ್ಟೆ. ಇದಕ್ಕಾಗಿ ಅಂದರೆ ಅಂಚೆಯ [illegible] ಕ್ಕಾಗಿ ಮೈಸೂರು ಪ್ರಭುತ್ವದವರು [illegible] ದೇಕಾದ ೯ ಲಕ್ಷ ಚಿಲ್ಲರೆ ರೂಪಾಯಿಗಳನ್ನು ಬಿಟ್ಟುಕೊಟ್ಟಿರುವುದರಿಂದ ಪೊಗದಿಯಲ್ಲಿ ಕಡಿಮೆ ಮಾಡಿದಂತೆಯೇ ಆಗಿರುವುದೆಂದು ಡೇವಿಡ್‌ಸನ್ ಕಮಿಟಿಯವರು ಮಾಡಿರುವ ಸೂಚನೆಯನ್ನು ಕಾನೂನುಶಾಸ್ತ್ರಿಗೆ ಶಿಷ್ಟ ಮಾಡುವ ಸುಗಮ [illegible] ಒಪ್ಪುವುದಿಲ್ಲ. ಮನುಷ್ಯನ ಬುದ್ಧಿ ಶಕ್ತಿಯಿಂದ ಸಾಧಿಸಬೇಕಾಗಿರುವ ಈ ಸನ್ನಿವೇಶದಲ್ಲಿ ನಮ್ಮ ಮೈಸೂರು ಸಂಸ್ಥಾನಕ್ಕೆ ಸಾಧ್ಯವಾದಷ್ಟು ಪ್ರಯೋಜನ ಹೊಂದಲು ಸರ್ ಮಿರ್ಜಾಯವರ ಬಿನಾ ನ್ಯಾರೂ ಸಮರ್ಥರಿಲ್ಲವೆಂಬುದು ನಿಶ್ಚಿತವು. ಫೆಡರಲ್ ತತ್ವದ ಪ್ರಯೋಜನವನ್ನರಿತುಕೊಂಡು ಅದನ್ನು ಪ್ರಬಲಗೊಳಿಸುವಲ್ಲಿ ಮತ್ತು ನಮ್ಮ ಸಂಸ್ಥಾನವು ಅನ್ಯಾಯವಾಗಿ ಹೊತ್ತಿರುವ ಪೊಗದಿಯ ಭಾರವನ್ನು ತಪ್ಪಿಸುವಲ್ಲಿ ಸರ್ ಮಿರ್ಜಾಯವರು ಮಾಡುತ್ತಿರುವ ಸಾಹಸ ಪ್ರಯತ್ನಗಳನ್ನು ಅನೇಕ ಸಂದರ್ಭಗಳಲ್ಲಿ ನಮ್ಮ ದೇಶೀಯ ಪ್ರಜೆಗಳೊಡನೆ ನಾವು ಪ್ರಶಂಸಿಸಿರುತ್ತೇವೆ. ಭಾರತ ದೇಶಕ್ಕೆ ಸಾಧ್ಯವಾದಷ್ಟು ಸ್ವಾತಂತ್ರ್ಯವನ್ನೂ, ನಮ್ಮ ಸಂಸ್ಥಾನವು ಬಹು ಕಾಲದಿಂದ ಅಪೇಕ್ಷಿಸುತ್ತಿರುವ ಸೌಲಭ್ಯಗಳನ್ನೂ ಸರ್ ಮಿರ್ಜಾಯವರು ಈ ಬಾರಿ ಪ್ರಯತ್ನದಲ್ಲಿ ಸಾಧಿಸುವರೆಂದು ನಿರೀಕ್ಷಿಸುತ್ತೇವೆ. ಮೊದಲನೆಯ ರೌಂಡುಟೇಬಲು ಸಭೆಗೆ ಕಾಂಗ್ರೆಸ್ ಪಕ್ಷದವರಿಗೆ ಆಹ್ವಾನವು ಇಲ್ಲದಿದ್ದುದರಿಂದ ಮಹಾತ್ಮರು ಸಭೆಗೆ ಹೋಗಲಿಲ್ಲವಾಗಿ ಆ ಸಭೆಯ ನಡವಳಿಕೆಗಳು ಭಾರತೀಯರಿಂದ ಅಂಗೀಕರಿಸಲ್ಪಡದೆ ನಿಷ್ಪ್ರಯೋಜನವಾದುವು. ಎರಡನೆಯ ಸಭೆಗೆ ಕಾಂಗ್ರೆಸ್ ಪಕ್ಷವಾಗಿ ಮಹಾತ್ಮರು ಅಧಿಕೃತರಾಗಿ ಹೋಗಿದ್ದು ಭಾರತೀಯರ ಇಂಗಿತವನ್ನು ಸಭಿಕರಿಗೆ ಮನದಟ್ಟಾಗುವಂತೆ ತಿಳಿಸಿದರು. ಆದರೆ ಆ ವೇಳೆಯಲ್ಲಿ ಮಹಮ್ಮದೀಯರೊಳಗೆ ಬಹುಸಂಖ್ಯಾಕ ಪಕ್ಷದ ನಾಯಕರಾದ ಮೌಲಾನಾ ಮಹಮ್ಮದಾಲಿಯವರೂ, ಅಸ್ಪೃಶ್ಯರ ನಾಯಕರಾದ ಡಾ|| ಅಂಬೇಡ್ಕರವರೂ ಮಹಾತ್ಮರ ಸಂಯುಕ್ತ ನಿಯೋಜಕ ವರ್ಗ ನಿರ್ಣಯಕ್ಕೆ ವಿರುದ್ಧವಾಗಿದ್ದು ಪ್ರತ್ಯೇಕ ನಿಯೋಜಕ ವರ್ಗ ನಿರ್ಣಯಕ್ಕಾಗಿ ಪಟ್ಟು ಹಿಡಿದಿದ್ದುದರಿಂದ ಎರಡನೆಯ ಸಭೆಯ ಕಾರ್ಯಕಲಾಪಗಳು ಫಲಪ್ರದವಾಗಲು ಅವಕಾಶವಾಗಲಿಲ್ಲ. ಆದರೆ ಈ [illegible] ಯರವಾಡ ಜೈಲಿನಲ್ಲಿ [illegible] ಮಹಾತ್ಮರು [illegible] ಉಪವಾಸ [illegible] ಡಾ|| ಅಂಬೇಡ್ಕರವರು ಸಂಯುಕ್ತ ನಿಯೋಜಕ ವರ್ಗಕ್ಕೆ ಒಪ್ಪಿಕೊಂಡುದರಿಂದ ಪ್ರಧಾನಿಯವರು ಅಸ್ಪೃಶ್ಯರಿಗೆ ಕೊಟ್ಟಿದ್ದ ಪ್ರತ್ಯೇಕ ನಿಯೋಜಕ ವರ್ಗದ ತೀರ್ಮಾನವನ್ನು ತಪ್ಪಿಸಿಬಿಟ್ಟರು ಮತ್ತು ಅಲಿಯವರು ಹಿಂದೂ ಮಹಮ್ಮದೀಯ ಸಿಕ್ಕರ ಸಖ್ಯ ಸಮಾಧಾನಗಳಿಗಾಗಿ ಪಂಡಿತ ಮದನಮೋಹನ ಮಾಲವ್ಯರವರ ಸಹಾಯದಿಂದ ಸಾಹಸಪಡುತ್ತಿರುವರು. ಈ ಶುಭ ಸನ್ನಿವೇಶದಲ್ಲಿ ಮಹಾತ್ಮರು ರೌಂಡುಟೇಬಲ್ ಸಭೆಗೆ ಆಹ್ವಾನಿಸಲ್ಪಟ್ಟಿದ್ದರೆ ರಾಜ್ಯಾಂಗ ನಿರ್ಮಾಣ ಕಾರ್ಯವು ಬ್ರಿಟಿಷ್ ಮತ್ತು ಭಾರತ ಪ್ರಭುತ್ವಗಳಿಗೂ, ಭಾರತ ಪ್ರಜೆಗಳಿಗೂ ಸಮ್ಮತವಾಗಿರುವ ರೀತಿಯಲ್ಲಿ ನಡೆದು ಭಾರತ ದೇಶದಲ್ಲಿ ಈಗ ನಡೆಯುತ್ತಿರುವ ಹೋರಾಟ ಕಿತ್ತಾಟಗಳು ನಿಂತು ಶಾಂತಿಸಮಾಧಾನಗಳೇರ್ಪಡಲು ಅವಕಾಶವಾಗುತ್ತಿದ್ದಿತೆನ್ನುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಇಂತಹ ಸುಸಂಧಿಯನ್ನು ಉಭಯ ಪ್ರಭುತ್ವದವರೂ ಕಳೆದುಕೊಂಡುದಕ್ಕಾಗಿ ಎಷ್ಟು ಚಿಂತಿಸಿದರೂ ಸಾಲದು. ಈಗಲಾದರೂ ಉಭಯ ಪ್ರಭುತ್ವದವರು ಮುಖ್ಯವಾಗಿ ಭಾರತದೇಶ ಪರಿಸ್ಥಿತಿಯನ್ನೂ ಪ್ರಜರ ಮನೋಭಾವವನ್ನೂ ಚೆನ್ನಾಗಿ ಅರಿತವರಾಗಿರುವ ವೈಸ್ರಾಯ ವೆಲಿಂಗ್ಡನ್‌ರವರು ರೌಂಡುಟೇಬಲು ಸಭೆಯ ಕಾರ್ಯಕಲಾಪಗಳಲ್ಲಿ ಮಹಾತ್ಮರು ಭಾಗಿಗಳಾಗುವಂತೆ ಮಾಡಿ ತನ್ಮೂಲಕ ಸಭೆಯ ಜಯಪ್ರಾಪ್ತಿಗೆ ಕಾರಣಭೂತರಾಗಲೆಂದು ಆಶಿಸುತ್ತೇವೆ.

ಬಳ್ಳಾರಿ ಡಿ|| ಬೋರ್ಡಿನ ಅಧ್ಯಕ್ಷರ ಚುನಾವಣೆ

ಬಳ್ಳಾರಿ ಡಿಸ್ಟ್ರಿಕ್ಟು ಬೋರ್ಡಿನ ಅಧ್ಯಕ್ಷರ ಚುನಾವಣೆಯು ಕಳೆದ ಮಂಗಳವಾರ ಡಿಸ್ಟ್ರಿಕ್ಟ್ ಕಲೆಕ್ಟರ್ ಮಿ|| ಎಫ್. ಡಬ್ಲ್ಯೂ. ಸ್ಟುಯರ್ಟ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಳೆದ 12 ವರ್ಷಗಳಿಂದಲೂ ಈ ಡಿ|| ಬೋರ್ಡಿನ ಅಧ್ಯಕ್ಷಪದವಿಯನ್ನು ಅನುಭವಿಸುತ್ತಿದ್ದ ದಿವಾನ್ ಬಹದ್ದೂರ್ ಎಂ. ಗೋಪಾಲಸ್ವಾಮಿ ಮೊದಲಿಯಾರ್, ಎಂ. ಎ., ಬಿ. ಎಲ್. ರವರು ಮತ್ತು ವೀರಶೈವ ತರುಣರೂ ವಿದ್ಯಾವಂತರೂ ಆದ ಮ|| [illegible] ಮಹಾಬಲೇಶ್ವರಪ್ಪನವರು ಅಭ್ಯರ್ಥಿಗಳಾಗಿ ನಿಂತಿದ್ದು ಮ|| ಮೊದಲಿಯಾರರಿಗೆ ೨೭ ಓಟುಗಳೂ ಮ|| ಮಹಾಬಲೇಶ್ವರಪ್ಪನವರಿಗೆ ೨೮ ಓಟುಗಳೂ ಬಂದು ಮ|| ಮಹಾಬಲೇಶ್ವರಪ್ಪನವರು ಕೃತಾರ್ಥರಾದರೆಂದು ತಿಳಿಯಲು ಸಂತೋಷವಾಗುತ್ತದೆ. ದಿ|| ಬ|| ಗೋಪಾಲಸ್ವಾಮಿಯವರು ತಂಜಾವೂರು ಬ್ರಾಹ್ಮಣೇತರ ಮಹಾಸಭೆಯ ಅಧ್ಯಕ್ಷರಾದ ಅನಂತರ ಮದ್ರಾಸು ಪ್ರಭುತ್ವದ ಪದವಿಗೆ ಪ್ರಯುಕ್ತರಾಗುತ್ತಿದ್ದರು. ಇವರು ಕರ್ನಾಟಕ ಪ್ರಾಂತಗಳ ಏಕೀಕರಣಕ್ಕೆ ವಿರೋಧವಾಗಿ ಮೊದಲಿನಿಂದಲೂ ನಡೆದುಕೊಳ್ಳುತ್ತಿದ್ದುದರಿಂದ ಈ ಡಿಸ್ಟ್ರಿಕ್ಟಿನ ಕನ್ನಡಿಗರೆಲ್ಲರೂ ಇವರ ವಿಚಾರದಲ್ಲಿ ಎಚ್ಚತ್ತುಕೊಂಡು ಒಕ್ಕಟ್ಟಿನಿಂದ ಪ್ರಯತ್ನಿಸಿ ಇವರಿಗೆ ಈ ಚುನಾವಣೆಯಲ್ಲಿ ಅಪಜಯವನ್ನುಂಟುಮಾಡಿದುದಾಗಿಯೂ, ವಯೋವೃದ್ಧರೂ ವಿದ್ಯಾಪ್ರವರ್ತಕರೂ ಆದ ಮ|| ತೊಗರಿ ವೀರಪ್ಪನವರು ಮತ್ತು ಜಾಗಟಗೇರಿ ಹಿರೇಮಠದ ವೇ|| ಸಣ್ಣ ವೀರಪ್ಪಯ್ಯನವರು ಕಳೆದ ೩ ತಿಂಗಳಿಂದಲೂ ಅವಿಶ್ರಾಂತ ಶ್ರಮವಹಿಸಿ ಹಳ್ಳಿ ಗ್ರಾಮಗಳಲ್ಲೂ ಸಂಚರಿಸಿ ಸುಬೋಧೆಯನ್ನು ಮಾಡಿ ಮಹಾಬಲೇಶ್ವರಪ್ಪನವರಿಗೆ ಜಯಸಂಪಾದಿಸಿ ಕೊಟ್ಟರೆಂದೂ ಸ್ಥಳವಾಸಿಯೊಬ್ಬರು ತಿಳಿಸಿರುತ್ತಾರೆ. ಮ|| ಮಹಾಬಲೇಶ್ವರಪ್ಪನವರು ಬಹಳ ಪ್ರಬಲಸ್ಪರ್ಧೆಯಲ್ಲಿ ಉತ್ತೀರ್ಣರಾದುದಕ್ಕಾಗಿ ಅವರನ್ನೂ, ಅವರ ಉತ್ತೀರ್ಣತೆಗೆ ಕಾರಣಭೂತರಾದ ವೇ|| ತೊಗರಿ ವೀರಪ್ಪನವರನ್ನೂ ಮ|| ಜಾಗಟಗೇರಿ ಸಣ್ಣವೀರಪ್ಪಯ್ಯನವರನ್ನೂ ಅಭಿನಂದಿಸಿ, ಮ|| ಮಹಾಬಲೇಶ್ವರಪ್ಪನವರು ಸಮರ್ಥತೆಯಿಂದಲೂ ನಿಷ್ಪಕ್ಷಪಾತದಿಂದಲೂ, ವಿವೇಕದಿಂದಲೂ, ಸೌಹಾರ್ದದಿಂದಲೂ ತಮ್ಮ ಉದ್ಯೋಗವನ್ನು ನಿರ್ವಹಿಸಿ ಪ್ರಜೆಗಳ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿ ತಮಗೀ ಪದವಿಯನ್ನೊದಗಿಸಿಕೊಟ್ಟವರಿಗೂ, ಸ್ವಜನಸಮಾಜದವರಿಗೂ ಸಂತೋಷವನ್ನುಂಟುಮಾಡುವವರಾಗಲೆಂದು ಕೋರುತ್ತೇವೆ.

ವೈಸ್ರಾಯರ ಸಂಚಾರ

ವೈಸ್ರಾಯ ದಂಪತಿಗಳು ಬರುವ ಡಿಸೆಂಬರು ತಾ|| 11 ರಿಂದ 17 ರ ವರೆಗೆ ಬೊಂಬಾಯಿಯಲ್ಲಿದ್ದು ಅನಂತರ ನಾಗಪುರದ ಮಾರ್ಗವಾಗಿ ಕಲಕತ್ತಾಕ್ಕೆ ಪ್ರಯಾಣಮಾಡುವರು.

ಕಮಲಾ ನೆಹರೂರವರ ಅಸ್ವಸ್ಥತೆ ಹೆಚ್ಚಿದೆ

ಸೌಭಾಗ್ಯವತಿ ಕಮಲಾನೆಹರೂಯವರಿಗೆ ಅಸ್ವಸ್ಥತೆಯು ಪ್ರಬಲವಾಗಿರುವುದರಿಂದ ಅವರ ಸಮೀಪದಲ್ಲಿದ್ದು ಅವರ ಚಿಕಿತ್ಸೋಪಚಾರವನ್ನು ನೋಡಿಕೊಳ್ಳುವುದಕ್ಕಾಗಿ ಅವರ ಪತಿಯಾದ ಪಂಡಿತ ಜವಹಾರಲಾಲ ನೆಹರೂಯವರ ಕಾರಾಗೃಹಬಂಧ ವಿಮೋಚನೆ ಮಾಡಬೇಕೆಂದು ಅಸೆಂಬ್ಲೆಯ ಕೆಲ ಮೆಂಬರುಗಳು ದೊರೆತನದವರನ್ನು ಪ್ರಾರ್ಥಿಸಿದರು.

ಬೊಲಿವಿಯಾ ಪ್ರಜೆಗಳು ತಿರುಗಿಬಿದ್ದಿರುವರು

ಪೆರುಗ್ವೆ ಸೈನ್ಯಕ್ಕೂ ಬೊಲಿವಿಯಾ ಸೈನ್ಯಕ್ಕೂ ನಡೆದ ಯುದ್ಧದಲ್ಲಿ ಬೊಲಿವಿಯಾ ಸೇನೆಯು ಸೋತುಹೋದುದರ ಮೇಲೆ ಪ್ರಜೆಗಳಿಗೆ ಕೋಪ ಹುಟ್ಟಿರುತ್ತದೆ. [illegible] ಪ್ರಜೆಗಳು ಪಾರ್ಲಿಮೆಂಟು ಮನೆಯ ಕಿಟಕಿಗಳ ಗಾಜುಗಳನ್ನು ಒಡೆದು ಆ ಮನೆಯ ಮೇಲೆ ಕಲ್ಲುಗಳನ್ನೆಸೆದರು. ಇದರಿಂದ ಆ ಮನೆಯ ಕಿಟಕಿ ಬಾಗಿಲುಗಳ ಕನ್ನಡಿಗಳೊಡೆದು ಹೋದುವು.

ರೌಂಡು ಟೇಬಲು ಸಭೆಗೆ ೨ ಲಕ್ಷ ವೆಚ್ಚ

ಬರುವ ಮೂರನೆಯ ರೌಂಡುಟೇಬಲು ಸಭೆಗೆ ಪ್ರತಿನಿಧಿಗಳು ಹೋಗಿಬರುವುದಕ್ಕೆ ವೆಚ್ಚವು 2 ಲಕ್ಷ ರೂಪಾಯಿಗಳಾಗುವುದೆಂದೂ, ದೇಶೀಯ ಸಂಸ್ಥಾನಗಳ ಪ್ರತಿನಿಧಿಗಳಾಗಿ ಹೋಗುವ ಮಂತ್ರಿಗಳಿಗೆ ಕೂಡ ಭಾರತ ಪ್ರಭುತ್ವದವರೇ ಕೊಡಬೇಕಾಗುವುದೆಂದೂ, ಹಿಂದಣ ಸಾರಿ ಸಂಸ್ಥಾನಗಳೇ ಸ್ವತಃ ವಹಿಸಿಕೊಂಡಿದ್ದುವೆಂದೂ ಅಸೆಂಬ್ಲಿಯ ಆರ್ಥಿಕ ಸಂಘದವರು ತಿಳಿಸಿರುತ್ತಾರೆ.

ದೇವಸ್ಥಾನಗಳಿಗೆ ಅಸ್ಪೃಶ್ಯರ ಪ್ರವೇಶ

[illegible] ಕಾಶ್ಮೀರ ಸಂಸ್ಥಾನಗಳಲ್ಲಿ ಎಲ್ಲ ದೇವಾಲಯಗಳಿಗೆ ಹಿಂದುಗಳೆಲ್ಲರೂ ಯಾವ ಭೇದವೂ ಇಲ್ಲದೆ ಪ್ರವೇಶಗೊಳಿಸಲ್ಪಡಬೇಕೆಂದು ಅವುಗಳ ಪ್ರಭುಗಳು ಆಜ್ಞಾಪಿಸಿರುತ್ತಾರೆ. ಮೈಸೂರು ಸಂಸ್ಥಾನವು ಎಲ್ಲ ವಿಚಾರಗಳಲ್ಲೂ ಇತರ ಸಂಸ್ಥಾನಗಳಿಗೆ ಮಾರ್ಗದರ್ಶಕವಾಗುತ್ತಿರುವುದು, ಆದರೆ ಈ ವಿಚಾರದಲ್ಲಿ ಮಾತ್ರ ಮಾರ್ಗದರ್ಶಕವಾಗದಿರುವುದು ಶೋಚನೀಯವಾಗಿರುತ್ತದೆ.

ಭಾರತ ಭಾನುವಾರ

ಇದೇ ನವಂಬರ್ ತಾ|| ೨೦ ನೆಯ ಭಾನುವಾರ ಬ್ರಿಟನ್ನಿನಲ್ಲಿರುವ ಎಲ್ಲ ದೇವಾಲಯಗಳಲ್ಲೂ (ಇಂಡ್ಯಾಸಂಡೆ) ಇಂಡ್ಯಾ ದೇಶಕ್ಕೆ ಕ್ಷೇಮವಾಗಲೆಂದು ಪ್ರಾರ್ಥನೆ ನಡೆಸಲ್ಪಡುವುದು. ಕಾಂಗ್ರೆಸಿನವರೊಡನೆ ದೊರೆತನದವರು ಸಮಾಧಾನಮಾಡಿಕೊಳ್ಳುವುದು ಬಹಳ ಆಗತ್ಯವು ಎಂಬ ವಿಚಾರವಾಗಿ ಆ ಭಾನುವಾರ ದಿವಸ ಪ್ರತಿಯೊಂದು ಚರ್ಚಿನಲ್ಲೂ ಮತಗುರುಗಳು ಬೋಧಿಸಬೇಕೆಂದು ಸಮಾಧಾನ ವರ್ಗದವರು ಆರ್ಚ್‌ಬಿಷಪ್‌ರವರನ್ನು ಕೋರಿರುವರು. ಇದಕ್ಕೆ ಅನೇಕ ಗುರುಗಳು ಅಂಗೀಕರಿಸಿರುತ್ತಾರೆ.

ಬೊಂಬಾಯಿ ಸಂಸ್ಥಾನಗಳು

ಬೊಂಬಾಯಿ ಪ್ರಾಂತ್ಯಕ್ಕೆ ಸೇರಿರುವ 151 ಸಂಸ್ಥಾನಗಳು ಇಂಡ್ಯಾ ಪ್ರಭುತ್ವದೊಡನೆ ಪ್ರತ್ಯಕ್ಷ ಸಂಬಂಧವನ್ನು ಹೊಂದಬೇಕೆಂದು ಕೋರಿದುದರ ಮೇಲೆ ಈ ವಿಷಯವನ್ನು ಪ್ರತ್ಯಕ್ಷವಾಗಿ ವಿಚಾರಿಸಿ ತಿಳಿದುಕೊಳ್ಳುವುದಕ್ಕಾಗಿ ಲೆಫ್ಟಿನೆಂಟ್ ಕರ್ನಲ್ [illegible] ಪಿಟ್ಟರ್ ಫ್ಲೋರ್ ಬೆಲ್ಲಕ ರವರು ನಿಯಮಿಸಲ್ಪಟ್ಟಿರುವರು. ಇವರು ಕಳೆದ ತಾ|| 27 ರಲ್ಲಿ ಬೊಂಬಾಯಿಸೊಳಗೆ ಅವರುಗಳ ವಿಚಾರಣೆ ನಡೆಯಿಸಿ ಶನಿವಾರ ಬರೋಡಾಕ್ಕೆ ಪ್ರಯಾಣ ಮಾಡಿದರು. ಅಲ್ಲಿಂದ ಮಾಳವ, ರೇವಾ ಸಂಸ್ಥಾನಗಳಿಗೆ ಹೋಗುವರು.

ಮಹಾತ್ಮರನ್ನು ನೋಡಲು ಅಲಿಯವರಿಗೆ ಅವಕಾಶವಾಗಲಿಲ್ಲ

'ಶನಿವಾರ ಅಥವಾ ಸೋಮವಾರ ಮಹಾತ್ಮರನ್ನು ನೋಡಲು ಅಪ್ಪಣೆಯನ್ನು ಕೋರುವೆನು. ಇದಕ್ಕೆ ಮಹಾತ್ಮರು ಸಮ್ಮತಿಸುವರೆಂದು ನಂಬುತ್ತೇನೆ'' ಎಂದು ಷೌಕತಾಲಿಯವರು ವೈಸ್ರಾಯರ ಪ್ರೈವೇಟ್ ಸೆಕ್ರೆಟರಿಯವರಿಗೆ ತಂತಿಯನ್ನು ಕೊಟ್ಟಿದ್ದರು. ಅದಕ್ಕೆ ''ನಾನು ನಿಮಗೆ ಕಳೆದ ತಾ|| 27 ರಲ್ಲಿ ಕೊಟ್ಟಿದ್ದ ತಂತಿಯಲ್ಲಿ ನೀವು ಮಹಾತ್ಮರನ್ನು ಸಂದರ್ಶಿಸಲು ಸಹ ವೈಸ್ರಾಯರು ಅಂಗೀಕರಿಸುವುದಿಲ್ಲವೆಂದು ನಾನು ಸ್ಪಷ್ಟವಾಗಿ ತಿಳಿಸಿದ್ದೆನು' ಎಂದು ಸೆಕ್ರೆಟರಿಯವರು ಉತ್ತರವನ್ನು ಕೊಟ್ಟಿರುತ್ತಾರೆ.

ಗಾಂಧಿ ಮಹಾತ್ಮರ ನಿರಶನ ದೀಕ್ಷಾ ಪ್ರಭಾವ

''ಇಂಡ್ಯಾದಲ್ಲಿ ಅಸ್ಪೃಶ್ಯರೆಂದು ಕರೆಯಲ್ಪಡುವ 6 ಕೋಟಿ ಮಂದಿ ಪ್ರಜೆಗಳನ್ನು ಅನೇಕ ಶತಮಾನಗಳಿಂದಲೂ ಉತ್ತಮ ವರ್ಣದ ಹಿಂದುಗಳು ಬಹಿಷ್ಕರಿಸಿದ್ದರು. ಈ ವರೆಗೆ ಸಂಘ ಸಂಸ್ಕರ್ತರೆಷ್ಟೋ ಮಂದಿ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಬಹಳ ಪ್ರಯಾಸಪಟ್ಟರಾದರೂ ಉತ್ತಮ ವರ್ಣದವರು ಕೊಂಚವಾದರೂ ಮಣಿಯಲಿಲ್ಲ. ಆದರೆ ಒಬ್ಬ ಶುಷ್ಕದೇಹಿಯು 6 ದಿವಸ 8 ಘಂಟೆಯ ಕಾಲ ನಿರಾಹಾರ ದೀಕ್ಷೆಯನ್ನು ಹಿಡಿದುದರಿಂದ ಲೋಕಾಶ್ಚರ್ಯಕರವಾದ ಪರಿಣಾಮವುಂಟಾಗಿದೆ' ಎಂದು ಅಮೇರಿಕೆಯ ಷಿಕಾಗೋ ಪಟ್ಟಣದಲ್ಲಿ ಪ್ರಕಟವಾಗುವ ಒಂದು ದೈನಿಕ ಪತ್ರಿಕೆಯು ಬರೆದಿರುತ್ತದೆ.

ಫಾದರ್ ಎಲ್ವಿನ್‌ರವರ ಅಭಿಪ್ರಾಯ

ಮೊದಲು ಪೂನಾ ಕ್ರಿಸ್ತು ಸೇವಾಸಂಘಕ್ಕೆ ಸೇರಿದ್ದ ಫಾದರ್ ಎಲ್ವಿನ್‌ರವರು ಇಂಗ್ಲೆಂಡಿನಿಂದ ಬೊಂಬಾಯಿಗೆ ಬಂದು ಅಲ್ಲಿಂದ ಮಧ್ಯರಾಷ್ಟ್ರದೊಳಗಿರುವ ತಮ್ಮಾಶ್ರಮಕ್ಕೆ ಹೋಗಿ ಮೊದಲಿನಂತೆಯೇ ಗೊಂಡರು ಎಂಬ ಜಾತಿಯ ಜನರಿಗೆ ಸಹಾಯಮಾಡುತ್ತಿರುವರು. ಇವರು ''ಗಾಂಧಿಯವರ ಉಪವಾಸ ವ್ರತದಿಂದ ದೊಡ್ಡ ಬದಲಾವಣೆಯುಂಟಾಗಿರುತ್ತದೆ, ಇದರಿಂದ ಪಾಶ್ಚಾತ್ಯ ದೇಶಗಳಲ್ಲಿ ಮಹಾತ್ಮ ಗಾಂಧಿಯವರ ಪ್ರಭಾವವೆ

ಮೊದಲಿಗಿಂತಲೂ ಅತಿಶಯವಾಗಿ ಹೆಚ್ಚುತ್ತಿದೆಯೆಂದು ನಾನು ನಂಬಿರುತ್ತೇನೆ. ಸಮಸ್ತ ನಿಯೋಜಕ ವರ್ಗದಿಂದ ತೃಪ್ತಿಗೆ [illegible] ಉಂಟಾಗುವುದಿಲ್ಲ. [illegible] ಇತರ ಜಾತಿಯವರೊಡನೆ [illegible] ಕೆಲಸಮಾಡಬೇಕಾಗಿದೆ " ಎಂದು ಹೇಳಿದರು.

ಧಾನ್ಯದ ವ್ಯಾಪಾರಿಗಳಾದ ಭಾರತೀಯರ ನೊಡನೆ ಬ್ರಿಟಿಷರ ಒಡಂಬಡಿಕೆ

[illegible] ಬ್ರಿಟಿಷ್ ವರ್ತಕರು ಕಾಂಗ್ರೆಸ್ಸಿನವರೊಡನೆ ಒಡಂಬಡಿಕೆಯನ್ನು ಮಾಡಿಕೊಂಡು ಬಹಿಷ್ಕಾರ ಚಳವಳಿಯನ್ನು ಬಿಟ್ಟಂತೆಯೇ ಧಾನ್ಯದ ವ್ಯಾಪಾರಿಗಳಾದ ಬ್ರಿಟಿಷರು ಭಾರತೀಯರೊಡನೆ ಒಡಂಬಡಿಕೆಯನ್ನು ಮಾಡಿಕೊಂಡರು. " ಧಾನ್ಯದ ವ್ಯಾಪಾರಿಗಳಾದ ಭಾರತೀಯರ ಜಾತೀಯಾಶಯದಲ್ಲಿ ನಮಗೆ ಸಂಪೂರ್ಣ ಸಹಾನುಭೂತಿಯಿರುವುದು. ರಾಜಕೀಯ ಶಾಂತಿಯು ತ್ವರಿತದಲ್ಲೇ ಉಂಟಾಗಬೇಕೆಂದು ನಾವೂ ಕೋರುತ್ತೇವೆ. ಇಂತಹ ಸಮಯದಲ್ಲಿ ಮಹಾತ್ಮರು ರಾಜಕೀಯ ರಂಗದಲ್ಲಿರುವುದು ಆವಶ್ಯಕವು. ಇದಕ್ಕಾಗಿ ನಮ್ಮ ಶಕ್ತಿ ಮೀರದಂತೆ ಪ್ರಯತ್ನಿಸುವೆವು " ಎಂದು ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿದೆ. ಇದಕ್ಕೆ ರಾಲಿ ಬ್ರದರ್ಸ್ ಮತ್ತು ಜೋಸೆಫ್ ಟ್ರಾವರ್ಸ್ ಹಸ್ತಾಕ್ಷರಗಳನ್ನು ಬರೆಯಲಿಲ್ಲ.

ದಕ್ಷಿಣಆಫ್ರಿಕೆಯಲ್ಲಿ ನಿರುದ್ಯೋಗಿ ಭಾರತೀಯರಿಗೆ ಸಹಾಯ

ದಕ್ಷಿಣಆಫ್ರಿಕೆಯಲ್ಲಿ ನಿರುದ್ಯೋಗಿಗಳಾಗಿಯೂ, ನಿರಾಧಾರಿಗಳಾಗಿಯೂ ಇರುವ ಯೂರೋಪಿಯನ್ನರ ಸಹಾಯಾರ್ಥವಾಗಿ 60 ಲಕ್ಷ ರೂಪಾಯಿಗಳನ್ನು ವಿನಿಯೋಗಿಸಬೇಕೆಂದು ದಕ್ಷಿಣಆಫ್ರಿಕೆಯ ಯೂನಿಯನ್ ಪಾರ್ಲಿಮೆಂಟಿನವರು ನಿರ್ಧರಿಸಿರುವರು. ಆದರೆ ಅಲ್ಲಿ ನಿರುದ್ಯೋಗಿಗಳಾಗಿಯೂ, ನಿರಾಧಾರಿಗಳಾಗಿಯೂ ಇರುವ ಭಾರತೀಯರ ಸಹಾಯಾರ್ಥವಾಗಿ ಯಾವ ಏರ್ಪಾಟೂ ಮಾಡಲ್ಪಟ್ಟಿರುವುದಿಲ್ಲ. ಯೂನಿಯನ್ ಪ್ರಭುತ್ವದವರಿಗೆ ಯೂರೋಪಿಯನ್ನರು ಕಂದಾಯವನ್ನು ಸಲ್ಲಿಸುತ್ತಿರುವಂತೆಯೇ ಭಾರತೀಯರೂ ಸಲ್ಲಿಸುತ್ತಿರುವರು. ಅದು ಕಾರಣ ಅಲ್ಲಿಯ ಭಾರತೀಯ ನಿರುದ್ಯೋಗಿಗಳ ಸಹಾಯಾರ್ಥವಾಗಿ ಕೆಲ ಸಾವಿರ ರೂಪಾಯಿಗಳನ್ನು ಕೊಡುವುದು ನ್ಯಾಯವೆಂದು ಆ ಯೂನಿಯನ್ನಿನವರಿಗೆ ಭಾರತ ಪ್ರಭುತ್ವದವರು ಬಿನ್ನವಿಸಿರುವುದಾಗಿ ತಿಳಿಯಬರುತ್ತದೆ.

ಡಾಕ್ಟರ್ ಅನ್ಸಾರಿಯವರ ತಂತೀವಾರ್ತೆ

ಜರ್ಮನಿಗೆ ಸೇರಿದ ಬಾಡುನೋಹಿ ಎಂಬಲ್ಲಿಂದ ಕಳೆದ ಅಕ್ಟೋಬರ್ ತಾ|| 11ರಲ್ಲಿ ಡಾಕ್ಟರ್ ಅನ್ಸಾರಿಯವರು ಲಾಲಾ ದೇಶಬಂಧು ಗುಪ್ತರವರಿಗೆ ಒಂದು ತಂತಿಯನ್ನು ಕೊಟ್ಟಿದ್ದರು. ಅದರಲ್ಲಿ " ಈವರೆಗೆ ಇಲ್ಲಿ ನನಗೆ ನಡೆದ ವೈದ್ಯಕ ಚಿಕಿತ್ಸೆಯು ಮುಗಿಯಿತು. ಇಲ್ಲಿ ಡಾಕ್ಟರ್ ಗ್ರಾಂಡ್‌ಪೀರ್‌ರವರು ಚಿಕಿತ್ಸೆ ಮಾಡುತ್ತಿರುವರು. ಮನಸ್ಸಿನಲ್ಲಿ ಯಾವ ಯೋಚನೆಯನ್ನೂ ಮಾಡಕೂಡದೆಂದು ಡಾಕ್ಟರು ಹೇಳುತ್ತಾರೆ, ಆದರೆ ಈಗ ಭಾರತ ದೇಶಸ್ಥಿತಿಯ ವಿಚಾರವಾಗಿ ಆಲೋಚಿಸದೆ ಇರುವುದು ನನಗೆ ಬಹಳ ಅಸಂಭವವಾಗಿ ತೋರುತ್ತದೆ ಅಲಹಾಬಾದು ಸಭೆಯಲ್ಲಿ ಅನುಕೂಲ ಫಲಪ್ರಾಪ್ತಿಯಾಗುವುದೆಂಬ ನಂಬಿಕೆಯು ನನಗೆ ಸಂಪೂರ್ಣವಾಗುಂಟು. ಹಿಂದು ಮಹಮ್ಮದೀಯ ಸಿಕ್ಕರೊಳಗೆ ಸಮಾಧಾನವು ಕುದುರುವಂತೆ ಅನುಗ್ರಹಿಸಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ " ಎಂದು ಬರೆಯಲ್ಪಟ್ಟಿದ್ದಿತು. ಹೇಗಾದರೂ ಮಾಡಿ ಸಮಾಧಾನವನ್ನು ಕುದುರಿಸಬೇಕೆಂದು ಅನೇಕ ಮಿತ್ರರುಗಳಿಗೆ ಡಾ|| ಅನ್ಸಾರಿಯವರು ತಂತಿ ಕೊಟ್ಟಿರುವುದಾಗಿ ತಿಳಿಯಬರುತ್ತದೆ.

ಅಸ್ಪೃಶ್ಯತಾ ನಿರ್ಮೂಲನ ವಿಚಾರದಲ್ಲಿ ಸಂದೇಶ

ಅಸ್ಪೃಶ್ಯತಾ ನಿರ್ಮೂಲನವೆಂದರೆ ಹರಿಜನರೊಡನೆ ಕಲೆತಲಾಗಿ ಭೋಜನಮಾಡುವುದೂ ಅವರೊಡನೆ ಸಂಬಂಧ ಬಾಂಧವ್ಯಗಳನ್ನು ಬೆಳಸುವುದೂ ಎಂಬುದು ನಿಮ್ಮಭಿಪ್ರಾಯವೇ? ಹಿಂದು ಜಾತಿಯ ಜನರು ಸತ್ತ ಹಸು ಹಂದಿ ಮೊದಲಾದ ಜಂತುಗಳ ಮಾಂಸವನ್ನು ತಿನ್ನುತ್ತಾರೆ. ಇವರುಗಳನ್ನು ದೇವಾಲಯದೊಳಕ್ಕೆ ಬರುಗೊಡುವುದರಿಂದ ಇವರು ಈ ನಿಷಿದ್ಧ ಪದ್ಧತಿಯನ್ನು ಬಿಡಬೇಕೆ ? ಇವರೊಡನೆ ಉತ್ತಮ ವರ್ಣದವರು ಕಲೆತು ಭೋಜನ ಮಾಡಬೇಕೆ ? ಎಂದು ಕುಮುದ ಬಾಂಧವ ಭಟಚಾರ್ಯರು ಮಹಾತ್ಮರಿಗೆ ಬರೆದಿದ್ದರು. ಅದಕ್ಕೆ " ನಿಮ್ಮ ರಾಷ್ಟ್ರದಲ್ಲಿ ಹರಿಜನರನ್ನು ದೇವಾಲಯಕ್ಕೆ ಬರಗೊಡುತ್ತಿರುವುದಕ್ಕಾಗಿ ನಾನು ಬಹಳವಾಗಿ ಸಂತೋಷಿಸುತ್ತೇನೆ. ಅಸ್ಪೃಶ್ಯತೆಯನ್ನು ನಿರ್ಮೂಲನಗೊಳಿಸಲಿಕ್ಕೆ ಅವರೊಡನೆ ಕಲೆತು ಭೋಜನಮಾಡುವುದೂ, ಅವರೊಡನೆ ಸಂಬಂಧ ಬಾಂಧವ್ಯಗಳನ್ನು ಬೆಳಸುವುದೂ ಅವಶ್ಯಕವಲ್ಲವು. ಇಷ್ಟಪಡುವವರು ಹಾಗೆ ಮಾಡಬಹುದು. ಎಲ್ಲ ವಿಷಯದಲ್ಲೂ ಹಿಂದುಗಳಲ್ಲಿ ಎಲ್ಲ ವರ್ಣದವರಿಗೂ ಇರುವ ಗೌರವವು ಹರಿಜನರಿಗು ಕೂಡ ಇರಬೇಕು " ಎಂದು ಮಹಾತ್ಮರು ಭಟಚಾರ್ಯರಿಗುತ್ತರವನ್ನು ಕೊಟ್ಟಿರುವರು.

ಅಖಿಲ ಪಕ್ಷನಾಯಕರ ಸಭೆ

ಹಿಂದು ಮಹಮ್ಮದೀಯ ಸಿಕ್ಕರುಗಳೊಳಗೆ ಸಮಾಧಾನವನ್ನು ಕುದುರಿಸಲು ಮೌಲಾನಾ ಷೌಕತ್ ಆಲಿಯವರು ಅಖಿಲ ಪಕ್ಷನಾಯಕರ ಸಭೆಯನ್ನು ಕಳೆದ ತಾ|| 3 ರಲ್ಲಿ ಅಲಹಾಬಾದಿನೊಳಗೆ ಕರೆದಿದ್ದರು. ಆ ಸಭೆಯವರು ಎಲ್ಲ ವಿಷಯಗಳನ್ನು ಕೂಲಂಕಷವಾಗಿ [illegible]

ನಿರ್ಧಾರವನ್ನು ಕೈಗೊಂಡಿರುವರು. ಒಂದು ಸಭೆಯನ್ನೇರ್ಪಡಿಸಿದರು. ಇವರು ಪ್ರತಿನಿಧ್ಯದಲ್ಲೂ [illegible] ಹಿಂದು ಸಭಾಸ್ಥಾನಗಳ ಅಧಿಕಾರ ಪ್ರತಿಪಾದನೆಗಳನ್ನು [illegible] ಕೊಟ್ಟಿರುವರು. [illegible] 60 ಮಂದಿ ನಾಮಕರಣದ ಮೂಲಕವೂ, 20 ಮಂದಿ ಸ್ಪರ್ಧೆಯ ಮೂಲಕವೂ ಸೇರಿಸಲ್ಪಡಬೇಕೆಂದು [illegible] ಮತವನ್ನು ಪಡೆಯಿತು, ರಾಷ್ಟ್ರೀಯ [illegible] 33 ಮಂದಿ ಸೇರಬೇಕೆಂದೂ ತೀರ್ಮಾನಿಸಿತು. 67 ಮಂದಿ ಸ್ಪರ್ಧೆಯ ಮೂಲಕವೂ ಸೇರಬೇಕೆಂದು ಮತ್ತು [illegible] ಉದ್ಯೋಗಿಗಳಿಗೆ ಕೇವಲ 75 ಮಂದಿ ನಾಮಕರಣದ ಮೂಲಕವೂ 25 ಮಂದಿ ಸ್ಪರ್ಧೆಯ ಮೂಲಕವೂ ಸೇರಿಸಲ್ಪಡಬೇಕೆಂದು ದೇಶೀಯ ಕ್ರೈಸ್ತರು ಕೋರಿರುವುದಾಗಿ ತಿಳಿಯಬಂದಿದೆ. ಬಾಕಿ ವಿಚಾರಗಳು ಇನ್ನೂ ಚರ್ಚೆಯಲ್ಲೇ ಇರುತ್ತವೆ. ಈ ಸಖ್ಯಸಮಾಧಾನ ಸಭೆಯು ಜಯಪ್ರದವಾಗಿ ನಡೆಯಲೆಂದು ಅನೇಕ ಪ್ರಾರ್ಥನೆಗಳು ನಡೆದೂ ನಡೆಯುತ್ತಲೂ ಇವೆ.

ಮದ್ರಾಸು ಮಂತ್ರಿವರ್ಗ ಬದಲಾವಣೆ

ಮದ್ರಾಸು ಪ್ರಭುತ್ವದಲ್ಲಿ ದಿವಾನ್ ಬಹದ್ದೂರ್ ಮುನಿಸ್ವಾಮಿನಾಯುಡುಯವರು ಮುಖ್ಯಮಂತ್ರಿಯಾಗಿಯೂ, ಪಿ. ಟಿ. ರಾಜನ್ ಮತ್ತು ದಿ|| ಬ|| ಎನ್. ಕುಮಾರಸ್ವಾಮಿ ರೆಡ್ಡಿಯವರು ಉಪಮಂತ್ರಿಗಳಾಗಿಯೂ ಇದ್ದು ಅಭಿಪ್ರಾಯ ಭೇದದಿಂದ ಮೂವರೂ ಮಂತ್ರಿ ಪದವಿಯಿಂದ ನಿವೃತ್ತರಾದರು. ಇವರೆಲ್ಲರೂ ಜಸ್ಟಿಸ್ ಪಕ್ಷಕ್ಕೆ ಸೇರಿದವರು. ಬೊಬ್ಬಿಲಿ ರಾಜರು ಪ್ರಧಾನಮಂತ್ರಿಯಾಗಿಯೂ, ಮೊದಲಿದ್ದ ಪಿ. ಟಿ. ರಾಜನ್‌ರವರು ಮತ್ತು ದಿ|| ಬ|| ಕುಮಾರಸ್ವಾಮಿ ರೆಡ್ಡಿಯವರು ಮಂತ್ರಿಗಳಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ. ಜಸ್ಟಿಸ್ ಪಕ್ಷದವರಾದ ತಮ್ಮೊಳಗೆ ಭಿನ್ನಾಭಿಪ್ರಾಯ ಹುಟ್ಟಿದುದರಿಂದ ಮಂತ್ರಿ ಪದವಿಗಳನ್ನು ತ್ಯಜಿಸಿದ ಮೂವರು ತಮ್ಮ ಪಕ್ಷದಲ್ಲಿ ಒಡಕು ಹುಟ್ಟದಿರುವುದಕ್ಕಾಗಿಯೂ ಪಕ್ಷದ ಧ್ಯೇಯವನ್ನು ಕಾಪಾಡುವುದಕ್ಕಾಗಿಯೂ ಪುನಃ ಮಂತ್ರಿ ಪದವಿಯನ್ನು ತಮ್ಮಲ್ಲಾರೂ ಸ್ವೀಕರಿಸಬಾರದೆಂದು ನಿರ್ಧರಿಸಿಕೊಂಡಿದ್ದಾಗ್ಯೂ ಪಿ. ಟಿ. ರಾಜನ್‌ರವರೂ, ದಿ. ಬ. ಕುಮಾರಸ್ವಾಮಿ ರೆಡ್ಡಿಯವರೂ ಮಂತ್ರಿ ಪದವಿಗಳನ್ನು ಅಂಗೀಕರಿಸಿದುದರಿಂದಲೂ, ಧನಾಢ್ಯರ ಪಕ್ಷಾಭಿಮಾನಿಗಳಾದ ಬೊಬ್ಬಿಲಿರಾಜರು ಮುಖ್ಯ ಮಂತ್ರಿಯಾಗಿರುವುದರಿಂದಲೂ ಪ್ರಜಾಪಕ್ಷವೊಂದನ್ನೇರ್ಪಡಿಸಿ ಜಾತಿ ತಾರತಮ್ಯವಿಲ್ಲದೆ ಬ್ರಾಹ್ಮಣರಾದಿಯಾಗಿ ಸರ್ವರನ್ನೂ ತಮ್ಮ ಪಕ್ಷಕ್ಕೆ ಸೇರಿಸಿಕೊಂಡು ಪ್ರಜಾಹಿತ ಸಾಧನೆಗೆ ಕೆಲಸಮಾಡಬೇಕೆಂದು ನಿರ್ಧರಿಸಿ ಮುಖ್ಯ ಮಂತ್ರಿ ಪದವಿಯಿಂದ ನಿವೃತ್ತರಾದ ದಿ|| ಬ|| ಮುನಿಸ್ವಾಮಿ ನಾಯುಡುಯವರು ಅದರ ಅಧ್ಯಕ್ಷತೆಯನ್ನು ವಹಿಸಿರುವರು. ಬಹಳ ಕಾಲದಿಂದಲೂ ಬ್ರಾಹ್ಮಣೇತರರ ಹಿತಸಾಧನೆಗಾಗಿ ಹೋರಾಡುತ್ತ ಮಂತ್ರಿ ಮಂಡಲಕ್ಕೆ ತಮ್ಮ ಪಕ್ಷದವರೇ ನಿಯಮಿಸಲ್ಪಡುವಷ್ಟು ಪ್ರಾಬಲ್ಯವನ್ನು ಹೊಂದಿದ್ದ ಜಸ್ಟಿಸ್ ಪಕ್ಷದಲ್ಲಿ ಈ ರೀತಿ ಒಡಕು ಹುಟ್ಟಿದುದು ವಿಷಾದಕರವು. ಈ ನೂತನ ಪಕ್ಷದೇರ್ಪಾಟಿನಿಂದ ಜಸ್ಟಿಸ್ ಪಕ್ಷವು ಅಳಿಯುವುದೋ ಉಳಿದು ಪ್ರಬಲವಾಗುವುದೋ ನೋಡಬೇಕು.

ಬ್ರಿಟಿಷ್ ಲೇಬರ್‌ಪಕ್ಷದ ಪ್ರತಿನಿಧಿಗಳು

ರೌಂಡುಟೇಬಲ್ ಸಭೆಗೆ ಹೋಗುವುದಿಲ್ಲ

"ಕಾಂಗ್ರೆಸ್ ಪಕ್ಷದವರನ್ನು ರೌಂಡುಟೇಬಲ್ ಸಭೆಗೆ ದೊರತನದವರು ಆಹ್ವಾನಿಸಿಲ್ಲವಾದುದರಿಂದ, ಆಹ್ವಾನಿಸಲ್ಪಟ್ಟಿರುವ ಲೇಬರುಪಕ್ಷದ ಪ್ರತಿನಿಧಿಗಳು ಈ ಸಭೆಗೆ ಹೋಗಕೂಡದೆಂದು ನಿರ್ಧರಿಸಿದೆ. ನಮ್ಮ ಪಾರ್ಟಿಯವರೆಲ್ಲರೂ ಆಹ್ವಾನಿಸಲ್ಪಡಲಿಲ್ಲವೆಂಬುದರ ಮೇಲೆ ನಾವು ಈ ರೀತಿ ನಿರ್ಧರಿಸಿರುವುದಿಲ್ಲ. ಈ ಸಭೆಯಲ್ಲಿ ಭಾರತ ಪ್ರತಿನಿಧಿಗಳಿಗೂ ಬ್ರಿಟಿಷ್ ಪ್ರತಿನಿಧಿಗಳಿಗೂ ಸಮಾಧಾನವು ಕುದುರುವುದಿಲ್ಲವಾದುದರಿಂದ ನಾವು ಅದನ್ನು ನಿರೋಧಿಸಬೇಕೆಂದು ಯೋಚಿಸಿರುವುದಿಲ್ಲ. ಆದರೆ ಭಾರತೀಯರ ಪಕ್ಷವಾಗಿ ಮಾತನಾಡಲು ಅಧಿಕಾರವುಳ್ಳ ಪಾರ್ಟಿಯವರು ಈ ಸಭೆಯಲ್ಲಿರುವುದಿಲ್ಲವಾದುದರಿಂದ ಉಳಿದವರು ಮಾಡುವ ಸೂಚನೆಗಳನ್ನು ಕುರಿತು ಈಗಿನ ಸ್ಥಿತಿಯಲ್ಲಿ ನಾವು ಯಾವ ಜವಾಬ್ದಾರಿಯನ್ನೂ ವಹಿಸತಕ್ಕವರಾಗಿಲ್ಲ. ಕನ್ಸರ್ವೇಟಿವರ ಅಭಿಪ್ರಾಯವು ಕೇವಲ ಪ್ರತಿಕೂಲವಾಗಿರುವುದರಿಂದ ಈ ಸಭೆಯಿಂದ ಯಾವ ಲಾಭವೂ ಆಗುವುದಿಲ್ಲವೆಂದೇ ತೋರುತ್ತದೆ. ಈಗ ನಾವು ತಟಸ್ಥರಾಗಿರುವ ಕಡೆಯಲ್ಲಿ ನಮಗೆ ಬಲ್ಲವು ಹೆಚ್ಚಾಗಿರುವುದು. ನಾವು ಈಗ ಈ ಸಭೆಯನ್ನು ಬಹಿಷ್ಕರಿಸಿದರೂ ಜಾಯಿಂಟ್ ಪಾರ್ಲಿಮೆಂಟರಿ ಕಮಿಟಿಯಲ್ಲಿ ನಮ್ಮ ಪ್ರತಿನಿಧಿಗಳಿರಲು ಯಾವ ಅಭ್ಯಂತರವೂ ಇರುವುದಿಲ್ಲ. ಆ ಕಮಿಟಿಯಲ್ಲಿ ಕೂಡ ಕನ್ಸರ್ವೇಟಿವ್ ಪಕ್ಷದವರೇ ಬಹಳ ಹೆಚ್ಚಾಗಿರುವರೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಈಗಾಗಲೇ ನಿಶ್ಚಯಿಸಿರುವ ನಿಧಾನವನ್ನು ಭಾರತ ಪ್ರತಿನಿಧಿಗಳಿಗೆ ತಿಳಿಸಿ ಇದನ್ನು ನೀವು ಅನುಮೋದಿಸುತ್ತೀರಾ ಇಲ್ಲವೆ, ಯಾವುದನ್ನೋ ಒಂದನ್ನು ಹೇಳಿ ಎಂದು ದೊರತನದವರು ಕೇಳುವರೆಂದು ನಾವು ತಿಳಿದಿಲ್ಲ. ಆದರೆ ಮಂತ್ರಿಗಳ ಅಭಿಪ್ರಾಯದಲ್ಲಿ ಬಹಳ ಪ್ರತಿಕೂಲವು ಈವರೆಗೆ ಕಂಡುಬಂದಿದೆ. ಗಾಂಧಿ ಮಹಾತ್ಮರ ಬಿಡುಗಡೆಯನ್ನೂ, ಆರ್ಡಿನೆನ್ಸುಗಳ ರದ್ದುಪಡಿಸುವುದನ್ನೂ ಕುರಿತು ದೊರತನದವರು ನಿರಾಕರಿಸಿರುವುದರಿಂದ ರೌಂಡುಟೇಬಲು ಸಭೆಯಿಂದ ಯಾವ ಪ್ರಯೋಜನವೂ ಉಂಟಾಗುವುದಿಲ್ಲವೆಂದು ನಾವು ಊಹಿಸುತ್ತೇವೆ " ಎಂದು ಜಾರ್ಜ್ ಲಾನ್ಸ್‌ಬರೀಯವರು [illegible]

ಅಧಿಕಾರಿಗಳ ಬದಲಾವಣೆ

[illegible] ಕೆ. ಸಿ. ಎ. ಇ., ಒ. ಬಿ. ಇ., ಯವರು [illegible] ಕೈಗೊಂಡಿರುವರು [illegible] ಸಾ|| ಎಂ. ಎನ್. ಕೃಷ್ಣರಾವ್, ಬಿ.ಎ., [illegible] (ಪ್ರ) ಗವರ್ನಮೆಂಟ್ ಕೌನ್ಸಿಲರ್ [illegible] ಮ|| ಕೆ. [illegible], ಎಂ.ಎ., ಯವರು [illegible] ಕೌನ್ಸಿಲರಾಗಿಯೂ (ಪ್ರ) ರೆವಿನ್ಯೂ ಕಮಿಷನರ್ ಮ|| ಎಸ್. ಕೆ. [illegible] ಗೋಪಾಲಾಚಾರಿ, ಬಿ.ಎ., ಬಿ.ಎಲ್., ರವರು ಅಫಿಸಿಯೇಟಿಂಗ್ [illegible] ಕೌನ್ಸಿಲರಾಗಿಯೂ ಶ್ರೀಮನ್ಮಹಾರಾಜರವರಿಂದ ನಿಯಮಿಸಲ್ಪಟ್ಟಿರುತ್ತಾರೆ. ಅಲ್ಲದೆ ಎಕ್ಸೈಸ್ ಕಮಿಷನರ್ ಮ|| ಎಸ್. ಹಿರಿಯಣ್ಣಯ್ಯ, ಎಂ.ಎ., ಬಿಎಲ್., ರವರು ಆಕ್ಟಿಂಗ್ ರೆವಿನ್ಯೂ ಕಮಿಷನರಾಗಿಯೂ, ಡೆವಲಪ್‌ಮೆಂಟ್ ಶಾಖೆಯ ಸೆಕ್ರೆಟರಿ ಮ|| ಡಿ. ಶ್ರೀನಿವಾಸಯ್ಯಂಗಾರ್, ಬಿ.ಎ., ಯವರು ಆಕ್ಟಿಂಗ್ ಎಕ್ಸೈಸ್ ಕಮಿಷನರಾಗಿಯೂ, ಮೈಸೂರು ಡಿ|| ಡೆಪ್ಯುಟಿಕಮಿಷನರ್ ಮ|| ಎಸ್. ಅಬ್ದುಲ್‌ವಾಜಿದ್, ಬಿ.ಎ., ಯವರು ಆಕ್ಟಿಂಗ್ ಡೆವಲಪ್‌ಮೆಂಟ್ ಶಾಖಾ ಸೆಕ್ರೆಟರಿಯಾಗಿಯೂ, ಹಾಸನ್ ಡಿ|| ಡೆಪ್ಯುಟಿಕಮಿಷನರ್ ಮ|| ಸಿ. ಎಸ್. ಕೃಷ್ಣಸ್ವಾಮಯ್ಯಂಗಾರ್‌ರವರು ಮೈಸೂರು ಡಿ|| ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮ|| ಸುಂದರರಾಜಯ್ಯಂಗಾರ್, ಬಿ.ಎ., ಯವರು ಕಡೂರು ಡಿ|| ಆಕ್ಟಿಂಗ್ ಡೆಪ್ಯುಟಿ ಕಮಿಷನರಾಗಿಯೂ, ಚೀಫ್‌ಸೆಕ್ರೆಟರಿ ಮ|| ಎನ್. ಮಾಧವರಾವ್, ಬಿ.ಎ.,ಬಿ.ಎಲ್., ರವರು ಮತ್ತು ದಿವಾನರ ಪ್ರೈವೇಟ್ ಸೆಕ್ರೆಟರಿ ಮ|| ಟಿ. ಸಿಂಗಾರವೇಲು ಮೊದಲಿಯಾರ್, ಬಿ.ಎ.,ಬಿ.ಎಲ್., ರವರು ದಿವಾನರ ಕೂಡ ಸೀಮೆಗೆ ಸ್ಪೆಷಲ್ ಕೆಲಸದ ಮೇಲೆ ಹೋಗುವುದರಿಂದ ಮ|| ಗಳಾದ ಜನರಲ್ ಸೆಕ್ರೆಟರಿ ಆರ್. ರಂಗರಾವ್ ಬಿ. ಎ., ಬಿ. ಎಲ್., ರವರು ಆಕ್ಟಿಂಗ್ ಚೀಫ್ ಸೆಕ್ರೆಟರಿಯವರಾಗಿಯೂ, ತುಮಕೂರು ಡಿ|| ಡೆ|| ಕಮಿಷನರ್ ಎಚ್. ವಿ. ರಾಮಸ್ವಾಮಿ, ಎಂ. ಎ., ಬಿ. ಎಲ್., ರವರು ಆಕ್ಟಿಂಗ್ ಜನರಲ್ ಸೆಕ್ರೆಟರಿಯವರಾಗಿಯೂ ಬೆಂಗಳೂರು ಸಿಟಿ ಮೆಜಿಸ್ಟ್ರೇಟ್ ಟಿ. ಎ. ಅಬ್ದುಲ್‌ಖಾದರ್, ಬಿ. ಎ., ಯವರು ತುಮಕೂರು ಡಿ|| ಆಕ್ಟಿಂಗ್ ಡೆಪ್ಯುಟಿ ಕಮಿಷನರಾಗಿಯೂ, ಮೋಟಾರ್ ಟ್ರಾನ್ಸ್‌ಪೋರ್ಟ್ ಕಮಿಟಿ ಸೆಕ್ರೆಟರಿ ಎಸ್. ನಾರಾಯಣರಾವ್, ಬಿ. ಎ., ಯವರು ಬೆಂಗಳೂರು ಸಿಟಿ ಮೆಜಿಸ್ಟ್ರೇಟರಾಗಿಯೂ, ಚನ್ನಪಟ್ಟಣ ತಾ|| ಅಮಲ್ದಾರ್ ಕೆ. ವಿ. ರಾಮನಾಥಯ್ಯ, ಎಂ. ಎ., ಯವರು ಮೋಟಾರ್ ಟ್ರಾನ್ಸ್‌ಪೋರ್ಟ್ ಕಮಿಟಿ ಸೆಕ್ರೆಟರಿಯವರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಮೈಸೂರು ಡಿ|| ಪೋಲೀಸು ಸೂಪರಿಂಟೆಂಡೆಂಟರಾದ ಮ|| ಆರ್. ರಾಮಚಂದ್ರರಾವ್ ಘೋಂಟೋಳೆ, ಬಿ. ಎ., ಯವರು ಚಿತ್ರದುರ್ಗ ಡಿ|| ಟ್ರೆಜರಿ ಆಫೀಸರಾಗಿಯೂ ಬೆಂಗಳೂರು ಡಿ|| ಪೊ|| ಸೂಪರಿಂಟೆಂಡೆಂಟರಾದ ಮ|| ಎಂ. ಸಿ. ಮರಿಯಪ್ಪನವರು ಮೈಸೂರು ಡಿ|| ಪೊ|| ಸೂಪರಿಂಟೆಂಡೆಂಟರಾಗಿಯೂ ವರ್ಗಾಯಿಸಲ್ಪಟ್ಟಿರುವರು.

ಒಳದೇಶದ ವೃತ್ತಾಂತಗಳು

ಸೀಮೆಗೆ ದಯಮಾಡಿಸಿರುವ ನಮ್ಮ ಶ್ರೀಯುವರಾಜರವರು ಈ ತಾ|| 15-16 ರಲ್ಲಿ ಹಿಂತಿರುಗಿ ಬರುವುದಾಗಿ ವರ್ತಮಾನವಿದೆ.

ಬೆಂಗಳೂರು ದಂಡಿನಲ್ಲಿ ಸ್ಕ್ವಾಡ್ರನ್ ಮತ್ತು ಮೈನರ್ಸ್ ಸಾರ್ಜಂಟ್ ಆಗಿದ್ದ 28 ವರ್ಷ ವಯಸ್ಸಿನ ಯೂರೋಪಿಯನ್ನು ಮೈದಾನದಲ್ಲಿ ಮದ್ದಿಗೆ ಬೆಂಕಿಯನ್ನು ಹೊತ್ತಿಸುತ್ತಿರುವಾಗ್ಗೆ ಮದ್ದು ಹೊತ್ತಿಕೊಂಡು ಆತನನ್ನು 17 ಅಡಿ ಎತ್ತರದ ವರೆಗೆ ಮೇಲಕ್ಕೆ ಹಾರಿಸಿಬಿಟ್ಟಿತು. ಅವನು ಅಲ್ಲಿಂದ ಬಿದ್ದು ಹತನಾದನು.

ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್‌ರವರು ಕಳೆದ ಗುರುವಾರ ರಾಜಧಾನಿಗೆ ಬಂದು ಶ್ರೀಮನ್ಮಹಾರಾಜರವರ ದರ್ಶನ ಸಂಭಾಷಣೆಗಳನ್ನು ಮಾಡಿಕೊಂಡು ಬೆಂಗಳೂರಿಗೆ ಹಿಂತಿರುಗಿ ಮಾರನೆಯ ದಿವಸ ಗುಂತಕಲ್ ಮಾರ್ಗವಾಗಿ ಬೊಂಬಾಯಿಗೆ ಪ್ರಯಾಣಮಾಡಿದರು ಮತ್ತು ಅಲ್ಲಿಂದ ಇಂದೋ ನಾಳೆಯೋ ಹಡಗನ್ನು ಹತ್ತಿ ಸೀಮೆಗೆ ತೆರಳುವರು.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರಾಗಿ ನಾಮಕರಣ ಮಾಡಲ್ಪಟ್ಟಿದ್ದ ಸಿಸ್ಟರ್ ಆಫರ್ ಎಂ. ಟಾಂಕಿನ್ಸನ್‌ರವರು ಸೀಮೆಗೆ ಹೋಗುವುದಕ್ಕಾಗಿ ಕೌನ್ಸಿಲರ ಸ್ಥಾನವನ್ನು ಬಿಟ್ಟುದರಿಂದ ಅವರ ಬದಲು ಮಹಾರಾಣಿ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಶ್ರೀ ಕೆ. ಡಿ. ರುಕ್ಮಿಣಿ ಅಮ್ಮನವರು ಕೌನ್ಸಿಲರಾಗಿ ಪ್ರಭುತ್ವದವರಿಂದ ನಾಮಕರಣ ಮಾಡಲ್ಪಟ್ಟಿರುತ್ತಾರೆ.

ಕಳೆದ ವಿಜಯದಶಮಿ ರಾತ್ರಿ ಶ್ರೀಮನ್ಮಹಾರಾಜರವರ ಉತ್ಸವವು ಹಿಂದಿರುಗಿ ಬರುವ ವೇಳೆಯಲ್ಲಿ ಎ. ಎನ್. ಸೂರ್ಯನಾರಾಯಣರಾವ್, ರಾಮಸೇತು, ಕೃಷ್ಣ ಮತ್ತು ಗೋಪಾಲಶೆಟ್ಟಿ ಎಂಬುವರು ಒಬ್ಬ ಮುಸಲ್ಮಾನ ಹುಡುಗನ ಬಾಂಗಾಬಂಡಿಯನ್ನು ವಶಪಡಿಸಿಕೊಂಡು ಅದನ್ನು ಹಿಡಿಯಲು ಬಂದ ಹುಡುಗನನ್ನು ಹೊಡೆದು ಗಾಯಪಡಿಸಿ ಬಾಡಿಗೆಯನ್ನು ಗೊತ್ತುಮಾಡದೆ ತೆಗೆದುಕೊಂಡರೆಂಬ ಅಪರಾಧಕ್ಕಾಗಿ ಪೋಲೀಸಿನವರಿಂದ ಮೈಸೂರು ಸಿಟಿ ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿರುತ್ತಾರೆ. ಕಳೆದ ಗುರುವಾರ ಫಿರ್ಯಾದಿಯ ಬಾಂಗಾಬಂಡಿಯ ಹುಡುಗನ ಮತ್ತು ಆತನ ಬಂಡಿಯ ಯಜಮಾನನ ವಿಚಾರಣೆಯು ನಡೆದು ಮುಂದು ಹಾಕಲ್ಪಟ್ಟಿದೆ.

ಗತಿಸಿದ ಎಕ್ಸಿಕ್ಯೂಟಿವ್ ಇಂಜನಿಯರ್ ವೆಂಕಟಸುಬ್ಬರಾಯರನ್ನು ದೂಷಿಸಿ ಅವಮಾನಪಡಿಸಿದುದಕ್ಕಾಗಿ ಪತ್ರಿಕಾ ಲೇಖಕರಾದ ಮ|| ವಿ. ಎಸ್. ಸಂಜೀವರಾಯರಿಗೆ ಬೆಂಗಳೂರು ಡಿ|| ಮೆಜಿಸ್ಟ್ರೇಟರು 3 ತಿಂಗಳ ಸಾದಾ ಕೈದುವಾಸವನ್ನೂ 300 ರೂ. ದಂಡವನ್ನೂ ವಿಧಿಸಿದ್ದರು. ಅದರ ಮೇಲೆ ಬೆಂಗಳೂರು ಡಿಸ್ಟ್ರಿಕ್ಟ್ ಸೆಷನ್ಸ್ ಕೋರ್ಟಿಗೆ ಅಪೀಲಾಗಿದ್ದು ಅದರ ಅರ್ಧ ದಂಡವು ತಪ್ಪಿಸಲ್ಪಟ್ಟು ಕಾರಾಗೃಹವಾಸವು ಸ್ಥಿರಗೊಳಿಸಲ್ಪಟ್ಟಿದ್ದಿತು. ಹೈಕೋರ್ಟ್ ಅಪೀಲಿನಲ್ಲಿ ಜಸ್ಟಿಸ್ ಎಂ. ರಾಮಚಂದ್ರರಾಯರು ಅಪರಾಧಿಗೆ ವಯಸ್ಸಾಗಿರುವುದೆಂಬುದರ ಮೇಲೆ ಕಾರಾಗೃಹವಾಸ ಶಿಕ್ಷೆಯನ್ನು ತಪ್ಪಿಸಿ 300 ರೂ. ಅರ್ಧದಂಡವನ್ನು ವಿಧಿಸಿ, ಇದನ್ನು ಕೊಡದಿದ್ದರೆ 1 ತಿಂಗಳ ಸಾದಾ ಸಜೆಯನ್ನನುಭವಿಸಬೇಕೆಂದು ಅಪ್ಪಣೆಮಾಡಿದರು.

ರಾಜಧಾನಿಯ ದೇವರಾಜಮಾರ್ಕೆಟ್ಟು ಮ್ಯುನಿಸಿಪಲ್ ಕೌನ್ಸಿಲರಾಗಿದ್ದ ರಾವ್‌ಬಹದ್ದೂರ್ ಧರ್ಮಪ್ರಕಾಶ ಸಾಹುಕಾರ್ ಡಿ. ಬನುಮಯ್ಯನವರ ನಿಧನದಿಂದ ಅವರ ಸ್ಥಾನವು ಬರಿದಾಗಿರುವ ಪ್ರಯುಕ್ತ ಚುನಾವಣೆಯು ಬರುವ ಡಿಸೆಂಬರ್ ತಾ|| 3 ನೆಯ ಶನಿವಾರ ಬೆಳಗಿನ 8 ರಿಂದ 11 ಘಂಟೆಯವರೆಗೂ, ಮಧ್ಯಾಹ್ನ 3 ರಿಂದ ಸಾಯಂಕಾಲ 6 ಘಂಟೆಯ ವರೆಗೂ ಮ್ಯುನಿಸಿಪಲ್ ದೇವರಾಜ ಸ್ಕ್ವೇರ್ [illegible] ಶಾಲೆಯಲ್ಲಿ ನಡೆಯುವುದಾಗಿಯೂ, ಉಮೇದುವಾರರಾಗತಕ್ಕವರು ಈ ತಾ|| [illegible] ರ ಒಳಗೆ ನಮ್ಮ ಭೃತ್ಯರಿಸ್ಟ್ರರ ಪತ್ರಿಕೆಯನ್ನು ಪ್ರೆಸಿಡೆಂಟರಿಗೆ ಕಳುಹಿಸಿಕೊಡಬೇಕೆಂದೂ [illegible]

ಸ್ಪೇಯಿನ್ ರಾಜ್ಯದ ಪರಿಸ್ಥಿತಿ.

ಸ್ಪೇಯಿನ್ ರಾಜ್ಯವನ್ನು ರಾಜಕೀಯಾಂದೋಳನವು ವ್ಯಾಪಕವಾಗಿ ಬೀಸಿ ಪ್ರಜಾಪ್ರಭುತ್ವವಾಗಿ ಮಾರ್ಪಡಿಸಿದ ಬಳಿಕ ಬಂದ ಸರ್ಕಾರದ ಮೇಲೆ [illegible] ಕಳೆದ ೨೦ ತಿಂಗಳುಗಳ ಕಾಲ ಆಡಳಿತದಲ್ಲಿರುವ ಪ್ರತಿನಿಧಿಗಳು ಪರಿಪಾಲನೆಯ ಈ ಆಂದೋಳನವನ್ನು ಅಡಗಿಸುವ ಕಡೆ ಕೆಲಸ ಮಾಡುತ್ತಿದ್ದಾರೆ. ಸ್ಪೇನಿನ ಸರ್ವಸ್ವವೂ, ಶಕ್ತಿಸಾಮರ್ಥ್ಯವೂ ಇದರಿಂದ ವಿಶದವಾಗಿದ್ದರೂ ಏನೇ ಸತ್ವವೂ ಸಿಕ್ಕದಂತೆ ಮಾಡಿ [illegible]. ಈ ಬೌದ್ಧಿಕ ಸ್ವತ್ವ ನಡೆಯುತ್ತಿದ್ದ ಕಾಲದಲ್ಲಿ ಅನೇಕ [illegible]. ಸ್ಪೇಯಿನ್ ದೇಶದಲ್ಲಿ ಕಾಣಬರುವ [illegible] ಪ್ರಜಾಪ್ರಭುತ್ವದ [illegible] ಸ್ಪೇನ್ ದೇಶದ ಪರಿಪಾಲನೆಯ ಅನುಭವಗಳು ನಮಗೆ ಆದರ್ಶಪ್ರಾಯವಾಗಿರುತ್ತವೆ. ಈಗ ಭಾರತೀಯರು ಹೊಸ ರಾಜ್ಯಾಂಗ ಸಂಸ್ಕರಣಕ್ಕೆ ಸಿದ್ಧರಾಗಿರುತ್ತಾರೆ. ಇವರ ಪ್ರಯತ್ನವು ಕೊನೆಗಾಣಬೇಕಾದರೆ ಪೂರ್ವಕಾಲದಿಂದಲೂ ಆಚರಣೆಯಲ್ಲಿರುವ ನಮ್ಮ ದೇಶದ ಪರಿಣಾಮವನ್ನೂ, ಆದರ್ಶವನ್ನೂ, ಕಾರ್ಯಕ್ರಮಗಳನ್ನೂ ಈಗ ಪ್ರಯತ್ನಿಸಲ್ಪಡುತ್ತಿರುವ ರಾಜಕೀಯ ಸಂಸ್ಕಾರದೊಂದಿಗೆ ಸಮನ್ವಯ ಮಾಡಬೇಕಾಗುವುದು. ಸ್ಪೇಯಿನ್ ದೇಶದಲ್ಲಿ ಹೀಗೆ ಆ ಮೂಲ ಸಂಸ್ಕಾರವು ೧೯೩೧ ರಲ್ಲಿ ನಡೆಯಿತು. ಈ ಸಂಸ್ಕಾರವು ಆಚರಣೆಯಲ್ಲಿ ಪರಿಣಮಿಸುತ್ತದೆಯೋ ಎಂಬುದನ್ನು ನಾವು ತಿಳಿಯಬೇಕಾಗಿದೆ.

ಡಿಲ್ಯಾಂಟೋ ದೊರೆಯ ಶಿಕ್ಷ್ಯಪ್ರಭುತ್ವವೂ ನೂತನ ಪ್ರಜಾಪರಿಪಾಲನವೂ

ಯುದ್ಧವಾದಮೇಲೆ ನೂತನ ಸಂಸ್ಕಾರಗಳು ಅನೇಕ ದೇಶಗಳಲ್ಲಿ ನಡೆದಿರುವುವು. ಸ್ಪೇಯಿನ್ ದೇಶದಲ್ಲೂ ಕೂಡ ಪ್ರಜಾಪರಿಪಾಲನ ಕ್ರಮಸಾಧನೆಗಾಗಿ ಪ್ರಯತ್ನ ನಡೆದು ಅದು ಸಫಲವಾಯಿತು. ಆದರೆ ನಿರಂಕುಶ ಪ್ರಭುತ್ವ ಅಲ್ಫಾಂಸೋ ದೊರೆಯ ಸಮಯದಲ್ಲಿ ಪ್ರಬಲಿಸಿತು. ೧೯೨೩ರಲ್ಲಿ ಪ್ರೈಮೋಡಿರಿವೇರಾ ಎಂಬ ಸೇನಾನಾಯಕನು 'ಕಾರ್ಟಿಸ್' ಎಂಬ ದೇಶೀಯ ಶಾಸನ ಸಭೆಯನ್ನು ತೆಗೆದುಬಿಟ್ಟು ನಿಯಂತೃರಾಜ್ಯಾಂಗವನ್ನು ಸ್ಥಾಪಿಸಿದನು. ಇತನು ೧೯೩೦ರವರೆಗೆ ಅಧಿಕಾರದಲ್ಲಿದ್ದನು. ೧೯೩೦ ರಲ್ಲಿ ಜನರಲ್ ಬೆರಂಗೇರ್ ಎಂಬ ಸೇನಾನಾಯಕನು ಇವನನ್ನು ಕಳುಹಿಸಿಬಿಟ್ಟು ಪ್ರಭುತ್ವವನ್ನು ವಹಿಸಿಕೊಂಡನು. ಆದರೆ ನಿಯಂತೃ ರಾಜ್ಯಾಂಗ ವಿಧಾನವು ನ್ಯಾಯಸಮಾನವಾದುದಲ್ಲ ಪ್ರಬಲವಾದ ಮಾರ್ಗವು ಅವಲಂಬಿಸಲ್ಪಟ್ಟಿತು. ಈ ನಿಯಂತೃ ರಾಜ್ಯದಲ್ಲಿ ಪ್ರಭುತ್ವದ ನಿರಂಕುಶ ಪರಿಪಾಲನೆಗೆ ಹದ್ದಿಲ್ಲವು. ಪ್ರಜೆಗಳ ಅಭಿಪ್ರಾಯವನ್ನು ಪ್ರಕಟಿಸುವ ವರ್ತಮಾನ ಪತ್ರಿಕೆಗಳು ನಿಗ್ರಹಿಸಲ್ಪಟ್ಟುವು. ಎಲ್ಲ ವಿಧಗಳಲ್ಲಿ ಸ್ಪೇನ್ ದೇಶೀಯರನ್ನು ಈ ನಿಯಂತೃ ಪರಿಪಾಲನವು ಪೀಡಿಸುತ್ತ ಬಂದಿತು.

ಸ್ಪೇಯಿನ್ ದೇಶವು ಅವರಿಗೂ ಒಂದು ಕಾಲದಲ್ಲಿ ತೆಂಕ ಮಾತು ಜಗತ್ತಿಗೆ ಗೊತ್ತು. ಆರ್ಥಿಕಶಕ್ತಿಯು ಕಡಿಮೆ. ಜನಾಂಗದ ಹೆಚ್ಚಾಗಿರುವ ಕಡೆ ಅವರ ಸುಂಕ ತೆರಿಗೆಯು ಪ್ರಮಾಣದಿಂದ ಬಡವ ಜನರು ಗುಲಾಮ ಪ್ರಾಯರಾಗಿರಬೇಕಾಗಿ ಬಂದಿತು. ದೇಶದಲ್ಲಿ 'ಜನರಲ್' ಎಂಬ ನಾಗರಿಕ ಪ್ರಬೋಧದಿಂದ ಇವರು ಕಣ್ಣು ಮುಚ್ಚಿಕೊಂಡವರಾಗಿ, ಶಿಕ್ಷಣಶಕ್ತಿಯನ್ನಾಗಲಿ ತೋರಿಸಲಾರದವರಾದರು. ರಾಜನ ಮತ್ತು ನಿಯಂತೃಸೇನಾ ನಾಯಕನ ಕಾರ್ಯಕ್ರಮಗಳಿಂದ ಬೇಸತ್ತು ಸೇನೆಯ ಅಧಿಕಾರಿಗಳು, ವಿದ್ಯಾರ್ಥಿಗಳು ಗೌರವ ಶ್ರಮಗಳಲ್ಲಿ ಸೈನಿಕರು ಕಡೆಯಲ್ಲಿ 'ಮಾರ್ಷಲ್‌ಲಾ' ಎಂಬ ಸೈನಿಕ ಪರಿಪಾಲನವು ಜಾರಿಗೆ ಬಂದಿತು. ನ್ಯಾಯಮಾರ್ಗಗಳು ವಾರಿಸಲ್ಪಟ್ಟವು. ದೇಶದ ಆರ್ಥಿಕ ಸ್ಥಿತಿಯು ದಿನ ದಿನಕ್ಕೆ ಕ್ಷೀಣಿಸುತ್ತ ಬಂದಿತು. 'ಪ್ರೆಸೆಟ' ಎಂಬ ದೇಶದ ನಾಣ್ಯದ ಪ್ರಮಾಣವು ಕಡಿಮೆಯಾಯಿತು. ಸ್ಪೇಯಿನ್ ದೇಶಕ್ಕೆ ಇತರ ದೇಶಗಳಲ್ಲಿದ್ದ ಗೌರವವು ಕಡಿಮೆಯಾಯಿತು. ಪ್ರಜೆಗಳೆಲ್ಲರೂ ಈ ಪ್ರಭುತ್ವವನ್ನು ತೊಲಗಿಸಲು ಸಿದ್ಧರಾದರು. ೧೯೩೦ನೇ ಡಿಸೆಂಬರು ತಿಂಗಳಲ್ಲಿ ಸಂಪೂರ್ಣವಾದ ಆ ಮೂಲ ಸಂಸ್ಕಾರವು ಸ್ಪೇನ್ ದೇಶದಲ್ಲಿ ಪ್ರಬಲಿಸುತ್ತ ಬಂದಿತು. ಕೈಗಾರಿಕೆಯ ಜನರು ತಿರುಗಿಬಿದ್ದರು. ವಿತರಣವಾದಿಗಳೆಲ್ಲರೂ ನಿಯಂತೃ ಪ್ರಭುತ್ವವನ್ನು ತೊಲಗಿಸಲು ಕಂಕಣಬದ್ಧರಾದರು. ಕಡೆಗೆ ಸೈನಿಕರೂ ನವ ರಾಜವಂಶದಲ್ಲಿ ಕೆಲ ಹೋರಾಟಗಳನ್ನು ನಡೆಸಿದರು. ವಿದ್ಯಾರ್ಥಿಗಳ ವಿಶ್ವವಿದ್ಯಾಲಯಗಳನ್ನು ಬಿಟ್ಟುಬಿಟ್ಟು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ದೇಶದ ಸಂಸ್ಕಾರಕ್ಕಾಗಿ ವಿನಿಯೋಗಿಸಲು ಪ್ರತಿಜ್ಞೆಮಾಡಿದರು. ಕಡೆಗೆ ವಿಶ್ವವಿದ್ಯಾಲಯಗಳ ಪ್ರಜೆಗಳು ನಿಯಂತೃರಾಜ್ಯಾಂಗವನ್ನು ನಾಶಗೊಳಿಸಲು ನಿರ್ಧರಿಸಿದರು. ಪ್ರಸಂಗದಲ್ಲಿ ಅನೇಕ ಸಂಸ್ಕಾರಗಳು ಆಗಿರುತ್ತವೆ. ಆದರೆ ಸ್ಪೇಯಿನ್ ದೇಶದಲ್ಲಿ ನಡೆದ ಆ ಮೂಲ ಸಂಸ್ಕಾರಗಳು ಅತ್ಯಂತ ಶಾಂತವಾಗಿಯೂ ಆದರ್ಶಪ್ರಾಯವಾಗಿಯೂ ಪರಿಣಮಿಸಿರುವುವು. ನಡೆದ ಪ್ರಯತ್ನಗಳು ಮಾತ್ರ ಇತರರಿಗೆ ತಿಳಿಯುವಂತೆ ಗುಪ್ತವಾಗಿಟ್ಟಿದ್ದರಿಂದ ನಡೆಯುತ್ತಿತ್ತೆಂದು ಹೇಳಲಾಗುವುದಿಲ್ಲ. ನಾಲ್ಕನೇ ಅಲ್ಫಾಂಸೋ ರಾಜನು ಪದಚ್ಯುತನಾಗಿ ಸ್ಪೇನ್ ದೇಶದ ರಾಜಭಾರವನ್ನು ಬಿಟ್ಟು ಫ್ರಾನ್ಸ್ ದೇಶಕ್ಕೆ ಓಡಿಹೋಗಬೇಕಾಯಿತು. ಅಂದರೆ ನಾವು ಸ್ಪೇನ್ ದೇಶಕ್ಕೆ ಸಿಕ್ಕಿರುವ ಬಹುಮಾನವೆಂದರೆ ಅಲ್ಫಾಂಸೋ ಎಂಬ ಒಬ್ಬ ದೊರೆಯನ್ನ, ಆದರೆ ನಾಳೆಯ ದಿವಸ ಸ್ಪೇನ್ ದೇಶದ ರಾಜಕೀಯ ವಿಪ್ಲವವು ಹೇಗೆ ಆಗುವುದು ಎಂದು ತಿಳಿದುಕೊಂಡಿರುವೆವು. ಇಂತಹ ಸಂದಿಗ್ಧ ಸಮಯದಲ್ಲಿ ಆ ಈ ದೇಶದವರು ಶಾಂತಿಯುತವಾದ ರಾಜಕೀಯಾಂದೋಳನವನ್ನು ನಡೆಸಿ ನಲ್ಲಿ ಬಹಳ ಜಾಗರೂಕತೆಯಿಂದ ನಡೆದುಕೊಂಡರು. ಎಷ್ಟೋ ಅಷ್ಟು ಕರವಾಗಿರುತ್ತದೆ. ಇಂತಹ ಶಾಂತಿಯುತವಾದ ಆ ಮೂಲ ಸಂಸ್ಕಾರವು ಇಟಲಿಯನ್ನೆಂದರೂ ಪ್ರಪಂಚದಲ್ಲಿ ನಡೆದಿರಲಿಲ್ಲ. ಒಂದು ಪ್ರಾಣಿಗಾದರೂ ಹಾನಿಯುಂಟಾಗಲಿಲ್ಲ. ಸ್ಪೇಯಿನ್ನು ದೇಶದಲ್ಲಿ ಹೊಸ ಪ್ರಜಾಪ್ರತಿನಿಧಿ ಸ್ಥಾಪಿಸಲ್ಪಟ್ಟಿತು.

ಪ್ರಜಾಪ್ರತಿನಿಧಿ ಪರಿಪಾಲನವೂ, ಪ್ರೆಸಿಡೆಂಟ್ ಅಜಾನನ ಆಡಳಿತಕ್ರಮವೂ

ಅಜಾನನಾಯಕರು ಪ್ರಸಿದ್ಧರಾಗಿದ್ದು ಹೊಸ ಮಂತ್ರಿಮಂಡಲವನ್ನು ನಿಯಮಿಸಿದರು. ಇವರ ನೂತನ ಮಂತ್ರಿಮಂಡಲವು ಪ್ರಜಾಪ್ರಭುತ್ವ ಸ್ಥಾಪನೆಯ ರಾಜ್ಯಾಂಗವನ್ನು ಜಾರಿಗೆ ತಂದು ಸ್ಪೇನ್ ದೇಶದ ಪರಿಸ್ಥಿತಿಯ ಉತ್ತಮಗೊಳಿಸಲು ತೊಡಗಿದರು. ಅಜಾನ ಪ್ರಸಿದ್ಧರು ಮಹತ್ತರವಾದ ಕಾರ್ಯಕ್ರಮವನ್ನು ನಿಜಗೊಳಿಸಬೇಕಾಗಿದೆ. ಕಳೆದ ೨೦ ತಿಂಗಳ ಚರಿತ್ರೆಯನ್ನು ನೋಡಿದರೆ ಇವರು ಬಹಳ ಮಟ್ಟಿಗೆ ಜಯವನ್ನು ಹೊಂದಿರುವುದಾಗಿ ತಿಳಿಯಬರುತ್ತದೆ.

ಮೊದಲಲ್ಲಿ, ಅಜಾನಾ ಮಂತ್ರಿಮಂಡಲದವರು "ಪ್ಲೆಬಿಸೈಟು" ಎಂಬ ವಿಧಾನದಿಂದ ದೇಶದಲ್ಲಿ ಚುನಾವಣೆಗೆ ಏರ್ಪಡಿಸಿದರು. ಈ ಚುನಾವಣೆಯಲ್ಲಿ ಸ್ಥಾನಿಕ ವರ್ಗಗಳಿಗೂ ಮ್ಯಾಡ್ರಿಡ್ ನಗರದಲ್ಲಿರುವ ದೇಶೀಯ ಶಾಸನ ಸಭೆಗಳಿಗೂ ಸಭ್ಯರನ್ನು ಆರಿಸಿದರು. ಹಕ್ಕು ಹಕ್ಕುಗಳನ್ನು ಸಮರ್ಥಿಸಿಕೊಳ್ಳಲಿಕ್ಕಾಗಿ ಪ್ರಜೆಗಳು ಚುನಾಯಿಸಿಕೊಂಡರು. ಈ ರಾಜಕೀಯ ವರ್ಗಗಳ ಅನುಮತಿ ಸಂದೇಹದ ಮೇಲೆ ದೇಶೀಯ ಕಾರ್ಯಕ್ಕಗಳನ್ನು ನಿರ್ಧರಿಸಿದರು. ೨೧ ವರ್ಷ ವಯಸ್ಸು ತುಂಬಿದ ಪ್ರತಿಯೊಬ್ಬ ಮನುಷ್ಯನಿಗೂ ಓಟಿನ ಹಕ್ಕನ್ನು ಕೊಟ್ಟರು. ಇದೇ ವಿಧವಾಗಿ ಪ್ರತಿ ಸ್ತ್ರೀಗೂ ಕೂಡ ಓಟಿನ ಹಕ್ಕನ್ನು ಕೊಡಲಾಯಿತು. ರೋಮನ್ ಕೆಥೊಲಿಕ್ ಜನಾಂಗದವರ ಹಕ್ಕುಗಳನ್ನು ಬಿಟ್ಟುಕೊಟ್ಟು ಸ್ತ್ರೀಯರು ಕೂಡ ಸರ್ಕಾರದ ಕೆಲಸಗಳಿಗೆ ಅರ್ಹರಾಗುವಂತೆ ಏರ್ಪಡಿಸಿದರು. ಅನೇಕ ವಿಧದಲ್ಲಿ ದೇಶದ ಪ್ರಜೆಗಳಿಗೆ ಸಂಪೂರ್ಣವಾದ ಹಕ್ಕುಗಳನ್ನು ನಿಯಮಿಸಿದರು.

ಆರ್ಥಿಕ ವಾಣಿಜ್ಯಾದಿ ವಿಷಯಗಳಲ್ಲಿ ಇವರು ಅನೇಕ ಬದಲಾವಣೆಗಳನ್ನು ಮಾಡಿರುತ್ತಾರೆ. "ಸಿಂಡಿಕೇಟಿಸಮ" ಎಂಬ ಹೊಸ ಕಾರ್ಯಕ್ರಮವನ್ನು ಇವರು ಅನುಸರಿಸಿ ದೇಶದಲ್ಲಿ ಸಹಕಾರ ಭಾವನೆಯನ್ನು ಹೆಚ್ಚಿಸಿದರು. ಅನೇಕ ವಾಣಿಜ್ಯಾದಿ ಸಂಸ್ಥೆಗಳನ್ನು ವಶಪಡಿಸಿಕೊಂಡು ಅಭಿವೃದ್ಧಿ ಸ್ಥಿತಿಗೆ ತಂದು ಅವುಗಳಿಂದ ಬಂದ ಲಾಭವು ಪ್ರಜೆಗಳಿಗೆ ದೊರಕುವಂತೆ ಮಾಡಿದರು. ಬ್ಯಾಂಕುಗಳನ್ನು ವೃದ್ಧಿಗೊಳಿಸಿ ಬಡಜನಾಂಗಗಳಿಗೆ ಸಹಾಯವಾಗುವಂತೆ ನಿಯಮಿಸಿದರು. ಇತರ ದೇಶಗಳೊಡನೆ ವ್ಯಾಪಾರವನ್ನು ಅಭಿವೃದ್ಧಿಗೊಳಿಸಲು, ಸುಂಕಗಳ ರಾಶಿಗಳನ್ನೂ ಪರಿಣಾಮಗಳನ್ನೂ ತಕ್ಕರೀತಿಯಲ್ಲಿ ಬದಲಾಯಿಸಿದರು. ದೇಶದ ನಾಣ್ಯಗಳ ವಿಧಾನವನ್ನೂ, ಓಟುಗಳ ಪ್ರಸಾರವನ್ನೂ ಹೀನಸ್ಥಿತಿಯಿಂದ ತಪ್ಪಿಸಿ ಅಭಿವೃದ್ಧಿಗೊಳಿಸಿದರು. ಎಲ್ಲ ವಿಧಗಳಲ್ಲೂ ದೇಶದ ಆರ್ಥಿಕ ಪಟುತ್ವವನ್ನು ಬಲಪಡಿಸಿದರು.

ರಾಜನ ಪರಿಪಾಲಿಸುತ್ತಿದ್ದ ಕಾಲಕ್ಕಿಂತ ಈಗ ಸ್ಪೇನ್ ದೇಶಕ್ಕೆ ರಾಜಕೀಯವಾಗಿ ವಿಶೇಷ ಗೌರವವುಂಟಾಗಿದೆ. ನಾನಾಜಾತಿ ಸಭೆಯಲ್ಲಿ ಸ್ಪೇನ್ ದೇಶದ ಪ್ರತಿನಿಧಿಗಳು ವಿಶೇಷವಾದ ಅನುಭವವನ್ನೂ ಯಶಸ್ಸನ್ನೂ ಸಂಪಾದಿಸಿದರು. ಮುಖ್ಯವಾಗಿ ಸ್ವದೇಶಿಯಾಗಿ ನಾಯಕನು ಆಯುಧ ವಿಸರ್ಜನ ಸಭೆಯಲ್ಲಿ ಪ್ರತಿಭೆಯನ್ನು ತೋರಿಸಿದನು. ಇತರ ರಾಷ್ಟ್ರಗಳೊಡನೆ ಸಹ ಸಂಬಂಧ ಬಾಂಧವ್ಯಗಳನ್ನು ಬಲಪಡಿಸಿ ವೃದ್ಧಿಗೊಳಿಸಿತು. ಇಟಲಿಯೊಡನೆ ಯೂ, ಪೋರ್ಚುಗಲ್‌ನೊಡನೆಯೂ ಇತ್ತೀಚೆಗೆ ನಡೆದ ಸಂಧಿಯೊಡಂಬಡಿಕೆಗಳಿಂದ ಸ್ಪೇನ್ ದೇಶಕ್ಕೆ ಮಧ್ಯಧರಾ ಸಮುದ್ರ ಪ್ರಾಂತದಲ್ಲಿ ಪ್ರಮುಖ್ಯತೆಯು ಲಭಿಸಿತು. ಇತ್ತೀಚೆಗೆ, ಎಂದರೆ ವರ್ತಮಾನದಲ್ಲಿ ಹೀಗೆ ಸ್ಥಿತಿಯಲ್ಲಿದ್ದ ಸ್ಪೇನ್ ದೇಶವು ಈಗ ಪ್ರಪಂಚದ ಪ್ರಮುಖ್ಯ ದೇಶಗಳಲ್ಲಿ ಒಂದಾಗಿ ಪರಿಣಮಿಸಿದೆ. ಇಂತಹ ಪ್ರಾಮುಖ್ಯತೆ ಪ್ರಜಾಪ್ರತಿನಿಧಿ ಸಂಸ್ಥೆಗಳನ್ನು ಸುಸ್ಥಿರವಾಗಿ ಉಂಟಾಗಿದೆಯೆಂದು ಹೇಳುವಲ್ಲಿ ಸಂದೇಹವಿಲ್ಲ.

ರಾಜಕೀಯ ವಿಪ್ಲವವೂ ಪ್ರಜಾಪ್ರತಿನಿಧಿ ಸಂಸ್ಥೆಗಳ ಪಟುತ್ವವೂ

ಈ ಪ್ರಕಾರವಾಗಿ ಉನ್ನತಿಯ ಕಡೆಗೆ ಬಂದಿದ್ದಾಗ್ಯೂ ಸ್ಪೇಯಿನ್ ದೇಶದಲ್ಲಿ ಸಂಪೂರ್ಣವಾದ ಶಾಂತಿ ಮಾತ್ರ ಉಂಟಾಗಲಿಲ್ಲ. ಈಚೆಗೆ ಬಂದ ವರ್ತಮಾನದ ಪ್ರಕಾರ ಸ್ಪೇಯಿನಿನಲ್ಲಿ ಪುನಃ ರಾಜನ ಪರಿಪಾಲನವನ್ನು ಸ್ಥಾಪಿಸುವುದಕ್ಕಾಗಿ ಪ್ರಯತ್ನಗಳು ನಡೆದಿರುವುವೆಂದು ತಿಳಿಯಬರುತ್ತದೆ. ಸ್ಪೇನ್ ಜನಸ್ವತಂತ್ರ ಮೇಲೆ ಅಜಾನ ಮಂತ್ರಿಮಂಡಲದವರು ಈ ಪ್ರತಿಭಟನೆಯನ್ನು ಅಡಗಿಸಿದಂತೆ ಗೊತ್ತಾಗುತ್ತದೆ. ತಿರುಗಿಬಿದ್ದ ಬಹಳ ಗುಂಪಿನ ಸೇನಾನಾಯಕರನ್ನು, ರಾಜನ ಪೂರ್ವದ ಅನುಚರರೂ ಶಿಕ್ಷಿಸಲ್ಪಟ್ಟರು. ಹೀಗೆ ಇದರ ಕಾರಣವೇನು? ಮತ್ತು ಇದರಿಂದ ಏನು ಎಂಬುದನ್ನು ವಿಚಾರಿಸಬೇಕಾಗಿದೆ.

ಸ್ಪೇಯಿನ್ ದೇಶದಲ್ಲಿ ರಾಜಕೀಯ ಸಂಸ್ಕಾರಗಳು ನಡೆದಿದ್ದರೂ ಪುನಃ ಪ್ರಜೆಗಳಲ್ಲಿ ಸಂಪೂರ್ಣವಾದ ಮನಸ್ಸಿನ ಸಂಸ್ಕಾರವು ಮಾತ್ರ ಆಗಲಿಲ್ಲವೆಂದು ನಾವು ಊಹಿಸಬಹುದು. ಏಕೆಂದರೆ, ಬಹುಕಾಲದಿಂದಲೂ ನಡೆದು ಬಂದಿರುವುದು ಒಂದೇ ವೇಳೆಗೆ ಬದಲಾಯಿಸುವುದು ಸಾಧ್ಯವಿಲ್ಲ. "ದೊರೆಯು ದೇವಾಂಶಸಂಭೂತ" ಎಂದು ಸ್ಪೇನಿನಲ್ಲಿ ಅನೇಕ ಜನರಿಗೆ ಇಂದಿಗೂ ನಂಬಿಕೆಯಿದೆ. ಇಂತಹ ಜನರಿಗೆ ಹೊಸದಾದ ಪ್ರಜಾಪ್ರತಿನಿಧಿ ಪರಿಪಾಲನವು ಸ್ಪಷ್ಟವಾಗಿ ತಿಳಿಯಲು ಕಾಲಹಿಡಿಯುವುದು. ಇದರ ಮೇಲೆ ನೋಡಲು ರಾಜಪರಿಪಾಲನದಲ್ಲಿ ಅನೇಕ ಮಂದಿಗೆ ಪದವಿಗಳು, ಅಧಿಕಾರವು ದೊರಕುತ್ತಿದ್ದು ಇಂತಹವರಿಗೆ ಈಗಿನ ಪರಿಪಾಲನಾ ಕ್ರಮದಲ್ಲಿ ಸ್ಥಳವಿಲ್ಲದಿರುವುದರಿಂದ ಅವರೆಲ್ಲರೂ ಮುಳುಗಿಕೊಳ್ಳುವುದು ಸಹಜವೆ. ಹೀಗೆ ಪ್ರತಿಭಟನೆ ನಡೆಸಿ ಈಗ ಬಿಡುಗಡೆಯಾಗಿದ್ದು ಅವರಿಗೆ ಹೊರತಾದರೆ ಅಲ್ಫಾಂಸೋ ದೊರೆಯನ್ನು ಪುನಃ ಸಿಂಹಾಸನದ ಮೇಲೆ ಕುಳ್ಳಿರಿಸಲು ಪ್ರಯತ್ನಿಸಿದರು. ಅಲ್ಫಾಂಸೋ ದೊರೆಯು ಈಗ ಫ್ರಾನ್ಸ್ ದೇಶದಲ್ಲಿ ಇರುವುದರಿಂದ ಈ ಪ್ರಯತ್ನಗಳ ಸಂಬಂಧ ಇಲ್ಲವೆಂದು ರಾಯಿಟರ ಮುಖಾಂತರ ಪ್ರಸಂಗಗಳಲ್ಲಿ ತಿಳಿಯಬರುತ್ತದೆ. ಇದರಿಂದ ತಿಳಿಯಬರುವುದೇನೆಂದರೆ, ಪ್ರಜಾಪ್ರತಿನಿಧಿ ಸ್ಥಾಪಿತ ಸ್ಪೇಯಿನ್ ದೇಶದಲ್ಲಿ ರಾಜಪರಿಪಾಲನವನ್ನು ಸ್ಥಾಪಿಸುವ ಪ್ರಯತ್ನವು ಸಫಲವಾಗದೆ ಆ ಮೂಲ ಸಂಸ್ಕಾರಕ್ಕೆ ಸಂಪೂರ್ಣ ಜಯವಾಗುವಂತೆ ತಿಳಿಯಬರುತ್ತದೆ. ಇದಲ್ಲದೆ, ಅಜಾನಾ ಮಂತ್ರಿಮಂಡಲದವರು ನಾನಾ ವಿಧದಲ್ಲಿ ದೇಶದ ಪರಿಪಾಲನವನ್ನು ಅಭಿವೃದ್ಧಿಗೆ ತರುತ್ತಾರೆಂದು ಆಶಿಸಬಹುದಾಗಿದೆ.

ಸ್ವೀಕಾರ

ಶ್ರೀ ವೀರಸಂಗಪ್ಪನವರ ಅಸ್ಪೃಶ್ಯತಾಂಬುಜಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲಿ ನೆರೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸುತ್ತೇವೆ.—ಸಂ.

ನರಸಿಂಹರಾಜಪುರದ ಮಲ್ಲಿಕಾರ್ಜುನ ಸ್ವಾಮಿ ಸ. ಶಾಂತಪ್ಪಶೆಟ್ಟರ ೮೦ನೆಯ ವರ್ಷದ ಶಾಂತಿಯುತ್ಸವ ಸಮಾರಂಭದಲ್ಲಿ ೨ ರೂ. ಗಳು ಇಂಗಳಗೊಂದಿ ಮ. ೭. ಚೆಟ್ಟಿಕೆರೆಸ ಸ್ವಾಮಿ ನಿವರಿಂದ.

ಪತ್ರವ್ಯವಹಾರ

ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಜವಾಬ್ದಾರರಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ವಿವಾಹಾದಿ ಶುಭಕಾರ್ಯಗಳಿಗೆ ಪ್ರಶಸ್ತಕಾಲ.

ಮುಂದೆ ಬರುವ ಶ್ರೀಮುಖ ಸಂವತ್ಸರದ ಚೈತ್ರ ವೈಶಾಖ ಮಾಸಗಳಲ್ಲಿ ಶುಕ್ರನು ಅಸ್ತನಾಗಿದ್ದು ಜ್ಯೇಷ್ಠ ಶುದ್ಧದಲ್ಲಿ ಉದಯಿಸುವುದರಿಂದ ಆ ಎರಡು ಮಾಸಗಳ ಚೌಲ, ಉಪನಯನ, ವಿವಾಹ, ನೂತನ ಗೃಹಾರಂಭ ಮತ್ತು ಪ್ರವೇಶ ಇತ್ಯಾದಿ ಶುಭಕಾರ್ಯಗಳನ್ನು ಮಾಡಲು ಪ್ರಶಸ್ತವಲ್ಲ. ಇವುಗಳನ್ನು ಬಿಟ್ಟು ಮುಂದೆ ಪ್ರಶಸ್ತಕಾಲಗಳಲ್ಲಿ ಮಾಡಬಹುದು. ಬೆಳಗಾಂ ಡಿ. ಹುಲಿಯ ಪಂಚಪಾಚಾ ಬೃಹನ್ಮಠದ ಸಿದ್ಧಾಂತಿಗಳು.

ನೆಲಮಂಗಲ ಟೌನಿನ ವಿದ್ಯಾಭ್ಯಾಸ ವಿಚಾರ

ಈ ಊರಿನ ಕನ್ನಡ ಪ್ರೈಮರಿ ಸ್ಕೂಲಿಗೆ ಈಗ ಹಾಲಿ ಇರುವ ಹೆಡ್ಮಾಸ್ಟರು ರಾಮನಾಥಶಾಸ್ತ್ರಿಗಳು ವರ್ಗವಾಗಿ ಬಂದು ಸುಮಾರು ೩ ವರುಷಗಳಾಯಿತು. ಎಲ್ಲಾ ಉಪಾಧ್ಯಾಯರೂ ಒಗ್ಗಟ್ಟಾಗಿ ತುಂಬಾ ಮೇಹನತ್ತಿನಿಂದ ಕೆಲಸಮಾಡುತ್ತಿರುವುದರಿಂದ ಈ ಸ್ಕೂಲ್ ಈ ಪಾಂತದಲ್ಲೇ ಒಂದು ಮಾದರಿ ಶಾಲೆಯಾಗಿರುತ್ತದೆಂದು ಇಲಾಖೆಯ ಎಲ್ಲಾ ಅಧಿಕಾರಿಗಳಿಂದಲೂ, ಜನಗಳಿಂದಲೂ, ಹೊಗಳಿಸಿಕೊಳ್ಳುತ್ತಿದೆ. ಬಾಲಕರ ಸಂಖ್ಯೆಯು ೩ ವರುಷಗಳ ಕೆಳಗೆ ೧೫೦ ಇದ್ದದ್ದು ಈಗ ಸುಮಾರು ೨೫೦ ರ ವರೆಗಿರುವೆ. ಇಷ್ಟು ಅಭಿವೃದ್ಧಿಯಲ್ಲಿದ್ದಾಗ್ಯೂ ಈ ಸ್ಥಳದ ಮಹನೀಯರೊಬ್ಬರು ಈ ಸ್ಕೂಲಿನ ಉಪಾಧ್ಯಾಯರುಗಳ ವಿಚಾರದಲ್ಲಿ ಇಲ್ಲದ ಸಲ್ಲದ ದೂರುಗಳನ್ನು ಮಾಡಿ ಮೇಲ್ಪಟ್ಟ ಅಧಿಕಾರಿಗಳಿಗೆ ಅರ್ಜಿಗಳನ್ನು ಕಳುಹಿಸುವಂತೆ ವರ್ತಮಾನ ಕೇಳುತ್ತಿದೆ. ಇಲಾಖಾ ಅಧಿಕಾರಿಗಳು ಇಂಥಾ ಅರ್ಜಿಗಳ ವಿಷಯದಲ್ಲಿ ಗಮನ ಕೊಡತಕ್ಕದ್ದೆಂದೂ, ಈ ಅರ್ಜಿಯು, ಪಾಠಶಾಲೆಯ ಅಭಿವೃದ್ಧಿಯ ವಿಷಯದಲ್ಲಿ ಬರೆಯಲ್ಪಟ್ಟಿರುವುದೇ ಎಂಬುದನ್ನು ಅಧಿಕಾರಿಗಳು ಕೂಲಂಕಷವಾಗಿ ವಿಚಾರಿಸದೆ ಇಲಾಖೆಯವರು ತೋರಬೇಕಾಗಿದೆ. ಈ ಪಾಠಶಾಲೆಯ ಉಪಾಧ್ಯಾಯರುಗಳು ಇಂಥಾ ಅರ್ಜಿಗಳ ವಿಚಾರದಲ್ಲಿ ಗಮನಕೊಡದೆ ತಮ್ಮ ಕೆಲಸವನ್ನು ಎಂದಿನಂತೆಯೇ ನೆರವೇರಿಸುವರೆಂದು ನಂಬಿದೆ. ಈ ಗ್ರಾಮದ ಮಿಡಲ್ ಸ್ಕೂಲು ಉತ್ತಮರೀತಿಯಿಂದ ಕೆಲಸಮಾಡುತ್ತಿದೆ. ಆದರೆ ಕಟ್ಟಡವು ಸಾಲದು. ಸಂಸ್ಕೃತ ತರಗತಿಗಳು ನಡೆಯುತ್ತಿವೆ. ಬಾಲಕರ ಕೆಳಗೆ ಬೆಳಗು ಮತ್ತುಗಳಲ್ಲಿ ನಡೆಸಲ್ಪಡುತ್ತವೆ. ಇಲಾಖೆಯವರು ಕೂಡಲೆ ಕಟ್ಟಡವನ್ನು ಒದಗಿಸಬೇಕಾಗಿ ಪ್ರಾರ್ಥನೆ. ಈ ಗ್ರಾಮದ ಉರ್ದು ಬಾಯ್ಸ್ ಸ್ಕೂಲ್ ಹೆಡ್ಮಾಸ್ಟರ್ ಮಿ. ರಹಮಾನ್ ಸಾಹೇಬರು ಇಲ್ಲಿಗೆ ಬಂದು ಸುಮಾರು ೩ ವರುಷಗಳಾಯಿತು. ಇವರು ಬಂದಮೇಲೆ ಸ್ಕೂಲು ಹೀನಸ್ಥಿತಿಗೆ ಬಂದಿದೆ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಯಾಗುತ್ತಾ ಬರುತ್ತಿದೆ. ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲೂ ತೇರ್ಗಡೆಯಾಗುವ ವಿದ್ಯಾರ್ಥಿಗಳ ಸಂಖ್ಯೆ ಕೇವಲ ಕಡಿಮೆಯಾಗಿದೆ. ಆದರೂ ಈ ಗ್ರಾಮದಲ್ಲಿದ್ದು ಕೆಲಸ ಮಾಡಲು ಇಷ್ಟವಿಲ್ಲ, ಅನೇಕವೇಳೆ ವರ್ಗಾಯಿಸಿಕೊಳ್ಳಬೇಕೆಂದು ಇಲಾಖಾ ಅಧಿಕಾರಿಗಳನ್ನು ಕೇಳಿಕೊಂಡಾಗ್ಗೂ ವರ್ಗಾಯಿಸಲಿಲ್ಲ. ಇದರಿಂದ ನಮ್ಮ ಮಕ್ಕಳ ವಿದ್ಯಾಭಿವೃದ್ಧಿಗೆ ತುಂಬಾ ತೊಂದರೆಯಾಗಿದೆ. ಆದ್ದರಿಂದ ಇಲಾಖಾ ಅಧಿಕಾರಿಗಳು ಅವರನ್ನು ವರ್ಗಾಯಿಸುವಲ್ಲಿ ಅವರಿಗೆ ಅನುಕೂಲ ಮಾಡಿಕೊಟ್ಟಂತೆಯೂ, ಪಾಠಶಾಲೆಯ ಅಭಿವೃದ್ಧಿಯನ್ನು ಬಯಸಿದಂತೆಯೂ ಆಗುತ್ತದೆ.

ಎಂ. ಅಬ್ದುಲ್ ಅಜೀಜ್‌ಷರೀಫ್
ಅ॥ ಬೆಂಚ್ ಮ್ಯಾಜಿಸ್ಟ್ರೇಟ್, ನೆಲಮಂಗಲ.

ಶೋಕಸಭೆಯು.

ಕಾಶೀ ಶ್ರೀ ಜಯದೇವ ಗುರುಕುಲದಲ್ಲಿ ತಾ॥ ೨೬-೧೦-೩೨ ನೇ ಮಧ್ಯಾಹ್ನಕ್ಕೆ ಸಭೆಯು ಸೇರಿ ಕೈಲಾಸವಾಸಿಗಳಾದ ಅರಟಾಳ ಸಾಹೇಬರ ಹಾಗೂ ಗಂಗಪ್ಪನವರ ಮತ್ತು ಶೆಟ್ಟರ ದೇಸಾಯಿಯವರ ಬಗ್ಗೆ ಕೆಳಗೆ ಕಂಡಂತೆ ಶೋಕಸ್ವಾವಗಳು ಓದಲ್ಪಟ್ಟು ಅವರ ಆತ್ಮಶಾಂತಿಗಾಗಿ ಪ್ರಾರ್ಥನ ನಾಮಸ್ಮರಣೆ ಓದಲ್ಪಟ್ಟವು. ಸಮಾಜದಲ್ಲಿ ಮುಂದಾಳುಗಳಾದವರು ಮುಂದಿನ ಸಂತತಿಗೆ ದಾರಿಯ ತಂದೆಗಳೆಂತೆಯೇ ಮಾನ್ಯರು. ಅವರ ಕಾರ್ಯಗಳ ಫಲವು ಸಮಾಜದವರ ನಾಡಿನಾಡಿಗಳಲ್ಲಿ ಸೇರಿರುವವು. ಅವರು ಮಾಡಿದ ಕಾರ್ಯಗಳು ನಮ್ಮನ್ನು ಉದ್ಧರಿಸಲಿಕ್ಕಾಗಿ ಒಯ್ಯುವವು. ಅವರೆಲ್ಲರೂ ಏಳಿಗೆಯನ್ನು ಹೊಂದಿರುವವರಿಂದ ಈಗಿನ ಸಣ್ಣ ಸಂಸ್ಥೆಯು ಸ್ಪಷ್ಟ, ಸಮಾಜಸೇನೆಗಳಲ್ಲಿ ಏಳಿಗೆಯನ್ನು ಹೊಂದುತ್ತಿರುವವು. ಮುಂತಾಗಿ ನಾಲ್ಕು ಜನರು ಹೇಳಿ ತಮ್ಮ ಶೋಕವನ್ನು ಸ್ಪಷ್ಟಪಡಿಸಿಕೊಂಡು ದುಃಖಾಶ್ರುಗಳಿಂದ ಸಭೆಯನ್ನು ನೆರವೇರಿಸಿದರು. ಪ್ರಸ್ತಾವನೆಗಳು.—

ಈ ಸುಧಾರಣೆಯ ಯುಗದಲ್ಲಿ ವೀರಶೈವ ಸಮಾಜ ಸುಧಾರಣೆ ಮಾಡುವದನ್ನೇ ತಮ್ಮ ಕರ್ತವ್ಯವನ್ನಾಗಿಟ್ಟುಕೊಂಡು ಸಮಾಜದಲ್ಲಿ ದೊಡ್ಡ ಕೆಲಸ ಮಾಡಿದವರಾದ ರಾವ ಸಾಹೇಬರನ್ನು, ಶಿರಸಂಗಿ ಫಂಡು ಮತ್ತು ಧಾರವಾಡ ಲಿಂಗಾಯತ ಫಂಡುಗಳನ್ನು ಸಾ ಪಿಸಿ ಸಮಾಜದೇಳಿಗೆಯನ್ನು ಬಯಸಿ

ಅಮೇರಿಕೆಯ ಎಣ್ಣೆ ಕಂಪೆನಿ (ಮದ್ರಾಸು)

[4—8]

ನಮ್ಮ ಕಂಪೆನಿಯ ಸೀಮೆಯೆಣ್ಣೆ, ಪೆಟ್ರೋಲು, ಲೂಬ್ರಿಕೇಟಿಂಗ್ ಎಣ್ಣೆ ಚೆರವಿ ವಗೈರೆ ಕೆಲ್ಲರಗು ಪೆಟ್ರೋಲಿಗೆ ಸಂಬಂಧಪಟ್ಟ ಪದಾರ್ಥಗಳನ್ನು ಮಾರಲು ಬೆಂಗಳೂರು ಸಿಟಿ ಅವಿನ್ಯೂ ರೋಡಿನಲ್ಲಿರುವ ಮೆ॥ ಪಿ. ಪಿ. ಭದ್ರಪ್ಪನವರನ್ನು ಮೈಸೂರು ಮತ್ತು ಕೊಡಗು ಸೀಮೆಗಳಿಗೆ ಏಜಂಟರನ್ನಾಗಿ ನಿಯಮಿಸಿದೆ. ಸಬ್ ಏಜಂಟರಾಗಿರಲಿಚ್ಛೈಪಡುವವರು ಬೆಂಗಳೂರು ಸಿಟಿ ಶ್ರೀ ನರಸಿಂಹರಾಜ ರೋಡಿನಲ್ಲಿರುವ 170-171 ನೇ ನಂಬರಿನ ನಮ್ಮ ಆಫೀಸಿಗೆ ಬರೆದುಕೊಳ್ಳತಕ್ಕದ್ದು.

ದಿ ಅಮೆರಿಕನ್ ಆಯಿಲ್ ಕಂಪೆನಿ.

ಸ್ತ್ರೀಜಾತಿಯನ್ನು ಸ್ವಾತಿಸಿ ಪಟ್ಟಿಸಿದ್ದ್ಯಯನ್ನು ಮಾಡಿದ ದಿಟ್ಟ ಶ್ರೀ ರುದ್ರಗೌಡ ಅವರೂರ ಇವರು ಶ್ರೇಷ್ಠ ವಾಣಿಗಳಾದರೆಂದು ಕೇಳಿ ಯಾವ ಸಾರ್ವಜನಿಕನು ದುಃಖ ಪಡದಿರ್ಲ? ಈ ದುಃಖವು ಅಪಾರ, ಮಾಡಿದ ಸೇವೆ ಅಸಾಧಾರಣ. ಇಂಥ ವ್ಯಕ್ತಿಯನ್ನು ನಾಡಿಯವರು ಕಳೆದುಕೊಂಡಿದ್ದಾರೆ. ಇವರ ಆತ್ಮಕ್ಕೆ ಶಾಂತಿಯನ್ನೂ ಇವರ ಮನೆಯವರಿಗೆ ದುಃಖವನ್ನು ಸಹಿಸುವ ಶಕ್ತಿಯನ್ನೂ ಕೊಡಲೆಂದು ಆ ಪರಮಾತ್ಮನನ್ನು ಪ್ರಾರ್ಥಿಸುತ್ತೇವೆ.

ಸ್ತ್ರೀಜಾತಿಯ ಸ್ಕೂಲ್ ಯೋಜನೆಯ ಶ್ರೀ ... ಗಂಗಮ್ಮನವರು ತಾ॥ 6-10-32 ರಲ್ಲಿ ಶಿವಾಧೀನರಾದರೆಂದು ಕೇಳಿ ಶೋಕಿಸುವ ಸಮಾಚಾರವು ... ಇವರು 1 ಲಕ್ಷ ದಾನವಾಗಿ ಸೊಸೈಟಿ ಸಂಸ್ಥೆಗೆ ... ಶ್ರೀಮತಿ ಗಂಗಮ್ಮನವರು 50 ಸಾವಿರ ದಾನಮಾಡಿ ... ಯನ್ನು ಸ್ವೀಕರಿಸಿ ಸಿದ್ಧತೆಯನ್ನು ಪ್ರಕಾಶಗೊಳಿಸಿದವರು. ಇವರು 5, 6 ಲಕ್ಷದ ಶ್ರೀಮಂತರಿದ್ದರೂ ಸೇವಕರಲ್ಲಿಯೂ, ದೀನರಲ್ಲಿಯೂ, ಭಕ್ತರಲ್ಲಿಯೂ ದಯಾಪರರಿದ್ದಲ್ಲದೆ ಸರಳಸ್ವಭಾವದವರಾಗಿ ಇದ್ದರು. ಇವರು ಕಾಲೇಜಿನ ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆಯೇ ಕಾಣುತ್ತಿದ್ದರು. ಇನ್ನಲ್ಲಿ ಈ ಪುಣ್ಯವಂತೆ ... ಪರಮಾತ್ಮನು ಆವರ ಆತ್ಮಕ್ಕೆ ಶಾಂತಿಯನ್ನೂ ಅವರ ಕುಟುಂಬದವರಿಗೆ ಸಮಾಧಾನವನ್ನೂ ಕೊಡಲೆಂದು ಆ ಮಹಿಮನನ್ನು ಪ್ರಾರ್ಥಿಸುತ್ತೇವೆ.

ಬೆಳಗಾವಿ ಜಿಲ್ಲೆಯ ಶ್ರೀಮಂತ ಸರ್ ದೇಸಾಯಿ ಸಂಗಪ್ಪನವರು ... ಇವರು ತಾ॥ 17-10-32 ರಲ್ಲಿ ಶಿವಧಾಮವನ್ನೈದಿದರೆಂದು ಕೇಳಿ ಯಾವ ಸಮಾಜವು ದುಃಖಿತವಾಗಲಿಕ್ಕಿಲ್ಲ? ... ಇವರು ಕಾಯಿದೆ ಕೌನ್ಸಿಲಿನಲ್ಲಿ 5-6 ವರ್ಷಗಳವರೆಗೆ ರಾಜಕೀಯ ಚಳುವಳಿಯಿಂದ ದೇಶಕ್ಕೆ ಹಿತವನ್ನು ಮಾಡಿರುವರು. ಇವರು ಗುರುಹಿರಿಯರಲ್ಲಿ ಶ್ರದ್ಧಾಳುಗಳೂ, ದೀನರಲ್ಲಿ ದಯಾಳುಗಳೂ, ಜನಸಾಮಾನ್ಯರಲ್ಲಿ ಪ್ರೇಮಳರೂ ಆಗಿದ್ದರು. ಈ ಸಮಗ್ರ ಗುಣಗಳಿದ್ದಲ್ಲಿ? ... ನಾವು ಸರ್ ದೇಸಾಯಿ ಸಂಗಪ್ಪನವರಿಗೆ ಶ್ರದ್ಧಾಂಜಲಿಯನ್ನರ್ಪಿಸುವೆವು. ಪರಮಾತ್ಮನು ಅವರಾತ್ಮಕ್ಕೆ ಶಾಂತಿಯನ್ನೂ ಅವರ ಪರಿವಾರಕ್ಕೆ ಸುಖಶಾಂತಿಯನ್ನು ಕೊಡಲೆಂದು ಆ ಮಹಿಮನನ್ನು ಬೇಡಿಕೊಳ್ಳುತ್ತೇವೆ. ಓರ್ವ ವೀರಶೈವ.

ನಂಜನಗೂಡಿನಲ್ಲಿ ಯಾತ್ರಾರ್ಥಿಗಳಿಗಿರತಕ್ಕ ತೊಂದರೆ.

ಗರಳಪುರೀಶ್ವರ ಕ್ಷೇತ್ರಾಧಿಪನಾದ ಶ್ರೀ ಶ್ರೀಕಂಠೇಶ್ವರ ಸ್ವಾಮಿಗೆ ಹಿಂದು ಗಳಲ್ಲಿ ಅನೇಕ ಜಾತಿಯವರು ಹರಕೆ ... ಇಷ್ಟಾರ್ಥಸಿದ್ಧಿಗಾಗಿಯೋ, ಮುಡಿ ಕೊಡುವುದು, ಬೆಳ್ಳಿಯನ್ನು ತೂಗಿಸಿಕೊಡುವುದು, ಹೆಜ್ಜೆ ನಮಸ್ಕಾರ ಉರುಳುಸೇವೆ ಇತ್ಯಾದಿ ಹರಕೆಗಳನ್ನು ಮಾಡಿಕೊಂಡು ಪೌರ್ಣಮಿ ಉತ್ಸವ, ರಥೋತ್ಸವ ಇತ್ಯಾದಿ ಉತ್ಸವಗಳ ಕಾಲದಲ್ಲಿ ಸಂದಣಿ ನೆರೆಯುತ್ತದೆ ... ಕೆಲವರ್ಷಗಳಿಂದೀಚೆಗೆ ... ಅಧಿಕಾರಿಗಳ ಗಮನಕ್ಕೆ ಬಂದು ಅದು ತಪ್ಪಿಸಲ್ಪಟ್ಟಿತು. ಮುಡಿಕೊಡುವ ದೇವರ ದರ್ಶನಕ್ಕೆ ಬರತಕ್ಕವರು ಎರಡಾಣೆ ಕಾಣಿಕೆ ಕೊಡಬೇಕಾಗಿದ್ದುದರ ಬದಲು ಈಗ 4 ಆಣೆ ಕಾಣಿಕೆ ಕೊಡಬೇಕಾಗಿದೆ. ಇದರಿಂದ ಹರಕೆಯವರು ಮುಡಿಯನ್ನು ತೆಗೆಸಲು 4 ಆಣೆಯನ್ನು ದೇವರ ಕಾಣಿಕೆಗಾಗಿ ಗೋಲಕಕ್ಕೆ 4 ಆಣೆಯನ್ನು ತೆಂಗಿನಕಾಯಿ ಪೂಜೆಗಾಗಿ ಕಾಯಿಂದಕ್ಕೆ 1 ಆಣೆಯನ್ನು, ಇವಲ್ಲದೆ ಪೂಜಾರಿಗಳಿಗೆ ಕೊಡಬೇಕಾದ ದುಡ್ಡನ್ನೂ ಸೇರಿಸಿದರೆ ಒಬ್ಬನಿಗೆ 10-12 ಆಣೆಗಳ ಮೇಲೆ ಖರ್ಚು ಬೀಳುತ್ತದೆ. ಇದು ಬಡವರಿಗೆ ... ಈ ಹೊಸಪದ್ಧತಿಯು ದೇವಸ್ಥಾನದ ಧರ್ಮದರ್ಶಿ ಗಳಿಂದಾಗಲಿ, ಮುಜರಾಯಿ ಅಧಿಕಾರಿಗಳಿಂದಾಗಲಿ ಮಾಡಲ್ಪಟ್ಟದ್ದೂ ಕೂಡಲೆ ತಪ್ಪಿಸಲ್ಪಡುವುದು ಅತ್ಯವಸರವೂ ಅವಶ್ಯವೂ ಆಗಿರುತ್ತದೆ. ಸ್ವಾಮಿಯ ಹೆಸರಿನ ಮೇಲೆ ಗೂಳಿಗಳು ಬಸವನಾಗಿ ಬಿಡಲ್ಪಡುವುವು. ಇವು ಸ್ವೇಚ್ಛೆಯಾಗಿ ತಿರುಗುತ್ತ ಸಿಕ್ಕಿದ ಕಡೆ ಮೇವನ್ನು ತಿಂದು ನದಿಯಲ್ಲಿ ನೀರನ್ನು ಕುಡಿದು ಮಾಗಣಿಗಳಲ್ಲಿ ಮಲಗಿಕೊಂಡು ಕಾಲ ಕಳೆಯುತ್ತಿರುವುವು. ಇವುಗಳ ಗೋಜಿಗೆ ಯಾರೂ ಹೋಗುತ್ತಿರಲಿಲ್ಲ. ಈಚೆಗೆ ಪ್ರಾಣಿದಯೆಯುಳ್ಳವರು ತಮ್ಮ ತೋಟಗಳಿಗೆ ಅಂಗಡಿಗಳಿಗೆ ನುಗ್ಗಿದವೆಂಬುದರ ಮೇಲೆ ದೊಣ್ಣೆ ಮುಟ್ಟುಗಳಿಂದ ಅವನ್ನು ಹೊಡೆದು ಅವುಗಳಿಗೆ ಬಾಧೆಯನ್ನುಂಟುಮಾಡುತ್ತಿರುವರು. ಒಂದು ಗೂಳಿಯ ಕಾಲನ್ನು ಮುರಿದು ಬಿಟ್ಟಿದ್ದರು ... ಹೀಗೆ ಬಸವನಿಗೆ ಬಿಟ್ಟ ದನಗಳಿಗೆ ದೇವಸ್ಥಾನದ ಖರ್ಚಿನಿಂದ ಮೇವನ್ನು ಹಾಕಿಸುತ್ತಿದ್ದರು. ಈಚೆಗೆ ಆ ಪದ್ಧತಿಯು ತಪ್ಪಿಹೋದುದರ ಮೇಲೆ ಬಸವಗಳು ಜನರ ಹೊಲಗಳಿಗೆ ನುಗ್ಗಿ ಬೆಳೆಯನ್ನು ತಿನ್ನುತ್ತಿರುವುವು. ಇಂತಹವುಗಳನ್ನು ಮುಟ್ಟರು ಕ್ರೂರದಯಾಹೀನರಾಗಿ ಹೊಡೆದು ಕೊಲ್ಲುತ್ತಿರುವುದರಿಂದ ದೇವಸ್ಥಾನದ ಅಧಿಕಾರಿಗಳು ಪೂರ್ವದಂತೆ ಆ ಬಸವಗಳಿಗೆ ದೇವಸ್ಥಾನದ ಖರ್ಚಿನಿಂದ ಮೇವನ್ನು ಹಾಕಿಸುವುದು ಅತ್ಯಾವಶ್ಯಕವು. ಮೇಲ್ಕಂಡ ತೊಂದರೆಗಳನ್ನು ಅಧಿಕಾರಿಗಳು ನಿವಾರಿಸಿ ಯಾತ್ರಿಕರ ವಂದನೆಗಳಿಗೆ ಪಾತ್ರರಾಗುವರೆಂದು ನಂಬುತ್ತೇನೆ. ಅಲ್ಲದೆ ವೀರಶೈವರೇ ಅಧಿಯಾಗಿ ಉತ್ತಮವರ್ಗದವರು ಒಳ ಗರ್ಭಾಂಕಕ್ಕೆ ಹೋಗಲು ಅವಕಾಶವಿಲ್ಲದಿರುವುದರಿಂದ ಅವರು ಹೊರಗಡೆ ನಿಂತು ವಿಧವಾ ಸ್ತ್ರೀಯರ ಬೋಳುಮಂಡೆಗಳನ್ನು ದರ್ಶನಮಾಡಿ ಬರಬೇಕಾಗಿರುತ್ತದೆ. ಅಸ್ಪೃಶ್ಯರನ್ನು ದೇವರದರ್ಶನಕ್ಕಾಗಿ ದೇವಸ್ಥಾನದೊಳಕ್ಕೆ ಬಿಡಬೇಕೆಂಬ ಚಳವಳಿಯು ಸರ್ವತ್ರ ನಡೆಯುತ್ತಿರುವುದಲ್ಲದೆ, ಹಾಗೆ ಅವರನ್ನು ಬಿಡುವುದು ಶಾಸ್ತ್ರವಿರುದ್ಧವಲ್ಲವೆಂದು ಬ್ರಾಹ್ಮಣ ಪಂಡಿತರುಗಳೇ ವಾದಿಸಿ ಸಾಧಿಸುತ್ತಿರುವರು. ಇಂಥಾದ್ದರಲ್ಲಿ ಯಾವ ಕಾರಣದಿಂದಲೂ ಸ್ವಾತಂತ್ರ್ಯವನ್ನು ಮಾಡದ ... ನಿಸ್ಪಕ್ಷಪಾತವಾಗಿ ... ಇವರ ಗರ್ಭಗುಡಿಗೆ ಪ್ರವೇಶ ... ನಮ್ಮ ಗೌರವಾನ್ವಿತರಾದ ... ಅಧಿಕಾರಿಗಳು ... ನಂಬಿದ್ದೇನೆ. ಓರ್ವ ಯಾತ್ರಿಕ.

ಉಪಾಧ್ಯಾಯರುಗಳ ಮಹಾಸಮ್ಮೇಳನ.

ಮೈಸೂರು ದೇಶೀಯ ಪ್ರಾಥಮಿಕ ಮತ್ತು ಮಾಧ್ಯಮಿಕ ಪಾಠಶಾಲೆಗಳ ಉಪಾಧ್ಯಾಯರುಗಳ ... ಸಮ್ಮೇಳನವು, ಮುಂದಿನ ಡಿಸೆಂಬರ್ ತಾ॥ 20 ರಿಂದ 23 ರ ವರೆಗೆ ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನ ಮತ್ತು ಪೌರಸಭೆಯವರ ಉದಾರಾಶ್ರಯದಲ್ಲಿ ಬೆಂಗಳೂರು ನಗರದಲ್ಲಿ ನಡೆಯಲು ಏರ್ಪಡಿಸಿದೆ. ಇದಕ್ಕಾಗಿ, ಧನಸಂಪನ್ನರೂ, ಗೌರವಾರ್ಹರೂ ಆದ ಅನೇಕ ಮಂದಿ ಅಧಿಕಾರಿಗಳೂ, ಪ್ರಮುಖರೂ ಉಳ್ಳ ಒಂದು ಸ್ವಾಗತಮಂಡಲಿ ರಚನೆಯಾಗಿದೆ. ಈ ಸ್ವಾಗತಮಂಡಲಿಗೆ ಮೈಸೂರು ವಿದ್ಯಾ ಇಲಾಖೆಯ ಡೈರೆಕ್ಟರ್ ಮತ್ತು ಇನ್ಸ್‌ಪೆಕ್ಟರ್ ಜನರಲ್‌ರವರೂ, ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನ ಅಧ್ಯಕ್ಷರೂ ಆದ ಶ್ರೀಯುತ ಡಿ. ವೆಂಕಟರಾಮಯ್ಯ, ಬಿ.ಎ., ಎಲ್.ಟಿ., ಯವರು ಅಧ್ಯಕ್ಷರಾಗಿರುತ್ತಾರೆ. ಈ ಸ್ವಾಗತಮಂಡಲಿಯಲ್ಲದೆ ಮುಂದೆ ಹೇಳುವ ಕಾರ್ಯಮಂಡಲಿಗಳೂ ಸಮಿತಿಗಳೂ ಏರ್ಪಟ್ಟಿವೆ:—(1) ಕಾರ್ಯನಿರ್ವಾಹಕಮಂಡಲಿ (2) ಆಯವ್ಯಯ ಸಮಿತಿ (3) ವಸ್ತುಪ್ರದರ್ಶನ ಸಮಿತಿ (4) ಪ್ರಕಾಶನ ಮಂಡಲಿ (Publicity Board) (5) ವಿಷಯಸಂಗ್ರಹ ಮಂಡಲಿ (Subjects Committee) (6) ಊಟ ಉಪಚಾರಗಳ ಸಮಿತಿಗಳು (1 ಸ್ತ್ರೀಯರಿಗೆ, 1 ಪುರುಷರಿಗೆ) ಮತ್ತು (7) ಆಟ ಪಾಟಗಳ ಸಮಿತಿಗಳು (1 ಸ್ತ್ರೀಯರಿಗೆ, 1 ಪುರುಷರಿಗೆ).

ಪ್ರತಿಯೊಂದು ಸಮಿತಿಯ ಕಾರ್ಯಗಳೂ ಈ ಸಮ್ಮೇಳನದ ಜನರಲ್ ಸೆಕ್ರೆಟರಿ ಮತ್ತು ಬೆಂಗಳೂರು ಡಿಸ್ಟ್ರಿಕ್ಟ್ ಎಜ್ಯುಕೇಷನಲ್ ಮತ್ತು ಸ್ಕೂಲ್ ಬೋರ್ಡಿನ ಆಫೀಸರಾದ ಶ್ರೀಯುತ ಕೆ. ಟಿ. ... ಯವರ ಮುಖ್ಯ ಮೇಲ್ವಿಚಾರಣೆಯಲ್ಲಿ ತೀವ್ರವಾಗಿ ಮುಂದುವರಿಯುತ್ತಲಿವೆ.

ಈ ದ್ವಿತೀಯ ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಲು ನಮ್ಮ ಸಂಸ್ಥಾನದ ದಿವಾನ್ ಸಾಹೇಬರವರನ್ನೂ, ಸಭೆಯ ಕಾರ್ಯಗಳನ್ನು ನಡೆಯಿಸಲು ವಿದ್ಯಾ ಇಲಾಖೆಯ ಡೈರೆಕ್ಟರ್ ಸಾಹೇಬರವರನ್ನೂ, ಕೇಳಿಕೊಳ್ಳಬೇಕೆಂದು ಸ್ವಾಗತಮಂಡಲಿಯವರು ನಿಶ್ಚಯಿಸಿರುತ್ತಾರೆ.

ಇದೇ ಸಂದರ್ಭದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಪಾಠಶಾಲೆಗಳ ಪಾಠಸ್ವರೂಪಗಳಿಗೆ ಸಂಬಂಧಪಟ್ಟ ವಸ್ತುಪ್ರದರ್ಶನವೂ ನಡೆಯುತ್ತದೆ. ಈ ಪ್ರದರ್ಶನಕ್ಕೆ ಸಂಸ್ಥಾನದ ಎಲ್ಲಾ ಪಾಠಶಾಲೆಗಳಿಂದಲೂ ಕಳುಹಿಸಬೇಕೆಂದು ವಸ್ತುಗಳನ್ನು ... ವಸ್ತುಪ್ರದರ್ಶನ ಸಮಿತಿಯ ಕಾರ್ಯದರ್ಶಿಗಳೂ ಆದ ಬೆಂಗಳೂರು ನ್ಯಾಷನಲ್ ಹೈಸ್ಕೂಲು ಹೆಡ್ಮಾಸ್ಟರು ಶ್ರೀಯುತ ಕೆ. ಸಂಪತ್ಗಿರಿರಾವ್, ಎಂ.ಎ. ಅವರಿಗೆ ಮುಂದಿನ ನವಂಬರ್ ತಾ॥ 30 ರೊಳಗಾಗಿ ತಲುಪುವಂತೆ ಕಳುಹಿಸಬೇಕೆಂದು, ನಮ್ಮ ಸಂಸ್ಥಾನದಲ್ಲಿಯೂ ಇತರ ಕಡೆಗಳಲ್ಲಿಯೂ ಇರುವ ವಿದ್ಯಾ ಇಲಾಖೆಯ ಅಧಿಕಾರಿಗಳನ್ನು ವಸ್ತುಪ್ರದರ್ಶನ ಸಮಿತಿಯವರು ಕೇಳಿಕೊಂಡಿರುತ್ತಾರೆ.

ಈ ಮಹಾ ಸಮ್ಮೇಳನಕ್ಕೆ ಸಹಾಯ ದ್ರವ್ಯವನ್ನು ಕಳುಹಿಸಬೇಕೆಂದಿರುವ ಮಹನೀಯರು ಸಮ್ಮೇಳನದ ಕೋಶಾಧಿಕಾರಿಗಳಾದ ಬೆಂಗಳೂರು ಸಿಟಿ ಮ್ಯುನಿಸಿಪಲ್ ಸ್ಕೂಲು ಬೋರ್ಡು ಆಫೀಸರ್ ಶ್ರೀಯುತ ಬಿ. ಎನ್. ಗೋಪಾಲಯ್ಯಂಗಾರ್ ಬಿ.ಎ., ಅವರಿಗೆ ಕಳುಹಿಸಬೇಕಾಗಿ ಕೋರಿದೆ.

ಈ ಸಮ್ಮೇಳನಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ವಿಷಯ ಪ್ರದರ್ಶನಗಳನ್ನೂ, ಉಪನ್ಯಾಸಗಳನ್ನೂ ನಡೆಯಿಸುವುದಲ್ಲದೆ, ಆರೋಗ್ಯ ವಿಷಯಗಳ ಒಂದು ಪ್ರದರ್ಶನಶಾಲೆಯೂ ಏರ್ಪಡಿಸಲ್ಪಟ್ಟಿರುವುದು. ಇವಲ್ಲದೆ ಮುಖ್ಯವಾಗಿ, ಸಮ್ಮೇಳನದಲ್ಲಿ ಸಾಮಾಜಿಕ ವಿಷಯಗಳಿಗೂ ವಿಶೇಷ ಗಮನಕೊಡಲ್ಪಡುವುದರಿಂದಲೂ. ಈ ಸಮ್ಮೇಳನಕ್ಕೆ ಕೇವಲ ಪ್ರಾಥಮಿಕ ಮತ್ತು ಮಿಡಲ್ ಸ್ಕೂಲುಗಳ ಉಪಾಧ್ಯಾಯರುಗಳಿಗಾಗಿಯೇ ಏರ್ಪಡಿಸಲ್ಪಟ್ಟಿರುವುದರಿಂದಲೂ, ಆ ಉಪಾಧ್ಯಾಯರುಗಳು ಈ ಸಮಯವನ್ನು ಬಿಡದೆ ಸಂಪೂರ್ಣವಾಗಿ ಉಪಯೋಗಿಸಿಕೊಂಡು ಪ್ರಯೋಜನವನ್ನು ಪಡೆಯುವರೆಂದು ನಿರೀಕ್ಷಿಸಲಾಗಿದೆ.

1932 ನೆಯ ಡಿಸೆಂಬರ್ ತಾ. 20, 21, 22 ರಲ್ಲಿ ನಡೆಯಲು ಏರ್ಪಡಿಸಿರುವ ಮೈಸೂರು ದೇಶೀಯ ಪ್ರಾಥಮಿಕ ಮತ್ತು ಮಾಧ್ಯಮಿಕ ಪಾಠಶಾಲೋಪಾಧ್ಯಾಯರ ಮಹಾ ಸಮ್ಮೇಳನಕ್ಕೆ ಉಪಾಧ್ಯಾಯರುಗಳೂ, ಉಪಾಧ್ಯಾಯ ಸಂಘದ ಸೆಕ್ರೆಟರಿಗಳೂ ಗಳ ಚಂದಾಹಣವನ್ನು ಅಕ್ಟೋಬರ್ ತಾ. 15 ರೊಳಗಾಗಿ ಸಮ್ಮೇಳನದ ಟ್ರೆಜರರವರಿಗೆ ಕಳುಹಿಸಿಕೊಡಬೇಕೆಂದು ಪ್ರಕಟಿಸಲಾಗಿತ್ತು. ಈಚೆಗೆ ಕೆಲವು ಮಂದಿ ಉಪಾಧ್ಯಾಯರುಗಳ ಕೋರಿಕೆಯಂತೆ ಸದರಿ ಅವಧಿಯನ್ನು ಈ ನವಂಬರ್ ತಾ. 15 ರ ವರೆಗೂ ಹೆಚ್ಚಿಸಿದೆ. ಇದುವರೆಗೆ ಚಂದಾಹಣವನ್ನು ಕಳುಹಿಸಿರುವವರು ಹೋಟು ವಿತ್ತ ಸಹಾಯಕರು ಈ ಹೆಚ್ಚಿಸಿರುವ ಅವಧಿಯೊಳಗಾಗಿ ತಪ್ಪದೆ ತಮ್ಮ ಸಹಾಯ ಧನವನ್ನು ಕಳುಹಿಸಿ, ಕೈಕೊಂಡಿರುವ ಈ ಮಹಾಕಾರ್ಯಕ್ಕೆ ಬೆಂಬಲವನ್ನು ಕೊಡಬೇಕಾಗಿ ಈ ಮೂಲಕ ಪ್ರೋತ್ಸಾಹಪೂರ್ವಕ ಪ್ರಾರ್ಥಿಸಿದೆ.

ಸುದರ್ಶನ ಸಮ್ಯಂಗಾರ್, ಜನರಲ್ ಸೆಕ್ರೆಟರಿ.

ಸರ್ವೋದಯರೇ, ತ್ವರೆಮಾಡಿರಿ.

ಈಗ ಭಾರತಭೂಮಿಯ ಎಲ್ಲ ಭಾಗದಲ್ಲಿ ಅಸ್ಪೃಶ್ಯರನ್ನು ಸ್ಪೃಶ್ಯರನ್ನಾಗಿ ಮಾಡಬೇಕೆಂಬ ಬ್ರಾಹ್ಮಣರ ಚಟುವಟಿಕೆಯು ಎದ್ದಿದ್ದು ಇವರು ಇದುವರೆಗೂ ತಮ್ಮ ಸ್ವಾಧೀನದಲ್ಲಿರುವ ಸುಪವಿತ್ರವಾದ ಒಂದು ಮಂದಿರವನ್ನು ಸಹ ಲಿಂಗಾಯತರು ಎಲ್ಲಿಯೂ ಅಸ್ಪೃಶ್ಯರಿಗೋಸ್ಕರ ತೆರೆದಿಡುವುದಿಲ್ಲ. ... ಬ್ರಾಹ್ಮಣರು ಹಾಗೂ ಜಾತಿಗಳು ಸಹ ... ಅಸ್ಪೃಶ್ಯರ ಉದ್ಧಾರ ... ಬ್ರಾಹ್ಮಣರಂತೆ ಸೋಗಿ ದೇವರ ... ಕರ್ನಾಟಕದಲ್ಲಿ ಇರುವ ... ಲಿಂಗಾಯತ ಮಂದಿರಗಳನ್ನು ... ದೇವರು ದೇವಸ್ಥಾನಗಳು ಎಲ್ಲಿಯಾದರೂ ಅಪವಿತ್ರವಾಗುವುದುಂಟೇ? ... ಕರ್ನಾಟಕದ ಬ್ರಾಹ್ಮಣರು ... ದೇವಸ್ಥಾನಗಳನ್ನು ... ಸರ್ವ ದರ್ಶನ ... ಅಸ್ಪೃಶ್ಯರ ... ಬ್ರಾಹ್ಮಣರು ... ದೇವಸ್ಥಾನಗಳನ್ನು ಬ್ರಾಹ್ಮಣರೇ ಆಕ್ರಮಿಸಿಕೊಂಡಿದ್ದು ... ಸರ್ವಜನಾಂಗದ ದರ್ಶನ ... ಸರ್ವ ದರ್ಶನ ಪೂಜಾದಿಗಳಿಗೆ ... ದೇವಸ್ಥಾನಗಳನ್ನು ... ಲಿಂಗಾಯತರು ಆದ್ದರಿಂದ ಇದಕ್ಕೆ ... ರೆಂದು ನಂಬುತ್ತೇನೆ.

ಇದರಲ್ಲಿ ಸದ್ಯಕ್ಕೆ ಕರ್ನಾಟಕದ ಸಮಸ್ತ ಬ್ರಾಹ್ಮಣೇತರರೂ ಹಾಗೂ ಅಸ್ಪೃಶ್ಯರೂ ... ಬಸವನ ಮಲ್ಲಿಕಾರ್ಜುನ ದೇವಸ್ಥಾನ ಪ್ರವೇಶ ... ಲಿಂಗಾಯತ ರಾಜರಿಂದ ಕಟ್ಟಿಸಲ್ಪಟ್ಟ ಅನೇಕ ... ದೇವರ ... ಶಿವನ ಬಸವಣ್ಣ ... ಮಂದಿರದಲ್ಲಿ ಯಾವ ಪ್ರತಿಬಂಧ ... ಬ್ರಾಹ್ಮಣರು ... ಲಿಂಗಾಯತರ ... ದೇವಸ್ಥಾನ ... ಬ್ರಾಹ್ಮಣರ ... ಅಸ್ಪೃಶ್ಯತಾ ... ಸರ್ವ ಜಾತಿ ... ದೇವಸ್ಥಾನದ ... ಲಿಂಗಾಯತರು ... ಹಿಂದು ಸಂಘಟನೆ ... ಇಂಥಾ ಸಂಧಿಯಲ್ಲಿ ಸ್ವರಾಜ್ಯದ ಸೇವೆಯಿಂದ ನಾವು ... ಇಂಥಾ ಇವರ ಮಾತಿಗೆ ... ಸರ್ವೋದಯರ ... ಲಿಂಗಾಯತರಿಂದ ... ಬ್ರಾಹ್ಮಣರಿಂದ ... ದೇವಸ್ಥಾನಗಳನ್ನು ... ಅಸ್ಪೃಶ್ಯರಿಗೂ ... ಹಾಗೂ ಅಸ್ಪೃಶ್ಯರನ್ನು ... ನೀಡಬೇಕಾಗಿ ... ರುವರು.

ಸರ್ವೋದಯ ಹಿತಚಿಂತಕ.

ಮಕ್ಕಳಿದ್ದರೆಮನೆ ಚಂದ.

ಮಕ್ಕಳಿಲ್ಲೆಂದು | ಬಂಜೆತನದಿಂದ ಮುಕ್ತರಾಗುವಿರಿ | ಚಿಂತಿಸಬೇಡಿರಿ

ಗರ್ಭಧಾರಣಾ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪ್ರತ್ಯಕ್ಷ ಅನುಭವ ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ.

ಪತ್ತೆ—ವೈದ್ಯ ವ್ಹಿ. ಎಸ್. ಕಾಜನ್. ಮಿರಜ. M. C. 23

ವೀರಶೈವಮತಾಶ್ರಿತ ವೀರಘಂಟೆ ಮಡಿವಾಳರ ದ್ವಿತೀಯ ಸಭಾ ಬೂವರಿ

ಈ ಮಡಿವಾಳರ ಪ್ರಾಂತಿಕ ಸಭೆಯು ಬೂವರಿಯಲ್ಲಿ ಅಕ್ಟೋಬರ್ ತಾ|| 1, 2, 4 ಈ ದಿವಸಗಳಲ್ಲಿ [illegible] ಶಿವಸಂಪ [illegible] ಶ್ರೀಮನ್ಮಹಾ [illegible] ಶಾಂತಿ ಮಲ್ಲಿಕಾರ್ಜುನ ಪಂಡಿತಾರಾಧ್ಯ [illegible] ಗುರುಬಸವ ಶಿವಾಚಾರ್ಯ ಮಹಾಸ್ವಾಮಿಗಳವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಲು ಮಂಗಲಗೀತದೊಡನೆ ಜಯ ಘೋಷ ನಡೆದು ಸಭಾಕಾರ್ಯ ಪ್ರಾರಂಭವಾಯಿತು. ಅಧ್ಯಕ್ಷ ಪೂಜ್ಯಪಾದರವರು ಮಡಿವಾಳ ಮಹಾಚಾರ [illegible] ಮಾಚಿದೇವರ [illegible] ಮೂರ್ತಿಯ ಪ್ರಮುಖದಿಂದ [illegible] ವಿಷಯವಾಗಿಯೂ, ಕೊಂಡ್ಲಿ [illegible] ತೆರದ ವಿಷಯವಾಗಿಯೂ, ಮೂವರಿ ಪರಸಪ್ಪನು ಒಬ್ಬರಿಗೆ ನಿಶ್ಚೈಸಿದ ಕನ್ಯೆಯನ್ನು ಮತ್ತೊಬ್ಬರಿಗೆ ಕೊಡಕೊಡದೆಂಬ ವಿಚಾರವಾಗಿಯೂ [illegible] ಮಾಡುವ ಪ್ರಾಣಿಗಳನ್ನು ಸಾಕಬಾರದೆಂಬ ವಿಷಯವಾಗಿಯೂ [illegible] ಬಗ್ಗೆಯೂ ಬಹು ಸ್ವಾರಸ್ಯವಾಗಿ ಭಾಷಣಗೈದರು ಅನಂತರ ಈ ಮುಂದೆ ಉನ್ನತಿಯ ಬಗ್ಗೆ ಸರ್ವಾನುಮತದಿಂದ ಈ ಕೆಳಗೆ ಕಂಡ ಠರಾವುಗಳು ಪಾಸಾದವು —

(1) ಒಂದನೇ ಸಭೆಯಲ್ಲಿ ಪಾಸಾದ ಠರಾವುಗಳ [illegible] ಸ್ವೀಕರಿಸತಕ್ಕದ್ದು. (2) ಕೆರವನ್ನು [illegible] ಕೊಡದು (3) [illegible] ಮದುಮಕ್ಕಳಿಗೆ ದ್ರವ್ಯರೂಪವಾದ [illegible] (4) [illegible] (5) [illegible] ಮಡಿವಾಳ ಮಾಚಿದೇವನ ಗುಡಿಯನ್ನು ಕಟ್ಟತಕ್ಕದ್ದು. (6) [illegible] (7) ಅರಳಿಯನ್ನು [illegible] (8) [illegible] ಶ್ರೀಮಕ್ಷಾಂ [illegible] ಶಾಂತಿಯಿಂದ ಮೈಸೂರು ಸಂಸ್ಥಾನಾಭಿವೃದ್ಧಿ ಬಗ್ಗೆ 1 ರೂ ತೆಗೆಸಲ್ಪಟ್ಟು ಗಂಧ ತಾಂಬೂಲ [illegible] ಸಮಾಪ್ತವಾಯಿತು.

ಎರಡನೇ ಮಠದ ದ್ವಿತೀಯ ಪ್ರಾಂತಿಕ ಸಭಾ

ಈ ಸಭೆಯು ಸೊರಬದ ತಾ ಸಂಸ್ಥಾನ ಗೌರೀಕೆರೆ ಮಠದಲ್ಲಿ ಕಳೆದ ಅಕ್ಟೋಬರ್ ತಾ 17 ರಿಂದ 20 ರ ವರೆಗೆ ನೆರವೇರಿತು. ಇಲ್ಲಿಗೆ [illegible] ಚಂದ್ರಗುತ್ತಿ [illegible] ಜನರು ಕೂಡಿದ್ದರು [illegible] ಶ್ರೀಮನ್ಮಹಾ [illegible] ಶಿವಾಚಾರ್ಯ ಮಹಾಸ್ವಾಮಿಗಳವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿ [illegible] ಜಯಘೋಷವಾಯಿತು. ಅನಂತರ [illegible] ಅಧ್ಯಕ್ಷರು ಶ್ರೀಮದ್ಗುರುಪಾದರು [illegible] ಉತ್ಕೃಷ್ಟ [illegible] ಆಚಾರ ವಿಚಾರ [illegible] ಧರ್ಮದ ವಿಷಯವಾಗಿ [illegible] ಮತಸ್ಥಾಪನೆ [illegible] ಜಗದ್ಗುರು [illegible] ಗೌರೀಕೆರೆ ಸಂಸ್ಥಾನ ಮಠದ [illegible] ಮತಸಭೆಯಿಂದ [illegible] ಉತ್ತೇಜನ [illegible] ಕಾರ್ಯ [illegible] ಸಂಸ್ಥಾನ ಮಠದ ಶ್ರೀ [illegible] ಜ್ಞಾನಾಂಶದ [illegible] ವಿದ್ಯಾಭ್ಯಾಸ [illegible] ವಿಷಯವಾಗಿ [illegible] ಶ್ರೀ [illegible] ವಿಷಯದಲ್ಲಿ [illegible] ಭಾಷಣಮಾಡಿದರು. ನಂತರ [illegible] ಠರಾವುಗಳು ಪಾಸಾದವು.

(1) ವಿದ್ಯಾಭ್ಯಾಸವನ್ನು [illegible] (2) ವಿವಾಹ [illegible] (3) [illegible] ಮಾಡಿಸಬೇಕು [illegible] ಕಾಲದಲ್ಲಿ ಗುರುವರ್ಗದವರು [illegible] ಸಾಮೂಹಿಕವಾದ [illegible] ಎಕ್ಸಿಟ್ಟು ಕೊಡಿಸತಕ್ಕದ್ದು. (4) ಮಕ್ಕಳ [illegible] ಗಾಂಧರ್ವ ವಿವಾಹ [illegible] (5) [illegible] ವಿಧವೆಯನ್ನು [illegible] (6) [illegible] (7) ನಿರ್ಧಾರಕ್ಕೆ [illegible] ಕಾರ್ಯಕರ್ತರು [illegible] ಸಾಧ್ಯವಿದ್ದಷ್ಟು [illegible] ನಿರ್ಧರಿಸತಕ್ಕದ್ದು. (8) [illegible] ಶ್ರೀ ಪೂಜ್ಯ [illegible] ಕರ್ತವ್ಯ [illegible] ಮೈಸೂರು ಸ್ಟಾರ್ ಅಭಿವೃದ್ಧಿಗೆ [illegible] ಶ್ರೀಮನ್ಮಹಾರಾಜರವರ [illegible] ಚಾಮರಾಜ ಒಡೆಯರವರ ಶ್ರೀಯುತಪ್ರಾರ್ಥನೆಯಿಂದ ಸಭೆಯು [illegible] ಪಾತ್ರರಿಂಟರು

ಓರ್ವ ಪ್ರೇಕ್ಷಕ ಮಡಿವಾಳ

[ನೋಟ್ಯಂಡ ೩ ರೂಪಾಯಿಗಳನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೇವೆ —ಸಂ.]

ಕಪ್ಲೇಸ್ ಪೇಟೆ ತಾಲ್ಲೂಕ್ ಸುಗ್ಗನಹಳ್ಳಿ ಎಲೆಕ್ಟ್ರಿಕ್ ಮತ್ತು ವಿಲೇಜ್ ಹಾಲ್ ಇವುಗಳ ಪ್ರಾರಂಭೋತ್ಸವ

ಈ ಗ್ರಾಮದಲ್ಲಿ ತಾ 27 10 32 ನೇ ಗುರುವಾರ ಸಾಯಂಕಾಲ 4 ಘಂಟೆಗೆ ಬೆಂಗಳೂರು ಜಿಲ್ಲಾಧಿಕಾರಿಗಳಾಗಿರುವ ಶ್ರೀಯುತ ಕೆ ಪಿ ಅನಂತರಾಮ್ ಬಿ ಎ ಯವರಿಂದ [illegible] ಈ ಮಹೋತ್ಸವಕ್ಕೆ ಬೆಂ|| ಡಿ ಬೋ|| ಪ್ರಸಿಡೆಂಟ್ ಶ್ರೀ ಪಿ ವೆಂಕಟಪ್ಪನವರು ಶಾನಶಾನಹಳ್ಳಿ ಎಲೆಕ್ಟ್ರಿಕ್ ಸೂಪರಿಂಟೆಂಡೆಂಟ್ ಶ್ರೀ ಎಸ್ ಪಿ ಅಯ್ಯಂಗಾರ್ರವರು ಬೆಂ ಡಿ ಎ, ಆಫೀಸರ್ ಕೆ ಟಿ ಸುದರ್ಶನಯ್ಯಂಗಾರ್, ಬಿ ಎ ಮಗಡಿ ಪ್ಲೋಸ್ಟೇಟ್ ಸಬ್ ಡಿ, ಆಫೀಸರ್ ಶ್ರೀ [illegible] ಎ ಮಲ್ಲರಾಧ್ಯ, ಎಂ ಎ ಯವರು ಕೆಪ್ಲೇ|| ಮ್ಯಾ|| ಸಾಹೇಬರವರು ಚನ್ನಪಟ್ಟಣದ ಪೋ|| ಅ|| ಸೂ|| ಸಾಹೇಬರವರು, ಕೆಪ್ಲೇ|| ತಾ|| ಅಮಲ್ದಾರ್ ಸಿ ರಾಮರಾವ್ ಬಿ ಎ ಯವರು ತಾ ಪೋ ಇನ್ಸ್ಪೆಕ್ಟರ್‌ರವರು ಮುಂತಾದ ಸರ್ಕಾರಿ ಅಧಿಕಾರಿಗಳು ಮತ್ತು ಡಿಸ್ಟ್ರಿಕ್ಟ್ ಆರ್ ಎ ಮೆಂಬರುಗಳು ಬೆಂ ಡಿ|| ಬೋ ಮೆಂಬರುಗಳು ಪಂಚಾಯಿತಿಯ ಛೇರ್ಮನ್‌ರುಗಳು ಮತ್ತು ಮೆಂಬರುಗಳು ಆಕ್ಕಪಕ್ಕದ ಗ್ರಾಮಗಳ ಖಾಸಗಿ ದೊಡ್ಡ ಮನುಷ್ಯರುಗಳು ಸೇರಿ 1500 ಜನಗಳವರೆಗೂ ತಳಿರುತೋರಣಗಳಿಂದಲೂ ವಿದ್ಯುತ್ ದೀಪಗಳಿಂದಲೂ ಅಲಂಕೃತವಾದ ಚಪ್ಪರದ ಮಧ್ಯ ನೆರೆದಿದ್ದರು. ಕಾರ್ಯಕ್ರಮದ ಪ್ರಕಾರ ಬಾಲಿಕಾ ಪಾಠಶಾಲೆಯ ಹೆಣ್ಣು ಮಕ್ಕಳುಗಳಿಂದ ದೇವರ ಪ್ರಾರ್ಥನೆಯು ನಡೆಸಲ್ಪಟ್ಟ ಮೇಲೆ ಪಂಚಾಯಿತಿ ಛೇರ್ಮನ್‌ರವರಾದ ಮ ಎಸ್ ಎಲ್ ಮರುದ್ ಬಸವಯ್ಯನವರು ಗ್ರಾಮ ಪಂಚಾಯಿತಿ ಸದಸ್ಯರ ಪರವಾಗಿ ಬಿನ್ನವತ್ತಳೆಯನ್ನು ಓದಿದರು. ತರುವಾಯ ಅಧ್ಯಕ್ಷರು [illegible] ವಿದ್ಯುದ್ದೀಪಗಳನ್ನು ಹಾಕಿ ಈ ದೀಪಗಳಿಂದ ಜನಗಳಿಗೆ ಆಗತಕ್ಕ ಅನುಕೂಲಗಳು ವಿಚಾರವಾಗಿಯೂ ಈ ವಿದ್ಯುಚ್ಛಕ್ತಿಯ ಸಹಾಯದಿಂದ ಈ ಗ್ರಾಮದಲ್ಲಿ ತೆರೆದುಕೊಂಡಿರತಕ್ಕ 6 ಇತರ ಗೃಹ ಕೈಗಾರಿಕೆಗಳ ಸಹಾಯದಿಂದ ಮಾಡಬೇಕಾದ ವ್ಯವಸಾಯದ ವಿಷಯವಾಗಿಯೂ, ಈ ಪಂಚಾಯಿತಿಯವರು ಮಾಡಿರತಕ್ಕ ಕಾರ್ಯಕಲಾಪಗಳ ವಿಚಾರವಾಗಿಯೂ ಅಮೋಘವಾದ ಭಾಷಣವನ್ನು ಮಾಡಿ ಗ್ರಾಮದ ಮೈಲಾರ ಪಟೇಲ್ ಚನ್ನಬಸವನವರ ದ್ರವ್ಯ ಸಹಾಯದಿಂದ ಕಟ್ಟಲ್ಪಟ್ಟಿರತಕ್ಕ ಹೊಸ ವಿಲೇಜ ಹಾಲ್ ಪ್ರವೇಶೋತ್ಸವವನ್ನೂ ನೆರವೇರಿಸಿದರು. ಕೆಪ್ಲೇಸ್ ಪೇಟೆ ಆಡ್ವೋಕೇಟರಾದ ಮ ಟಿ ನಾರಾಯಣಗೌಡ ಬಿ ಎ ಬಿ ಎಲ್ ಅವರ ಗ್ರಾಮದ ಪರವಾಗಿ ಅಧ್ಯಕ್ಷರಿಗೂ ಸಭಿಕರಿಗೂ ವಂದನೆಯನ್ನರ್ಪಿಸಿದರು. ಅನಂತರ ಗಂಧ, ಪುಷ್ಪ ತಾಂಬೂಲ ವಿನಿಯೋಗವಾಗಿ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂದ ಸಭೆಯು ಮುಕ್ತಾಯವಾಯಿತು.

ಸ್ಥಳವಾಸಿ

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರ್ ಸಾಹೇಬರವರಾದ ಶ್ರೀಯುತ ಕೆ ಪಿ ಅನಂತರಾಮ್, ಬಿ ಎ ಅವರ ದಿವ್ಯ ಸನ್ನಿಧಿಯಲ್ಲಿ ಕಪ್ಲೇಸ್ ಪೇಟೆ ತಾಲ್ಲೂಕು ಸುಗ್ಗನಹಳ್ಳಿ ಗ್ರಾಮ ಪಂಚಾಯಿತಿಯ ಸದಸ್ಯರು ವಿನಯಪೂರ್ವಕವಾಗಿ ಒಪ್ಪಿಸಿದ ಅಭಿನಂದನ ಪತ್ರಿಕೆ

ಮಹಾಸ್ವಾಮಿ, ನಮ್ಮ ಈ ಗ್ರಾಮ ಪಂಚಾಯಿತಿಯಲ್ಲಿ "ವಿದ್ಯುಚ್ಛಕ್ತಿಯ ದೀಪೋತ್ಸವವು" ಮತ್ತು "ವಿಲೇಜ್ ಹಾಲ್" (ಗ್ರಾಮ ಮಂದಿರ) ಕಟ್ಟಡದ ಪ್ರವೇಶೋತ್ಸವವು ತಮ್ಮ ಅಮೃತ ಹಸ್ತದಿಂದ ನೆರವೇರಿಸಲ್ಪಡುವ ಈ ಅವಕಾಶವು ನಮಗೆ ದೊರೆತಿರುವುದು ನಮ್ಮ ಭಾಗ್ಯೋದಯವೆಂದು ಭಾವಿಸುತ್ತೇವೆ. ಇಂತಹ ನಮ್ಮ ಬಡ ಗ್ರಾಮ ಪಂಚಾಯಿತಿಯ ಇಂದಿನ ಉತ್ಸವಕ್ಕೆ ಕೇವಲ ಅಭಿಮಾನವಿಟ್ಟು ಜಿಲ್ಲಾ ಆಡಳಿತದ ಕಾರ್ಯಗಳು ಎಷ್ಟೇ ಇದ್ದಾಗ್ಯೂ ಬಿಡುವು ಅವಕಾಶಮಾಡಿಕೊಂಡು ಇಷ್ಟು ದೂರ ದಯಮಾಡಿಸಿರುವುದು ತಮಗೆ ಗ್ರಾಮ ಪುನರುಜ್ಜೀವನ ಕಾರ್ಯದಲ್ಲಿರುವ ಶ್ರದ್ಧಾಭಕ್ತಿಯನ್ನೂ ಗ್ರಾಮಾಂತರವಾಸಿಗಳ ಮೇಲೆ ತಮಗೆ ಅಂತರ್ಯದಲ್ಲಿರತಕ್ಕ ಅಸದೃಶವಾದ ಅಭಿಮಾನವನ್ನೂ ವ್ಯಕ್ತಗೊಳಿಸುತ್ತದೆ.

ನಮ್ಮ ಪಂಚಾಯಿತಿ ಸ್ಥಾಪಿಸಲ್ಪಟ್ಟು 6 ವರ್ಷಗಳಾದವು. 12 ಜನ ಸಾಸಗಿ ಸದಸ್ಯರು ಇರುತ್ತಾರೆ. ಈ ಗ್ರಾಮದಲ್ಲಿ 330 ಮನೆಗಳು, 1567 ಜನ ಸಂಖ್ಯೆ ಇರುತ್ತವೆ. ಎಲ್ಲಾ ಬಾಬುಗಳಿಂದಲೂ ವರ್ಷಂಪ್ರತಿಯಲ್ಲಿಯೂ ಆದಾಯವು 600 ರೂಪಾಯಿಗಳು ಆಗಿರುತ್ತವೆ.

ನಮ್ಮ ಗ್ರಾಮಕ್ಕೆ ಘನ ಸರ್ಕಾರದವರು ವಿದ್ಯಾ ಪ್ರೋತ್ಸಾಹಕ್ಕಾಗಿ ಒಂದು ಪ್ರಾಥಮಿಕ, ಒಂದು ಮಾಧ್ಯಮಿಕ ಮತ್ತು ಒಂದು ಬಾಲಿಕಾ ಪಾಠಶಾಲೆಯನ್ನು ಏರ್ಪಡಿಸಿಕೊಟ್ಟಿರುತ್ತಾರೆ.

ಈ ಪಂಚಾಯಿತಿಯ ಆದಾಯಕ್ಕೆ ಅನುಗುಣವಾಗಿ ಗ್ರಾಮ ನೈರ್ಮಲ್ಯ ಕೆಲಸಕ್ಕೆ ಹೆಚ್ಚು ಗಮನಕೊಟ್ಟುಕೊಂಡು ನಮ್ಮ ಊರಿಗೆ ಅವಶ್ಯಕವಾದ ಗ್ರಾಮಾಭಿವೃದ್ಧಿ ಕೆಲಸ ಕಾರ್ಯಗಳನ್ನು ವಾರಂಗಟ್ಟ ಕೆಲಸಗಳಿಂದ ಮಾಡಿಕೊಳ್ಳುತ್ತಿದ್ದೇವೆ. ಈ ಸಂದರ್ಭದಲ್ಲಿ ನಮ್ಮ ಗ್ರಾಮಕ್ಕೆ ಅತಿ ಅವಶ್ಯಕವಾಗಿ ಆಗಬೇಕಾಗಿರುವ ಕೆಲವು ವಿಷಯಗಳನ್ನು ತಮ್ಮಲ್ಲಿ ವಿಜ್ಞಾಪಿಸಿಕೊಳ್ಳುತ್ತೇವೆ.

ಮಾಯಗಾನಹಳ್ಳಿಯಿಂದ ಸುಗ್ಗನಹಳ್ಳಿ ಮಾರ್ಗವಾಗಿ ಮಾಗಡಿ ರಸ್ತೆಗೆ ಸೇರತಕ್ಕ ಡಿಸ್ಟ್ರಿಕ್ಟ್ ಬೋರ್ಡಿನ ರಸ್ತೆಯು ಅರ್ಧಾಂಶವಾಗಿ ನಿಂತುಹೋಗಿರುವುದರಿಂದ ಈ ಗ್ರಾಮಕ್ಕೂ ಎಲ್ಲಾ ವ್ಯಾಪಾರಸ್ಥರಿಗೂ ಕೊಳ್ಳೋ ಕೊಂಡವರಿಗಾಗುತ್ತದೆ, ಅದ್ದರಿಂದ ಈ ರಸ್ತೆಯನ್ನು ಪೂರ್ತಿಗೊಳಿಸಲು ಇದೀಗ ಅವಶ್ಯಕವಾಗಿದೆ.

ಈ ಗ್ರಾಮದ [illegible] ಬಿಳಿ [illegible] ಇಲಾಖೆ [illegible] ಸೂಳ [illegible] ಗ್ರಾಮಸ್ಥರು [illegible] ಉತ್ತೇಜನಕ್ಕಾಗಿ [illegible] ಮತ್ತು ಶ್ರೀಗಿರಿ ಸಾಲಕರಿ [illegible] ಮಾಡಿಕೊಡಬೇಕು.

ಈ ಗ್ರಾಮದಲ್ಲಿ [illegible] ಪೂರ್ವಾರ್ಥವಾಗಿ [illegible] ಹೊಲ ಪ್ರದೇಶ [illegible]

ಈ ಗ್ರಾಮಕ್ಕೆ ಒಂದು ಬ್ರಾಂಚ್ ಪೋಸ್ಟ್ ಆಫೀಸ್ ಮೈಸೂರು ಸಿವಿಲ್ ಸ್ಯೂ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಡೈರೆಕ್ಟರ್ ಸಾಹೇಬರವರ ತಾ 21 1 32 ನೇ ೩ ಎಂ 1305/29 30 ನೇ ನಂಬ್ರು ಮಂಜೂರಾಗಿ [illegible] ಇರುವುದರಿಂದ ಇದರ ಸನ್ನಿಹಿತ [illegible] ತುಂಬಾ ಕೊಂದರೆಯಾಗಿರುತ್ತೆ. ಆದ್ದರಿಂದ ಬಾಗ್ಯ ಆರಿಗೆ [illegible] ಮಾಡಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇವೆ.

ತಮ್ಮ ಗ್ರಾಮಕ್ಕೆ ಅನೇಕಬಾರಿ ದಯಮಾಡಿಸಿ ತಮ್ಮ ಕಷ್ಟ ನಷ್ಟಗಳನ್ನು ಅರಿತು ಈ ಗ್ರಾಮಕ್ಕೆ ವಿದ್ಯುಚ್ಛಕ್ತಿಯ ಸಹಾಯವು ಶೀಘ್ರವಾಗಿ ಪ್ರಾಪ್ತವಾಗುವಂತೆ ಮಾಡಿಕೊಟ್ಟ ಗಾನ್‌ಷಾನ್‌ಹಳ್ಳಿ ಎಲೆಕ್ಟ್ರಿಕ್ ಸೂಪರಿಂಟೆಂಡೆಂಟರಾದ ಶ್ರೀ [illegible] ಅಯ್ಯಂಗಾರ್‌ರವರಿಗೆ ನಾವು ತುಂಬಾ ಕೃತಜ್ಞರಾಗಿರುತ್ತೇವೆ.

ಸದ್ಯದಲ್ಲಿ ಗ್ರಾಮದ ಬೀದಿಗಳಿಗೆ 12 ದೀಪಗಳನ್ನೂ, ಎಪ್ಪತ್ತು ಖಾಸಗಿ ಜನರ 40 ಮನೆಗಳಿಗೂ, ವ್ಯವಸಾಯಕ್ಕಾಗಿ 8 ಪಂಪುಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ.

ನಮ್ಮ ಗ್ರಾಮಕ್ಕೆ ಒಂದು "ವಿಲೇಜ್ ಹಾಲ್" ಕಟ್ಟಡವನ್ನು ತಯಾರಿಸುವಂತೆ ಉದಾರ ಮನಸ್ಸಿನಿಂದ 700 ರೂಪಾಯಿಗಳ ಧನಸಹಾಯ ಮಾಡಿದ ಈ ಗ್ರಾಮದ ಮಾಲಿ ಪಟೇಲ್ ಮ|| ರಾ|| ಚನ್ನಬಸವನವರಿಗೂ ಮತ್ತು 500 ರೂಪಾಯಿಗಳ ಗ್ರಾಂಟನ್ನು ಮಂಜೂರುಮಾಡಿದ ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನವರಿಗೂ, ಮುಖ್ಯವಾಗಿ ಬೋರ್ಡಿನ ಅಧ್ಯಕ್ಷರವರಾದ ಶ್ರೀಯುತ ಪಿ ವೆಂಕಟಪ್ಪನವರಿಗೂ ನಾವು ತುಂಬಾ ಕೃತಜ್ಞರಾಗಿರುತ್ತೇವೆ.

ಮಹಾಸ್ವಾಮಿಯವರು ಈ ಗ್ರಾಮ ಪಂಚಾಯಿತಿಯ ಮೇಲೆ ಸಂಪೂರ್ಣ ಕಟಾಕ್ಷವಿಟ್ಟು ತಮ್ಮ ಅಮೃತ ಹಸ್ತದಿಂದ ಈ ದಿವಸ ದೀಪೋತ್ಸವವನ್ನೂ "ವಿಲೇಜ್ ಹಾಲ್" ಪ್ರವೇಶೋತ್ಸವವನ್ನೂ ನೆರವೇರಿಸಿ ನಮ್ಮನ್ನು ಕೃತಾರ್ಥರನ್ನಾಗಿ ಮಾಡಬೇಕೆಂದು ಆತ್ಯಾದರದಿಂದ ಬೇಡಿಕೊಳ್ಳುತ್ತೇವೆ. ಈ ಉತ್ಸವಕ್ಕೆ ನೆರೆದ ಮಹನೀಯರಿಗೆ ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇವೆ.

ಈ ಸುಸಮಯದಲ್ಲಿ ನಮ್ಮ ಪ್ರಾಣವೇ ಮಹಾಸ್ವಾಮಿಯವರಾದ ಶ್ರೀಮನ್ ಮಹಾರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್, ಜಿ ಸಿ ಎಸ್ ಐ, ಜಿ ಬಿ ಇ ಯವರ ಮಹಾಸನ್ನಿಧಾನದಲ್ಲಿ ಗ್ರಾಮಾಂತರವಾಸಿಗಳಾದ ನಮ್ಮೆಲ್ಲರ ರಾಜಭಕ್ತಿಪೂರ್ವಕವಾದ ಕೃತಜ್ಞತೆಯನ್ನು ಸಮರ್ಪಿಸುತ್ತೇವೆ.

ತೆರುಚಾವ ಯನಾದ ಪರಮಾತ್ಮನು ತಮಗೂ ತಮ್ಮ ಕುಟುಂಬವರ್ಗದವರಿಗೂ ಆಯುರಾರೋಗ್ಯಾದಿ ಸುಖಸಂಪತ್ತುಗಳನ್ನೂ ತಮಗೆ ಶೀಘ್ರದಲ್ಲಿಯೇ ಇನ್ನೂ ಹೆಚ್ಚಿನ ಅಧಿಕಾರ ಗೌರವವನ್ನೂ ಒದಗಿಸಿಕೊಟ್ಟು ಸಮಸ್ತ ಸನ್ಮಂಗಳವನ್ನುಂಟುಮಾಡಲೆಂದು ಹೃದಯಪೂರ್ವಕವಾಗಿ ಪ್ರಾರ್ಥಿಸುತ್ತೇವೆ ಮಹಾಸ್ವಾಮಿ

ಇತಿ, ತಮ್ಮ ಆಜ್ಞಾನುವರ್ತಿಗಳಾದ,
ಸುಗ್ಗನಹಳ್ಳಿ ಗ್ರಾಮ ಪಂಚಾಯಿತಿಯ ಸದಸ್ಯರು

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರತರಿಸಿಕೊಳ್ಳಿರಿ. ಕಿ ೧। ರೂ ಟ ಪಿ ೫೫ ಆಣೆ

ಪತ್ತೆ: ವೈದ್ಯ ವ್ಹಿ ಎಸ್ ಕಾಪಸೆ, ಮಿರಜ

28 M C

೧೯೩೨ ನೆಯ ಇಸವಿ ನವಂಬರ್ ತಾ ೭ ರಿಂದ ನವಂಬರ್ ತಾ, ೧೩ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಆಂಗಿರಸ ನಾಮಸಂವತ್ಸರದ ಕಾರ್ತಿಕ ಶುದ್ಧ ದಶಮಿಯಿಂದ ಕಾರ್ತಿಕ ಶುದ್ಧ ಪೌರ್ಣಿಮೆ ವರೆಗಿನ ಪಂಚಾಂಗ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತುಲಾ ಮಾಸ
7	[1] ಸೋಮ	ದಶ	51 7	ಶತ	14 10	22
8	ಮಂಗಳ	ಏಕಾ	55 7	ಪೂಭಾ	46 55	23
9	[2] ಬುಧ	ದ್ವಾದ	57 46	ಉಭಾ	50 43	24
10	[4] ಗುರು	ತ್ರಯೋ	60	ರೇವ	55 19	25
11	ಶುಕ್ರ	ತ್ರಯೋ	1 16	ಅಶ್ವಿ	60	26
12	[4] ಶನಿ	ಚತು	0 15	ಅಶ್ವಿ	1 29	27
13	[5] ಭಾನು	ಪೌರ್ಣ	31-22	ಭರ	7 41	28

(1) ಕಾರ್ತಿಕ ಸೋಮವಾರ (2) ಉತ್ಥಾನದ್ವಾದಶಿ, ಬೃಂದಾವನೋತ್ಸವ, ಮಳೆನಕ್ಷತ್ರ ವಿಶಾಖೆ ೨ ನೆಯ ಪಾದ. (3) ಉಡುಪಿಯಲ್ಲಿ ಲಕ್ಷದೀಪ (4) ವಯಲಕ್ಷ್ಮೀ ಮುದ್ದ್ದೇಯವರ ಸರ್ಧಂತಿ, ಮಳೆನಕ್ಷತ್ರ ವಿಶಾಖೆ ೩ ನೆಯ ಪಾದ (5) ಧರ್ಮಸ್ಥಳದಲ್ಲಿ ದೀಪೋತ್ಸವ

ಮೈಸೂರು ಪ್ರೈ ವಿದ್ಯಾಶಾಲೆಯವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ಸ್ಟಾರ್

[illegible]

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೩-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸ. ೧೯೩೨ ನೆಯ ಇಸವಿ ನವಂಬರ್ ತಾರೀಖು ೧೪ ನೆಯ ಸೋಮವಾರ [ಸಂಚಿಕೆ ೪೬

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death

The best safest, cheapest most profitable and most convenient place of insurance is the Public Branch of the Mysore State Life Insurance

Policies are issued from Rs 100 to Rs 10,000 and copies of rules and forms of application can be had from all Government Treasuries Economic Superintendents, Helpers and the Insurance Office Public Office Buildings Bangalore

(Sd) S SHAMANNA
Secretary Insurance Committee

[60—19]

[60—2]

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	ಪ್ರತಿ ಸೇರಿ
ವೀರಶೈವ ಶಿವಪೂಜಾವಿಧಿ	೦—೧೨—೦	೧— ೨— ೦
[illegible] ವೀರಶೈವ [illegible]ವಿಧಿ	೦— ೮—೦	೦—೧೪—೦
[illegible]	೦— [illegible]—೦	೦— [illegible]— ೦
[illegible]	೦— [illegible]—೦	೦—೧೦—೦
[illegible]	೦— [illegible]—೦	೦— [illegible]—೦
[illegible]	೦— [illegible]—೦	೦— [illegible]—೦
[illegible]	೦— ೧—೦	೦— [illegible]—೦
[illegible]	೦— ೮—೦	—೧[illegible]—೦
[illegible]	೦ ೮—೦	೦—೧[illegible]—೦
[illegible]	೧ ೦ ೦	೧ [illegible] ೦

ಡಾಕ್ಟರ್ ಜೀ ಬೀ. ಯವರ

ಸುಗಂಧ ನಶ್ಯದ ಪುಡಿ.

[illegible]

[illegible]

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್, ಕೋ. ಬಾ. ೫೧೦, ಮದರಾಸು.

[60—11]

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅರ್ಜಿನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಶನ ಇವರ ೪೦ ವರ್ಷ ಉಪಯೋಗಿಸಿದ

ಅಲ್ಪವಯಸ್ಕರಾಗಿ ಕ್ಷೀಣರಾಗ ಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿ

ರಜಿ] ವಜ್ರಾಂಗ ಸುಂದರಪಾಕದ [ಸ್ಟರ

[illegible]

ಸ್ತ್ರೀ ರೋಗ ನಿವಾರಣೀ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

[60—46]

ಚಿಕಿತ್ಸಾ ಮಾಲಕ—ವೈದ್ಯ ವಿ. ಎಸ್. ಕಾಶನ. ಮು. ಪೋ. ಮಿರಜ ಎಂ. ಎಸ್. ಎಂ

ಮೈಸೂರು ಸ್ಟಾರ್

೧೯೩೩ ನೇ ಇಸವಿ ನವೆಂಬರ್ ತಾ|| ೧೩ ನೆಯ ಸೋಮವಾರ

ಲಾರ್ಡ್ ಶಾಂಕಿಯವರ ಅಭಿಪ್ರಾಯ

ಸ್ವರಾಜ್ಯವಿಲ್ಲದೆಲೂ, ಅಸಹಕಾರದಿಂದಲೂ ಆಸೆಯ ಬಪ್ಪದಲ್ಲದೆ ಸಾಧ್ಯಸಿದ್ಧಿ ಯಾಗುವುದಿಲ್ಲ. ಸ್ವರಾಜ್ಯಸಿದ್ಧಿಗೆ ಸತ್ಯಾಗ್ರಹವೊಂದೇ ಸಾಧನವೆಂಬುದು ಮಹಾತ್ಮ ಗಾಂಧಿಯವರ ತತ್ತ್ವವು. ಅವರ ಈ ಸತ್ಯಾಗ್ರಹತತ್ತ್ವಸಾಧನದಿಂದಲೇ ಭಾರತೀಯರ ಸ್ವರಾಜ್ಯ ಸಾಧನಪ್ರಯತ್ನದಲ್ಲುಂಟಾಗಬಹುದಾಗಿದ್ದ ಮಹಾನರ್ಥಗಳು ತಪ್ಪಿ ಶತ್ರುಗಳು ಮಿತ್ರರಾಗಿ ಸಹಕರಿಸುವಂತಾಗಿರುವುದು ಮತ್ತು ಜಗತ್ತೇ ವಿಸ್ಮಯಗೊಂಡಿರುವುದು. ಇಂತಹ ಲೋಕವಿಸ್ಮಯಕರವಾದ ಮತ್ತು ಅಘಟಿತಕಾರ್ಯಸಿದ್ಧಿಕರವಾದ ಸತ್ಯಾಗ್ರಹವು ಭಾರತೀಯರ ಆಕಾಂಕ್ಷಿಯಾದ ಸ್ವರಾಜ್ಯವನ್ನು ಬ್ರಿಟಿಷರು ಪ್ರದಾನಮಾಡುವುದಕ್ಕೆ ಅಡ್ಡವಾಗಿರುತ್ತದೆಂದು ಲಾರ್ಡ್ ಶಾಂಕಿಯವರು ಭಾವಿಸಿ, ಮಹಾತ್ಮರು ಸತ್ಯಾಗ್ರಹವನ್ನು ಬಿಟ್ಟು ಪ್ರಭುತ್ವದವರೊಡನೆ ಸಹಕರಿಸಿದರೆ ಅನುಕೂಲವಾಗುವುದೆಂದು ಅಭಿಪ್ರಾಯಪಟ್ಟು ಒಂದು ಲೇಖವನ್ನು ಲೇಬರ್ ಪಕ್ಷದ ಪತ್ರಿಕೆಗೆ ಬರೆದಿರುತ್ತಾರೆ. ಅದರಲ್ಲಿ ಅವರು ಮುಖ್ಯವಾಗಿ ಹೇಳುತ್ತಿರುವುದೇನೆಂದರೆ, 'ಭಾರತೀಯರಲ್ಲಿ ಐಕಮತ್ಯವನ್ನುಂಟುಮಾಡಲು ಎಲ್ಲರೂ ಪ್ರಯತ್ನಿಸುವುದರಿಂದ ಭಾರತ ರಾಜ್ಯಾಂಗ ಸಮಸ್ಯೆಯು ಪರಿಹಾರವಾಗುವುದಲ್ಲದೆ ಮನುಷ್ಯರಲ್ಲಿ ಭೇದವನ್ನುಂಟುಮಾಡುವುದರಿಂದ ಎಂದಿಗೂ ಪರಿಹಾರವಾಗುವುದಿಲ್ಲ. ಶಾಂತಿಸ್ಥಾಪನೆಯು ಅತ್ಯಾವಶ್ಯಕವು. ಈ ಶಾಂತಿಸ್ಥಾಪನದಲ್ಲಿ ಜನರು ಸಹಕರಿಸದಿದ್ದರೆ ಯುದ್ಧೋಪಕರಣಗಳಾದ ವಿಮಾನಗಳು, ಟ್ಯಾಂಕುಗಳು ಮೊದಲಾದವುಗಳು ಸಾಧನಗಳಾಗಬೇಕಾಗುತ್ತವೆ. ಫೆಡರೇಷನ್ನಿನ ಏರ್ಪಾಟಿಗೆ ಪ್ರಯತ್ನವು ನಡೆಯುತ್ತಿರುವುದಷ್ಟೆ. ಇದು ಭಾರತ ಪ್ರಜೆಗಳೆಲ್ಲರೂ ಏಕೀಭವಿಸಲು ಅಂಗೀಕರಿಸಿದ ಹೊರತು ಸಾಧ್ಯವಲ್ಲ. ಈಗ ದೇಶದ ವಿಷಮ ಪರಿಸ್ಥಿತಿಯು ಬದಲಾಯಿಸಿ ಶಾಂತಿಸ್ಥಾಪನವಾಗುವಂತೆ ಪ್ರಯತ್ನಿಸಲು ಮಹಾತ್ಮರಿಗೆ ಅವಕಾಶವಿರುತ್ತದೆ. ಶಾಸನೋಲ್ಲಂಘನವು ಮಹಾ ಭಯಂಕರವಾದ ಸಾಧನವು. ಅದು ವ್ಯಕ್ತಿಗಳನ್ನು ನಾಶಪಡಿಸುವುದಲ್ಲದೆ ಸಕ್ರಮವಾದ ಪ್ರಭುತ್ವವನ್ನೂ ನಾಗರಿಕ ಸಂಘಗಳನ್ನೂ ಹಾಳುಮಾಡುವುದು. ಆದುಕಾರಣ ಮಹಾತ್ಮರು ಸತ್ಯಾಗ್ರಹವನ್ನು ಬಿಡಲೂ, ಕಾಂಗ್ರೆಸಿನವರು ದೊರೆತನದವರೊಡನೆ ಸಹಕರಿಸಲೂ ಅಂಗೀಕರಿಸಿದರೆ ವಿಷಮಪರಿಸ್ಥಿತಿಯು ನಿವಾರಣೆಯಾಗಿ ಅನುಕೂಲವಾಗುವುದು. ಮಹಾತ್ಮರು ದೃಢ ಸಂಕಲ್ಪದವರೆಂದೂ ಮಹಾ ಸ್ವದೇಶಾಭಿಮಾನಿಗಳೆಂಬೂ ಪ್ರಪಂಚದ ಎಲ್ಲ ಜನರಲ್ಲೂ ಮತ ಜಾತಿಯವರಲ್ಲೂ ಪ್ರೇಮವುಳ್ಳವರೆಂದೂ, ತಮ್ಮ ಉನ್ನತಾಶಯವನ್ನು ಸಾಧಿಸುವಲ್ಲಿ ಸಾಮರ್ಥ್ಯವುಳ್ಳವರೆಂದೂ ಅವರ ಜೀವನಚರಿತ್ರೆಯಿಂದ ವ್ಯಕ್ತವಾಗುತ್ತದೆ. ಇಂತಹ ಅದ್ಭುತ ಶಕ್ತಿಯನ್ನು, ಮಹಾತ್ಮರು ಸತ್ಯಾಗ್ರಹವನ್ನು ತ್ಯಜಿಸಿ ಭಾರತೀಯರೆಲ್ಲರೂ ಸಮ್ಮತಾರ್ಥ ಸಿದ್ಧಿಗಾಗಿ ಏಕೀಭವಿಸುವ ವಿಚಾರದಲ್ಲಿ ವಿನಿಯೋಗಿಸಿದರೆ ತತ್ಫಲ ಪ್ರಾಪ್ತಿಯಲ್ಲಿ ನನಗೆ ಯಾವ ಭಯವೂ ತೋರುವುದಿಲ್ಲ. ಭಾರತೀಯರ ನ್ಯಾಯವಾದ ಕೋರಿಕೆಯ ಪ್ರಾಪ್ತಿಗಾಗಿ ಅನುಕೂಲವಾದ ನಿರ್ಣಯಗಳನ್ನು ಮಾಡುವ ಬಗೆಗೆ ಪ್ರಬಲ ಪ್ರಯತ್ನವು ನಡೆಯಬೇಕಾಗಿದೆ. ಈ ವಿಷಯದಲ್ಲಿ ಆಲಸ್ಯವಾದಷ್ಟೂ ಭಾರತೀಯರಿಗೆ ಅಸಂತೃಪ್ತಿಯುಂಟಾಗುವುದು ಸಹಜವಾಗಿರುವುದು. ಹಾಗೆಂದ ಮೇಲೆ ಯಾವುದೋ ಒಂದು ವಿಧಾನವನ್ನು ಬರೆಯುವುದು ಸುಲಭವು, ಆದರೆ ಅದು ಆಚರಣ ಸಾಧ್ಯವಾಗಿರುವ ರೀತಿಯಲ್ಲಿರಬೇಕಾದುದರಿಂದ ಚೆನ್ನಾಗಿ ಪರ್ಯಾಲೋಚಿಸಲ್ಪಡಬೇಕಾಗಿದೆ. ಹೀಗೆ ಆಚರಣ ಸಾಧ್ಯವಾಗ ಫೆಡರಲ್ ಪ್ರಭುತ್ವವನ್ನೇರ್ಪಡಿಸಲು ದೊರೆತನದವರು ಪರ್ಯಾಲೋಚಿಸುತ್ತಿರುವರು. ಆದರಿಂದ ಭಾರತ ದೇಶದ ಎಲ್ಲ ಮತ ಜಾತಿಯ ಪ್ರಜೆಗಳಿಗೂ, ವರ್ತಕ ಸಂಘಗಳಿಗೂ ಸಂಪೂರ್ಣವಾದ ನ್ಯಾಯವುಂಟಾಗಬೇಕಾಗಿರುವುದರಿಂದ ಬಹು ದೀರ್ಘವಾಗಿ ಆಲೋಚಿಸಲ್ಪಡುತ್ತಿದೆ. ಭಾರತೀಯರಲ್ಲಿ ಏಕಾಭಿಪ್ರಾಯವುಂಟಾದರೆ ಇದು ಸಾಧ್ಯವಾಗುವುದು. ಕಳೆದ ಎರಡು ವರ್ಷಗಳಿಂದಲೂ ಸಮಾಧಾನವನ್ನುಂಟುಮಾಡಲು ನಾವು ಹಲವು ಸಹಕಾರ ಸಮಾಲೋಚನೆಗಳ ಮೂಲಕ ಅಂಗೀಕಾರಕ್ಕಾಗಿ ಪ್ರಯತ್ನಿಸುತ್ತಿರುವಲ್ಲಿ, ಇತರರು ಸತ್ಯಾಗ್ರಹದ ಮೂಲಕ ಕಾರ್ಯಸಿದ್ಧಿಯನ್ನು ಹೊಂದಲು ಪ್ರಯತ್ನಿಸುತ್ತಿರುವರು. ಇದರಿಂದ ನಮ್ಮ ಪ್ರಯತ್ನವು ಬಹಳ ಕಷ್ಟಕರವಾಗಿರುತ್ತದೆ' ಎಂದು ಶಾಂಕಿಯವರು ಬರೆದಿರುತ್ತಾರೆ. ಯಾವ ಸತ್ಯಾಗ್ರಹವು ಪ್ರಭುತ್ವದವರ ಶಾಂತಿಸ್ಥಾಪನ ಪ್ರಯತ್ನಕ್ಕೆ ವಿಘ್ನವಾಗಿರುತ್ತದೆಂದು ಲಾರ್ಡ್ ಶಾಂಕಿಯವರು ಹೇಳಿರುತ್ತಾರೋ ಆ ಸತ್ಯಾಗ್ರಹವೇ ಪ್ರಭುತ್ವದವರ ನಿರ್ಬಂಧ ವಿಧಾನಗಳಿಂದ ಆಗತಕ್ಕ ದುಷ್ಟ ಪರಿಣಾಮಗಳಿಗೆ ಪ್ರತಿಬಂಧಕವಾಗಿರುವುದು. ಪ್ರಭುತ್ವದವರು ನಿರ್ಬಂಧ ವಿಧಾನಗಳನ್ನು ತಪ್ಪಿಸಿದಲ್ಲಿ ತಾವು ಸತ್ಯಾಗ್ರಹವನ್ನು ಬಿಡುತ್ತೇವೆಂದು ಮಹಾತ್ಮರು ಘಂಟಾಘೋಷವಾಗಿ ಹೇಳುತ್ತಾರೆ. ಮೊದಲು ಸತ್ಯಾಗ್ರಹವನ್ನು ಬಿಟ್ಟರೆ ಅನಂತರ ನಿರ್ಬಂಧ ವಿಧಾನಗಳು ತಪ್ಪಿಸಲ್ಪಡುವುವೆಂದು ಪ್ರಭುತ್ವದವರು ತಿಳಿಸುತ್ತಾರೆ. ಇದು "ಮುಷ್ಟಿ ಬಿಟ್ಟಹೊರತು ಬೆಣ್ಣೆಯನ್ನು ಕೊಡುವುದಿಲ್ಲ, ಬೆಣ್ಣೆಯನ್ನು ಕೊಟ್ಟಹೊರತು ಮುಷ್ಟಿ ಬಿಡುವುದಿಲ್ಲ" ಎಂಬ ಗಾದೆಗನುಸಾರವಾಗಿದೆ. ಮಹಾತ್ಮರ ಬಿಡುಗಡೆಯನ್ನು ನಿರೀಕ್ಷಿಸುವ ಮತ್ತು ಭಾರತೀಯರ ಹಿತಸಾಧಕರೆಂದು ವಿಜೃಂಭಿಸುತ್ತಿರುವ ಲಾರ್ಡ್ ಶಾಂಕಿಯವರೇ ಆಗಾಗ ಬ್ರಿಟಿಷ್ ಮಂತ್ರಿಗಳು, ಸರ್ಕಾರಿ ವಿಧಾನಗಳನ್ನು ಸಡಿಲಿಸಿ ಅನೇಕ ಶಾಸನಗಳನ್ನು ವಾಪಸು ತೆಗೆದುಕೊಂಡರೆ ಸತ್ಯಾಗ್ರಹವು ನಿಂತು ಭಾರತ ರಾಜ್ಯಾಂಗ ನಿರ್ಮಾಣ ವಿಚಾರದಲ್ಲಿ ಸಹಕಾರವು ದೊರೆತು ಶೀಘ್ರವಾಗಿ ಕಾರ್ಯಸಿದ್ಧಿಗೆ ಅನುಕೂಲವಾಗುವಂತೆ ಪ್ರಯತ್ನಿಸಿ ತಮ್ಮ ಸಿದ್ಧಾಂತವಾದ ಶಾಂತಿ ಸ್ಥಾಪನೆಯನ್ನು ಶೀಘ್ರಗೊಳಿಸುವ ಕಡೆಗೆ ಲಕ್ಷ್ಯಕೊಡುತ್ತಾರೆಯೆ?

ಮೈಸೂರು ವಿಪನ್ನರ ಸಹಾಯಕ ಫಂಡು

ಸಂಸ್ಥಾನದಲ್ಲಿ ಅಗ್ನಿಯನಾಹುತ ಇತ್ಯಾದಿ ಕಾರಣಗಳಿಂದ ವಿಪನ್ನರಾದವರ ಸಹಾಯಾರ್ಥವಾಗಿ ಒಂದು ಫಂಡೂ, ಅದರ ಆಡಳಿತಕ್ಕಾಗಿ ಟ್ರಸ್ಟಿಗಳ ಒಂದು ಬೋರ್ಡೂ 1927 ನೆಯ ಏಪ್ರಿಲ್ ತಿಂಗಳಲ್ಲಿ ಪ್ರಭುತ್ವದವರಿಂದೇರ್ಪಡಿಸಲ್ಪಟ್ಟು ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು ಅದರ ಅಧ್ಯಕ್ಷರಾಗಿಯೂ ಮ|| ಬಿ. ಕೆ. ಗರುಡಾಚಾರ್ಯರು ರಾವ್ ಬಹದ್ದೂರ್ ಎಚ್. ಎಸ್. ಸಂಜೀವಯ್ಯನವರು ಮತ್ತು ಚೀಫ್ ಸೆಕ್ರೆಟರಿಯವರು ಮೆಂಬರುಗಳಾಗಿಯೂ ನಿಯಮಿಸಲ್ಪಟ್ಟರು. ಈ ಫಂಡಿನ ಆರಂಭದಲ್ಲಿ 73,600 ರೂ. ಗಳಿದ್ದುವು. ಅಗ್ನಿ ಮೊದಲಾದವುಗಳಿಂದುಂಟಾಗುವ ಅನಾಹುತಗಳ ವಿಚಾರವೂ, ಅವುಗಳಿಗಾಗಿ ವಿಪನ್ನರಾದವರಿಗೆ ಬೇಕಾದ ಸಹಾಯವೂ ತಿಳಿದುಬಂದ ಕೂಡಲೆ ಬೋರ್ಡಿನವರು ಕೊಂಚವೂ ತಡವಿಲ್ಲದೆ ಆವಶ್ಯಕವಾದ ಸಹಾಯ ದ್ರವ್ಯವನ್ನು ಕಳುಹಿಸಿಕೊಟ್ಟಿರುತ್ತಾರೆ. 1927 ನೆಯ ಏಪ್ರಿಲ್ ತಿಂಗಳಿಂದ 1932 ನೆಯ ಜುಲೈ ತಿಂಗಳ ವರೆಗೆ 4100 ರೂ. ಗಳು ಅಗ್ನಿಯನಾಹುತದಿಂದ ವಿಪನ್ನರಾದವರಿಗೆ ಕೊಡಲ್ಪಟ್ಟವು. 1933 ನೆಯ ಜುಲೈ ತಿಂಗಳ ಕಡೆಯ ವರೆಗೆ ಈ ಫಂಡಿನಲ್ಲಿ ರೂ. 80763-3-11 ಇದ್ದಿತು. ಈ ಹಣವು ಮೈಸೂರು ಬ್ಯಾಂಕಿನಲ್ಲಿಡಲ್ಪಟ್ಟಿದೆ. ಡೆಪ್ಯುಟಿ ಕಮಿಷನರುಗಳು ತಂತಮ್ಮ ಡಿಸ್ಟ್ರಿಕ್ಟುಗಳಲ್ಲಿ ನಡೆದ ಅನಾಹುತಗಳಿಂದ ವಿಪನ್ನರಾದವರ ವಿಚಾರವನ್ನು ಬೋರ್ಡಿನವರಿಗೆ ಕೂಡಲೆ ತಿಳಿಸಿ ಸಹಾಯವನ್ನು ದೊರಕಿಸಬೇಕಾಗಿ ಪ್ರಭುತ್ವದವರಿಂದ ಕೋರಲ್ಪಟ್ಟಿರುತ್ತಾರೆ.

ಸಿ. ಎಸ್. ದೊರಸ್ವಾಮಯ್ಯರ್‌ರವರ ನಿಧನ

ನಮ್ಮ ಸಂಸ್ಥಾನದ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿದ್ದ ಮ|| ಸಿ. ಎಸ್. ದೊರಸ್ವಾಮಯ್ಯರ್, ಬಿ. ಎ., ಬಿ. ಎಲ್. ರವರು ಕಳೆದ ಶನಿವಾರ ಕೋರ್ಟಿಗೆ ಬಂದು ಸಾಯಂಕಾಲದವರೆಗೆ ಕೆಲಸ ಮಾಡುತ್ತಿದ್ದು ಕೊಂಚ ಹೊಟ್ಟೆ ನೋಯುತ್ತಿದೆಂದು ಹೇಳಿ ಮನೆಗೆ ಹೋದಮೇಲೆ 1-2 ವೇಳೆ ಬರೀ ರಕ್ತ ವಾಂತಿಯಾಗಿ ವೈದ್ಯರು ಚಿಕಿತ್ಸೆ ಮಾಡಿದಾಗ್ಯೂ ಗುಣ ಹೊಂದದೆ ಶಿವಾಧೀನರಾದರೆಂದು ತಿಳಿಯಲು ಅತ್ಯಂತ ವಿಷಾದವಾಗುತ್ತದೆ. ಇವರು ಕೆಲಕಾಲದಿಂದ ದೇಹಾಲಸ್ಯವಾಗಿದ್ದಿತಾದರೂ ಮರಣವು ಇಷ್ಟು ಆಕಸ್ಮಿಕವಾಗಿ ಸಂಭವಿಸುತ್ತದೆಂದು ಯಾರಿಗೂ ತೋರಲಿಲ್ಲ. ಇವರು ಒಳ್ಳೆ ನ್ಯಾಯ ವಿಮರ್ಶಕರೂ ಸಮರ್ಥರೂ ಆಗಿದ್ದು ರಾಜಭೂಷಣ ಪ್ರವೀಣರೆಂಬ ಪ್ರಶಸ್ತಿಯನ್ನು ಪ್ರಭುವರ್ಯರಿಂದ ಪಡೆದು ಸನ್ಮಾನ್ಯರಾಗಿದ್ದರು. ಮೃತರ ಆತ್ಮಕ್ಕೆ ಶಾಂತಿಯನ್ನೂ ಕುಟುಂಬಕ್ಕೆ ದುಃಖ ಸಮಾಧಾನವನ್ನೂ ಕೋರುತ್ತೇವೆ. ಮೃತರ ಗೌರವ ಪ್ರದರ್ಶನಾರ್ಥವಾಗಿ ಸಂಸ್ಥಾನದ ಕೋರ್ಟುಗಳೆಲ್ಲ ಈ ದಿವಸ ಮುಚ್ಚಲ್ಪಟ್ಟಿವೆ.

ನೈಜಾಮರ ದೇಹಾರೋಗ್ಯ

ನೈಜಾಮರಿಗೆ ಜ್ವರ ಬರುತ್ತಿದ್ದುದರಮೇಲೆ ಅವರ ಯಾವ ಕೆಲಸವನ್ನೂ ಮಾಡದೆ ಮನೆಯಲ್ಲಿದ್ದರು. ಈಗ ವೈದ್ಯರ ಚಿಕಿತ್ಸೆಯಿಂದ ಗುಣಮುಖವಾಗಿರುವುದಲ್ಲದೆ ರಾತ್ರಿ ವೇಳೆ ಸುಖವಾಗಿ ನಿದ್ರೆಮಾಡುವರೆಂದು ತಿಳಿಯಬಂದಿದೆ.

ರೂಜುವೆಲ್ಟ್‌ರವರು ಅಧ್ಯಕ್ಷರಾದರು

ರೂಜುವೆಲ್ಟ್‌ರವರು ಅಮೇರಿಕಾ ದೇಶದ ಅಧ್ಯಕ್ಷರಾಗಿ ಆರಿಸಲ್ಪಟ್ಟುದರಿಂದ ಪ್ರಪಂಚಕ್ಕೆಲ್ಲ ಲಾಭವಾಗುವುದೆಂದು ಅಮೇರಿಕೆಯ ಪ್ರತಿನಿಧಿಯಾಗಿ ಆಯುಧ ವಿಸರ್ಜನ ಸಭೆಗೆ ಹೋಗಿರುವ ನಾರ್ಮನ್ ಡೇವಿಸ್‌ರವರು ಹೇಳಿದರು.

ಪ್ರಚಂಡ ಸುಂಟರ ಗಾಳಿ

ಗಂಟೆಗೆ 200 ಮೈಲುಗಳ ವೇಗದಿಂದ ಸುಂಟರಗಾಳಿ ಬೀಸಿ ಕುಂಬೇಲಾತನಾಗಿ ಮಳೆ ಸುರಿಗಿತು. ಇದರಿಂದ ಅಮೇರಿಕೆಯ ನ್ಯೂವಿತಾ ಎಂಬಲ್ಲಿ ಮನೆಗಳೆಲ್ಲ ಬಿದ್ದು 26 ಮಂದಿ ಹತರಾದರು ಮತ್ತು ಕಮಾಗಿಫೀ ಎಂಬೂರಿನಲ್ಲಿ 200 ಮಂದಿ ಸತ್ತುಹೋದುದಾಗಿ ಊಹಿಸಲ್ಪಟ್ಟಿದೆ.

ಡಿನೆಲಿರಾಯವರಿಗೆ ವಾರಸತ್ವವು

ಬ್ರಿಟನ್ನಿನಲ್ಲಿದ್ದ 73 ವರ್ಷ ವಯಸ್ಸಿನ ಮೇರೀ ಪಿಟಿಜ್ ಪ್ಯಾಟಿಕ್ ಕನ್ಯೆ ಎಂಬಾಕೆಯು ಮೃತಳಾದಳು. ಈಕೆಯು 78000 ರೂಪಾಯಿ ಬೆಲೆ ಬಾಳುವ ತನ್ನ ನಗನಾಣ್ಯಗಳೇ ಮೊದಲಾಗಿ ಆಸ್ತಿಯೆಲ್ಲವೂ ಡಿನೆಲಿರಾಯವರಿಗೆ ಸೇರಬೇಕೆಂದು ಮೃತ್ಯು ಪತ್ರದಲ್ಲಿ ಬರೆದಿದ್ದಳು. ಈಗ ಐರ್ಲೆನ್ನಿನಲ್ಲಿರುವ ಆಕೆಯ ಸಹೋದರನು ಅಕ್ಕನ ಆಸ್ತಿಯು ತನಗೆ ಬರಬೇಕೆಂದೂ ಡಿನೆಲಿರಾಯವರು ತಮಗೆ ಬರಬೇಕೆಂದೂ ವಾದಿಸುತ್ತಿರುವರು.

ಸಣ್ಣಹುಡುಗಿ ಹೊಸಳಿಗೆಗಳ ಹಾವಳಿ

ತ್ರಿಚನಾಪಲ್ಲಿ ಹತ್ತಿರದ ಸಮೀಪ ಗ್ರಾಮದಲ್ಲಿ ಒಂದು ಹುಡುಗಿಯ ಮೇಲೆ ಹುಡುಗಿಯು ಹೇಳುತ್ತಿದ್ದುದು ಪೋಲೀಸರಿಗೆ ತಿಳಿದು ಅವರು ಒಂದು ಬಡವನ್ನು ತೆಗೆದು ವಿಚಾರಣೆ ನಡೆಸಿದುದರ ಮೇಲೆ ಆ ನದಿಯಲ್ಲಿ ಹೊಸಳೆಗಳು ಬಹಳವಾಗಿರುವುದರಿಂದಲೂ, 14 ವರ್ಷದ ತಿಯ್ಯಾ ಜಾತಿಯ ಹುಡುಗಿ ಒಬ್ಬಳು ನೀರಿನಲ್ಲಿ ಸ್ನಾನ ಮಾಡುತ್ತಿರುವಾಗ ಹೊಸಳೆಯು ಹಿಡಿದುಕೊಂಡು ಒಯ್ದು ಕೊಂದಿರಬಹುದಾಗಿ ಹೇಳಲಾಗಿದೆ. ಈ ಹುಡುಗಿಯು ಅವಳ ಮನೆಯವರಿಗೆ ಹೇಳದೆ ಹೋಗಿದ್ದಳೆಂದೂ ತಿಳಿದುಬಂದಿದೆ.

ನ್ಯೂಯಾರ್ಕಿನ ಛಾಕರರವರ ಮೈಸೂರು ಪ್ರವಾಸ

ಹಿಂದೆ ನ್ಯೂಯಾರ್ಕಿನಲ್ಲಿ ಮೇಯರಾಗಿದ್ದ ಛಾಕರ್‌ರವರು ಅಕ್ಟೋಬರ್ ತಿಂಗಳಲ್ಲಿ ಯೂರೋಪಾ ಎಂಬ ಹಡಗಿನಲ್ಲಿ ನಮ್ಮ ಯುವರಾಜರ ಸಂಗಡ ಪ್ರಯಾಣ ಮಾಡುವಾಗ್ಗೆ ಪರಸ್ಪರ ಪರಿಚಯವಾಯಿತು. ಈ ಛಾಕರ್‌ರವರು ನ್ಯೂಯಾರ್ಕಿನಿಂದ ಕಾರೀನ್ ಗ್ಯಾಡಿ ಎಂಬ ಹಡಗಿನಲ್ಲಿ ಯೂರೋಪಿಗೆ ಪ್ರಯಾಣ ಮಾಡುವರು. ಇವರು ಅಲ್ಲಿಂದ ಇಂಡಿಯಾಕ್ಕೆ ಹೊರಟು ಮೈಸೂರಿಗೂ ಬಂದು ನಮ್ಮ ಯುವರಾಜರ ಅತಿಥಿಗಳಾಗಿರುವರೆಂದು ತಿಳಿಯಬರುತ್ತದೆ.

ಪಾರಿವಾಳಗಳ ಸೇನೆ

ಇಟಲೀ ರಾಜರಾದ ವಿಕ್ಟರ್‌ರವರ ಜನ್ಮದಿನೋತ್ಸವದ ದಿವಸ 9000 ಸೈನಿಕರ ಅಂಗವಿನ್ಯಾಸವು ನಡೆಯಿತು. ಮುಸಲೋನಿಯವರು ಇದನ್ನು ಪರಿಶೀಲಿಸಿದರು. ಆ ವೇಳೆಯಲ್ಲಿ ಮೋಟಾರು ಲಾರಿಗಳಿಂದ ಹೊರಕ್ಕೆ ಬಿಡಲ್ಪಟ್ಟ ಪಾರಿವಾಳಗಳ ಸೇನೆಯಲ್ಲಿ ಸಾವಿರಾರು ಪಕ್ಷಿಗಳು ಮುಸಲೋನಿಯವರ ತಲೆಯ ಮೇಲೆ ಎಗರಿದುವು. ಅದನ್ನು ನೋಡಿ ಅವರಿಗೆ ನಗೆ ಬಂದಿತು. ಒಂದೂಕಗಳನ್ನು ಹಿಡಿದು ಸೈನಿಕರು ಹೋಗುವಂತೆಯೇ ಈ ಪಾರಿವಾಳಗಳೂ ಬಂದೂಕಗಳನ್ನು ಹಿಡಿದುಕೊಂಡು ಹೋದವಂತೆ.

ಮಹಾತ್ಮರ ಬಿಡುಗಡೆಗೆ ಸ್ಪೆಂಡರ ಸೂಚನೆ

ಅಸ್ಪೃಶ್ಯತಾ ನಿವಾರಣೆಯ ಕಡೆಗೆ ಮಹಾತ್ಮರು ತಮ್ಮ ದೃಷ್ಟಿಯನ್ನು ಕೇಂದ್ರೀಕರಿಸಲು ಅವರನ್ನು ಕಾರಾಗೃಹ ಬಂಧನದಿಂದ ಬಿಡುವುದು ಬಹಳ ಅಗತ್ಯವೆಂದೂ, ರೌಂಡು ಟೇಬಲು ಸಮಾವೇಶಕ್ಕೆ ಅನುಕೂಲ ವಾತಾವರಣವನ್ನುಂಟುಮಾಡಲಿಕ್ಕೆ ಇದಕ್ಕಿಂತಲೂ ಅನುಕೂಲ ಮಾರ್ಗವು ಬೇರೊಂದಿಲ್ಲವೆಂದೂ ಪತ್ರಿಕಾ ನಿರ್ವಹಣದಲ್ಲಿ ಪ್ರಸಿದ್ಧರಾದ ಜೆ. ಸ್ಪೆಂಡರ್‌ರವರು ನ್ಯೂಸ್ ಕ್ರಾನಿಕಲ್ ಎಂಬ ಪತ್ರಿಕೆಯಲ್ಲಿ ಬರೆದಿರುತ್ತಾರೆ. ಇದೇ ರೀತಿ ದೂರದೃಷ್ಟಿಯುಳ್ಳ ಬ್ರಿಟಿಷ್ ಪ್ರಮುಖರನೇಕರು ಅಭಿಪ್ರಾಯಪಟ್ಟಿರುವರು.

ಪರದೇಶದ ಉಪ್ಪಿನಮೇಲಿನ ಸುಂಕ

ಕಸ್ಟಂ ಡ್ಯೂಟಿ ಕಲೆಕ್ಟರವರು ಪರದೇಶಗಳಿಂದ ಬರುವ ಉಪ್ಪಿನ ಮೇಲಿನ ಸುಂಕವನ್ನು ಹೆಚ್ಚಿಸುವುದನ್ನು ಕುರಿತು ವರ್ತಕರ ಅಭಿಪ್ರಾಯವನ್ನು ಕೇಳಿರುವಾಗ್ಗೆ ಉಪ್ಪಿನ ದೊಡ್ಡ ವರ್ತಕರಾದ ರಾಯ್ ಜ್ಞಾನೇಂದ್ರನಾಥ ಡಿ. ಬಹದ್ದೂರ್ ಅಂಡ್ ಸನ್ಸ್ ರವರ ಪ್ರತಿನಿಧಿಗಳು "ಪರದೇಶದ ಉಪ್ಪಿಗೆ ಗಿರಾಕಿಯಿಲ್ಲದಿರುವುದರಿಂದ ಕೆಲ ತಿಂಗಳಿಂದಲೂ ಅದರ ಬೆಲೆಯು 100 ಮಣಕ್ಕೆ 15 ರಿಂದ 12 ರೂ. ಗಳಿಗಿಳಿದು ಹೋಗಿದೆ. ಭಾರತ ದೇಶದ ಉಪ್ಪಿನ ಸಂಗಡ ಪರದೇಶದ ಉಪ್ಪು ಪೋಟಿಗೆ ನಿಲ್ಲುವುದಿಲ್ಲ. ಉಪ್ಪಿನ ಪೈಪೋಟಿ ಹೆಚ್ಚಾಗಿರುವುದರಿಂದ ಭಾರತ ದೇಶದ ಉಪ್ಪನ್ನು ಹಡಗಿನಿಂದ ವಿಶೇಷವಾಗಿ ವಿಕ್ರಯಿಸಲು ಸಾಧ್ಯವಲ್ಲ" ಎಂದು ಹೇಳಿರುತ್ತಾರೆ.

ನಾಸಿಕದ ಪುಷ್ಕರಣಿಯಲ್ಲಿ ಹರಿಜನರು ಸ್ನಾನ ಮಾಡಕೂಡದು

ನಾಸಿಕದ ಪುಷ್ಕರಣಿಯಲ್ಲಿ ಹರಿಜನರು ಸ್ನಾನಮಾಡಕೂಡದೆಂದು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಕಟ್ಟಪ್ಪಣೆ ಮಾಡಿರುವರು. ಇದರ ಮೇಲೆ ನಾಸಿಕ ದೇವಾಲಯ ಪ್ರವೇಶ ಸತ್ಯಾಗ್ರಹ ಸಂಘದ ಕಾರ್ಯದರ್ಶಿಯು ಬೊಂಬಾಯಿ ಹೈ ಕೋರ್ಟಿಗೆ ಅಪೀಲನ್ನು ಮಾಡಿಕೊಂಡಿರಲು "ಹರಿಜನರು ಪುಷ್ಕರಣಿಯಲ್ಲಿ ಸ್ನಾನಮಾಡಲು ಸನಾತನರು ಆಕ್ಷೇಪಿಸುತ್ತಾರಾದುದರಿಂದ ಹರಿಜನರು ಅಲ್ಲಿ ಸ್ನಾನಮಾಡಿದರೆ ದೊಂಬಿ ನಡೆದು ಪ್ರಜಾಶಾಂತಿಗೆ ಭಂಗವಾಗುತ್ತದೆಂಬುದರ ಮೇಲೆ ನಿರ್ಬಂಧದ ಅಪ್ಪಣೆ ಮಾಡಿರುತ್ತಾರೆ. ಆ ಪುಷ್ಕರಣಿಯು ಬಹಿರಂಗ ಸ್ಥಳವೆಂದು ಹರಿಜನರು ಸಿವಿಲ್ ಕೋರ್ಟಿನಲ್ಲಿ ವಿವಾದ ನಡೆಯಿಸಿ ತಮ್ಮ ಹಕ್ಕನ್ನು ಸ್ಥಾಪಿಸಿಕೊಳ್ಳತಕ್ಕದ್ದು" ಎಂದು ಹೈ ಕೋರ್ಟಿನವರು ತೀರ್ಮಾನಿಸಿರುತ್ತಾರೆ.

ಕೆಂಟರ್‌ಬರೀ ಆರ್ಚ್ ಬಿಷಪ್ಪರ ಪ್ರಕಟನೆ

ಹಿಂದೆ ನಡೆದ ರೌಂಡುಟೇಬಲು ಸಭೆಯು ಪ್ರಜೆಗಳ ದೃಷ್ಟಿಯನ್ನು ಆಕರ್ಷಿಸಿದ್ದಂತೆ ಈ ವೇಳೆ ನಡೆಯುವ ಸಭೆಯು ಪ್ರಜೆಗಳ ಲಕ್ಷ್ಯವನ್ನು ಆಕರ್ಷಿಸಿರುವುದಿಲ್ಲವಾದರೂ ಅದರಲ್ಲಿ ಚರ್ಚಿಸಲ್ಪಡುವ ವಿಷಯಗಳ ಪ್ರಾಮುಖ್ಯತೆಯೇನೂ ಕಡಿಮೆಯಾಗಿಲ್ಲ. ಬಿಲ್ಲನ್ನು ಪಾರ್ಲಿಮೆಂಟು ಸಭೆಯಲ್ಲಿ ಉಪಪಾದಿಸಬೇಕಾದ ಸಮಯವು ಸಮೀಪವಾಗುತ್ತಿದ್ದರೂ ಸಂದಿಗ್ಧ ವಿಷಯಗಳ ಪರಿಹಾರವಾಗಿರುವುದಿಲ್ಲ. ಇದು ಬಹಳ ಮುಖ್ಯವೂ ಕಠಿಣವೂ ಆದ ಸಮಸ್ಯೆಯಾಗಿರುವುದರಿಂದ ಇದರಲ್ಲಿ ಭಾಗಿಗಳಾಗುವವರೆಲ್ಲರಿಗೂ ಈಶ್ವರನು ಒಳ್ಳೆಯ ಬುದ್ಧಿ ಪ್ರೇರಣೆಮಾಡುವಂತೆ

[illegible] ಮನೆಗಳಲ್ಲೂ, ದೇವಾಲಯಗಳಲ್ಲೂ ದೇವರನ್ನು ಸ್ಥಾಪಿಸಬೇಕು [illegible] ಪ್ರಕಟಿಸಿದ್ದಾರೆ

[illegible]

ಒಂದಾನೊಂದು ಕಾಲದಲ್ಲಿ [illegible] ಪ್ರಮುಖರುಗಳು ಕಳುಹಿಸಲ್ಪಡುತ್ತಿದ್ದ [illegible] ಅಂಡಮಾನ್ ದ್ವೀಪಗಳ ಅನಾರೋಗ್ಯಕರ ಸ್ಥಿತಿಯನ್ನು ಕುರಿತು ಆ ದೇಶದ ಪತ್ರಿಕೆಗಳು ಖಂಡಿಸಿ ಬರೆಯುತ್ತಿವೆ ಈ ದ್ವೀಪನಿವಾಸವು ಅನಾರೋಗ್ಯಕರವೆಂದೂ, ಅಲ್ಲಿಗೆ ಬಂದಿಗಳನ್ನು ಕಳುಹಿಸಕೂಡದೆಂದೂ ಕಾರಾಗೃಹ ವಿಚಾರಣ ಸಂಘದವರು ಅಭಿಪ್ರಾಯಪಟ್ಟಿದ್ದರು ಆದರೆ ಅಂಡಮಾನ್ ದ್ವೀಪಗಳಲ್ಲಿ ಪೂರ್ವಸ್ಥಿತಿಯಾಗಿಲ್ಲವೆಂದು ಭಾರತ ಮಂತ್ರಿಗಳು ಸಮಾಧಾನ ಹೇಳುತ್ತಿರುವರು ಇಂತಹ ಅನಾರೋಗ್ಯ ಸ್ಥಳಕ್ಕೆ ಪುರುಷ ಬಂದಿಗಳನ್ನು ಕಳುಹಿಸುವುದೇ ಯುಕ್ತವಲ್ಲವಾಗಿರುವಾಗ ಸ್ತ್ರೀ ಬಂದಿಗಳನ್ನು ಕಳುಹಿಸುವುದು ಶುದ್ಧ ಅಸಂಗತವೆಂಬುದು ಮಂತ್ರಿಗಳ ಮನಸ್ಸಿಗೆ ತೋಚದೆ ಹೋದುದು ಆಶ್ಚರ್ಯವು

ಸೆಷನ್ಸು ಜಡ್ಜರಿಗೆ ಬಿಳೀ ಕೈಚೀಲದ ಬಹುಮಾನ

ಕೃಷ್ಣ ಡಿಸ್ಟ್ರಿಕ್ಟಿನ ಸೆಷನ್ಸು ಜಡ್ಜಿಯವರಿಗೆ ಪಬ್ಲಿಕ್ ಪ್ರಾಸಿಕ್ಯೂಟರು ಕಳೆದ ಮಂಗಳವಾರ ಒಂದು ಜತೆ ಬಿಳೀ ಕೈಚೀಲವನ್ನು ಬಹುಮಾನಿಸಿದರು ಆ ಸಂದರ್ಭದಲ್ಲಿ ಭಾಷಣ ಮಾಡುವಾಗ್ಗೆ "ಸೆಷನ್ಸ್ ಜಡ್ಜಿಯವರ, ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಮತ್ತು ಡಿಸ್ಟ್ರಿಕ್ಟ್ ಪೋಲೀಸು ಸೂಪರಿಂಟೆಂಡೆಂಟರ ಪ್ರಯತ್ನ ವಿಶೇಷದಿಂದ ನವೆಂಬರ್ ತಿಂಗಳಲ್ಲಿ ಒಂದಾದರೂ ಸೆಷನ್ಸು ಮೊಕದ್ದಮೆಯಿಲ್ಲದಿರುವುದರಿಂದ ನನ್ನ ಕೃತಜ್ಞತಾಪೂರ್ವಕವಾದ ಸಂತೋಷಪ್ರದರ್ಶನಾರ್ಥವಾಗಿ ಈ ಬಿಳೀ ಕೈ ಚೀಲಗಳನ್ನು ನಿಮಗೊಪ್ಪಿಸಿರುತ್ತೇನೆ ಈಗ್ಗೆ ಮೂರು ವರ್ಷಗಳ ಹಿಂದೆ ಹೀಗೆಯೇ ಒಂದು ತಿಂಗಳಲ್ಲಿ ಸೆಷನ್ಸು ಕೇಸು ಇಲ್ಲದಿದ್ದುದರಿಂದ ಆಗ ಸೆಷನ್ಸು ಜಡ್ಜಿಯಾಗಿದ್ದವರಿಗೆ ಕೈ ಚೀಲಗಳನ್ನೊಪ್ಪಿಸುವ ಗೌರವವು ನನಗೆ ಲಭ್ಯವಾಗಿದ್ದಿತು" ಎಂದು ಹೇಳಿದರು ಸೆಷನ್ಸು ಜಡ್ಜಿಯವರು "ನವೆಂಬರ್ ತಿಂಗಳಲ್ಲಿ ಸೆಷನ್ಸು ಮೊಕದ್ದಮೆಯಿಲ್ಲದಿರುವುದು ಸಂತೋಷಪ್ರದವಾಗಿದೆ ಪಬ್ಲಿಕ್ ಪ್ರಾಸಿಕ್ಯೂಟರು ಕೈ ಚೀಲಗಳನ್ನು ಬಹುಮಾನಿಸಿದುದಕ್ಕಾಗಿ ಅವರನ್ನು ನಾನು ವಂದಿಸುತ್ತೇನೆ ಸೆಷನ್ಸು ಕೇಸು ಇಲ್ಲದಿರುವಾಗ್ಗೆ ಷರೀಫನು ಜಡ್ಜಿಗೆ ಬಿಳೀ ಕೈ ಚೀಲಗಳನ್ನೊಪ್ಪಿಸುವುದು ವಾಡಿಕೆಯಾಗಿರುತ್ತದೆಂದು ವಾರ್ಟನರ ಗ್ರಂಥದಿಂದ ವ್ಯಕ್ತವಾಗುತ್ತದೆ ಆದರೆ ಈ ಪದ್ಧತಿ ಯಾವಾಗಾರಂಭವಾಯಿತೆಂಬುದು ಗೊತ್ತಾಗುವುದಿಲ್ಲ" ಎಂದು ಜಡ್ಜಿಯವರು ತಮ್ಮುತ್ತರದಲ್ಲಿ ತಿಳಿಸಿದರು

ಎವರೆಸ್ಟ್ ಶಿಖರಾರೋಹಣ

ಹಿಮವತ್ಪರ್ವತದ ಶಿಖರಗಳಲ್ಲಿ ಅತ್ಯುನ್ನತವಾದ ಎವರೆಸ್ಟ್ ಶಿಖರವನ್ನು ವಾಯುವಿಮಾನದ ಮೂಲಕ ಆರೋಹಣ ಮಾಡುವ ಪ್ರಯತ್ನ ನಡೆಯುತ್ತಿದೆ ತತ್ಸಂಬಂಧವಾಗಿ ಪಾರ್ಲಿಮೆಂಟು ಮೆಂಬರಾದ ಲಾರ್ಡ್ ಕ್ಲೈಡೆಸ್ಡೇಲ್ ಎಂಬವರು ಇಂಗ್ಲೆಂಡಿನಲ್ಲಿ ಒಂದು ಬಹಿರಂಗ ಸಭೆಯೊಳಗೆ ಭಾಷಣ ಮಾಡುವಾಗ್ಗೆ ಈ ಪ್ರಕಾರವಾಗಿ ಹೇಳಿದರು "ಈ ಶಿಖರಾರೋಹಣ ಪ್ರಯತ್ನವು ಜಯಪ್ರದವಾಗಿ ನಡೆದರೆ ಭಾರತ ದೇಶದಲ್ಲಿ ಒಳ್ಳೇ ಖ್ಯಾತಿಯೂ ಪ್ರಯೋಜನವೂ ಉಂಟಾಗುವುವು ಇದರಿಂದ ಬ್ರಿಟಿಷ್ ದೇಶವು ಅಧೋಗತಿಗಿಳಿಯುತ್ತಿದೆ ಎಂಬ ಅಪಪ್ರಥೆಯು ತಪ್ಪು ಬ್ರಿಟನ್ನು ನವೀನ ಸ್ವರೂಪವನ್ನು ತಾಳಿ ಉನ್ನತ ಸ್ಥಿತಿಗೆ ಏರುತ್ತಿರುವುದೆಂದು ಸ್ಥಾಪಿತವಾಗುವುದು ನಮ್ಮ ಜನಾಂಗಕ್ಕೆ ಪೌರುಷವೂ ಚಟುವಟಿಕೆಯೂ ಇನ್ನೂ ಹೆಚ್ಚಾಗಿರುತ್ತವೆಂದೂ, ನಾವು ಧೈರ್ಯಸಾಹಸಗಳಿಂದ ಎಂತಹ ತೊಂದರೆಗಳಿಂದಲಾದರೂ ಪಾರಾಗುವೆವೆಂದೂ ಭಾರತೀಯರಿಗೆ ವ್ಯಕ್ತವಾಗುವುದು ಬ್ರಿಟಿಷರ ಗೌರವಪ್ರತಿಷ್ಠೆಗಳನ್ನು ಪ್ರಪಂಚದಲ್ಲೆಲ್ಲ ಮುಖ್ಯವಾಗಿ ಭಾರತದೇಶದಲ್ಲಿ ಹೆಚ್ಚಿಸಬೇಕೆಂಬುದೇ ಈ ಶಿಖರಾರೋಹಣ ಪ್ರಯತ್ನದ ಮುಖ್ಯೋದ್ದೇಶವಾಗಿರುತ್ತದೆ ಅಮೇರಿಕೆಯವರು ಉತ್ತರ ದಕ್ಷಿಣ ಧ್ರುವಗಳನ್ನು ಆಕಾಶಯಾನದ ಮೂಲಕ ದಾಟಿರುತ್ತಾರೆ ಪೆಸಿಫಿಕ್ ಮತ್ತು ಅಟ್ಲಾಂಟಿಕ್ ಸಮುದ್ರಗಳು ಸಹ ದಾಟಲ್ಪಟ್ಟಿರುತ್ತವೆ ಪ್ರಪಂಚದಲ್ಲೆಲ್ಲ ಬಹಳ ಪ್ರಾಮುಖ್ಯವಾಗಿರುವ ಎವರೆಸ್ಟ್ ಪರ್ವತವು ಮಾತ್ರ ಈ ವರೆಗೆ ದಾಟಲ್ಪಟ್ಟಿಲ್ಲವಾದುದರಿಂದ ಅದನ್ನು ದಾಟುವುದು ಬಹಳ ಆವಶ್ಯಕವೂ ಖ್ಯಾತಿಪ್ರದವೂ ಆಗಿರುವುದು"

ಮಹಾತ್ಮರ ನಿರಶನ ದೀಕ್ಷೆಗೆ ಪ್ರತಿಕೂಲ ನಿರಶನ ದೀಕ್ಷೆ

ಹರಿಜನರನ್ನು ದೇವಾಲಯಗಳಿಗೆ ಬರಗೊಡದಿರುವುದಕ್ಕಾಗಿ ನಿರಶನ ದೀಕ್ಷೆಯನ್ನು ಹಿಡಿಯುವುದರಿಂದ ಪ್ರಜೆಗಳನ್ನು ನಿರ್ಬಂಧಪಡಿಸಿದಂತಾಗುವುದೆಂಬುದು ನನ್ನ ಅಭಿಪ್ರಾಯವೆಂದು ಹಿಂದೆ ಸರ್ವೆಂಟ್ಸ್ ಆಫ ಇಂಡಿಯಾ ಸಂಘದ ಮೆಂಬರಾಗಿದ್ದ ದೇಶೀಯ ಕ್ರೈಸ್ತ ಎಸ್ ಎಂ ಮೈಕೇಲರವರು ಮಹಾತ್ಮರಿಗೆ ಅನೇಕ ಕಾಗದಗಳನ್ನು ಬರೆದಿರುವರು ಅಲ್ಲದೆ ಗುರುವಯ್ಯೂರು ದೇವಾಲಯ ಪ್ರವೇಶಕ್ಕೆ ಹರಿಜನರ ಅವಕಾಶ ಕೊಡಲ್ಪಡದಿದ್ದಲ್ಲಿ ಕೇಲಪ್ಪರ ಸಂಗಡ ತಾವೂ ಬರುವ ಜನವರಿ ತಾ|| ೨ ರಿಂದ [illegible] ಹಿಡಿಯುತ್ತೇವೆಂದು ಮಹಾತ್ಮರು ಪ್ರಕಟಿಸಿರುವುದರಿಂದ [illegible] ಮಹಾತ್ಮರಿಗೆ [illegible] ಬಾರದಾಗಿ ಒಡೆದು ತಿಳಿಸಿರುತ್ತಾರೆ "ಹರಿಜನರನ್ನು [illegible] ನೀವು [illegible] ಗುರುವಾಯೂರು [illegible] ಅದುದರಿಂದ ಅಸ್ಪೃಶ್ಯತೆಯನ್ನು [illegible] ಹರಿಜನರನ್ನು [illegible] ಒಳಪಡುವುದಕ್ಕಾಗಿ ನಿರಶನ [illegible] ಹಿಡಿಯುವ [illegible] ಹಿಂದೂ [illegible] ನೀವು ಮಾಡುವ [illegible] ಸನಾತನಿಗಳು [illegible] ಮಾಡುತ್ತದೆ ಅದಕ್ಕೆ ಪ್ರತಿಕೂಲವಾಗಿ ನೀವು ಪುನಃ ನಿರಶನ ವ್ರತಹಿಡಿಯುವುದಾದರೆ ಅದಕ್ಕೆ ವಿರೋಧವಾಗಿ ಅಂದರೆ ಸನಾತನಿಗಳಿರುವ ಅಪ್ರತಿಹತವಾದ ಹಕ್ಕನ್ನು ಕಾಪಾಡುವುದಕ್ಕಾಗಿ ನಾನು ನಿರಶನ ವ್ರತವನ್ನು ಹಿಡಿಯಬೇಕಾಗುವುದು"

ಒಳದೇಶದ ವೃತ್ತಾಂತಗಳು

ಮೈಸೂರು ಶಾಸನ ಸಭಾಧಿವೇಶನವು ಬರುವ ಡಿಸಂಬರ್ ತಾ|| ೧೪ ನೆಯ ಬುಧವಾರ ಮಧ್ಯಾಹ್ನ ೧೨ ಘಂಟೆಗೆ ಬೆಂಗಳೂರು ಪಬ್ಲಿಕ್ ಆಫೀಸು ಕಟ್ಟಡದ ಸಭಾಂಗಣದಲ್ಲಿ ನಡೆಯುವುದು ಗೊತ್ತಾಗಿರುವುದು

ಕಾಶೀ ಕ್ಷೇತ್ರದಲ್ಲಿ ಪ್ರಸಿದ್ಧ ಪಟ್ಟು ಪಟ್ಟಾವಳಿ ವಸ್ತ್ರ ವ್ಯಾಪಾರಿಗಳಾದ ಮ|| ಎಸ್ ಯು ನಾರಾಯಣಾಚಾರ್ಯ ಅಂಡ್ ಕಂಪೆನಿಯವರು ಕಡಗೋಲು ಗೋಪಾಲಕೃಷ್ಣನ ಸುಂದರಛಾಯಾಚಿತ್ರದೊಡನೆ ಮುದ್ರಣ ಮಾಡಿಸಿರುವ ೧೯೩೩ ನೆಯ ವರ್ಷದ ಕ್ಯಾಲಂಡರನ್ನು ಪ್ರೀತಿಪುರಸ್ಸರವಾಗಿ ಸ್ವೀಕರಿಸಿರುತ್ತೇವೆ

ಸಂಸ್ಥಾನದ ಸಹಕಾರ ಸಂಘಗಳ ವಾರ್ಷಿಕ ಮಹಾಸಭೆಯನ್ನು ನೆರವೇರಿಸಲು ಮತ್ತು ಸಭಾ ಮೆಂಬರುಗಳು ಇಳಿದುಕೊಳ್ಳಲು ಸ್ವಂತವಾಗಿ ಒಂದು ಮಂದಿರವನ್ನು ರಾಜಧಾನಿಯ ಸಂಸ್ಕೃತ ಮಹಾ ಪಾಠಶಾಲೆಯ ದಕ್ಷಿಣದಲ್ಲಿ ಲಕ್ಷ್ಮೀ ನಾಟಕ ಮಂದಿರವಿರುವ ಸ್ಥಾನದಲ್ಲಿ ಕಟ್ಟಬೇಕೆಂದು ಕಳೆದ ದಸರಾ ಮಹೋತ್ಸವದಲ್ಲಿ ನಡೆದ ಮಹಾ ಸಭಾಧಿವೇಶನದಲ್ಲಿ ನಿರ್ಧರಿಸಿದ್ದರು ಆದರ ಪ್ರಕಾರ ಕಟ್ಟಡದಾರಂಭ ಪ್ರಯತ್ನವು ನಡೆಯುತ್ತಿದೆ

ಮೈಸೂರು ಇಂಜನಿಯರುಗಳ ಸಂಘದ ರಜತೋತ್ಸವವು ಇದೇ ಗುರುವಾರ ಮಧ್ಯಾಹ್ನ ೧೨ ಘಂಟೆಗೆ ಬೆಂಗಳೂರು ಸರ್ಕಾರಿ ನಾಟಕದ ಕಾರ್ಯಾಲಯದೊಳಗೆ ಚೀಫ್ ಇಂಜನಿಯರ್ ಮ|| ರಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆದಿತು ಈ ಸಂಘದ ರಜತೋತ್ಸವವು ನಡೆದಂತೆ ಮುಂದೆ ಸುವರ್ಣೋತ್ಸವವೂ ನಡೆಯಲೆಂದು ಕೋರುತ್ತೇವೆ

ಬರೋಡ ಕಾಶ್ಮೀರ ಮೊದಲಾದ ದೇಶೀಯ ಸಂಸ್ಥಾನಗಳ ಪ್ರಭುತ್ವದವರು ತಮ್ಮ ಮುಜರಾಯಿ ಆಡಳಿತಕ್ಕೊಳಪಟ್ಟಿರುವ ದೇವಸ್ಥಾನಗಳಿಗೆ ಹರಿಜನರು ಪ್ರವೇಶಿಸಬಹುದೆಂದ ಅಪ್ಪಣೆ ಮಾಡಿರುವಂತೆ ಮೈಸೂರು ಪ್ರಭುತ್ವದ ಮುಜರಾಯಿ ಆಡಳಿತಕ್ಕೊಳಪಟ್ಟಿರುವ ದೇವಸ್ಥಾನಗಳಿಗೆ ಹರಿಜನರು ಒಳುವಂತೆ ಅಪ್ಪಣೆಯಾಗಬೇಕೆಂದೂ, ಇದರಿಂದ ಮಹಾಸ್ವಾಮಿಯವರ ಪ್ರಜಾವರ್ಗದಲ್ಲಿ ಬ್ರಾತೃಭಾವವೂ ಸಮಾನತ್ವವೂ ಉಂಟಾಗಲಿ ಲೋಕಕ್ಕೆ ಗೋರಕ್ಷಣೆಯಾಗಲಿಕ್ಕೂ ಅವಕಾಶವಾಗುತ್ತವೆಂದೂ ಶ್ರೀಮನ್ಮಹಾರಾಜರವರಿಗೆ ದಾವಣಗೆರೆಯ ಬ್ರಾಹ್ಮಣೇತರ ಪ್ರಸಾರಕ ಸಂಘದವರು ತಂತಿಯ ದ್ವಾರ [illegible] ಮಾಡಿರುವುದಾಗಿ ತಿಳಿಯುತ್ತೇವೆ.

ರಿಟೈರ್ಡ್ ಸಬ್ ಜಡ್ಜಿಯವರಾದ ರಾವ್ ಸಾಹೇಬ್ ಎಚ್ ಹೆನ್ನಯ್ಯನವರು ತಮ್ಮ ಜ್ಯೇಷ್ಠ ಪುತ್ರಿ ಎ|| [illegible] ಲಕ್ಷ್ಮಮ್ಮ [illegible] ಎಲ್ ಟಿ, ಯವರನ್ನು ನಂಜನಗೂಡು ನಿವಾಸಿರಾದ ಮ|| ಪಿ ಪಾಪಣ್ಣನವರ ದ್ವಿತೀಯ ಪುತ್ರ ಮ|| ಪಿ ಕೃಷ್ಣಪ್ಪ ಬಿ ಎ, ಯವರಿಗೆ ಕೊಟ್ಟು ವಿವಾಹಮಹೋತ್ಸವವನ್ನು ಇದೇ ಬುಧವಾರ ಎಳಗ್ಗೆ ಬೆಂಗಳೂರು ಲಾಲಬಾಗಿನಲ್ಲಿರುವ ಬಂಗಲೆಯಲ್ಲಿ ನೆರವೇರಿಸಲು ನಿಶ್ಚಯಿಸಿರುವರು ವಧುವು ಬೆಂಗಳೂರು ವಾಣೀವಿಲಾಸ ಹೈಸ್ಕೂಲಿನಲ್ಲಿ ಸಹಾಯೋಪಾಧ್ಯಾಯಿನಿಯರಾಗಿದ್ದಾರೆ ವರ ಪೂನಾದಲ್ಲಿ [illegible] ವ್ಯಾಸಂಗಮಾಡುತ್ತಿದ್ದಾರೆ ಹೀಗೆ ವಿದ್ಯೆಯಲ್ಲೂ, ಗೌರವದಲ್ಲೂ ಅನುಕೂಲವಾಗಿರುವ ದಾಂಪತ್ಯವು ಹಿಂದುಳಿದವರಲ್ಲಿ ದೊರಕುವುದು ಬಹಳ ಅಪೂರ್ವವು ಈ ನೂತನ ದಂಪತಿಗಳಿಗೆ ದೀರ್ಘಾಯುರಾರೋಗ್ಯಸಂಪದಭಿವೃದ್ಧಿಯಾಗಲೆಂದು ಹರಸುತ್ತೇವೆ.

ಯಡತೊರೆಯ ಪುರಾಭಿವೃದ್ಧಿ ಕಾರ್ಯದಲ್ಲಿ ಮುಂದಾಳಾಗಿದ್ದು ಸಾವಿರಾರು ರೂಪಾಯಿ [illegible] ದಿಂದ [illegible] ಗೃಹವನ್ನು ಕಟ್ಟಿಸಿ ಇತರರಿಗೆ ಮಾರ್ಗದರ್ಶಕರಾಗಿ ಪ್ರಭುತ್ವದವರ ಮೆಚ್ಚಿಕೆಗೆ ಪಾತ್ರರಾಗಿರುವ ಸಾಹುಕಾರ್ ಮ|| [illegible] ಸಿದ್ದಲಿಂಗಪ್ಪನವರು ಒಂದು ಹೆರಿಗೆಯ ಆಸ್ಪತ್ರೆಯನ್ನು ೧೦,೦೦೦ ರೂಪಾಯಿಗಳ ವೆಚ್ಚದಿಂದ ಕಟ್ಟಿಸಿಕೊಡಲು ವಿವಾಹಪಟ್ಟು ಕೂಡಲೆ ಕಟ್ಟಡಕ್ಕೆ ಆರಂಭಿಸಬೇಕೆಂದು ಕೇಳಿದುದರ ಮೇಲೆ ಯೋಗ್ಯವಾದ ಸ್ಥಳವನ್ನು ಗೊತ್ತುಮಾಡಿ ಕಾರ್ಯಾರಂಭಮಾಡ[illegible] ಚೀಫ್ ಇಂಜನಿಯರಿಗೆ ತಿಳಿಸಿರುವರೆಂದೂ, ಯಡತೊರೆ [illegible] ಮ|| ಸಾಹುಕಾರ್ ಚಿಕ್ಕನಂಜಶೆಟ್ಟರು [illegible] ೧೦೦೦ ರೂ ವೆಚ್ಚದಿಂದ ಮೈಸೂರಿನಲ್ಲಿ ಛತ್ರವನ್ನು ಕಟ್ಟಿಸಿ [illegible] ಕಟ್ಟಿಸಿಕೊಡುವುದಾಗಿ ಚೀಫ್ ಕಮೀಷನರ್ [illegible] ತಿಳಿಸಿರುವರೆಂದೂ [illegible] ಮ|| [illegible] ಕಮೀಷನರ್ [illegible] ಲಾವಣ್ಯದೂರು ವೀರಪ್ಪನವರು ಮತ್ತೆ [illegible] ದಾನಶೀಲತೆಯನ್ನು ತೋರ್ಪಡಿಸಿ [illegible] ಮಾಡಿರುವರೆಂದೂ ತಿಳಿದು ಉಭಯ ಧರ್ಮಾತ್ಮರುಗಳನ್ನು ಅಭಿನಂದಿಸಿ ಅವರುಗಳಿಷ್ಟಾರ್ಥಗಳು ಜಾಗ್ರತೆ ನೆರವೇರಲೆಂದು ಕೋರುತ್ತೇವೆ

ಪ್ರಕಟಣೆ.

ಮೈಸೂರು ಸಂಸ್ಥಾನದ ಮಹಾಜನರಲ್ಲಿ ಬಂದೂಕಗಳು, ರಿವಾಲ್ವರುಗಳು, ಮುಂತಾದುವುಗಳು ಎಷ್ಟಿವೆಯೆಂಬುದನ್ನು ಖಚಿತವಾಗಿ ಲೆಕ್ಕವಾದ ಪುರಿತನಿಗಾಗಿ ಆಧಾರ ಪಟ್ಟಿ ಮಾಡಿ ಲೆಕ್ಕವನ್ನು ೩೧-೧೨-೧೯೩೨ ಕ್ಕೆ ಮುಂಚಿತವಾಗಿ ಸಂಗ್ರಹಿಸಬೇಕೆಂದು ಗೊತ್ತಾಗಿದೆ. ೧೯೩೨ನೆಯ ಇಸವಿ ಆಕ್ಟೋಬರು ೨ ನೆಯ ತಾರೀಖಿನ ಕನ್ನಡ ಗೆಜೆಟ್ಟಿನಲ್ಲಿ ಪ್ರಕಟವಾಗಿರುವ ೨೭-೯-೧೯೩೨/೩-೧೦-೧೯೩೨ ಮಕ್ಕಾಂ ಸಿ 1911-ಸಿ ಓ ಎಲ್ ೩೧ ೩೨ ೭ ನೆಯ ನಂಬರು ಇಸ್ತಿಹಾರ್ನಾಮೆಯಲ್ಲಿ ಸರ್ಕಾರದವರು ಈ ವಿಷಯವಾಗಿ ತಪ್ಸೀಲು ವಿವರಗಳನ್ನು ಕುರಿತು ಹುಕುಂ ಮಾಡಿದ್ದಾರೆ ಬಂದೂಕ, ರಿವಾಲ್ವರು, ಮುಂತಾದುವುಗಳ ಕರಾರುವಾಕ್ಕಾ ಲೆಕ್ಕಗಳು ಬೇಕಾಗಿವೆ ಈಗ ಲೈಸನ್ಸನ್ನು ಪಡೆಯದಿರುವವರು ಕೂಡ ಯಾವ ಬಗೆಯ ಅನುಮಾನವೂ ಇಲ್ಲದೆ ಧಾರಾಳವಾಗಿ ತಮ್ಮ ಬಂದೂಕು ಮುಂತಾದುವುಗಳ ವಿವರವನ್ನು ತಿಳಿಸುವಂತೆ ಮಾಡುವುದಕ್ಕಾಗಿ ಸರ್ಕಾರದವರು ಕೆಲವು ರಿಯಾಯಿತಿಗಳನ್ನು ತೋರಿಸುವಂತೆ ಅಪ್ಪಣೆಮಾಡಿದ್ದಾರೆ —(1) ಈಗ ಲೈಸನ್ಸು ಪಡೆಯದೆ ಇಟ್ಟುಕೊಂಡವರು ೩೦-೧೧-೧೯೩೨ ಮಕ್ಕಾಂ ಅಥವಾ ಅದಕ್ಕೆ ಮುಂಚೆ ಬಂದು ಪೋಲೀಸು ಸ್ಟೇಷನ್ನಿಗೆ ತಮ್ಮಲ್ಲಿರುವ ಬಂದೂಕ ಮುಂತಾದುವನ್ನು ಒಪ್ಪಿಸಿದರೆ ಅಥವಾ ಅವುಗಳ ವಿಚಾರವನ್ನು ಬೆಂಗಳೂರಿನಲ್ಲಿರುವ ಪೋಲೀಸು ಇನ್ಸ್ಪೆಕ್ಟರ್ ಜನರಲ್‌ರವರಿಗೆ ಅಥವಾ ತಮ್ಮ ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರವರಿಗೆ ತಿಳಿಸಿದರೆ, ಅವರನ್ನು ಪ್ರಾಸಿಕ್ಯೂಷನ್ ಮಾಡುವುದಿಲ್ಲ (2) ಅಂಥವರುಗಳು ತಮಗೆ ಲೈಸನ್ಸ್ ಕೊಡಬೇಕೆಂದು ೩೦-೧೧-೧೯೩೨ ಮಕ್ಕಾಂ ಅಥವಾ ಆ ಮುಂಚೆ ಕೇಳಿದಲ್ಲಿ, ಆಯಾ ಸಂದರ್ಭದ ಯೋಗ್ಯತಾಪೇಕ್ಷದ ಮೇಲೆ ಪರಿಶೀಲಿಸಿ ಲೈಸೆನ್ಸ್ ಕೊಡಲಾಗುವುದು ಲೈಸೆನ್ಸ್ ಕೊಟ್ಟಲ್ಲಿ ಹಿಂದಣ ಬಾಕಿಯನ್ನು ವಸೂಲುಮಾಡುವುದಿಲ್ಲ ಚಾಲ್ತಿ ಸಾಲಿನ ಹಣವನ್ನು ಮಾತ್ರ ಕೇಳಲಾಗುವುದು (3) ಲೈಸನ್ಸ್ ಕೇಳಲು ಇಷ್ಟಪಡದ ಜನರ ಅಥವಾ ಲೈಸನ್ಸ್ ಕೊಡದೇ ಇರುವಂಥ ಜನರ ಬಂದೂಕ ಮುಂತಾದುವುಗಳನ್ನು ಅವರು ಮೊದಲೇ ಅತ್ಯಂತ ಸಮೀಪವಾದ ಪೋಲೀಸ್ ಸ್ಟೇಷನ್ನಿಗೆ ಒಪ್ಪಿಸಿಲ್ಲದಿದ್ದಲ್ಲಿ ಆ ರೀತಿ ಮಾಡಬೇಕೆಂದು ವಿಧಿಸಲಾಗುವುದು ೩೦-೧೧-೧೯೩೨ ಮಕ್ಕಾಂ ಅಥವಾ ಆ ಮುಂಚೆ ಒಪ್ಪಿಸಿದವುಗಳ ವಿಚಾರದಲ್ಲಿ ಲೈಸೆನ್ಸ್ ಕೊಡದೆ ಹೋದುವುಗಳನ್ನು ಮಾರಿ ಬಂದ ಹಣವನ್ನು ಆಯಾ ಜನರಿಗೆ ಕೊಡಲಾಗುವುದು

೧೯೩೨ ನೆಯ ಇಸವಿ ನವೆಂಬರ್ ತಿಂಗಳಿನ ೩೦ ನೆಯ ತಾರೀಖಿನ ತರುವಾಯ ಯಾವ ಮನುಷ್ಯನೇ ಆಗಲಿ ಕಾನೂನು ಲೈಸನ್ಸ್ ಪಡೆಯಬೇಕಾದುದು ನಿಬಂಧನೆಗಳ ಪ್ರಕಾರ ಆವಶ್ಯಕವಾಗಿರುವಂಥ ಬಂದೂಕ ಮುಂತಾದುವುಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರುವುದಾಗಿ ಕಂಡುಬಂದರೆ, ಅತನು ಪ್ರಾಸಿಕ್ಯೂಷನ್ ವ್ಯವಹಾರಕ್ಕೆ ಗುರಿಯಾಗಬೇಕಾಗುವುದು ಆದರೆ ತಾನು ಮೈಸೂರು ಸಂಸ್ಥಾನದಲ್ಲಿಲ್ಲದೆ ಇದ್ದ ಕಾರಣದಿಂದ ಅಥವಾ ಮತ್ತಾವುದಾದರೂ ಸಮರ್ಪಕವಾದ ಕಾರಣದಿಂದ ಈಗಿನ ಹುಕುಂ ಪ್ರಕಾರ ನಡೆಯಲು ತಪ್ಪಿದ ಮನುಷ್ಯನ ವಿಷಯದಲ್ಲಿ ಈ ವಾಯಿದೆಯನ್ನು ಹಿಗ್ಗಿಸಿಕೊಡಲಾಗುವುದು

ಎಚ್ ವಿ ರಾಮಸ್ವಾಮಿ,
ಮೈಸೂರು ಸರ್ಕಾರದ ಪಬ್ಲಿಸಿಟಿ ಆಫೀಸರ್

ಅಸ್ಪೃಶ್ಯತಾ ನಿರ್ಮೂಲನಕ್ಕೆ ಮಹಾತ್ಮರ ಪ್ರಚಾರ

ಮಹಾತ್ಮರ ಮೊದಲನೆಯ ಪ್ರಕಟನೆ

ತಾ|| ೫ ೧೧ ೧೯೩೨

ನಾನು ಉಪವಾಸ ವ್ರತವನ್ನು ಬಿಟ್ಟ ವೇಳೆ ಅಸ್ಪೃಶ್ಯತಾ ನಿರ್ಮೂಲನ ವಿಚಾರವಾಗಿ ಚರ್ಚಿಸಬೇಕೆಂದಿದ್ದ ವಿಷಯಗಳಲ್ಲಿ ನನ್ನ ಸ್ವಾಧೀನದಲ್ಲಿಲ್ಲದ ಕಾರಣದಿಂದ ನಾನು ಆಗ ಚರ್ಚಿಸಲು ಅವಕಾಶವಾಗಲಿಲ್ಲ ಈ ವಿಚಾರದಲ್ಲಿ ಬಹಿರಂಗವಾಗಿ ಪ್ರತಿಬಂಧಕವಾಗಲು ದೊರೆತನದವರು ನನಗೆ ಅನುಮತಿಯನ್ನು ಕೊಟ್ಟಿರುತ್ತಾರೆ ಎವಾತ [illegible] ಆಗಿನಿಂದ ನನಗೆ ಕಾಗದಗಳನ್ನು ಬರೆಯುತ್ತಿದ್ದಾರೆ ಈ ವಿಚಾರದಲ್ಲಿ ನನ್ನ [illegible] ಅನೇಕ [illegible] ಅಸ್ಪೃಶ್ಯತಾ ನಿರ್ಮೂಲನ ಪ್ರಯತ್ನಗಳಿಂದುಂಟಾಗುತ್ತಿರುವ ಇತರ ಸಮಸ್ಯೆಗಳನ್ನು ಕುರಿತು ಇನ್ನು [illegible] ಬರಬಹುದಾಗಿದೆ ಇವರೆಲ್ಲರಿಗೂ ನನ್ನ ಉತ್ತರವು ಅವಶ್ಯವಾಗಿದೆ

ನಾನೇಕೆ ಮರಳಿ ಉಪವಾಸ ದೀಕ್ಷೆ ಹಿಡಿಯಬೇಕಾಗುವುದಿದೆ ?

" ನಿರಶನ ದೀಕ್ಷೆಯನ್ನು ಹಿಡಿಯುವುದು ಕೂಡ ಒಂದು ನಿಷ್ಠೆಗೆ [illegible] ನಿರಶನ ದೀಕ್ಷೆಯನ್ನು [illegible] ಈ ವರೆಗೆ ನಾನೇ [illegible] ಪ್ರತವನ್ನು ಹಿಡಿಯುತ್ತೇನೆ [illegible] ಉಪವಾಸ ಪ್ರತ ಹಿಡಿಯಲು ಹಿಂದು ಮತದವ [illegible] ಯಾವ [illegible] " ಎಂದು ಬೇರೆ ಕೇಳು ಬರೆದಿರುವರು

[illegible] ಆಲೋಚನೆಗಳನ್ನು [illegible] ನಾನು ಈ ಸಲ [illegible] ಪ್ರತ ವನ್ನು ಹಿಡಿದೆನು ಪುನಃ ಅನ್ನದ ಪ್ರೇರಣೆಯಿಂದರೆ ಅಂತು ವ್ರತವನ್ನು ಹಿಡಿಯುವೆನು ಅಸ್ಪೃಶ್ಯತೆಯನ್ನು ನಿರ್ಮೂಲನಮಾಡಬೇಕೆಂಬ ಸಂಕಲ್ಪ ವೇ ನನ್ನ ಉಪವಾಸ ವ್ರತಕ್ಕೆ ಕಾರಣ ಆದುದರಿಂದ ಈ ವಿಚಾರದಲ್ಲಿ ನನಗೆ ಯಾವ ಸ್ವಾತಂತ್ರ್ಯವೂ ಇರುವುದಿಲ್ಲ ಜಾತಿಯ ಸಮಸ್ಯೆಯ ವಿಚಾರದಲ್ಲಿ ಬ್ರಿಟಿಷು ಮಂತ್ರಿ ಮಂಡಲದವರು ಮಾಡಿದ ಪರಿಹಾರದಿಂದ ನನ್ನ ಜೀವಿತದಲ್ಲಿ ಇಂತಹ ವಿಷಮಸ್ಥಿತಿಯುಂಟಾಯಿತು ಬ್ರಿಟಿಷು ದೊರತನದವರು ಮಾಡಿರುವ ಪರಿಹಾರದಲ್ಲಿ ಹರಿಜನರ ಸ್ವಾರ್ಥಕ್ಕೆ ಸಂಬಂಧವಾದ ಭಾಗವನ್ನು ಅವರು ಬದಲಾಯಿಸಿರುವುದರಲ್ಲಿ ಅದು [illegible] ಇದು ಮೊದಲನೆಯ ಕೆಲಸ ಹಿಂದು ಜನಾಂಗದ [illegible] ಬೇರೆ ರಾಜಕೀಯ [illegible] ಪರಿಹಾರವನ್ನು ಬದಲಾಯಿಸುವುದು ಮಾತ್ರವಾಗಿಲ್ಲ ಅದರಲ್ಲಿ ಮಹಾ ಸಂಕಲ್ಪವು ಅಡಗಿರುವುದು ಆದರೆ ನಾವು ಅದನ್ನು ಗ್ರಹಿಸದೆ ಹೋಗಬಹುದು ಆ ಮಹಾ ಸಂಕಲ್ಪವನ್ನು ಪ್ರಜೆಗಳು ತಕ್ಕ ಹಾಗೆ ಗ್ರಹಿಸಿಕೊಂಡು ಅದಕ್ಕೆ ತಲೆಬಗ್ಗಿಸಿದರು

ದೇಶಸಂಚಾರ, ಸಭೆ ಪ್ರಮಾಣಗಳು

ಆ ಕಾಲದಲ್ಲಿ ಪ್ರಜೆಗಳೊಳಗೆ ನನ್ನ ದೇಶದಲ್ಲೆಲ್ಲಾ ಅನೇಕ [illegible] ಸಂಚಾರ ಮಾಡುತ್ತಿದ್ದೆನಲ್ಲಾ ಅನೇಕ [illegible] ಹೋಗುತ್ತಿದ್ದೆನಲ್ಲಾ ಅನೇಕ ಲಕ್ಷ ಜನರೊಡನೆ ಮಿಶ್ರವಾಗುತ್ತಿದ್ದೆನಲ್ಲಾ ನನ್ನ ಹಾಗೆ ಹೆಚ್ಚಾಗಿ ಸಂಚಾರ ಮಾಡಿದವರಾರೂ ಇಲ್ಲವೆಂದು ನಾನು ತಿಳಿದಿರುತ್ತೇನೆ ಸವರ್ಣದವರಿಗೂ ಹರಿಜನರಿಗೂ ಒಂದು ಮತದವರಿಗೂ ಬೇರೊಂದು ಮತದವರಿಗೂ ಯಾವ ಭೇದವನ್ನೂ ನಾನು ನೋಡಲಿಲ್ಲ ನಾನು ಅನೇಕ ಸಲ ಅವರ ದೇಶ ಭಾಷೆಯಲ್ಲೇ ಅಸ್ಪೃಶ್ಯತೆಯನ್ನು ಕಠಿಣವಾಗಿ ನಿಂದಿಸಿ ಉಪನ್ಯಾಸಗಳನ್ನು ಮಾಡಿದ್ದೆನು ಅದು ಹಿಂದುಮತಕ್ಕೆ ಕಳಂಕವೆಂದು ನಾನು ಸ್ಪಷ್ಟವಾಗಿ ತಿಳಿಸಿದ್ದೆನು ಇಂತಹ ಬಹಿರಂಗ ಸಭೆಗಳೂ [illegible] ಸಭೆಗಳೂ ಅನೇಕ [illegible] ಅನೇಕವಾಗಿ ನಡೆದಿರುತ್ತವೆ ಆ ಸಭೆಗಳಲ್ಲಿ ನಾನು ಹೀಗೆ ಕಠಿಣವಾಗಿ ಅಸ್ಪೃಶ್ಯತೆಯನ್ನು ಖಂಡಿಸಿದಾಗ್ಯೂ ಯಾರೂ ಯಾವ ಆಕ್ಷೇಪಣೆಯನ್ನೂ ಮಾಡಲಿಲ್ಲ ಹಾಗೆ ಮಾಡಲ್ಪಟ್ಟಿದ್ದ ಆಕ್ಷೇಪಗಳಾದರೂ ಬಹಳ ಸ್ವಲ್ಪವೇ ಆಗಿದ್ದುವು ಆ ಸಭೆಗಳಲ್ಲಿ ಅಸ್ಪೃಶ್ಯತೆಯನ್ನು ಖಂಡಿಸುವ ತೀರ್ಮಾನಗಳು ಮಾಡಲ್ಪಟ್ಟವು ಅಸ್ಪೃಶ್ಯತೆಯನ್ನು ನಿರ್ಮೂಲನಗೊಳಿಸಲಿಕ್ಕೆ ಕೆಲ ಸಹಸ್ರ ಮಂದಿಗಳು ಪ್ರಮಾಣವನ್ನು ಸಹ ಮಾಡಿದರು ತಮ್ಮ ಪ್ರಮಾಣವನ್ನು ನೆರವೇರಿಸಲು ತಕ್ಕ ಧೈರ್ಯ ಸಾಹಸಗಳನ್ನು ಅನುಗ್ರಹಿಸುವಂತೆ ಈಶ್ವರನನ್ನು ಪ್ರಾರ್ಥಿಸುವಲ್ಲಿ ಕೆಲರು ದೇವರ ಮೇಲೆ ಆಣೆಯನ್ನು ಸಹ ಇಟ್ಟುಕೊಂಡರು ಇವರನ್ನು [illegible] ನಾನು ಉಪವಾಸ ವ್ರತವನ್ನು ಹಿಡಿದುದು ಅವರಿಗೆ ನನ್ನಲ್ಲಿರುವ ಅವ್ಯಾಜ ಪ್ರೇಮದಿಂದಲೇ 5 ದಿವಸಗಳಲ್ಲಿ ಮಹತ ಬದಲಾವಣೆಯು ದೇಶದಲ್ಲೆಲ್ಲಾ ಉಂಟಾಯಿತು ಅದರ ಫಲವಾಗಿ ಎರವಾಡಾ ಒಡಂಬಡಿಕೆಯು ಜರುಗಿದುದು

ಎರವಾಡ ಒಡಂಬಡಿಕೆಯನ್ನು ಪೂರ್ತಿಯಾಗಿ ನೆರವೇರಿಸಬೇಕು

ನನ್ನಲ್ಲಿಂತಹ ಅವ್ಯಾಜ ಪ್ರೇಮವುಳ್ಳ ಪ್ರಜೆಗಳು ಎರವಾಡ ಒಡಂಬಡಿಕೆಯನ್ನು ಸಂಪೂರ್ಣಗೊಳಿಸದೆ ಹೋದಲ್ಲಿ ಅವರ ವಿಷಯವಾಗಿಯೇ ನಾನು ಪುನಃ ನಿರಶನ ದೀಕ್ಷೆಯನ್ನು ಕೈಕೊಳ್ಳುವೆನು ಈಗ ಈ ವಿಚಾರದಲ್ಲಿ ದೊರೆತನದವರಿಗೆ ಯಾವ ಸಂಬಂಧವೂ ಇಲ್ಲ ಅವರು ನೆರವೇರಿಸಬೇಕಾಗಿದ್ದ ಭಾಗವನ್ನು ಅವರು ಕೂಡಲೇ ನೆರವೇರಿಸಿಬಿಟ್ಟರು ಎರವಾಡ ಒಡಂಬಡಿಕೆಯ ಷರತ್ತುಗಳಲ್ಲಿ ಅನೇಕ ಷರತ್ತುಗಳನ್ನು ಉತ್ತಮ ವರ್ಣದ ಹಿಂದುಗಳ ಕೂಡ ನೆರವೇರಿಸಿರುವರು

ಹರಿಜನರನ್ನು ಸೋದರಭಾವದಿಂದ ನೋಡಬೇಕು

ಹರಿಜನರನ್ನು ನೀವು ನಿಮ್ಮ ಸಹೋದರರಂತೆಯೇ ಆಪ್ತವಾದ ಮನಃಪೂರ್ವಕವಾದ ಪ್ರೇಮದಿಂದ ಅವರನ್ನು ಆಲಿಂಗಿಸಬೇಕು ಅವರನ್ನು ನಿಮ್ಮ ದೇವಸ್ಥಾನಗಳಿಗೂ ನಿಮ್ಮ ಮನೆಗಳಿಗೂ ಬರಗೊಡಬೇಕು [illegible] ವಾಸಮಾಡುವ ಹರಿಜನರು [illegible] ಸಂಪೂರ್ಣವಾಗಿ [illegible] ಬಾಧಿಸಲು ತಕ್ಕ ರೀತಿಯಲ್ಲಿ ಸವರ್ಣದವರು [illegible] ಇತರ ವರ್ಣದವರುಗಳಿಗಿಂತ ಯಾವ [illegible] ಕಡಿಮೆಯಿಲ್ಲ ಇತರರಂತೆಯೇ ನಾವು ಕೂಡ ದೇವಸ್ಥಾನಗಳಿಗೆ ಹೋಗಿ ದೇವರ ದರ್ಶನ ಮಾಡುವೆವು ಉಳಿದವರಿಗಿರುವ ಹಕ್ಕುಗಳೆಲ್ಲವೂ ನಮಗೂ ಉಂಟಾಗಿವೆ ಎಂದು ಹರಿಜನರ ನಿಸ್ಸಂದೇಹವಾಗಿ ತಿಳಿದುಕೊಳ್ಳಲು ತಕ್ಕ ನಂಬಿಕೆಯನ್ನು ಸವರ್ಣದವರು ಅವರ [illegible]

ಇನ್ನೊಮ್ಮೆ ನಾನು ಹೇಗೆ [illegible] ?

ಇವು ಒಡಂಬಡಿಕೆಯ ಷರತ್ತುಗಳಲ್ಲಿ ಬಹಳ ಮುಖ್ಯವಾದವು ಇವ [illegible] ನನಗಾದರು [illegible]

ಜನರ [illegible] ಮನುಷ್ಯರ [illegible] " [illegible] ಸವರ್ಣ [illegible] ನಾನು [illegible] ಹೋದಲ್ಲಿ [illegible]

ನಾನು [illegible] ಕಾಲದಲ್ಲಿ ಅದು [illegible] ಹಿಂದುಗಳೆಂದು [illegible] ಆಗುವುದಿಲ್ಲ ಅವರು ಮತವು ಬರೀ ಮೋಸವೇ ಆಗುವುದರಿಂದ ಆ ಸ್ಥಿತಿಯಲ್ಲಿ ಜೀವಿಸಿರಲು ಬೇಕಾದಷ್ಟು ನನಗಿಷ್ಟವಿರುವುದಿಲ್ಲ ಆದುದರಿಂದ ಅಸ್ಪೃಶ್ಯತಾ ನಿರ್ಮೂಲನಕ್ಕೆ ಪ್ರತಿಕೂಲರಾಗಿರುವವರು ನಿರಶನದೀಕ್ಷೆಯನ್ನು ಕುರಿತು ಯಾವ ಆಲೋಚನೆಯನ್ನೂ ಮಾಡಬೇಕಾದುದಿಲ್ಲ ಅಸ್ಪೃಶ್ಯತಾ ನಿರ್ಮೂಲನ ಸಂಬಂಧವಾಗಿ ಕಾಂಗ್ರೆಸ್ ಪ್ರಚಾರದಲ್ಲಿ ನನ್ನ ಗಳ್ಳನಾಗಿಯೂ ಕಾಂಗ್ರೆಸು ಪಕ್ಷವಾಗಿಯೂ ಇರುತ್ತಾರೆಂದು ನಾನು ನಂಬಲು

ನೋಟೀಸ್.

ಏರಾಜಪೇಟೆ ಮುನ್ಸೀಫ್ ಕೋರ್ಟಿನಲ್ಲಿ

O S No 104 of 1932

ವಾದಿ — ಮೂಪಿಳ್ಳೆ ಕೊಳ್ಳರಕಲ್ ಹಸನ್ ಅಮ್ಮತ್ತಿ

ಪ್ರತಿವಾದಿ — [illegible] ಹೋಬಳಿ [illegible] ಗ್ರಾಮದ ಶಿವಾಚಾರದ ಹಂಪಯ್ಯಶೆಟ್ಟರ ಮಗ ಸಿದ್ಧಪ್ಪಶೆಟ್ಟಿ

ಪ್ರತಿವಾದಿಯ ಬಾಪತು ಆಂಮತ್ತಿಯಲ್ಲಿರುವ ಸ್ಥಿರ ಸೊತ್ತನ್ನು ಮೇಲ್ಕಂಡ ವಾದಿಗೆ ವಿಕ್ರಯಿಸುವುದಾಗಿ ಒಪ್ಪಂದ ಮಾಡಿ ಬರಕೊಟ್ಟ ಕರಾರು ಷರತ್ತುಗಳನ್ನು ಜಾರಿಮಾಡಿಸುವ ಬಗ್ಗೆ ವಾದಿಯು ಫೈಲುಮಾಡಿದ ಮೇಲ್ಕಂಡ ಮೊಕದ್ದಮ್ಮೆಯು ತಾ|| 6 12-1932 ಕ್ಕೆ ಹಿಯರಿಂಗು ಇಡಲ್ಪಟ್ಟಿರುತ್ತೆ ಸದರಿ ದಿನ ಪ್ರತಿವಾದಿಯು ಮೇಲ್ಕಂಡ ಕೋರ್ಟಿಗೆ ಹಾಜರಾಗದಿದ್ದಲ್ಲಿ ಸದರಿ ಮೊಕದ್ದಮ್ಮೆಯು ಪ್ರತಿವಾದಿಯ ಮೇಲೆ ಡಿಕ್ರಿ ಮಾಡಲ್ಪಡುವುದು

ಏರಾಜಪೇಟೆ
ತಾ|| -11 1932

A K KRISHNAIYA
Vakil for Plantiff

ತುಂಕೂರು ಡಿಸ್ಟ್ರಿಕ್ಟ್ ಬೋರ್ಡ್

ನೋಟೀಸು

ತಾರೀಖು 5-11 1932

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ -

ಇದರಡಿ ಕಂಡ ಸಂತೆಗಳಲ್ಲಿ 1-1-1933 ರ ಲಾಗಾಯಿತು 30-6-1933 ರ ವರೆಗೆ ಸುಂಕ ವಸೂಲ್ಮಾಡುವ ಹಕ್ಕನ್ನು ಬಹಿರಂಗವಾಗಿ ಹರಾಜು ಮಾಡಲಾಗುತ್ತೆ ಹರಾಜು ತಾರೀಖು ಮತ್ತು ಸ್ಥಳ ಆಯಾಯ ಸಂತೆಗಳ ಎದುರಿಗೆ ನಮೂದಿಸಿರುತ್ತೆ ಹರಾಜು ಷರತ್ತುಗಳು ಮತ್ತು ವಸೂಲ್ಮಾಡಬೇಕಾದ ಸುಂಕದ ದರದ ಪಟ್ಟಿಯನ್ನೊಳಗೊಂಡ ಇಸ್ತಿಹಾರ್ನಾಮೆಯನ್ನು ತುಂಕೂರು ಡಿ|| ಬೋರ್ಡು ಆಫೀಸಿನಲ್ಲಿ ಪಡೆಯಬಹುದು.

ತಾಲ್ಲೂಕು	ಸಂತೆ ನಡೆಯುವ ಸ್ಥಳ	ಹರಾಜು ತಾರೀಖು	ಹರಾಜು ನಡೆಯುವ ಸ್ಥಳ
1 ಗುಬ್ಬಿ	ಕಡಬ	28-11 1932	ಕಡಬ ಮುಸಾಫರ್ ಖಾನೆ
ಡಿಟ್ಟೊ	ದಂಡಿನಶಿವರ	ಡಿಟ್ಟೋ	ಡಿಟ್ಟೋ
2 ಮಧುಗಿರಿ	ಬಡವನಹಳ್ಳಿ	30-11-1932	ಬಡವನಹಳ್ಳಿ ಟಿ ಬಿ
3 ಸಿರಾ	ಚಿಕ್ಕನಹಳ್ಳಿ	29-11-1932	ಕಳ್ಳಂಬೆಳ್ಳ ಟಿ ಬಿ

ಡಿ ಎಸ್ ಮಲ್ಲಪ್ಪ,
ಪ್ರೆಸಿಡೆಂಟ್

[illegible] ನಿರಶನದ [illegible] ಬೇರೆಬೇರೆಯಾದ ಅಸ್ಪೃಶ್ಯತೆ [illegible] ಅಸ್ಪೃಶ್ಯತೆಯು [illegible] ಅಸ್ಪೃಶ್ಯತೆಯು [illegible] ಅವರು ನಾಶಿಸಿದ ಅವರು ಶಿವದ [illegible]

ನಿರಶನ ದೀಕ್ಷೆಯು ಬಹಳ ದೂರ ಹೋಗುವಾದ ಸಂಭಾವನೆಯು

ನನ್ನ [illegible] ನನ್ನ [illegible] ಸಂತೋಷ [illegible] ವರೆಗೂ ಆ ನಂಬಿಕೆಯು ನನಗೆ ತಪ್ಪಿಲ್ಲ

ಸವರ್ಣ ಹಿಂದುಗಳು ಬುದ್ಧಿಪೂರ್ವಕವಾಗಿ ಒಡಂಬಡಿಕೆಯ ಷರತ್ತುಗಳನ್ನು ತಿರಸ್ಕರಿಸಿದರೆ ಆ ಒಡಂಬಡಿಕೆಯು ನಿಷ್ಫಲವಾದರೆ ಆಗ ನಾನು ಪುನಃ ನಿರಶನ ದೀಕ್ಷಾಬದ್ಧನಾಗುವೆನು ಆಗಲಾದರೂ ನನ್ನ ಮನೋಮಂದಿರದಲ್ಲಿ ವಾಸಮಾಡುವ ಭಗವಂತನ ಪ್ರೇರಣೆಯು ನನಗೆ ಆದರೇನೇ ನಾನು ನಿರಶನ ವ್ರತವನ್ನು ಹಿಡಿಯುವೆನು ಸವರ್ಣ ಹಿಂದುಗಳು ಎರವಾಡ ಒಡಂಬಡಿಕೆಯನ್ನುಲ್ಲಂಘಿಸಿದಲ್ಲಿ ಅವರು ಹಿಂದು ಮತಕ್ಕೆ ದ್ರೋಹಮಾಡಿದವರಾಗುವರು ಅಂತಹ ಸ್ಥಿತಿಯನ್ನು ಕಣ್ಣಾರ ನೋಡಲು ನಾನು ಜೀವಿಸಿರಲಿಚ್ಛಿಸುವುದಿಲ್ಲ

ಗುರುವಾಯ್ಯೂರು ದೇವಾಲಯ ಪ್ರವೇಶ

ಗುರುವಯ್ಯೂರು ದೇವಸ್ಥಾನದೊಳಕ್ಕೆ ಹರಿಜನರನ್ನು ಬರಗೊಡದಿದ್ದುದರ ಮೇಲೆ ಕೇಳಪ್ಪನವರು ದೇವಸ್ಥಾನದಿದಿರಿಗೆ ಕಠಿಣವಾದ ಉಪವಾಸ ವ್ರತವನ್ನು ಹಿಡಿದಿದ್ದರು ಇದರಿಂದ ಅವರು ಸಾಯುವ ಸ್ಥಿತಿಯೂ ಸಹ ಉಂಟಾಗಿದ್ದಿತು ಆಗ ಮೂರು ತಿಂಗಳುಗಳವರೆಗೆ ಉಪವಾಸ ವ್ರತವನ್ನು ಬಿಡಬೇಕೆಂದು ನಾನು ಕೋರಲಾಗಿ ಅವರು ಅದರಂತೆಯೇ ನಡೆದುಕೊಂಡರು ಆದರೆ 1933 ನೇಯ ಜನವರಿ ತಾ|| 1 ರಲ್ಲಾಗಲಿ ಆ ದೇವಾಲಯದೊಳಕ್ಕೆ ಹರಿಜನರನ್ನು ಬಿಡದಿದ್ದರೆ ಕೇಳಪ್ಪನವರು ಪುನಃ ನಿರಶನ ದೀಕ್ಷೆಯನ್ನು ಕೈಕೊಳ್ಳಬೇಕಾಗುವುದಲ್ಲದೆ ನಾನು ಅವರಂತೆಯೇ ನಿರಶನ ದೀಕ್ಷೆಯನ್ನು ವಹಿಸಬೇಕಾಗುತ್ತದೆ ಆದುದರಿಂದ ಈ ವಿಷಯದಲ್ಲಿ ನನ್ನ ವಿಚಾರವಾಗಿ ದೇಶಸೇವಕರು ಮನೋವ್ಯಥೆಯನ್ನು ಪಡಬೇಕಾದ ಅವಶ್ಯವಿಲ್ಲ ದೇಶೀಯರೆಲ್ಲರೂ ಮನಃಪೂರ್ವಕವಾಗಿ ಬಿಗಿಪಟ್ಟಿನಿಂದ ಕೆಲಸ ಮಾಡಿದರೆ ಇದರ ಆವಶ್ಯಕತೆಯುಂಟಾಗುವುದೇ ಇಲ್ಲ

ಊಟವೂ, ಸಂಬಂಧವೂ

ಅಸ್ಪೃಶ್ಯತಾ ನಿರ್ಮೂಲನಕ್ಕೆ ಅವರೊಡನೆ ಕೂಡಿ ಊಟ ಮಾಡುವುದೂ ಅವರ ಸಂಬಂಧವನ್ನು ಬೆಳೆಸುವುದೂ ಅನವಸರವೆಂದೇ ನನ್ನ ಅಭಿಪ್ರಾಯವು ಸನಾತನದವರಲ್ಲಿರುವ ಪದ್ಧತಿಗಳೇ ಹರಿಜನರಿಗೂ ಅನ್ವಯಿಸುವವು ಆದುದರಿಂದ ಅಸ್ಪೃಶ್ಯತಾ ನಿವಾರಣೆಗಾಗಿ ಕೆಲಸಮಾಡತಕ್ಕವರೆಲ್ಲ ಸವರ್ಣದವರೊಡನೆ ಮಿಳಿತರಾಗಿ ಭೋಜನ ಮಾಡಬೇಕೆಂದೂ ಅವರೊಡನೆ ಸಂಬಂಧವನ್ನು ಬೆಳೆಸಬೇಕೆಂದೂ ಬೋಧಿಸಬೇಕಾದ ಬಾಧ್ಯತೆಯಿಲ್ಲ ಆದರೆ ಈ ಮಿಶ್ರ ಭೋಜನವೂ ಮಿಶ್ರ ವಿವಾಹವೂ ಕೂಡಲೆ ಜರುಗುವುವೆಂದು ನನಗೆ ತೋರುತ್ತದೆ ಭೋಜನ ಮತ್ತು ವಿವಾಹ ಸಂಬಂಧವಾದ ನಿರೋಧಗಳು ಹಿಂದುಮತಕ್ಕೆ ಸಂಬಂಧಪಟ್ಟವಲ್ಲ. ಇದು ಜಾತಿಗೆ ಸಂಬಂಧಪಟ್ಟ ನಿಯಮಗಳು ಜಾತಿಯು ಭೇದಿಸುವ ದುರವಸ್ಥೆಯುಂಟಾದಾಗ ಜಾತಿ ರಕ್ಷಣೆಗಾಗಿ ಇಂತಹ ನಿಯಮಗಳುಂಟಾಗಿರಬೇಕು ಈ ನಿಯಮಗಳು ಕಾಲಕ್ರಮೇಣ ಸಡಿಲವಾಗುತ್ತ ಬಂದಿವೆ ಇವುಗಳಿಗೆ ಇಲ್ಲದ ಸಲ್ಲದ ಪ್ರಾಧಾನ್ಯವನ್ನು ಕೊಡುವುದರಿಂದ ಸಾಮಾನ್ಯ ಪ್ರಜೆಗಳ ದೃಷ್ಟಿಯು ಪ್ರಧಾನ ವಿಷಯಗಳ ಮೇಲೆ ಬೀಳದೆ ಪ್ರಾಧಾನ್ಯವಿಲ್ಲದ ವಿಷಯಗಳಲ್ಲಿ ನಾಟಿರುತ್ತದೆ ಆದುದರಿಂದ ಹಿಂದುಗಳೂ ಇತರ ಮತದವರೂ ಹರಿಜನರೆಲ್ಲರೊಡನೆ ಕಲೆತು ಊಟಮಾಡಲು ಏರ್ಪಡಿಸಿದ ಕೂಟಗಳಲ್ಲಿ ಮನಃಪೂರ್ವಕವಾಗಿ ಭಾಗಿಗಳಾಗಲಿಚ್ಛಿಸುವವರು ಆ ರೀತಿ ಮಾಡುವುದು ನನಗೆ ಬಹಳ ಸಮ್ಮತವು ಅದು ಬಹಳ ಲಾಭಕರವಾಗಿದ್ದರೂ ಬಹಳ ಒಳ್ಳೆಯದಾಗಿದ್ದರೂ ಈಗ ಅಸ್ಪೃಶ್ಯತಾ ನಿರ್ಮೂಲನಕ್ಕಾಗಿ ದೇಶದಲ್ಲೆಲ್ಲಾ ಪ್ರಚಾರಮಾಡುತ್ತಿರುವವರಾರೂ ಈ ಮಿಶ್ರ ಭೋಜನ ವಿಚಾರವಾಗಿಯೂ ಮಿಶ್ರ ವಿವಾಹ ವಿಚಾರವಾಗಿಯೂ ಬೋಧಿಸಬೇಕಾದ ಅಗತ್ಯವಿರುವುದಿಲ್ಲ

ಅಸ್ಪೃಶ್ಯತೆಯು ಹಿಂದು ಮತಕ್ಕೆ ಕಳಂಕಪ್ರಾಯವಾಗಿರುತ್ತದೆ ಭೋಜನ ವಿವಾಹ ನಿಯಮಗಳು ಸಂಘಾಭಿವೃದ್ಧಿಯನ್ನು ನಿರೋಧಿಸುತ್ತವೆ ಆದರೆ ಅಸ್ಪೃಶ್ಯತೆಯಿಂದುಂಟಾಗುವ ಹಾನಿಗೂ ಭೋಜನ ವಿವಾಹ ನಿಯಮಗಳಿಂದುಂಟಾಗುವ ನಷ್ಟಕ್ಕೂ ಇರುವ ವಿಶೇಷವಾದ ಭೇದವನ್ನು ಎಲ್ಲರೂ ಸರಿಯಾಗಿ ತಿಳಿದುಕೊಳ್ಳಬೇಕು ಆದುದರಿಂದ ಈಗ ಅಸ್ಪೃಶ್ಯತಾ ನಿರ್ಮೂಲನಕ್ಕಾಗಿ ಮಾತ್ರ ಅತ್ಯಧಿಕ ಬೋಧೆಯು ನಡೆಯಬೇಕಾಗಿರುವುದಲ್ಲದೆ ಭೋಜನ ವಿವಾಹ ನಿಯಮಗಳನ್ನು ತೊಲಗಿಸುವ ವಿಚಾರದಲ್ಲಿ ಯಾರೂ ಪ್ರಯತ್ನಿಸಲು ಅಗತ್ಯವಿಲ್ಲ ಇವೆರಡನ್ನೂ ಒಟ್ಟುಗೂಡಿಸಿದಲ್ಲಿ ಅಸ್ಪೃಶ್ಯತಾ ನಿರ್ಮೂಲನಕ್ಕೂ ತೊಂದರೆಯುಂಟಾಗುವುದು ಅಷ್ಟೇ ಅಲ್ಲದೆ ಸವರ್ಣದವರು ಅಸ್ಪೃಶ್ಯರೊಡನೆ ಕಲೆತು ಊಟಮಾಡಬೇಕು ಅವರೊಡನೆ ಸಂಬಂಧ ಬೆಳೆಸಬೇಕು ಎಂಬ ವಿಷಯವಾಗಿ ಅವರಿಗೆ ಬೋಧಿಸಿರುವುದಿಲ್ಲ ಅದಕ್ಕೊಪ್ಪಿ ಅವರು ಪ್ರಮಾಣ ಮಾಡಿರುವುದಿಲ್ಲ ಅಸ್ಪೃಶ್ಯತಾ ನಿರ್ಮೂಲನವನ್ನು ಕುರಿತು ಮಾತ್ರ ಅವರಿಗೆ ಬೋಧಿಸಲ್ಪಟ್ಟಿತು ಅವರೇ ಈ ವಿಷಯದಲ್ಲಿ ಮಾತ್ರ ಪ್ರಮಾಣ ಮಾಡಿರುತ್ತಾರೆ ಆದುದರಿಂದ ಈಗ ಆಕಸ್ಮಿಕವಾಗಿ ಭೋಜನ ವಿವಾಹ ವಿಷಯವನ್ನು ಕೂಡ ತಂದೊಡ್ಡಿದರೆ ಜನ ಸಾಮಾನ್ಯರಿಗೆ ನಾವು ದ್ರೋಹಮಾಡಿದವರಾಗುವೆವು ಇಷ್ಟಪಟ್ಟವರು ಹರಿಜನರೊಡನೆ ಕಲೆತು ಊಟಮಾಡಬಹುದು, ಅವರೊಡನೆ ವಿವಾಹ ಸಂಬಂಧವನ್ನು ಬೆಳೆಸಬಹುದು ಆದರೆ ಆ ವಿಚಾರವಾಗಿ ಯಾವ ಬೋಧೆಯೂ ನಡೆಯಬೇಕಾದ ಅಗತ್ಯವಿಲ್ಲ

ಸನಾತನರು ಆಗ್ರಹದಿಂದ ಬರೆದ ಲೇಖನಗಳು

ಸನಾತನರೆಂದು ಹೇಳಿಕೊಳ್ಳುವ ಕೆಲರು ನನಗೆ ಬಹಳ ಸಿಟ್ಟಿನಿಂದ ಕಾಗದಗಳನ್ನು ಬರೆದಿರುತ್ತಾರೆ

" ಹಿಂದು ಮತದಲ್ಲಿ ಅಸ್ಪೃಶ್ಯತೆಯು ಮುಖ್ಯತಮವು " ಎಂದು ಕೆಲರು ಬರೆದಿರುವರು " ನೀವು ಹಿಂದು ಮತಸ್ಥರೇ " ಎಂದು ಮತ್ತೆ ಕೆಲರು " ನೀವು ಕ್ರೈಸ್ತ ಮತ್ತು ಮಹಮ್ಮದೀಯ ಮತಗಳನ್ನನುಸರಿಸಿ ಅಸ್ಪೃಶ್ಯತೆಯನ್ನು ತೊಲಗಿಸಲು ಪ್ರಯತ್ನಿಸುತ್ತಿದ್ದೀರಿ " ಎಂದು ಬೇರೆ ಕೆಲರು ಬರೆದಿರುವರಲ್ಲದೆ ಅಸ್ಪೃಶ್ಯತೆಯನ್ನು ಕೆಲರು ಸಮರ್ಥಿಸುವ ಶಾಸ್ತ್ರ ಪ್ರಮಾಣಗಳನ್ನು ಬರೆದಿರುವರು ಅವರೆಲ್ಲರಿಗೂ ಈ ಸಂದೇಶದಲ್ಲೇ ಪ್ರತ್ಯುತ್ತರವನ್ನು ಕೊಡಲಿಚ್ಛಿಸುತ್ತೇನೆ.

ನಾನೂ ಸನಾತನನೇ

ನಾನೂ ಸನಾತನನಾಗಿರುವೆನು, ಆದರೆ ಸನಾತನ ಶಬ್ದವನ್ನು [illegible] ಬಳಸುವುದರಲ್ಲಿ ನಾನು ಅವರೆಂತೆ [illegible]ಸುವುದಿಲ್ಲ ಅನಾದಿ ಕಾಲ

ಅಮೇರಿಕೆಯ ಎಣ್ಣೆ ಕಂಪೆನಿ (ಮದ್ರಾಸು)

ನಮ್ಮ ಕಂಪನಿಯ ಸೀಮೆಯೆಣ್ಣೆ, ಪೆಟ್ರೋಲು, ಲೂಬ್ರಿಕೇಟಿಂಗ್ ಎಣ್ಣೆ ಚಿರಬಿ ವಗ್ಯೆರೆ ಎಲ್ಲಾ ಪೆಟ್ರೋಲಿಗೆ ಸಂಬಂಧಪಟ್ಟ ಪದಾರ್ಥಗಳನ್ನು ಮಾರಲು ಬೆಂಗಳೂರು ಸಿಟಿ ಅವಿನ್ಯೂ ರೋಡಿನಲ್ಲಿರುವ ಮಾ|| ಪಿ ಪಿ ಭದ್ರಪ್ಪನವರನ್ನು ಮೈಸೂರು ಮತ್ತು ಕೊಡಗು ಸೀಮೆಗಳಿಗೆ ಒಟ್ಟು ಏಜಂಟರನ್ನಾಗಿ ನಿಯಮಿಸಿದೆ. ಸಬ್ ಏಜಂಟರಾಗಿರಲಿಚ್ಛೆಪಡುವವರು ಬೆಂಗಳೂರು ಸಿಟಿ ಶ್ರೀ ನರಸಿಂಹರಾಜ ರೋಡಿನಲ್ಲಿರುವ 170-171 ನೇ ನಂಬರಿನ ನಮ್ಮ ಆಫೀಸಿಗೆ ಬರೆದುಕೊಳ್ಳತಕ್ಕದು

ದಿ ಅಮೇರಿಕನ್ ಆಯಿಲ್ ಕಂಪೆನಿ

ಲ್ಲಿ ಬರೆಯಲ್ಪಟ್ಟ ವೇದಗಳ ಮೇಲೂ, ವೇದಾನುಸಾರವಾಗಿರುವ ಗ್ರಂಥ ಗಳ ಮೇಲೂ ಆಧಾರಪಟ್ಟಿರುತ್ತದೆ. ಸನಾತನ ಧರ್ಮವು, ಅನ್ಯರನಂತೆಯೇ ... ಬನಾವಿಡಾಗಿದೆ ... ನಾಲ್ಕು ವೇದಗಳೂ ... ನನ್ನ ... ಭಾಗಗಳನ್ನು ... ಲಿಸುತ್ತ ಬಂದ.

ಭಗವದ್ಗೀತೆ ಜೀವಿತ ನಿರ್ದೇಶ

ಕ್ರಿಸ್ತನಿಂದ ಮುಂಚೆ ೧ ನೆ ಶತಮಾನದಲ್ಲಿ ... ಪ್ರಪಂಚದಲ್ಲಿ ಅವತರಿಸಿದವರು ... ವೇದಗಳ ಸಾರಗಳು ಎಲ್ಲರಿಗೂ ಸುಲಭವಾಗಿ ಬೋಧೆಯಾಗುವಂತೆ ಗೀತಾಕಾರ್ಯರು ಗ್ರಹಿಸಿದ್ದರು. ಈ ಭಗವದ್ಗೀತೆಯನ್ನು ಎಲ್ಲರೂ ಓದಬಹುದು ... ವೇದಶಾಸ್ತ್ರಗಳೆಲ್ಲ ಸಾರವಾಗಿ ಹೋದಾಗ್ಯೂ ಈ ಭಗವದ್ಗೀತೆಯೊಳಗಿನ 700 ಶ್ಲೋಕಗಳು ಮಾತ್ರ ಉಳಿದಿರುವುದರಿಂದ ಹಿಂದೂ ... ವೆಂದರೇನೆಂಬುದನ್ನು ಎಲ್ಲರೂ ಸುಲಭವಾಗಿ ಗ್ರಹಿಸಬಹುದಾಗಿರು ... ನಾನು ೪೧ ವರ್ಷಗಳಿಂದಲೂ ಭಗವದ್ಗೀತೆಯ ಬೋಧೆಯನ್ನನುಸರಿಸಿಯೇ ನನ್ನ ಜೀವಿತ ಧರ್ಮವನ್ನು ನಡೆಯಿಸಲು ಪ್ರಯತ್ನಿಸುತ್ತಿದ್ದೇನೆ. ಆದುದರಿಂದ ನಾನೂ ಹೂಸಬರೇ ಗೀತೆಯಲ್ಲಿಯ ಮುಖ್ಯವಾದ ಸಿದ್ಧಾಂತಗಳಿಗೆ ವಿರುದ್ಧಗಳಾದವುಗಳನ್ನೆಲ್ಲಾ ನಾನು ತಿರಸ್ಕರಿಸಿರುವೆನು. ಬೈಬಲು, ಖುರಾನು ಮೊದಲಾದ ಮತ ಗ್ರಂಥಗಳನ್ನು ಓದುವ ಇಚ್ಛೆಯು ನನಗುಂಟಾಗಿರುವುದು. ಯಾವ ಭಕ್ತಿಯಿಂದ ನಾನು ಗೀತೆಯನ್ನು ಓದುವೆನೋ ಅದೇ ಭಕ್ತಿಯಿಂದಲೇ ಇತರ ಮತ ಗ್ರಂಥಗಳನ್ನು ... ನಾನು ಹಾಗೆ ಭಕ್ತಿಪೂರ್ವಕವಾಗಿ ಆ ಗ್ರಂಥಗಳನ್ನು ಕೂಡ ಓದುವುದರಿಂದಲೇ ನನಗೆ ಗೀತೆಯಲ್ಲಿರುವ ಗೌರವ ಬುದ್ಧಿಯು ... ಹೆಚ್ಚಾಯಿತು. ಆ ಗ್ರಂಥಗಳನ್ನು ಓದುವುದರಿಂದ ನನಗೆ ... ಹುಟ್ಟುತ್ತದೆ. ... ಹಿಂದೂ ಮತವು ಕೂಡ ... ಜರಾಸ್ಟರು ... ಮಹಮ್ಮದ್ ಮೊದಲಾದ ಪ್ರವರ್ತಕರ ಜೀವಿತಗಳನ್ನು ಓದುವುದರಿಂದ ಗೀತೆಯಲ್ಲಿ ಬಹಳ ಭಾಗಗಳು ನನಗೀಗ ಚೆನ್ನಾಗಿ ಬೋಧೆಯಾಗುತ್ತವೆ. ಆದುದರಿಂದ ಸನಾತನವೆಂಬ ... ನನಗೀಗ ಆಕ್ಷೇಪದಿಂದ ... ಹಿಂದೂ ಮತವು ಇತರ ಮತ ಧರ್ಮಗಳನ್ನು ಸಹಿಸುವುದು ಮಾತ್ರವಲ್ಲದೆ ಅವನ್ನು ತನ್ನಲ್ಲಿ ಸೇರಿಸಿಕೊಳ್ಳಲು ಸಹ ಸಮರ್ಥವಾಗಿರುತ್ತದೆ. ಗೀತೆಯಲ್ಲೂ ಅಸ್ಪೃಶ್ಯತೆಯನ್ನು ಕುರಿತು ಹೇಳಲ್ಪಟ್ಟಿರುವುದಿಲ್ಲ.

ಎಲ್ಲರೂ ಜೀವನವನ್ನು ಭಗವಂತನನ್ನಾಗಿಯೇ ನಾಡುವರು ... ಭಗವಂತನನ್ನೇ ಸೇರುವರು, ಸನಾತನ ಧರ್ಮಕ್ಕೆ ಮುಖ್ಯವಾದುದು ... ದೇಹಶಕ್ತಿಯಲ್ಲದ ... ಮನಸ್ಸುಗಳಲ್ಲ ಭಗವಂತನಲ್ಲಿ ಲೀನವಾಗಬೇಕು ಎಂದು ಭಗವದ್ಗೀತೆಯ ... ದಿವ್ಯವಾಕ್ಯಗಳಲ್ಲಿ ಬೋಧಿಸಿರುವ ಅನುಗ್ರಹ ... ನನ್ನ ಮನಸ್ಸಿನ ಹಲಗೆಯ ಮೇಲೆ ಶಾಶ್ವತವಾಗಿ ಬರೆಯಲ್ಪಟ್ಟಿವೆ. ನನ್ನ ಈ ವಾದಕ್ಕೆ ಸಂಪೂರ್ಣವಾಗಿ ... ನನ್ನ ಮನಸ್ಸಿಗೆ ಆನಂದವಾಗಿರುತ್ತದೆ. ಗೀತೆಯಲ್ಲಿರುವ ಬೋಧೆಗಳು ಅನ್ಯಮತವಾದ್ಯಗಳನ್ನಾಗಿಯೂ ಅದು ದಿವ್ಯವಾಣಿಯಾಗಿಯೂ ಇರುತ್ತವೆ. ಇಂತಹ ಗೀತಾ ಸಾರವನ್ನು ತಿಳಿದುಕೊಂಡ ಮೇಲೆ ಯೇ ನಾನು ಪ್ರಜೆಗಳಿಗೆ ... ಬೋಧಿಸಿರುವೆನು. ಅವರು ನನ್ನ ... ನಾನು ಗುಪ್ತ ವ್ಯಕ್ತಿಯಿಂದಾಗಲಿ ರಾಜಕೀಯ ಸಂಪರ್ಕದಿಂದಾಗಲಿ ತಿಳಿದು ಅವರು ನನ್ನನ್ನು ಪೂಜಿಸಲಿಲ್ಲ. ನಾನು ಸನ್ಮಾರ್ಗಿ ಎಂದೂ, ತಮ್ಮ ಕಾಲದವನೆಂದೂ ಅವರು ಕೂಡಿ ನಂಬಿ ನನ್ನ ಮಾತುಗಳಿಗೆ ಕಿವಿಗೊಟ್ಟರು. ... ನನ್ನ ನಂಬಿಕೆಯು ಮತ್ತಷ್ಟು ಸ್ಥಿರವಾಯಿತು. ನಾನು ಸನಾತನ ಧರ್ಮಾನುಸಾರ ... ನಾನು ತಪ್ಪನ್ನೆಸಗುವುದಿಲ್ಲ. ಭಗವಂತನು ನನ್ನ ಮರಣದಲ್ಲಿ ನಾನು ಅವನನ್ನು ... ಅವನ ಅನುಗ್ರಹವನ್ನುಂಟು ಮಾಡುವನು.

ಎರವಾಡ ಜೈಲು, } ಎಂ ಕೆ ಗಾಂಧಿ
4-11-32 }

ಮಹಾತ್ಮರ ಎರಡನೆಯ ಪ್ರಕಟನ

ಹರಿಜನರು ಸವರ್ಣಹಿಂದುಗಳೊಡನೆ ಸಮಾನರಾಗುವುದಕ್ಕೆ ಮೊದಲು ಅದಕ್ಕೆ ಅವರು ತಕ್ಕವರಾಗಿಯೇ ಇರಬೇಕೆಂದೂ, ತಮ್ಮ ದ ರಾಜಕೀಯ ಗಳನ್ನೆಲ್ಲ ಎತ್ತಬೇಕೆಂದೂ ... ವಿದ್ಯಾರ್ಥಿಗಳಾದವರೆಲ್ಲರು ಒರೆದಿರುತ್ತಾರೆ ... ಹರಿಜನರಲ್ಲಿ ವ್ಯಾಪಿಸಿರುವ ದುರಾಚಾರಕ್ಕೆಲ್ಲ ತಾವೇ ... ಸವರ್ಣಹಿಂದು ... ಅಸ್ಪೃಶ್ಯರಿಗೆ ... ಮಾಡಬೇಕು ... ಅವರು ಶುದ್ಧರಾಗಿರಬೇಕೆಂದು ಪ್ರೋತ್ಸಾಹವನ್ನು ಸಹ ಮಾಡಬೇಕಾಗಿದೆ.

ಕೆಲಸಾಸಿ ಕೆಲಸವೂ ಜೋಡನ್ನು ಹೊಲೆಯುವುದೂ ಅಶುದ್ಧವೇ?

ಕೆಲಸಾಸಿ ಕೆಲಸವೂ, ಚರ್ಮವನ್ನು ಹದಗೆ ಮಾಡಿ ಜೋಡು ಹೊಲೆಯುವ ಕೆಲಸವೂ ನಾನು ಹೇಳುವಂತೆ ಅನೇಕ ಕೆಲಸಗಳಂತೆಯೇ ಅಶುದ್ಧವೆಂದೆನಿಸಲು ... ಈ ಕಸುಬುಗಳನ್ನು ... ಮುಖ್ಯವಾಗಿ ... ಎಂದು ಮಾತ್ರ ... ಇಷ್ಟೇ ... ವರ್ಣದವರ ... ಸೇವೆಯಿಂದಲೂ, ಕೈಮಗ್ಗದಿಂದಲೂ ... ಉಪಯೋಗಿಸುತ್ತದೆ ಕೆಲಸಾಸಿ ಕೆಲಸವು ... ಹದಗೆ ಮಾಡುವುದೂ ತಪ್ಪು ಆರೋಗ್ಯಕರವಾಗಿಯೂ ಮಾಡಲ್ಪಡಬಹುದೆಂದು ಸ್ವಾನುಭವ

ದಿಂದ ನನಗೆ ಗೊತ್ತಿದೆ. ಮತ್ತೆ ... ಕಸುಬುಗಳನ್ನು ... ಬೇಕೆಂದು ... ಕೆಲಸಕ್ಕಾಗಿ ... ನಮ್ಮ ... ಆದುದರಿಂದ ... ಹೇಳಿದ ... ಕೆಲಸಗಳನ್ನು ... ಕಾಯಿದೆ ... ಸಮರ್ಥನೀಯ ... ಮಾಡುತ್ತೇನೆ.

ನಾಚಿಕೆಗೇಡಿನ ಪ್ರಾಯಶ್ಚಿತ್ತವು

ಹಿಂದೂ ಜನರು ಹರಿಜನರನ್ನು ಕಡೆಗಣಿಸುವುದೂ ಮನಸ್ಸಿನಲ್ಲಿ ಭಾವಿಸಿಕೊಂಡ ... ಎರವನ್ನು ಕೊಡುವುದಿಲ್ಲವೆಂದು ತಿಳಿದುಕೊಂಡಲ್ಲಿ ... ಹರಿಜನೋದ್ಧಾರದವರು ಮಾಡಬೇಕಾಗಿರುವುದು ಅನೇಕ ... ಅಸ್ಪೃಶ್ಯರಿಗೆ ಮಾಡಿರುವ ಅನ್ಯಾಯಗಳಿಗೆ ಪರಿಹಾರವಾಗಿರುವುದು. ಅವರ ಈಗಿನ ಸ್ಥಿತಿಯಲ್ಲಿ ಹರಿಜನರು ಅವುಗಳನ್ನು ಸ್ವೀಕರಿಸಲು ... ಪ್ರಾಯಶ್ಚಿತ್ತವಾಗಿರುವುದು ... ಸವರ್ಣದವರು ಈಗ ಮಾಡುವ ಸೇವೆಯನ್ನು ಸಂತೋಷದಿಂದ ಹರಿಜನರು ಅಂಗೀಕರಿಸುವುದು ... ಪ್ರೋತ್ಸಾಹ ... ನಾಲ್ಕು ವರ್ಣದವರ ... ಹರಿಜನರ ಪಾರಿಶುದ್ಧಿಗಾಗಿ ನೀಡುವುದು ಧರ್ಮ.

ಹರಿಜನರಿಗೆ ನಾವು ಮಾಡಿರುವ ಅನ್ಯಾಯವು

ಹರಿಜನರಿಗೆ ನಾವು ಮಾಡಿರುವ ಅನ್ಯಾಯಗಳನ್ನೆಲ್ಲಾ ಜ್ಞಾಪಿಸಿಕೊಳ್ಳುವುದು ... ಈ ಜಾತಿಯ ... ರೋಗಿಗಳಂತೆ ... ದುತ್ತಿರುವರು. ... ಆಧುನಿಕ ... ಹಿಂದುಗಳು ... ಯಲ್ಲಿರುತ್ತಾರೆ. ... ಹಾಗೆ ... ನಾಲ್ಕು ವರ್ಣದವರೂ ... ಮಾರ್ಗಗಳಲ್ಲೂ ನಾಲ್ಕು ವರ್ಣದ ಹುಡುಗರು ಓದುವ ಪಾಠಶಾಲೆಗಳು, ನೀರನ್ನು ತೆಗೆದುಕೊಳ್ಳುವ ಬಾವಿಗಳು ಕೆರೆಗಳು, ಉಪಹಾರಗಳು, ಆಸ್ಪತ್ರೆಗಳು ಇವೇ ಮೊದಲಾದ ... ಸ್ಥಳಗಳಲ್ಲಿ ಅಸ್ಪೃಶ್ಯರು ಸವಾರರಿಗೆ ... ಸ್ಥಳಗಳಲ್ಲಿ ಅಸ್ಪೃಶ್ಯರು ... ನಾಲ್ಕು ವರ್ಣದವರಿಗೆ ... ಸ್ಥಳಗಳಲ್ಲಿ ಅವರು ವಾಸಮಾಡಬೇಕು. ಅಲ್ಲಿ ಅವರಿಗೆ ತಕ್ಕ ... ಇತರರಿಗೆ ಮಾಡುವಂತೆ ... ದೇವಾಲಯ ... ದೇವರ ದರ್ಶನವೇ ಮೊದಲಾದ ... ಅವರು ... ಬದುಕುವುದು ಅಸಾಧ್ಯವಾಗಿದೆ ... ಅವರನ್ನು ಹಿಂದುಗಳನ್ನಾಗಿರುವುದು ... ತಿಳಿದುಕೊಳ್ಳದೆ ... ಚೆನ್ನಾಗಿ ತಿಳಿದುಕೊಳ್ಳದೆ ... ಮನುಷ್ಯತ್ವವನ್ನು ... ನಾಚಿಕೆಯನ್ನುಂಟುಮಾಡುವ ವಿಷಯಗಳನ್ನು ಮೇಲೆ ವಿವರವಾಗಿ ತಿಳಿಸಿರುವೆನು. ಇಂತಹ ಸ್ಥಿತಿಯಲ್ಲಿರುವವರನ್ನು ಉದ್ಧಾರಮಾಡ ... ಹಿಂದೂ ಮತವನ್ನು ನಿಷ್ಕಳಂಕಗೊಳಿಸಿ ... ಪಾತಕಗಳನ್ನು ಪೋಗಲಾಡಿಸಿ ... ನಾನು ಉಪವಾಸವನ್ನು ಮಾಡುತ್ತಿರುವ ... ಪ್ರಜೆಗಳು ತೋರಿಸಿದ ಅಭಿಮಾನವು ... ತೋರಿಸುವ ... ಪ್ರತಿಯೊಬ್ಬ ಹರಿಜನ ... ತೆಯಲ್ಲಿ ಸ್ವಾತಂತ್ರ್ಯ ... ಹೊಂದುವನು.

ಗ್ರಾಮಗಳಲ್ಲಿ ಪ್ರಚಾರ

ಆದರೆ ಈ ಉತ್ಸಾಹವುಂಟಾಗುವುದಕ್ಕೆ ಮೊದಲು ಸ್ವಾತಂತ್ರ್ಯ ಸಂದೇಶವು ... ಹಳ್ಳಿಗಳ ... ಹಳ್ಳಿಗಳಲ್ಲಿ ... ಪಟ್ಟಣಗಳಲ್ಲಿ ಪ್ರಚಾರವನ್ನು ... ಗ್ರಾಮಗಳಲ್ಲಿ ... ಈಗ ಅಖಿಲ ಭಾರತ ಅಸ್ಪೃಶ್ಯತಾ ನಿವಾರಕ ಸಂಘದವರು ... ಸಂಘದಲ್ಲಿ ಸೇರಿ ಕೆಲಸ ... ಬೇಕಾಗಿದೆ.

ಅಂತೀಮವಾದ ಕೋರಿಕೆ

ಕಷ್ಟಪಡುವವರಿಗಿಂತಲೂ ನಮಗೆ ಹೆಚ್ಚಾಗಿ ತಿಳಿಯತಕ್ಕದ್ದು ... ರಿಗೆ ಸಂಸ್ಕರಿಸು ... ತವನ್ನು ... ಹರಿಜನರ ... ಪ್ರತಿನಿಧಿಗಳನ್ನು ... ಹಿಂದೂ ಸಂಸ್ಕಾರದ ... ಸೇರಿ ... ಇರುತ್ತದೆ ... ಆವಶ್ಯಕತೆ ... ಹರಿಜನರು ... ಜೀವಿತವನ್ನು ... ಹರಿಜನರಿಗೆ ... ದೇವಾಲಯ ಪ್ರವೇಶವು ... ಅಸ್ಪೃಶ್ಯರ ಅಧಿಕಾರ ... ದಿಂದ ... ಆಗುವುದು.

ಗ್ರಾಮಸಾಧಾರಣರ ... ವರದಿಯನ್ನು ... ತಿಳಿಸಿರುವ ... ಗಾಂಧಿ ... ಜೀವಿತ ... ನನ್ನ ... ಕೇಳಿದ್ದಾರೆ.

ಸ್ವಸ್ಥ ರಾಜ್ಯ ಪತ್ರಿಕೆ

ಸಂಸ್ಥಾನಗಳ ... ಉಪವಾಸ ... ಶ್ರಮಿಸುವ ... ಪ್ರಜೆಗಳು ... ಹರಿಜನರನ್ನು ಸೇರಿಸಿಕೊಳ್ಳಬೇಕು ... ಪ್ರತಿಯೊಬ್ಬ ಹಿಂದೂ ... ಜಾತಿಯಲ್ಲಿ ... ಅಸ್ಪೃಶ್ಯ ... ದೇವಾಲಯ ... ಸಂಘ ... ತಿಳಿಸಬೇಕು ... ಪ್ರಜೆಗಳನ್ನು ... ಸಂಘಗಳು ... ಸರ್ಕಾರದವರು ... ಪ್ರಚಾರ ... ಬೇಕು.

ಒಬ್ಬ ಲೇಖಕರ ಅಭ್ಯಂತರ

ಹಳೇ ಪುರಾಣವಾದಿಗಳಾದ ಒಬ್ಬ ಲೇಖಕರು ತಿಳಿಸಿದ ಅಭ್ಯಂತರವನ್ನು ಕೆಳಗೆ ಇಲ್ಲಿ ಒಂದು ಪತ್ರಿಕೆಯಲ್ಲಿ ... ಈ ವಿಷಯವು ಪತ್ರಿಕೆಗಳಲ್ಲಿ ಕೂಡ ಪ್ರಕಟವಾಗಿರುತ್ತದೆ ... ರಾಜಕೀಯ ಬಾಗದಿಂದ ... ಪ್ರಧಾನ ಮಂತ್ರಿಯ ... ಅಸ್ಪೃಶ್ಯರಿಗೆ ... ಹರಿಜನರಿಗೆ ... ಲಾಭವು ... ಪ್ರಧಾನ ಮಂತ್ರಿಗಳ ನಿರ್ಣಯವನ್ನು ಪ್ರತಿಭಟಿಸಿದ್ದೇನೆ ... ಹಿಂದೂ ... ಸ್ಥಾನಗಳು ... ಸುಶಿಕ್ಷಿತ ... ಹಿಂದುಮತಕ್ಕೂ ... ಅಸ್ಪೃಶ್ಯರು ಚತುರ್ವರ್ಣದವರು ... ಪೂರ್ವ ... ಈ ಸಮಸ್ಯೆಯನ್ನು ಪರಿಹರಿಸುವ ... ಹಿಂದೂ ಸಂಘವನ್ನು ... ಬೇಕು.

ಸಂಸ್ಥಾನಾಧಿಪತಿಗಳಿಗೆ ಅಭಿನಂದನ

ಹರಿಜನರ ದೇವಸ್ಥಾನ ಪ್ರವೇಶಕ್ಕೆ ಅನುಕೂಲವನ್ನುಂಟುಮಾಡಿ ಇತರ ... ಸಂಸ್ಥಾನಗಳು ... ಅಸ್ಪೃಶ್ಯತೆಯನ್ನು ... ಸಂಸ್ಥಾನಾಧಿಪತಿಗಳಿಗೆ ಅಭಿನಂದನೆಯನ್ನು ... ಪ್ರಾಯಶ್ಚಿತ್ತವನ್ನು ಮಾಡಿರುವವರೆಂದು ... ಹೇಳುವೆನು. ... ಸಂಸ್ಥಾನಗಳಲ್ಲಿ ... ಹಿಂದೂ ಸಂಘ ... ಅಸ್ಪೃಶ್ಯರು ... ನಾನು ... ಅಸ್ಪೃಶ್ಯತೆಯ ... ಪ್ರಾಯಶ್ಚಿತ್ತ ... ಹಿಂದೂ ... ಆದುದರಿಂದ ... ಹಿಂದುಗಳು ... ಅಸ್ಪೃಶ್ಯತೆಯನ್ನು ... ಈ ಉದ್ಯಮವನ್ನು ನಾವು ನಡೆಸಿದಲ್ಲಿ ಇದು ನಮಗೆ ಗೊತ್ತಾಗುವುದು.

ಗಾಂಧಿ

ಪತ್ರವ್ಯವಹಾರ

(ಪತ್ರವ್ಯವಹಾರಕರ ಅಭಿಪ್ರಾಯಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು—ಸಂಪಾದಕ)

ಓವರ್ ಪಟೇಲರ ಉಬ್ಬುವ ಸಾಮರ್ಥ್ಯವು

ಕಳೆದ ತಾ 31 ನೇ ಸೋಮವಾರ ಪ್ರಾತಃಕಾಲ ಸುಮಾರು 11 ಘಂಟೆಯ ಸಮಯದಲ್ಲಿ ಬೆಳ್ಳಾರಿ ... ಎಂ ... ಎ, ಎ. ಎಲ್ ... ಕಳುಹಿಸಿದ್ದ ... ಹೋಗಿದ್ದಾಗ ... ಸುತ್ತು ... ಪಟೇಲರು ... ಸುಮಾರು 1½ ಮೈಲು ... ಅಂಗವಾದ ... ಜನರಿಗೆ ... ಇವರು ... ವರ್ಷ

ಮಕ್ಕಳಿದ್ದ ರೆಮನೆ ಚೆಂದ.

ಮಕ್ಕಳಿಲ್ಲದವರು | ಬಂಜೆತನದಿಂದ ಮುಕ್ತರಾಗಬೇಕಿದ್ದರೆ | ಬಂಜೆತನ ಹೋದೀತು

ಗರ್ಭಧಾರಣಾ ಸಂಜೀವಿನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಖಂಡಿತಾ ಅಪಿಗುರಿ ೯ ಗುಳಿಗೆಗಳ ಕಿ. ೩ ರೂಪಾಯಿ ಟ. ಖ. ೫ ಆಣೆ.

ಪತ್ತ—ವೈದ್ಯ ಪ್ಡಿ. ಎಸ್ ...

ಜರುಗುತ್ತಲಿರುವ ಆಖಿಲ ಜೀವೋಪಿ [illegible] ಕಲ್ಪಿಸಿ ಉತ್ಸವ ನಾಡಿಗೆ ಸೇರಿ ತಮ್ಮ ಗೌರವವನ್ನು ವ್ಯಕ್ತಪಡಿಸಿ ಉಜ್ವಲ ಸಂದರ್ಭದಲ್ಲಿ ದಕ್ಷಿಣ ಹಿಂದೂ ದೇಶದ ಆಸ್ತಿಕ ಜನರು ಪಾಲ್ಗೊಳ್ಳಬೇಕೆಂದು [illegible]

೩೧ ನೇ ಸಾಲಿನ ವಾರ್ಷಿಕೋತ್ಸವ

[illegible] ಟೌನು [illegible] ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್ಡಿನ ೧೯೩೩ ನೇ ಸಾಲಿನ ವಾರ್ಷಿಕೋತ್ಸವವು ಈ ಕೇಂದ್ರದ ಎ ವಿ ಸೂರ್ಯನಾರಾಯಣಶೆಟ್ಟರ ಬಾರ್ ಪ್ರೈಮರಿ [illegible] ದಲ್ಲಿ ತಾ॥ 11 33 ನೇ ಭಾನುವಾರ [illegible] ಅಧ್ಯಕ್ಷತೆಯಿಂದ ನಡೆಯಿತು. ಪ್ರೆಸಿಡೆಂಟ್ ಮ॥ ಎ ವಿ ಸೂರ್ಯನಾರಾಯಣಶೆಟ್ಟರವರ ಕೋರಿಕೆಯಂತೆ ತಾಲ್ಲೂಕು ಆಪೀಸ್ ಮ॥ [illegible] ಯವರು ಅಗ್ರಾಸನವಹಿಸಿದ್ದರು. ಸ್ಥಳ ಮಹನೀಯರುಗಳು ಅಲ್ಲದೆ ಹೊಳೇನರಸೀಪುರದ ಸರ್ಕಲ್ ಇನ್ಸ್‌ಪೆಕ್ಟರ್ ಮ॥ ತಿರುನಾರಾಯಣ್ಯಂಗಾರ್ಯ ವ್ಯವಸಾಯದ ಇನ್ಸ್‌ಪೆಕ್ಟರ್ ಮ॥ ನಾರಾಯಣಾಚಾರ್ಯ ದಯಮಾಡಿದ್ದರು. 31 32 ನೇ ಸಾಲಿಗೆ ರೂ 142-4-7 ಸೈ ನಿವ್ವಳಲಾಭವಾಯಿತು. 7 ರಂತೆ ಬಡ್ಡಿ ಹಂಚಿಕೆ ಕೊಡಲು 15 ರಂತೆ ವಿದ್ಯಾಭ್ಯಾಸದ ಫಂಡು ಕೊಡಲು ಠರಾವಾಯಿತು. ಈ ಸೊಸೈಟಿಯ ಮೆಂಬರುಗಳೆಲ್ಲರೂ ಸೊಸೈಟಿಯ ವಿಚಾರದಲ್ಲಿ [illegible] ಗಳನ್ನು ಚರ್ಚೆಗೆ ತಂದರು. ಚರ್ಚೆಗಳೆಲ್ಲ ಸಮಂಜಸವಾಗಿ ತೀರ್ಮಾನವಾದವು. ಮಧ್ಯೆ ಮಧ್ಯೆ ಕೆಲವು ಭಿನ್ನಾಭಿಪ್ರಾಯಗಳು ಬಂದಾಗ್ಯೂ ಪ್ರೆಸಿಡೆಂಟರಾದ ಮ॥ ಎ ವಿ ಸೂರ್ಯನಾರಾಯಣಶೆಟ್ಟರವರ ಸಂಘದ ಕಾರ್ಯಗಳನ್ನು ನಡೆಸುವ ದೀರ್ಘಕಾಲದ ಅನುಭವದಿಂದ ಇವರು ಮೆಂಬರುಗಳಿಗೆ ಸಮಾಧಾನ ಕೊಟ್ಟದ್ದರಿಂದಲೂ ಮತ್ತು ಇಲಾಖಾ ಇನ್ಸ್‌ಪೆಕ್ಟರು ತಕ್ಕ ಸಲಹೆಯನ್ನು ಕೊಟ್ಟದ್ದರಿಂದಲೂ ಎಲ್ಲಾ ಸಭಿಕರು [illegible] ಮನಸ್ಸಿಕವಾಗಿ ತೀರ್ಮಾನವಾಯಿತು. ಮೊದಲನೇ [illegible] ಯಲ್ಲಿಯೇ ವಿಷಯಗಳೆಲ್ಲವೂ ಚರ್ಚಿಸಲ್ಪಟ್ಟು [illegible] ಪ್ರೆಸಿಡೆಂಟರವರು ತಮ್ಮ ಸಂತೋಷವನ್ನು ಸೂಚಿಸಿದರು. ಸಭೆಯು [illegible] ಗಳು ಶ್ರೀಮನ್ಮಹಾರಾಜರವರ ಶ್ರೀಯುಃ ಪ್ರಾರ್ಥನೆ ಮಾಡಿ ಚಿರಕಾಲವನ್ನು ಮತ್ತು ನೆರೆದಿದ್ದ ಮಹನೀಯರುಗಳಿಗೆ ವಂದನೆಗಳನ್ನು ಅರ್ಪಿಸಿ ವಿಸರ್ಜನೆ ಮಾಡಲಾಯಿತು.

ಜ್ಞಾನಮೂರ್ತಿ ಪ ನಾಗೈಶೆಟ್ಟಿ, ಸೆಕ್ರೆಟರಿ

ನೆಲಮಂಗಲದ ಸುದ್ದಿಗಳು

1 ನೆಲಮಂಗಲದಲ್ಲಿ ಈಗ ಹಾಲಿ ಡಾಕ್ಟರಾಗಿರುವ ಮ॥ ಸಿ ಪಾರ್ಥಸಾರಥಿ ಮೊದಲಿಯಾರ್‌ರವರು ಬಂದು 8 ತಿಂಗಳಾಯ್ತು. ಇವರು ಪ್ರಾಸ್ಪ್ರಿಟ್ಸ್ ದೇಶಗಳಿಗೆ ಹೋಗಿ ಕಲಿತಿಯುತ್ತಾಗಿ ಬಂದಿದ್ದಾರೆ. ಇವರು ಬಂದ ಮೇಲೆ ಯಾವ ಮತಭೇದಗಳೂ ಇಲ್ಲದೆ, ಪ್ರಾಮಾಣಿಕರು ಬಡವರು ಎಂಬ ತಾರತಮ್ಯವಿಲ್ಲದೆ ಬಹಳ ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದಾರೆ. ಆಸ್ಪತ್ರೆಯನ್ನು ಮಧ್ಯಾಹ್ನ 1 ಘಂಟೆಯವರೆಗೂ, ಸಾಯಂಕಾಲ 7 ಘಂಟೆಯ ವರೆಗೂ ತೆಗೆದು ಕೆಲಸ ಮಾಡುತ್ತಿದ್ದರೂ ವಿರಾಮವೇ ಇಲ್ಲ. ಪ್ಲೇಗು ಮತ್ತು ಇತರ ಸಾಂಕ್ರಾಮಿಕ ವ್ಯಾಧಿಗಳ ಕಾಲದಲ್ಲಿಯೂ ಬಹಳ ಕಷ್ಟಪಟ್ಟು ಕೆಲಸ ಮಾಡಿ ಜನಗಳಿಗೆ ಬಹಳ ಉಪಕಾರ ಮಾಡಿರುತ್ತಾರೆ. ಆಸ್ಪತ್ರೆಗೆ ಬರುವ ರೋಗಿಗಳ ಸಂಖ್ಯೆಯು ದಿನೇ ದಿನೇ ಬಹಳ ಹೆಚ್ಚುತ್ತಲಿದೆ. ಇವರು ಈ ಊರಿಗೆ ಬಂದಿರುವುದು ಈ ಊರಿನ ಜನರ ಭಾಗ್ಯೋದಯವೇ ಆಗಿದೆ.

2 ಇಲ್ಲಿನ ಪಶುವೈದ್ಯ ಶಾಲೆಯ ಹಾಲಿ ಇರುವ ಡಾಕ್ಟರ್ ಎ ಎಚ್ [illegible] ರವರ ಆಡಳಿತದಲ್ಲಿ ಬಹಳ ತೃಪ್ತಿಕರವಾಗಿ ಕೆಲಸ ನಡೆಯುತ್ತಲಿದೆ. ಇವರು ಸಹ ಡಾಕ್ಟರ್ ಪಾರ್ಥಸಾರಥಿಯವರಂತೆಯೇ ಜನರ ಪ್ರೀತಿಗೆ ಪಾತ್ರರಾಗಿರುತ್ತಾರೆ.

3 ಈ ಗ್ರಾಮದ ಉರ್ದು ಬಾಲಿಕೆಯರ ಪಾಠಶಾಲೆಯು ಕಟ್ಟಡದ ಸುತ್ತಲೂ, ಇರುವ ಕಾಂಪೌಂಡ್ ಗೋಡೆಯು ಸುಮಾರು 1 ಅಡಿ ಎತ್ತರವಾಗಿರುತ್ತದೆ. ದಕ್ಷಿಣ ದಿಕ್ಕಿನಲ್ಲಿ ಕಾಂಪೌಂಡ್ ಗೋಡೆಯೇ ಇಲ್ಲ. ಬಾಲಿಕೆಯರ ಮತ್ತು ಉಪಾಧ್ಯಾಯಿನಿಯರ ಉಪಯೋಗಕ್ಕೆ ತಕ್ಕ ಕಕ್ಕಸು ಸಹ ಇಲ್ಲ. ಘೋಷಾದಲ್ಲಿರುವ ಬಾಲಿಕೆಯರೂ ಉಪಾಧ್ಯಾಯಿನಿಯರೂ ಶಾಲೆಗೆ ಬಂದಮೇಲೆ ಶಾಲೆಯನ್ನು ಬಿಟ್ಟು ಹೋಗಬೇಕಾದರೆ, ಕಿಟಕಿ ಬಾಗಿಲುಗಳನ್ನು ಮುಚ್ಚಿಕೊಂಡು ಒಳಗೇ ಕೆಲಸ ಮಾಡಬೇಕಾಗಿದೆ. ಘೋಷ ಪದ್ಧತಿಗೆ ಅವಶ್ಯಕವಾದ ಆಚರಣೆ [illegible] ಹೆಣ್ಣು ಮಕ್ಕಳ ಮಾನವನ್ನು ಕಾಪಾಡುವ ಆಯುಧ. ಈ ಊರಿನ ಮುಸಲ್ಮಾನರು, ತಮ್ಮ ಸ್ವಂತ ಖರ್ಚಿನಿಂದ ಸ್ಕೂಲ್ ಕಾಂಪೌಂಡ್ ಸುತ್ತಲೂ ತಡಿಕೆಗಳನ್ನು ನಿಲ್ಲಿಸಿದ್ದರು. ಅವು ಸಹ ಗಾಳಿ ಮಳೆ ಬಿಸಿಲಿನಿಂದ ಹಾಳಾಗಿಹೋಗಿವೆ. ಗೋಡೆಗಳನ್ನು ಎತ್ತರಿಸಿ, ಕಕ್ಕಸು ಕಟ್ಟಿಸಿಕೊಡಬೇಕೆಂದು, ಇಲಾಖಾ ಅಧಿಕಾರಿಗಳಿಗೂ, ಪುರಸಭೆ ಅಧ್ಯಕ್ಷರವರಿಗೂ, ವಿದ್ಯಾಭ್ಯಾಸದ ಬೋರ್ಡಿನವರಿಗೂ, ಅನೇಕಾವರ್ತಿ ತಿಳಿಸಿದರೂ ಏನೂ ಅನುಕೂಲವಾಗಲಿಲ್ಲ. ಈಗಲಾದರೂ ಸಂಬಂಧಪಟ್ಟ ಅಧಿಕಾರಿಗಳು ಈ ತೊಂದರೆಗಳನ್ನು ಹೋಗಲಾಡಿಸಿ ಕೀರ್ತಿಯನ್ನು ಸಂಪಾದಿಸಬೇಕಾಗಿದೆ.

4 ಈ ಗ್ರಾಮದಲ್ಲಿ ಸುಮಾರು ಎರಡು ತಿಂಗಳಿಂದ ವಿಶೇಷವಾಗಿ ಮಳೆಗಳು ಸುರಿದು [illegible] ಗಳು ಬಹಳ ಕೆಟ್ಟು ಹೋಗಿ ಸಂಚಾರಕ್ಕೆ ತೊಂದರೆಯಾಗಿರುತ್ತದೆ. [illegible] ಬೀದಿಗಳಲ್ಲಿ ಲಾಂದ್ರಗಳ ಸರಿಯಾಗಿ ಉರಿಯುತ್ತಿಲ್ಲ. ಮತ್ತು ಇಲ್ಲಿನ ಪೌರಸಭೆಯ ವೈಸ್ ಪ್ರೆಸಿಡೆಂಟರವರು ಬಹಳ ಮುತುವರ್ಜಿ ವಹಿಸಿ ಬಹಳ ಕಾಲದಿಂದಲೂ ಬಾಕಿಯಾಗಿದ್ದ ಕಂದಾಯಗಳನ್ನು ವಸೂಲ್ಮಾಡಿ ಹಣವನ್ನು ಕೂಡಿಸಿರುವರು. ಈ ಹಣದಿಂದ ರಸ್ತೆಗಳನ್ನು ಸರಿಪಡಿಸಿ, ಲಾಂದ್ರಗಳು ಬೀದಿಗಳಲ್ಲಿ ಸರಿಯಾಗಿ ಉರಿಯುವಂತೆಯೂ ಸಣ್ಣ ಬೀದಿಗಳ ಕಸ್ಸಲವನ್ನು ಕಾಲಕಾಲಕ್ಕೆ ಗುಡಿಸಿ ಸಾಗಿಸುವಂತೆಯೂ ಏರ್ಪಡಿಸಿ ಇನ್ನು ಹೆಚ್ಚಾಗಿ ಜನಗಳ ವಿಶ್ವಾಸಕ್ಕೆ ಪಾತ್ರರಾಗುವರೆಂದು ನಂಬಿರುತ್ತೇನೆ.

ಎಂ ಅಬ್ದುಲ್ ಅಜೀಜ್ ಷರೀಫ್
ಆನರರಿ ಪೀಸ್ ಮ್ಯಾಜಿಸ್ಟ್ರೇಟ್ ನೆಲಮಂಗಲ

ಸಮಸ್ತ ವಿದ್ವನ್ಮಂಡಲಿಯಲ್ಲಿ ವಿನಂತಿ

(ಲೇ—ಬಸವರಾಜಶಾಸ್ತ್ರೀ ವರದಪ್ಪನ್ನಿ ಬೃಹನ್ಮಠ ಪ್ರಿನ್ಸಿಪಾಲ್ ಶಿವಶರಣ ಸಂಸ್ಕೃತ ಪಾಠಶಾಲೆ ಯಾದಗಿರಿ)

ಆಯಿ ಸಹೃದಯ ವಿದ್ವದ್ವೃಂದವೇ! ಯಾದಗಿರಿ ವಿ 9 ತಿಂಗಳಿಂದ ಪಟ್ಟಣದ ಪತ್ರಿಕೆಗಳಿಗೂ ಆ ವೀರಶೈವ ಸಮಾಜಕ್ಕೂ ಪ್ರಕಟವಾಗಿರುವ ಸುಚಿಮಯವು ಪರಮೇಶ್ವರನ ಪ್ರೇರಣೆಯಿಂದ ಪ್ರಾಪ್ತವಾದ ದಾಗಿದೆ. ಈ ವಿಷಯ ನಿಮಗೆಲ್ಲಾ ಗೊತ್ತಿರುವ ಹಾಗೆ ಸಭೆಯನ್ನು ಹೇಗೆ ಕೂಡಿಸಬೇಕು, ಅಧ್ಯಕ್ಷರನ್ನು ಹೇಗೆ ಆರಿಸಬೇಕು? ಇತ್ಯಾದಿ ವಿಷಯಗಳನ್ನು ಯೋಚಿಸಿದ ಪ್ರಯುಕ್ತ ನಿನ್ನೆ ಈ ಕಾರ್ಯವು ಎಂದೂ ಸಾಧ್ಯವಾಗದಲ್ಲವೆಂದು ತೋರಿಬರುತ್ತದೆ.

ಇಂಥ ಶಿಷ್ಯವೃಂದ ಸ್ನೇಹಿತರ [illegible] ಪತ್ರಿಕೆಯಲ್ಲಿ ಈ ವಿಷಯವನ್ನು ಕುರಿತು [illegible] ಚರ್ಚಿಸಿದರೆ ಪ್ರಯೋಜನವಾಗಲೆಂದು ಆಶಿಸುತ್ತೇನೆ. ಅಲ್ಲದೆ [illegible] ಆದ್ದರಿಂದ ಸಮಸ್ತ ಪಂಡಿತರೂ ಸಭೆಯಲ್ಲಿ ಸೇರಬೇಕೆಂದು ಬಿನ್ನವಿಸುತ್ತೇನೆ. [illegible] ಸಭೆ ಸೇರುವ ಸ್ಥಳ, ಕಾಲ, ಅಧ್ಯಕ್ಷರು ಮುಂತಾದವುಗಳನ್ನು ನಿರ್ಧರಿಸುವುದು [illegible] ಪತ್ರಿಕೆಗಳ ಮೂಲಕ [illegible] ಸಭಿಕರಿಗೆ ತಿಳಿಸಬೇಕೆಂದು ವಿನಂತಿಯು.

ಆದ್ದರಿಂದ ವೀರಶೈವ ಸಮಾಜದ [illegible] ಬೇಕೆಂದು ಈ ಸಭೆಯನ್ನು ಆತ್ಮಾರ್ಥವಾಗಿ ಕೂಡಿಸುವ ನಮ್ಮ ಸಂಚಿಕೆಯು ಏಕೆಂದರೆ ಧರ್ಮದಲ್ಲಿ ಯಾವ ವಿಷಯದಲ್ಲಿ ಭಿನ್ನಾಭಿಪ್ರಾಯವಿದ್ದರೂ ಆಯಾ ಧರ್ಮಗಳವರು [illegible] ಸಭೆಯಲ್ಲಿ ಸೇರಿ ಚರ್ಚಿಸಿ ನಿರ್ಣಯವನ್ನು ಕೈಕೊಳ್ಳುವ [illegible] ಈ ಸಭೆಯಲ್ಲಿ ಚರ್ಚಿಸಿ ಪಂಡಿತರ ಅಭಿಪ್ರಾಯವನ್ನು ತೆಗೆದುಕೊಂಡು ಸಕಲ ಜೀವಿಗಳಿಗೂ ಹಿತವಾದ ತೀರ್ಮಾನವನ್ನು ಯಾವತ್ತೂ ಅನುಸರಿಸಬೇಕೆಂದು ಕೋರುತ್ತೇನೆ.

ಚರ್ಚೆಯ ವಿಷಯ — ಅನಾದಿಕಾಲದಿಂದಲೂ ವೀರಶೈವರಲ್ಲಿ ಬ್ರಾಹ್ಮಣರು, ಜಂಗಮರು, [illegible] ಕ್ಷತ್ರಿಯ, ವೈಶ್ಯ, ಶೂದ್ರ ಎಂಬಂತೆ ಜಾತಿಭೇದಗಳಿರುವುದಿಲ್ಲ. ಇವು ಸಂಧ್ಯಾವಂದನೆ ಆಧಾರವಾಗಿ ಬಂದವೆಂದು ಹರ್ಡೇಕರ ಮಂಜಪ್ಪನವರ ತಿರ್ಮಾನ ಪೂರ್ವಕವಾದ ಅಭಿಪ್ರಾಯವಿದೆ.

ಇದು ತಪ್ಪು, ಅನಾದಿಕಾಲದಿಂದ ಪಂಚಾಚಾರ್ಯರ ಮೂಲಕ ಬಂದ ವೀರಶೈವರಲ್ಲಿ ಈ ಜಾತಿಭೇದಗಳಿವೆ ಎಂದು ಶ್ರೀ ಪಂಡಿತ ಚಂದ್ರಶೇಖರಶಾಸ್ತ್ರಿಗಳ ಅಭಿಪ್ರಾಯವಿದೆ.

ಈ ಭಿನ್ನಾಭಿಪ್ರಾಯಗಳನ್ನು ಸಾಧಿಸುವುದು ಪ್ರತಿಪಾದಿಸುತ್ತಿದ್ದರೂ, ಇವು ನಮ್ಮ ಸಮಾಜದಲ್ಲಿ ಕೆಲ ಕಾಲದಿಂದ ಅನವರತ ರುಚ್ಯಸುಸಾರವಾಗಿ ಮಾನ್ಯಮಾನ್ಯವಾಗಿವೆ.

ಹೀಗೆ ಸಮಾಜದಲ್ಲಿ ಭಿನ್ನಾಭಿಪ್ರಾಯಗಳಿರುವುದು ಯುಕ್ತವಲ್ಲ. ಆದ್ದರಿಂದ ಯಾವುದಾದರೊಂದು ಅಭಿಪ್ರಾಯವು ಮಾನ್ಯವಾಗಿ ಸಾರ್ವತ್ರಿಕವಾಗುವುದು ಇಷ್ಟವಾಗಿದೆ. ಆದ್ದರಿಂದ ಕೆಳಗೆ ಬರೆದಂತೆ ಒಪ್ಪಿರುತ್ತವೆ.

(೧) ಈ ಉಭಯ ವಾದವನ್ನು ಪರೀಕ್ಷಿಸಿ ನಿರ್ಣಯಿಸಲಿಕ್ಕೆ ಈಗ ಪಂಚಾಚಾರ್ಯಪೀಠಸ್ಥರಾಗಿರುವಂಥ ಸ್ವಾಮಿಗಳಲ್ಲಿ ಯಾರೊಬ್ಬರನ್ನಾದರೂ ಆ ಪೀಠಸ್ಥರು ಆರಿಸಿಕೊಟ್ಟಲ್ಲಿ ಅವರು ಅಧ್ಯಕ್ಷರಾಗಲಿಕ್ಕೆ ನಾವು ಉಭಯರೂ ಒಪ್ಪಿಕೊಂಡು ಈ ವಿಷಯ ಅವರನ್ನೇ ಅಧ್ಯಕ್ಷರನ್ನಾಗಿ ನಿಯಮಿಸಿಕೊಂಡಿದ್ದೇವೆ.

(೨) ಈ ವಿಷಯವು ಮೇಲೆ ಬರೆದಂತೆ ವ್ಯಕ್ತಿ ಸಾಕ್ಷಿಗಳನ್ನೂದ್ದರಿಂದ ಆ ಸ್ವಾಮಿಗಳಲ್ಲಿ ನಮ್ಮ ವಿನ್ನಹವು ಏನೆಂದರೆ—ಆ ಅಧ್ಯಕ್ಷರು ನಿರ್ಣಯಿಸಿದಂತೆ ನ್ಯಾಯಪರತೆಯಲ್ಲಿ ತಲೆಬಾಗಲಿಕ್ಕೆ ಒಪ್ಪುತ್ತಿದ್ದರೆ ನಾವು ಅವರು ಅಧ್ಯಕ್ಷರನ್ನು ಆರಿಸಬೇಕು.

(೩) ಎ ನಮ್ಮ ನಮ್ಮ ಪಕ್ಷಗಳನ್ನು ನಾವು ಉಪನಿಷತ್ತುಗಳಿಂದಲೂ, ವೇದಗಳಿಂದಲೂ, ಆಗಮಗಳಿಂದಲೂ, [illegible] ದ ವರೆಗೆ ನಡೆದ ವೀರಶೈವರ ಶಿಷ್ಟಾಚಾರದಿಂದಲೂ ಸಿ ದ್ಧಾಂತ ಗ್ರಂಥಗಳಿಂದಲೂ, ಆ ಅನ್ಯಾವರಣ ತತ್ತ್ವವಿಚಾರಗಳಿಂದಲೂ ಸಿದ್ಧ ಮಾಡಲು ಬದ್ಧರಾಗಿರುವೆವು.

(೪) ಈ ವಾದವನ್ನು ಸಮರ್ಥಿಸಲಿಕ್ಕೆ ನಾವು ಉಭಯತರು ನಮ್ಮ ನಮ್ಮ ಪರವಾಗಿ ಬೇಕಾದ ಪೀರಸ್ವರವನ್ನು ತರಲಿಕ್ಕೆ ಅಧಿಕಾರಪೂರ್ವರಾಗಿದ್ದೇವೆ.

(೫) ಈ ವಿಷಯವು ಮಹತ್ವದ್ದಾಗಿರುವದರಿಂದ ಈ ವಾದವನ್ನು ನೋಡಲಿಕ್ಕೆ ಮತ್ತು ಕೇಳಲಿಕ್ಕೆ ಪರಮತದ ವಿದ್ವಾಂಸರನ್ನು ಕರೆಯಿಸಲಿಕ್ಕೂ ಅಡ್ಡಿಯಿಲ್ಲ. ಹಾಗೆ ಕರೆಯಿಸುವುದು ಪ್ರಶಸ್ತವಾಗಿದೆ.

(೬) ಈ ಸಭೆಯು ಸಾಮಾಜಿಕ ವಿಷಯಗಳನ್ನೊಳಕೊಂಡದ್ದರಿಂದ ಯಾವ ವೀರಶೈವನ ಸಭ್ಯಗೃಹಸ್ಥನಿಗೂ ಬರಲಿಕ್ಕೆ ಅಡ್ಡಿಯಿಲ್ಲ.

(೭) ಈ ಸಭೆಯಲ್ಲಾದ ನಿರ್ಣಯದಂತೆ ಸಾಪಿಟ್ಟರೂ ವರ್ತಿಸುತ್ತೇವೆ ಮತ್ತು ಪಂಚಾಚಾರ ಪೀಠಸ್ಥರಿಗೂ ವರ್ತಿಸಬೇಕಾಗಿ ಪ್ರಾರ್ಥಿಸುತ್ತೇವೆ.

(೮) ಮೇಲಿನ ಒಂದು ಮತ್ತು ಎರಡನೇ ನಿಯಮಗಳಂತೆ ಆ ಸಭೆಗೆ ಅಧ್ಯಕ್ಷರನ್ನು ಪೂರೈಸುವ ಭಾರವನ್ನು ಶ್ರೀ ಪಂಡಿತ ಚಂದ್ರಶೇಖರಶಾಸ್ತ್ರಿಗಳು ವಹಿಸಿಕೊಂಡಿರುತ್ತಾರೆ. ಈ ಕಾರ್ಯವನ್ನು ಇವರು ಇದೇ ನವೆಂಬರ್ ತಿಂಗಳ ಹದಿನೈದನೆಯ ತಾರೀಖಿನೊಳಗಾಗಿ ಮಾಡಬೇಕು.

ಮುಕ್ಕಾಂ ದಾಯಿಚೂರು, ತಾ॥ ೧೫ ೧೧ ೧೯೩೨	ಚಂದ್ರಶೇಖರಶಾಸ್ತ್ರೀ, ಹರ್ಡೇಕರ ಮಂಜಪ್ಪ

ಸಾಕ್ಷಿಗಳು—(೧) ವಾನರ ಸಿದ್ಧರಾಮಪ್ಪ, ಬಿ ಎ, ಎಲ್ ಎಲ್ ಬಿ ಅಡ್ವೋಕೇಟ್ (೨) ಬಸವಪ್ಪಶಾಸ್ತ್ರೀ ಸಾಲಿಮಠ, ಮಸ್ಕಿ (೩) ಗುರುಬಸವಶಾಸ್ತ್ರೀ, ಗಂಗಳಿ (೪) ಸಿದ್ಧಾಂತಿ ಅಯ್ಯಪ್ಪಶಾಸ್ತ್ರಿ ಜೇವರ್ಗಿ [illegible] (೫) ಜೆ ಅಮರಪ್ಪ, ವಕೀಲ ಹೈಕೋರ್ಟು (೬) ಶಂಕರಪ್ಪ, ವಕೀಲ, ಮಾನ್ವಿ (೭) ಪೋಲೀಸಪ್ಪ, ರಾಯಚೂರು (೮) ರಿಸಾಲ್ದಾರ, ಮುನಿಯಪ್ಪ (೯) ಎಸ್ ಸಿದ್ಧರಾಮಪ್ಪ ವಕೀಲ (೧೦) ಮಲ್ಲನಗೌಡ ಪಾಟೀಲ ಬಳ್ಳಾರಿ (೧೧) ಅಯ್ಯಪ್ಪಗೌಡ ತಡಕಲ್

ಅಧ್ಯಕ್ಷರು

ಶ್ರೀಮದ್ವೀರಶೈವ ಪ ಸಾವ ಸಿದ್ಧ ಪಂಚಾಚಾರ್ಯವರ್ಯ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಟ್ಟಾಧ್ಯಕ್ಷ ಶ್ರೀ ಶಿವಾನಂದ ರಾಜ ದೇಶಿಕೇಂದ್ರ ವ ಸಾವ್ಯಾಮಿಗಳು, ಪಂಡಿತ ಶ್ರೀ ಚಂದ್ರಶೇಖರ ಶಾಸ್ತ್ರಿ ಶ್ರೀ ಯ ತ ಹರ್ಡೇಕರ ಮಂಜಪ್ಪ ಈ ಉಭಯರ ಜಾತಿವಿಷಯಕವಾದ ವಾದವಿಮರ್ಶಾ ಸಭೆಗೆ ಅಧ್ಯಕ್ಷಸ್ಥಾನವನ್ನು ವಹಿಸಿರುತ್ತಾರೆ. ಮುಂದೆ ಮಹಾಸಭೆಯು ಆವಿ ಸಿದ್ಧಿಯಾದ ಕೂಡಲೆ ಸ್ಥಾನ ಮತ್ತು ಕಾಲ ಇವುಗಳನ್ನು ತಿಳಿಸಲಾಗುತ್ತದೆ.

ಬಸವರಾಜಶಾಸ್ತ್ರಿಗಳು ವರದಪ್ಪನ್ನಿ ಬೃಹನ್ಮಠ ಪ್ರಿನ್ಸಿಪಾಲ ಶಿವಶರಣರ ಪಾಠಶಾಲೆ, ಯಾದಗಿರಿ

ಕೃತಜ್ಞತೆ

ಕೃ॥ ಧರ್ಮಕರ್ತ ಶಂಕರಪ್ಪನವರ ಸಿದ್ಧವತ್ಸಲ ಯಾದವ ಅವರ ಜನ್ಮೋತ್ಸವವು [illegible] ಶ್ರೀ ಚಂದ್ರಮೌಳೀಶ್ವರ ದೇವಾಲಯದಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. [illegible] ಶ್ರೀ ಶಿವ ಸ್ವಾಮಿಗಳ ದರ್ಶನ ಅಂತಾನಮಾಡಿ ಶ್ರೀ ಚಂದ್ರಮೌಳಿ [illegible] ಸಹಿತ ಶ್ರೀ [illegible] ಶ್ರೀ ಗಾಯತ್ರೀ [illegible] ಗಳನ್ನು ಪೂಜಿಸಿ [illegible] ಸಹಸ್ರ ನಾಮಾರ್ಚನೆ [illegible] ಸಾಯಂಕಾಲ 1 ಘಂಟೆಯಿಂದ ಶಾಲೆಯ ವಿದ್ಯಾರ್ಥಿಗಳಿಂದ [illegible] ಮುಂತಾದ ಕಾರ್ಯಕ್ರಮಗಳು ನಡೆದವು. [illegible] ಮಂಗಳ ನಡೆದು ಕೃ॥ ಧರ್ಮವೀರ ಶಂಕರಪ್ಪನವರ ಭಾವಚಿತ್ರವು ಉತ್ಸವದೊಡನೆ ಅವರ ಗೃಹಕ್ಕೆ ಜಯಘೋಷದೊಡನೆ ತರಲ್ಪಟ್ಟಿತು. ಬಳಿಕ ಸಾಯಂಕಾಲ [illegible] ರಿಂದ ೬ ಘಂಟೆಯವರೆಗೆ [illegible] ಶ್ರೀ ರಾಜ [illegible] ನಿಂದ ಶಿವಕೀರ್ತನವು ನಡೆಯಿತು. [illegible] ಶಂಕರಪ್ಪ ಮಹಾರಾಜಕೀ ಜೈ ಎಂಬ ಜಯಘೋಷದೊಡನೆ ಸಭೆಯು ವಿಸರ್ಜನೆಯಾಯಿತು.

ಸೆಕ್ರೆಟರಿ, ಶಂಕರಕಾಲೇಜು, ಯಾದಗಿರಿ

ಪ್ರಸಿದ್ಧಪತ್ರಿಕೆ

ತಾ॥ 9 10 33 ರಲ್ಲಿ ನಡೆಯಬೇಕೆಂದು ಪ್ರಕಟಿಸಿದ್ದ ಕೆಂಟಿಗರ ಸಂಘದ ಜನರಲ್ ಬಾಡಿ ಮೀಟಿಂಗು ಸದರಿ ಸಂಘದ ಅಧ್ಯಕ್ಷರಾಗಿದ್ದ ರಾವ್‌ಬಹದ್ದೂರ್ ಧರ್ಮಪ್ರಕಾಶ ಸಾಹುಕಾರ್ ಡಿ ಬನುಮಯ್ಯನವರು ನಿಧನವಾದ ನಿಮಿತ್ತ ಮುಂದುವರಿಸಲ್ಪಟ್ಟಿದ್ದು ಈ ಸಂಘದ ಈಗ ಆದೇ ಮೀಟಿಂಗನ್ನು ತಾ 19 11 33 ರ ಶನಿವಾರ ಸಾಯಂಕಾಲ 9 ಘಂಟೆಗೆ ಸರಿಯಾಗಿ, ಮೈಸೂರು ಇಲವಾಲದ ರಸ್ತೆಯಲ್ಲಿರುವ ಕುಂಟಿಟಿಗರ ಸಂಘದ ಬಿಲ್ಡಿಂಗ್ಸ್‌ನಲ್ಲಿ ನಡೆಯಬೇಕಾಗಿ ನಿಶ್ಚಯಿಸಿರುತ್ತೆ. ಪ್ರಾರಂಭದಲ್ಲಿ ನಮ್ಮ ಸಂಘಕ್ಕೆ ಅನವರತವಾಗಿ ಸಹಾಯ ಸಂಪತ್ತಿಗಳನ್ನು ಉಂಟುಮಾಡಿಕೊಟ್ಟಿರುವ, ರಾವ್ ಬಹದ್ದೂರ್ 'ಧರ್ಮಪ್ರಕಾಶ' ಸಾಹುಕಾರ್ ಡಿ ಬನುಮಯ್ಯನವರ, 'ಧರ್ಮವರಾಯಣೆ' ಶ್ರೀ॥ ಆಲಮ್ಮನವರ ಮತ್ತು ಶ್ರೀಮತಿ ತಿಮ್ಮಮ್ಮನವರ ಭಾವಚಿತ್ರಗಳ ಅನಾವರಣ ಮಹೋತ್ಸವವೂ, ಶ್ರೀಮತಿ ತಿಮ್ಮಮ್ಮನವರಿಗೆ 1 ಮಾನಪತ್ರನಿವೇದನವೂ, ಡಿನಂಗಳವರ ಶ್ರೀಯುತ ಸಾಹುಕಾರ್ ಬಿ ಬಂದಯ್ಯನವರ ಸ್ಮರಣಾರ್ಥವಾಗಿ 1 ಗಾರ್ಡನ್‌ಪಾರ್ಟಿ ಮುಂತಾದ ವಾಡಿಕೆಯಾಗಿರುವಂಥವೂ ಸಹ ನಡೆಯಲು ಏರ್ಪಡಿಸಿರುತ್ತೆ. ಆನಂತರ ಸಂಘದ ಬಿಲ್ಡಿಂಗ್ ಆಡಿಟ್ ರಿಪೋರ್ಟು ಸಂಘದ ಕಾರ್ಯ ಕಾರ್ಯೋಪಾಯಗಳ ವರದಿ, ಅಧಿಕಾರಿಗಳ ಹೊಸ ಚುನಾವಣೆ, ಕೆಲವು ರೂಲ್ಸುಗಳ ಬದಲಾವಣೆ ಮತ್ತು ಫಂಡು ವಸೂಲಿ ವಿಚಾರಗಳ ಚರ್ಚೆಗೆ ಬರುವವೆ. ಸದಸ್ಯರೆಲ್ಲರಿಗೆ ಪ್ರಸ್ತುತದಲ್ಲಿ ಉಪಸ್ಥಿತರಾಗಬೇಕೆಂದು ಕೋರುತ್ತೇನೆ. ನಮ್ಮ ಜನಸಮುದಾಯದ ಕೀರ್ತಿ ಗೌರವಗಳಿಗೆ ಸಂಬಂಧಿಸಿದ ಹಲವು ಮಹತ್ವದ ಸಂಗತಿಗಳು ತೀರ್ಮಾನವಾಗಬೇಕಾಗಿರುವುದರಿಂದ ಸಮಸ್ತ ಮಹಾಬಂಧುಗಳು ಮೀಟಿಂಗಿಗೆ ತಪ್ಪದೆ ದಯಮಾಡಿಸಬೇಕಾಗಿ ಪ್ರಾರ್ಥನೆ

ರಿಪೋರ್ಟು ಇತ್ಯಾದಿಗಳ ಅಚ್ಚಾದ ಕಾಪಿಗಳನ್ನು 1 ದಿವಸ ಮುಂಚಿತವಾಗಿ ಸಂಘದ ಆಫೀಸಿನಲ್ಲಿ ಹಂಚಲಾಗುವುದು

ಎಂ ಸಿ ಮಲ್ಲಯ್ಯ, ಎಂ ಪುಟ್ಟಯ್ಯ, ಕಾರ್ಯದರ್ಶಿಗಳು, ಕುಂಟಿಟಿಗರ ಸಂಘ, ಮೈಸೂರು

ನಾರಿನಮೇಲ್ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರತರಿಸಿ ಕೊಳ್ಳಿರಿ. ಕಿ ೧। ರೂ ಟಿ ಖ ಜ ಆಣೆ

ಪತ್ತೆ—ವೈದ್ಯ ವ್ಹಿ ಎಸ್ ಕಾಳಸೆ ಮಿರಜ

೨।

M C

೧೯೩೨ ನೆಯ ಇಸವಿ ನವಂಬರ್ ತಾ॥ ೧೪ ರಿಂದ ನವೆಂಬರ್ ತಾ॥ ೨೦ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೫ ನೆಯ ಅಂಗಿರಸ ನಾಮಸಂವತ್ಸರದ ಕಾರ್ತಿಕ ಬಹುಳ ಪಾಡ್ಯವಿಯಿಂದ ಕಾರ್ತಿಕ ಬಹುಳ ಸಪ್ತಮಿ ವರೆಗಿನ ಪಂಚಾಂಗ

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತುಲಾ ವೃಶ್ಚಿ
14	¹ಸೋಮ	ಪಾಡ್ಯ	16-13	ಕೃತ್ತಿ	14 15	29
15	²ಮಂಗಳ	ಬಿದಿ	21-55	ರೋಹಿ	20 24	1
16	ಬುಧ	ತದಿ	26 33	ಮೃಗ	26 25	2
17	ಗುರು	ಚೌತಿ	30 4	ಆದ್ರಾ	31 16	3
18	ಶುಕ್ರ	ಪಂಚ	32-48	ಪುನ	35-14	4
19	³ಶನಿ	ಷಷ್ಠಿ	33 47	ಪುಷ್ಯ	37 37	5
20	ಭಾನು	ಸಪ್ತ	33 54	ಆಶ್ಲೇ	39 8	6

(1) ಕಾರ್ತಿಕ ಸೋಮವಾರ (2) ನಂಜನಗೂಡಿನಲ್ಲಿ ಅಷ್ಟತೀರ್ಥೋತ್ಸವ, ಮಳೆನಕ್ಷತ್ರ ವಿಶಾಖ ೪ ನೆಯಪಾದ, (3) ಮಳೆನಕ್ಷತ್ರ-ಅನೂರಾಧ ೧ ನೆಯಪಾದ.

ಮೈಸೂರು ಸ್ಟಾರ್ ಧರ್ಮಾಧ್ಯಕ್ಷ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು

[illegible]

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಪುಟ ೪೫೩] ಮೈಸೂರು ಸ್ಟಾರ್ ಸರ್ ೧೯೩೨ ನೆಯ ಇಸವಿ ನವಂಬರ್ ತಾರೀಖು ೨೧ ನೆಯ ಸೋಮವಾರ [ಸಂಚಿಕೆ ೪೭

Insurance in the Mysore State Life Insurance, Public Branch.

Life Insurance is admitted the best form of investment and the greatest safeguard against the old age and death

The best, safest, cheapest, most profitable and most convenient place of insurance is the Public Branch of the Mysore State Life Insurance

Policies are issued from Rs 100 to Rs 10,000 and copies of rules and forms of application can be had from all Government Treasuries Economic Superintendents, Helpers and the Insurance Office, Public Office Buildings Bangalore

(Sd) S SHAMANNA,
Secretary, Insurance Committee

[60—20]



[50—3]

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	[illegible]
[illegible]	೦—೧೨—೦	೧— ೨—೦
[illegible]	೦— ೮—೦	೦—೧೪—೦
[illegible]	೦— [illegible]—೦	೦— [illegible]—೦
[illegible]	೦— [illegible]—೦	೦—೧೦—೦
[illegible]	೦— [illegible]—೦	೦— [illegible]—೦
[illegible]	೦— [illegible]—೦	೦— [illegible]—೦
[illegible]	೦— ೧—೦	೦— [illegible]—೦
[illegible]	೦— ೮—೦	೦—೧[illegible]—೦
[illegible]	೦— [illegible]—೦	೦—೧[illegible]—೦
[illegible]	೧— ೦—೦	೧— [illegible]—೦

[illegible] ೧೦೦೦ ರೂಪಾಯಿ ಇನಾಮು [illegible]

ವೀರಾಜಪೇಟೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

[illegible]

ಸ್ತ್ರೀ ರೋಗ ನಿವಾರಣ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

[60—4]

ಪತ್ತಾ ಮಾಲಕ :—ವೈದ್ಯ [illegible] ಕಾಪಸೆ [illegible]

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

[illegible]

[illegible]

[60—12]

ಮೈಸೂರು ಸ್ಟಾರ್.

೧೯೩೨ ನೇ ಇಸವಿ ನವಂಬರ್ ತಾ|| ೨೧ ನೇ ಸೋಮವಾರ

THE ALLAHABAD SETTLEMENT

The situation in which the Unity Conference was convened under the presidency of that veteran statesman Mr Vijayaraghavachariar of South India, at Allahabad was not very hopeful. Every one had misgivings about the turn it may take at any time during the progress of the conference. The unavoidable departure of Maulana Shaukat Ali from the conference and the refusal of Sir Mohamed Yakub and his adherents to attend, rendered the situation critical. Under such auspices the conference began to work out an agreement satisfactory to the Hindus, Muslims and the Sikhs. It will be remembered that all previous attempts at Hindu-Muslim rapproachment had failed and obstacles in the way of amicable settlement were not few especially in view of some of the leaders of both the communities having departed to attend the third R T C. The old adage "darkest hour is before the dawn" was true of the atmosphere in which the conference began to evolve a formula acceptable to the Hindus, Muslims and the Sikhs alike. There gathered threatening clouds of dead-lock failure and disagreement during the discussion of some of the ticklish questions in the Committee of the Unity Conference. Thanks, to the patriotic efforts and untiring zeal of the aged President Mr Vijayaraghavachariar Pandit Malaviyaji, Abdul Kalam Azad and others, a satisfactory settlement has been reached on all the points affecting the relationship between the two communities on 17th evening, the full text of which is released to the press. It is most gratifying that the agreement is unanimous and the feelings of the leaders throughout this momentous session of eighteen days, have been cordial. It is really very happy that success has at last attended the strenuous efforts of the Unity Committee and this we believe, will ensure permanent cordiality mutual good will and trust between the two great communities thus laying a surer foundation for the growth of United India. This ensured other minor questions solve themselves and pave the way for the speedy emancipation of Indian Nation from the thraldom of foreign bureaucracy. In this connection we are compelled to observe that immediate steps should be taken to get the agreement ratified by every section of the Nation. If it is adopted whole heartedly by All India the Communal Award which had become an inevitable alternative in the absence of an agreement, will have to be modified in the light of the memorable agreement now reached. It is also necessary that the R T C delegates of both the communities should take their stand on the agreement and fight out the salvation of their motherland. Coming now to the details of the settlement the main provisions are -firstly that adequate protection is guaranteed to the culture, language, script, education and the practice and personal laws of the communities in the constitution, secondly that provincial autonomy and responsibility in the centre—with safeguards for a period of ten years shown to be demonstrably in the interest of India, thirdly the powers of Provincial Governments being scheduled exhaustively questions of doubt to be settled by the Supreme Court; fourthly that the Army and the Judiciary to be open to all the communities selection being made on merit alone; fifthly that Judiciary must be separated from the Executive and the recruitment to the service being made by a Public Service Commission creating equal opportunities to all. Other important items of the decisions are the separation of Sind as a Governor's province with safeguards for the Hindus in that province, reservation of 51 percent of seats to the Muslims both in Bengal and Punjab and 32% in the Central Legislature. It is also agreed that the method of election should be through joint electorates, but for the next ten years the method of election being the modified form of Madras Pact for this. All this, which had hitherto baffled the efforts of so many, is no small achievement of the Conference. In conclusion we heartily congratulate all those patriotic men who laboured hard in the cause of Unity, on the successful consummation of their efforts in solving India's most difficult and knotty problem.

CONGRATULATIONS

We offer our hearty and sincere congratulations to Mr Justice P Mahadeviah on his elevation as Chief Justice of the High Court of Mysore and to Mr K Shankaranarayana Rao on his being raised to the High Court as Puisne Judge. Mr. P Mahadeviah has by dint of honest, conscientuous and able work proved himself worthy of the high trust now reposed in him by His Highness the Maharaja of Mysore. It is not often that the highest Judicial office in the land is secured to a member of the unprivileged communities and we think that it is a matter in which the country as a whole feels justly proud. We have no doubt that Mr Mahadeviah will prove a great success in the high office even as many of his predecessors have been. Mr K. Shankarnarayana Rao in fact deserved the present elevation much earlier. His bright academic career his long experience at the Bar and his success as a District and Sessions Judge along with his innate courtesy all fit him supremely for the task he is called upon to discharge. We wish both these officers every success.

ಅಲಹಾಬಾದು ತೀರ್ಮಾನ

ಹಿಂದು ಮಹಮ್ಮದೀಯ ಮತ್ತು ಸಿಕ್ಕರುಗಳಲ್ಲಿ ಐಕಮತ್ಯವನ್ನುಂಟುಮಾಡಬೇಕೆಂಬುದ್ದೇಶದಿಂದ ಮೌಲಾನಾ ಷೌಕತಾಲಿಯವರೂ ಪಂಡಿತ ಮದನಮೋಹನ ಮಾಳವೀಯರೂ ಬಹಳ ಪ್ರಯಾಸಪಟ್ಟು ಮೂರು ಮತದವರ ಮುಖಂಡರ ಸಭೆಯನ್ನು ಏರ್ಪಡಿಸಿದ್ದರೂ, ರಾಜಕೀಯ ವಿಚಾರದಲ್ಲಿ ನುರಿತವರೂ ಆದ ಶ್ರೀಯುತ ಮ|| ವಿಜಯರಾಘವಾಚಾರ್ಯರ ಅಧ್ಯಕ್ಷತೆಯಲ್ಲಿ ಅಲಹಾಬಾದಿನೊಳಗೆ ಇದೇ ತಾ|| 3 ರಲ್ಲಿ ಕೂಡಿದರು. ಹಿಂದು ಮಹಮ್ಮದೀಯರ ಐಕಮತ್ಯವೇ ಸಂಯುಕ್ತ ಹಿಂದೂದೇಶ ವರ್ಗದೇಶಾಭೂ ಭಾರತ ಸ್ವರಾಜ್ಯಸಾಧನೆಗೆ ಮಾರ್ಗವೆಂದು ಮನಗೊಂಡು ಈ ಸಭೆಯ ಸಮ್ಮೇಳನಕ್ಕೆ ಪ್ರಯತ್ನಿಸಿದ ಮೌಲಾನಾ ಷೌಕತಾಲಿಯವರು ಸ್ವದೇಶ ಪ್ರಯಾಣಮಾಡಿದುದರಿಂದಲೂ, ಸರ್ ಮಹಮ್ಮದ್ ಯಾಕೂಬರವರೂ ಅವರ ಅನುಯಾಯಿಗಳೂ ಆಹ್ವಾನವನ್ನು ತಿರಸ್ಕರಿಸಿದುದರಿಂದಲೂ, ಕೆಲ ನಾಯಕರುಗಳು ಬಿಗಿಪಟ್ಟಿನಲ್ಲಿದ್ದುದರಿಂದಲೂ ಸಭೆಯ ಸದುದ್ದೇಶವು ನೆರವೇರಲಾರದೆಂಬ ಶಂಕೆಯುಂಟಾಗಿದ್ದಿತು. ಆದರೆ ಪಂಡಿತ ಮಾಳವೀಯರವರು ಅಬ್ದುಲ್ ಕಲಾಂ ಆಜಾದ್ ಮೊದಲಾದ ಪ್ರಮುಖರ ಮತ್ತು ಅಧ್ಯಕ್ಷರ ಕಾಲೋಚಿತವಾದ ಸಲಹೆಯಿಂದಲೂ ಪ್ರಯತ್ನವಿಶೇಷದಿಂದಲೂ ನಾಯಕ ಸಭಿಕರುಗಳು ಭಿನ್ನಾಭಿಪ್ರಾಯಗಳನ್ನು ಬಿಟ್ಟು ಐಕಮತ್ಯ ಪ್ರಯತ್ನ ಕೈಕೊಂಡುದರಮೇಲೆ ಪರಸ್ಪರ ಸಮಾಧಾನ ಕ್ರಮಗಳನ್ನು ಆಲೋಚಿಸಿ ನಿರ್ಧರಿಸಲು ಒಂದು ಕಮಿಟಿಯೇರ್ಪಡಿಸಲ್ಪಟ್ಟಿತು. ಈ ಕಮಿಟಿಯವರು 18 ದಿವಸಗಳವರೆಗೆ ಸಮಾಲೋಚಿಸಿ ಸಮಸ್ತ ವಿಷಯಗಳನ್ನೂ ಚರ್ಚಿಸಿ ಹಿಂದು ಮಹಮ್ಮದೀಯ ಸಿಕ್ಕರುಗಳಿಗೆ ಒಪ್ಪಿತವಾಗಿರುವ ರೀತಿಯಲ್ಲಿ ತೀರ್ಮಾನಿಸಿ ತಮ್ಮ ಕಾರ್ಯವನ್ನು ತಾ|| 17 ರ ಸಾಯಂಕಾಲದಲ್ಲಿ ಮುಗಿಸಿದರು. ಈ ಕಮಿಟಿಯ ಸೆಕ್ರೆಟರಿಯವರಾದ ಪಂಡಿತ ಗೋವಿಂದ ಮಾಳವೀಯರವರು "ಭಾರತದೇಶದಲ್ಲಿ ನಾನಾ ಮತದವರೊಳಗೆ ಕೆಲ ವರ್ಷಗಳಿಂದಲೂ ಭೇದಭಾವವು ಹುಟ್ಟಲು ಕಾರಣವಾಗಿದ್ದ ಎಲ್ಲ ವಿಷಯಗಳನ್ನೂ ಐಕಮತ್ಯ ಕಮಿಟಿಯವರ 17 ದಿನಗಳವರೆಗೆ ಚರ್ಚೆ ನಡೆಸಿದಮೇಲೆ ಏಕಾಭಿಪ್ರಾಯವುಂಟಾದುದು ಪರಮಾನಂದಪ್ರದವು. ಈ ಸಂತೋಷಕ್ಕೆ ಪಾರವೇ ಇಲ್ಲ. ಐಕಮತ್ಯ ಕೂಟದಲ್ಲಿ 150 ಘಂಟೆಗಳಕಾಲ ಚರ್ಚೆ ನಡೆದುದರ ಮೇಲಿಂದ ವಿಷಯಗಳು ಎಷ್ಟು ಕ್ಲಿಷ್ಟವಾಗಿದ್ದುವೆಂಬುದು ವ್ಯಕ್ತವಾಗುತ್ತದೆ. ಪಂಜಾಬು, ಬಂಗಾಳ, ಸಿಂಧು ರಾಷ್ಟ್ರಗಳ ವಿಷಯದಲ್ಲಿಯೂ, ಸಂಯುಕ್ತ ನಿಯೋಜಕವರ್ಗದ ವಿಷಯದಲ್ಲಿಯೂ ಸಭಿಕರು ಏಕಾಭಿಪ್ರಾಯಕ್ಕೆ ಬಂದರು. ತಮಗೆ ಕೊಡಲ್ಪಟ್ಟ ರಕ್ಷಣೆಗಳಿಂದ ಮೈನಾರಿಟಿಯವರು ತೃಪ್ತಿಪಟ್ಟಿರುವುದರಿಂದ ಅವರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾದುದರಿಂದ ಮೆಜಾರಿಟಿಯವರಿಗೂ ಸಂತೋಷವಾಯಿತು" ಎಂದು ಪ್ರಕಟಿಸಿದ್ದಾರೆ. ಇಂಡಿಯಾದ ಮುಖ್ಯ ಸಮಸ್ಯೆಯಾಗಿದ್ದ ಐಕಮತ್ಯವು ಈ ಸಭಿಕರ ಪ್ರಯತ್ನಗಳಿಂದ ಸಾಧ್ಯವಾಗದಿದ್ದ ಹಿಂದು ಮಹಮ್ಮದೀಯ ಐಕಮತ್ಯವು ಕೂಡಿದುದೂ ಇದರಿಂದ ಭಾರತ ಮಂತ್ರಿಗಳ ಪ್ರಯತ್ನವಾದ ಪ್ರತ್ಯೇಕ ನಿಯೋಜಕ ವರ್ಗ ಬೇರ್ಪಾಟು ಮುಗ್ಗರಿಸಿರುವುದೂ, ಭಿನ್ನಮತದವರ ಭಿನ್ನಭಾವಗಳನ್ನು ಪ್ರಸ್ತುತಗೊಳಿಸಿ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುತ್ತಿದ್ದ ಬ್ರಿಟಿಷ್ ಪ್ರಭುತ್ವದವರ ಆಲೋಚನೆಯು ಫಲಿಸಲಿಲ್ಲವಾದುದರಿಂದ, ಹಿಂದೂ ದೇಶೀಯರಿಗೆ ಧೈರ್ಯವು ಹುಟ್ಟಿ ಸ್ವಾತಂತ್ರ್ಯ ಪ್ರಭುತ್ವಕ್ಕೆ ಬೇಕಾಗಿರುವ ಸಾಧನಗಳನ್ನು ಹೊಂದಲು ಅನುಕೂಲವಾಗಿರುವುದಕ್ಕೆ ಇಂತಹ ಸಂತೋಷಪ್ರದವಾದ ಏಕಮತ್ಯ ಸಮ್ಮೇಳನವನ್ನು ಕೂಡಿಸಿ ಜಯಪ್ರದವಾಗಿ ನಡೆಸಿದ ಮ|| ವಿಜಯರಾಘವಾಚಾರ್ಯ, ಮಾಳವೀಯ ಪ್ರಭೃತಿಗಳನ್ನು ಅಭಿನಂದಿಸುತ್ತೇವೆ ಮತ್ತು ಈ ತೀರ್ಮಾನವು ಭಾರತೀಯರೆಲ್ಲರಿಂದಲೂ ಅನುಮೋದಿತವಾಗಿ ಬ್ರಿಟಿಷರಿಗೆ ವಿಸ್ಮಯವನ್ನೂ ಕಳವಳವನ್ನೂ ಉಂಟುಮಾಡುವುದೆಂದು ನಿರೀಕ್ಷಿಸುತ್ತೇವೆ

ರೌಂಡ್‌ಟೇಬಲು ಸಭಾರಂಭ

ಮೂರನೆಯ ರೌಂಡುಟೇಬಲು ಸಭೆಯು ಕಳೆದ ಗುರುವಾರ ಲಂಡನ್ ಪಟ್ಟಣದ ಪಾರ್ಲಿಮೆಂಟು ಭವನದೊಳಗೆ ಪ್ರಧಾನಾಮಾತ್ಯರಾದ ಮೆಕ್ಡೊನಾಲ್ಡರವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಆ ದಿನದ ಅಧ್ಯಕ್ಷರು ಉಪಚಾರೋಕ್ತಿಯಿಂದ ಪ್ರತಿನಿಧಿಗಳನ್ನು ಸುಸ್ವಾಗತಿಸಿ "ಸಭೆಯಲ್ಲಿ ಜರುಗುವ ಕಾರ್ಯಗಳಿಂದ ಎಲ್ಲರಿಗೂ ಸಂತೃಪ್ತಿಯುಂಟಾಗುವುದೆಂದು ನಾನು ನಂಬುತ್ತೇನೆ. ನಮ್ಮಗಳ ಪರಸ್ಪರಾಭಿಪ್ರಾಯಗಳೆಲ್ಲ ನಮ್ಮೆಲ್ಲರಿಗೂ ಚೆನ್ನಾಗಿ ತಿಳಿದಿರುವುದರಿಂದ ಕಾಲಹರಣವಾಗದಂತೆ ಮುಖ್ಯ ವಿಚಾರಗಳನ್ನು ಕುರಿತು ಮಾತ್ರ ನಾವು ಚರ್ಚಿಸಬೇಕಾಗಿದೆ. ಕ್ರಿಸ್ತಮಸ್ ಹಬ್ಬದೊಳಗೆ ಈ ಸಭೆಯನ್ನು ಮುಗಿಸಲು ಬೇಕಾದಷ್ಟು ಅವಕಾಶವಿರುವುದು. ನಾನು ಪ್ರತಿದಿವಸವೂ ಸಭೆಗೆ ಬರಲವಕಾಶವಿಲ್ಲದಿರುವುದರಿಂದ ಪ್ರಭುತ್ವ ಪ್ರತಿನಿಧಿಗಳು ಈ ಸಭೆಯಲ್ಲಿ ತಿಳಿಸುವ ಅಭಿಪ್ರಾಯಗಳನ್ನೆಲ್ಲ ನಾನೂ ಮಂತ್ರಿವರ್ಗದವರೂ ಸೇರಿ ನಿರ್ಣಯಿಸಿದರೆಂದೇ ನೀವು ನಂಬತಕ್ಕದ್ದು. ಇದು ನೆರವೇರಲು ದೊರೆತನದವರು ಸರ್ವ ವಿಧದಲ್ಲೂ ಸಹಾಯಮಾಡುವರು" ಎಂದು ಭಾಷಣ ಮಾಡಿದರು. ಅನಂತರ ಹಿಜ್ ಹೈನೆಸ್ ಆಗಾಖಾನರವರು ಪ್ರತಿನಿಧಿಗಳ ಪರವಾಗಿ ಅಧ್ಯಕ್ಷ ಮಂತ್ರಿಗಳನ್ನು ವಂದಿಸಿ "ಹೇಗಾದರೂ ವಿಜಯವನ್ನು ಹೊಂದಬೇಕೆಂಬ ದೃಢಸಂಕಲ್ಪದಿಂದ ಈ ಸಭೆಗೆ ಬಂದಿರುತ್ತೇವೆ. ಈ ಸಭಾಕಾರ್ಯವು ಕ್ರಿಸ್ತಮಸ್ ಹಬ್ಬದೊಳಗೆ ಪೂರೈಸಿ ಭಾರತೀಯರಲ್ಲಿ ನ್ಯಾಯವಾದ ಕೋರಿಕೆಯುಳ್ಳವರಿಗೆ ಸಂತೃಪ್ತಿಕರವಾಗಿ ರಾಜ್ಯಾಂಗವಿಧಾನವು ನಿರ್ಮಿಸಲ್ಪಡುವುದೆಂದು ನಂಬುತ್ತೇನೆ" ಎಂದು ಹೇಳಿದರು. ಇದುವರೆಗೆ ಸಂಪೂರ್ಣವಾಗಿ ಚರ್ಚಿಸಲ್ಪಡದ ವಿಷಯಗಳುಮಾತ್ರ ಚರ್ಚಿಸಲ್ಪಡುವವು. ಡಿಸಂಬರ್ ತಾ|| 30 ರೊಳಗೆ ಮುಗಿದರೆ ರಾಜ್ಯಾಂಗವಿಧಾನವನ್ನು ದೊರೆತನದವರು ಸಿದ್ಧಪಡಿಸುವರು. ಇದನ್ನು ಪಾರ್ಲಿಮೆಂಟಿನಲ್ಲಿ ಪರ್ಯಾಲೋಚಿಸಲನುಕೂಲವಾಗುವುದು. ಒಂದೊಂದು ವಿಷಯವನ್ನು ಒಂದೊಂದು ದಿವಸ ಚರ್ಚಿಸಲು ಏರ್ಪಡಿಸಬೇಕು. ಇತ್ಯಾದಿಯಾಗಿ ಭಾರತ ಮಂತ್ರಿಯವರು ಉಪನ್ಯಾಸಮಾಡಿದರು. ಕಾರ್ಯಕ್ರಮವು —(1)ಲೋಥಿಯನ್ ಕಮಿಟಿ ವರದಿ ಚುನಾವಣೆಯ ಪದ್ಧತಿ, ಎಂದು ಫೆಡರಲ್ ಶಾಸನಸಭೆಗಳ ಮೆಂಬರುಗಳ ಸಂಖ್ಯೆ (2) ಫೆಡರಲ್ ಪ್ರಭುತ್ವಕ್ಕೂ ರಾಷ್ಟ್ರೀಯ ಪ್ರಭುತ್ವಕ್ಕೂ ಪರಿಪಾಲನ ವಿಚಾರದಲ್ಲಿರಬೇಕಾದ ಸಂಬಂಧ (3) ಗೌರ್ನರ್ ಜನರಲ್ಲಿಗೂ ಗೌರ್ನರುಗಳಿಗೂ ಪ್ರತ್ಯೇಕಾಧಿಕಾರ (4) ಆರ್ಥಿಕ ಮತ್ತು ವಾಣಿಜ್ಯ ವಿಷಯಗಳಲ್ಲಿ ರಕ್ಷಣೆ (5) ದೇಶರಕ್ಷಣೆಗೆ ಸಂಬಂಧಪಟ್ಟ ಆರ್ಥಿಕ ವಿಚಾರ (6) ಫೆಡರಲ್ ಆರ್ಥಿಕ ಸಂಸ್ಥಾನಗಳ ಸಂಘದ ವರದಿ ಫೆಡರಲ್ ಆರ್ಥಿಕ ಸಂಘದ ವರದಿ (7) ಮುಖ್ಯ ಹಕ್ಕುಗಳು (8) ಭಾರತ ಶಾಸನ ಸಭೆಗಳಿಗೂ ಪಾರ್ಲಿಮೆಂಟಿಗೂ ಇರುವ ಅಧಿಕಾರಗಳು (9) ಸಂಸ್ಥಾನಾಧಿಪತಿಗಳ ರಾಜ್ಯಾಧಿಕಾರ. ಈ ವಿಚಾರಗಳು ಪರ್ಯಾಲೋಚಿಸಲ್ಪಟ್ಟು ಆಡಿಯಲ್ಲಿ ಅಂಗೀಕರಿಸಲ್ಪಡುವುವು

ಅಭಿನಂದನ

ಮೈಸೂರು ಹೈಕೋರ್ಟ್ ಜಡ್ಜಿಯವರಾದ ಮ|| ಪಿ. ಮಹಾದೇವಯ್ಯ, ಬಿ ಎ , ಬಿ ಎಲ್ , ರವರು ಅಫಿಷಿಯೇಟಿಂಗ್ ಚೀಫ್ ಜಡ್ಜಿಯವರಾಗಿಯೂ, ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರಾಗಿದ್ದ ಮ|| ಕೆ. ಶಂಕರನಾರಾಯಣರಾವ್, ಬಿ.ಎ., ಬಿ ಎಲ್ ರವರು ಚೀಫ್ ಕೋರ್ಟಿನ ಆಕ್ಟಿಂಗ್ ಜಡ್ಜಿಯವರಾಗಿಯೂ ಶ್ರೀಮನ್ಮಹಾರಾಜರವರಿಂದ ನಿಯಮಿಸಲ್ಪಟ್ಟಿರುವುದರಿಂದ ಈ ಉಭಯ ನ್ಯಾಯಾಧೀಶರುಗಳನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ ಮತ್ತು ಹಿಂದುಳಿದ ವರ್ಗದವರಿಗೆ ಅಲಭ್ಯವಾಗಿದ್ದ ಪ್ರಧಾನ ನ್ಯಾಯಮೂರ್ತಿ ಸ್ಥಾನವನ್ನು ಈಗ ಅನುಗ್ರಹಿಸಿದುದಕ್ಕಾಗಿ ಪ್ರಭುವರ್ಯರನ್ನು ವಂದಿಸುತ್ತೇವೆ. ಈ ನ್ಯಾಯಮೂರ್ತಿಗಳ ನ್ಯಾಯಶಾಸ್ತ್ರ ನಿಪುಣತೆಯೂ, ಕಾರ್ಯಾಸಕ್ತಿಯೂ, ನಿಸ್ಪೃಹತೆಯೂ ನಿಷ್ಪಕ್ಷಪಾತತೆಯೂ ಉನ್ನತಿಗೆ ಕಾರಣಗಳಾಗಿರುತ್ತವೆ. ಈ ಉಭಯರಿಗೂ ದೀರ್ಘಾಯುರಾರೋಗ್ಯಾಭಿವೃದ್ಧಿಯನ್ನು ಪರಮೇಶ್ವರನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ

ಮೆಕ್ಡೊನಾಲ್ಡರವರ ರಾಜೀನಾಮೆ

ಬ್ರಿಟನ್ನಿನ ಪ್ರಧಾನಿ [illegible] ಮೆಕ್ಡೊನಾಲ್ಡರವರು ಕಣ್ಣಿನಿಂದ ಬಹಳ ತೊಂದರೆ ಪಡುತ್ತಿರುವುದರಿಂದ ಮುಂದೆ ಹೆಚ್ಚು ಕೆಲಸ ಮಾಡಲಾರರು. [illegible] ನ ಕೆಲಸಕ್ಕೆ ರಾಜೀನಾಮೆ ಕೊಡುವ ಉದ್ದೇಶವಿದೆಯೆಂದೂ ಇವರ ಸ್ಥಾನಕ್ಕೆ ಬಾಲ್ಡ್ವಿನ್ ರವರು ಬರುವರೆಂದು [illegible] ಪತ್ರಿಕೆಗಳಲ್ಲಿ ಪ್ರಕಟವಾಗಿದೆ [illegible] ವಾರ್ತೆಯಿಂದ ತಿಳಿಯಬರುತ್ತದೆ

ರಾಧಾಬಾಯಿ ದೇವಿಯವರ ಮರಣ

ಕೀರ್ತಿಶೇಷರಾದ ದಿವಾನ್ ಬಹದ್ದೂರ್ [illegible]ರಾಯರವರ ಧರ್ಮಪತ್ನಿ ಶ್ರೀಮತಿ ರಾಧಾದೇವಿಯವರು ಜ್ವರರೋಗ ಪೀಡಿತರಾಗಿದ್ದು ಕಳೆದ ಗುರುವಾರ ಪರಲೋಕಯಾತ್ರೆಯನ್ನು ಮಾಡಿದರು ಇವರಿಗೆ ೬೩ ವರ್ಷವಯಸ್ಸಾಗಿದ್ದಿತು ಇವರು ತಮ್ಮ ಪತಿಯವರ ವಾರ್ಷಿಕ ಸ್ಮರಣೋತ್ಸವ ದಿವಸ ಪತಿ ಸಾನ್ನಿಧ್ಯವನ್ನು ಹೊಂದಿದುದು ಜನರಿಗೆ ಆಶ್ಚರ್ಯವನ್ನುಂಟುಮಾಡುತ್ತದೆ ಇವರ ಶವಸಂಸ್ಕಾರವನ್ನು ಊರ ಜನರು ಬಹಳ ಭಕ್ತಿ ವೈಭವಗಳಿಂದ ನಡಿಸಿದರು

ಲಾರ್ಡ್ ಲಾಯಿಡ್‌ರವರ ಶಂಕೆ

ಭಾರತ ದೇಶಕ್ಕೆ ಸ್ವಾತಂತ್ರ್ಯವು ಕೊಡಲ್ಪಟ್ಟಲ್ಲಿ ಪ್ರಜೆಗಳು ದುಃಖಸಾಗರದಲ್ಲಿ ಮುಳಗಬೇಕಾಗುತ್ತದೆಂದೂ ವಿಶೇಷವಾಗಿ ಕೆಲ ದೇಶೀಯ ಸಂಸ್ಥಾನಾಧಿಪತಿಗಳ ನಡವಳಿಕೆಯು ಮತ್ತಷ್ಟು ಕಠಿಣವಾಗುತ್ತದೆಂದೂ ಅಹೋರಾತ್ರಿ ಭಾರತೀಯರ ಅಶ್ರೇಯಸ್ಸನ್ನೇ ಕೋರುತ್ತಿರುವ ಚರ್ಚಿಲ್‌ರವರ ಪಕ್ಷಕ್ಕೆ ಸೇರಿದ ಲಾಯಿಡ್‌ರವರು ಶಂಕಿಸುತ್ತಾರೆ ಇಂತಹ ಹಿತ ಶತ್ರುಗಳ ಸಂಖ್ಯೆಯು ಹೆಚ್ಚಾಗಿರುವಾಗ್ಗೆ ಭಾರತೀಯರ ಇಷ್ಟಾರ್ಥಸಿದ್ಧಿಯು ಎಷ್ಟರಮಟ್ಟಿಗಾಗಬಹುದು !

ವಾಟ್ಸನ್‌ರವರನ್ನು ಕೊಲ್ಲಲೆತ್ನಿಸಿದವರಿಗೆ ಶಿಕ್ಷೆ

ಸರ್ ವಾಟ್ಸನ್‌ರವರನ್ನು ಕೊಲ್ಲಲು ಪ್ರಯತ್ನಿಸಿದ್ದ 6 ಮಂದಿಗಳ ಪೈಕಿ ರಾಯಲ್ಲಿ ಸುನೀಲು ಚಟರ್ಜಿಗೆ ದ್ವೀಪಾಂತರವಾಸ ಶಿಕ್ಷೆಯೂ ಮನೋದರಂಜನ ಬೋಸನಿಗೆ 10 ವರ್ಷ, ಅಮರಚಂದ್ರ ಘೋಸ್‌ನಿಗೆ 4 ವರ್ಷ ಕಠಿಣ ಕಾರಾಗೃಹವಾಸ ಶಿಕ್ಷೆಯೂ ಅಲಿಪುರದ ಪ್ರತ್ಯೇಕ ಜಡ್ಜಿ ಟಿ ಎಚ್ ಎಲ್ಲಿಸ್‌ರವರಿಂದ ವಿಧಿಸಲ್ಪಟ್ಟು ಅವನಿದತ್ತ, ಪರ್ಣಕುಮಾರದಾಸ, ಮಿನಾಕ್ಷಿ ಭಕ್ಷಿ ಇವರುಗಳು ಬಿಡಲ್ಪಟ್ಟರು ಅಪರಾಧಿಗಳು ಶಿಕ್ಷೆಯನ್ನು ಬಹಳ ಉಲ್ಲಾಸದಿಂದ ಅಂಗೀಕರಿಸಿದರು

ಸೌ|| ಕಮಲಾ ನೆಹರುಯವರ ಅಸ್ವಸ್ಥತೆ

ಪಂಡಿತ ಜವಹಾರಲಾಲರ ಪತ್ನಿ ಸೌ|| ಕಮಲ ನೆಹರುಯವರಿಗೆ ಹೃದ್ರೋಗವು ಪ್ರಬಲವಾಗಿರುವುದರಿಂದ ಕಳೆದ ಮಂಗಳವಾರ ಅವರು ಬಹಳವಾಗಿ ಬಾಧೆಪಟ್ಟರು ಅದರಮೇಲೆ ಡಾಕ್ಟರುಗಳಾದ ಅಟಲ್, ಬಿ ಸಿ ರಾಯಿ, ಜೋರಜಬಿಹಾರಿ ಇವರುಗಳು ಆಕೆಯವರನ್ನು ಕಲಕತ್ತಾಕ್ಕೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಬೇಕೆಂದು ಅಭಿಪ್ರಾಯಪಟ್ಟುದರ ಮೇಲೆ ಆಕೆಯವರು ತಮ್ಮ ತಾಯಿ ಮತ್ತು ಡಾಕ್ಟರ್ ಅಟಲ್‌ರವರೊಡನೆ ಕಲಕತ್ತಾಕ್ಕೆ ಹೋಗಿರುವರು ಕಲಕತ್ತಾದಲ್ಲೂ ಹೃದ್ರೋಗವನ್ನು ಪರೀಕ್ಷಿಸಲು ತಕ್ಕ ಸಲಕರಣೆಗಳಿಲ್ಲವಂತೆ

ತುಫಾನಿನಿಂದ ಪಟ್ಟಣ ನಾಶವಾಯಿತು

ದಕ್ಷಿಣ ಅಮೇರಿಕೆಯ ಪಶ್ಚಿಮಕ್ಕೆ ಪೆಸಿಫಿಕ್ ಸಾಗರದಲ್ಲಿರುವ ಸಾಂತಕ್ರೂಜ್ ದ್ವೀಪದಲ್ಲಿ ತುಫಾನೆದ್ದು 2500 ಜನರು ಹತರಾದರು ಮತ್ತು ಪಟ್ಟಣವು ನಾಶವಾಗಿ ವಾಸಕ್ಕೆ ಯೋಗ್ಯವಾಗಿಲ್ಲದಿರುವುದರಿಂದ ಪುನಃ ನಿರ್ಮಿಸಲ್ಪಡಬೇಕಾಗಿದೆ ಉಳಿದಿರುವ ಜನರ ಆರೋಗ್ಯರಕ್ಷಣೆಗಾಗಿ ಸತ್ತವರನ್ನು ಸುಡಬೇಕಾಗಿಬಂದಿತು ಬಮೈಕಾದಿಂದ 1?? ಮೈಲುಗಳ ದೂರದಲ್ಲಿರುವ ಬ್ರಿಟಿಷರ ಲಿಟ್ಲ್ ಕೇಮನ್ ದ್ವೀಪವು ಬಿರುಗಾಳಿಯಿಂದ ನಾಶವಾಗಿ 60 ಮಂದಿ ಸತ್ತರು ಅನೇಕರು ಅಪಾಯವನ್ನು ಹೊಂದಿರುವರು ಈ ಬಿರುಗಾಳಿಯಿಂದಲೂ ತುಫಾನಿನಿಂದಲೂ ಕಬ್ಬಿನ ಬೆಳೆಯು ಶೇಕಡ 10 ರಂತೆ ನಾಶವಾಗಿ 50 ಲಕ್ಷ ಡಾಲರ್ ಹಣವು ನಷ್ಟವಾಗಿರುತ್ತದೆ

ಐರ್ಲೆಂಡು ರೈತರಿಗೆ ಡಿವೆಲೆರಾಯವರ ವಾಗ್ದಾನ

ಭೂಗಂದಾಯವನ್ನು ಐರ್ಲೆಂಡು ಕೊಡುವುದು ನ್ಯಾಯವಲ್ಲವೆಂದೂ, ಈ ವಿಚಾರವನ್ನು ನಿರ್ಣಯಿಸಲಿಕ್ಕಾಗಿ ಒಂದು ನಿಷ್ಪಕ್ಷಪಾತವಾದ ಕಮಿಟಿಯೇರ್ಪಡಿಸಬೇಕೆಂದೂ ಡಿವೆಲೆರಾಯವರು ಹಟಹಿಡಿದು ಹೋರಾಡುತ್ತಿರುವುದರಮೇಲೆ ಬ್ರಿಟಿಷಿನವರು ಅಗ್ರಸಗೊಂಡು ಐರ್ಲೆಂಡಿನಿಂದ ತಮ್ಮಲ್ಲಿಗೆ ಬರುವ ಪದಾರ್ಥಗಳ ಮೇಲೆ ಪ್ರತ್ಯೇಕ ಸುಂಕವನ್ನು ವಿಧಿಸಿರುತ್ತಾರೆ ಇದರಿಂದ ಐರ್ಲೆಂಡಿನ ರೈತರುಗಳಿಗೆ ಬಹಳ ಕಷ್ಟಪ್ರಾಪ್ತವಾದುದರಮೇಲೆ ಕಂದಾಯವನ್ನು ಕೊಡಲಾಗುವುದಿಲ್ಲವೆಂದು ರೈತರು ಮೊರೆ ಇಟ್ಟುಕೊಳ್ಳಲಾಗಿ, ಡಿವೆಲೆರಾಯವರು ಕನಿಕರಪಟ್ಟು ರೈತರು ಕೊಡಬೇಕಾದ ಕಂದಾಯದಲ್ಲಿ ಅರ್ಧಭಾಗವನ್ನು ಬಿಟ್ಟುಕೊಡುವುದಾಗಿ ವಾಗ್ದಾನ ಮಾಡಿದರು ಇದರಿಂದ ರೈತರುಗಳಿಗೆ ಉಪಶಾಂತಿಯಾಗಿ ಸಂತೋಷವುಂಟಾಗಿರುವುದು

ಚಂಡಾಲರಾರು ?

" ನಿನ್ನ ಜಾತಿಯವರು ದೇವಾಲಯದೊಳಕ್ಕೆ ಬರಲು ಆಗಮ ಸೂತ್ರಗಳು ಅಂಗೀಕರಿಸುವುದಿಲ್ಲವೆಂಬ ವಿಷಯವನ್ನು ಖಂಡಿಸಿ ಪೂರ್ವ ಪಕ್ಷವನ್ನು ಮಾಡಲು ಇಲ್ಲಿಯ ಸಾಧಾರಣ ಅಸ್ಪೃಶ್ಯ ಸಮಾಜದ ಪರವಾಗಿ ನಾನು ವಾದಿಸುವೆನು ಆಗಿರುವ ನಿಮ್ಮ ಜಾತಿಯವರು ನಮ್ಮ [illegible] ಗಳಲ್ಲಿ [illegible] ಕಂದಾಚಾರವೆಂದೂ, ನಿಮ್ಮ [illegible] ಸ್ಪರ್ಶ [illegible] [illegible] ಒಂದು [illegible] [illegible] ಸರಕಾರದವರು [illegible]

[illegible] ಸಮಾಜದ [illegible] [illegible] ಬಾಲಕೃಷ್ಣ [illegible] ಬಿ ಎ ಬಿ ಎಲ್, ರವರು [illegible] ಜಾತಿಯವರ [illegible] ಮುಖಾಂತರ ತಿಳಿಸಿರುತ್ತಾರೆ

ಬೊಂಬಾಯಿಯಲ್ಲಿ ಬೆಂಕಿಯ [illegible]

ಬೊಂಬಾಯಿ ಪಟ್ಟಣದ ಕಾಲ್ಬಾದೇವಿ ರೋಡಿನಲ್ಲಿ ಎರಡಂತಸ್ತಿನ ಒಂದು ಮನೆಯ ಕೆಳಗಿನ ಅಂಗಡಿಗೆ ಬೆಂಕಿಬಿದ್ದು ಮನೆಯು ಹೊತ್ತಿಕೊಂಡಿತು ಒಳಗಿದ್ದ ಜನರು ಹೊಗೆಯನ್ನು ಕಂಡಕೂಡಲೆ ಹೊರಕ್ಕೆ ಓಡಿಹೋದರು ಆದರೆ ಒಬ್ಬ ಹೆಂಗುಸು ಮಾತ್ರ ಪಾರಾಗಲಾರದೆ ನಾಲ್ಕು ದಿಕ್ಕಿನಿಂದಲೂ ಜ್ವಾಲೆಯು ವ್ಯಾಪಿಸಿಕೊಂಡು ಒಂದುದರ ಮೇಲೆ ತಪ್ಪಿಸಿಕೊಂಡು ಹೋಗಲೆಡೆಯಿಲ್ಲದೆ ಜ್ವಾಲೆಗೆ ಸಿಕ್ಕಿ ಮೃತಳಾದಳು 7 ಫೈರು ಇಂಜಿನ್ನುಗಳು ಬಂದು ಅರ್ಧ ಘಂಟೆಯವರೆಗೆ ನೀರನ್ನು ಸುಯಿದುದರ ಮೇಲೆ ಜ್ವಾಲೆಯು ಶಮನವಾಯಿತು ಮನೆಯ ಕೆಲಭಾಗವು ಸುಟ್ಟುಹೋಯಿತು ಇದರಿಂದ ??,000 ರೂ ವರೆಗೆ ನಷ್ಟವಾಗಿರಬೇಕೆಂದೂಹಿಸಲ್ಪಟ್ಟಿದೆ ಬೆಂಕಿಯನ್ನಾರಿಸುವ ಯಂತ್ರದ ಕೆಲಸಗಾರರಲ್ಲೊಬ್ಬನು ಪ್ರಮಾದದಿಂದ ಸತ್ತುಹೋದನು ಮನೆಯಲ್ಲಿದ್ದವರನ್ನು ಸಾಗಿಸಲಿಕ್ಕೆ ಬರುತ್ತಿದ್ದ ಬಂಡಿಯು ನೀರನ್ನಾರಿಸುವ ಯಂತ್ರಕ್ಕೆ ತಾಕಿ ಒಡಿದುದರಿಂದ ಒಬ್ಬ ಯಂತ್ರದವನು ಸತ್ತನು ಒಟ್ಟು 3 ಮರಣಗಳಾದವು

ಜಪಾನಿನಲ್ಲಿ ಜಲಪ್ರಳಯ

ಜಪಾನ್ ದೇಶದ ರಾಜಧಾನಿಯಾದ ಟೋಕಿಯೋ ಪಟ್ಟಣದಲ್ಲಿ ವಿಪರೀತ ಮಳೆಸುರಿದು ಸಮುದ್ರವು ಉಕ್ಕಿ 100 ಮಂದಿ ಸತ್ತರು ಮತ್ತು 10 000 ಮನೆಗಳು ನಷ್ಟವಾದುವು ಅನೇಕ ಕಡೆ ಬೆಟ್ಟಗಳ ಮೇಲಿಂದ ಪಾಷಾಣಗಳು ಜಾರಿಬಿದ್ದಿರುತ್ತವೆ ಸಮುದ್ರ ತೀರದಲ್ಲಿರುವ ಎಲ್ಲ ಗ್ರಾಮಗಳಲ್ಲೂ ಬಹಳ ನಷ್ಟ ಸಂಭವಿಸಿರುವುದರಿಂದ ಜನರು ಭಯಗ್ರಸ್ತರಾಗಿರುತ್ತಾರೆ ಈ ಪ್ರಳಯವು ಟೋಕಿಯೋದಲ್ಲಿ ಮಾತ್ರವಲ್ಲದೆ ಸಮುದ್ರ ತೀರದಲ್ಲೆಲ್ಲ ಸಂಭವಿಸಿರುವುದು ತಂತಿಯ ಕಂಭಗಳು ಬಿದ್ದುಹೋಗಿರುತ್ತವೆ 2000 ಟನ್ನು ತೂಕವಿರುವ ಸ್ಟೀಮರು ತುಫಾನಿನ ಹೊಡತದಿಂದ ಒಂದು ಬಂಡೆಗೆ ತಾಕಲಾಗಿ ಅದರೊಳಗಿದ್ದ 30 ಮಂದಿ ನಾವಿಕರಲ್ಲಿ 21 ಮಂದಿ ಮೃತರಾದರು, ಉಳಿದ 9 ಮಂದಿ ಸಂರಕ್ಷಿಸಲ್ಪಟ್ಟರು ಟೋಕಿಯೊ ಪಟ್ಟಣಕ್ಕೆ ಸೇರಿದ ಒಂದು ಗ್ರಾಮವು ಬೆಂಕಿಯಿಂದ ಹೊತ್ತಿಕೊಳ್ಳಲಾಗಿ ಅದರಲ್ಲಿದ್ದ 800 ಮನೆಗಳು ನಾಶವಾದುವು ಟೋಕಿಯೊದಲ್ಲಿ ಜಲಪ್ರಳಯವಾಗಿರಲಿಲ್ಲವೆಂದೂ, ಇಂತಹ ಪ್ರಳಯವು ಜಪಾನಿನಲ್ಲೇ 1917 ರಿಂದೀಚೆಗೆ ಆಗಿರಲಿಲ್ಲವೆಂದೂ, ಯೊಕೊಹಾಮಕ್ಕೆ ಬಹಳ ನಷ್ಟ ಸಂಭವಿಸಿರುವುದೆಂದೂ 30,000 ಜನರು ವಾಸಕ್ಕೆ ಮನೆಯಿಲ್ಲದೆ ಕಷ್ಟಪಡುತ್ತಿರುವರೆಂದೂ, ಒಟ್ಟಿನಲ್ಲಿ ದೇಶಕ್ಕೆ ವಿಶೇಷ ನಷ್ಟವಾಗಿರಬೇಕೆಂದೂ ತಿಳಿಯಬರುತ್ತದೆ

ಕೈ|| ದೊರಸ್ವಾಮಿ ಅಯ್ಯರ್‌ರವರ ಪ್ರಶಂಸೆ

ಮೈಸೂರು ಹೈಕೋರ್ಟ್ ಪ್ರಧಾನ ನ್ಯಾಯಮೂರ್ತಿ ರಾಜಧರ್ಮಪ್ರವೀಣ ಮ|| ಸಿ ಎಸ್ ದೊರಸ್ವಾಮಿ ಅಯ್ಯರ್ ಬಿ ಎ ಬಿ ಎಲ್, ರವರು 1932ನೆಯ ನವೆಂಬರ್ ತಾ|| 12 ನೇ ಶನಿವಾರ ಸಾಯಂಕಾಲ ಅಕಸ್ಮಾತ ವಿಧಿವಶರಾದುದರಿಂದುಂಟಾದ ನಷ್ಟವು ಪ್ರಮುಖವಾದ ಕಡತದಲ್ಲಿ ಈ ಪ್ರಕಾರವಾಗಿ ಉಲ್ಲೇಖಿಸಲ್ಪಡಬೇಕೆಂದು ಶ್ರೀಮನ್ಮಹಾರಾಜರವರ ಅಭಿಮತವಾಗಿರುತ್ತದೆ

ಕೈ|| ಮ|| ದೊರಸ್ವಾಮಿ ಅಯ್ಯರ್‌ರವರು ಮೈಸೂರು ಚೀಫ್ ಕೋರ್ಟು ಅಡ್ವೊಕೇಟರಾಗಿದ್ದು ಕೆಲ ವರ್ಷಗಳಕಾಲ ವಕೀಲಿಯನ್ನು ಸಫಲವಾಗಿ ನಡೆಸಿದುದರಮೇಲೆ 1910 ನೆಯ ಫೆಬ್ರುವರಿಯಲ್ಲಿ ಬೆಂಗಳೂರು ಡಿವಿಜನ್ ಪಬ್ಲಿಕ್ ಪ್ರಾಸಿಕ್ಯೂಟರಾಗಿಯೂ, 1 ವರ್ಷಕಾಲಾನಂತರ ಗವರ್ನಮೆಂಟ್ ಅಡ್ವೊಕೇಟರಾಗಿಯೂ ನಿಯಮಿಸಲ್ಪಟ್ಟು ಆ ಉದ್ಯೋಗವನ್ನು 9 ವರ್ಷಗಳವರೆಗೆ ಬಹಳ ಸಮರ್ಥತೆಯಿಂದ ನಿರ್ವಹಿಸಿದರು 1919 ನೆಯ ಜನವರಿಯಲ್ಲಿ ಚೀಫ್ ಕೋರ್ಟಿನಲ್ಲಿ 1 ವರ್ಷದವರೆಗೆ ಆಕ್ಟಿಂಗ್ ಜಡ್ಜಿಯರಾಗಿದ್ದು 1930 ನೆಯ ಜುಲೈ ತಿಂಗಳಲ್ಲಿ ಚೀಫ್ ಕೋರ್ಟಿನ ಜಡ್ಜಿಯರಾಗಿ ನಿಯಮಿಸಲ್ಪಟ್ಟು 2 ವರ್ಷಗಳ ಅನಂತರ ಚೀಫ್ ಜಡ್ಜಿಯವರಾಗಿ ಮಾಡಲ್ಪಟ್ಟರು ಇವರು ತಮ್ಮ ನ್ಯಾಯ ವ್ಯವಹಾರಗಳಲ್ಲಿ ಅಪಾರವಾದ ಬುದ್ಧಿಯನ್ನೂ ನ್ಯಾಯಾನುಸರಣಾ ನೈಪುಣ್ಯವನ್ನೂ ಉದ್ಯೋಗ ನಿರ್ವಹಣಶಕ್ತಿಯನ್ನೂ ವ್ಯಕ್ತಪಡಿಸಿದರು [illegible] ಗುಣವು ಜನಾಕರ್ಷಣೀಯವಾಗಿದ್ದಿತು ಇವರು ನ್ಯಾಯಶಾಖೆಯಲ್ಲಿ ಮಾಡಿದ ಉತ್ಕೃಷ್ಟ ಸೇವೆಗೆ ಮೆಚ್ಚಿ ಶ್ರೀಮನ್ಮಹಾರಾಜರವರು ಇವರಿಗೆ 1928ನೆಯ ದಸರಾ ದರ್ಬಾರಿನಲ್ಲಿ " ರಾಜಧರ್ಮಪ್ರವೀಣ " ಎಂಬ ಪ್ರಶಸ್ತಿಯನ್ನು ದಯಪಾಲಿಸಿದರು ಶ್ರೀ ಮನ್ಮಹಾರಾಜರವರು ತಮ್ಮ ಸಮಾನುಭೂತಿಯನ್ನು ಕೈ|| ದೊರಸ್ವಾಮಿ ಅಯ್ಯರ್‌ರವರ ವಿಯೋಗದುಃಖಕ್ಕೆ ಪಾತ್ರರಾದ ಅವರ ಕುಟುಂಬಕ್ಕೆ ತಿಳುಹಲಿಚ್ಛಿಸುತ್ತಾರೆ

[illegible] ಸ್ವಾಗತಗಳು

[illegible] ತಾ|| 13 ರಲ್ಲಿ [illegible] [illegible] ನಿಮಿತ್ತವಾಗಿ [illegible]

ರಾಜಧಾನಿಯ [illegible] ಸಪ್ತತಿಯ [illegible] ಸನ್ಮಾನಿಸಿದ [illegible] ಯ ಕೆಳಗಿರುವ ಅಂಜನೇಯ ದೇವಸ್ಥಾನದ ಉದ್ಯಾನದಲ್ಲಿ ಬಹಳ ಔದಾರ್ಯದಿಂದಲೂ ಉತ್ಸಾಹದಿಂದಲೂ ದಿವ್ಯಭಕ್ಷ್ಯ ಭೋಜ್ಯಾದಿಗಳಿಂದಲೂ ನೆರವೇರಿಸಿದರು

ರಾಜಧಾನಿಯ ದೇವರಾಜ ಮೊಹಲ್ಲ ಮ್ಯುನಿಸಿಪಲ್ ಕೌನ್ಸಿಲರುಗಳಲ್ಲಿ ಖಾಲಿಯಾಗಿರುವ ಒಂದು ಸ್ಥಾನಕ್ಕೆ [illegible] ಮ|| ಗಳಾದ ಚಿಕ್ಕವೀರಣ್ಣನವರ ರೈಸ್ ಮಿಲ್ಲಿನ ಎಂ ಸಿ ತಮ್ಮಯ್ಯನವರೂ, ರಾಜರಾಜೇಶ್ವರೀ ಹಾಲಿನ [illegible] [illegible] ದ ಮ|| [illegible] ರಾಮಚಂದ್ರರಾಯರೂ ಉಮೇದವಾರರುಗಳಾಗಿ ನಿಂತಿರುತ್ತಾರೆ

ಕಳೆದ ಶನಿವಾರ ರಾಜಧಾನಿಯ ಕುಂಚಿಟಿಗರ ಸಂಘದ ನಿಲಯದಲ್ಲಿ ಕೈ|| ರಾವ್‌ಬಹದ್ದೂರ್ ಧರ್ಮಪ್ರಕಾಶ ಡಿ ಬನುಮಯ್ಯನವರ, ಧರ್ಮಪರಾಯಣೆ ಶ್ರೀಮತಿ ಅಲಮ್ಮನವರ ಮತ್ತು ನಂಜನಗೂಡಿನ ಶ್ರೀಮತಿ ತಿಮ್ಮಮ್ಮನವರ ಭಾವಚಿತ್ರಗಳ ಅನಾವರಣಮಹೋತ್ಸವವು ಸೆಟ್ಲ್‌ಮೆಂಟ್ ಕಮಿಷನರ್ ಮ|| ಸಿ ಎಸ್ ಕುಪ್ಪುಸ್ವಾಮಯ್ಯಂಗಾರ್ಯರಿಂದ ನಡಸಲ್ಪಟ್ಟಿತು

ಯಡತೊರೆಯ ಸಾಹುಕಾರ್ ಮ|| ಬಳೆ ಸಿದ್ಧಲಿಂಗ ಶೆಟ್ಟರು ಈಚೆ ವಾರದಲ್ಲಿ ಅರಮನೆಯೊಳಗೆ ಶ್ರೀಮನ್ಮಹಾರಾಜರವರ ದರ್ಶನಕ್ಕೆ ಅಪ್ಪಣೆಯನ್ನು ಪಡೆದು ಹೋಗಿದ್ದು ಹೊಸ ಯಡತೊರೆ ಪಟ್ಟಣದ ಆರಂಭೋತ್ಸವವನ್ನು ಮಹಾಸ್ವಾಮಿಯವರ ಅಮೃತ ಹಸ್ತದಿಂದ ನೆರವೇರಿಸಬೇಕೆಂದು ಪುರನಿವಾಸಿಗಳ ಪರವಾಗಿ ಬೇಡಿಕೊಂಡುದರ ಮೇಲೆ ಬರುವ ಡಿಸಂಬರ್ ತಿಂಗಳಲ್ಲಿ ನೆರವೇರಿಸಲು ಪ್ರಭುಗಳು ಸಮ್ಮತಿಸಿರುತ್ತಾರೆಂದು ಕೇಳುತ್ತೇವೆ

ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನವನ್ನು ಈ ವರ್ಷ ಕೊಡಗು ಪ್ರಾಂತದವರು ತಮ್ಮ ರಾಜಧಾನಿಯಾದ ಮಡಕೇರಿಯಲ್ಲಿ ನಡಯಿಸಬೇಕೆಂದು ಸಂಕಲ್ಪಿಸಿ ಅದಕ್ಕಾಗಿ ಒಂದು ಸ್ವಾಗತ ಮಂಡಲಿಯನ್ನು ನಿಯಮಿಸಿಕೊಂಡು ಕನ್ನಡ ಪಂಡಿತರುಗಳ ಮತ್ತು ಅಭಿಮಾನಿಗಳ ಸಹಾಯಸಹಾನುಭೂತಿಗಳನ್ನು ಕೋರಿರುತ್ತಾರೆ ಈ ನಮ್ಮ ನೆರೆನಾಡಿನ ಕನ್ನಡ ಭಾಷಾಭಿಮಾನಿಗಳ ಪ್ರಯತ್ನವು ಯಶಸ್ವಿಯಾಗಿ ನಡೆದು ಅವರುಗಳು ಕೃತಕೃತ್ಯರಾಗುವಂತೆ ಸಾಹಿತ್ಯಸಮ್ಮೇಳನಾಭಿಮಾನಿಗಳು ಸಹಕರಿಸುವರೆಂದು ನಿರೀಕ್ಷಿಸುತ್ತೇವೆ.

ರಾಜಧಾನಿಯ ಲಾಯರುಗಳ ಸಂಘದವರು ಮ|| ಕೆ ಶಂಕರನಾರಾಯಣರಾಯರನ್ನು ಆದರಮಾಡಿಕೊಂಡು ನೆನ್ನೆಯ ದಿವಸ ಶ್ರೀ ಚಾಮುಂಡೇಶ್ವರೀ ಬೆಟ್ಟದ ಮೇಲೆ ದಿವ್ಯವಾದ ಔತಣದಿಂದಲೂ ಸಂಗೀತ ಶ್ರವಣದಿಂದಲೂ ಸತ್ಕರಿಸಿ ಅವರಿಗೆ ಮೈಸೂರು ಚೀಫ್ ಕೋರ್ಟು ಜಡ್ಜಿಯ ಪದವಿಯು ಲಭ್ಯವಾದುದರಿಂದ ತಮಗುಂಟಾದ ಆನಂದಾತಿಶಯವನ್ನು ಪ್ರದರ್ಶಿಸಿ ಅವರ ಗುಣಪ್ರಶಂಸೆ ಮಾಡಿದರು ಅತಿಥಿಗಳಾದ ಮ|| ಶಂಕರನಾರಾಯಣರಾಯರು ತಮಗಾದ ಸತ್ಕಾರಕ್ಕಾಗಿ ಸಮಯೋಚಿತವಾದ ಭಾಷಣದಿಂದ ಲಾಯರು ಸಂಘದವರನ್ನು ವಂದಿಸಿದರು

ಅಖಿಲಭಾರತ ತತ್ತ್ವವಿಚಾರ ಮಹಾಸಭೆಯ 8 ನೆಯ ಅಧಿವೇಶನವು ಬರುವ ಡಿಸೆಂಬರು ತಾ|| 19 ನೆಯ ಸೋಮವಾರ ರಾಜಧಾನಿಯ ಜಗನ್ಮೋಹನ ಪ್ರಾಸಾದದ ಸಭಾಂಗಣದೊಳಗೆ ಶ್ರೀಮನ್ಮಹಾರಾಜರವರಿಂದ ಆರಂಭಿಸಲ್ಪಟ್ಟು 3 ದಿವಸಗಳವರೆಗೆ ನಡೆಯುವುದು ಈ ಮಹಾಸಭೆಗೆ ಭಾರತ ದೇಶದ ಎಲ್ಲ ಕಡೆಯಿಂದಲೂ ಪ್ರತಿನಿಧಿಗಳೂ ಪ್ರೇಕ್ಷಕರೂ ಬರುವರು. ಇವರ ಸ್ವಾಗತಕ್ಕಾಗಿ ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರಾದ ಡಾ|| ಮೆಟ್ಕಾಫ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಂಘವೇರ್ಪಟ್ಟಿರುತ್ತದೆ ಇದಕ್ಕೆ ಮ|| ಎ ಸುಬ್ರಹ್ಮಣ್ಯಯ್ಯರ್‌ರವರು ಮತ್ತು ಪ್ರೊಫೆಸರ್ ಮ|| ಎ ಆರ್ ವಾಡಿಯಾರವರು ಸಕ್ರೆಟರಿಗಳಾಗಿರುತ್ತಾರೆ.

ರಾಜಧಾನಿಯ ರೈಲ್ವೆ ವರ್ಕ್‌ಷಾಪಿನಲ್ಲಿ ಕೆಲಸ ಮಾಡುತ್ತಿದ್ದ ಮಧ್ಯ ವಯಸ್ಸಿನ ಒಬ್ಬ ಹಿಂದು ಕಳೆದವಾರ ದೊಡ್ಡಕೆರೆಯೇರಿಯ ಮೇಲಿರುವ ಕಲ್ಲಿನ ಮಂಟಪದಲ್ಲಿ ಸತ್ತು ಬಿದ್ದಿದ್ದನು ಈ ಸಂಗತಿಯನ್ನು ಪೋಲೀಸಿನವರು ತಿಳಿದು ಸ್ಥಳಕ್ಕೆ ಹೋಗಿ ಶವದ ಮುಖ ಮೊದಲಾದ ಭಾಗಗಳು ಮುಚ್ಚಲ್ಪಟ್ಟಿದ್ದುದನ್ನು ನೋಡಿ ಅನುಮಾನಪಟ್ಟುಕೊಂಡು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಶವವನ್ನು [illegible]ಗಿಸಿದರು ಅಲ್ಲಿ ಡಾಕ್ಟರು ಪರೀಕ್ಷಿಸಿ, ವಿಷಪ್ರಯೋಗದಿಂದ ಮರಣವಾಗಿರುವುದಾಗಿ ಅಭಿಪ್ರಾಯಪಟ್ಟರುವರೆಂದೂ, ಪೋಲೀಸಿನವರು ವಿಚಾರಿಸಿದುದರಲ್ಲಿ ಸತ್ತವನಿಗೆ ಜೇಬಿನಲ್ಲಿ ಬಾಬತು 2000 ರೂ ಬಂದಿದ್ದುದನ್ನು ಅಪಹರಿಸುವುದಕ್ಕಾಗಿ ಅವನ ಜತೆಗಾರರಲ್ಲಾರೊ ಅವನಿಗೆ ವಿಷಪ್ರಯೋಗ ಮಾಡಿ ಅವನು ಸತ್ತುಹೋದಮೇಲೆ ಅವನ ಶವವನ್ನು ಕೆರೆಯೇರಿಯ ಮೇಲಿನ ಮಂಟಪಕ್ಕೆ ತಂದು ಮುಖಮುಚ್ಚಿ ಮಲಗಿಸಿ [illegible]ವಾಗಿ ತಿಳಿದು ಬಂದಿರುತ್ತದೆಂದೂ, ಪೋಲೀಸರು ಅನುಮಾನದ ಮೇಲೆ ಕೆಲವನ್ನು ಸೆರೆಹಿಡಿದಿರುವರೆಂದೂ ಕೇಳುತ್ತೇವೆ.

ಅಸ್ಪೃಶ್ಯರ ವಿಚಾರದಲ್ಲಿ ಸನಾತನಧರ್ಮಿಗಳ ಸಂಕಲ್ಪ

ಶತಮಾನದಿಂದ ಹಿಂದೂಮತವನ್ನು ಪಾಲಿಸಿಕೊಂಡು ಬಂದ ಸನಾತನ ಧರ್ಮೀಯರಾದ್ದರಿಂದ ಪಂಚಮರಿಗೂ ನಮ್ಮ ದೇವತೆಗಳನ್ನು ಪೂಜಿಸುವುದನ್ನು ಸ್ವತಃ ಕಂಡರೂ ಇವರ ಗಡ್ಡವಾಗಿ ಉಳಿದಿರುವುದನ್ನು ನೋಡುತ್ತಿರುವ ಪಂಚಮರಿಗೆ ಈಗ ನಮ್ಮನ್ನು ಬಿಟ್ಟು ಹೋಗಲು ಸಕಾರಣವಾದ ಕಾರಣವೇನೂ ಇರುವುದಿಲ್ಲ. ಆದರೆ ಈಗಿನ ದಿವಸಗಳಲ್ಲಿ ಕೆಲವರು ಅವರನ್ನು ಪ್ರಚೋದಿಸಿ ಅವರ ಮನಸ್ಸನ್ನು ಕೆಡಿಸುತ್ತಿರುವರು. ಪಂಚಮರಲ್ಲಿ ಅಸಮಾಧಾನವನ್ನು ಹುಟ್ಟಿಸಿ ಅವರನ್ನು ತಮ್ಮ ಕಡೆಗೆ ಸೆಳೆಯುವ ಸ್ವಾರ್ಥಿಗಳ ಪ್ರಯತ್ನವು ಹೆಚ್ಚಾಗಿರುವುದರಿಂದ ಈ ಉದ್ದೇಶವು ಉಂಟಾಗಿರುತ್ತದೆ. ಇದು ರಾಜನೀತಿಯೊಳಗೆ ಭೇದೋಪಾಯವು ಅದನ್ನು ಅವಲಂಬಿಸಿರುತ್ತಾರೆ ಅವರನ್ನು ನಾವು ಆಕ್ಷೇಪಿಸಲು ಕಾರಣವಿಲ್ಲ. ನಾವು ಮಾತ್ರ ಜಾಗರೂಕರಾಗಿರಬೇಕು. ಸನಾತನ ಧರ್ಮಿಗಳು ದ್ವೇಷಭಾವದಿಂದ ಪಂಚಮರನ್ನು ದೂರವಾಗಿಟ್ಟಿರುವುದು ನ್ಯಾಯವಲ್ಲವೆಂದು ಮಧ್ಯಸ್ಥಗಾರರು ಹೇಳಬಹುದು. ಪಂಚಮಾದಿಗಳು ನಮ್ಮ ಮತದವರೇ. ಬ್ರಾಹ್ಮಣ ಸ್ತ್ರೀಯಲ್ಲಿ ಶೂದ್ರನಿಗೆ ಹುಟ್ಟಿದವರು ಚಂಡಾಲರೆಂದು ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. ಪ್ರತಿಲೋಮರು ಸಂಕರಜಾತಿಗಳೊಂದಿಗೆ ಕೆಡೇ ಜಾತಿಯವರು. ಇವರು ಅವರನ್ನು ಈ ಚರಿತ್ರೆಯಿಂದಲೂ, ಇವರು ಸ್ಪೃಶ್ಯರೆಂದು ಜಾತಿಯವರೊಡನೆ ಅವರನ್ನು ಸ್ಪರ್ಶಿಸಿದರೆ, ಸ್ನಾನಮಾಡಿ ಹೊಸದಾಗಿ ಯಜ್ಞೋಪವೀತವನ್ನು ಧರಿಸಿಕೊಂಡು ಗಾಯತ್ರೀ ಜಪಾದಿಗಳನ್ನು ಮಾಡಬೇಕೆಂದು ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. ಮನು ॥ ಅ॥ ೧೦ ॥ "ಶೂದ್ರಾದಾಯೋಗವಃ ಕ್ಷತ್ತಾ ಚಂಡಾಲಶ್ಚಾಧಮೋ ನೃಣಾಂ ಚಂಡಾಲಶ್ವಪಚಾನಾಂತು ಬಹಿರ್ಗ್ರಾಮಾತ್ ಪ್ರತಿಶ್ರಯಃ" ಅವರ ಪ್ರತಿಶ್ರಯ ವಾಸಸ್ಥಾನವು ಊರಿನ ಹೊರಗೆ ಇರಬೇಕು. ಇತ್ಯಾದಿ ಧರ್ಮಶಾಸ್ತ್ರಗಳು ಹೇಳುವುದಾಗಿರುತ್ತವೆ.

ನಮಗೆ ಅತ್ಯಂತ ಪ್ರಿಯರಾದ ತಾಯಿ ಹೆಂಡತಿ ಮೊದಲಾದವರು ಬಹಿಷ್ಠೆಯರಾದಾಗ್ಗೆ ಶಾಸ್ತ್ರಬದ್ಧರಾದವರು ಅವರನ್ನು ದೂರವಾಗಿಡುವರು. ಮರಣದಿಂದುಂಟಾಗುವ ಆಶೌಚಾದಿ ಸಮಯದಲ್ಲಿ ತಮ್ಮ ಸಮೀಪ ಬಂಧುಗಳನ್ನಾದರೂ ಮುಟ್ಟಕೂಡದು. ಒಂದುವೇಳೆ ಮುಟ್ಟಿದಲ್ಲಿ ಸ್ನಾನಾದಿಗಳನ್ನು ಮಾಡಬೇಕಾದುದು ಶಾಸ್ತ್ರರೀತಿಯಾಗಿ ಬ್ರಾಹ್ಮಣಾದಿಗಳ ಆಚರಣೆಯಾಗಿರುತ್ತದೆ. ಯಾವ ಶಾಸ್ತ್ರಾಧಾರದ ಮೇಲೆ ಹಿಂದುಗಳು ದಾನಧರ್ಮವನ್ನು ಅನುಭವಿಸುತ್ತಿರುವರಲ್ಲಿ ಯಾವ ಶಾಸ್ತ್ರದ ಬ್ರಾಹ್ಮಣನನ್ನು ಅಂಗೀಕರಿಸಿ ಸಗೋತ್ರಕನ್ಯೆಯನ್ನು ಮದುವೆಮಾಡಿಕೊಳ್ಳುವುದಿಲ್ಲವೋ, ಯಾವ ಶಾಸ್ತ್ರದಲ್ಲಿ ನಂಬಿಕೆಯನ್ನಿಟ್ಟುಕೊಂಡು ಪಿತೃದೇವತೆಗಳಿಗೆ ಶ್ರಾದ್ಧ ಪಿಂಡದಾನಾದಿಗಳನ್ನು ಅನುಸರಿಸುತ್ತಾರೋ ಆ ಶಾಸ್ತ್ರಗಳಲ್ಲೇ ಪಂಚಮಾದಿಗಳ ಸ್ಪರ್ಶವು ಪಾಪಕ್ಕೆ ಕಾರಣವೆಂದು ಹೇಳಿರುವುದರಿಂದ ಇಂತಹ ಶಾಸ್ತ್ರಗಳಲ್ಲಿ ಕೆಲವು ಪ್ರಮಾಣವೆಂದೂ ಮತ್ತೆ ಕೆಲವು ಅಪ್ರಮಾಣವೆಂದೂ ಹೇಳುವುದು ಯುಕ್ತವಲ್ಲವಾದುದರಿಂದ ಎಂತಹ ಇಕ್ಕಟ್ಟು ಪ್ರಾಪ್ತವಾದರೂ ವೇದಶಾಸ್ತ್ರಗಳ ಪ್ರಮಾಣಗಳನ್ನು ಅಂಗೀಕರಿಸಿ ಅದ್ದರಿಂದಲೂ ಅಸ್ಪೃಶ್ಯರ ಸ್ಪರ್ಶವನ್ನು ಮನಃಪೂರ್ವಕವಾಗಿ ಅಂಗೀಕರಿಸುವುದಿಲ್ಲ. ಬಡತನ ಕಷ್ಟದ ನಿರ್ಬಂಧಗಳಿಂದಲೂ, ದೌರ್ಬಲ್ಯಗಳಿಂದಲೂ ಅಂತಹ ಸಂದರ್ಭ ಬಂದದ್ದಲ್ಲಿ ಕಾಲಕ್ಕಾಗಿ ಪಶ್ಚಾತ್ತಾಪಪಟ್ಟು ತಮಗೆ ಸಾಧ್ಯವಾದ ಪ್ರಾಯಶ್ಚಿತ್ತದಿಂದ ಶುದ್ಧಿ ಮಾಡಿಕೊಳ್ಳುವರು. ಇದನ್ನು ದೃಷ್ಟಾಂತವಾಗಿಟ್ಟುಕೊಂಡು ಚಂಡಾಲಸ್ಪರ್ಶ ಮಾಡಬಹುದೆಂದು ಹೇಳುವುದು ಬುದ್ಧಿವಂತಿಕೆಯಲ್ಲ. ಪಂಚಮರು ಮೊದಲಿನಿಂದಲೂ ಈ ದೇಶದಲ್ಲಿಯೇ ಇರುವವರೆಂದೂ, ಆರ್ಯರು ಎಲ್ಲಿಂದಲೋ ಬಂದು ಇವರನ್ನು ಸೋಲಿಸಿ ದಾಸರನ್ನಾಗಿ ಭಾವಿಸಿದರೆಂದೂ ಬರೆದಿರುವ ಆಧುನಿಕ ಚರಿತ್ರಕಾರರ ವಾದವೆಲ್ಲವೂ ಪೋಷಕವಾದ ಮೂಲಕವಾದ ಅಸತ್ಯವು. ಮನುಷ್ಯರ ಸೃಷ್ಟಿಕರ್ತನಾದ ಮನು ಈ ಭರತಖಂಡದಲ್ಲಿ ಹುಟ್ಟಿದವನು. ಅವನ ಮಗನಾದ ಪ್ರಿಯವ್ರತನೋತ್ತಾನಪಾದ ಇಲ್ಲಿಯವನೇ. "ಕ್ಷತ್ರಿಯವಾನಾಭವರ್ಷ" ಎಂದು ಹೇಳಲಾಗಿದೆ. ಈ ಪುರಾತನವಾದ ಮನುಷ್ಯರಲ್ಲಿ ಈ ಬ್ರಾಹ್ಮಣಾದಿಗಳು ಇಲ್ಲಿಯವರೆಂದೇ ಹೇಳಲ್ಪಟ್ಟಿದೆ. ತ್ರೇತಾಯುಗದಲ್ಲಿ ಶ್ರೀ ರಾಮಚಂದ್ರನು ದಕ್ಷಿಣದೇಶ ಸಂಚಾರಮಾಡಿದಾಗ್ಗೆ ಈ ದೇಶದಲ್ಲಿದ್ದ ಋಷಿಗಳ ಆಶ್ರಮಗಳು ವರ್ಣಿಸಲ್ಪಟ್ಟಿವೆ. ಈ ಗ್ರಂಥಗಳು ಸುಳ್ಳೆಂದು ಇವರು ಹೇಳುವ ಮಾತನ್ನು ಬುದ್ಧಿಶಾಲಿಗಳಿಂದಿನ ನಂಬುವುದಿಲ್ಲ. ಲೋಕ ಸೃಷ್ಟಿಯೇ ನಾಲ್ಕು ಸಾವಿರ ವರ್ಷಗಳಲ್ಲಿ ಆಯಿತೆಂದು ಹೇಳುವವರ ವಿಜ್ಞಾನಕ್ಕೂ ಜ್ಯೋತಿಶ್ಶಾಸ್ತ್ರಮತಕ್ಕೆ ಅನೇಕ ಕೋಟಿ ವರ್ಷಗಳ ಹಿಂದೆ ಆಯಿತೆಂದು ಹೇಳುವವರ ವಿಜ್ಞಾನಕ್ಕೂ ಬಹಳ ವ್ಯತ್ಯಾಸವಿರುತ್ತದೆ. ಪಂಚಮರು ದೇವಾಲಯಗಳಿಗೆ ಪ್ರವೇಶಗೊಳಿಸಲ್ಪಡದಿರುವುದರಿಂದ ಅವರು ನಮ್ಮನ್ನು ಬಿಟ್ಟು ಹೋಗುವರು. ಅವರ ಜನಸಂಖ್ಯೆಯು 7 ಕೋಟಿಯಿರುತ್ತದೆ. ಇಂತಹವರು ನಮ್ಮನ್ನು ಬಿಟ್ಟು ಹೋಗುವುದರಿಂದ ನಮ್ಮ ಮತವು ಬಲಹೀನವಾಗುವುದು. ಆದುದರಿಂದ ನಾವು ಅವರನ್ನು ದೇವಾಲಯಗಳೊಳಗೂ ಮನೆಗಳೊಳಗೂ ಬರಗೊಡಬೇಕೆಂದು ನಾಗರಿಕರು ಬೋಧಿಸುತ್ತಿರುವರು. ಈ ಕಾರಣವಾದ ಮೇಲೆ ನಮಗಿಷ್ಟು ಸಾಲದು. ನಮ್ಮ ಸಹಭೋಜನವಾಗಬೇಕೆಂದೂ ಹೆಣ್ಣುಕೊಟ್ಟು ತರಬೇಕೆಂದೂ ಅವರೇಕೆ ಕೇಳಬಾರದು? ಅದಕ್ಕೆ ನಾವು ಸಮ್ಮತಿಸದಿದ್ದರೆ ಅವರು ನಮ್ಮನ್ನು ಬಿಟ್ಟು ಹೋಗುವರು. ನಮ್ಮ ಮತದ ಸಂಖ್ಯಾಬಲವು ಈಗ ಕಡಿಮೆಯಾಗುವುದು. ಈ ರೀತಿಯಾಗಿ ಮತಕ್ಕಿರುವ ಸಂಖ್ಯಾಬಲವು ಕಡಿಮೆಯಾಗುವುದನ್ನು ತಪ್ಪಿಸಲು ನಾವು ಅಂಗೀಕರಿಸುವುದಿಲ್ಲವೆಂದು ಪಂಚಮರು ಪ್ರತಿಜ್ಞೆ ಮಾಡಿದರೆ ನಾವು ಚಂಡಾಲರಿಗಿಂತ ಕೀಳಾದವರಾಗಿ ಬಿಡುವೆವು. ನಾವು ಹಿಂದುಗಳೆಂದು ಹೇಳಿಕೊಳ್ಳಲು ಸಹ ಅವಕಾಶವಿಲ್ಲದಿರುವುದು. ನಮ್ಮ ಮತಕ್ಕೆ ಮೂಲವಾದ ವೇದಶಾಸ್ತ್ರಗಳನ್ನು ತ್ಯಜಿಸಿದ ನಾಸ್ತಿಕರೆಂದು ಕರೆಯಲ್ಪಡುವರು. "ನಾಸ್ತಿಕೋ ವೇದನಿಂದಕಃ" ಎಂದು ಶ್ರೀ ವಿದ್ಯಾರಣ್ಯರು ವೇದಭಾಷ್ಯದಲ್ಲಿ ಬರೆದಿರುವರು. ಹಿಂದುಗಳ ಸಂಖ್ಯೆಯು ಕಡಿಮೆಯಾಗುವುದೆಂದು ಶಂಕಿಸುವ ಧರ್ಮಾಭಿಮಾನಿಗಳು ಸ್ವಧರ್ಮತ್ಯಾಗದಿಂದ ಹಿಂದೂಮತವನ್ನು ನಿರ್ಮೂಲ ಗೊಳಿಸುವುದು ಎಷ್ಟು ಹಾನಿಕರವೆಂಬುದನ್ನು ತಿಳಿಯಬೇಕು. ಪಾಶ್ಚಾತ್ಯ ಶಿಕ್ಷಣದವರು ಪಂಚಮರನ್ನು ಹಿಂದೂ ಮತದಿಂದ ಬೇರ್ಪಡಿಸಬೇಕೆಂದು ಹವಣಿಸುತ್ತಿರುವರು. ನಮಗೂ ಸನ್ಮತವೇ. ಅಸ್ಪೃಶ್ಯತೆಯು ಸಮುದಾಯಕ್ಕೆ ಹಾನಿಕರವೆಂದೂ, ಪಂಚಮರನ್ನು ದೇವಸ್ಥಾನಗಳೊಳಗೆ ಬರ ಗೊಡಬೇಕೆಂದೂ ಅವರು ಅಭಿಪ್ರಾಯಪಟ್ಟಿರುವುದರಿಂದ ಅವರನ್ನು ಧರ್ಮ ಸಂಕಟದಿಂದ ವೇದಶಾಸ್ತ್ರಗಳನ್ನುಲ್ಲಂಘಿಸಿ ನಡೆದರೆ ಅಂತಹವರನ್ನು ನಾವು ಬಹಿಷ್ಕರಿಸಬೇಕಾಗುವುದು. "ಶ್ರುತಿಸ್ಮೃತೀ ಮಮೈವಾಜ್ಞೇ ಯಸ್ತೇ ಉಲ್ಲಂಘ್ಯ ವರ್ತತೇ। ಆಜ್ಞಾಚ್ಛೇದೀ ಮಮ ದ್ರೋಹೀ ಮದ್ಭಕ್ತೋಪಿ ನ ವೈಷ್ಣವಃ॥" ಸ್ವಧರ್ಮದ ಹಾನಿ ಭಯವು ಬರುವುದರಿಂದ ಶುಚಿಯಾದ ಸನಾತನ ಧರ್ಮವನ್ನು ತ್ಯಜಿಸುವ ಪೂರ್ವದಲ್ಲಿ ವಿಚಾರಮಾಡಬೇಕು. "ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ" ಎಂದು ಭಗವಂತನು ಹೇಳಿರುವುದರಿಂದ ಪಂಚಮರು ಹೆಚ್ಚಿನ ಸ್ಪರ್ಶಕ್ಕಾಗಿ ನಮ್ಮ ಮತವನ್ನು ಬಿಟ್ಟು ಹೋದರೂ ಹೋಗಲಿ. ಎಂದು ಸನಾತನ ಧರ್ಮಿಗಳು ಶಾಸ್ತ್ರಸಮ್ಮತವಾದ ಪ್ರಮಾಣಗಳಿಂದ ಸಂಕಲ್ಪ ಮಾಡಿಕೊಂಡಿರುವರು. ಇದರಿಂದ ಅವರ ವಾದವನ್ನು ಸಾಧುಗಳು ಸರ್ವಪ್ರಕಾರವಾಗಿ ಬಲಪಡಿಸಬೇಕೆಂದು ಹೇಳುತ್ತಿರುವೆವು. ಈಗ ಇವರಿಂದ ನಡೆಯುತ್ತಿರುವ ಪ್ರಯತ್ನದಲ್ಲಿ ಎಲ್ಲರೂ ಸಹಕರಿಸಿದರೆ ಇದೇ ರೀತಿ ನಡೆಯಲು ಸಾಧ್ಯವಾಗುವುದು. ಇದಕ್ಕಿಂತ ಬೇರೆ ಮಾರ್ಗವು ಸನಾತನಧರ್ಮಿಗಳಿಗೆ ತೋರುವುದಿಲ್ಲ.

ಇವರು ಪಂಚಮರನ್ನು ಹಿಂದೂಮತದಿಂದ ದೂರೀಕರಿಸಿದಲ್ಲಿ ಪ್ರಾಣಕ್ಕೆ ಗಂಡಾಂತರ ಬರುವುದೆಂದು ಹೆದರಿರುತ್ತಾರೆ. ಆದುದರಿಂದ ಅವರ ಪ್ರಾಣರಕ್ಷಣೆಗಾಗಿ ಮತಾಂತರ ಹೊಂದಲು ಬಿಡಲಾರರು. ಸೇರಿ ಒಟ್ಟುಮಾಡಿದ ಹೊಂದು ಜನಾಂಗ ಸಂಘಗಳ ಸಭೆಗಳಲ್ಲಿ ಉಪನ್ಯಾಸಗಳನ್ನು ಮಾಡುತ್ತಾ ಇವರು ನಾಳೆಯ ದಿನವೇ ಸ್ವರಾಜ್ಯವು ಬರುವುದೆಂದೂ ಅದಕ್ಕೆ ಪಂಚಮರ ಸಹಾಯ ಬೇಕೆಂದೂ ಹೇಳುತ್ತಿರುವರು. ಆದರೆ ಇವರ ಮಾತುಗಳಿಗೆ ನಂಬಿಕೆಯಿಲ್ಲ. ಈಗ ಇವರು ಪಂಚಮರನ್ನು ಮುಂದಿಟ್ಟುಕೊಂಡು ಸನಾತನ ಧರ್ಮವನ್ನು ನಾಶಮಾಡಲು ಹೊರಟಿರುವರು. ಇವರಿಂದ ಪಂಚಮರಿಗೆ ಯಾವ ಉಪಕಾರವೂ ಆಗುವುದಿಲ್ಲ. ಪಂಚಮರು ಸಹಜವಾಗಿ ಶುದ್ಧ ಸನಾತನ ಧರ್ಮವನ್ನು ಅನುಸರಿಸಿ ನಡೆಯುವರು. ವೇದಶಾಸ್ತ್ರಗಳ ಆಜ್ಞೆಗೆ ವಿರುದ್ಧವಾಗಿ ನಡೆದು ಮತಭ್ರಷ್ಟರಾದವರಿಗಿಂತ ಪಂಚಮರು ನಮಗೆ ಹೆಚ್ಚು ಪ್ರಿಯರಾಗಿರುವರು. ನಮ್ಮ ಪ್ರಾಚೀನ ಋಷಿಗಳ ಕಾಲದಿಂದಲೂ ಭಗವದ್ಭಕ್ತಿಯಿಂದ ಶುದ್ಧರಾದ ಚಂಡಾಲರನ್ನು ಪೂಜ್ಯರೆಂದು ಗೌರವಿಸಿರುವರು. ನಂದನಾರ್, ತಿರುಪ್ಪಾಣಾಳ್ವಾರ್ ಮೊದಲಾದ ಭಕ್ತರು ಪಂಚಮರಾಗಿದ್ದರೂ ಪೂಜ್ಯರಾಗಿರುವರು. ಇಂತಹ ಭಕ್ತರಿಗೆ ದೇವರ ದರ್ಶನವು ಸುಲಭವಾಗಿರುವುದು. ಈ ದೇಶದ ಪಂಚಮರು ಸನಾತನ ಧರ್ಮವನ್ನು ಅನುಸರಿಸಿ ಭಗವದ್ಭಕ್ತಿಯಿಂದ ಉದ್ಧಾರ ಹೊಂದಬೇಕೆಂದು ಸನಾತನಿಗಳು ಬಯಸುವರು. "ಶ್ವಪಚೋಪಿ ಮಹೀಪಾಲ ವಿಷ್ಣುಭಕ್ತೋ ದ್ವಿಜಾಧಿಕಃ" ಎಂದು ಪುರಾಣಗಳು ಹೇಳುವುದರಿಂದ ಭಕ್ತರಾದ ಪಂಚಮರು ಸಾತ್ವಿಕರಾಗಿ ಪೂಜ್ಯರಾಗುವರು. ಆದರೆ ಅವರು ಕುಲಧರ್ಮಗಳನ್ನು ಬಿಡಲು ಕಾರಣವಿಲ್ಲ. ಇಂತಹವರ ಮೇಲೆ ಪ್ರಯೋಗಿಸುವ ಆಕ್ಷೇಪಣೆಗಳು ಸರಿಯಲ್ಲ. ಭಾರತ ವರ್ಷದ ಪ್ರಾಚೀನ ಮಹಾಪುರುಷರು ಈ ಧರ್ಮವನ್ನು ಪ್ರತಿಪಾದಿಸಿರುವರು. ಇವರ ಪ್ರತಿಪಾದನೆಯಿಂದ ಬೇರೆಯಾದ ಪ್ರಯೋಜನವಾದ ದಾರಿಯಿಂದ ನಡೆದರೆ ಪ್ರಯೋಜನವಿಲ್ಲ.

ನಾಲ್ಕು ವರ್ಷಗಳ ಹಿಂದೆ ಶ್ರೀ ಕಾಶೀ ಮಹಾಕ್ಷೇತ್ರದಲ್ಲಿ ಅಖಿಲ ಭಾರತ ವರ್ಣಾಶ್ರಮ ಸ್ವರಾಜ್ಯ ಮಹಾಸಭೆಯು ದರ್ಭಾಂಗ ಮಹಾರಾಜರ ಅಧ್ಯಕ್ಷತೆಯಲ್ಲಿ ನೆರವೇರಿದಾಗ್ಗೆ ಎಲ್ಲ ದೇಶಗಳಿಂದಲೂ ಮಠಾಧಿಪತಿಗಳು, ಮಹಾಪಂಡಿತರುಗಳು ಸಹ ಸಾವಿರ ಸಂಖ್ಯೆಗಳವರೆಗೆ ಬಂದಿದ್ದು ಸ್ಪೃಶ್ಯಾಸ್ಪೃಶ್ಯ ಬಾಲ್ಯವಿವಾಹಾದಿ ವಿಚಾರಗಳು ಚೆನ್ನಾಗಿ ವಾದ ಪ್ರತಿವಾದಗಳಿಂದ ಚರ್ಚಿಸಲ್ಪಟ್ಟು ಚಂಡಾಲ ಸ್ಪರ್ಶ ಕೂಡದೆಂದೂ, ಬಾಲ್ಯವಿವಾಹವನ್ನು ಮಾಡಬೇಕೆಂದೂ ತೀರ್ಮಾನಿಸಿದರು. ಅವು ನಮಗೆ ಆದರ್ಶಗಳು. ಈ ತೀರ್ಮಾನಗಳು ದೊರೆತನದವರಿಗೆ ತಿಳುಹಲ್ಪಟ್ಟಿದ್ದವಾದರೂ ಅವರು ಸನಾತನಧರ್ಮಪರರಾಗಿ ಧರ್ಮಾಂಗಗಳನ್ನು ಉಲ್ಲಂಘಿಸದೆ ಅವನ್ನು ಕಾಪಾಡುತ್ತಿರುವ ದಿಕ್ಕಾಗಿಯೇ ನಮಗೆ ವಿರುದ್ಧವಾಗಿ ಕಾರದೇ ಅವನ್ನು ಪಾಸುಮಾಡಿದರು. ಆದಾಗ್ಯೂ ಸನಾತನಧರ್ಮಪರರು ಎಲ್ಲ ದೇಶಗಳಲ್ಲೂ ಸಭೆಗಳನ್ನು ಸೇರಿಸಿ ತಮ್ಮ ಅನುಭವಗಳನ್ನು ಬಾಲ್ಯವಿವಾಹಗಳನ್ನು ಮಾಡುತ್ತಿರುವರು. ಶಾಸ್ತ್ರ ಪ್ರಾಬಲ್ಯಕ್ಕಾಗಿ ಶಿಕ್ಷೆಯಿಂದ ವ್ಯಾಪ್ತರಾಗುವ ಕಷ್ಟಗಳನ್ನು ಸಹಿಸುವುದು ವರ್ಣಾಶ್ರಮಿಗಳಿಗೆ ಪ್ರೀತಿಕರವಾದ ವಿಷಯವಾಗುವುದು. ಯಾರು ಗೋಜಿಗೂ ಹೋಗದೆ ತಮ್ಮಷ್ಟಕ್ಕೆ ತಾವು ದೊರೆತನ್ನು ಲಾಭದಿಂದ ಸಂತುಷ್ಟರಾಗಿ ಮತಧರ್ಮಗಳನ್ನಾಚರಿಸುವವರಿಗೆ ನಾನಾ ವಿಧ ಕಷ್ಟ ಶಾಸನಗಳು ದಾರಿಕಟ್ಟಿದರಿಂದ ಮಾಡಲ್ಪಟ್ಟು ಶಿಕ್ಷಿಸಲ್ಪಡಲು ಪ್ರಯತ್ನಿಸುತ್ತಿರುವ ಸಂಘಸಂಸ್ಥೆಗಳು ಧರ್ಮಧ್ವಂಸ ಮಾಡಲಿಕ್ಕೆ ರಾಕ್ಷಸ ಆಚಾರವನ್ನು ಹಾಕುವುದು. ಅದರಿಂದ ಸನಾತನಧರ್ಮಪರರ ಹಿತವೇನಾಗಿ?

ಚಂಡಾಲ ಸ್ಪರ್ಶ ನಿಷೇಧ ಶಾಸನದಿಂದ ಮತವನ್ನೂ, ಸ್ತ್ರೀಸ್ವಾತಂತ್ರ್ಯ ನಿಷೇಧದಿಂದ ಸ್ತ್ರೀಯರನ್ನೂ ಬಿಡಿಸಿಕೊಳ್ಳುವವರನ್ನೂ, ರೈತರಿಗೂ ರಾಜರಿಗೂ ಮಧ್ಯೆ ಬೇರೆ ಬೀಳಲು ಬಿಡಕೂಡದೆಂದು ಭೂಸ್ವಾಮಿಗಳ ಮತ್ತು ಧನಿಕರ ಧನವನ್ನೂ, ಇವುಗಳ ಮೂಲಕ ಸಮಾಜದಲ್ಲಿ ಸಂಭವಿಸುವ ವಿಪ್ಲವದಿಂದ ಪ್ರಾಣವನ್ನು ನಾಶಪಡಿಸುತ್ತಿರುವ ನವನಾಗರಿಕರು ಕೋರುತ್ತಿರುವ ದೌರ್ಭಾಗ್ಯದ ಸ್ವರಾಜ್ಯವು ನಮಗೆ ಸಾಧ್ಯವಿಲ್ಲದ ನಮ್ಮ ಶತ್ರುಗಳಿಗೂ ಕೂಡ ಪ್ರಾಪ್ತವಾಗದಿರಲಿ. ಸ್ವಾತಂತ್ರ್ಯವು ಪ್ರತಿಯೊಬ್ಬ ಮನುಷ್ಯನಿಂದಲೂ ಕೋರಲ್ಪಡತಕ್ಕದಾಗಿದೆ. ಆದು ನಮಗೂ ಸನ್ಮತವಾಗಿರುವುದು. ಸ್ವರಾಜ್ಯದ ಹೆಸರಿನಿಂದ ಸ್ವಾತಂತ್ರ್ಯವನ್ನು ಕೋರುವುದಕ್ಕೆ ಮೊದಲು ಮತಸ್ವಾತಂತ್ರ್ಯವನ್ನೂ ವಿವಾಹಸ್ವಾತಂತ್ರ್ಯವನ್ನೂ ಹೊಂದಲು ಯತ್ನಿಸುವುದು ನ್ಯಾಯಕ್ಕೆ ಮೊದಲೇ ಸಂಸಾರ ವಿಧಾನವನ್ನು ಗೊತ್ತುಮಾಡಲೆತ್ನಿಸದಂತಿರುವುದು. ಈ ಪ್ರಯತ್ನವು ಸ್ವರಾಜ್ಯ ಧ್ವಂಸಕವಲ್ಲದೆ ಪೋಷಕವಲ್ಲವು.

ಎಲ್ಲ ಮತದವರಿಗೂ ತಂತಮ್ಮ ಧರ್ಮವನ್ನು ನಂಬಿ ಆಚರಿಸುವ ಸನ್ನಿವೇಶದಲ್ಲಿ ಯಾವ ಬಾಧೆಯೂ ಬಾರದಂತೆ ಜನರ ಸೌಖ್ಯಕ್ಕೆ ಬೇಕಾದ ಆರ್ಥಿಕ ಸೌಕರ್ಯವನ್ನುಂಟುಮಾಡುವಂತಹ ಭಾವೀಕಾಲ ಸ್ವರಾಜ್ಯವು ನಮಗಿಷ್ಟವಾದುದು. ಪಂಚಮರಿಗೆ ಶಾಲೆ ವಿದ್ಯೆಯನ್ನು ಕಲಿಸುವುದೂ, ಅವರಿಗೆ ಬಾವಿಗಳನ್ನೂ, ಬಾವಿಗಳನ್ನೂ, ಅವರಿಗಾಗಿ ಪ್ರತ್ಯೇಕ ದೇವಾಲಯಗಳನ್ನು ಕಟ್ಟಿಸಿಕೊಡುವುದೂ, ಅವರಿಗೆ ಮಂದಿರವನ್ನೇರ್ಪಡಿಸಿ ಭಜನೆ ಭಕ್ತಿ ಪ್ರಸಾದಗಳನ್ನು ಭಜಿಸುವುದನ್ನು ಹೇಳಿಕೊಡುವುದೂ, ಇವುಗಳಿಗಾಗಿ ಚಂದಾಹಣವನ್ನು ಕೂಡಿಸುವುದೂ ನಮ್ಮೆಲ್ಲರಿಗೂ ಬಹಳ ಇಷ್ಟವಾಗಿರುತ್ತದೆ. ಅವರಿಗೆ ಬೇಕಾದುದೂ ಇಷ್ಟೇ. ಧನಸಂಪಾದನೆಯ ಕೆಲಸಕ್ಕೆ ಅವರುಗಳನ್ನು ನಿಯಮಿಸಿಕೊಳ್ಳುತ್ತಿದ್ದೇವೆ. ಗೃಹಕೃತ್ಯಗಳಿಗೆ ಅವರನ್ನು ಸೇವಕರನ್ನಾಗಿ ನಿಯಮಿಸಿಕೊಳ್ಳಲು ಶಾಸ್ತ್ರಾಧಾರವಿರುತ್ತದೆ. ಅನಾದಿ ಕಾಲದಿಂದಲೂ ದನಗಳ ಸತ್ತುಹೋದರೆ ಅವುಗಳ ಚರ್ಮವನ್ನು ಯಜಮಾನರು ಬಿಕ್ಕಿಯಿಸುವುದು ಭಾರತದಲ್ಲಿ ಬಹಳ ಅಪರಾಧವಾಗಿಸಲ್ಪಟ್ಟಿರುವುದಾದರೂ ಆ ಚರ್ಮವು ತಮ್ಮ ಮನೆಗಳಲ್ಲಿ ಬೀಳುತ್ತಿರುವ ಪಂಚಮರಿಗೆ ಉಚಿತವಾಗಿ ಕೊಡಲ್ಪಡುವುದು. ಹೀಗೆ ಕೊಡಲ್ಪಡುವ ಚರ್ಮಗಳನ್ನು ಹೆಚ್ಚಿಸಿ ಮಾರಿಕೊಳ್ಳುವುದರಿಂದ ಅವರ ಜೀವನಕ್ಕೆ ಸಹಾಯವಾಗುವುದು.

ಬಹಳ ನಾಗರಿಕರಾಗಿರುವವರು ತಮ್ಮ ಸತ್ತ ದನಗಳನ್ನು ತಾವೇ ಮಾರಿಕೊಳ್ಳುತ್ತಿರುವಂತೆ ಪಂಚಮರ ಜೀವನಕ್ಕೆ ಕುಂದಕವಾಗಿರುತ್ತದೆ. ಕೊಡದನ್ನು ಹೊಲೆಯರುಳ್ಳವೇ ಹೊರಗಾದ ಕಾರ್ಖಾನೆಯ ಮಾರಲೆಂದಿರುವ ಸಂಬಳದ ದಿನಾ ಮತ್ತಾವ ಮಾರ್ಗವಿಲ್ಲ. ಈಗ ಇಂಗ್ಲೀಯು ನಾಗರಿಕರೆಂದು ಜನಗಳು ಹೇಳುವ ಪ್ರಕಾರ ಜಾತಿಗಳ ಜೋಡಣೆಯನ್ನು ಕೆಡಿಸಲು ಜನರು ಹವಣಿಸುತ್ತಿರುವರು. ಹೀಗೆ ಅವರ ಕಸುಬನ್ನು ಅಪಹರಿಸಿ ಅವರಿಗೆ ಎಷ್ಟು ಮಾತ್ರ ಸಹಾಯ ಮಾಡಿದಂತಾಯಿತು? ಈ ಆಕ್ಷೇಪಣೆಯು ಸತ್ಯವೆಂದು ಗೊತ್ತಿದೆ. ನಿಜವಾದ ನಾಗರಿಕರು ಪಂಚಮರ ದುರವಸ್ಥೆಯನ್ನು ಕಂಡು ಮರುಗಿ ಅವರ ಉದ್ಧಾರಕ್ಕಾಗಿ ಪ್ರಯತ್ನಿಸಬೇಕು. ಅವರ ಸಂಸಾರ ಜೀವನಕ್ಕೆ ಬೇಕಾದ ಆರ್ಥಿಕ ಸಹಾಯವನ್ನು ಮಾಡಬೇಕು. ಇಂಗ್ಲೀಷು ಭಾಷೆಯಲ್ಲಿ ಪ್ರವೀಣರಾದವರು ಸ್ವತಂತ್ರ ಸನ್ನಿವೇಶದ ಬಟ್ಟೆಗಳನ್ನು ಉಪಯೋಗಿಸುವುದರಿಂದ ದೇಶಕ್ಕೆ ಕ್ಷೇಮವಾಗುವುದೆಂಬುದನ್ನು ನಾವೂ ಒಪ್ಪುತ್ತೇವೆ. ಈ ಸಂಬಂಧವನ್ನೆಲ್ಲ ಪ್ರಾಚೀನಾಚಾರವನ್ನನುಸರಿಸಿ ಬೋಧಿಸಿ ಸಂಪಾದಿಸಿಕೊಳ್ಳುವುದು ಬಹಳ ಆವಶ್ಯಕವು. ನಮ್ಮ ಮತವೂ ಸ್ಪೃಶ್ಯಾಸ್ಪೃಶ್ಯ ನಿಯಮಗಳೂ, ನಮ್ಮ ದೇವಸ್ಥಾನ ನಿಯಮಗಳೂ ಪೂರ್ವಕಾಲದಿಂದಲೂ ನಡೆದುಬರುತ್ತಿವೆ. ಕೋ॥ ವಿನಾಯಕ ಸವಿತೇನ ವಿನಾಶ ಶಿಖಿಯಾಕ್ಷತಂ। ಶಾಸ್ತ್ರವಿರೋಧಿಯಾದ ಎಲ್ಲ ಕಾರ್ಯಗಳೂ ನಿಷ್ಫಲವಾಗುವುವೆಂದು ಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟಿದೆ. ಶಿಷ್ಟಾಚಾರವನ್ನು ಕೃತಜ್ಞತೆಯಿಂದ ಪ್ರವೇಶಿಸುವುದರಿಂದ ಇಂಗ್ಲೀಷಿನವರು ಸನಾತನವೆಂದು ಅಪ್ಪಿದನ್ನು ಬಿಡದೆ ಬರುತ್ತಿರುವ ಚರ್ಚೆಗಳು ಬಹಳವಾಗಿವೆ. ಧರ್ಮ ನಿರಾಕರಣವಾಗಿರುವ ಮತವು ಪಂಚಮರ ಉದ್ಧಾರಕ್ಕೆ ಸಾಕು. ನೆಮ್ಮದಿಯ ಅನುಕೂಲವನ್ನು ಕಲ್ಪಿಸಿಕೊಡುವ ಸಂಸ್ಥೆಗಳು ಕೇಳುತ್ತಿರುವುದನ್ನು ನಂಬಿದ ಕೆಲವು ತಪ್ಪುಗಳ ಕಾರಣದಿಂದ ಆಕ್ಷೇಪಿಸುವ ಮನಸ್ಸಿಗೆ ಬಂದಂತೆ ವಿಕಾರ ವೇಷವನ್ನು ಧರಿಸುವುದು ದೇಶದ ಗೌರವಕ್ಕೂ ನಮ್ಮ ಗೌರವಕ್ಕೂ ಭಂಗಕರವು. ಆದುದರಿಂದ ದೇಶಕ್ಕೆ ಕ್ಷೇಮಕರವಾದ ಕಾಂಗ್ರೆಸ್ಸು ನಾಯಕರುಗಳ ಸಂಘ ಸಂಸ್ಥೆಗಳೆಂದು ಹೇಳಿಕೊಳ್ಳುವವರುಗಳು ಈ ದುರಾಚಾರಗಳನ್ನು ಬಿಟ್ಟು ತಮ್ಮ ಪೂರ್ವಿಕರ ದೇಶ ಮತ ವೇಷ ಗೌರವಗಳನ್ನು ಕಾಪಾಡಬೇಕೆಂದು ಅವರುಗಳನ್ನು ವಿನಯದಿಂದ ಪ್ರಾರ್ಥಿಸುವುದಾಗಿದೆ.

ಇಂಗ್ಲೀಯರು ಅನೇಕ ದೇಶಗಳಲ್ಲಿ ವಾಸಿಸುತ್ತಿರುವರು. ನಮ್ಮ ದೇಶದಲ್ಲಿ ನಮ್ಮ ಮತವು ಬಹಳ ದೊಡ್ಡದು. ಅವರು ಬಹಳ ಸ್ವಲ್ಪ ಸಂಖ್ಯೆಯುಳ್ಳವರು. ಆದರೂ ಅವರು ನಮ್ಮ ಸಹವಾಸದಲ್ಲಿ ಎಷ್ಟು ಕಾಲವಿದ್ದರೂ ತಮ್ಮ ಆಚಾರವನ್ನಾಗಲಿ ಮತ ನಿಯಮಗಳನ್ನಾಗಲಿ ವೇಷಭಾಷೆಗಳನ್ನಾಗಲಿ ಎಷ್ಟುಮಾತ್ರಕ್ಕೂ ಬದಲಾಯಿಸಲಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ನಾವು ಅವರಂತೆಯೇ ಜೀವನಕ್ಕಾಗಿ ಇತರ ವಿದ್ಯೆಗಳನ್ನು ಕಲಿತರೂ ನಮ್ಮ ಧರ್ಮಶಾಸ್ತ್ರವನ್ನೂ ವೇಷಭಾಷೆಗಳನ್ನೂ ಬದಲಾಯಿಸಕೂಡದೆಂಬ ಉಪದೇಶವನ್ನು ಕೇಳದೆ ಅಲ್ಪಬುದ್ಧಿಯಿಂದ ನಾಟಕ ವೇಷಧಾರಿಗಳಂತೆ ವರ್ತಿಸುವುದು ದೇಶಕ್ಕೂ ಮತಕ್ಕೂ ಎಷ್ಟು ಅಪಾಯಕರವೂ ಪಾಪಕರವೂ ಎಂಬುದನ್ನು ಸಾವಧಾನ ಮನಸ್ಸಿನಿಂದ ನವನಾಗರಿಕರು ಗ್ರಹಿಸಿ ಇನ್ನುಮೇಲಾದರೂ ತಮ್ಮ ಸ್ವರೂಪವನ್ನು ಸಂಸ್ಕರಿಸಿಕೊಳ್ಳುವವರಾಗಲಿ.

ನಾಡಿ ನೆಲ್ಲಿಗೆ ಎಂಬ ವಿಷಯವನ್ನು ಗಮನಿಸಿದರೆ ಕ್ಷೆಟ್ರಗಳಲ್ಲಿ ವರ್ಣಸಂಕರವಾದ ತಿಂಡಿಯನ್ನೂ, ಹೋಟೆಲುಗಳಲ್ಲಿ ಅನ್ನವನ್ನೂ ತಿಂದು ಆರೋಗ್ಯವನ್ನು ಕೆಡಿಸಿಕೊಂಡು ಬೀದಿಗಳಲ್ಲಿ ಯಾವಾಗಲೂ ಔಷಧಿಯ ಸೀಸೆಗಳನ್ನಿಟ್ಟುಕೊಂಡಿರುವ ದುಸ್ಥಿತಿಯು ಪ್ರಾಪ್ತವಾಗಿರುತ್ತದೆ. ಇಂತಹ ದುರಭ್ಯಾಸಗಳನ್ನು ಬಿಟ್ಟು ನಿಯಮಾನುಸಾರವಾಗಿ ಊಟಮಾಡುವವರ ಆರೋಗ್ಯ ಬಹಳ ಚೆನ್ನಾಗಿರುವುದೆಂಬುದು ಲೋಕ ವಿದಿತವಾಗಿರುವುದು.

ನಾವು ಎಲ್ಲ ವಿಧದಲ್ಲೂ ಪಂಚಮರಿಗೆ ಸಹಾಯ ಮಾಡಿದಾಗ್ಗೂ ಅವರು ನಮ್ಮನ್ನು ಬಿಟ್ಟು ಬೇರೆ ಹೋದರೂ ನಮಗೆ ನಷ್ಟವಿಲ್ಲ. ನಮ್ಮಲ್ಲಿ ಅಧಿಕ ಸಂಖ್ಯೆ ಸಂಖ್ಯಾಕರವಾದ ಮಹಮ್ಮದೀಯರಿಗೂ ಪಾರ್ಸಿಯವರಿಗೂ ಪೃಥುಕ್ಕದಿಂದ ರಕ್ಷಣೆಯು ಉಂಟಾಗಿಲ್ಲವೇ? ಆ ಭಯದಿಂದ ಅವರು ತಮ್ಮ ಮತಧರ್ಮವನ್ನು ಬಿಟ್ಟು ನಮ್ಮೊಡನೆ ಸೇರಿರುವರೇ? ಹಾಗೆಯೇ ನಮ್ಮ ಸನಾತನ ಧರ್ಮಪರರು ಮತದವರು ಕೂಡ ಮೊರೆಯ ನಡವಳಿಯಿಂದ ವಿಚ್ಛೇದನ ಧನ ಪ್ರಾಣ ಸಂರಕ್ಷಣೆಯನ್ನು ಕೋರಿರುವೆವು. ಹಾಗೆ ಅವರು ನಿರ್ದಯೆಯಿಂದ ಅಂತಹ ರಕ್ಷಣೆಯನ್ನು ಕೊಡದಿದ್ದಲ್ಲಿ "ಧರ್ಮಸಂರಕ್ಷಣಾರ್ಥಾಯ ಸಂಭವಾಮಿ ಯುಗೇಯುಗೇ" ಎಂದು ಪ್ರತಿಜ್ಞೆ ಮಾಡಿರುವ ಲೋಕನಿಯಾಮಕನಾದ ಪರಮೇಶ್ವರನನ್ನು ಪ್ರಾರ್ಥಿಸುವೆವು. ನಾವು "ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ" ಎಂದು ಆಜ್ಞೆ ಮಾಡಿರುವ ಪರಮೇಶ್ವರನ ಆಜ್ಞೆಯನ್ನು ನಿರಾಕರಿಸುವುದರಿಂದ ನಾವು ಸ್ವರವನ್ನು ಪ್ರಾರ್ಥಿಸಿ ಪ್ರಯೋಜನವಿಲ್ಲ. ಆದುದರಿಂದ ವೇದ ಶಾಸ್ತ್ರಗಳಿಗೆ ಅಂಗೀಕಾರವಲ್ಲದ ಯಾವ ಸೌಕರ್ಯಗಳನ್ನೂ ಪಂಚಮರಿಗೆ ನಾವು ಸನಾತನ ಧರ್ಮಪರರು ಮಾಡಲಾರೆವು.

ಶಾಸ್ತ್ರ ವಿರೋಧವಲ್ಲದ ಎಲ್ಲ ಸೌಕರ್ಯಗಳನ್ನೂ ಈ ವರೆಗೆ ನಮ್ಮ ಪೂರ್ವಿಕರು ಮಾಡಿರುತ್ತಾರೆ. ಈಗ ನಾವು ಕೂಡ ಮಾಡಲು ಸಿದ್ಧರಾಗಿರುತ್ತೇವೆ. ನಾವು ನಮ್ಮ ಆಚಾರ ಧರ್ಮಗಳಲ್ಲಿ ಕೈ ಹಾಕಕೂಡದೆಂದೂ, ಹಾಗೆ ಮಾಡಲು ಯಾವ ಪ್ರಭುತ್ವಕ್ಕೂ ನ್ಯಾಯವಾದ ಅಧಿಕಾರವಿಲ್ಲವೆಂದೂ ದೊರೆತನದವರಲ್ಲಿ ಬಿನ್ನವಿಸುತ್ತೇವೆ. ಮುಂದೆ ನಮ್ಮ ನವನಾಗರಿಕರಿಗೆ ಸ್ವರಾಜ್ಯ ಪ್ರಾಪ್ತವಾದರೂ ಅವರನ್ನು ಸಹ ಹೀಗೆಯೇ ಕೇಳಿಕೊಳ್ಳುತ್ತೇವೆ.

32 ಕೋಟಿ ಭಾರತೀಯರಲ್ಲಿ ಪಾಶ್ಚಾತ್ಯ ವಾಸನೆಯನ್ನುಳ್ಳ ಕೆಲ ಲಕ್ಷ ಜನರ ಹೊರತಾಗಿ ಉಳಿದವರೆಲ್ಲರೂ ಶ್ರುತಿ ಸ್ಮೃತಿಗಳನ್ನು ನಂಬಿ ಯಥಾಶಕ್ತಿಯಿಂದ ತಂತಮ್ಮ ಕುಲಧರ್ಮಗಳನ್ನು ಆಚರಿಸುವವರೇ ಆಗಿರುವರು. ಉತ್ಸವ ದಿನಗಳಲ್ಲೂ ಶುದ್ಧಿದಿನಗಳಲ್ಲೂ ಕೆಲ ನಾಸ್ತಿಕರ ವಿನಾ ಉಳಿದವರೆಲ್ಲರೂ ಸ್ನಾನ ಸಂಧ್ಯಾವಂದನಾದಿಗಳನ್ನೂ ದೇವರ ದರ್ಶನವನ್ನೂ ಮಾಡಿ ತಮ್ಮನ್ನು ಕೃತಕೃತ್ಯರನ್ನಾಗಿ ನಡೆದುಕೊಳ್ಳುವವರೇ ನೂರಕ್ಕೆ 90 ಮಂದಿಯವರು. ಆದರೆ ಈಗ ಅವರು ತಮಗೆ ಪ್ರಾಪ್ತವಾಗುತ್ತಿರುವ ಮತ ವಿಪ್ಲವನ್ನೂ ಅನರ್ಥವನ್ನೂ ಚೆನ್ನಾಗಿ ತಿಳಿಯದಿರುವುದರಿಂದ ಅವರು ಉದಾಸೀನರಾಗಿರುತ್ತಾರೆ. ಸರಕಾರದವರು ರಾಜಕೀಯ ವಿಚಾರದಲ್ಲಿ ಬಹಳ ಕಾಲದಿಂದಲೂ ಪ್ರವೇಶಿಸಿದ ಪ್ರಥಮತಃ ಅವರೇ ಹಿಂದೂ ಪ್ರತಿನಿಧಿಗಳೆಂದೂ, ಅವರಭಿಪ್ರಾಯವೇ ಹಿಂದುಗಳ ಅಭಿಪ್ರಾಯವೆಂದೂ ಪ್ರಭುತ್ವದವರು ತಪ್ಪು ತಿಳಿದು ಕೊಂಡಿರುತ್ತಾರೆ. ಇಂಗ್ಲೀಷು ಭಾಷಾ ಪಾಂಡಿತ್ಯವನ್ನು, ಅವರ ಆಚಾರವನ್ನು ಅನುಕರಿಸಿಕೊಂಡಿರುವವರು ಪ್ರಜಾಪ್ರತಿನಿಧಿಗಳಾಗಿ ಅಸೆಂಬ್ಲಿಯಲ್ಲಿ ಸೇರಿ ಮತ ಸ್ವಾತಂತ್ರ್ಯಕ್ಕೆ ವಿರುದ್ಧವಾದ ಶಾಸನಗಳನ್ನು ಮಾಡುತ್ತಿರುವರು. ಇವರ ಮೂಲಕ ಎಂತಹ ಅನರ್ಥಗಳು ಪ್ರಾಪ್ತವಾಗಲಿಕ್ಕೆ ಇವೆಯೋ ಯಾರಿಗೆ ಗೊತ್ತು? ಸನಾತನ ಧರ್ಮಪರರು ಅಖಿಲ ಭಾರತ ವರ್ಣಾಶ್ರಮ ಸ್ವರಾಜ್ಯ ಸಂಸ್ಥೆ ಉಪ ಸಂಘಗಳನ್ನಾಗಿ ಗ್ರಾಮಗಳಲ್ಲೂ ಪಟ್ಟಣಗಳಲ್ಲೂ ಸಭೆಗಳನ್ನೇರ್ಪಡಿಸಿ ಅಧ್ಯಕ್ಷರನ್ನೂ, ಕಾರ್ಯದರ್ಶಿಗಳನ್ನೂ, ಸಭಿಕರನ್ನೂ ಗೊತ್ತುಮಾಡಿಕೊಂಡು ತಮ್ಮ ನಿರ್ಣಯಗಳನ್ನು ಅಖಿಲ ಭಾರತ ವರ್ಣಾಶ್ರಮ ಸ್ವರಾಜ್ಯ ಸಂಘದ ಸಕ್ಷಮಂತಕ್ಕೆ ಕಳುಹಿಸಬೇಕು ಎಂದು ಇಂಗ್ಲಿಷಿನಲ್ಲಿ ಹಿಂದಿಯಲ್ಲಾಗಲಿ

ಎರಡು ತಿಳಿಸುತ್ತವೆ. ಕಾಂಗ್ರೆಸಿನವರಾಗಲಿ [illegible] ಧರ್ಮಕ್ಕಾಗಲಿ [illegible] ವಿಚಾರವಿಲ್ಲ [illegible] ಈ ಸಂಸ್ಥೆಯ [illegible] ರಾಜ್ಯ [illegible] ರಾಜಕೀಯ [illegible] ಧರ್ಮ [illegible] ಆರ್ಥವನ್ನು ಬಲಪಡಿಸುತ್ತದೆ. ಆದ್ದರಿಂದ [illegible] ಮುಸಲ್ಮಾನರ ಮತದವರಿಂದ ಸಂಭವಿಸಿದ ನಾನಾ ವಿಧ ಕಷ್ಟಗಳನ್ನು ಅನುಭವಿಸಿ ಶಾಂತವಾದ ಮತಗಳನ್ನು ಆಚರಿಸುವ ಸಂಗತಿಯು ಆಯಾ ಚರಿತ್ರೆಯಿಂದ ವಿಶದವಾಗುವುದರಿಂದ ಮನುಷ್ಯರಿಗೆ ಸ್ವಭಾವಸಿದ್ಧವಾದ ಮತಶ್ರದ್ಧೆಯನ್ನು ಬಿಟ್ಟು ಬಂಡಾಯದಲ್ಲಿ ಸೇರುವುದು ಹಿಂದುಗಳಿಗೆ ಮಹಾಪಾತಕವು. ಕ್ರೈಸ್ತರೂ ಮಹಮ್ಮದೀಯರೂ ತಂತಮ್ಮ ಮತ ಗ್ರಂಥಗಳಲ್ಲಿ ಇತರ ಜಾತಿಯವರನ್ನು ತಮ್ಮೊಳಗೆ ಸೇರಿಸಿಕೊಳ್ಳುವುದು ಪುಣ್ಯವೆಂದು ಹೇಳಿರುವುದರಿಂದ [illegible] ಮಾಡುವರು. ಅವರ ಗಳೊಡನೆ ಎಲ್ಲ ವಿಷಯದಲ್ಲೂ ಸಮಾನ ಗೌರವವನ್ನು ಹಿಂದೂಗಳಿಗೆ ಕೊಡುವುದಿಲ್ಲ. ಈಸ್ಟಿಂಡಿಯನ್ನರನ್ನು ನಿಜವಾದ ಆಂಗ್ಲೇಯರು ತಮ್ಮೊಡನೆ ಸಮವಾಗಿ ಗೌರವಿಸದಿರುವುದು ನಮಗೆ ತಿಳಿದ ವಿಚಾರವಾಗಿದೆ. ಬ್ರಿಟಿಷ್‌ನವರ ಸಾಮ್ರಾಜ್ಯದಲ್ಲಿ [illegible] ನಮ್ಮಗಳಿಗೆ ಯಾವ ದ್ವೇಷಭಾವವೂ ಇಲ್ಲ. ಅವರಾಗಲಿ ಸಂಪೂರ್ಣ ಸ್ವರಾಜ್ಯವಾದಿಗಳಾಗಲಿ ನಮ್ಮ ವೇದಶಾಸ್ತ್ರ ಸಿದ್ಧವಾದ ಮತ ಕಟ್ಟಳೆಗಳನ್ನು ಉಲ್ಲಂಘಿಸಿ ಪರಿಪಾಲಿಸುವರೆಂದು ಸದ್ಯಾಗಿ ಎಳೆದು ಈ ಅಭಿಪ್ರಾಯವನ್ನು ಖಂಡಿಸ ವಿಲ್ಲ. ಅವರು ಆ ಅಭಿಪ್ರಾಯವನ್ನು ಬದಲಾಯಿಸುವವರೆಗೂ ನಾವು ಪ್ರತಿಭಟಿಸವೆವು. ನಮ್ಮ ಕುಲ ಧರ್ಮವನ್ನು ಕಾಪಾಡುವವರೆಗೂ ರಾಜನನ್ನು ಪರಮೇಶ್ವರನೆಂದು ಭಾವಿಸುವೆವು. ಕಾಂಗ್ರೆಸಿನವರಿಂದ ನಮಗೆ ಸಂಭವಿಸುತ್ತಿರುವ ಅನರ್ಥಗಳನ್ನು ತೊಲಗಿಸಬೇಕೆಂದು ದೊರತನದವರನ್ನು ಸಹಸ್ರ ವಿಧಗಳಿಂದ ಪ್ರಾರ್ಥಿಸುತ್ತೇವೆ. ನಮಗೆ ಯಾರ ಮೇಲೂ ದ್ವೇಷವಿಲ್ಲ. ನಮ್ಮ ಧರ್ಮವನ್ನು ನಾವು ಬಿಡುವುದಕ್ಕಾಗಿ ಬರುವುದಿಲ್ಲ. ನಿರ್ಬಂಧವಾಗಿ ರಾಜ್ಯವನ್ನು ನಡೆಸುವಲ್ಲಿ ಅದಕ್ಕೆ ಸ್ವರಾಜ್ಯ ವಾದಿಗಳೇ ಜವಾಬ್ದಾರರಾಗುವರು. ಇಂತಹ ಕೊಂಡರಿಗಳುಂಟಾಗದಂತೆ ಧರ್ಮ ರಕ್ಷಣೆಯಾದ ಪರಮೇಶ್ವರನೂ ಅವನ ರೂಪವಾದ ದೊರತನದವರೂ ಸನಾತನ ಧರ್ಮಪರರನ್ನು ರಕ್ಷಿಸಬೇಕೆಂಬುದೇ ಸನಾತನ ಧರ್ಮಿಗಳ ಅಭಿಪ್ರಾಯವು.

ಆ. ವಿ.

ಭಾರತ ರಾಜಕೀಯದೃಶ್ಯ

(ಲೇ—ಕಡಕುಪ್ಪೆ ಗುರುಪಾದಪ್ಪ ಶ್ರೀ ಜಯದೇವ ಪ್ರೆಸ್, ದಾವಣಗೆರೆ)

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ಸಂಸ್ಥೆಯ ಆರಂಭ ದೆಸೆಯಲ್ಲಿ ಪ್ರಮುಖರು ಕಾರ್ಯನಿರ್ವಹಿಸುತ್ತಿದ್ದು ವರ್ಷ ವರ್ಷವೂ ಇದು ಕಟ್ಟದ ಸೇರುವಂತೆ ವರ್ಧಿಸಿ ಇದರಲ್ಲಿ ಹೊಡೆದಿಗೆ ಅದನ್ನೊಂದು ಸುವ್ಯವಸ್ಥಿತ ಅವಸ್ಥೆಗೆ ತಂದರು. ಸುಮಾರು 25 ವರ್ಷಗಳ ವರೆಗೆ ಆಡಳಿತದ ಗುಣದೋಷಗಳನ್ನು ವಿಮರ್ಶಿಸಿ ಪ್ರಭುತ್ವದವರಿಗೆ ಸಲಹೆಗಳನ್ನು ಕೊಡುವುದರಲ್ಲಿಯೇ ಇದು ತೊಡಗಿತು. ನ್ಯಾಯ ಶಾಖೆಯ ಮತ್ತು ಕಾರ್ಯನಿರ್ವಾಹಕ ಕರ್ತವ್ಯಗಳನ್ನು ವಿಭಾಗಿಸುವುದು, ಸೈನ್ಯದ ಖರ್ಚನ್ನು ಕಡಿಮೆಮಾಡುವುದು, ಶಾಸನ ಸಭೆಗಳ ಸುಧಾರಣೆ, ಪಂಚಾಯತರ ಮೂಲಕ ವಿಚಾರಣೆ, ಲಂಡನ್ನಿನಲ್ಲಿರುವ ಇಂಡಿಯ ಆಫೀಸಿನ ಉಚ್ಚಾಟನೆ, ಐ. ಸಿ. ಎಸ್. ಪರೀಕ್ಷೆಯನ್ನು ಇಂಗ್ಲೆಂಡು ಮತ್ತು ಇಂಡಿಯಾದೇಶದಲ್ಲಿ ಏಕಕಾಲದಲ್ಲಿಯೇ ನಡೆಸುವ ವಿಚಾರವು, ಸೈನ್ಯ ಶಾಖೆಗೆ ದೇಶೀಯರನ್ನು ಸೇರಿಸುವುದು ಮತ್ತು ಅವರನ್ನು ತರಬೇತು ಮಾಡಲು ಸೈನ್ಯ ವಿದ್ಯಾಲಯಗಳನ್ನು ಸ್ಥಾಪಿಸುವುದು, ಆಯುಧ ಶಾಸನ ರದ್ದುಪಡಿಸುವುದು, ದಕ್ಷಿಣ ಆಫ್ರಿಕಾದಲ್ಲಿನ ಭಾರತೀಯರ ಕಷ್ಟನಿವಾರಣೋಪಾಯ, ಉಪ್ಪಿನ ತೆರಿಗೆ, ಪ್ರೌಢ ಮತ್ತು ಪ್ರಾಥಮಿಕ ವಿದ್ಯಾಪ್ರೋತ್ಸಾಹ, ನಾಟು ಸೋಣಿಗರ ಗಡೀಪಾರು ಮುಂತಾದ ಭರತಖಂಡದ ಬಡತನ ನಿವಾರಣೋಪಾಯ, ಪ್ರತ್ಯೇಕ ಚುನಾವಣೆ ಇವೇ ಮೊದಲಾದ ಅಂಶಗಳ ಬಗ್ಗೆ ಪ್ರಭುತ್ವದವರಿಗೆ ಪ್ರಾರ್ಥನಾ ಮೂಲಕ ಸೂಚನೆಕೊಡುವುದೇ ಇದರ ಕಾರ್ಯವಾಗಿದ್ದಿತು. ಇವುಗಳಲ್ಲಿ ಕೆಲವನ್ನು ಕುರಿತು ಸಂದರ್ಭಾನುಸಾರ ಈ ಹಿಂದೆಯೇ ಪ್ರಸ್ತಾಪಿಸಿದೆ. ಉಳಿದವುಗಳ ವಿಚಾರದಲ್ಲಿ ಕೆಲವನ್ನಿಲ್ಲಿ ತಿಳಿಸಲಾಗುವುದು.

ನ್ಯಾಯ ಶಾಖೆ ಮತ್ತು ಕಾರ್ಯನಿರ್ವಾಹಕ ಕರ್ತವ್ಯಗಳನ್ನು ಬೇರೆ ಬೇರೆ ಮಾಡಲು ಒಬ್ಬ ಅಧಿಕಾರಿಯೇ ಇರುತ್ತಾನೆ. ಉದಾಹರಣೆಗಾಗಿ ಜಿಲ್ಲಾಧಿಕಾರಿಗಳನ್ನು ತೆಗೆದುಕೊಳ್ಳೋಣ. ಇವರು ಏಕಕಾಲದಲ್ಲಿಯೇ ಪೋಲೀಸ್ ಅಧಿಕಾರಿಗಳೂ ದಂಡಾಧಿಕಾರಿಗಳೂ ಆಗಿರುತ್ತಾರೆ. ಒಬ್ಬರೇ ಒಂದು ಕಡೆ ಪೋಲೀಸು ಅಧಿಕಾರಿಗಳಾಗಿ ಅಪರಾಧಿ ಶೋಧನೆ ಮಾಡುವುದಾಗಿ ವರ್ಧಿಸುವುದು ಇನ್ನೊಂದು ಕಡೆ ಅವನ ವಿಚಾರಣೆ ತೀರ್ಪುಗಳಿಗಾಗಿ ನ್ಯಾಯಾಧೀಶರಾಗಿ ಕುಳಿತುಕೊಳ್ಳುವುದು ಇದರಿಂದ ಅಪರಾಧಿಗೆ ನ್ಯಾಯ ದೊರೆಯುವುದು ಹೇಗೆ ಸಾಧ್ಯವಾದೀತು? ಪೀಡ್ಯಾದಿಯೇ ನ್ಯಾಯಾಧೀಶನಾಗಿ ಅಪರಾಧಿಗೆ ಶಿಕ್ಷೆ ವಿಧಿಸುವುದನ್ನು ಮನಸ್ಸಿನಿಂದ ತೀರ್ಪುಕೊಡುವುದು ಅಸಂಭವ. ಇದರಿಂದ ಅಪರಾಧಿಗೆ ಬಹು ಅನ್ಯಾಯ ಮಾಡಿದಂತಾಗುತ್ತದೆಯಾದುದರಿಂದ ಮೇಲೆ ಹೇಳಿದ ಎರಡು ಕರ್ತವ್ಯಗಳನ್ನೂ ಬೇರೆ ಬೇರೆ ಅಧಿಕಾರಿಗಳನ್ನು ನಿಯಮಿಸಬೇಕೆಂದು ರಾಷ್ಟ್ರೀಯ ಸಭೆಯು ಬಹುಕಾಲದಿಂದಲೂ ವಿಜ್ಞಾಪಿಸಿಕೊಳ್ಳುತ್ತ ಬಂದಿರುವುದು. ಈ ಪ್ರಾರ್ಥನೆಯಿಂದ ಮುಟ್ಟಿಟ್ಟ ಖರ್ಚು ಬರುತ್ತದೆಂದು ಪ್ರಭುತ್ವದವರು ಹೇಳುತ್ತ ಬಂದಿದ್ದಾರೆ. ಇಂಡಿಯಾ ಸರಕಾರದ ಸೇವೆಯಲ್ಲಿ ದೊಡ್ಡ ಅಧಿಕಾರಿಗಳಾಗಿ ಅನುಭವಿಸಿದ ಎಲ್ಲ ಅನುಭವಗಳಿಂದ [illegible] ಸರ್ [illegible] ಮುಂತಾದವರು [illegible] ಈ ಎರಡು ಕರ್ತವ್ಯಗಳನ್ನು ಬೇರೆ ಬೇರೆ ಮಾಡಿ [illegible] ಹೊಂದಿಸಲಾಗದೆಂದು ಅಭಿಪ್ರಾಯಪಟ್ಟು [illegible] ಶೀಘ್ರದಲ್ಲಿಯೇ [illegible] ಕರ್ತವ್ಯಗಳನ್ನು ಬೇರೆ ಮಾಡಲು [illegible] ತೋರುತ್ತದೆ.

[illegible] ದೇಶೀಯರನ್ನು ಗೌರವ ದಂಡಾಧಿಕಾರಿಗಳನ್ನಾಗಿ [illegible] ಶಾಖೆಯಲ್ಲಿ [illegible] ದಂಡಾಧಿಕಾರಿಗಳನ್ನಾಗಿ (Special Magistrates) ನಿಯಮಿಸಲ್ಪಟ್ಟಿದ್ದಾರೆ.

ಪಂಚಾಯತರ ಮೂಲಕ ವಿಚಾರಣೆ (Trial by Jury) ಬಗ್ಗೆ ಪ್ರತಿಸಲಾದ ಬಹು ಅಪರಾಧಗಳನ್ನು ಆಗಲ ಭಾರತೀಯರಿಗಾಗಿ ರಾಷ್ಟ್ರೀಯ ಸಭೆಯು ಹೋರಾಡುತ್ತ ಬಂದಿರುವುದು. ನ್ಯಾಯಾಸ್ಥಾನದಲ್ಲಿ ನ್ಯಾಯಾಧೀಶರು ತೀರ್ಪುಕೊಡಲು ತಮ್ಮ ಸಹಾಯಕ್ಕಾಗಿ ಸಹಾಯ ಕರಿಗೆ ಪಂಚರನ್ನು ತೆಗೆದುಕೊಳ್ಳುವರು. ಈ ಪಂಚಾಯತ ಪದ್ಧತಿಯು ಐರೋಪ್ಯ ಅಪರಾಧಿಗೆ ಬೇರೆ ತೆರನಾಗಿರುವುದು. ಭಾರತೀಯ ಅಪರಾಧಿಗೆ ಬೇರೆ ತೆರನಾದುದು. ಐರೋಪ್ಯನ, ಅಥವಾ ಬ್ರಿಟಿಷ್ ಪ್ರಜೆ ಇದ್ದರೆ ಪಂಚರಲ್ಲಿ ಕನಿಷ್ಠ ಪಕ್ಷ ಅರ್ಧ ಭಾಗವನ್ನು ಯುರೋಪಿಯನ್ನರು ಇರಬೇಕೆಂದು ಕೇಳಿಕೊಳ್ಳುವ ಹಕ್ಕು ಅವನಿಗಿರುವುದು. ಅಧಿಕಾರಿಗಳ ದೆಸೆಯಿಂದ ಸಂಭವಿಸುವ ಅಪಾಯಗಳಿಂದಲೂ ರಕ್ಷಿತನಾಗಿರುವುದಲ್ಲದೆ, ಜನರ ಉದ್ರೇಕದಿಂದೊದಗುವ ಅಪಾಯಗಳಿಂದಲೂ ರಕ್ಷಣೆಯಾಗಿರುವುದು. ಭಾರತೀಯನ ವಿಚಾರದಲ್ಲಿ ಈ ದೀರ್ಘಕಾಲದ ಐರೋಪ್ಯರಲ್ಲಿಯೂ ಮನೋವಿಕಾರದ ಕಾರಣದಿಂದಾಗಿ ಸಾಕ್ಷಿಗಳನ್ನು ಕಾದಿಡಲಿಲ್ಲವೆಂದೇ ನ್ಯಾಯಬಾಹಿರವಾಗಿ ಇತರ ಜನ ವರ್ಗಗಳ ಕೋಪ ವಿರೋಧಗಳಿಗೆ ಹುತಾತ್ಮ ಪ್ರಾಣಿಯಾಗಿ ಅಪರಾಧಿ ಆದಾಗ್ಯೂ ತನ್ನ ದೇಶೀಯರಿಂದಲೇ ತನಗೆ ಯೋಗ್ಯ ವಿಚಾರಣಾ ಪ್ರಯೋಜನವು ದೊರೆಯಬೇಕೆಂದು ಅವನು ಕೇಳಿಕೊಳ್ಳಲಾಗದು. ಐರೋಪ್ಯರೊಬ್ಬ ಭಾರತದ ಮೂಲಕ ಅವನು ಶಿಕ್ಷೆಗೆ ಗುರಿಯಾಗಲಾರನು. ಏಕೆಂದರೆ ಮನೋವಿಕಾರಕ್ಕೊಳಗಾದವರನ್ನು ವಿಚಾರಣೆಯು ಹತೋಟಿಯಲ್ಲಿಡುವುದು ಅಪರೂಪ. ಇಂತಹ ಸಂದರ್ಭದಲ್ಲಿ ಅಪರಾಧಿಯು ರಕ್ಷಣೆಗೆಂದು ಏರ್ಪಟ್ಟಿರುವ ಪಂಚಾಯತ ವಿಚಾರಣೆಯ ನಿಷ್ಪಕ್ಷಪಾತವಾದ ಪಂಚಾಯತರಿಲ್ಲದಿದ್ದರೆ ಮತ್ತು ಅಪೀಲ್ ಹಕ್ಕಿಲ್ಲದಿದ್ದರೆ ಒಂದು ಪಾಪಿಯ ಬಲಿಯಾಗಿ ಪರಿಣಮಿಸುತ್ತದೆ.

1897 ರಲ್ಲಿ ಪೂನಾದಲ್ಲಾದ ಪ್ಲೇಗಿನ ಗಲಭೆಗಳ ದೆಸೆಯಿಂದ ಬಾಲಗಂಗಾಧರ ಟಿಳಕರು ರಾಜದ್ರೋಹಕ್ಕಾಗಿ ನ್ಯಾಯಾಸ್ಥಾನಕ್ಕೆ ವಿಚಾರಣೆಗೆ ಎಳೆಯಲ್ಪಟ್ಟರು. ಈ ಭಾರತ ಭೂಮಿಯಲ್ಲಿ ಐರೋಪ್ಯರಿಗಿರುವಂತೆ ಭಾರತೀಯರಿಗೂ ಶಾಸನವು ಒಂದೇ ಸಮನಾದ ರಕ್ಷಣೆಯನ್ನು ಕೊಡುವುದಿದ್ದರೆ ಅರ್ಧ ಜನ ಪಂಚಾಯತರು ಭಾರತೀಯರೇ ಇರಬೇಕೆಂದು ಕೇಳಿಕೊಳ್ಳುವ ಹಕ್ಕು ಅವರಿಗಿರುತ್ತಿತ್ತು. ಬೇರೆಯ ಪಂಚಾಯತರಿಂದಲೇ ವಿಚಾರಣೆ ನಡೆಸಲ್ಪಟ್ಟ ಅಪರಾಧವಾದುದರಿಂದ ಈ ದೇಶದಲ್ಲಿರುವವರ ರಾಜಕೀಯ ಸಂಬಂಧವಾದ ಅಪರಾಧವೇ ಆಗಿರುವುದರಿಂದ ದೇಶೀಯರೇ ಪಂಚಾಯತರಾಗಿದ್ದರೆ ಭಾವಾವೇಶವನ್ನು ಚೆನ್ನಾಗಿ ಅರಿತು ಮತ್ತು ಟಿಳಕರು ಬರೆದ ಲೇಖನಗಳ ಉದ್ದೇಶ ಮತ್ತು ಜನರ ಮನಸ್ಸಿನ ಮೇಲೆ ಉಂಟಾಗಬಹುದಾದ ಪರಿಣಾಮ ಇವುಗಳನ್ನು ಚೆನ್ನಾಗಿ ಆಲೋಚಿಸಲು ಶಕ್ತರಾಗುತ್ತಿದ್ದರು. ನ್ಯಾಯಕ್ಕೆ ಇಂತಹ ಸಂದರ್ಭದಲ್ಲಿ ಟಿಳಕರು ಶಿಕ್ಷೆಗೆ ಗುರಿಯಾಗುತ್ತಿರಲಿಲ್ಲ. ಐರೋಪ್ಯರು ಮನೋವಿಕಾರದ ಆಗಿನ ಸಂದರ್ಭದಲ್ಲಿ ಇವರನ್ನು ಶಿಕ್ಷೆಗೆ ಗುರಿಮಾಡತಕ್ಕವರೆ. ಅಧಿಕಾರಸೂತ್ರ ಚಾಲಕರಾದ ಐರೋಪ್ಯರು ತಾವೇ ಹೆಚ್ಚು ಸಂಖ್ಯೆಯುಳ್ಳ ಪಂಚಾಯಿತಿಯನ್ನು ಏರ್ಪಡಿಸುವಂತೆ ಸಾಧಿಸಿಕೊಂಡರು. 6 ಜನ ಐರೋಪ್ಯರೂ 3 ಜನ ದೇಶೀಯರೂ ಉಳ್ಳ ಪಂಚಾಯತಿಯು ಟಿಳಕರನ್ನು ವಿಚಾರಣೆಮಾಡಿ ಬಹುಮತದಿಂದ ಅಂದರೆ 3 ಜನ ದೇಶೀಯರು ವಿರುದ್ಧವಾಗಿ 6 ಜನ ಐರೋಪ್ಯರು ಅವರನ್ನು ಶಿಕ್ಷೆಗೆ ಗುರಿಮಾಡಿದರು. ಇದಕ್ಕೂ ಬಲವಾದ ಇನ್ನೊಂದು ನಿದರ್ಶನಮುಂಟು. ಆಂಗ್ಲೇಯ ನ್ಯಾಯಸ್ಥಾನಗಳಲ್ಲಿ ತರಬೇತು ಹೊಂದಿ ಅನುಭವಗಳಿದ್ದ ಒಬ್ಬ ಸುಪ್ರಸಿದ್ಧ ನ್ಯಾಯಾಧೀಶರು ಒಬ್ಬರೇ ದೇಶೀಯರಿದ್ದ 3 ಜನರ ಪಂಚಾಯಿತಿಯವರು ಇಬ್ಬರ ವಿರುದ್ಧವಾಗಿ 7 ಜನರು ಕೊಟ್ಟ ತೀರ್ಮಾನವನ್ನು ತಿರಸ್ಕರಿಸಿದ್ದರು. ಇದಕ್ಕೂ ಮೇಲೆ ಹೇಳಿದ ಟಿಳಕರ ಮೊಕದ್ದಮೆಗೂ ಇರತಕ್ಕ ವ್ಯತ್ಯಾಸವನ್ನು ನೋಡಿ.

ಶಾಸನ ಸಭೆಗಳ ಉದಯ

ಈ ದೇಶದ ಪ್ರಭುತ್ವಾಧಿಕಾರವನ್ನು ಈಸ್ಟ್ ಇಂಡಿಯ ಕಂಪೆನಿಯವರಿಂದ ವಿಕ್ಟೋರಿಯ ಚಕ್ರವರ್ತಿನಿಯವರು 1858 ರಲ್ಲಿ ವಹಿಸಿಕೊಂಡಾಗ ಲಾರ್ಡ ಪಾಮರ್‌ಸ್ಟನ್‌ರವರು ಇಂಗ್ಲೆಂಡಿನಲ್ಲಿ ಮುಖ್ಯ ಮಂತ್ರಿಗಳಾಗಿದ್ದರು. ಇಲ್ಲಿನ ಆಳ್ವಿಕೆಗಾಗಿ ಒಂದು ಮಸೂದೆಯನ್ನು ರಚಿಸಿ ಪಾರ್ಲಿಮೆಂಟಿನ ಮುಂದೆ ಇಟ್ಟರು. ಭಾರತ ಪ್ರಭುತ್ವಾಧಿಕಾರವು ಭರತಖಂಡದಲ್ಲಿ ಒಬ್ಬ ವೈಸರಾಯ್ ಮತ್ತು ಮಂತ್ರಾಲೋಚನಾ ಸಭೆಗಳಲ್ಲಿಯೂ, ಲಂಡನ್ನಿನಲ್ಲಿ ಸಂಸ್ಥಾನ ಮಂತ್ರಿಗಳ (Secretary of State) ಅಧ್ಯಕ್ಷತೆಯಲ್ಲಿ ನಿಶ್ಚಿತ ಹೊಂದಿದ 8 ಜನ ಭಾರತ ನೌಕರ ಮಂತ್ರಾಲೋಚನಾ ಸಭೆಯಲ್ಲಿಯೂ ಇರತಕ್ಕದ್ದು. ಈ ಎರಡು ಪ್ರತ್ಯೇಕ ಸಂಸ್ಥೆಗಳ ಕಾರ್ಯಕಲಾಪಗಳು ಸಾಮಾನ್ಯರ ಸಭೆಯ ಪುನರ್ವಿಮರ್ಶೆಗೂ ಕಟ್ಟಕಡೆಯ ತೀರ್ಮಾನಕ್ಕೂ ಒಳಪಟ್ಟಿರತಕ್ಕದ್ದು. ಈ ವಿಷಯಗಳನ್ನೊಳಕೊಂಡ ಆ ಮಸೂದೆಯು ಪಿನಾಸ್ ಆಯಿತು. ಇದಕ್ಕೆ ಮುಖ್ಯವಾದ ಆಕ್ಷೇಪಣೆಯೆಂದರೆ ನಮ್ಮ ದೇಶೀಯರ ಪ್ರಾತಿನಿಧ್ಯಕ್ಕೆ ಎಳ್ಳಷ್ಟು ಅವಕಾಶವಿಲ್ಲದಿರುವುದೇ ಆಗಿರುತ್ತದೆ. ಇದೇ ಅಭಿಪ್ರಾಯವನ್ನೇ ಎದುರು ಪಕ್ಷದ ಮುಖಂಡರಾಗಿದ್ದ ಡಿಸ್ರಾಯಿಲಿಯವರು ವ್ಯಕ್ತಪಡಿಸಿ ಜನರ ಕಷ್ಟಸುಖಗಳ ಪರಿಹಾರಕ್ಕೆ ಸಾಧನೋಪಾಯವೇ ಇಲ್ಲವಾದುದರಿಂದ ಆಂಗ್ಲೇಯರ ರಕ್ಷಣೆಯು ಇದನ್ನು ಒಗಗಿಸಿಕೊಡಬೇಕೆಂದು ಅವರು ಹೇಳಿದರು. ಇದೇ ರೀತಿಯಾಗಿ ಪ್ರಾತಿನಿಧ್ಯವಿಲ್ಲದ ಆಳ್ವಿಕೆಯಿಂದ ಇಂಗ್ಲೆಂಡಿನಲ್ಲಿ ಬ್ರೈಟ್ ಸಾಹೇಬರು ಮುಂತಾದವರು [illegible] ಸಾಮಾನ್ಯರ ಸಭೆ (House of Commons) ಯಲ್ಲಿ ಚರ್ಚೆ ಮಾಡಿದರು. ಈ ವಿಚಾರದಲ್ಲಿ [illegible] ಭಾರತೀಯರ [illegible] ಹಕ್ಕುಗಳನ್ನು [illegible] ಬ್ರಿಟಿಷ್ ಸಾಮ್ರಾಜ್ಯದ [illegible] ಈ ಸಭೆಯ ಅಧಿಕಾರವನ್ನು [illegible] ಆದರೆ ಭಾರತೀಯರಿಗೆ ಮಂತ್ರಾಲೋಚನಾ ಸಭೆಯಲ್ಲಿ ಪ್ರತಿನಿಧಿತ್ವವಿರಬೇಕೆಂದು ಹೇಳಲಿಲ್ಲ. [illegible] ಸ್ವಸಂತೋಷದಿಂದ [illegible] ಭಾರತದ [illegible] ಸ್ವಾಮಿನಿಷ್ಠರಾಗಿಯೂ ಇದ್ದ ಸಾವಿರಾರು ಸಭಾಸದರಿಗೆ ಪ್ರಾತಿನಿಧ್ಯವನ್ನು [illegible] ಅದರ ಬಗ್ಗೆ ಅನುಕಂಪವನ್ನು ತೋರಿಸಲಿಲ್ಲ. ತಮ್ಮ ಉದ್ದೇಶ ಸಾಧನೆಗಾಗಿ ಮಂತ್ರಾಲೋಚನಾ ಸಭೆಯ ಚುನಾವಣೆ ಅರ್ಥ ಭಾಗದ ಸದಸ್ಯರಲ್ಲಿ ನಾಲ್ಕರು ಭಾರತೀಯರ ಸಾಮಾನ್ಯ ಮತ್ತು ಸೈನ್ಯ ಶಾಖೆಗಳಲ್ಲಿ 10 ವರ್ಷಗಳ ವರೆಗೆ ಸೇವೆ ಮಾಡಿದವರಾಗಿರಬೇಕು, ಉಳಿದ ಐವರು ಹಿಂದುಸ್ಥಾನ ನಡೆದಿನ 5 ವರ್ಷಗಳಿಂದ ವ್ಯಾಪಾರೋದ್ಯೋಗಗಳಲ್ಲಿ ತೊಡಗಿದವರಾಗಿರಬೇಕು ಎಂದು ವ್ಯವಸ್ಥೆ ಮಾಡಿದರು. ಭಾರತದೇಶದ ಸಾಮಾನ್ಯ ಮತ್ತು ಸೈನ್ಯ ಶಾಖೆಗಳ ಎಲ್ಲ ನೌಕರರೂ ಹಿಂದುಸ್ಥಾನದ ಸೈನ್ಯದಲ್ಲಿ 38000 ರೂ ಗಳನ್ನು ಹಾಕಿರುವ ಮತ್ತು 19000 ರೂ ಬಾಡಿಗೆ ಸರ್ಕಾರದ ಸಾಲ ಪತ್ರಗಳನ್ನುಳ್ಳ ಹಿಂದುಸ್ಥಾನದಲ್ಲಿ ವಾಸಿಸಿಗಳಾಗಿದ್ದವರೂ ಮೊದಲಿನಿಯ ನಾಲ್ಕರನ್ನು ಚುನಾಯಿಸತಕ್ಕದ್ದು. ಉಳಿದ್ದವರನ್ನು ಲಂಡನ್ ಬೆಲ್‌ಫಾಸ್ಟ್, ಲಿವರ್‌ಪೂಲ್ ಗ್ಲಾಸ್ಗೋ ಮತ್ತು ಗ್ಲಾಸ್ಗೊ ಇವುಗಳಲ್ಲಿನ ಪಾರ್ಲಿಮೆಂಟಿನ ವೋಟರುಗಳೇ ಚುನಾಯಿಸತಕ್ಕದ್ದು. ಈ ಮಸೂದೆಯು ಅತಿ ವಿಚಿತ್ರವೆಂದು ತಿಳಿಯಲ್ಪಟ್ಟಿತು. ಏಕೆಂದರೆ ಬೇರೆ ವೋಟರುಗಳ ಹಿತಗಳು ಪರಸ್ಪರ ವಿರುದ್ಧವಾಗಿದ್ದವು. ಅಲ್ಲದೆ ಇವರಲ್ಲೊಬ್ಬರು ತಾವೆಂದೂ ಕಾಣದ ಹಿಂದ ಸ್ಥಾನದ ಹಿತಕ್ಕೆ ಪ್ರತಿನಿಧಿಗಳಾಗಿ ಮಾಡಲ್ಪಟ್ಟರು. ಇದು ತಿರಸ್ಕರಿಸಲ್ಪಟ್ಟು ಕಟ್ಟಕಡೆಗೆ ಹೀಗೆ ತೀರ್ಮಾನವಾಯಿತು.

ಹಿಂದುಸ್ಥಾನ ನ್ಯಾಯವಿಭಾಗ ಮತ್ತು ಆಡಳಿತ ಕಾರ್ಯಗಳು ಹಿಂದುಸ್ಥಾನದಲ್ಲಿ ಒಬ್ಬ ವೈಸರಾಯ ಮತ್ತು ಒಂದು ಮಂತ್ರಾಲೋಚನಾ ಸಭೆಗೆ ವಹಿಸಲ್ಪಟ್ಟಿತು. ಇವರ ಮೇಲೆ ಅಂಕುಶದಂತೆ ಲಂಡನ್ನಿನಲ್ಲಿ 15 ಸದಸ್ಯರ ಸಭೆಯೊಂದು. ಈ ಸಭೆಯು ಒಬ್ಬ ಸಂಸ್ಥಾನ ಮಂತ್ರಿಯ ಮೂಲಕ (Secretary of State) ಬ್ರಿಟಿಷ್ ಮಂತ್ರಿ ಮಂಡಳಿಗೆ ಉತ್ತರವಾದಿಗಳಾಗಿರಬೇಕು. ಇವರ ಮೇಲೆ ಕೊನೆಯ ಅಧಿಕಾರಿಯೆಂದರೆ ಸಾಮಾನ್ಯರ ಸಭೆಯೇ (House of commons) ಇತ್ಯಾದಿ. ಈ ಪ್ರತಿಪಾದನೆ ಮಾಡುತ್ತ ಬಂದುದರ ಉದ್ದೇಶವೆಂದರೆ ಆಡಳಿತಗಾರರಿಗೆ ಅವರು ಯಾರೇ ಇರಲಿ ಒಂದು ವಿಶಿಷ್ಟ ಸ್ಥಾನವನ್ನೂ, ಒಂದು ಬಗೆಯ ಅಂಕುಶವೆಂಬುದು ಇರುವುದು ಅಗತ್ಯವೆಂದು ನಮ್ಮ ದೇಶೀಯರು ಹೇಳುತ್ತ ಬಂದಿರುವಂತೆ ಇಂಗ್ಲೆಂಡಿನಲ್ಲಿ ಜನರು ತಿಳಿದಿದ್ದರೆಂದು ತೋರಿಸುವುದೇ ಆಗಿರುವುದು. ಆದಾಗ್ಯೂ ಅವರ ಈ ಸದುದ್ದೇಶವು ಸರಿಯಾಗಿ ನೆರವೇರುತ್ತಿದೆಯೋ ಇಲ್ಲವೋ ಎಂಬುದನ್ನು ಎಚ್ಚರದಿಂದ ನೋಡಿಕೊಳ್ಳುವ ಕಷ್ಟವನ್ನು ಅವರು ವಹಿಸಲಿಲ್ಲ. ಹಿಂದುಸ್ಥಾನ ಪ್ರಭುತ್ವವು ನಿರಂಕುಶವಾಗಿ ನಡೆಯುತ್ತ ಹೋಯಿತು. ಇಂತಹ ಅನ್ಯಾಯ್ಯ ಸ್ಥಿತಿಯನ್ನು ಸುಧಾರಿಸಲು ದೇಶ ಹಿತೈಷಿಗಳೂ ಸಹೃದಯರಾದ ಆಂಗ್ಲೇಯರೂ ಪದೇಪದೇ ಆಂದೋಳನ ನಡೆಸುತ್ತ ಬಂದರು.

ಭಾರತ ಪ್ರಭುತ್ವವು ಆಡಳಿತಕ್ಕೆ ಬೇಕಾದ ಕಾರ್ಯಗಳನ್ನು ಆರಂಭಿಸುವ ಅಧಿಕಾರವುಳ್ಳದ್ದು. ಲಂಡನ್ನಿನ ಮಂತ್ರಾಲೋಚನಾ ಸಭೆಯು ಈ ಕಾರ್ಯಗಳನ್ನು ವಿಮರ್ಶೆಮಾಡುವ ಅಧಿಕಾರವುಳ್ಳದ್ದು. ಸಾಮಾನ್ಯರ ಸಭೆಯು ಕಟ್ಟಕಡೆಯ ತೀರ್ಮಾನವನ್ನು ಕೊಡುವ ಅಧಿಕಾರವುಳ್ಳದ್ದು. ಮೇಲೆ ಹೇಳಿದ ಶಾಸನವು ಭರತಖಂಡದ ಮೇಲೆ ಈ ಬಗೆಯ ಮೂವರು ಅಧಿಕಾರಿಗಳನ್ನು ಏರ್ಪಡಿಸಿತು. ಒಬ್ಬರ ಮೇಲೆ ಒಬ್ಬರು ಅಂಕುಶ ರೂಪವಾಗಿರಲಿ. ಇದರಿಂದ ಆಡಳಿತವು ಜನರಿಗೆ ಹಿತಕರವಾಗಿರಬೇಕೆಂಬುದೇ ಆಶಯವು. ಆದರೆ ರೂಢಿಯಲ್ಲಿ ಇದು ಪರಿಣಮಿಸಲಿಲ್ಲ. ಭರತಖಂಡದಲ್ಲಿ ಅಧಿಕಾರಮಾಡಿ ನಿವೃತ್ತರಾದವರು ಲಂಡನ್ನಿನ ಸಭೆಗೆ ಸದಸ್ಯರಾಗುತ್ತಿದ್ದರು. ಭರತಖಂಡದ ಬಗ್ಗೆ ಇವರಿಗೆ ತಕ್ಕಷ್ಟು ತಿಳುವಳಿಕೆ ಇರುವುದರಿಂದ ಇವರಿಂದ ಪ್ರಯೋಜನವಾದೀತೆಂದು ನಿಯಮಿಸಲ್ಪಡುತ್ತಿದ್ದರು. ಆದರೆ ಇಲ್ಲಿನ ನಿರಂಕುಶಾಡಳಿತದಲ್ಲಿ ಸ್ವೇಚ್ಛಾ ವಿಹಾರಿಗಳಾಗಿ ಬೆಳೆದ ಇವರು ಜನಹಿತಕ್ಕೆ ಲಕ್ಷ್ಯ ಕೊಡದೆ ನಡೆಯುತ್ತಿದ್ದರು.

ಬಿ. ಎಲ್. ಕಾಡಾದಿಯವರ ವೀರಶೈವ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೋತ್ಸವ

ಸೊಲ್ಲಾಪುರದ ವೀರಶೈವರಲ್ಲಿ ಗಣ್ಯರೂ ಒಳ್ಳೇ ಶ್ರೀಮಂತರೂ ವೀರಶೈವ ವಿದ್ಯಾರ್ಥಿಗಳ ಸಹಾಯಕರೂ ಆಗಿದ್ದ ಕೈ|| ಬಂಡಪ್ಪ ನಾಗಪ್ಪ ಕಾಡಾದಿಯವರ ಸಂತತಿಯಲ್ಲಿ ಅವರ ಮಕ್ಕಳುಗಳಾದ ಮ|| ನಾಗಪ್ಪ ಬಂಡಪ್ಪ ಕಾಡಾದಿ ಸಹೋದರರು ತಮ್ಮ ತಂದೆಯವರ ಸ್ಮಾರಕವಾಗಿ ಅವರ ಹೆಸರಿನ ಮೇಲೆ ವೀರಶೈವ ವಿದ್ಯಾರ್ಥಿ ನಿಲಯವನ್ನು ಕಟ್ಟಿಸುವುದಕ್ಕಾಗಿ ಸರ್ಕಾರದವರಿಂದ ಎರೆದುಕೊಂಡಿರುವ ಜಮೀನಿನಲ್ಲಿ ಶಂಕುಸ್ಥಾಪನೆಯನ್ನು ಕಳೆದ ತಾ|| 7 ನೆಯ ಸೋಮವಾರ ಮುಂಬಯಿ ಗೌರ್ನರರಾದ ಮಹಾರಾಜಾಧಿರಾಜ ಸರ್ ಫ್ರೆಡರಿಕ್ ಸೈಕ್ಸ್‌ರವರು ಮಾಡಿದರು. ಈ ಸಮಾರಂಭಕ್ಕೆ ಸ್ಥಳ ಪರಸ್ಥಳಗಳ ಸರ್ಕಾರಿಯಧಿಕಾರಿಗಳು, ವರ್ತಕರು ಗಣ್ಯ ವರ್ತಕರುಗಳು ಮೊದಲಾದವರು ಸಾವಿರಾರು ಮಂದಿಯ ವರೆಗೆ ನೆರೆದಿದ್ದರು. ಆ ಕಾಲದಲ್ಲಿ ಮ|| ನಾಗಪ್ಪ ಬಂಡಪ್ಪ ಕಾಡಾದಿಯವರು ಗೌರ್ನರವರಿಗೆ ಒಪ್ಪಿಸಿದ ವಿನಂತಿ ಪತ್ರಿಕೆಯೂ, ಅದಕ್ಕೆ ಗೌರ್ನರರ ಉತ್ತರವೂ ಈ ಕೆಳಗೆ ಕೊಡಲ್ಪಟ್ಟಿವೆ.

ಗೌರ್ನರಿಗೊಪ್ಪಿಸಲ್ಪಟ್ಟ ವಿನಂತಿ ಪತ್ರಿಕೆ

ಮಹನೀಯ ಗೌರ್ನರ್ ಸಾಹೇಬರೆ,

ನಮ್ಮ ತಂದೆಯವರ ಸ್ಮಾರಕವಾಗಿ ಕಟ್ಟಲ್ಪಡುವ ಬಿ. ಎಲ್. ಕಾಡಾದಿ ವೀರಶೈವ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೋತ್ಸವ ಸಮಯದಲ್ಲಿ ನಾನು ಅತ್ಯಾನಂದದಿಂದ ತಮ್ಮ ಸುಸ್ವಾಗತವನ್ನು ಬಯಸುತ್ತೇನೆ. ತಾವು ಕೊಂಡಿರುವ ಕಾರ್ಯಭಾರದ ಮಧ್ಯದಲ್ಲಿ ಆಯಾಸದ ಆವಶ್ಯಕತೆಯಿದ್ದರೂ ಲಕ್ಷಿಸದೆ ನಮ್ಮ ಆಮಂತ್ರಣವನ್ನು ಅಂಗೀಕರಿಸಿ ದಯಮಾಡಿಸಿದ್ದಕ್ಕಾಗಿ ತಮ್ಮನ್ನು ನಾವು ವಂದಿಸುತ್ತೇವೆ.

ಮುಂಬಯಿ ಪ್ರಾಂತದಲ್ಲಿರುವ ನಮ್ಮ ವೀರಶೈವ ಸಮಾಜವು ವಿದ್ಯೆಯಲ್ಲಿ ಹಿಂದುಳಿದಿರುವುದರಿಂದ ಅದರ ಅಭಿವೃದ್ಧಿಗೆ ಚೆನ್ನಾಗಿ ಬೇಕಾಗಿರುವುದೆ. ಈ ದಿಕ್ಕಿನಲ್ಲಿ ಸರ್ಕಾರದ ನಾನಾ ಪ್ರಯತ್ನಗಳು ಹೆಚ್ಚಾಗಿದ್ದು ವ್ಯಾಪಾರದಲ್ಲಿ ಮುಂದುವರಿದವರಾಗಿದ್ದರೂ, ಪ್ರತ್ಯೇಕ ನಾಗರಿಕ ವಿದ್ಯಾರ್ಜನೆಯಲ್ಲಿ ಎಂದಿಗೂ ಹಿಂದುಳಿದಿರುತ್ತೇವೆ. ನಮ್ಮ ತಂದೆಯವರಾದ ಕೈಲಾಸವಾಸಿ ಬಂಡಪ್ಪ ಕಾಡಾದಿಯವರು, ಈಗಿನ ಸ್ವದೇಶಿಯ ಕಾಲದಲ್ಲಿ ಐವತ್ತು ವರ್ಷಗಳ ಹಿಂದೆಯೇ ನಮ್ಮ ಸಮಾಜದ ಏಳಿಗೆಗೆ ಉಂಟಾಗಿ ಆವಶ್ಯಕತೆಗಳನ್ನು ಅರಿತು ಸ್ವಜನ ವಿದ್ಯಾಭಿವೃದ್ಧಿಗಾಗಿ ತಮ್ಮ ಮರಣಾನಂತರ ಬಹಳ ಕಾಲವರೆಗೂ ನಮ್ಮ ಸಮಾಜದಲ್ಲಿ ಮುಂದುವರಿಯುವ ಚಿಕ್ಕ ಹುಡುಗರು ಶಾಲೆಗಳಿಂದ ವಿದ್ಯಾಭ್ಯಾಸವನ್ನು ಮಾಡಲು ಸೌಲಭ್ಯ ಮಾಡಿಕೊಡಬೇಕೆಂದು [illegible]

ಮಕ್ಕಳಿದ್ದ ರಮಣಿ ಚಂದ.

ಮಕ್ಕಳಿಲ್ಲೆಂದು | ಬಂಜೆತನದಿಂದ ಮುಕ್ತರಾಗುವಿರಿ | ಚಿಂತಿಸಬೇಡಿ

ಗರ್ಭಧಾರಣಾ ಸಂಜೀವಿನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಪ್ರಾಪ್ತಿ ಆಗುವದು. ೯ ಗುಳಿಗೆಗಳ ಕಿ. ೩ ರೂಪಾಯಿ ಟ. ಖ. ೫ ಆಣೆ

ಪತ್ತೆ—ವೈದ್ಯ ವಿ. ಎಸ್. ಕಾಪಸೆ. ಮಿರಜ

ಸೋಲ್ಲಾಪುರದಲ್ಲಿ ತಮ್ಮ ಮತಧರ್ಮಗಳಿಗೆ [illegible]

ಗೌರವರವರ ಉತ್ತರ

[illegible]

ಪತ್ರವ್ಯವಹಾರ.

ಪತ್ರವ್ಯವಹಾರದ ಲೇಖನಗಳಿಗೆ [illegible] ಸಂಪಾದಕ

ಶ್ರೀಯುತ ಎಂ ವಿ ಶಾಂತಪ್ಪಸೆಟ್ಟರ ಧರ್ಮಪ್ರಸಂಗ [illegible]

[illegible]

ಆದರ್ಶಪ್ರಾಯರಾದ ಧರ್ಮಗುರುಗಳು.

ಅಸ್ಪೃಶ್ಯತಾನಿವಾರಣೆ ಮತ್ತು [illegible]

[illegible]

ದಾವಣಗೆರೆ ತಾ. 16-11-32 — ಕಾರ್ಯದರ್ಶಿ, ಪ್ರಾಣಿದಯಾ ಧರ್ಮಪ್ರಸಾರಕ ಸಂಘ

ನಾರಿನಮೇಲ್ ರಾಮಬಾಣ

ಮೂರು ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವುದಿಲ್ಲ ನಾರಿನವರು ಜರೂರತರಿಸಿ ಕೊಳ್ಳಿರಿ. ಕಿ. ೧ ರೂ [illegible] ಆಣೆ.

ಪತ್ತಾ ವೈದ್ಯ [illegible] ಮಿರಜ

M C

೧೯೩೨ ನೆಯ ಇಸವಿ ನವೆಂಬರ್ ತಾ ೨೧ ರಿಂದ ನವೆಂಬರ ತಾ ೨೭ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗೀರಸ ನಾಮಸಂವತ್ಸರದ ಕಾರ್ತಿಕ ಬಹುಳ ಅಷ್ಟಮಿಯಿಂದ ಕಾರ್ತಿಕ ಬಹುಳ ಚತುರ್ದಶಿ ವರೆಗಿನ ಪಂಚಾಂಗ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಶ್ಚಿಕ ಮಾಸ
21	1 ಸೋಮ	ಅಷ್ಟ	32 25	ಮಘ	59 7	7
22	2 ಮಂಗಳ	ನವ	30 0	ಪುಬ್ಬ	38-10	8
23	ಬುಧ	ದಶ	26 21	ಉತ್ತ	36 1	9
24	ಗುರು	ಏಕಾ	22 1	ಹಸ್ತ	33 18	10
25	3 ಶುಕ್ರ	ದ್ವಾದ	16 56	ಚಿತ್ತ	35 14	11
26	ಶನಿ	ತ್ರಯೋ	11-26	ಸ್ವಾತಿ	26 52	12
27	ಭಾನು	ಚತು	6-34-54-4	ವಿಶಾ	21 40	13

(1) ಕಾರ್ತಿಕ ಸೋಮವಾರ (2) ಮಳೆನಕ್ಷತ್ರ ಅನೂರಾಧ ೨ ನೆಯ ಪಾದ (3) ಮಳೆನಕ್ಷತ್ರ ಅನೂರಾಧ ೩ ನೆಯಪಾದ.

ಮೈಸೂರು [illegible] ಅವರಿಂದ ಶ್ರೀ [illegible] ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರ[illegible]

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

[illegible]

[ಸ್ಥಳದವರಿಗೆ ವಾರ್ಷಿಕ ಚಂದಾ ೧-೧೦-೦] [ಪರಸ್ಥಳದವರಿಗೆ ೩-೮-೦] [ಬಿಡಿಪ್ರತಿಗೆ ೦-೨-೦]

ಸಂಪುಟ ೪೫] ಮೈಸೂರು ಸ್ಟಾರ್ ಸನ್ ೧೯೩೨ ನೆಯ ಇಸವಿ ನವಂಬರ್ ತಾರೀಖು ೨೮ ನೆಯ ಸೋಮವಾರ [ಸಂಚಿಕೆ ೪೮

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death.

The best, safest, cheapest, most profitable and most convenient place of Insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries Economic Superintendents, Helpers and the Insurance Office, Public Office Buildings Bangalore.

(Sd.) S. SHAMANNA,
Secretary, Insurance Committee.

[60—21]



[60—4]

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ಗ.ವಿ. ಸೇರಿ.
[illegible]	೦—೧೨—೦	೧—೨—೦
[illegible]	೦—೮—೦	೦—೧೪—೦
[illegible]	೦—೪—೦	೦—೬—೦
[illegible]	೦—೫—೦	೦—೧೦—೦
[illegible]	೦—೪—೦	೦—೬—೦
ನೃಪಸಂಚಯ	೦—೪—೦	೦—೬—೦
[illegible]	೦—೧—೦	೦—೬—೦
[illegible]	೦—೪—೦	೦—೧೪—೦
[illegible]	೦—೮—೦	೦—೧೪—೦
[illegible]	೧—೦—೦	೧—೪—೦

ಡಾಕ್ಟರ್ ಜೇ. ಬೀ. ಯವರ
ಸುಗಂಧ ನಶ್ಯದ ಪುಡಿ.

[illegible]

(Registered Trade Mark)

[illegible]

ನಿರ್ಮಾಪಕ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್.

[60— [illegible]

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಸ್ಸಿಗೆ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ಪಪ್ಪಾಂಗ ಸುಂದರಪಾಕದ. [ಸ್ಟರ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

[illegible]

ಸ್ತ್ರೀರೋಗ ನಿವಾರಣೀ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

[೫೦—೪೮]

ಡಾ. ವಿ. ಎಸ್. ಕಾಪಸೆ, [illegible]

ಮೈಸೂರು ಸ್ಟಾರ್

ಸೋಮವಾರ ೧೯೩೨ನೇ ಇಸವಿ ನವಂಬರ್ ೨೮ನೇ ತಾರೀಖು

ALLAHABAD CONFERENCE AND AFTER

We had referred to in our last issue, to the agreement reached at by the Unity Conference and its acceptance by the leaders of the Hindus, Muslims and the Sikhs. It is gratifying also to note that Moulana Shaukat Ali and Dr. Ansari representing two schools of thought among the Muslims have given their hearty approval to the settlement. It is true that the reported agreement has yet to be endorsed in a plenary session of both the Hindus, Muslims and the Sikhs. It is most unwise and unpatriotic that efforts should be made at this critical juncture in the history of India to repudiate such an agreement without giving a chance of its acceptance at the hands of the proposed All parties Conference. One such wrong step is that of the meeting convened by Sir Mahomed Yakub and others of his out-look. Hasty resolutions have been passed repudiating the agreement as being injurious to the Muslim interests. If the press reports are correct we gather that others of different thinking were given no chance whatever to place their views in support of the Allahabad agreement. Thus one need not attach much importance to those out bursts of communal rancour and attempts at mischievous propaganda. We also smell that some unseen hand is at the back of this move to widen the gulf that had been so wisely bridged at Allahabad. It is regrettable also that the R. T. C. delegates are reticent over the agreement and have not taken this opportunity to support the agreement and get it endorsed by the Cabinet. It requires all the resources of statesman-ship when the constitution making is on the anvil to get the conclusions of the Unity Conference embodied in the constitution. We earnestly hope that the R. T. C. delegates will rise to the occasion and save the country from the throes of communal upheaval.

ಅಲಹಾಬಾದು ತೀರ್ಮಾನಾನಂತರ

ಅಲಹಾಬಾದಿನಲ್ಲಿ ನೆರೆದಿದ್ದ ಹಿಂದು ಮಹಮ್ಮದೀಯ ಮುಖಂಡರುಗಳ ಸಖ್ಯ ಸಮ್ಮೇಳನದಲ್ಲಾದ ತೀರ್ಮಾನವು ಸರ್ವಸಮ್ಮತವೂ ಆಹ್ಲಾದಕರವೂ ಆಗಿರುವುದರಿಂದ ಆ ಸಮ್ಮೇಳನವನ್ನು ಸೇರಿಸಲು ಪ್ರಯತ್ನಪಟ್ಟ ಮೌಲಾನಾ ಷೌಕತಾಲಿಯವರಿಗೂ, ಪಂಡಿತ ಮದನಮೋಹನ ಮಾಳವೀಯರವರಿಗೂ ಬಿನ್ನ ಮತದವರ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಿ ಸರ್ವಸಮ್ಮತವಾದ ತೀರ್ಮಾನವನ್ನು ಮಾಡಲು ತಮ್ಮ ದೀರ್ಘ ರಾಜಕೀಯಾನುಭವವನ್ನೂ, ಚಾತುರ್ಯವನ್ನೂ ವ್ಯಕ್ತಪಡಿಸಿದ ಶ್ರೀ ವಿಜಯ ರಾಘವಾಚಾರ್ಯ ಪ್ರಭೃತಿಗಳಿಗೂ ಎಲ್ಲ ವರ್ಗಗಳ ನಾಯಕರುಗಳಿಂದಲೂ, ಸಂಘಗಳವರಿಂದಲೂ, ಭಾರತ ಹಿತಚಿಂತಕರ ವಿದೇಶೀಯರುಗಳಿಂದಲೂ ಧನ್ಯವಾದಗಳು ಅರ್ಪಿಸಲ್ಪಟ್ಟವು. ಸಮ್ಮೇಳನವು ನಡೆಯುತ್ತಿರುವ ವೇಳೆಯಲ್ಲಿ ಅನಿವಾರ್ಯ ಕಾರ್ಯ ಗೌರವದಿಂದ ಸೀಮೆಗೆ ಪ್ರಯಾಣಮಾಡಿದ ಷೌಕತಾಲಿಯವರು ತಾವು ಸಾಹಸಪಟ್ಟು ಏರ್ಪಡಿಸಿದ ಸಖ್ಯ ಸಮ್ಮೇಳನವು ಯಶಸ್ವಿಯಾಗಿ ನಡೆದು ಅನುಕೂಲವಾದ ತೀರ್ಮಾನವಾಗಿರುವುದು ತಮಗೂ ತಮ್ಮ ಪಕ್ಷಕ್ಕೆ ಸೇರಿದ ಬಹು ಸಂಖ್ಯಾತ ಮಹಮ್ಮದೀಯರಿಗೂ ಮಹಾ ಸಂತೋಷ ಪ್ರದವಾಗಿರುವುದೆಂದೂ, ಭಾರತೀಯರ ಸ್ವರಾಜ್ಯಸಾಧನ ಪ್ರಯತ್ನಕ್ಕೆ ಅನುಕೂಲವಾಗಿರುವುದೆಂದೂ ತಿಳಿಸಿ ಇರಲ್ಲದೆ, ಡಾಕ್ಟರ್ ಅನ್ಸಾರಿಯವರೂ ಆ ತೀರ್ಮಾನದಿಂದ ತಮಗುಂಟಾಗಿರುವ ಸಂತೋಷವನ್ನು ಸೂಚಿಸಿರುವರು. ಈ ತೀರ್ಮಾನವು ಸರ್ವ ಭಾರತೀಯರಿಂದಲೂ ಅನುಮೋದಿಸಲ್ಪಡುವುದೆಂದು ತಿಳಿದಿದ್ದಾರೆ. ಆದರೆ ಸರ್ ಮಹಮದ್ ಯಾಕೂಬರವರೂ ಅವರ ಅಭಿಪ್ರಾಯಾನುಸಾರರೂ ಸೇರಿ ಬೇರೊಂದು ಸಭೆಯನ್ನು ನಡೆಸಿ ಅಲಹಾಬಾದು ತೀರ್ಮಾನವನ್ನು ಸಮರ್ಥಿಸಿ ಮಾತನಾಡುವವರಿಗೆ ಅವಕಾಶವನ್ನು ಕೊಡದೆ ಅದನ್ನು ಖಂಡಿಸಿರುವುದಲ್ಲದೆ ತಾವು ಸಮ್ಮತಿಸುವುದಿಲ್ಲವೆಂದು ನಿರ್ಧರಿಸಿರುವರು. ಆ ತೀರ್ಮಾನವು ಬರುವ ಡಿಸೆಂಬರು ತಿಂಗಳಲ್ಲಿ ನಡೆಯುವ ಸರ್ವಪಕ್ಷ ಸಮ್ಮೇಳನದಲ್ಲಿ ಅನುಮೋದಿತವಾಗದಂತೆ ಮಾಡಲು ಸಾಹಸಪಡುತ್ತಿರುವುದು ಬಹಳ ಶೋಚನೀಯವಾಗಿರುತ್ತದೆ. ಇಂತಹ ವಿಘ್ನಸಂತೋಷಿಗಳ ಮಹಮ್ಮದೀಯರ ಸಾಧನ ಪ್ರಯತ್ನಕ್ಕೆ [illegible] ಗಮನಕೊಡುವುದಿಲ್ಲ. ಈ ದುಷ್ಟ ಪ್ರಯತ್ನವನ್ನು ಕೆಲವು ಆಂಗ್ಲೋ ಇಂಡಿಯನ್ ಪತ್ರಿಕೆಗಳು ಪ್ರೋತ್ಸಾಹಿಸಿ ಹಿಂದು ಮಹಮ್ಮದೀಯರ ಐಕ್ಯಪ್ರಯತ್ನವು ನಿರರ್ಥಕವಾಗಿ ಹಿಂದಿನಂತೆ ಕಲಹವು ಪ್ರಬಲಿಸುವಂತೆ ಮಾಡುತ್ತಿರುವುದಾಗಿ ತಿಳಿಯಬರುತ್ತದೆ. ರೌಂಡು ಟೇಬಲು ಸಭೆಗೆ ಹೋಗಿರತಕ್ಕ ಪ್ರತಿನಿಧಿಗಳು ಅಲಹಾಬಾದು ತೀರ್ಮಾನದ ವಿಚಾರದಲ್ಲಿ ಬಹಳ ಮೌನವನ್ನು ವಹಿಸಿರುವುದೇ ಪಕ್ಷ ಇದನ್ನು ಮಂತ್ರಿ ಮಂಡಲದವರು ಅಂಗೀಕರಿಸುವಂತೆ ಮಾಡಲು ಯಾವ ಪ್ರಯತ್ನವನ್ನೂ ನಡೆಸದೆ ಮೌನದಿಂದಿರುವುದು ಬಹು ಖೇದಕರವಾಗಿದೆ. ರಾಜ್ಯಾಂಗ ರಚನೆಯಲ್ಲಿ ಅಲಹಾಬಾದು ಸಖ್ಯ ಸಮ್ಮೇಳನದೊಳಗಾದ ತೀರ್ಮಾನಾಂಶಗಳೂ ಗರ್ಭಿತವಾಗುವಂತೆ ರಾಜ್ಯಾಂಗರಚನೆಯ ವೇಳೆಯಲ್ಲಿ ಮಂತ್ರಿ ಮಂಡಲದವರನ್ನೊಪ್ಪಿಸಲು ರಾಜನೀತಿ ಪ್ರೌಢಿಮೆಗೆ ತಕ್ಕ ಉಪಾಯಗಳನ್ನೆಲ್ಲ ವಿನಿಯೋಗಿಸಬೇಕಾಗಿರುವುದು. ಆದುದರಿಂದ ರೌಂಡುಟೇಬಲು ಸಭೆಯ ಭಾರತ ಪ್ರತಿನಿಧಿಗಳು ಎಚ್ಚೆತ್ತುಕೊಂಡು ಭಾರತದೇಶವನ್ನು ಮತ ವೈಷಮ್ಯದಿಂದುಂಟಾಗಿರುವ ಅನೈಕ್ಯ ಸಂಕಟದಿಂದ ಪಾರುಮಾಡಲು ಸಹಾಯಕರಾಗುವರೆಂದು ನಿರೀಕ್ಷಿಸುತ್ತೇವೆ. ಅಲಹಾಬಾದು ತೀರ್ಮಾನಾನುಮೋದನಕ್ಕಾಗಿ ಸರ್ವಪಕ್ಷ ಸಮ್ಮೇಳನವು ಬರುವ ಡಿಸೆಂಬರು ತಾ॥ 3ರಲ್ಲಿ ನಡೆಯಬೇಕೆಂದಿದ್ದುದು, ಇಪ್ಪ ಕೆಲರ ಕೋರಿಕೆಯ ಪ್ರಕಾರ ಡಿಸೆಂಬರು ತಾ॥ 18 ರಲ್ಲಿ ನಡೆಯಲು ಗೊತ್ತಾಗಿರುವುದು.

ಜಗದ್ಗುರು ಶಂಕರಾಚಾರ್ಯರೂ ಅಸ್ಪೃಶ್ಯತೆಯೂ

ಕುಂಭಕೋಣದ ಶ್ರೀ ಜಗದ್ಗುರು ಶಂಕರಾಚಾರ್ಯರು ಅಸ್ಪೃಶ್ಯತೆಯು ಇದ್ದೇ ತೀರಬೇಕೆಂಬ ಬಗೆಗೆ ಶಾಸ್ತ್ರಾಧಾರವನ್ನು ಉದಹರಿಸಿ ಒಂದು ದೀರ್ಘವಾದ ಲೇಖನವನ್ನು ಮಹಾತ್ಮರಿಗೆ ಬರೆದಿರುವುದಾಗಿ ತಿಳಿಯಬರುತ್ತದೆ.

ಬಿಳೀ ಆನೆ

ತಿರುವಾಂಕೂರು ಸಂಸ್ಥಾನದ ಕಾಡುಗಳೊಂದರಲ್ಲಿ ಬಿಳೀ ಆನೆಯು ಕಾಣಿಸಿಕೊಂಡಿತೆಂದು ಅಟವಿ ಶಾಖೆಯವರು ಪ್ರಭುತ್ವದವರಿಗೆ ತಿಳಿಸಿದುದರ ಮೇಲೆ ಅದನ್ನು ಕೊಲ್ಲದೆ ಸಾಹಸಪಟ್ಟು ಅದನ್ನು ಹಿಡಿಯಬೇಕೆಂದು ಅಪ್ಪಣೆಮಾಡಿರುವುದಾಗಿ ಪ್ರಕಟವಾಗಿದೆ.

ಸಂಸ್ಥಾನಾಧೀಶರಿಗೆ ಬ್ರಿಟಿಷರ ಸಂಬಂಧವು ಮುಖ್ಯ

ಕಳೆದ ತಾ॥ 14ರಲ್ಲಿ ಲಂಡನ್ನಿನ ಪಾರ್ಲಿಮೆಂಟು ಭವನದಲ್ಲಿ ನೆರೆದಿದ್ದ ಈಸ್ಟ್ ಇಂಡಿಯನ್ ಅಸೋಸಿಯೇಷನ್ ಇಂಡಿಯಾ ಕಮಿಟಿಯವರ ಸಭೆಯಲ್ಲಿ ನವನಗರದ ಮಹಾರಾಜರು ಫೆಡರೇಷನ್ ಕುರಿತು ಭಾಷಣ ಮಾಡುವಾಗ್ಗೆ "ಭಾರತದೇಶೀಯ ಸಂಸ್ಥಾನಾಧಿಪತಿಗಳಿಗೆ ಸಮಯೋಚಿತವಾದ ರಕ್ಷಣೆಗಳು ಶಾಸನದಲ್ಲಿ ಸೇರಿಸಲ್ಪಟ್ಟರೆ ಮಾತ್ರ ಅವರುಗಳು ಫೆಡರೇಷನ್ನಿಗೆ ಅಂಗೀಕರಿಸುವರು" ಎಂದು ಹೇಳಿದರು.

ರೈಲ್ವೇ ಅಪಘಾತ

ಗ್ರೇಟ್ ಬ್ರಿಟನ್ನಿಗೆ ಸೇರಿದ ವಾಟ್‌ಫೋರ್ಡ್ ಎಂಬಲ್ಲಿ ಕೂಲಿ ಆಳುಗಳು ರೈಲು ಮಾರ್ಗವನ್ನು ಸರಿಪಡಿಸುತ್ತಿರುವಾಗ್ಗೆ ಇಂಜನ್ನಿನ ಹೊಗೆಯು ಬೈಲಿನಲ್ಲಿ ಆವರಿಸಿಕೊಂಡಿದ್ದುದರಿಂದ ಇನ್ನೊಂದು ಬಂಡಿಯು ರಭಸವಾಗಿ ಬರುತ್ತಿದ್ದುದು ಕೆಲಸಗಾರರಿಗೆ ಕಾಣಿಸದಿಲ್ಲವಾಗಿ ಅವರುಗಳಲ್ಲಿ ಕೆಲರು ಬಂಡಿಗೆ ಸಿಕ್ಕಿ 6 ಮಂದಿ ತುಂಡುತುಂಡಾಗಿ ಕತ್ತರಿಸಿ ಹೋದರು. ಉಳಿದವರು ಪೂರಾ ಅಪಾಯವನ್ನು ಹೊಂದಿದರು.

ಆರ್. ಟಿ. ಸಭಿಕರಿಗೆ ಔತಣ

ರೌಂಡುಟೇಬಲು ಸಭಿಕರುಗಳಿಗೆ ಲಂಕಾಸ್ಟರು ಭವನದಲ್ಲಿ ಪ್ರಭುತ್ವದವರಿಂದ ಔತಣವು ಮಾಡಿಸಲ್ಪಟ್ಟಿತು. ಈ ಔತಣಕ್ಕೆ ಮಂತ್ರಿಮಂಡಲದವರು ರಾಜನೀತಿ ವಿಶಾರದರು ನಾನಾ ಸಂಘಗಳ ನಾಯಕರು ವಿದ್ಯಾ ಪಂಡಿತರು, ಮತ ಗುರುಗಳು ಮೊದಲಾದವರು 1000 ಮಂದಿ ವರೆಗೆ ಆಹ್ವಾನಿಸಲ್ಪಟ್ಟಿದ್ದರು. ಈ ಅತಿಥಿಗಳನ್ನೆಲ್ಲ ಮುಖ್ಯ ಮಂತ್ರಿ ಮೆಕ್ಡೊನಾಲ್ಡರವರು ಸ್ವಯಮಾಗಿ ಸನ್ಮಾನಿಸಿ ಮಾತನಾಡಿಸಿದರು.

ಅಸ್ಪೃಶ್ಯರ ದೇವಾಲಯ ಪ್ರವೇಶ

ಚಂಡಾಲರೆಂದು ಕರೆಯಲ್ಪಡುತ್ತಿರುವ ಜಾತಿಯವರು ಅಸ್ಪೃಶ್ಯರೆಂಬುದು ಅಶಾಸ್ತ್ರೀಯವೆಂದೂ, ಅವರು ದೇವಾಲಯಗಳಿಗೆ ಬರುವುದು ಶಾಸ್ತ್ರಸಮ್ಮತವೆಂದೂ ಬಂಕುಪಲ್ಲಿ ಮಲ್ಲಯ್ಯ ಶಾಸ್ತ್ರಿಗಳು ಪ್ರಕಟಿಸಿರುವರು. ಈ ವಿಷಯವನ್ನು ಸಿದ್ಧಾಂತಪಡಿಸಲು ಪಂಡಿತರ ಸಭೆಯನ್ನು ಸೇರಿಸಬೇಕೆಂದು ಅವರೂ ಮತ್ತೆ ಬೇರೆಯವರೂ ಕೋರುತ್ತಿದ್ದಾರೆ. ಈ ಸಭೆಯನ್ನು ಸೇರಿಸಿ ಚರ್ಚಿಸಲು ನಿಬಂಧನೆಗಳೇನೆಂಬುದನ್ನು ದಯೆಯಿಟ್ಟು ಶಾಸ್ತ್ರಿಗಳು ತಿಳಿಸಬೇಕೆಂದು ಸ್ವಧರ್ಮ ಸ್ವರಾಜ್ಯ ಸಭೆಯ ಸೆಕ್ರೆಟರಿ ಮಾರ್ಕಂಡೇಯ ಶರ್ಮರವರು ಬರೆದಿರುತ್ತಾರೆ.

ಮಹಾತ್ಮರ ಆಹಾರ

"ನಾನು ಈಗ ದೇಹವನ್ನು ಬೆಳೆಸತಕ್ಕ ಪದಾರ್ಥಗಳನ್ನೂ ಪುಷ್ಟಿಯನ್ನುಂಟುಮಾಡತಕ್ಕ ಪದಾರ್ಥ (ಟಾನಿಕ್ಕು) ಗಳನ್ನೂ ಸೇವಿಸುವುದಿಲ್ಲ. ಮೇಕೆ ಹಾಲು, ಹೊಟ್ಟುಸಮೇತವಾದ ಗೋಧಿರೊಟ್ಟಿ, ನೀರಿನಲ್ಲಿ ನೆನೆ ಹಾಕಿದ ಖರ್ಜೂರ, ಬೇಯಿಸಿದ ಟೊಮಾಟೊ, ಕಿತ್ತಲೆಹಣ್ಣು ಇವುಗಳನ್ನು ಮಾತ್ರ ಸೇವಿಸುತ್ತಿದ್ದೇನೆ. ರೊಟ್ಟಿಯಿಂದಲೂ ಹಾಲಿನಿಂದಲೂ ಕೊಂಚ ಮಾಂಸವರ್ಧಕ ಪದಾರ್ಥವು ನನಗೆ ಲಭಿಸುತ್ತಿದೆ" ಎಂದು ಮಹಾತ್ಮರು ಹಿ. ಪಿ. ಸೇನ್‌ಗುಪ್ತರಿಗೆ ಬರೆದಿರುತ್ತಾರೆ.

ತೆಂಗಿನ ಬೆಳೆಗಾರರ ವಿವಾದ

ಬೆಳೆಗಾರರು ಕರ್ಣಕಾಲುವೆ ದೇವಸ್ಥಾನದಲ್ಲಿ ಸೇರಿದರು. ಒಂದು ಕಾಂಡಪಟದ ಬದಲಾಗಿ ತೆಂಗು (ತೆಂಗಿನ ಕಾಯಿಗಳು) ತೆಗೆದುಕೊಂಡುದರ ಬದಲಾಗಿ ಬೇರೆ ಪ್ರತಿಬಂಧವಿದೆ. ಅದರ ಕೆಲವು ಚಿಕ್ಕ ತೆಂಗಿನ ಕಾಯಿಗಳ ವ್ಯವಹಾರ (ತೆಂಗಿನಕಾಯಿ) ಮೊದಲಾದವನ್ನು ಕುರಿತು ಶ್ರೀಮಾನ್ ಅಗ್ರಹಾರ ರಂಗಾಚಾರ್ಯರನ್ನು ಮಾಡಿ ಹೇಳಿದರು. ಮುಖ್ಯ ಕಾರ್ಯ ತೆಂಗಿನ ಶ್ರೀ ಕೃಷ್ಣನ ಸನ್ನಿಧಿಯಲ್ಲಿ ಕೆಲವರು ಎಲ್ಲಾ ಮ್ಯಾಜಿಸ್ಟ್ರೇಟ್ ಕಚೇರಿಯಲ್ಲಿ ವಿವಾದವನ್ನು ಹೂಡಿರುವುದರ ಮೇಲೆ ಪೋಲೀಸಿನವರು ತೆಂಗಿನ ಬೆಳೆಯವರಿಗೆ ಅಡ್ಡಿಪಡಿಸಕೂಡದೆಂದೂ, ಪೋಲೀಸಿನವರು ತೆಂಗಿನ ಬೆಳೆಯವರಿಗೆ ಅಪಾಯವಾಗದಂತೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕೆಂದೂ ಮೆಜಿಸ್ಟ್ರೇಟರು ಅಪ್ಪಣೆ ಮಾಡಿರುತ್ತಾರೆ.

ಅಸ್ಪೃಶ್ಯರಿಗೆ ಕಾಫಿ ಹೋಟಲು

ತುತ್ತುಕುಡಿ ಮ್ಯುನಿಸಿಪಾಲಿಟಿಗೆ ಸೇರಿದ ಯಾವ ಕಾಫಿ ಹೋಟಲುಗಳಲ್ಲಾಗಲಿ ಕ್ಷೌರದಂಗಡಿಗಳಲ್ಲಾಗಲಿ ಅಸ್ಪೃಶ್ಯರಿಗೆ ಪೃಥಕ್ಕಾಗಿ ಪ್ರತ್ಯೇಕ ಏರ್ಪಾಟನ್ನು ಮಾಡಿದಲ್ಲಿ ಆ ಕಾಫಿ ಹೋಟಲುಗಳಿಗೂ ಕ್ಷೌರದಂಗಡಿಗಳಿಗೂ ಮ್ಯುನಿಸಿಪಾಲಿಟಿಯವರು ಲೈಸೆನ್ಸು ಕೊಡಲಾಗದೆಂದು ಮ್ಯುನಿಸಿಪಲ್ ಕೌನ್ಸಿಲಿನಲ್ಲಿ ನಿಮ್ನ ಜಾತಿಯವರ ಪ್ರತಿನಿಧಿಯಾಗಿದ್ದ ಪಿ. ಎಸ್. ಪೂರನ್ ಪಿಳ್ಳೆಯವರು ಒಂದು ತೀರ್ಮಾನವನ್ನು ಪ್ರತಿಪಾದಿಸಬೇಕೆಂದು ಕೋರಿದುದರ ಮೇಲೆ ಅವರ ಪರವಾಗಿ ಮತ್ತೊಬ್ಬ ಕೌನ್ಸಿಲರು ಅದನ್ನು ಪ್ರತಿಪಾದಿಸಿದರು. ಈ ಭೇದವು ಮ್ಯುನಿಸಿಪಾಲಿಟಿಗೆ ಸೇರಿದ ಯಾವ ಹೋಟಲಿನಲ್ಲೂ ನಡೆಯುತ್ತಿಲ್ಲವೆಂದು ಒಬ್ಬ ಮೆಂಬರು ಹೇಳಿದ ಮೇಲೆ ಆ ತೀರ್ಮಾನವು ಅನುಮೋದಿತವಾಯಿತು.

ಮಹಾತ್ಮ ಗಾಂಧಿಯವರ ಜಾತಕ ಫಲ

ಶುಕ್ಲ ಸಂವತ್ಸರದ ಭಾದ್ರಪದ ಬಹುಳ ದ್ವಾದಶಿ ಶನಿವಾರ ಸೂರ್ಯೋದಯಾದಿ ಘಟಿಕಾ 56-0 ಗೆ ಸಲ್ಲುವ ಮಖಾ ನಕ್ಷತ್ರ 4 ನೆಯ ಪಾದ ಸಿಂಹ ಲಗ್ನದಲ್ಲಿ ಮಹಾತ್ಮರ ಜನನ ಕಾಲವೆಂದು ನಿರ್ಧರಿಸಿ ಪೀಠಾಪುರದ ಭಾರತಿ ತೀರ್ಥೋಪಾಧ್ಯಾಯ ವಡಲಿ ಸೀತಾರಾಮಯ್ಯನವರು ಜನನ ಕುಂಡಲಿಯನ್ನು ಕುರಿತು ತಾತ್ಕಾಲಿಕ ಗ್ರಹಚಾರವನ್ನು ಗುಣಿಸಿ ಫಲವನ್ನು ಪ್ರಕಟಿಸಿರುವುದರಲ್ಲಿ, 1932 ನೆಯ ಡಿಸಂಬರು ತಾ॥ 14 ರ ಮೇಲೆ ಮಹಾತ್ಮರ ಆರೋಗ್ಯ ವೃದ್ಧಿಯಾಗಿ ಸಂಕಲ್ಪವು ಸಿದ್ಧಿಸುವುದು, 1933 ನೆಯ ಜನವರಿ ತಿಂಗಳು ಕಳೆದ ಮೇಲೆ ರಾಜಕೀಯ ವಿಚಾರದಲ್ಲಿ ಜಯವಾಗಲು ತಕ್ಕೇರ್ಪಾಟು ನಡೆಯುವುದು ಎಂದು ತಿಳಿಸಿರುತ್ತಾರೆ. ಈ ಭವಿಷ್ಯದ ಸತ್ಯಾಂಶವು ಮುಂದೆ ವ್ಯಕ್ತವಾಗಬೇಕಾಗಿದೆ.

ರೌಂಡುಟೇಬಲು ಸಭೆ

ರೌಂಡುಟೇಬಲು ಸಭೆಯು ಕಳೆದ ತಾ॥ 23 ರಲ್ಲಿ ಸಮಾವೇಶವಾಗಿದ್ದು ರಾಷ್ಟ್ರಗಳಿಗೂ ಕೇಂದ್ರಸ್ಥಾನಕ್ಕೂ ಇರಬೇಕಾದ ಪರಸ್ಪರ ಸಂಬಂಧದ ವಿಚಾರವಾಗಿ ದೀರ್ಘ ಚರ್ಚೆಯು ನಡೆದು ಭಿನ್ನಾಭಿಪ್ರಾಯಗಳು ಉಂಟಾದುದರ ಮೇಲೆ ಈ ವಿಚಾರವನ್ನು ಚೆನ್ನಾಗಿ ಪರಿಷ್ಕರಿಸಿ ತಮ್ಮಭಿಪ್ರಾಯದೊಡನೆ ವರದಿಕೆಯನ್ನು ಸಮರ್ಪಿಸುವುದಕ್ಕಾಗಿ ಲಾರ್ಡ್ ಶಾಂಕೀಯರ ಅಧ್ಯಕ್ಷತೆಯಲ್ಲಿ ಒಂದುಪಸಂಘವೇರ್ಪಡಿಸಲ್ಪಟ್ಟು ಸಪ್ರೂ, ಜಯಕರ್, ಪಾತ್ರೊ, ಹೈದರಿ, ಮನೂಬಾಯಿ ಮೆಹತ ಮತ್ತು ಬಟ್ಲರ್ ಇವರುಗಳು ಮೆಂಬರುಗಳಾಗಿ ನಿಯಮಿಸಲ್ಪಟ್ಟಿರುವರು. ಇವರು ತಮ್ಮ ವರದಿಯನ್ನು ನಾಳೆಯ ದಿವಸ ಸಮರ್ಪಿಸಿದ ಮೇಲೆ ರೌಂಡುಟೇಬಲು ಸಭೆಗೂಡುವುದು. ಸಂಸ್ಥಾನಾಧಿಪತಿಗಳಿಗೆ ಸಂಬಂಧಪಟ್ಟ ಮತ್ತು ಬೇರೆ ಕೆಲ ವಿಚಾರಗಳಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯಗಳನ್ನು ಪರ್ಯಾಲೋಚಿಸಿ ವರದಿ ಮಾಡಲು ಬೇರೆ ಕೆಲ ಉಪ ಸಭೆಗಳೇರ್ಪಟ್ಟಿರುವುವು.

ಶಾರದಾ ಶಾಸನೋಲ್ಲಂಘನಕ್ಕಾಗಿ ಶಿಕ್ಷೆ

ಶಾರದಾ ಶಾಸನ ನಿರ್ಬಂಧಕ್ಕೆ ಸಿಕ್ಕುವಾರದೆಂದು 17 ವರ್ಷದ ಮಗನಿಗೆ ಟಾನಾ ಎಂಬಲ್ಲಿನ ವಾಸಸ್ಥನೊಬ್ಬನು ಪೋರ್ಚುಗೀಸು ರಾಜ್ಯಕ್ಕೆ ಸೇರಿದ ಸಿಲ್ವಾಸ ಎಂಬ ಗ್ರಾಮಕ್ಕೆ ಹೋಗಿ ಮದುವೆ ಮಾಡಿಕೊಂಡು ಬಂದನು. ಇದಕ್ಕಾಗಿ ತಂದೆ ಮತ್ತು ಮಗನ ಮೇಲೆ ಟಾನಾ ಡಿಸ್ಟ್ರಿಕ್ಟು ಮೆಜಿಸ್ಟ್ರೇಟರಲ್ಲಿ ವಿವಾದವು ನಡೆದು, ಪೋರ್ಚುಗೀಸು ರಾಜ್ಯದಲ್ಲಿ ವಿವಾಹ ನಡೆದಿದ್ದರೂ ಅಪರಾಧಿಗಳು ಬ್ರಿಟಿಷ್ ಪ್ರಜೆಗಳಾದುದರಿಂದ ತಪ್ಪಿತಸ್ಥರೆಂದು ನಿರ್ಧರಿಸಲ್ಪಟ್ಟು ತಲಾ 200 ರೂಪಾಯಿಗಳ ದಂಡ ವಿಧಿಸಲ್ಪಟ್ಟರು. ಇದರ ಮೇಲೆ ಅಪರಾಧಿಗಳು ಟಾನಾ ಸೆಷನ್ಸು ಜಡ್ಜಿಯವರಲ್ಲಿ ಅಪೀಲನ್ನು ಮಾಡಿಕೊಂಡಿರಲಾಗಿ ಅಪರಾಧಿಗಳು ದೋಷಿಗಳಾಗಿರುತ್ತಾರೆಂದು ಆ ಜಡ್ಜಿಯು ಅಭಿಪ್ರಾಯಪಟ್ಟು ತಂದೆಯ ದಂಡವನ್ನು 50 ರೂ ಗೂ ಮಗನ ದಂಡವನ್ನು 25 ರೂ ಗೂ ಇಳಿಸಿದರು. ರಾಮೇಶ್ವರಕ್ಕೆ ಹೋದರೂ ಶನಿಕಾಟ ತಪ್ಪದು!

ಪರ್ವತವು ಯಾವಾಗ ಕದಲುವುದು?

ಕಾರ್ತಿಕ ಬಹುಳ 30 ಅಮಾವಾಸ್ಯೆ ಭಾನುವಾರ ದೊಡ್ಡ ಬಿರುಗಾಳಿ ಮಳೆ ಬಂದು ಪರ್ವತಗಳು ಕದಲುವುವೆಂದೂ, ಭೂಮಿಯೆಲ್ಲ ಸಮುದ್ರಮಯವಾಗುವುದೆಂದೂ, ಭೂಕಂಪಗಳಾಗುವುವೆಂದೂ, ಅನೇಕ ಉಪದ್ರವಗಳುಂಟಾಗುವುವೆಂದೂ, ಭೂಮಿಯಲ್ಲಿ ಅಡಗಿಕೊಂಡು ಪ್ರಾಣಗಳನ್ನುಳಿಸಿಕೊಳ್ಳಬೇಕೆಂದೂ ...

[illegible] ಭಯಗ್ರಸ್ತರಾಗಿದ್ದರು ... 10 [illegible] [illegible] ಕ್ರಿಶ್ಚಿಯನ್ [illegible] [illegible] ಮತ್ತು [illegible] [illegible] ಸಿಂಗ್ ಠಾಕೂರ್ ಎಂಬವರು ಪ್ರಕಟಿಸಿದ್ದರು

ಅಸ್ಪೃಶ್ಯರ ಗುರುವಯ್ಯೂರು ದೇವಾಲಯ ಪ್ರವೇಶ

ಸವರ್ಣ ಹಿಂದುಗಳೇ ಗುರುವಯ್ಯೂರು ದೇವಾಲಯವನ್ನು ಪ್ರವೇಶಿಸಲು ಅರ್ಹರೆಂಬುದೂ, ಅವರಿಗಾಗಿಯೇ ಜಾಮೊರಿನ್ ರವರು ದೇವಾಲಯದ ಧರ್ಮಕರ್ತರಾಗಿರುವರೆಂಬುದೂ ಜಾಮೊರಿನ್ನರವರ ವಾದವಾಗಿರುತ್ತಾಗಿ ಹಾಗಿದ್ದರೆ ಸವರ್ಣದವರಾದ ಹಿಂದುಗಳ ಇಷ್ಟ ಪ್ರಕಾರವೇ ಇವರು ಧರ್ಮಾಧಿಕಾರವನ್ನು ನಡೆಯಿಸಬೇಕು ಆದುದರಿಂದ ಸವರ್ಣದ ಹಿಂದುಗಳೆಲ್ಲರ ಅಭಿಪ್ರಾಯವನ್ನು ತಿಳಿಯಲು ಒಂದು ಪಂಚಾಯತಿಯೇರ್ಪಾಟಾಗಬೇಕಾಗಿದೆ ಯಾಗಲಷ್ಟೆ ಸವರ್ಣದವರಾದ ಹಿಂದುಗಳಿಗೆ ಜವಾಬದಾರಿಯನ್ನು ವಹಿಸಬೇಕಾದ ಅವಶ್ಯಕತೆಯುಳ್ಳ ಜಾಮೊರಿನ್ನರ ಇಷ್ಟಾನುಸಾರ ಅಧಿಕಾರವನ್ನು ನಡೆಯಿಸಬಹುದೆಂದೂ ಆ ದೇವಸ್ಥಾನವು ಅವರ ಸ್ವಂತ ಸ್ವತ್ತೆಂದೂ ಅವರ ಅನುಮತಿಯಿಲ್ಲದೆ ಸವರ್ಣದ ಹಿಂದುಗಳು ಆ ದೇವಾಲಯವನ್ನು ಪ್ರವೇಶಿಸಕೂಡದೆಂದೂ ನಿರ್ಧರವಾದರೆ ನಾವು ಈ ಪ್ರವೇಶ ಕಾರ್ಯವನ್ನು ಬಿಟ್ಟುಬಿಡಬೇಕು ನಾವು ಅವಮಾನಿತರಾದವೆಂದು ಭಾವಿಸದೆ ಒಪ್ಪಿಕೊಳ್ಳಬೇಕು ಅಲ್ಲಿನ ಸಂಗತಿ ಸಂದರ್ಭಗಳೆಲ್ಲ ಹೇಗಿವೆ ಎಂದು ಗೊತ್ತುಮಾಡಿ ತಿಳಿಸುವುದು ಎಂದು ಮಹಾತ್ಮರು ಕಲ್ಲಿಕೋಟೆಯಲ್ಲಿರುವ ಪತ್ರಿಕಾ ಸುದ್ದಿಗಾರರಿಗೆ ಬರೆದಿರುತ್ತಾರೆ

ಮಹಾತ್ಮರು ಶಾಂತಿಯವರಿಗೆ ಬರೆದುತ್ತರ

" ನಾನು ಸ್ವಭಾವವಾಗಿ ಸಹಕಾರಕ್ಕೋಸ್ಕರ ಹೋರಾಡುತ್ತೇನೆ ಪ್ರಜೆಗಳಿಗಿಷ್ಟವಿಲ್ಲದಿದ್ದರೂ ಅವರು ಆ ಒಡಂಬಡಿಕೆಯನ್ನು ಅನುಮೋದಿಸುವಂತೆ ದೊರತನದವರು ಬಲವಂತಪಡಿಸುವುದು, ಪ್ರಜೆಗಳ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಅಡಗಿಸುವುದು, ನ್ಯಾಯಸಮ್ಮತವಾಗಿ ಮಾಡಲ್ಪಟ್ಟ ಭಯಂಕರ ವಿಧಾನಗಳನ್ನು ಜಾರಿಪಡಿಸುವುದು ಮೊದಲಾದ ಕಾರ್ಯಗಳನ್ನು ನೋಡಿದರೆ ರಾಜ್ಯಾಧಿಕಾರವನ್ನು ನಿಜವಾಗಿ ಪ್ರಜೆಗಳಿಗೆ ದೊರತನದವರು ಕೊಡಲಿಷ್ಟವುಳ್ಳವರಾಗಿರುವರೆಂದು ನಂಬಲು ಯಾವ ಕಾರಣವೂ ತೋರುವುದಿಲ್ಲ ದೊರತನದವರು ನಿರ್ಬಂಧ ವಿಧಾನವನ್ನು ಅವಲಂಬಿಸುವುದರಿಂದ ಪ್ರಜೆಗಳ [illegible] ಯನ್ನು ಸಂಪೂರ್ಣವಾಗಿ ಹಾಳುಮಾಡುವರು ನನಗೆ ಸತ್ಯಾಗ್ರಹದಲ್ಲಿ ಪೂರ್ಣ ನಂಬಿಕೆ ಇರುತ್ತದೆ ನಾನು ಅದನ್ನು ನಿಲ್ಲಿಸಿ ಬಿಟ್ಟರೂ ದೊರತನದವರು ಪ್ರಜೆಗಳನ್ನು ಬಯಗೊಳಿಸುವ ಧೈರ್ಯವನ್ನವಲಂಬಿಸಲು ಯಾವ ನಿರೋಧವೂ ಉಂಟಾಗುವುದಿಲ್ಲ ಶಾಂತಿಯವರ ಧೈರ್ಯಕ್ಕಾಗಿಯೂ ಕಾರ್ಯದೀಕ್ಷೆಗಾಗಿಯೂ ಅವರಲ್ಲಿ ನನಗೆ ಬಹಳ ಗೌರವವಿರುತ್ತದೆ ದೊರತನದವರು ಮನಸ್ಸನ್ನು ನಿಶ್ಚಯವಾಗಿ ಬದಲಾಯಿಸಿರುವರೆಂದು ಅವರು ಸ್ಪಷ್ಟಪಡಿಸುವುದಾದರೆ ನಾನು ಅವರ ಜೊತೆಯಲ್ಲೇ ಇರುವೆನು ಎಂದು ಮಹಾತ್ಮರು ಶಾಂತಿಯವರಿಗೆ ಕೊಟ್ಟುತ್ತರದಲ್ಲಿ ತಿಳಿಸಿರುತ್ತಾರೆ

ಮಹಾತ್ಮರಿಗೆ ಸ್ವಧರ್ಮ ಸ್ವರಾಜ್ಯ ಸಂಘದವರ ಲೇಖನ

ಅಸ್ಪೃಶ್ಯತಾನಿವಾರಣೆಯ ವಿಚಾರವಾಗಿ ನೀವು ಮಾಡುತ್ತಿರುವ ಪ್ರಕಟಣೆಗಳಲ್ಲೆಲ್ಲ ಅಸ್ಪೃಶ್ಯತೆಯನ್ನು ಪುರಸ್ಕರಿಸುವುದು ಭಗವದ್ಗೀತೆಗೆ ವಿರುದ್ಧವೆಂದು ಹೇಳುತ್ತಿರುವಿರಿ ಅಸ್ಪೃಶ್ಯತೆಯು ಭಗವದ್ಗೀತೆಗೆ ವಿರುದ್ಧವೆಂದು ನೀವು ನಮ್ಮ ಕಡೆಯ ವಿದ್ವಾಂಸರುಗಳನ್ನು ಕಳುಹಿಸಿ ಸಭೆಯಲ್ಲಿ ಅಸ್ಪೃಶ್ಯತೆಯು ಭಗವದ್ಗೀತೆಗೆ ವಿರುದ್ಧವೆಂದು ಸಾಧಿಸಿ ಸನಾತನ ಧರ್ಮಪರರನ್ನು ಒಡಂಬಡಿಸಿದಲ್ಲಿ ನಿಮ್ಮ ಪ್ರಚಾರಕ್ಕೆ ನಮ್ಮ ಸಂಘವು ಅಡ್ಡಿ ಬರುವುದಿಲ್ಲ ಹಾಗಿಲ್ಲದೆ ನಿಮ್ಮ ಪಂಡಿತರುಗಳು [illegible] ಪಡಿಸದೆಹೋದಲ್ಲಿ ಸನಾತನ ಧರ್ಮಕ್ಕೆ ವಿರೋಧವಿಲ್ಲದಂತೆ ನಿಮ್ಮ ಪ್ರಚಾರ ಕಾರ್ಯವನ್ನು ನಿಲ್ಲಿಸಿಕೊಳ್ಳಬೇಕು ಅಂತಹ ಸಭೆಯನ್ನು ಏರ್ಪಡಿಸುವುದು ಕಷ್ಟವಿಲ್ಲವಾದರೆ ನಿಮ್ಮಲ್ಲಿಗೆ ಒಂದು ನಿಯೋಗದೊಡನೆ ವಾದಮಾಡಲಿಕ್ಕೆ ನಮಗೆ ಅವಕಾಶವನ್ನು ಕೊಡಬೇಕು ನಿಮ್ಮ ಸಿದ್ಧಾಂತ ಭಗವದ್ಗೀತೆಗೆ ಸಮ್ಮತವೆಂದು ನೀವು ಒಡಂಬಡಿಸಿದಲ್ಲಿ ನಾವು ನಿಮಗೆ ವಿರುದ್ಧವಾಗಿ ಯಾವ ಪ್ರಚಾರವನ್ನೂ ಮಾಡುವುದಿಲ್ಲ ಉಭಯರ ಚರ್ಚೆಯನ್ನು ಸಮಗ್ರವಾಗಿ ಪ್ರಕಟಿಸಲು ಏರ್ಪಾಟು ಮಾಡಬೇಕೆಂದು ಮಹಾತ್ಮರನ್ನು ಕೇಳಿಕೊಂಡಿದ್ದುದಕ್ಕೆ ಆ ವಿಚಾರವಾಗಿ ಸಂಪೂರ್ಣವಾಗಿ ಉತ್ತರವನ್ನು ಕೊಡುವ ಸನಾತನರು ಎಂದಲ್ಲಿ ಅವರ ಕೂಡ ವಾದಮಾಡಲು ನಾನು ಸಂತೋಷಿಸುತ್ತೇನೆ ಎಂದು ಮಹಾತ್ಮರು ಪತ್ರಿಕೆಗಳಲ್ಲಿ ಪ್ರಕಟಿಸಿರುತ್ತಾರೆ ನಾವು ಕೋರಿರುವ ವಿಷಯವನ್ನು ಮಹಾತ್ಮರು ಅಂಗೀಕರಿಸಿದಲ್ಲಿ ಆಲೋಚನೆ ಮಾಡುವ ಸಂಭಾಷಣವು ಉಭಯ [illegible] ವಾಗದು

[illegible] ಸ್ವರಾಜ್ಯ [illegible] ಬರೆದಿರುತ್ತಾರೆ

[illegible]

[illegible] ಈ ವಾದದಲ್ಲಿ ತೊಡಗುವವರಾಗಿರುತ್ತಾರೆ ಇವರು ಈ ಮಧ್ಯೆ ಮಹಾತ್ಮರಿಗೆ ಒಂದು ಲೇಖನವನ್ನು ಬರೆದು ಅದರಲ್ಲಿ ಭಾರತ ಸಮಸ್ಯಾ ಪರಿಹಾರ ವಿಚಾರವಾಗಿ ನೀವು ಪಾರ್ಲಿಮೆಂಟಿನವರಿಗೇನಾದರೂ ಸಂದೇಶವನ್ನು ಕಳುಹುವುದಾದರೆ ನಾನು ಅದನ್ನು ಸಂತೋಷದಿಂದೊಪ್ಪಿಸುವೆನು ಈಗುಂಟಾಗಿರುವ ಭೇದವನ್ನು ಹೋಗಲಾಡಿಸಿ ಪುನಃ ತೃಪ್ತಿಕರವಾದ ಸಮಾಧಾನವನ್ನುಂಟುಮಾಡಬಲ್ಲವರು ನಿಮ್ಮ ವಿನಾ ಮತ್ತೊಬ್ಬರಿಲ್ಲವು ಅಂತಹ ಸಮಾಧಾನವು ಕುದುರಿದರೆ ಭಾರತ ದೇಶದಲ್ಲಿ ಸಂಪದ್ಯುಕ್ತವಾದ ನೂತನ ಶಕೆ ಆರಂಭವಾಗುವುದು ಕಾಂಗ್ರೆಸಿನವರಾದರೂ ಮೂರನೆ ರೌಂಡು ಟೇಬಲು ಸಭೆಯಲ್ಲಿ ಭಾಗಿಗಳಾಗದಿರುವುದು ಬಹಳ ಸಂತಾಪಕರವು ಅಂತಸಭೆಯಲ್ಲಿ ಏನಾದರೂ ಒಡಂಬಡಿಕೆಯು ಕುದುರಿದರೂ ಕಾಂಗ್ರೆಸಿನವರ ಸಹಕಾರವು ದೊರಕಿದ ಹೊರತು ಅದು ಸರಿಯಾಗಿ ನೆರವೇರುವುದಿಲ್ಲ ನೀವು ಭಾರತ ದೇಶದ ಮುಂದಣ ಕಲ್ಯಾಣವನ್ನು ಮನಃಪೂರ್ವಕವಾಗಿ ಕೋರುತ್ತಿರುವರೆಂಬುದರಲ್ಲಿ ತಿಲಾಂಶವೂ ಸಂಶಯವಿಲ್ಲ ಆದುದರಿಂದ ಅಂತಹ ಅನುಕೂಲ ಫಲವನ್ನುಂಟುಮಾಡಲು ನೀವು ಇನ್ನೂ ಹೆಚ್ಚಾಗಿ ಸ್ವಾರ್ಥತ್ಯಾಗಮಾಡುತ್ತೀರೆಂದು ನಾನು ನಂಬಿರುತ್ತೇನೆ ನಾನು ಪ್ರತ್ಯಕ್ಷವಾಗಿ ತಮ್ಮನ್ನು ಸಂದರ್ಶಿಸಿದ್ದರೆ ನನಗೆ ಮಹಾನಂದವಾಗುತ್ತಿದ್ದಿತು ಆದರೆ ನನಗಂತಹ ಪುಣ್ಯ ಪ್ರಾಪ್ತಿಯಿಲ್ಲವು [illegible] ರೌಂಡು ಟೇಬಲು ಸಭೆಯಲ್ಲಿ ಭಾಗಿಗಳಾಗಿದ್ದ ಹೊರತು ಈ ಸಮಸ್ಯಾ ಪರಿಹಾರವೆಂದಿಗೂ ಆಗುವುದಿಲ್ಲ ಭಾರತದೇಶ ಚರಿತ್ರೆಯಲ್ಲಿ ಮುಖ್ಯತಮವಾದ ಈ ಭಾಗದಲ್ಲಿ ಅಪಾರವಾದ [illegible] ಧೀಶಕ್ತಿಯನ್ನುಪಯೋಗಪಡಿಸಲಿಕ್ಕಿಲ್ಲವಾಗಿರುವುದಕ್ಕಾಗಿ ನಾನೂ ಬಹಳವಾಗಿ ಚಿಂತಿಸುತ್ತೇನೆ. ನನ್ನಂತೆಯೇ ಅನೇಕ ಕೋಟಿ ಪ್ರಜೆಗಳು ಕೂಡ ಚಿಂತಿಸುತ್ತಿದ್ದಾರೆ ಎಂದು ತಿಳಿಸಿರುವರು

ಗುಲಾಬ್ ಚಂದ್‌ರವರ ದೋಷವಿಮುಕ್ತತೆ

ವಾಲ್‌ಚಂದ್ ಹೀರಾಚಂದ್‌ರವರ ಸಹೋದರರ ಗುಲಾಬ್ ಚಂದ್ ಹೀರಾಚಂದರವರು ಕಳೆದ ಜನವರಿ ತಿಂಗಳಿನಲ್ಲಿ ಆರ್ಡಿನೆನ್ಸು ಪ್ರಕಾರ ಬಂಧಿಸಲ್ಪಟ್ಟು ಬಿಜಾಪುರದ ಜೈಲಿನಲ್ಲಿಡಲ್ಪಟ್ಟಿದ್ದರು ಇವರು ಬಂಧನದಿಂದ ಬಿಡಲ್ಪಡಬೇಕೆಂದೂ ಬಿಡಲ್ಪಟ್ಟ 18 ಘಂಟೆಯೊಳಗ ಪೋಲೀಸಿನವರಲ್ಲಿಗೆ ಬಂದು ಕಾಣಿಸಿಕೊಳ್ಳಬೇಕೆಂದೂ, ಡಿಸ್ಟ್ರಿಕ್ಟು ಮೆಜಿಸ್ಟ್ರೇಟರ ಅಪ್ಪಣೆಯಿಲ್ಲದೆ ಸೊಲ್ಲಾಪುರವನ್ನು ಪ್ರವೇಶಿಸ ಕೂಡದೆಂದೂ ಸೊಲ್ಲಾಪುರದ ಡಿ|| ಮೆಜಿಸ್ಟ್ರೇಟರು ಫೆಬ್ರುವರಿ ತಾ|| 26 ರಲ್ಲಿ ಅಪ್ಪಣೆ ಮಾಡಿದರು ಇದಾದ ಒಂದು ವಾರದಲ್ಲಿ ಗುಲಾಬ್‌ಚಂದರವರ ಬಿಡಲ್ಪಟ್ಟರು ಇದಕ್ಕೆ ಮೊದಲೇ ಅಪರಾಧಿಯು ಡಿ|| ಮೆಜಿಸ್ಟ್ರೇಟರ ಅನುಮತಿಯನ್ನು ಪಡೆದ [illegible] ಹೋಗಿ ಅಸ್ವಸ್ಥರಾಗಿದ್ದ ತಮ್ಮ ಮಗಳನ್ನು ನೋಡಿಕೊಂಡು ಹಿಂದಿರುಗಿ ಬರುವಾಗ್ಗೆ ಮಾರ್ಗದಲ್ಲಿ ಸೊಲ್ಲಾಪುರದ ಸ್ಟೇಷನ್ನಿನ ಹತ್ತಿರ ಅಪರಾಧಿಯು ತಮ್ಮ ಬಂಗಲೆಗೆ ಒಂದು ತಮ್ಮನ್ನು ಕಾಣಬೇಕೆಂದು ಡಿ|| ಮೆಜಿಸ್ಟ್ರೇಟರು ಮಾಡಿದ್ದ ಅಪ್ಪಣೆಯು ತಿಳಿಸಲ್ಪಟ್ಟುದರ ಮೇರೆ ಅಪರಾಧಿಯು ಡಿ|| ಮೆಜಿಸ್ಟ್ರೇಟರ ಬಂಗಲೆಗೆ ಹೋಗಿ ಅವರನ್ನು ನೋಡಿದರು ಅಷ್ಟರಲ್ಲಿ ಇವರನ್ನು ಪೋಲೀಸರು ಸೆರೆ ಹಿಡಿದು ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಪಡಿಸಲು ಆರ್ಡಿನೆನ್ಸು [illegible] ನೆಯ ಸೆಕ್ಷನ್ ಪ್ರಕಾರ 18 ತಿಂಗಳು ಕಠಿಣ ಸಜ ಮತ್ತು 23 100 ರೂ ಜುಲ್ಮಾನೆ ವಿಧಿಸಲ್ಪಟ್ಟರು ಆದರ ಮೇಲೆ ಅಪರಾಧಿಯು ಸೆಷನ್ಸ್ ಕೋರ್ಟಿಗೆ ಅಪೀಲು ಮಾಡಿಕೊಳ್ಳಲಾಗಿ ಜುಲ್ಮಾನೆಯು 12 00 ಕ್ಕೆ ಇಳಿಸಲ್ಪಟ್ಟಿತು ಇದರಮೇಲೆ [illegible] ಹೈಕೋರ್ಟಿಗೆ ಅಪೀಲು ಮಾಡಿದರಲಾಗಿ ಇಬ್ಬರು ನ್ಯಾಯಮೂರ್ತಿಗಳು ಅಪರಾಧಿ ಕಡೆಯ ವಕೀಲರ ವಾದವನ್ನು ಕೇಳಿ ಅಪರಾಧಿಯು ಡಿ|| ಮೆಜಿಸ್ಟ್ರೇಟರ ಅಪ್ಪಣೆಯ ಪ್ರಕಾರ ಸೊಲ್ಲಾಪುರವನ್ನು ಪ್ರವೇಶಿಸಿದುದು ತಪ್ಪಲ್ಲವೆಂದು ನಿರ್ಧರಿಸಿ ದೋಷಮುಕ್ತರನ್ನಾಗಿ ಮಾಡಿದರು.

ಒಳದೇಶದ ವೃತ್ತಾಂತಗಳು

ಒಂದನೆಯ [illegible] ಮೆಡಿಕಲ್ [illegible] (ಲಂಡನ್) ರವರು [illegible] ಮೈಸೂರು ಮಹಾರಾಜರವರ ಕಾಲೇಜಿನಲ್ಲಿ [illegible] ಪ್ರಫೆಸರಾಗಿ ನಿಯಮಿಸಲ್ಪಟ್ಟಿರುತ್ತಾರೆ

ಬರುವ ಡಿಸೆಂಬರು ತಾ|| 4 ನೆ [illegible] ಶಾಂತಿನಿಕೇತನದಲ್ಲಿ [illegible] ಪ್ರದರ್ಶನದಲ್ಲಿ ಉತ್ತಮವಾದ ರಾಸುಗಳಿಗೆ ಬಹುಮಾನಗಳು [illegible] ಡಿ|| [illegible] ಮು|| ಟಿ. ಜಿ. [illegible] ಬರುವರು.

[illegible] ಮತ್ತು [illegible] [illegible] ಜಿಲ್ಲಾ [illegible] ಯವರನ್ನು ಸೇರಿಸಲ್ಪಟ್ಟಿರುವರು

ಮೈಸೂರು ಸಂಸ್ಥಾನದ ಪ್ರಾಥಮಿಕ ಪಾಠಶಾಲೆಗಳ ಉಪಾಧ್ಯಾಯರ ಸಮ್ಮೇಳನವು ಬೆಂಗಳೂರು ನಗರದೊಳಗೆ ಬರುವ ಡಿಸೆಂಬರ್ ತಾ|| 20–21 ಮತ್ತು 22 ರ ಬದಲು ತಾ|| 21, 22 ಮತ್ತು 23 ರಲ್ಲಿ ನಡೆಯಲು ಗೊತ್ತಾಗಿರುತ್ತದೆಂದೂ ಶೃಂಗೇರಿ ಜಗದ್ಗುರುಗಳು ಈ ಸಮ್ಮೇಳನವು ಜಯಪ್ರದವಾಗಿ ನಡೆಯಬೇಕೆಂದು ಆಶೀರ್ವದಿಸಿ ಇದರ ವೆಚ್ಚಕ್ಕಾಗಿ ದ್ರವ್ಯ ಸಹಾಯವನ್ನು ಅನುಗ್ರಹಿಸಿರುತ್ತಾರೆಂದೂ ಸಮ್ಮೇಳನದ ಕಾರ್ಯದರ್ಶಿಯವರು ತಿಳಿಸುತ್ತಾರೆ

[illegible] ತಾ|| [illegible] ಸಮೀಪದಲ್ಲಿರುವ ರಂಗ ಸಮುದ್ರದಲ್ಲಿ [illegible] ಹಿಂ [illegible] ಮಾಡಿ [illegible] ಹಿಂದುಗಳೂ [illegible] ಗಾಯಗಳಾಗಿ [illegible] ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಗೆ [illegible] ಚಿಕಿತ್ಸೆ ಹೊಂದುತ್ತಿರುವುದಾಗಿಯೂ [illegible] ದಾಗಿಯೂ ಕೇಳುತ್ತೇವೆ

ಹಾಸನ ಡಿ|| ಅರಸೀಕೆರೆ ತಾ|| ರಾಮನಾಥಪುರದಲ್ಲಿ ಪದ್ಧತಿಯ ಪ್ರಕಾರ ಸುಬ್ರಹ್ಮಣ್ಯ ಷಷ್ಠಿ ದಿವಸ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿಯ ರಥೋತ್ಸವ ನಡೆಯುವಾಗ್ಗೆ ಅಲ್ಲಿ ವೈಶ್ಯ [illegible] ಅಭಿವೃದ್ಧಿಗಾಗಿ ವೈಶ್ಯ [illegible] ಡಿಸೆಂಬರು ತಾ|| [illegible] ರಿಂದ [illegible] ರ ವರೆಗೆ ಶ್ರೀ [illegible] ಸ್ವಾಮಿಯವರ ಮಠದವರು [illegible] ಬಿಟ್ಟುಕೊಟ್ಟಿರುವ [illegible] ವೈಶ್ಯ [illegible] ಗಳು ಆ ಕಾಲಕ್ಕೆ ದಯಮಾಡಿಸಬೇಕೆಂದೂ [illegible] ಉಚಿತವಾದ ಏರ್ಪಾಟು ಮಾಡಲ್ಪಟ್ಟಿರುವುದೆಂದೂ ಅರಸೀಕೆರೆಯ ಮು|| ಎಸ್ ಕೃಷ್ಣಸ್ವಾಮಿಯವರು ತಿಳಿಸಿರುತ್ತಾರೆ

ರಾಜಧಾನಿಯ ಕ್ಷಯರೋಗದ ಆಸ್ಪತ್ರೆಯಲ್ಲಿ [illegible] ಯವರ ವಾರ್ಡಿನಲ್ಲಿರಲು ಪ್ರತಿ ರೋಗಿಯೂ ದಿನವೊಂದಕ್ಕೆ [illegible] ರೂ ನಂತೆಯೂ ಪ್ರತ್ಯೇಕ ವಾರ್ಡಿನಲ್ಲಿರಲು 4 ರೂ ನಂತೆಯೂ ಕೊಡಬೇಕಾಗಿದ್ದಿತು ಈಗ ಜನರಲ್ ವಾರ್ಡಿಗೆ [illegible] ರೂ ನಂತೆಯೂ ಪ್ರತ್ಯೇಕ ವಾರ್ಡಿಗೆ [illegible] ರೂ ನಂತೆಯೂ ಕೊಡಬೇಕೆಂದು ಪ್ರಭುತ್ವದವರಿಂದ ನಿರ್ಧರಿಸಲ್ಪಟ್ಟಿದೆ ಇದರಿಂದ ಮಧ್ಯ ತರಗತಿಯ ರೋಗಿಗಳಿಗೆ [illegible] ಮಟ್ಟಿಗೆ ಉಪಕಾರವಾಯಿತೆಂದು ಹೇಳಬಹುದು ಆದರೆ ಈ ಆಸ್ಪತ್ರೆಯ ಯಾವ ವಾರ್ಡಿನಲ್ಲೂ ಸ್ಥಳ ಸಿಕ್ಕುವುದು ಬಹಳ ಪ್ರಯಾಸವಾಗಿದೆ, ಇದು ನಿವಾರಣೆಯಾದಲ್ಲಿ ರೋಗಿಗಳಿಗೆ ಸಹ ಉಪಕಾರವೂ, ಆಸ್ಪತ್ರೆಯ ಸ್ಥಾಪನೋದ್ದೇಶ ಸಾರ್ಥಕವೂ ಆಗುವುದರಲ್ಲಿ ಅಭ್ಯಂತರವಿಲ್ಲ

ವಿದ್ಯಾಭೂಷಣ ಮು|| ವಿ. ಎಸ್ ಸಂಜೀವರಾಯರು ಬೆಂಗಳೂರು ಸೆಷನ್ಸ್ ಜಡ್ಜಿಯವರ ಅಪೀಲು ತೀರ್ಮಾನದ ಮೇಲೆ ಹೈಕೋರ್ಟಿಗೆ ಅಪೀಲು ಮಾಡಿಕೊಂಡಿದ್ದ ಅಪೀಲಿನಲ್ಲಿ ಕಾರಾಗೃಹವಾಸ ಶಿಕ್ಷೆಯು ತಪ್ಪಿಸಲ್ಪಟ್ಟು 300 ರೂ ಜುರ್ಮಾನೆಯು ಸ್ಥಿರಗೊಳಿಸಲ್ಪಟ್ಟಿದ್ದಿತು ಈ ಅರ್ಥ ದಂಡವನ್ನು ಮನ್ನಿಸಬೇಕೆಂದೂ ಒಂದುವೇಳೆ ಇದು ಸಾಧ್ಯವಾಗದಿದ್ದಲ್ಲಿ ಹಾಗೆ ಮಾಡಲು ಪ್ರಭುತ್ವದವರಿಗೆ ಶಿಫಾರಸನ್ನು ಮಾಡಬೇಕೆಂದೂ ಮು|| ಸಂಜೀವರಾಯರು ಹೈಕೋರ್ಟಿಗೆ ಅರ್ಜಿ ಕೊಂಡಿದ್ದುದರಮೇಲೆ ಮೊದಲು ಈ ಅಪೀಲು ವಿಚಾರವನ್ನು ತೀರ್ಮಾನಿಸಿದ ಜಸ್ಟಿಸ್ ಮು|| ರಾಮಚಂದ್ರರಾಯರು ತಾವು ಮಾಡಿದ ತೀರ್ಮಾನವನ್ನು ಬದಲಾಯಿಸಲು ಅವಕಾಶವಿಲ್ಲವೆಂದು ವಿನ್ನಪವನ್ನು ತಿರಸ್ಕರಿಸಿಬಿಟ್ಟರು

ತರಮನೆಯ ಇಂಗ್ಲೀಷು ಬ್ಯಾಂಡು ಮಾಸ್ಟರಾಗಿದ್ದ ಡೆನ್ನಿಸ್ ಎಂಬವರು ಹರ್ಡ್ ರೋಡಿನ ಮೇಲ್ಗಡೆ ಮಾಲ್ಕಾನ್ ದಾನ್ವಾಸ್ ಪಾರ್ಕ್ ರೋಡು ಬೆಂಗಳೂರು–ನೀಲ್ಗಿರಿ ರೋಡು ಮತ್ತು ಹರ್ಡ್ ರೋಡುಗಳು ಕೂಡುವ ಸ್ಥಳದಲ್ಲಿ ಮಿ|| [illegible] ರವರ ಬಂಗಲೆಗೆ ಒತ್ತರಿಸಿಕೊಂಡಿರುವ ಸರ್ಕಲ್ಲಿಗೆ ಇಂಗ್ಲೀಷ್ ಮತ್ತು ಇಂಡ್ಯಾ ಸಂಗೀತಗಳನ್ನು ಮಿಶ್ರಮಾಡಿ ಒಂದು ಹೆಸರು ವಾದ್ಯವನ್ನು [illegible] ಹೆಸರಿಟ್ಟಿದ್ದರಿಂದ ಆ ಹೆಸರನ್ನಿಡಬೇಕೆಂದು ಮ್ಯು|| [illegible] ಮಿ|| [illegible] ಎಚ್ ರೆಯೋ ಬಾಲ್ಡ್‌ವಿನ್ ಒಂದು ಸೂಚನೆಯನ್ನು ತಂದು ಬಹಳ ಸಾಹಸ ಪಡುತ್ತಿದ್ದರು ಇವರು ಅಂಥಾ ಪ್ರಖ್ಯಾತ ಪುರುಷರಾಗಿರದೆ ಅರಮನೆಯಲ್ಲಿ ಸಾಮಾನ್ಯ ನೌಕರರಾಗಿದ್ದುದರಿಂದ ಸರ್ಕಲ್ಲಿಗೆ ಅವರ ಹೆಸರನ್ನಿಡಕೂಡದೆಂದು ಚರ್ಚೆಯು ನಡೆಯುತ್ತಿದ್ದು ಇದೇ ತಾ|| [illegible] ನೆಯ ಶನಿವಾರ ನಡೆದ ಕೌನ್ಸಿಲ್ ಮೀಟಿಂಗಿನಲ್ಲಿ ಸರ್ಕಲ್ಲಿಗೆ ಡೆನ್ನಿಸ್‌ರವರ ಹೆಸರನ್ನಿಡ ಬೇಕೆಂದು ಪ್ರಖ್ಯಾತ ಪುರುಷರಾಗಿ ಡೆನ್ನಿಸ್‌ರವರದೆ ಸಾಮಾನ್ಯರಾಗಿದ್ದರೆಂದು ಅರಮನೆಯ ಸಂಬಂಧವಾಗಿ ಪ್ರಾಂಶುಪಾಲರಾಗಿರುವ ಮು|| ಎಂ. ರಾಮರಾಯರು [illegible] ಮೇಲೆ ಮು|| [illegible] ರವರು ತಮ್ಮ ಸೂಚನೆಯನ್ನು

ಪತ್ರವ್ಯವಹಾರ

[illegible] ಪತ್ರವ್ಯವಹಾರಗಳ ಲೇಖಕರುಗಳಿಗೆ ಸಂಪಾದಕರು ಉತ್ತರವಾದಿಗಳಲ್ಲ [illegible]

[illegible]

ಇದೇ ತಾ॥ 1[illegible] ನೇ [illegible] ನವೆಂಬರ್ ತಿಂಗಳಲ್ಲಿ [illegible] 60 (೯೦) ದಿನಗಳನ್ನು ಕೊಟ್ಟಿರುವ [illegible] ಬರದಿಯವರು, ಸಾದಾದಿಯ ವರ [illegible] ದವರು [illegible] ಮತ್ತು ಇತರರು ಈ ಪಥ್ಯಾಭ್ಯಾಸಿಗಳ ಅನುಕರಣ ಮಾಡಬೇಕೆಂದು [illegible] ತಿಳಿಸಿದರು

ಪ್ರತ್ಯಕ್ಷದರ್ಶಿ

ಕರ್ನಾಟಕ ಸಾಹಿತ್ಯ ಸಮ್ಮೇಳನ

ಈ ವರ್ಷದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಧಾರವಾಡದಲ್ಲಿ ಕರೆಯುವ ವೀರಶೈವ ಮಹಾಸಭೆಯವರು ಮಾಡಬೇಕೆಂದು [illegible] ವೀರಶೈವ ಮಹಾಸಭೆಯು [illegible] ಕನ್ನಡಿಗರು [illegible] ಸಾಹಿತ್ಯ ಸಮ್ಮೇಳನವನ್ನು [illegible] ಮಹಾಸಭೆಯ [illegible] ಚಂದ್ರಶೇಖರಶಾಸ್ತ್ರಿ

ವ್ಯಾಕರಣತೀರ್ಥ ಗಂಗಾಧರಕಾಲೇಜು

ವೀರಶೈವ ಮಹಾಸಭೆಯು

(ಶ್ರೀ ಚಂದ್ರಶೇಖರ ಶಾಸ್ತ್ರಿಗಳ ವ್ಯಾಕರಣತೀರ್ಥ ಪ್ರಿನ್ಸಿಪಾಲ ಗಂಗಾಧರ ಸಂಸ್ಕೃತ ಕಾಲೇಜು ಹುಬ್ಬಳ್ಳಿ)

ವೀರಶೈವ ಮಹಾಸಭೆಯು [illegible] 35 [illegible] ವೀರಶೈವ [illegible] ಮಹಾಸಭೆಯ [illegible]

[illegible]

ಪ್ರಸ್ತಾವಮಿಮಾಂಸೆ

(ಶ್ರೀ [illegible])

[illegible]

ಓಂ ಶಾಂತಿ ಶಾಂತಿ ಶಾಂತಿಃ

ಶ್ರೀಮನ್ಮಹಾರಾಜರವರ ಸಂಸ್ಕೃತಪಾಠಶಾಲೆಯ

ಪಾಂಚರಾತ್ರಾಗಮ ತರಗತಿ

[illegible]

[illegible]

ಶಕಾರದ ಬಿಡುಬಂದವನು

ವೀರಶೈವ ಮಹಾಸಭೆ

[illegible] ಮಹಾಸಭೆಯ [illegible]

ಮೇಲ್ಕಂಡ ಲೇಖನದೊಳಗೆ 1 ರಿಂದ 12 ರ ವರೆಗಿನ [illegible]

[illegible] ವೀರಶೈವರಲ್ಲಿ [illegible]

ಜನೇಶ ಮುಂದೆ.............ಇದ್ದಾರೆ ಆದರೆ ಶ್ರೀಯುತ ಹಳಕಟ್ಟಿಯವರು ಸ್ವಭಾಷೆಯ ಕಾರ್ಯಕ್ಕೆ ತ್ಯಾಗದ ದೀಪವೆನ್ನುವ ಗ್ರಂಥಗಳ ಪ್ರಕಟಣೆ [illegible] ಸ್ನೇಹಿತರಾದ ಮೇಲ್ಕಂಡ ಗ್ರಂಥಗಳನ್ನು ಬೆಳಕಿಗೆ ತಂದ [illegible] ಪ್ರಕಟನೆ ಮಾಡಿದರು. ವೀರಶೈವ ಸಾಹಿತ್ಯದ ಕಾರ್ಯಕ್ಕೆ ತಂದಿರುವ [illegible] ಶ್ರೀಯುತ ಹಳಕಟ್ಟಿಯವರು [illegible] ವಚನಶಾಸ್ತ್ರಗಳನ್ನು ಪ್ರಕಟಿಸಿ [illegible] ಈ ಮಹನೀಯರಿಂದ ಬೇಕಾದಷ್ಟು ನಡೆದಿರುವುದು ಅದನ್ನೆಲ್ಲ ಸವಿಸ್ತಾರವಾಗಿ ವರ್ಣಿಸುವುದು ಈ ಲೇಖನದ ಉದ್ದೇಶವಲ್ಲ.

ಶ್ರೀಯುತ ಹಳಕಟ್ಟಿಯವರು ಅಧ್ಯಕ್ಷಪದವಿಗೆ ಸರ್ವವಿಧದಲ್ಲಿಯೂ ಅರ್ಹರು. ಇವರ ಸಮಾಜಸೇವೆಗೆ ಬಹುಮಾನವಾಗಿ [illegible] ಈ ಮಹಾಸಭೆಯ ಅಧ್ಯಕ್ಷ ಪದವಿಯನ್ನು ಕೊಟ್ಟರೆ ಅದೊಂದು ಭೂಷಣವೇ ಸರಿ. ಅಥವಾ ಆ ಮಾನ್ಯ ಅಧ್ಯಕ್ಷಸ್ಥಾನಕ್ಕೆ ಸಮಾಜದವರು ಈ ಮಹನೀಯರನ್ನು ತರುವುದು ಭೂಷಣಪ್ರಾಯವೇ ಸರಿ. ಹೇಗಾದರೂ ಇಂಥ ಆ ಸ್ಥಾನಕ್ಕೆ ಅವರು ಅರ್ಹರೇ ಸರಿ.

